ತೋಂಟದಾರ್ಯ ಪರಂಪರೆಯ

ವಚನ ಸಂಕಲನ ಸಾಹಿತ್ಯ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ

ಸಂಶೋಧಕರು

ಶ್ರೀ ಎ. ನಾಗರಾಜಪ್ಪ

ಮಾರ್ಗದರ್ಶಕರು

ಡಾ.ಅರ್ಜುನ ಗೊಳಸಂಗಿ

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು

ಗದಗ ಸಹಕಾರಿ ಜವಳಿ ಗಿರಣಿಯ, ಪದವಿ ಪೂರ್ವ ಕಾಲೇಜು

ಹುಲಕೋಟಿ - ಗದಗ ಜಿಲ್ಲೆ

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ-೫೮೩೨೭೬

ಸಂಶೋಧನ ಕೇಂದ್ರ

ಲಿಂಗಾಯತ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ

ಗದಗ-೧

೨೦೧೧

ತೋಂಟದಾರ್ಯ ಪರಂಪರೆಯ

ವಚನ ಸಂಕಲನ ಸಾಹಿತ್ಯ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ

ಸಂಶೋಧಕರು

ಶ್ರೀ ಎ. ನಾಗರಾಜಪ್ಪ

ಮಾರ್ಗದರ್ಶಕರು

ಡಾ.ಅರ್ಜುನ ಗೊಳಸಂಗಿ

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು
ಗದಗ ಸಹಕಾರಿ ಜವಳಿ ಗಿರಣಿಯ, ಪದವಿ ಪೂರ್ವ ಕಾಲೇಜು
ಹುಲಕೋಟಿ - ಗದಗ ಜಿಲ್ಲೆ

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ-೫೮೩೨೭೬

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಗದಗ-೧

೨೦೧೧

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಎ. ನಾಗರಾಜಪ್ಪ
ಸಂಶೋಧಕರು ಎಂ.ಎ.,ಎಂ.ಫಿಲ್

ಸಹಾಯಕ ಕನ್ನಡ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ತರೀಕೆರೆ, ಚಿಕ್ಕಮಗಳೂರು ಜಿಲ್ಲೆ

ಅಭ್ಯರ್ಥಿಯ ಪ್ರಮಾಣ ಪತ್ರ

"ತೋಂಟದಾರ್ಯ ಪರಂಪರೆಯ ವಚನ ಸಂಕಲನ ಸಾಹಿತ್ಯ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು **ಡಾ. ಅರ್ಜುನ ಗೊಳಸಂಗಿ** ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು, ಗದಗ ಸಹಕಾರಿ ಜವಳಿ ಗಿರಣಿಯ ಪದವಿ ಪೂರ್ವ ಕಾಲೇಜು, ಹುಲಕೋಟಿ – ಗದಗ ಜಿಲ್ಲೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪ್ರಕಟಣೆಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಎ. ನಾಗರಾಜಪ್ಪ)

ಸ್ಥಳ : ಗದಗ
ದಿನಾಂಕ : 28/06/11

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಡಾ. ಅರ್ಜುನ ಗೊಳಸಂಗಿ
ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು
ಗದಗ ಸಹಕಾರಿ ಜವಳಿ ಗಿರಣಿಯ
ಪದವಿಪೂರ್ವ ಕಾಲೇಜು,
ಹುಲಿಕೋಟಿ- ಗದಗ ಜಿಲ್ಲೆ

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನಮಠ, ಗದಗ-೧

ಮಾರ್ಗದರ್ಶಕರ ದೃಢೀಕರಣಪತ್ರ

ಎ. ನಾಗರಾಜಪ್ಪ ಅವರು **"ತೋಂಟದಾರ್ಯ ಪರಂಪರೆಯ ವಚನ ಸಂಕಲನ ಸಾಹಿತ್ಯ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೇಲೆ ರೂಪುಗೊಂಡಿದೆ. ಈ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಅರ್ಜುನ ಗೊಳಸಂಗಿ)

ಸ್ಥಳ : ಗದಗ
ದಿನಾಂಕ: 28/06/11

ಕೃತಜ್ಞತೆಗಳು

ಬಡತನವನ್ನೆ ಹಾಸಿ, ಹೊದೆದು, ಉಂಡು ಬದುಕಿದ ಬಡ ಕುಟುಂಬದಲ್ಲಿ ಜನಿಸಿದ ನನ್ನ ಸಹೋದರ, ಸಹೋದರಿಯರನ್ನು ನಮ್ಮ ತಂದೆ-ತಾಯಿಗಳು ಕೈಬಿಡಲಿಲ್ಲ. **'ಮಕ್ಕಳಿಗೆ ಆಸ್ತಿಮಾಡಬೇಡಿ, ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡಿ'** ಎಂಬ ವಿದ್ವಾಂಸರ ಮಾತಿನಂತೆ ತಾವು ಉಪವಾಸ ಬಿದ್ದರೂ ನಮ್ಮನ್ನು ಉಪವಾಸ ಕೆಡವದೆ, ಶಾಲೆಯ ಮೆಟ್ಟಿಲು ಹತ್ತುವಂತೆ ನೋಡಿಕೊಂಡರು. ಬೆಲೆ ಬಾಳುವ ಬಟ್ಟೆ, ಉತ್ತಮ ಊಟ, ಪುಸ್ತಕಗಳ ಕೊರತೆಯಿದ್ದರೂ ಕಲಿಯುವಿಕೆಗೆ, ಕಲಿಸುವಿಕೆಗೆ ಬಡತನ ಬರದಂತೆನೋಡಿಕೊಂಡರು. ರಜಾದಿನಗಳಲ್ಲಿ ಕೂಲಿಕೆಲಸಕ್ಕೆ ಕರೆದುಕೊಂಡು ಹೋದರೂ ಶಾಲೆಯನ್ನು ಬಿಡಿಸುವ ದುಸ್ಸಾಹಸಕ್ಕೆ ಕೈಹಾಕಲಿಲ್ಲ. ಹಾಗಾಗಿ ಇಂದು ನಾವೆಲ್ಲ ಸಹೋದರರು ಉತ್ತಮ ನೌಕರಿಯಲ್ಲಿದ್ದೇವೆ. ಊರಲ್ಲಿ ಗೌರವವಿದೆ. ಇದಕ್ಕೆಲ್ಲ ಕಾರಣರಾದ ನನ್ನ ತಂದೆ-ತಾಯಿಗಳಿಗೆ ನನ್ನ ಮೊದಲ ನಮನ ಸಲ್ಲಿಸುತ್ತೇನೆ.

ಅಣ್ಣನ ಒತ್ತಾಯಕ್ಕೆ ಬಿ.ಎ. ತರಗತಿಗೆ ನಮಸ್ಕಾರ ಮಾಡಿ ಟಿ.ಸಿ.ಹೆಚ್. ಮಾಡಲು ಹೊರಟ ನನ್ನನ್ನು, ವಿದ್ಯಾ ಗುರುಗಳಾದ ಡಿ. ನಾರಾಯಣ ಅವರು ನೀನು ಎಂ.ಎ. ಮಾಡಿ ಉಪನ್ಯಾಸಕ ಆಗಲೇ ಬೇಕು ಎಂದು ಹಠಹಿಡಿದು ಅಲ್ಲಿಯೆ ಹಿಡಿದಿಟ್ಟುಕೊಂಡರು. ಅದರ ಫಲವೇ ನಾನಿಂದು ಉಪನ್ಯಾಸಕನಾಗಿ ಎಂ.ಫಿಲ್. ಮಾಡಿ, ಈಗ ಪಿ.ಹೆಚ್.ಡಿ. ಮಾಡುತ್ತಿರುವುದು. ಇಂತಹ ಉನ್ನತ ಬದುಕಿಗೆ ದಾರಿಯಾದ ಅವರನ್ನು ಪ್ರೀತಿಯಿಂದ ಸ್ಮರಿಸುತ್ತೇನೆ.

೧೯೯೭ರಲ್ಲಿ ಎಂ.ಫಿಲ್. ಮಾಡಿದಾಗಲೇ ಪಿ.ಹೆಚ್.ಡಿ. ಮಾಡಬೇಕೆಂಬ ಮಹಾದಸೆ ಇತ್ತು. ಆದರೆ ಕಾಲಕೂಡಿ ಬಂದಿರಲಿಲ್ಲ. ಸರ್ಕಾರಿ ಪ್ರಥಮ ದರ್ಜೆ ಕಾಲೇಜ ಶಿರಹಟ್ಟಿ, ಗದಗ ಜಿಲ್ಲೆ, ಇಲ್ಲಿ ಉಪನ್ಯಾಸಕನಾಗಿ ಸೇವೆಸಲ್ಲಿಸುತ್ತಿರುವಾಗ ವೀರಶೈವ ಅಧ್ಯಯನ ಸಂಸ್ಥೆ ಗದಗ ಇವರ **'ಸಂಶೋಧನ ವಿದ್ಯಾರ್ಥಿಗಳಿಗಾಗಿ ಅರ್ಜಿ ಕರೆಯಲಾಗಿದೆ'** ಎಂಬ ಪತ್ರಿಕೆಯ ಜಾಹಿರಾತು ನನ್ನ ಪಿ.ಹೆಚ್.ಡಿ. ಮಾಡುವ ಮಹಾದಾಸೆಗೆ ಚಾಲನೆ ನೀಡಿತು. ಅದರಲ್ಲೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಶೋಧನ ಕೇಂದ್ರಕ್ಕೆ ಭೇಟಿ ನೀಡಿ ಅರ್ಜಿ ಹಾಕಿದಾಗ ಪ್ರಥಮ ಅಧ್ಯತೆಯಲ್ಲಿಯೆ ಆಯ್ಕೆಮಾಡಿಕೊಂಡರು. ಆಯ್ಕೆಯಾದ ಎಲ್ಲಾ ಸಂಶೋಧನ ವಿದ್ಯಾರ್ಥಿಗಳಿಗೆ ಬೇಕಾದ ಸಂಶೋಧನ ವಿಷಯಗಳ ಪಟ್ಟಿ ಈ ಕೇಂದ್ರದಲ್ಲಿ ಸಿದ್ಧವಾಗಿತ್ತು. ನಾನು **'ತೋಂಟದಾರ್ಯ ಪರಂಪರೆಯ ವಚನ ಸಂಕಲನ ಸಾಹಿತ್ಯ ಒಂದು ಅಧ್ಯಯನ'** ವಿಷಯವನ್ನು ಆಯ್ಕೆಮಾಡಿಕೊಂಡೆ, ಇದರ ಸಂಶೋಧನೆಗೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಿಕೊಟ್ಟು, ಕಮ್ಮಟಗಳನ್ನು ಏರ್ಪಡಿಸಿ ಮಾಹಿತಿ ನೀಡಿದ ಸಂಶೋಧನ ಕೇಂದ್ರದ ಮಾರ್ಗದರ್ಶಕರುಗಳಾದ **ಡಾ॥ ಎಂ.ಎಂ. ಕಲುಬುರ್ಗಿ, ಡಾ॥ ವೀರಣ್ಣ ರಾಜೂರ, ಡಾ॥ ಅರ್ಜುನಗೊಳಸಂಗಿ, ಡಾ॥ ಬಿ.ವಿ.ಶಿರೂರ, ಡಾ॥ ಬಿ.ಎಸ್.ಗೊರವರ, ಡಾ॥ ಪಿ.ಕೆ.ರಾಥೋಡ, ಡಾ॥ ವೀಣಾ ಹೂಗಾರ, ಡಾ॥ ಎಸ್.ಆರ್.ಗುಂಜಾಳ** ಇವರೆಲ್ಲರನ್ನು ಆಧರದಿಂದ ಸ್ಮರಿಸುತ್ತೇನೆ.

ವಚನ ಸಂಕಲನ ಸಾಹಿತ್ಯದ ಸಂಶೋಧನೆ ಎಂದರೆ ನಾನು ಬೇರೆ ರೀತಿಯೇ ಅರ್ಥೈಸಿಕೊಂಡಿದ್ದೆ. ಡಾ॥ ವೀರಣ್ಣ ರಾಜೂರ ಅವರು ಕರೆದು ಕುಳ್ಳಿರಿಸಿಕೊಂಡು, ಹೇಗೆ ಅಧ್ಯಯನ ಮಾಡಬೇಕು, ಯಾವರೀತಿ ಮಾಹಿತಿ ಕಲೆಹಾಕಬೇಕು, ಪರಿವಿಡಿ ಹೇಗಿರಬೇಕು, ಬರವಣಿಗೆ ಹೇಗಿರಬೇಕು ಇತ್ಯಾದಿ ವಿಷಯಗಳನ್ನು ಸರಳವಾಗಿ, ಅಷ್ಟೇ ಹಗುರವಾಗಿ, ಸಂಶೋಧನೆ

ಅಂದರೆ **'ಅದೇನು ಮಹಾ'** ಅನ್ನುವ ಹಾಗೆ ಧೈರ್ಯ ತುಂಬಿದರು. ಅವರ ನಯವಾದ, ಪ್ರೀತಿಯ ಮಾತಿಗೆ ನಾನು ಸೋತು ಹೋದೆ. ನಾನು ಸಮಸ್ಯೆ ಬಂದಾಗಲೆಲ್ಲ ಕರೆಮಾಡಿ ಪ್ರಶ್ನೆಗಳನ್ನು ಮುಂದಿಟ್ಟರೆ ಬೇಸರಿಸದೆ, ಅದೇ ಪ್ರೀತಿಯಿಂದ ಉತ್ತರಿಸಿ ಸಮಸ್ಯೆ ಬಗೆಹರಿಸಿ ನನ್ನ ಸಂಶೋಧನೆಗೆ ಪ್ರಧಾನ ಪ್ರೇರಕ ಶಕ್ತಿಯಾಗಿ ಡಾ॥ ವೀರಣ್ಣ ರಾಜೂರ ಅವರಿದ್ದಾರೆ. ಇವರಿಂದಾಗಿಯೆ ಇಂತಹ ಗಂಭೀರ ಹಾಗೂ ವೀರಶೈವ ಧರ್ಮದ ತಾತ್ವಿಕ ವಿಚಾರದ ಹಿನ್ನೆಲೆಯುಳ್ಳ ಸಂಶೋಧನ ಪ್ರಬಂಧ ಮಂಡಿಸಲು ಸಹಾಯವಾಗಿದೆ. ವಚನ ಸಾಹಿತ್ಯ, ವಚನ ಶಾಸ್ತ್ರದ ಆಗರವಾಗಿರು ಡಾ॥ ವೀರಣ್ಣ ರಾಜೂರ ಅವರಿಗೆ ನನ್ನ ಪ್ರೀತಿಯ ನಮನಗಳು.

ನನ್ನ ಸಂಶೋಧನ ವಿಷಯಕ್ಕೆ ಮಾರ್ಗದರ್ಶಕರಾದ ಡಾ॥ ಅರ್ಜುನ ಗೊಳಸಂಗಿಯವರನ್ನು ನಾನು ಯಾವತ್ತು ನನ್ನ ಮಾರ್ಗದರ್ಶರೆಂದು ಭಾವಿಸಿಲಿಲ್ಲ. ನನಗೆ ಆ ಭಾವನೆ ಬರುವಂತೆ ಅವರೂ ನಡೆದುಕೊಳ್ಳಲಿಲ್ಲ. ನನ್ನನ್ನು ಅವರು ಆತ್ಮೀಯ ಸ್ನೇಹಿತನೆಂದೇ ಭಾವಿಸಿದ್ದರು. ಅದರಂತೆ ನಡೆದುಕೊಂಡರು. ನಾಲ್ಕುವರೆ ವರ್ಷದಲ್ಲಿ ಒಮ್ಮೆಯಾದರೂ **'ನಾನು ಮಾರ್ಗದರ್ಶಕ'** ಅನ್ನುವ ಭಾವನೆಯನ್ನು ಅವರ ಮುಖದಲ್ಲಿ ನೋಡಲಿಲ್ಲ. ಆತ್ಮೀಯತೆ, ಪ್ರೀತಿ, ವಿಶ್ವಾಸ ಅವರಲ್ಲಿ ಮನೆ ಮಾಡಿತ್ತು. ಇಂತಹ ಮಾರ್ಗದರ್ಶಕರು ಸಿಕ್ಕಿದ್ದು ನನ್ನ ಅದೃಷ್ಟ ಎಂದೇ ಭಾವಿಸಿದ್ದೇನೆ. ಏಕೆಂದರೆ ಮಾರ್ಗದರ್ಶಕರ ಕಾಟಕ್ಕೆ ಹೆದರಿ ಸಂಶೋಧನೆಯನ್ನು ಬಿಟ್ಟವರಿದ್ದಾರೆ. ಹಾಗಾಗಿ ತಾಳ್ಮೆಯ ಪ್ರತಿರೂಪವಾದ ಡಾ॥ ಅರ್ಜುನ ಗೊಳಸಂಗಿಯವರನ್ನು ಪ್ರೀತಿಯಿಂದ ಸ್ಮರಿಸುತ್ತೇನೆ.

ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಸಾಹಿತ್ಯಸಕ್ತರು, ಶಿಕ್ಷಣ ಪ್ರೇಮಿಗಳು ಎನ್ನುವುದಕ್ಕೆ ಮಠದ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಅಪಾರವಾದ ಸಾಹಿತ್ಯ ಕೃತಿಗಳೇ ಸಾಕ್ಷಿ. ಮಠದ ಅಂಗ ಸಂಸ್ಥೆಗೆ ಸಂಶೋಧನ ಕೇಂದ್ರದ ಸ್ಥಾನಮಾನ ದೊರೆತಿರುವುದರಿಂದ ಅವರ ಸಾಹಿತ್ಯಾಸಕ್ತಿಗೆ ಮತ್ತಷ್ಟು ಸ್ಫೂರ್ತಿ ಬಂದಿದೆ ಎಂದೇ ನಾನು ಭಾವಿಸಿದ್ದೇನೆ. ಎಲ್ಲಾ ಸಂಶೋಧನ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಹಕಾರ, ಸಹಾಯ ನೀಡಿರುತ್ತಾರೆ. **'ಅಧ್ಯಯನ ಕೇಂದ್ರದ ಪ್ರಥಮ ಬೆಳೆ ಹುಲುಸಾಗಿ ಬೆಳೆಯಿಲಿ'** ಎಂದು ಹರಸಿದ್ದಾರೆ. ಅವರ ಹಾರೈಕೆಯನ್ನು ನಾವೆಲ್ಲ ಸಂಶೋಧನಾರ್ಥಿಗಳು ಈಡೇರಿಸುತ್ತೇವೆ ಎಂದು ಭಕ್ತಿಪೂರ್ವಕ ಗೌರವ ಸಲ್ಲಿಸುತ್ತೇನೆ.

ವೀರಶೈವ ಅಧ್ಯಯನ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶಿವನಗೌಡರ್ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹಾಗು ಸಂಶೋಧನ ವಿದ್ಯಾರ್ಥಿಗಳ ನಡುವೆ ಸೇತುವಾಗಿದ್ದಾರೆ. ನಮ್ಮೆಲ್ಲ ಸಮಸ್ಯೆಗಳಿಗೆ ಬೇಸರಿಸದೆ ಉತ್ತರಿಸುತ್ತಾ, ವಿಶ್ವವಿದ್ಯಾಲಯದ ನಿಯಮಗಳನ್ನು ಪಾಲಿಸುತ್ತಲೇ ನಮ್ಮ ಸಂಶೋಧನೆ ಪೂರ್ಣಗೊಳಿಸಲು ಸಹಕರಿಸಿದ, ಶ್ರೀಮಠಕ್ಕೆ ಹೋದಾಗ ನಮ್ಮೆಲ್ಲ ಅಗತ್ಯಗಳನ್ನು ಅರ್ಥಮಾಡಿಕೊಂಡು ಸ್ಪಂದಿಸಿದ್ದಾರೆ. ಅವರಿಗೂ ನನ್ನ ವಂದನೆಗಳು. ನಮ್ಮ ಸಂಶೋಧನೆ ನಿಂತಿರುವುದೇ ಆಕರ ಗ್ರಂಥಗಳಿಂದ. ಅಂಥ ಆಕರ ಗ್ರಂಥಗಳನ್ನು ಸಕಾಲಕ್ಕೆ ಸರಿಯಾಗಿ ಪ್ರೀತಿಯಿಂದ ಪೂರೈಸಿದ, ಗ್ರಂಥಾಲಯದ ಮೇಲ್ವಿಚಾರಕರಾದ ಶ್ರೀ ಪಿಂಗಳೆಯವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಸ್ನೇಹಿತರೊಂದಿಗೆ ಚರ್ಚಿಸಿದ್ದೇನೆ. ಅವರಿಂದ ಸಲಹೆ, ಸಹಕಾರ ಪಡೆದುಕೊಂಡಿರುತ್ತೇನೆ. ಅವರೆಲ್ಲರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಸಂಶೋಧನ ಪ್ರಬಂಧನ ಕರಡು ಪ್ರತಿಯನ್ನು ಪರಿಶೀಲಿಸಿ ತಿದ್ದಿಕೊಟ್ಟ ನಮ್ಮ ಕಾಲೇಜಿನ ಪ್ರಾಚಾರ್ಯರಾದ ಪ್ರೊ॥ಆಲೀಸ್ ಡಿ.ಕಾಷ್ಟ ಅವರಿಗೂ, ಉಪನ್ಯಾಸಕರಾದ ಶ್ರೀಮತಿ

ನಿವೇದಿತಾ, ಭಾಗ್ಯ, ಗೀತಾ ಇವರಿಗು, ಪ್ರೋತ್ಸಾಹ ನೀಡಿದ ಶಿವಮೂರ್ತಿ ಪಿ.ಜಿ. ಹಾಗೂ ಇತರೆ ಉಪನ್ಯಾಸಕರಿಗೂ ನನ್ನ ಹೃತ್ಪೂರ್ವಕ ನಮನಗಳು.

ನಾನು ಟಿ.ವಿ.ಯಲ್ಲಿ ಕ್ರಿಕೆಟ್ ನೋಡುತ್ತಿರುವಾಗ, ಮಗನೊಂದಿಗೆ ಆಟ ಆಡುತ್ತಿರುವಾಗ, ಬೇಜಾರಾಗಿ ಹೊರಗೆ ಹೋಗುತ್ತಿರುವಾಗಲೆಲ್ಲ 'ಹಿಂಗಾದ್ರೆ ಪಿ.ಹೆಚ್.ಡಿ ಆದಂಗೆ' ಅಂತ ಒಂದು ಕೊಂಕು ಮಾತು ತೆಗೆದು ನನ್ನ ಸೋಮಾರಿತನವನ್ನು ದೂರ ಮಾಡುತ್ತ, ಎಚ್ಚರಿಸುತ್ತಿದ್ದ ಶ್ರೀಮತಿ ನಾಗವೇಣಿಗೂ, ನಾನು ಓದಲು ಕುಳಿತರೆ ಹತ್ತಿರ ಬರದೆ, ನನ್ನ ಓದಿಗೆ ಸಹಕರಿಸಿದ ನನ್ನ ಮಗ ಯಶವಂತನನ್ನು, ಬಂಧು ಬಳಗವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಈ ಪ್ರಬಂಧದ ಡಿ.ಟಿ.ಪಿ. ಕಾರ್ಯದಲ್ಲಿ ನೆರವಾದ ತರೀಕೆರೆಯ ಶಿವ ಎಂಟರ್‌ಪ್ರೈಸಸ್‌ನ ಮಾಲಿಕರಾದ ಅಬ್ದುಲ್ ರಜಾಕ್, ಮಹಾದೇವ ಸ್ವಾಮಿಯವರಿಗೂ, ಮುದ್ರಿಸಿಕೊಟ್ಟ ಶ್ರೀಮತಿ ನೇತ್ರಾವತಿ, ಕುಮಾರಿ ಶೃತಿ, ಕಮಾರಿ ಚೈತ್ರ ಅವರಿಗೂ ಹಾಗೆ ಕಾವ್ಯ ಕಂಪ್ಯೂಟರ್ ಸೆಂಟರ್, ಶಂಕರಘಟ್ಟ ಇದರ ಮಾಲೀಕರಾದ ಲೋಕೇಶ್ವರಪ್ಪ ಟಿ.ಹೆಚ್. ಅವರಿಗೂ ಧನ್ಯವಾದಗಳು. ಈ ಪ್ರಬಂಧ ಪೂರ್ಣಗೊಳ್ಳಲು ಸಹಕರಿಸಿದ ಬಿ.ಎನ್.ತಂಬೂಳಿ ಹಾಗೂ ಎಲ್ಲಾ ಎಲ್ಲಾ ಗೆಳೆಯರಿಗೂ ನಾನು ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ.

(signature)

(ಎ. ನಾಗರಾಜಪ್ಪ)

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ಪರ್ವಕಾಲ. ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಧಾರ್ಮಿಕ ಪ್ರವೃತ್ತಿಗಳು ಪೊರೆ ಕಳಚಿ ಹೊಸತಾಗುವ ಕಾಲ. ಕಾವ್ಯ ಭಾಷೆ ಜನಭಾಷೆಯಾಗುವುದು ಅಸಾಧ್ಯವಾದಾಗ ಜನ ಭಾಷೆಯನ್ನೇ ಕಾವ್ಯ ಭಾಷೆಯ ಮಟ್ಟಕ್ಕೇರಿಸಿದ ಕೀರ್ತಿ ಈ ಯುಗಕ್ಕೆ ಸಲ್ಲುತ್ತದೆ. ಧಾರ್ಮಿಕ ಸಮಾನತೆ, ವರ್ಣ, ವರ್ಗ, ಲಿಂಗಭೇದ ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಹೊರಟ ಅನನ್ಯ ಯುಗ. ಸ್ತ್ರೀ ಪುರುಷರಿಗೆ, ಉಚ್ಚ-ನೀಚ ಜನತೆಗೆ ಸಮಾನತೆಯನ್ನು ನೀಡಿ ವಚನ ರಚನೆಗೆ ಕಾರಣವಾದ ವಚನ ಸಾಹಿತ್ಯದ ಜನ್ಮ ಯುಗ ಇದೆನ್ನಬಹುದು.

ಜೈನ ಧರ್ಮದ ದೌರ್ಬಲ್ಯ ಹಾಗೂ ಇತರೆ ಧರ್ಮಗಳ ಅನುಷ್ಠಾನ ಪದ್ಧತಿ ಜನ ಸಾಮಾನ್ಯರಿಂದ ವಿಮುಖವಾಗುತ್ತಿದ್ದಂತಹ ಸಂದರ್ಭದಲ್ಲಿ ವೀರಶೈವ ಧರ್ಮ ತನ್ನ ಅಸ್ತಿತ್ವದ ಗುರುತನ್ನು ಛಾಪಿಸುವ ಯತ್ನ ನಡೆಸಿತು. ಅದು ಎಲ್ಲಾ ಕಾಲಕ್ಕೂ ಸಲ್ಲುವ ಜೀವನದ ಮೌಲ್ಯಗಳನ್ನು ಪ್ರತಿಪಾದಿಸುವ ಮತ್ತು ವ್ಯಕ್ತಿಯ ಸರ್ವತೋಮುಖ ಅಭಿವೃದ್ದಿಯ ಜೊತೆಯಲ್ಲಿಯೇ ಜಾತ್ಯಾತೀತ ಸಮಾಜವನ್ನು ಕಟ್ಟುವ, ಲೌಕಿಕ ಅನುಭವಗಳ ಜೊತೆ ಜೊತೆಯಲ್ಲಿಯೇ ಆಧ್ಯಾತ್ಮಿಕ ಅನುಭವದ ಜೊತೆ ಕೈ ಜೋಡಿಸಿದ್ದು ವಚನಗಳ ಮೂಲಕ.

ಕೆಲವು ಶತಮಾನಗಳ ಸಾಹಿತ್ಯವಂತೂ ಸಂಪೂರ್ಣವಾಗಿ ವೀರಶೈವಮಯವಾಗಿದೆ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅವಿಭಾಜ್ಯ ಅಂಗವಾಗಿದೆ. ವೀರಶೈವರು ಕಾವ್ಯ, ಪುರಾಣ, ಶಾಸ್ತ್ರಗ್ರಂಥ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಶ್ರೇಷ್ಠತೆಯನ್ನು ಮೆರೆದವರು. ಮೇಲಾಗಿ ತಮ್ಮ ಅನುಭವಗಳನ್ನು "ಜನ ಸಾಮಾನ್ಯರ ಭಾವ-ಭಾಷೆ, ರೀತಿ-ನೀತಿ, ಆಚಾರ-ವಿಚಾರ, ಬೇಕು-ಬೇಡ, ಆಶೆ-ಆಕಾಂಕ್ಷೆ, ಜೀವನದ ನೆಲೆ-ಬೆಲೆ, ಗುರಿ-ದಾರಿಗಳನ್ನು ದಿವ್ಯದೃಷ್ಟಿಯಿಂದ ಕಂಡು ನಡೆದು ತೋರಿಸಿದರು.[೧] ಅವರ ಅನುಭವದ ಮಾತೇ ವಚನ ಸಾಹಿತ್ಯವಾಗಿ ಪರಿಣಮಿಸಿತು. ಈ ವಚನ ಕನ್ನಡದ ಅಪೂರ್ವ ಸಾಹಿತ್ಯ ರೂಪ. ಅದರ ಅಪೂರ್ವತೆಗೆ ಕಾರಣ. ವಸ್ತು-ರೂಪ-ಭಾಷೆ-ಆಶಯ-ಮೌಲ್ಯ ಎಲ್ಲಾ ದೃಷ್ಟಿಯಿಂದಲೂ ಈ ಹಿಂದೆ ರಚನೆಯಾದ ಸಾಹಿತ್ಯದಿಂದ ಅದು ಸಂಪೂರ್ಣ ಭಿನ್ನವಾದುದು. ವಸ್ತು ಪೂರ್ವ ಸಿದ್ಧವಾದುದಲ್ಲ, ವ್ಯಕ್ತಿ ನಿಷ್ಟವಾದುದು. ಆದುದರಿಂದ ಅದು ಸಾಮಾನ್ಯರ ಹೃದಯದ ಜೊತೆ ಸಹಜವಾಗಿ ಸ್ಪಂದಿಸಿ ಬಂದುದರಿಂದ ಜೀವಂತ ಸಾಹಿತ್ಯವಾಗಿ ನೆಲೆಯೂರಿತು. ವಸ್ತು, ಭಾಷೆ, ನಿರೂಪಣಾ, ರೀತಿಗಳಲ್ಲಿ ಹೊಸದಾದ ಸರಳ ತಂತ್ರವನ್ನು ಅಳವಡಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟಿತು.

ವಚನ ಸಾಹಿತ್ಯವು ಹೊಸತನವನ್ನು ಮೈಗೂಡಿಸಿಕೊಂಡಿರುವುದಲ್ಲದೇ ಅದು ಮೂಡಿ ಬಂದ ಕಾಲವೂ ಕನ್ನಡ ನಾಡಿನ ಇತಿಹಾಸದಲ್ಲಿ ವಿಶಿಷ್ಟವೆನಿಸಿದೆ. ವೀರಶೈವ ಧರ್ಮವಾಗಲಿ, ಶರಣರ ಸಾಮಾಜಿಕ ದರ್ಶನವಾಗಲಿ, ಆ ಕಾಲದ ರೂಢ ಮೂಲವಾದ ವರ್ಣಾಶ್ರಮದ ನೆರಳಲ್ಲಿದ್ದ

---

೧. ಡಾ॥ ವೀರಣ್ಣ ರಾಜೂರ (ಸಂ) 'ಎಳಮಲೆಯ ಗುರು ಶಾಂತದೇವರ ವಚನ ಸಂಕಲನಗಳು' ಪ್ರಸ್ಥಾವನೆ ಪುಟ-vi

ಸಂಪ್ರದಾಯ ಸಂಸ್ಥೆಗಳ ವಿರುದ್ದ ಸಿಡಿದೆದ್ದು ಕ್ರಾಂತಿಕಾರಕವೆನಿಸಿಕೊಳ್ಳುವ ಸಾಮಾನ್ಯ ಜನಮೂಲ ಚಳುವಳಿಯೊಂದನ್ನು ಹುಟ್ಟುಹಾಕಿತು. ಈ ಚಳುವಳಿ ಪ್ರಚಾರಗೊಂಡಿದ್ದು, ಜನಪ್ರಿಯವಾದದ್ದು, ಪರಂಪರಾಗತ ಸಾಮಾಜಿಕ ಬದುಕಿನಲ್ಲಿ ಒಂದು ರೀತಿಯ ಎಚ್ಚರವನ್ನು ಮೂಡಿಸಿದ್ದು, ವಚನಗಳ ಮೂಲಕ ಎಂಬುದನ್ನು ಮಾತ್ರ ಅಲ್ಲಗಳೆಯಲಾಗದು. ನವ ಸಮಾಜ ಮುಖಿಯಾಗಿ ಮೂಡಿ ಬಂದ ವಚನ ಸಾಹಿತ್ಯ ಚರ್ಚಾತೀತವಾದುದು. ಸುಲಭವಾಗಿ ನಂಬದಿರುವುದಕ್ಕೂ ಆಗದಿರುವಷ್ಟು ಅಗಾದವಾದುದು. ವಿವಿಧ ಕಾಯಕದಲ್ಲಿದ್ದವರು, ವಿವಿಧ ಮನೋಧರ್ಮದವರು, ಪಂಡಿತರು, ಪಾಮರರು, ಸಮಾಜದ ಮೇಲ್ಪದರದಲ್ಲಿದ್ದವರು, ತುಳಿತಕ್ಕೊಳಗಾದ ದೀನರು, ದಲಿತರು, ದುಃಖಿಗಳು ಮತ್ತು ಮಹಿಳೆಯರು ಎಲ್ಲರೂ ಒಂದಾದ ಕಾಲ ಇದಾಗಿದೆ. ಬಸವ, ಅಲ್ಲಮರ ನೇತೃತ್ವದಲ್ಲಿ ವೀರಶೈವ ಧರ್ಮದ ಉದಾತ್ತ ತತ್ವಗಳನ್ನು ಮನೆ ಮನಗಳಿಗೆ ಮುಟ್ಟಿಸಲು ವಚನ ರೂಪ ಶಕ್ತಿಶಾಲಿಯಾದ ಮಾಧ್ಯಮವಾಯಿತು. ಯಾವ ಹಿನ್ನೆಲೆಯಿಲ್ಲದವರೂ ಸಹ ವಚನ ರಚಿಸಿದರು. ಹಾಡಿದರು, ಮಾದಾರ ಚನ್ನಯ್ಯ, ತುರುಗಾಯಿ ರಾಮಣ್ಣ ಆಯ್ದಕ್ಕಿ ಮಾರಯ್ಯ, ಅಂಬಿಗರ ಚೌಡಯ್ಯ ಮೊದಲಾದ ಅಸಂಖ್ಯಾತ ಜನರಿಂದ ವಚನ ಸಾಹಿತ್ಯ ಶ್ರೀಮಂತವಾಯಿತು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅಪರೂಪದ ಯುಗವೆನಿಸಿದ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಕುರಿತು ಈಗಾಗಲೆ ಹಲವಾರು ಸಂಶೋಧನಾ ಪ್ರಬಂಧಗಳು, ಕೃತಿಗಳು, ಸಾವಿರಾರು ಲೇಖನಗಳು ಪ್ರಕಟವಾಗಿದೆ. ಆದರೆ ಬಹುಪಾಲು ಬರಹಗಳೆಲ್ಲ ವಚನಗಳ ಕಾವ್ಯ ಸೌಂದರ್ಯವನ್ನು ಕುರಿತು ಬರೆದವುಗಳು. ವಚನಗಳಲ್ಲಿ ಬಳಸಿದ ಭಾಷೆಯ ವೈಶಿಷ್ಟ್ಯ ಮತ್ತು ಅವುಗಳ ಲಯಗಾರಿಕೆಯನ್ನು ಗುರುತಿಸುವಂತವು. ವೈಚಾರಿಕ ಬದುಕಿನ ಬಗ್ಗೆ, ಸಮಾಜ ವಿಡಂಬನೆ, ಆತ್ಮ ನಿರೀಕ್ಷೆ, ಧರ್ಮೋಪದೇಶಗಳ ಬಗ್ಗೆ, ವಚನ ಸಾಹಿತ್ಯ ಒಳಹೊರಗನ್ನೆಲ್ಲ ಈ ಕೃತಿಗಳು, ಬರಹಗಳು, ಅನಾವರಣ ಮಾಡಿದರೂ ಅಧ್ಯಯನ ಯೋಗ್ಯವಾದ ವಿಷಯಗಳು ಇನ್ನೂ ಇವೆ.

ಹನ್ನೆರಡನೆಯ ಶತಮಾನದ ಕ್ರಾಂತಿಯನಂತರ ನಾಡಿನಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ತುಂಬಾ ಮಹತ್ವಪೂರ್ಣವಾದ ಮಾರ್ಪಾಟುಗಳಾದವು. ಕರ್ನಾಟಕಕ್ಕೆ ಮಹಮದೀಯರ ಆಗಮನ ಮತ್ತು ಪರಂಪರಾಗತ ವ್ಯವಸ್ಥೆಯ ಸಂಕೋಲೆಗಳಲ್ಲಿ ಬಂಧಿಯಾದ ವರ್ಗದವರ ವಿರೋಧದಿಂದಾಗಿ ವಚನ ರಚನೆಯಾಗಲಿ, ಅವುಗಳ ಸಂಪಾದನೆಯ ಕಾರ್ಯವಾಗಲಿ, ಅಷ್ಟಾಗಿ ರಭಸದಿಂದ ನಡೆಯಲಿಲ್ಲ. ವಚನಕಾರರು ಮತ್ತು ವಚನ ಸಾಹಿತ್ಯ ಒಂದೆರಡು ಶತಮಾನಗಳ ಕಾಲ ಅಜ್ಞಾತವಾಸ ಅನುಭವಿಸಬೇಕಾಯಿತು.

ಈ ಕಾಲ ಘಟ್ಟದಲ್ಲಿದ್ದ ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮನಾಥ ಮುಂತಾದವರು ಯಾವ ರಾಜಾಶ್ರಯವನ್ನು ಪಡೆಯದೆ ಸ್ವತಂತ್ರ ಮನೋಭಾವದವರಾಗಿದ್ದರು. ಆಧ್ಯಾತ್ಮಿಕ ತೇಜಸ್ಸು ಮತ್ತು ಹೊಸ ಆಲೋಚನೆಗಳ ವಿಚಾರ ಪ್ರಣಾಳಿಕೆಗಳಿಂದ ಕಾವ್ಯ ಮತ್ತು ಉದ್ದೇಶ ಮತ್ತು ಶೈಲಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದುಕೊಂಡು ತಮ್ಮ ಕಾವ್ಯಕೃತಿಗಳಲ್ಲಿ ವಚನ ಚಳುವಳಿಯ ಪರಂಪರೆಯನ್ನು ಮುಂದುವರೆಸಿದರು.

ವಿಜಯನಗರದ ಸಂಗಮ ವಂಶದ ಅರಸನಾದ ಪ್ರೌಢದೇವರಾಯನ (ಕ್ರಿ.ಶ. ೧೪೨೪–೧೪೪೬)[೨] ಕಾಲಕ್ಕೆ ವೀರಶೈವ ಧರ್ಮ ಮತ್ತು ಸಾಹಿತ್ಯ ಮರುಜನ್ಮ ತಾಳಿತು. ಇವನ ಆಳ್ವಿಕೆಯಲ್ಲಿ

---

೨. ಸದಾಶಿವಕನವಳ್ಳಿ , ಚನ್ನಪ್ಪಕೆರಿಮನಿ(ಸಂ) –'ವೀರಶೈವ ಸಾಹಿತ್ಯ ಸಮೀಕ್ಷೆ'– ಪುಟ –೨೧೨

ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿಗಳು ಅಭಿವೃದ್ದಿಗೊಂಡವು. ಇವನ ಆಸ್ಥಾನದಲ್ಲಿ ವಿದ್ವಾಂಸರು, ಧರ್ಮ ಶಾಸ್ತ್ರಜ್ಞರು, ತತ್ವಜ್ಞಾನಿಗಳು, ಕವಿಗಳು, ಕಲಾವಿದರು, ಅನುಭಾವಿಗಳು ಇದ್ದರು. ಸ್ವತಃ ಪ್ರೌಢದೇವರಾಯನೇ ಕವಿಯಾಗಿ 'ಬಾದರಾಯಣ ಬ್ರಹ್ಮಸೂತ್ರ' ಗಳಿಗೆ ವೃತ್ತಿಯನ್ನು, 'ಮಹಾನಾಟಕ' ಮತ್ತು 'ಸುಧಾನಿಧಿ' ಎಂಬ ಕೃತಿಗಳನ್ನು ರಚಿಸಿದ್ದಾನೆ. ವಿಜಯನಗರ ದೊರೆಗಳು ಹಾಗೂ ಅವರ ಅಧಿಕಾರಿಗಳು ವೀರಶೈವರಾಗಿದ್ದು, ವೀರಶೈವ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿರುವುದು ನಿಶ್ಚಯವಾಗಿದೆ. ಪ್ರೌಢದೇವರಾಯನ ಕಾಲದಲ್ಲಿ ಸಾಹಿತ್ಯಕ್ಕೆ ರಾಜಾಶ್ರಯ ದೊರೆತರೂ ವೀರಶೈವ ಸಾಹಿತಿಗಳು ರಾಜಾಶ್ರಯದ ನೆರಳಿನಲ್ಲಿ ಕೃತಿ ರಚಿಸಿದರೂ ಕೂಡಾ ಅವರೆಂದೂ ಆಳರಸರನ್ನು ಸ್ತುತಿಸುವ ಊಳಿಗದ ಕವಿಗಳಾಗಿ ಬಾಳಲಿಲ್ಲ. ಅವರು ಶಿವಕವಿಗಳಾಗಿ, ಶಿವಾನುಭವಿಗಳಾಗಿ ಬಾಳಿರುವುದು ವೈಶಿಷ್ಟಪೂರ್ಣವಾಗಿದೆ.

"ಪ್ರೌಢದೇವರಾಯನ ಮಹಾಮಂತ್ರಿಯು ಮತ್ತು ದಂಡನಾಯಕನೂ ಆಗಿದ್ದ ಲಕ್ಕಣ್ಣ ದಂಡೇಶನು 'ಶಿವತತ್ವ ಚಿಂತಾಮಣಿ' ಎಂಬ ವೀರಶೈವ ವಿಶ್ವಕೋಶವನ್ನು ರಚಿಸಿದನು.

ಇನ್ನೊಬ್ಬ ವೀರಶೈವ ಮಂತ್ರಿ 'ಜಕ್ಕಣ್ಣ'ನಿಗೆ 'ಭಕ್ತಿ ಭಂಡಾರಿ' ಎಂಬ ಬಿರುದಿತ್ತು. ಈತ ವೀರಶೈವ ತತ್ವಜ್ಞಾನಿಯೂ, ಈ ಯುಗದ ಮಹತ್ವದ ವಚನ ಸಂಕಲನಕಾರನೂ ಆದ ಮಹಾಲಿಂಗದೇವನ ಶಿಷ್ಯ. ಅವನ ಬಿನ್ನಹ ಕಾರಣದಿಂದಲೆ ಮಹಾಲಿಂಗದೇವರು 'ಏಕೋತ್ತರ ಶತಸ್ಥಲ' ರಚಿಸಿರುವ ವಿಷಯ. ಆ ಗ್ರಂಥದ ಒಕ್ಕಣೆಯಿಂದ ವೇದ್ಯವಾಗುತ್ತದೆ[೩]. ಚಾಮರಸ 'ಪ್ರಭುಲಿಂಗಲೀಲೆ'ಯನ್ನು, ಮಗ್ಗೆಯ ಮಾಯಿದೇವರು 'ಶತಕತ್ರಯ' ಮತ್ತು 'ಅನುಭವಸಾರ' ಕೃತಿಗಳನ್ನು ರಚಿಸಿದರು. ಜಕ್ಕಣಾರ್ಯನು 'ನೂರೊಂದುಸ್ಥಲ'ವನ್ನು, ಕುಮಾರ ಬಂಕನಾಥನು 'ಷಟ್‌ಸ್ಥಲೋಪದೇಶ'ವನ್ನುಗುರುಬಸವನು 'ಸಪ್ತಕಾವ್ಯ'ಗಳನ್ನು, ಚಂದ್ರಕವಿಯು 'ವಿರುಪಾಕ್ಷಸ್ಥಾನ'ವನ್ನು ರಚಿಸಿದರು.

ಮಹಾಲಿಂಗದೇವ, ಗುಬ್ಬಿಯ ಮಲ್ಲಣಾರ್ಯ, ಕಲ್ಲುಮಠದ ಪ್ರಭುದೇವರು, ಹಲಗೆದೇವ ಮುಂತಾದವರು ವೀರಶೈವ ಧರ್ಮ ಮತ್ತು ಸಾಹಿತ್ಯದ ಪುನರುಜ್ಜೀವನಕ್ಕೆ ಶ್ರಮಿಸಿದರು. ಶರಣರ ಅಮೂಲ್ಯ ಭಂಡಾರದಂತಿದ್ದ ವಚನ ರಾಶಿಯ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ ತಾತ್ವಿಕ ನೆಲೆ ಮತ್ತು ಅನುಭಾವಿಕ ನೆಲೆಗಳ ಹಿನ್ನೆಲೆಯಲ್ಲಿ ಪುನಃ ಜೋಡಿಸಿ ಉಳಿಸುವ ಕಾರ್ಯಮಾಡಿದರು.

ಮುಂದಿನ ಘಟ್ಟದಲ್ಲಿ ತೋಂಟದ ಸಿದ್ದಲಿಂಗ ಶಿವಯೋಗಿಗಳ ನೇತೃತ್ವದಲ್ಲಿ ಒಂದಾದ ಶಿವಶರಣರ ಕಾರ್ಯ ಚಟುವಟಿಕೆಗಳು ವೀರಶೈವ ಧರ್ಮ ಮತ್ತು ಸಾಹಿತ್ಯವನ್ನು ಉಳಿಸಿ, ಪುನರ್ಜೀವನಗೊಳಿಸುವ ಮಹಾತ್ಕಾರ್ಯದಲ್ಲಿ ತೊಡಗಿದರು. ಸ್ವತಃ ತೋಂಟದ ಸಿದ್ದಲಿಂಗ ಶಿವಯೋಗಿಗಳೇ ತಮ್ಮ ವಚನಗಳನ್ನು ಷಟ್‌ಸ್ಥಲಕ್ಕೆ ಹೊಂದಿಸಿ 'ಷಟ್‌ಸ್ಥಲ ಜ್ಞಾನಸಾರಾಮೃತ' ಎಂಬ ಹೆಸರಿನ ಕೃತಿಯನ್ನು ಹೊರತಂದರು. ಮುಂದೆ ಅವರ ಶಿಷ್ಯ ಪರಂಪರೆಯಾದ ಏಳುನೂರೊಂದು ವಿರಕ್ತರು ವಚನ ಕಾವ್ಯ ಸಂಪಾದನೆಯನ್ನು ಒಂದು ಕಾಯಕವನ್ನಾಗಿ ಸ್ವೀಕರಿಸಿದರು. ವಚನಗಳಲ್ಲಿ ಹುದುಗಿರುವ ಚಿಂತನೆಯ ಬೆಳಕನ್ನು ಒಂದು ತಾತ್ವಿಕ ತಳಹದಿಯ ಮೇಲೆ ಸಂಯೋಜಿಸಿರುವುದು ವಚನಕಾರರ ಈ ಪ್ರಯತ್ನವೇ ವೀರಶೈವ ಸಾಹಿತ್ಯ ಮತ್ತು ಧರ್ಮಕ್ಕೆ ಮರು ಜನ್ಮ ನೀಡಿತು.

---

೩. ಸದಾನಂದಕನವಳ್ಳಿ , ಚನ್ನಪ್ಪ ಕೆರಿಮನಿ – (ಸಂ) 'ವೀರಶೈವ ಸಾಹಿತ್ಯ ಸಮಿಕ್ಷೆ' –ಪುಟ–೨೧೬

ಹನ್ನೆರಡನೆಯ ಶತಮಾನದ ವಚನ ಚಳುವಳಿಯ ಕಾಲದಿಂದಲೂ ವಚನ ಸಂಕಲನಗಳು, ಸಂಗ್ರಹಗಳು, ಸಂಪಾದನೆಗಳು ರೂಪಗೊಳ್ಳುತ್ತಾ ಬಂದಿದ್ದರೂ ಅವುಗಳನ್ನೆಲ್ಲ ನನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡಿಸುವುದು ಅಗಾಧವಾದ ಕೆಲಸವಾದುದರಿಂದ ಹದಿನಾರನೆಯ ಶತಮಾನದಲ್ಲಿ ಜಂಅದ ತೋಂಟದ ಸಿದ್ದಲಿಂಗ ಯತಿಗಳ ಪರಂಪರೆಯಲ್ಲಿ ಸಾಗಿ ಬಂದ ಶಿಷ್ಯ-ಪ್ರಶಿಷ್ಯರಿಂದ ಸಂಕಲನಗೊಂಡ ವಚನ ಸಂಕಲನಗಳನ್ನು ಮಾತ್ರ ನನ್ನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮುದ್ರಿತವಾದ ವಚನ ಸಂಕಲನಗಳ ಸಾಹಿತ್ಯವನ್ನು ಸಂಗ್ರಹಿಸಿ ಅತೀ ಸಾಮಾನ್ಯವೆನ್ನಬಹುದಾದ ಅಂಶಗಳನ್ನು ಕಡೆಗಣಿಸದೆ, ವಚನ ಸಂಕಲನಗಳಲ್ಲಿ ರೂಪಗೊಂಡ ವಿಷಯವನ್ನು ಕ್ರಮಬದ್ಧವಾಗಿ ವರ್ಗೀಕರಿಸಿ, ವಚನಗಳಲ್ಲಿ ಸೂಚಿತವಾಗಿರುವ ಅಂಶಗಳ ಮೇಲೆ, ಸಾಧ್ಯವಾದಡೆ ಬೇರೆ ಆಧಾರಗಳಿಂದ ಬೆಳಕು ಚಲ್ಲಿ ವಸ್ತುನಿಷ್ಠ ಅಧ್ಯಯನ ಮಾಡುವ ಪ್ರಯತ್ನ ಇದಾಗಿದೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ-ಪ್ರಶಿಷ್ಯ ಪರಂಪರೆ ಸಂಕಲನ ಮಾಡಿದ 'ಸಂಕಲನ ಸಾಹಿತ್ಯ'ದ ಹರವು ವಿಶಾಲವಾದುದು. ವಚನ ಸಂಕಲನ ಸಾಹಿತ್ಯದ ಎಂಟು ಸಂಪುಟಗಳು ಉಚಿತ ಪ್ರಸ್ಥಾವನೆ, ಅನುಬಂಧಗಳೊಂದಿಗೆ ವ್ಯವಸ್ಥಿತವಾಗಿ ಪರಿಷ್ಕರಣೆಗೊಂಡು ಗದುಗಿನ ತೋಂಟದಾರ್ಯ ಮಠದ ಸಮಗ್ರ ವೀರಶೈವ ಅಪ್ರಕಟಿತ ಸಾಹಿತ್ಯ ಪ್ರಕಟಣ ಮಾಲೆಯಲ್ಲಿ ಪ್ರಕಟಗೊಂಡಿವೆ. ಷಟ್‌ಸ್ಥಲ, ಮಿಶ್ರಷಟ್‌ಸ್ಥಲ, ಏಕೋತ್ತರ ಶತಸ್ಥಲ, ಅಷ್ಟಾವರಣ ವಚನಗಳು, ಲಿಂಗವಿಕಳಾವಸ್ಥೆಯ ವಚನಗಳು, ಲಿಂಗಸಾವಧಾನದ ವಚನಗಳು, ಸಿದ್ಧಲಿಂಗ ಸೂತ್ರ, ದೀಕ್ಷಾವಿಧಾನ, ಶಿಖಾಚಕ್ರ- ಹೀಗೆ ವಸ್ತು ವೈವಿಧ್ಯದಿಂದ ಕೂಡಿದ ಸಾವಿರಕ್ಕಿಂತ ಹೆಚ್ಚಿನ ವಚನಗಳು ಈ ಸಂಪುಟಗಳಲ್ಲಿ ಅಡಕಗೊಂಡಿವೆ.

ಸಂಯೋಜನ ಸಾಹಿತ್ಯವೆಂದರೆ, ಸಂಗ್ರಹ, ಸಂಕಲನ, ಸಂಪಾದನೆಗಳನ್ನೊಳಗೊಂಡಂತಹ ಕ್ರೋಡೀಕೃತ ಹೆಸರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ವೀರಶೈವ ಸಂಯೋಜನ ಸಾಹಿತ್ಯ' ವು ಉಪೇಕ್ಷೆಗೆ ಗುರಿಯಾಗಿದೆ. ಹದಿನೈದನೆಯ ಶತಮಾನದಲ್ಲಿನ ಸಾಂಘಿಕ ಸೃಷ್ಟಿಯಾದ ಕೀರ್ತನ ಸಾಹಿತ್ಯವನ್ನು ಗುರುತಿಸಿದಂತೆ, ಅದೇ ಸಮಯದ ಇನ್ನೊಂದು 'ಸಾಂಘಿಕ ಸೃಷ್ಟಿ'ಯಾದ ಈ ಸಂಯೋಜನ ಸಾಹಿತ್ಯದ ಕಡೆ ಗಮನ ಹರಿಸಿ, ಈ ಪ್ರಕಾರದ ಸ್ವರೂಪ, ವಸ್ತುವೈವಿಧ್ಯತೆ ಹಾಗೂ ವೈಶಿಷ್ಟ್ಯಗಳ ಜೊತೆ ಧಾರ್ಮಿಕ ಮತ್ತು ತಾತ್ವಿಕ ಮೌಲ್ಯಗಳ ಕುರಿತು ಸಮಗ್ರ ಅಧ್ಯಯನ ಮಾಡುವುದರ ಜೊತೆಗೆ ಈ ಕಾಲದಲ್ಲಿ ವಚನಗಳನ್ನು ರಚಿಸಿದ ಮತ್ತು ಸಂಕಲಿಸಿದ ವಚನಕಾರರ ಬದುಕು ಬರಹಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಆಶಯವಾಗಿದೆ.

*****

ಅಧ್ಯಾಯ : ೨

ಸಂಕಲನ ಸಾಹಿತ್ಯದ ಹಿನ್ನೆಲೆ

ಅಧ್ಯಾಯ : ಎರಡು

ಸಂಕಲನ ಸಾಹಿತ್ಯದ ಹಿನ್ನೆಲೆ

ಸಂಸ್ಕೃತ ಭಾಷೆ ಕರ್ನಾಟಕದಲ್ಲಿ ಜನ ಸಾಮಾನ್ಯರ ಆಡು ಭಾಷೆಯಾಗಿ, ದೇಶ ಭಾಷೆಯಾಗಿ ಯಾವ ರಾಜನ ಕಾಲದಲ್ಲಿಯೂ ಪ್ರಚಾರಕ್ಕೆ ಬರಲೇ ಇಲ್ಲ. ಆಸ್ಥಾನ ಪಂಡಿತರ, ಶಾಸನ–ಶಾಸ್ತ್ರಗಳ, ಶಿಕ್ಷಣ ಮಾಧ್ಯಮದ ಭಾಷೆಯಾಗಿಯೇ ಉಳಿಯಿತು. ವೈದಿಕ ಮತದ ಬಿಗಿ ನಿಯಮ, ಅರ್ಥವಾಗದ ಸಂಸ್ಕೃತ ಭಾಷೆಯಿಂದ ಬೇಸತ್ತಿದ್ದ, ಜನ ದಿಕ್ಕು ತಪ್ಪಿದ ಸಮಯದಲ್ಲೇ ಬಸವಣ್ಣನವರು ಅವತಾರವೆತ್ತಿ ಬಂದು ವೀರಶೈವ ಧರ್ಮಕ್ಕೆ ಮುನ್ನುಡಿ ಬರೆದರು. ಬದುಕಿಗೊಂದು ಹೊಸ ಅರ್ಥವನ್ನು ಕಾಣಲು ಕಾತರದಲ್ಲಿದ್ದ ಜನ ಈ ಕಡೆ ಧಾವಿಸಿದ್ದರಲ್ಲಿ ಆಶ್ಚರ್ಯವಿಲ್ಲ.

"ಬಸವಣ್ಣನವರ ನೇತೃತ್ವದಲ್ಲಿ ಆರಂಭವಾದ ಆಂದೋಲನ, ವೃತ್ತಿ ಕೇಂದ್ರಿತ ಪ್ರಗತಿಯನ್ನು ಪ್ರತಿಪಾದಿಸುತ್ತ ಭಾರತೀಯ ಧರ್ಮ ಪರಂಪರೆಗೆ ಸಮಾನತೆಯ ಸಮಾಜ ಕಲ್ಯಾಣವನ್ನು ಜೋಡಿಸಿ, ಜನ ಸಾಮಾನ್ಯರ ಅಭ್ಯುದಯಕ್ಕೆ ಕಾರಣವಾಯಿತು. ಸ್ಥಾವರವಾಗಿರುವ ವ್ಯಕ್ತಿ, ಜಂಗಮವಾಗುವುದರೊಂದಿಗೆ, ಸಮಾಜವೂ ಸ್ಥಾವರವಾಗಿ ಉಳಿಯದೆ ಜಂಗಮವಾಗಬೇಕೆಂಬುದು ಈ ಧರ್ಮದ ನಿಲುವು. ಈ ಮೂಲಕ ಅಭೇದ ಸಂಸ್ಕೃತಿಯನ್ನು ಅನುಷ್ಠಾನ ಗೊಳಿಸುವುದಾಗಿತ್ತು."[೧]

ವೀರಶೈವ ಧರ್ಮ, ಸಾಹಿತ್ಯ ಮತ್ತು ಸಾಮಾಜಿಕ ಆಂದೋಲನವನ್ನು ರೂಪಿಸಿತು. ಆ ಆಂದೋಲನ ಜನ ಜಾಗೃತಿಯ ವೈಚಾರಿಕ ಕ್ರಾಂತಿಯಾಯಿತು. ವೈದಿಕ ನಿರ್ಬಂಧಗಳನ್ನು ಸಡಿಲಿಸಿ, ವರ್ಣಾಶ್ರಮ ಬಂಧನಗಳನ್ನು ಕಂಡರಿಸಿ, ಗಂಡು– ಹೆಣ್ಣು, ಬ್ರಾಹ್ಮಣ–ಶೂದ್ರ, ಅಗ್ರಜ–ಅಂತ್ಯಜ, ಎಂಬ ಭೇದವಿಲ್ಲದೆ ಎಲ್ಲರು ಉದ್ಧಾರವಾಗಲು ಅನುವು ಮಾಡಿಕೊಟ್ಟಿತು. ಸ್ತ್ರೀಯರು, ಶೂದ್ರರು, ಆತ್ಮಜ್ಞಾನ ಪಡೆಯಲು ಅನರ್ಹರು ಎಂಬ ಸಂಕುಚಿತ ಭಾವನೆಯನ್ನು ದೂರ ಮಾಡಿತು. ಇದರ ಪರಿಣಾಮವಾಗಿ ಸಮಾಜದ ಎಲ್ಲಾ ವರ್ಗದ ಜನರು ವೀರಶೈವ ಮತದ ಅನುಯಾಯಿಗಳಾದರು. ಅನುಭಾವಿಗಳಾದರು. ಅಂತರಾಳದ ಅಭಿವ್ಯಕ್ತಿಗೆ ವಚನಗಳನ್ನು ಬಳಸಿದರು. ವೀರಶೈವ ಮತ ಪ್ರಾಬಲ್ಯದಿಂದ ವರ್ಣಾಶ್ರಮಗಳ ತಳಹದಿಯ ಮೇಲೆ ನಿಂತಿದ್ದ ವೈದಿಕ ಮತದ ಅನುಚರರು ತತ್ತರಿಸಿದರು. ಅಶಾಂತಿ ಆರಂಭವಾಗಿ, ಸಂಘರ್ಷ ಏರ್ಪಟ್ಟು, ಸನಾತನಿಗಳ ಮತ್ತು ಅನ್ಯಮತಿಯರ ಕೈ ಮೇಲಾಯಿತು. ಶರಣರ ಒಕ್ಕೂಟ ಸಂಪೂರ್ಣ ಒಡೆದುಹೋಯಿತು.

ಹನ್ನೆರಡನೆಯ ಶತಮಾನದಲ್ಲಿ ಮಹಾಪೂರವಾಗಿ ಹರಿದು ಬಂದ ವಚನವಾಹಿನಿ ಕಲ್ಯಾಣದ ಕ್ರಾಂತಿಯ ರಭಸದಲ್ಲಿ ಸರ್ರನೆ ಇಳಿದು ಹೋಯಿತು. ಕಲ್ಯಾಣದಲ್ಲಿ ಕೇಂದ್ರೀಕೃತರಾದ ಶರಣರೆಲ್ಲ ರಾಜಕೀಯ ವಿಪ್ಲವದಿಂದ ದೇಶದ ನಾನಾ ಭಾಗಗಳಿಗೆ ತೆರಳಿದರು.[೨]ಅವರ ಜೊತೆಗೆ ವಚನಗಳ ಕಟ್ಟುಗಳು ಚದುರಿದವು[೩] ಹೀಗಾಗಿ ಒಂದೆಡೆ ಕುಳಿತು ರಚಿಸಿದ ವಚನ ಸಾಹಿತ್ಯ ಹತ್ತು ದಿಕ್ಕಿಗೂ ಹಬ್ಬಿಕೊಂಡಿತು. ಬಸವಣ್ಣ ಮೊದಲಾದವರ ನಂತರವೂ ಅವರ ಸಮಕಾಲೀನರಾಗಿದ್ದ ಆದಯ್ಯ, ಏಕಾಂತದ ರಾಮಯ್ಯ, ಗೊಗ್ಗಿದೇವ (ಕ್ರಿ.ಶ.೧೧೮೪ ರ ಅಣ್ಣಿಗೇರಿ ಶಾಸನೋಕ್ತ)[೪]

---

೧. ವಿಜಯ ಶ್ರೀ.ಎ. ಹಿರೇಮಠ– 'ಸಂಪಾದನೆ ಸಮಯ.' ಪುಟ–೧

೨. ಈ ಕಾಲದಲ್ಲಿ ಕೆಲವು ಶರಣರು ಆಂದ್ರ ಕಡೆ ಪ್ರಯಾಣ ಬೆಳೆಸಿದರು ಓರಂಗಲ್ಲಿನ ಕಾಕತೀಯ ಗಣಪತಿ ನರೇಂದ್ರನು ಆಂದ್ರದಲ್ಲಿ ಅವರಿಗೆ ರಕ್ಷಣೆ ನೀಡಿದನು.

೩. ಈ ಸಮಯದಲ್ಲಿ ಎಷ್ಟೋ ಧಾರ್ಮಿಕ ಗ್ರಂಥಗಳು, ಕಾವ್ಯಗಳು ನಾಶವಾಗಿರಬಹುದು.

೪. ಡಾ॥ ಎಂ. ಚಿದಾನಂದ ಮೂರ್ತಿ. 'ವಚನ ಸಾಹಿತ್ಯ' – ಪುಟ ೧೭೯.

ಕೆರೆಯ ಪದ್ಮರಸ, (ತ್ರಿಭುವನ ತಾತನೆಂಬ ವೈಷ್ಣವನನ್ನು ಸೋಲಿಸಿದವನು.ಕಾಲ ಕ್ರಿ.ಶ.೧೨೨೦)[೫] ಮುಂತಾದವರು ಧರ್ಮದ ಉಳಿವಿಗಾಗಿ ಮತ್ತು ಪ್ರಚಾರಕ್ಕಾಗಿ ಶ್ರಮಿಸಿದರು. ಇವರನ್ನು ಬಿಟ್ಟರೆ ಮತ್ತಾವ ವಚನಕಾರರ ಹೆಸರು ಆಗ ಕಾಣಬರುವುದಿಲ್ಲ. ೧೩–೧೪ನೇ ಶತಮಾನಗಳ ಕಾಲದಲ್ಲಿ ವೀರಶೈವ ಧರ್ಮ ಮತ್ತು ಶರಣರು ಅಜ್ಞಾತವಾಸವನ್ನನುಭವಿಸಬೇಕಾಯಿತು. ಆದರೆ ಈ ಕಾಲದಲ್ಲಿ ವಚನ ಸಾಹಿತ್ಯದಿಂದ ಪ್ರಭಾವಿತರಾದ ವೀರಶೈವ ಕವಿಗಳು ವಚನ ರಚನೆಗೆ ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ. ಆದರೆ ವಚನಕಾರರು ಹಾಗೂ ಅವರು ಬೋಧಿಸಿದ ತತ್ವಗಳ ವಿಮರ್ಶೆ, ವ್ಯಾಖ್ಯಾನ ನಡೆದುದು ಕಾವ್ಯಮಾಧ್ಯಮದ ಮೂಲಕ[೬] ಮಾತ್ರ ಎನ್ನಬಹುದು.

ಹನ್ನೆರಡನೆಯ ಶತಮಾನದ ಶಿವಶರಣರನ್ನು ದೈವಿ ಪುರುಷರೆಂದು, ಅಮರರೆಂದು, ಅವತಾರಿಗಳೆಂದು, ಅಸಮಾನ್ಯರೆಂದು ಭಾವಿಸಿದುದಲ್ಲದೆ, ಅವರ ಬದುಕು, ಅವರು ಸಾರಿದ ಸಂದೇಶ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಬದುಕನ್ನು ಬಾಳಿದ ಶಿವಶರಣರ ತತ್ವ ಪ್ರಸಾರವು ಅತ್ಯಂತ ರಭಸದಿಂದ ನಡೆಯಿತು. ಈ ಕಾರ್ಯಕ್ಕೆ ಹರಿಹರ, ರಾಘವಾಂಕ ಮತ್ತು ಪಾಲ್ಕುರಿಕೆ ಸೋಮನಾಥ ಇವರು ಶಿವಶರಣರ ವಿಚಾರಧಾರೆಗಳಿಗೆ ಮಾರುಹೋಗಿ ಕಾವ್ಯ ನಿರ್ಮಾಣಕ್ಕೆ ಕೈ ಹಾಕಿದರು. ಬಸವಣ್ಣ ಮುಂತಾದವರಿಗೆ ನೂತನ ಸಾಮಾಜಿಕ ಬದುಕನ್ನು ನಿರ್ಮಿಸುವುದಾಗಿದ್ದರೆ, ಹದಿಮೂರನೆಯ ಶತಮಾನದ ಕವಿಗಳಿಗೆ ಮಹತ್ತರ ಕಾವ್ಯ ನಿರ್ಮಾಣ ಮೂಲೋದ್ದೇಶವಾಗಿತ್ತು.[೭]

೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಉದಯದೊಡನೆ ವೀರಶೈವ ಕವಿಗಳಿಗೆ ಮರುಜೀವ ಬಂದಂತಾಯಿತು. ಮಹಮ್ಮದಿಯರ ಉಸಿರು ಕಟ್ಟುವ ವಾತಾವರಣದಿಂದ ಹೊರ ಬಂದು ವೀರಶೈವ ಧರ್ಮ ಮತ್ತು ಸಾಹಿತ್ಯಗಳ ಸೇವೆಗೆ ಕಂಕಣ ಬದ್ಧರಾದರು. ಶಿವಕವಿದೇವ, ಗುರುದೇವ, ಸದಾಶಿವ, ಭೀಮಕವಿ, ಪದ್ಮಣಾಂಕ, ನೀಲಕಂಠ ಶಿವಾಚಾರ್ಯ ಮುಂತಾದ ಕವಿಗಳು ಪುರಾಣ, ರಗಳೆ, ಶತಕ, ಸ್ತೋತ್ರ ಮುಂತಾದ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಶರಣರು ಸೃಷ್ಟಿಸಿದ ವಚನ ಸಾಹಿತ್ಯ ಪರೋಕ್ಷವಾಗಿ ಕಾವ್ಯಗಳಲ್ಲಿ ಗುಪ್ತ ನದಿಯಂತೆ ಸಾಗಿ ಬಂತು. ಮನೆ ಮಠ–ಮಂದಿರಗಳಲ್ಲಿ ಪಠಣ, ಪೂಜೆ, ಸ್ತುತಿಗಳ ಮೂಲಕ ಉಸಿರಾಡಿತು.ಇದಲ್ಲದೆ ವಚನಗಳನ್ನು ತಮ ತಮಗೆ ಬೇಕಾದ ರೀತಿಯಲ್ಲಿ ಸಂಗ್ರಹಿಸುವ, ನಕಲು–ಪ್ರತಿ ಮಾಡಿಕೊಳ್ಳುವ ಚಟುವಟಿಕೆಗಳು ನಡೆದವು. ಆದರೆ ಕಾವ್ಯ ಪುರಾಣಗಳ ಮುಂದೆ ವಚನ ಸಾಹಿತ್ಯ ಸೂರ್ಯನ ಮುಂದಿನ ಹಣತೆಯಂತೆ ಅವಜ್ಞೆಗೆ ಗುರಿಯಾಯಿತು. ಆದರೂ ವಚನ ಸಾಹಿತ್ಯದ ಬಗೆಗೆ ಜನತೆಯಲ್ಲಿ ಅಭಿರುಚಿ, ಆದರಗಳು ಕಡಿಮೆಯಾಗಲಿಲ್ಲ.

ಧರ್ಮಸಂಸ್ಥಾಪನೆ ವಿಜಯ ನಗರ ಸಾಮ್ರಾಜ್ಯದ ಮಹೋದ್ದೇಶವಾಗಿತ್ತು. ಅಸ್ತವ್ಯಸ್ತವಾಗಿ ಚದುರಿ ಹೋಗಿದ್ದ ಧಾರ್ಮಿಕ ಗ್ರಂಥಗಳನ್ನು ಸಂಗ್ರಹಿಸಿ ವ್ಯಾಖ್ಯಾನ ಬರೆಯಿಸುವ ಮಹತ್ಕಾರ್ಯ ಆರಂಭವಾಯಿತು. "ಅದಕ್ಕಾಗಿ ಅನೇಕ ವಿದ್ವಾಂಸರನ್ನು ನಿಯೋಜಿಸಿದರು. ವಿದ್ವಾಂಸ ಸಹೋದರರಾದ ಸಾಯಣ ಮತ್ತು ಮಾಧವರ ನೇತೃತ್ವದಲ್ಲಿ ಒಂದು ದೊಡ್ಡ ವಿದ್ವಾಂಸರ ತಂಡವೆ ಈ ಕಾರ್ಯವನ್ನು ಕೈಗೆತ್ತಿಕೊಂಡಿತು. ವೇದಗಳಿಗೆ ವ್ಯಾಖ್ಯಾನ ಬರೆಯುವುದರಲ್ಲಿ ಪಂಚಾಗ್ನಿ ಮಾಧವ, ನರಹರಿ, ಸೋಮಯಾಜಿ, ನಾರಾಯಣ ವಾಜಪೇಯಿ, ಪಂಡರಿ ದೀಕ್ಷಿತ, ನಾಗಾಭರಣ, ವಾಮನಭಟ್ಟ,

೫. ಡಾ॥ ಎಂ. ಚಿದಾನಂದ ಮೂರ್ತಿ. 'ವಚನ ಸಾಹಿತ್ಯ' – ಪುಟ ೧೭೯.

೬. ರಗಳೆ, ಚಂಪೂ, ಷಟ್ಪದಿ, ಸಾಂಗತ್ಯ ರೂಪಗಳಲ್ಲಿ ಕಾವ್ಯಗಳು ರಚನೆಯಾದವು.

೭. ವೀರಶೈವ ಕವಿಗಳು, ಬ್ರಾಹ್ಮಣ ಕವಿಗಳು, ಮತ್ತು ಜೈನ ಕವಿಗಳು ಕೃತಿ ರಚಿಸಿರುವುದು ಕಂಡುಬರುತ್ತದೆ.

ಮೊದಲಾದ ವಿದ್ವಾಂಸರು ಸಾಯಣನಿಗೆ ಸಹಾಯಕರಾಗಿದ್ದರು. ಇಮ್ಮಡಿ ದೇವರಾಯನಂತಹ ದೊರೆಗಳೇ ಸ್ವತಃ ವಿದ್ವಾಂಸರಾಗಿದ್ದು 'ಬ್ರಹ್ಮ ಸೂತ್ರವೃತ್ತಿ' ಯನ್ನು ಬರೆದಿದ್ದಾನೆ."[೮]

ಪ್ರೌಢದೇವರಾಯ ರಾಜ್ಯದ ಚುಕ್ಕಾಣಿ ಹಿಡಿಯುತಿದ್ದಂತೆ ನಾಡಿನಲ್ಲಿ ಶಾಂತಿ ನೆಲೆಸಿತು. ವೀರಶೈವಧರ್ಮ ಚಿಗುರೊಡೆಯಿತು. ಮರೆಯಲ್ಲಿದ್ದ ಶರಣರು ಮತ್ತು ಸಾಹಿತ್ಯ ಬೆಳಕಿಗೆ ಬರಲಾರಂಭಿಸಿದವು. ಬಸವಾದಿ ಶರಣರು ಕಲ್ಯಾಣದಲ್ಲಿದ್ದಂತಹ ಪರಿಸರ, ಪ್ರೌಢದೇವರಾಯನ ಕಾಲಕ್ಕೆ ಮತ್ತೆ ನಿರ್ಮಾಣವಾಯಿತು.

ಪ್ರೌಢದೇವರಾಯ ಮತ್ತು ಅವನ ಕೈಕೆಳಗಿನ ಮಂತ್ರಿಗಳು, ಅಧಿಕಾರಿಗಳು[೯] ಸಹ ಹೆಚ್ಚಾಗಿ ವೀರಶೈವರೇ ಆಗಿದ್ದು ಅವರೂ ಸಹ ವೀರಶೈವ ಸಾಹಿತ್ಯಕ್ಕೆ ಉತ್ತೇಜನ ನೀಡಿದ್ದಾರೆ. ಸ್ವತಃ ಕೃತಿ ರಚನೆ ಮಾಡಿದ ಮಂತ್ರಿಗಳೂ ಇದ್ದಾರೆ, ಈ ಅವಧಿಯಲ್ಲಿ ನೂರೊಂದು ವಿರಕ್ತರು ಉದಯವಾಗಿ ವೀರಶೈವ ಧರ್ಮ ಮತ್ತು ಸಾಹಿತ್ಯವನ್ನು ತೇಜೋಜ್ವಲವಾಗಿ ಬೆಳಗಿಸಿದರು. ವಚನ ಸಾಹಿತ್ಯವನ್ನು ಆದರಿಸಿ ಹೊಸ ಹೊಸ ರೂಪಗಳಲ್ಲಿ ಸಂಕಲನ, ಸಂಗ್ರಹ, ಸಂಪಾದನೆ, ಪರಿಷ್ಕರಣೆ, ವ್ಯಾಖ್ಯಾನ ರೂಪಗಳಲ್ಲಿ ಬೆಳಕಿಗೆ ತರುವ ಕಾರ್ಯವೂ ನಡೆಯಿತು. ವಿಜಯ ನಗರ ಸಾಮ್ರಾಜ್ಯದ ಸೂತ್ರ ಹಿಡಿದ ಪ್ರೌಢದೇವರಾಯನ ವಿಶೇಷ ಆಸಕ್ತಿ, 'ವಚನ ಸಂಯೋಜನ'[೧೦] ಸಾಹಿತ್ಯದ ಮರು ಹುಟ್ಟಿಗೆ ಕಾರಣವಾಯಿತು.

ಬಸವಾದಿ ಶರಣರ ವಚನಗಳನ್ನು ಸಂಯೋಜನೆ ಮಾಡಲು ಸಿದ್ಧರಾದ ಶರಣರಿಗೆ ಹೊಸರಚನೆಗಿಂತ ಕಲ್ಯಾಣದಲ್ಲಿ ಸಮಾಜೋಧಾರ್ಮಿಕ ಕ್ರಾಂತಿಗೆ ಕಾರಣವಾದ ವಚನ ಸಾಹಿತ್ಯದಲ್ಲಿ ಅಪಾರ ನಿಧಿಯನ್ನು ಕಂಡರು. ಅದನ್ನು ಉಳಿಸುವ ಪ್ರಯತ್ನದಿಂದಾಗಿ ವೀರಶೈವ ತತ್ವ, ಶಾಸ್ತ್ರಾಂಶದಿಂದ ಕೂಡಿದ ವಚನ ಸಂಯೋಜನೆ ಹೆಚ್ಚಾಯಿತು. ದಾಸರ ಕೀರ್ತನೆಗಳಿಗೆ ಮಧ್ವ ಸಿದ್ಧಾಂತ ಹಿನ್ನೆಲೆಯಾಗಿದ್ದಂತೆ, ಶರಣರ ವಚನಗಳಿಗೆ ಷಟಸ್ಥಲ, ಸ್ತೋತ್ರ, ಆಚರಣೆ ಮುಂತಾದವುಗಳು ಹಿನ್ನೆಲೆಯಾದವು. ಅಳಿವಿನ ಹೊಸ್ತಿಲಲ್ಲಿದ್ದ ವಚನ ಸಾಹಿತ್ಯ, ವೀರಶೈವ ಮಹಾಮನೆಯೊಳಗೆ ಹತ್ತೆಂಟು ವಿಧವಾಗಿ ಮೈದಳೆದು ನಿಂತಿತು.

"೧. ವಚನಾಂಕಿತಗಳ ಆಧಾರದಿಂದ ಇವು ಇಂಥ ಶರಣರ ವಚನಗಳಿರಬೇಕೆಂದು, ಅವನ್ನು ಒಂದೆಡೆ ಇದ್ದಕ್ಕಿದ್ದಂತೆಯೆ ಸಂಗ್ರಹ ಮಾಡುವ ಕಾರ್ಯ ಮೊತ್ತಮೊದಲನೆಯ ಹಂತವೆಂದು ತೋರುತ್ತದೆ.

೨. ಹಲವಾರು ಶರಣರ ವಚನಗಳನ್ನು ಒಂದೆಡೆ ಸಂಕಲನ ಮಾಡಿರುವುದು ಎರಡನೇಯ ಹಂತ. ಸಕಲ ಸರ್ವ ಅಥವಾ ಪುರಾತನರ ವಚನಗಳು ಎಂಬ ಶೀರ್ಷಿಕೆಯಲ್ಲಿ ದೊರೆಯುವ ವಚನ ಸಾಹಿತ್ಯ ಈ ನಿಟ್ಟಿಗೆ ಸಂಬಂಧ ಪಟ್ಟದ್ದು.

೩. ಸಕಲ ಪುರಾತನರ ಬೆಡಗಿನ ವಚನಗಳನ್ನು ಆಯ್ದುಕೊಂಡು ಅವುಗಳಿಗೆ ಟೀಕೆ ಬರೆದಿರುವುದು ಮೂರನೇ ಹಂತ.

---

೮. ಡಾ॥ ಎಂ. ಚಿದಾನಂದ ಮೂರ್ತಿ. 'ವಚನ ಸಾಹಿತ್ಯ' – ಪುಟ ೧೯೫.

೯. ಲಕ್ಕಣ ದಂಡೇಶ, ಭಕ್ತಿ ಭಂಡಾರಿ ಜಕ್ಕಣಾರ್ಯ, ಗುರುರಾಯ ಮಂತ್ರಿ, ಬಿಷಾವೃತ್ತಿ ಒಡೆಯ, ದೇವರಾಜ ಒಡೆಯ, ನಾಗಣ್ಣ ದಂಡನಾಯಕ, ಮಲ್ಲಪ್ಪ ಒಡೆಯ, ಕರಸ್ಥಲದ ವೀರಣ್ಣೊಡೆಯ ಇತ್ಯಾದಿ

೧೦. "ಸಂಯೋಜನೆ " ಎಂಬ ಪದ ಸಂಗ್ರಹ, ಸಂಕಲನ, ಸಂಪಾದನೆ ಎಂಬ ಅರ್ಥಗಳನ್ನು ಒಳಗೊಂಡಿದೆ.

೪. ತತ್ವ ಜಿಜ್ಞಾಸೆ ಆರಂಭವಾದೊಡನೆಯೆ ಶರಣರ ವಚನಗಳನ್ನು ಷಟ್‌ಸ್ಥಲಕ್ಕನುಗುಣವಾಗಿ ಜೋಡಿಸಿದಂತೆ ತಿಳಿದುಬರುತ್ತದೆ. ಬಸವಣ್ಣನವರ ವಚನಗಳು, ಚನ್ನಬಸವಣ್ಣನವರ ವಚನಗಳು, ಪ್ರಭುದೇವರ ವಚನಗಳು, ಷಟ್‌ಸ್ಥಲದ ಕಟ್ಟುಗಳು. ಈ ವರ್ಗಕ್ಕೆ ಸಂಬಂಧ ಪಟ್ಟವುಗಳು.

೫. ಏಕೋತ್ತರ ಶತಸ್ಥಲಗಳು ಒಂದು ದೊಡ್ಡಗುಂಪಾಗಿ ನಿಲ್ಲುತ್ತದೆ.

೬. ಒಂದು ಸ್ಥಲ, ಇಲ್ಲವೆ ಅವಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಸಂಕಲನಗಳು ಉಂಟು. ಆಚರಣೆಯ ಸಂಬಂಧದ ವಚನಗಳು, ಪ್ರಸಾದಿ ಸ್ಥಲದ ವಚನಗಳು, ಲಿಂಗ ವಿಕಳಾವಸ್ಥೆಯ ವಚನಗಳು, ಸ್ತೋತ್ರದ ವಚನಗಳು ಈ ಗುಂಪಿಗೆ ಸೇರುತ್ತವೆ.

೭. ಸಮಗ್ರ ವೀರಶೈವ ಸಿದ್ಧಾಂತ ತತ್ವಗಳನ್ನು ಚರ್ಚಿಸಿ, ನಿಷ್ಕರ್ಷಿಸುವ ದೃಷ್ಟಿಯಿಂದ ಶೂನ್ಯ ಸಂಪಾದನೆಯಂತಹ ಮಹಾಸಂಪಾದನೆಗಳ ಗುಂಪು ಬಹು ಮಹತ್ವವಾದುದು."[೧೧]

ಹೀಗೆ ಸಂಕಲನ, ಸಂಗ್ರಹ, ಸಂಪಾದನೆ, ಟೀಕೆ, ವ್ಯಾಖ್ಯಾನಗಳ ಮೂಲಕ ವಚನ ಸಾಹಿತ್ಯ ಪುನರ್ ಜೋಡಣೆಗೆ ಒಳಗಾಯಿತು. ಈ ರೀತಿಯ ಸಂಯೋಜನ ಸಾಹಿತ್ಯ ಮಠಪರಂಪರೆ, ಗುರು–ಶಿಷ್ಯ ಪರಂಪರೆಗಳ ಚೌಕಟ್ಟಿನಲ್ಲಿ ಬರುವ ಶರಣರಿಂದ ರಚಿತವಾಗಿರುವುದು ಕಂಡು ಬರುತ್ತದೆ.

ಈ ಸಾಹಿತ್ಯಕ್ಕೆ ಸಮನಾಂತರವಾದ ಮತ್ತು ಹೆಚ್ಚು ಸಂಪ್ರದಾಯ ಬದ್ಧವಾದ ದಾಸಕೂಟ ಪರಂಪರೆಯ ಸಂಸ್ಕೃತ ಸಾಹಿತ್ಯ ಮತ್ತು ದಾಸ ಸಾಹಿತ್ಯವಿದ್ದುದರಿಂದ ಹನ್ನೆರಡನೆಯ ಶತಮಾನದ ಶರಣರ ಬಳಗದ ವಚನ ಸಾಹಿತ್ಯದಂತೆ ಸಾಹಿತ್ಯ ನಿರ್ಮಾಣವಾಗಿರುವುದು ಬಹಳ ಕಡಿಮೆ. ಆದರೆ ಮಠ, ಸಂಸ್ಥಾನಗಳು ಸಂಪ್ರದಾಯ ಬದ್ಧವಾಗುತ್ತ ಬಂದಂತೆ ದೀಕ್ಷೆ ಯಾಂತ್ರಿಕವಾಯಿತು. ಗುರು ಪರಂಪರೆ ಒಡೆದು ಹಲವಾರು ಸಮಯಗಳಾದವು.[೧೨] ಬಸವಾದಿ ಶರಣರು ಕಾಣ ಬಯಸಿದ ಸಮಾಜ ಸ್ಥಾಪನೆಯಾಗಲಿಲ್ಲ. ಗುರು–ಶಿಷ್ಯ ಪರಂಪರೆಯಿಂದಾಗಿ ಗುರು ಸ್ತುತಿ, ಗುರು ಪರಂಪರೆ ಸ್ತುತಿ ಕಾಯಕವಾಯಿತು. ಮತ ತತ್ವಗಳ ಸಮರ್ಥನೆ ಮತ್ತು ಶಾಸ್ತ್ರ ಸಾಹಿತ್ಯ ಹೆಚ್ಚಾಯಿತು. ಕಾರಣ ಯಾವುದೇ ವಿಷಯವನ್ನು ಪೌರಾಣಿಕಗೊಳಿಸುವುದರಿಂದ ಅದು ಪ್ರಾಚೀನ ವೆನಿಸಿಕೊಳ್ಳುತ್ತದೆ;

ಅದು ಪವಿತ್ರವಾದದ್ದಾಗುತ್ತದೆ ಎಂಬ ಭಾವನೆ ಜನ ಸಾಮಾನ್ಯರದಾಗಿತ್ತು. ದಾಸ ಸಾಹಿತ್ಯದ ಈ ನಂಬಿಕೆಯ ಪ್ರಭಾವದಿಂದಾಗಿ ಶರಣರೂ ಈ ಪರಿಕಲ್ಪನೆಯ ಬೆನ್ನು ಬಿದ್ದು ಹನ್ನೆರಡನೆಯ ಶತಮಾನದ ಹಿರಿಯ ಶರಣರಾದ ಬಸವ, ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದವರನ್ನು ಆಧ್ಯಾತ್ಮಿಕ ಅನುಭೂತಿಗಳನ್ನಾಗಿ ಚಿತ್ರಿಸಿದರು. ಆ ಹಿನ್ನೆಲೆಯಲ್ಲಿ ವಚನಗಳನ್ನು ಪುನರ್ ಜೋಡಿಸುವ ಸಂಯೋಜಿಸುವ ಪ್ರಕ್ರಿಯೆ ನಡೆಯಿತು.ಆದರೂ ವಚನ ಸಂಯೋಜನೆಯ

---

೧೧. ಡಾ॥ ಆರ್.ಸಿ. ಹಿರೇಮಠ(ಸಂ)– " ಸಕಲ ಪುರಾತನರ ವಚನಗಳು" ಪ್ರಸ್ತಾವನೆ

೧೨. ಕೆಂಪಿನ ಸಮಯ, ಚೀಲಾಳ ಸಮಯ, ಕುಮಾರ ಸಮಯ, ಮುರುಘಾ ಸಮಯ, ಹಾಗೂ ಸಂಪಾದನ ಸಮಯ ಪ್ರಮುಖವಾದವುಗಳು

ಪರಿಕಲ್ಪನೆ ಹೊಸದಾಗಿ ಹೊಳೆಯಲಿಲ್ಲ. ಬಸವಾದಿ ಶರಣರ ಕಾಲದಲ್ಲೂ ವಚನಗಳನ್ನು ಸಂಗ್ರಹಿಸುತ್ತಿದ್ದರು ಎಂಬುದಕ್ಕೆ ಬಸವಪುರಾಣದಲ್ಲಿಯೆ ಪ್ರಮಾಣಗಳಿವೆ. 'ಜಂಗಮ ಪ್ರಾಣ ಪವಾಡ'ದ ಪ್ರಸಂಗದಲ್ಲಿ 'ಬಸವ ಭಂಡಾರದ ಕವಳಿಗೆಗಳಂ ತರಿಸಿ "ಬಸವಣ್ಣನವರು ಕೈಗೊಂಡ ಶಪಥ ಗೀತವನ್ನು ನೋಡಿದುದಾಗಿ ಪ್ರಸ್ತಾಪವಿದೆ.[೧೩] ವೀರಶೈವ ವಚನ ವಾಂಙ್ಮಯವನ್ನು – ತಾತ್ವಿಕವಾಗಿ, ಸೈದ್ಧಾಂತಿಕವಾಗಿ, ಸೂತ್ರ ವ್ಯಾಖ್ಯಾನ ರೂಪವಾಗಿ, ರಚಿಸುವ ಮಹಾಕಾರ್ಯವನ್ನು ಹನ್ನೆರಡನೆಯ ಶತಮಾನದಲ್ಲಿಯೆ ಮಾಡಿದ್ದಾರೆ. 'ಅಂಗಸ್ಥಲಗಳು, ಲಿಂಗಸ್ಥಲಗಳು, ಮತ್ತು ಅವಾಂತರ ಸ್ಥಲಗಳು ಸ್ಪಷ್ಟವಾಗಿ ತಿಳಿದು ಬರುವುದು ಆ ಕಾಲದ ವಚನಕಾರರಿಂದಲೆ. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ ಮೊದಲಾದವರ ವಚನಗಳು ಸ್ಥಲಕ್ಕನುಗುಣವಾಗಿ ಜೋಡಿಸಲ್ಪಟ್ಟಿದ್ದವಲ್ಲದೆ ಶರಣರ ವಚನಗಳನ್ನು ಆಯ್ದು ಷಟ್‌ಸ್ಥಲ, ಏಕೋತ್ತರ ಶತಸ್ಥಲಗಳಿಗನುಗುಣವಾಗಿ ಹೊಂದಿಸುವ ಕೆಲಸವೂ ಅಂದು ನಡೆದಿತ್ತೆಂದು ತೋರುತ್ತದೆ. ಆದುದರಿಂದ ಏಕೋತ್ತರ ಶತಸ್ಥಲವು ಅಥವಾ ನೂರೊಂದು ಸ್ಥಲವು ಬಸವಾದಿ ಪ್ರಥಮರಿಂದಲೆ ಆರಂಭವಾಗಿದೆ ಎಂದು ಹದಿನೈದನೆಯ ಶತಮಾನದ ಮಹಾನುಭವಿಗಳಾದ ಮಹಾಲಿಂಗದೇವರು ಹಾಗೂ ಮಗ್ಗೆಯ ಮಾಯಿದೇವರು ನಿರ್ಧರಿಸಿದ್ದಾರೆ'.[೧೪] ನೂರೊಂದು ಸ್ಥಲದ ದರ್ಶನ ವಚನಕಾರರಿಗೆ ಸೇರಿದುದು. ಅವನ್ನು ಕೃತಿಗಳ ಮೂಲಕ ಅಭಿವ್ಯಕ್ತಿ ಪಡಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಆದರೆ ಈ ಕಾರ್ಯ ಬಸವಪೂರ್ವ ಯುಗದ ಕೇಶಿರಾಜ, ದಂಡನಾಯಕನ ಉಪಲಬ್ದ ಕೃತಿಗಳಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳ ಪ್ರಸ್ತಾಪ ಬರುವುದನ್ನು ಗಮನಿಸಬಹುದು. ಷಟ್‌ಸ್ಥಲ ಚಕ್ರವರ್ತಿಯಾದ ಚನ್ನಬಸವಣ್ಣನವರು ನೂರೊಂದು ಸ್ಥಲದ ವಿಧಿ ವಿಧಾನಗಳನ್ನು ತಮ್ಮ ವಚನಗಳಲ್ಲಿ ತಿಳಿಸಿ "ವಚನೈಕೋತ್ತರ ಶತಸ್ಥಲ[೧೫]ವೆಂಬ ಕೃತಿಯನ್ನು ರಚಿಸಿದ್ದಾರೆ.

ವಚನ ಸಂಕಲನಗಳಲ್ಲಿ ದೊರೆತ ಮೊದಲ ಕೃತಿ ಇದೆ ಆಗಿದೆ. ಚನ್ನಬಸವಣ್ಣನವರೇ ಮೊದಲ ವಚನ ಸಂಕಲನಕಾರ ಎಂಬುದು ನಿರ್ವಿವಾದ. ನೂರೊಂದು ಸ್ಥಲದ ಪರಿಚಯ ಶರಣರಿಗಿದ್ದಿತು ಎಂಬುದು ದಾಸಿಮಯ್ಯನವರ ಈ ವಚನದಿಂದ ಸ್ಪಷ್ಟವಾಗುತ್ತದೆ.

" ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲ ಪುಷ್ಪಂಗಳ ರುಚಿ ಪರಿಮಳದಂತೆ
ಮನದ ಮರೆಯ ಮಾಡು – ನೆನಹಿನಲ್ಲರಿದು
ನಾಲಗೆ ನುಡಿಯುವಾಗಲಲ್ಲದೆ, ಕಾಣಬಾರದು ಕೇಳಬಾರದು
ಒಂದಂಗದೊಳಡಗಿದ ನೂರೊಂದರ ಪರಿ ರಾಮನಾಥ."

ಈ ವಚನದ ಕೊನೆಯ ಸಾಲಿನಲ್ಲಿ ಬರುವ 'ಒಂದಂಗದೊಳಡಗಿದ ನೂರೊಂದರ ಪರಿ' ಎಂಬ ಮಾತು ನೂರೊಂದು ಸ್ಥಲದ ಪರಿಕಲ್ಪನೆಯನ್ನು ತಿಳಿಸುತ್ತದೆ.

" ವಚನ ಭಂಡಾರಿ ಶಾಂತರಸನ ಮೂಲಕ ವಚನಗಳ ಸಂಗ್ರಹ ಕಾರ್ಯವು ನೆರವೇರಿದುದು ಸಾಹಿತ್ಯ ಕೃತಿಗಳಿಂದ ತಿಳಿದು ಬರುತ್ತದೆ. ಅಕ್ಕಮಹಾದೇವಿಯೆಂಬ ಶಿವಶರಣೆಗೆ ಚನ್ನಮಲ್ಲ ಪ್ರಭು

---

೧೩. ಸದಾನಂದ ಕನವಳ್ಳಿ ಮತ್ತು ಕೆರಿಮನಿ(ಸಂ). 'ವೀರಶೈವ ಸಾಹಿತ್ಯ ಸಮೀಕ್ಷೆ' – ಪು.೨೨೪

೧೪. ಪ್ರೊ। ಜಿ. ಶಿವಲಿಂಗಯ್ಯ–(ಸಂ) 'ಗೌರವ'. ಎಸ್.ಎಸ್. ಭೂಸನೂರುಮಠ ಅಭಿನಂದನ ಗ್ರಂಥ ಪು–೩೦೧

೧೫. ಇದು ಜಿ.ಎಸ್. ಶಿವಲಿಂಗಯ್ಯ ಅವರಿಂದ ಸಂಪಾದನೆಗೊಂಡು ಜ.ತೋ. ಮಠದ "ಸಮಗ್ರ ವೀರಶೈವಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟಣಾ ಮಾಲೆ"ಯಿಂದ ೧೯೮೩ರಲ್ಲಿ ಪ್ರಕಟವಾಗಿದೆ.

ಇನ್ನೂರ ಹದಿನಾರು ಸಕಿಲದ ಟಿಪುಣದರ್ಥವ ಬೋಧಿಸುವ ಸಮಯದಲ್ಲಿ". (ಧಾ.ವ.ಬಾಂ.ಕಾ ಪ್ರ ೧೦೯೧/೨, ೧೩೮೩/೧,೨೦೦೭) ಯೆಂಬ ದಾಖಲೆಯು ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯದ ಸೃಜನ ಕಾರ್ಯದೊಂದಿಗೆ ಷಟ್‌ಸ್ಥಲ, ಏಕೋತ್ತರ ಶತಸ್ಥಲ, ಮಿಶ್ರಸ್ಥಲ ಕೃತಿಗಳು, ವಚನ ಸಂಕಲನ, ಸಂಗ್ರಹ ಹಾಗೂ ವ್ಯಾಖ್ಯಾನ ಕೃತಿಗಳು ಹುಟ್ಟಿಕೊಂಡವು[೧೬] ಎಂಬುದನ್ನು ತಿಳಿಸುತ್ತದೆ. ಆದ್ದರಿಂದ ವಚನ ಸಂಕಲನ ಕಾರ್ಯ ಹನ್ನೆರಡನೆಯ ಶತಮಾನದಲ್ಲಿ ಕ್ರಮಬದ್ಧವಾಗಿ ಪ್ರಾರಂಭವಾಗಿರುವುದು ತಿಳಿದುಬರುತ್ತದೆ.

ಹದಿಮೂರನೆಯ ಶತಮಾನದಲ್ಲಿ ಪಾಲ್ಕುರಿಕೆ ಸೋಮನಾಥ, ಪ್ರಭುದೇವರ ವಚನಗಳನ್ನು ಆಯ್ದು ಅವುಗಳಿಗೆ ಆಗಮ ಸಾಕ್ಷಿಗಳನ್ನು ಬೆರಸಿ "ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾ ಬೋಧೆ" ಎಂಬ ತಾತ್ವಿಕ ಕೃತಿಯನ್ನು, ಪುರಾತನರ ಕಾಲಜ್ಞಾನ ವಚನಗಳನ್ನು ಕಲೆ ಹಾಕಿದ. "ಭೂಲೋಕ ಚಿಂತಾರತ್ನ" ಎಂಬ ಕೃತಿಯನ್ನು ಸಿದ್ಧಪಡಿಸಿರುವುದು ಸಂಪಾದನ ಸಾಹಿತ್ಯದ ಕುರುಹಾಗಿದೆ.

ವಿಜಯನಗರದ ಅರಸ ಪ್ರೌಢದೇವರಾಯನ ಕಾಲದಲ್ಲಿ ಮಹಾಲಿಂಗದೇವ, ಗುಬ್ಬಿಯ ಮಲ್ಲಣ್ಣರಂಥ ವೀರಶೈವ ಅನುಭಾವಿಗಳು ಶರಣರ ಆ ಅಮೂಲ್ಯ ನಿಧಿಯನ್ನು ಶೋಧಿಸಿ ಮತ್ತೆ ಅದಕ್ಕೆ ಹೊಸ ಜೀವ ಕೊಡುವ ಕಾರ್ಯದಲ್ಲಿ ತೊಡಗಿದರು. ಬಸವಾದಿ ಶರಣರ ತಾತ್ವಿಕ ಮಾರ್ಗವನ್ನೆ ಅನುಸರಿಸಿ ತಾವೂ ಸಹ ಷಟ್‌ಸ್ಥಲ, ಏಕೋತ್ತರ ಶತಸ್ಥಲ ಕೃತಿಗಳನ್ನೆ ರಚಿಸಿ ವಚನ ಸಾಹಿತ್ಯ ಸಂಪಾದನೆಗೆ ಒಂದು ನಿಶ್ಚಿತವಾದ ನೆಲೆಗಟ್ಟನ್ನು ನಿರ್ಮಿಸಿದರು. ಇವರ ಹಿಂದೆಯೆ ಅನೇಕರು ಇಂತಹ ಪ್ರಯತ್ನಕ್ಕೆ ಕೈಹಾಕಿದರು. ಹೊಸ ಹೊಸ ದೃಷ್ಟಿಕೋನಗಳಿಂದ ವಚನಗಳನ್ನಾಯ್ದು ಜೋಡಿಸಲುದ್ಯುಕ್ತರಾದರು. ಕಲ್ಲುಮಠದ ಪ್ರಭುದೇವರು(೧೫೦೦-೧೫೮೦) 'ಲಿಂಗಲೀಲಾವಿಲಾಸ ಚಾರಿತ್ರ', ಶಿವಗಣ ಪ್ರಸಾದಿ ಮಹಾದೇವಯ್ಯ (೧೪೬೦), ಹಲಗೆದೇವ (೧೪೬೫)ರ ಶೂನ್ಯ ಸಂಪಾದನೆಗಳು, ಜಕ್ಕಣ್ಣನ (೧೪೩೦), 'ಸ್ವರ ವಚನೈಕೋತ್ತರ ಶತಸ್ಥಲ', 'ಸಿದ್ಧಲಿಂಗೇಶ್ವರನ 'ಏಕೋತ್ತರ ಶತಸ್ಥಲ '(ವಚನ, ಸ್ವರವಚನ, ವೃತ್ತ) ವೆಂಬ ಸಂಕಲನ ಕೃತಿಗಳು ಹೊರಬಂದವು. ಇದಲ್ಲದೆ ಮಗ್ಗೆಯ ಮಾಯಿದೇವರ 'ಪದ್ಯೈಕೋತ್ತರ ಶತಸ್ಥಲ' (ಷಟ್ಪದಿ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಯ 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ' ವೆಂಬ ಸ್ವತಂತ್ರ ಕೃತಿಗಳು ಈ ಯುಗದ ಅಮೂಲ್ಯ ಕೊಡುಗೆಗಳೆನಿಸಿವೆ.

ವೀರಶೈವ ಧರ್ಮದ ತತ್ವಗಳನ್ನು ಜನರಿಗೆ ಸಂಕ್ಷಿಪ್ತ ರೂಪದಲ್ಲಿ ತಿಳಿಸಿ ಹೇಳಬೇಕೆಂಬ ಮಹದುದ್ದೇಶದಿಂದ 'ಶೂನ್ಯ ಸಂಪಾದನೆಯ ಸಂಗ್ರಹ' ರೂಪಗಳು ರಚಿತವಾದವು. ಶೂನ್ಯ ಸಂಪಾದನೆಗಳಂತೆ, ಏಕೋತ್ತರ ಶತಸ್ಥಲಗಳಿಗೂ ಸಂಗ್ರಹ ಕೃತಿಗಳು ಹುಟ್ಟಿಕೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದರ ಜೊತೆಗೆ ಅನೇಕ ವಿರಕ್ತರು ವಚನಗಳಿಗೆ ಟೀಕೆ, ಟಿಪ್ಪಣಿ, ವ್ಯಾಖ್ಯಾನಗಳನ್ನು ಬರೆದರು.

ತೋಂಟದ ಸಿದ್ಧಲಿಂಗ ಶಿವಯೋಗಿಗಳು ಮತ್ತು ಅವರ ಶಿಷ್ಯ ಪ್ರಶಿಷ್ಯರು ವಚನ - ಕಾವ್ಯ ಸಂಪಾದನೆಯನ್ನು ಒಂದು ಕಾಯಕವನ್ನಾಗಿ ಸ್ವೀಕರಿಸಿದರು. ತಮ್ಮ ಹೆಸರಿನ ಹಿಂದೆ 'ಸಂಪಾದನೆಯ' ಎಂಬ ವಿಶೇಷಣವನ್ನು ಸೇರಿಸಿಕೊಳ್ಳುವಷ್ಟರ ಮಟ್ಟಿಗೆ ಅವರು

---

೧೬. ಬಿ.ಆರ್. ಹಿರೇಮಠ (ಸಂ) -'ವಚನ ಸಂಕಲನ ಸಂಪುಟ-೧' - ಪ್ರಸ್ತಾವನೆ ಪುಟ-೫

ಈ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡರು.[೧೭] ಅವರವರ ದೃಷ್ಟಿಕೋನ, ಆಧ್ಯಾತ್ಮಿಕ ನಿಲುವು, ತಾತ್ವಿಕ ನಿಷ್ಠೆಗನುಗುಣವಾಗಿ ಷಟ್‌ಸ್ಥಲ, ಏಕೋತ್ತರ ಶತಸ್ಥಲಗಳ ಜೊತೆಗೆ ಅನೇಕ ವಿಧವಾದ ಮಿಶ್ರಸ್ಥಲದ ಸಂಕಲನ ಕೃತಿಗಳು, ಸಂಪಾದನೆಗಳು ರಾಶಿ ರಾಶಿಯಾಗಿ ಹುಟ್ಟಿಕೊಂಡವು. ಹಿಂದೆಂದೂ ಕಾಣದ ರೀತಿಯಲ್ಲಿ ಸಂಗ್ರಹ, ಸಂಕಲನ ,ಸಂಪಾದನಾ ಕಾರ್ಯ ಈ ಕಾಲಕ್ಕೆ ನಡೆಯಿತು. ಈ ಕಾಲವನ್ನು ಸಂಯೋಜನ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದು.

ವಚನ ಸಾಹಿತ್ಯ ಸೃಷ್ಟಿಯಷ್ಟೇ ಪ್ರಮುಖವಾದುದು ವಚನ ಸಾಹಿತ್ಯ ಸಂರಕ್ಷಣೆ ಮತ್ತು ಪ್ರಸಾರ ಕಾರ್ಯ. ಈ ಉಭಯ ಕಾರ್ಯವನ್ನು ಒಂದು ವ್ರತವಾಗಿ ನಿರ್ವಹಿಸಿದರು ೧೫ನೇ ಶತಮಾನದ ಶರಣರು. ಇವರು ಈ ಮಹತ್ಕಾರ್ಯವನ್ನು ಪೂರೈಸದಿದ್ದರೆ ವಚನ ಸಾಹಿತ್ಯ ಸಂಪತ್ತು ನಮಗೆ ಲಭಿಸದೆ ಹೋಗುತ್ತಿತ್ತು. ಆದುದರಿಂದ ವಚನಕಾರರಿಗೆ ಸಲ್ಲುವಷ್ಟೇ ಗೌರವ ಈ ಸಂಯೋಜನಕಾರರಿಗೂ ಸಲ್ಲುತ್ತದೆ. ವಚನ ಸಂಯೋಜನೆಯ ಮೂಲಕ ನೀಡಿದ ಧಾರ್ಮಿಕ ಹಾಗೂ ಸಾಹಿತ್ಯಿಕ ಕೊಡುಗೆ ಅಪೂರ್ವವಾದುದಾಗಿದೆ.

*****

೧೭. ಸಂಪಾದನೆಯ ಬೋಳಬಸವ, ಸಂಪಾದನೆಯ ಚನ್ನಂಜೆದೇವ, ಸಂಪಾದನೆಯ ಪರ್ವತೇಂದ್ರ, ಸಂಪಾದನೆಯ ಗುರುಶಾಂತದೇವ, ಸಂಪಾದನೆಯ ಸಿದ್ದವೀರಣ್ಣಾರ್ಯ,ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ಮರಿಸಂಗಯ್ಯ ಮುಂತಾದವರು.

ಅಧ್ಯಾಯ –೩

ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪರಂಪರೆ

ಅಧ್ಯಾಯ –೩

ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪರಂಪರೆ

ವೀರಶೈವ ಧರ್ಮದ ಮೂಲ ಬೇರುಗಳು ಹೆಚ್ಚು ಪ್ರಾಚೀನವಾದರೂ ಅದೊಂದು ಪ್ರಬಲ ವೈಚಾರಿಕ ನೆಲಗಟ್ಟಿನ ಮೇಲೆ ಸೈದ್ಧಾಂತಿಕ ರೂಪವನ್ನು ಪಡೆದುಕೊಂಡದ್ದು, ಹನ್ನೆರಡನೆ ಶತಮಾನದಲ್ಲಿ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮೂಹಿಕ ಆಂದೋಲನದಲ್ಲಿ ಅವರೆಲ್ಲರೂ ರೂಪಿಸಿಕೊಂಡ ಆ ಧಾರ್ಮಿಕ ಶಕ್ತಿ, ಕೆಲವು ಶಾಶ್ವತ ಸೂತ್ರಗಳನ್ನು ಸಾಮಾಜಿಕ ಜೀವನದ ಸಮಗ್ರ ಬದಲಾವಣೆಗೆ ಅನ್ವಯಿಸಿ, ಆಚರಣೆಯಲ್ಲಿ ಸಾಧಿಸಿ ತೋರಿಸಿದರು. ಧರ್ಮದ ಮೂಲಭೂತ ಕಲ್ಪನೆಗಳಾದ ಆತ್ಮ, ಪರಮಾತ್ಮ ಮತ್ತು ಜಗತ್ತು ಇವುಗಳ ಪರಸ್ಪರ ಸಂಬಂಧ, ಸ್ವರೂಪ ಮೊದಲಾದವುಗಳನ್ನು ಕುರಿತ ಚರ್ಚೆ, ಚಿಂತನೆಗಳು–ಒಂದು ಕಡೆಯಲ್ಲಿ ಕೇವಲ ಅಂಧಶ್ರದ್ಧೆಯಾಗಿ, ಮತ್ತೊಂದು ಕಡೆಯಲ್ಲಿ ಕೇವಲ ಬೌದ್ಧಿಕ ಕಸರತ್ತಾಗಿ ಪರಿಣಮಿಸಿ ವಿಫಲವಾಗುವ ಸಾಧ್ಯತೆಯಿದ್ದಾಗ, ಈ ಎರಡೂ ಅಪಾಯಗಳಿಂದ ತಪ್ಪಿಸಿಕೊಂಡು ಜೀವನದ ಪೂರ್ಣತೆಗೆ ಕಾರಣವಾಗುವ ಹೊಸ ಆಚರಣೆಯ ಸಾಧನವಾಗುವಂತೆ ಮಾಡುವುದು, ಶರಣರು ಸೃಷ್ಟಿಸಿಕೊಂಡ ಹೊಸ ಚಿಂತನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಧರ್ಮದ ಬಹುದೊಡ್ಡ ಜವಬ್ದಾರಿಯಾಗಿತ್ತು. ಇದನ್ನು ಒಂದು ಸಂಪೂರ್ಣ ಸವಾಲಾಗಿ ಸ್ವೀಕರಿಸಿದ ಕೀರ್ತಿ ಹನ್ನೆರಡನೆಯ ಶತಮಾನದ ಶರಣರದು. ಇವರ ಹೊಸಕಲ್ಪನೆಯ ಪ್ರಯತ್ನದಿಂದಾಗಿ ವೀರಶೈವಧರ್ಮ ಒಂದು ಹೊಸ ಆಯಾಮವನ್ನು ಪಡೆಯಿತು. ಜಾತಿ, ಮತ, ಮಡಿ–ಮೈಲಿಗೆ, ಹೆಣ್ಣು–ಗಂಡು, ಬಡವ–ಬಲ್ಲಿದರೆಂಬ ಭೇದವನ್ನು ನಿವಾರಿಸಿ ತಾರಕ ಶಕ್ತಿಯಾಗಿ ಕಾಣಿಸಿಕೊಂಡಿತು.

ಹೀಗೆ ರೂಪಗೊಂಡ ಸಮಾಜಮುಖಿ, ಜನಮುಖಿಯಾದ ಹೊಸ ಆಲೋಚನೆ ನಿಂತ ನೀರಾಗದಂತೆ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸುವುದಕ್ಕೆ ಒಂದು ಸಿದ್ಧವ್ಯವಸ್ಥೆ ಅಥವಾ ಸಂಘಟನೆ ನಿರ್ಮಾಣವಾಗಬೇಕಿತ್ತು. ಹಾಗೆ ನಿರ್ಮಾಣಗೊಂಡ ಶೂನ್ಯ ಸಿಂಹಾಸನ ಹೆಸರಿನ ಜಂಗಮ ಪೀಠದ ಪರಿಕಲ್ಪನೆಯನ್ನು ಬಸವಣ್ಣ ಮುಂತಾದವರು ಕಲ್ಯಾಣದಲ್ಲಿ ಹುಟ್ಟುಹಾಕಿದರು. ಅಲ್ಲಮಪ್ರಭುವನ್ನು ಈ ಪೀಠದ ಅಧ್ಯಕ್ಷನನ್ನಾಗಿ ಆರಿಸಿದರು.

ಮನುಕುಲ ಉದ್ಧಾರಕ್ಕಾಗಿ ಜನ್ಮ ತಾಳಿದ ಈ ಧಾರ್ಮಿಕ ವ್ಯವಸ್ಥೆ ಬಹಳ ಕಾಲ ಉಳಿಯಲಿಲ್ಲ. ಬಸವಾದಿ ಶರಣರು ಹುಟ್ಟು ಹಾಕಿದ ವೈಚಾರಿಕ ನೆಲೆಗಟ್ಟಿನ ವ್ಯವಸ್ಥೆಗೆ ಬಾರಿ ವಿರೋಧಗಳು ಕಾಣಿಸಿಕೊಂಡವು. ಹೊಸ ಸಮಾಜದೊಂದಿಗೆ, ಹೊಸ ಅಭಿವ್ಯಕ್ತಿಯ ವಚನ ಸಾಹಿತ್ಯ ಬೆಳೆದು ಬರುತ್ತಿದ್ದಂತೆಯೆ ಶರಣರ ಆಂದೋಲನದಲ್ಲಿಯೂ ಬಿರುಕು ಕಾಣಿಸಿಕೊಂಡಿತು. ವೈದಿಕರ ಕಪಿ ಮುಷ್ಟಿಯಲ್ಲಿ ಸಿಲುಕಿದ್ದ ಭಾರತದ ತಳ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಬದುಕಿಗೆ ಸ್ವಲ್ಪವಾದರೂ ಮಾನವೀಯ ಅಂತಃಕರಣ ದೊರಕಿದ್ದು ಬಸವಣ್ಣ ಮುಂತಾದವರ ಸಾಮಾಜಿಕ ಚಳುವಳಿಯಿಂದ, ವೈದಿಕರ ಅನಾಗರಿಕ ಧಾರ್ಮಿಕ ಹಿಂಸೆಗಳಿಂದ, ತಳಸಮುದಾಯದ ಜನ ಬಿಡುಗಡೆಯ ನಿಟ್ಟುಸಿರು ಬಿಟ್ಟಿದ್ದು ಆಗಲೆ.

ವೈದಿಕ ಧರ್ಮದ ಅಸ್ಥಿತ್ವ ನಿಂತಿರುವುದೇ ವರ್ಣಾಶ್ರಮ ಧರ್ಮದ ಮೇಲೆ. ವರ್ಣಾಶ್ರಮ ಧರ್ಮ ನಿಂತಿರುವುದು ಜಾತಿಗಳ ಮೇಲೆ. ಜಾತಿಗಳು ನಿಂತಿರುವುದು ಅಸ್ಪೃಶ್ಯತೆಯ ಮೇಲೆ. ಅಸ್ಪೃಶ್ಯತೆಗಳಿಲ್ಲದೆ ಜಾತಿಗಳಿಲ್ಲ. ಜಾತಿಗಳಿಲ್ಲದೆ ವರ್ಣಾಶ್ರಮ ಧರ್ಮವಿಲ್ಲ. ವರ್ಣಾಶ್ರಮ ಧರ್ಮವಿಲ್ಲದೆ

ವೈದಿಕ ಧರ್ಮವಿಲ್ಲ. ಬಸವಣ್ಣನವರ ಸಮಾನತೆಯ ಪರಿಕಲ್ಪನೆ ವೈದಿಕ ಅನುಯಾಯಿಗಳು ಕುದಿಯುವಂತೆ ಮಾಡಿತು. ರಾಜ ಶಕ್ತಿಯ ಮತ್ತು ವೈದಿಕ ಧರ್ಮದ ಅಡಿಗಲ್ಲನ್ನು ಅಲುಗಾಡಿಸಬಲ್ಲ ಶಕ್ತಿಯಿದ್ದಂತಹ ಶರಣ ಚಳುವಳಿಗೆ ವೈದಿಕರ ಮತ್ತು ಆಳರಸರಿಂದ ಬಾರಿ ಪೆಟ್ಟು ಬೀಳುವಂತಾಯಿತು. ಮದುವಯ್ಯ, ಹರಳಯ್ಯನವರ ಮಕ್ಕಳ ಮದುವೆ ದ್ವೇಷದ ವಿಭಜನೆಯ ಕಿಡಿಯನ್ನು ಹೊತ್ತಿಸಿತು. ಅಲ್ಲಮ ಪ್ರಭುವನ್ನು ಶೂನ್ಯ ಪೀಠದ ಅಧ್ಯಕ್ಷನನ್ನಾಗಿಸಿದ್ದು ಶರಣರೊಳಗೆ ಬಾರಿ ಅಸಮಧಾನವನ್ನುಂಟುಮಾಡಿತು. ಕೆಲವರು ಬಸವಣ್ಣನವರ ಈ ಕ್ರಮವನ್ನು ಧಿಕ್ಕರಿಸಿ ಹೋದರೆಂದು ಶೂನ್ಯ ಸಂಪಾದನೆ ಮೊದಲಾದ ಕೃತಿಗಳು ಹೇಳುತ್ತವೆ.[೧] " ಅಲ್ಲಮ ಜ್ಞಾನಿಯೇನೋ ನಿಜ. ಆದರೆ ಕುಲಜನಲ್ಲ"ವೆಂಬುದೆ[೨] ಈ ಪ್ರತಿಭಟನೆಗೆ ಕಾರಣವಾಗಿರಬಹುದೆಂದು ಡಾ॥ ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಶರಣರು ಕಲ್ಯಾಣವನ್ನು ತೊರೆದು ಬೇರೆ ಬೇರೆ ನೆಲೆಗಳಿಗೆ ಹೋದರು. ಆನಂತರ ವೀರಶೈವ ಧರ್ಮ ಅನೇಕ ಎಡರು ತೊಡರುಗಳನ್ನು ದಾಟಿ ಮುಂದೆ ಮತ್ತೆ ಮರು ಹುಟ್ಟು ಪಡೆದುದು ವಿಜಯನಗರದ ಅರಸರ ಕಾಲದಲ್ಲಿ. ವಿಜಯನಗರ ಸಾಮ್ರಾಜ್ಯದ ಉದಯ ಕನ್ನಡನಾಡಿಗೂ, ವೀರಶೈವ ಧರ್ಮಕ್ಕೂ ನೂತನ ಚೈತನ್ಯ ನೀಡಿತು. ಅದರಲ್ಲೂ ಪ್ರೌಢದೇವರಾಯನ ಕಾಲ 'ಪುನರುಜ್ಜೀವನ ಯುಗ' ವೆನಿಸಿತು. ಈ ಅವದಿಯಲ್ಲಿ ನೂರೊಂದು ವಿರಕ್ತರು ವೀರ ಶೈವಧರ್ಮದ ಇತಿಹಾಸದಲ್ಲಿ ಕಾಣಿಸಿಕೊಂಡರು. ಈ ವಿರಕ್ತರು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳಲು ಸಾಧ್ಯವಿಲ್ಲ. ಇವರ ಹಿಂದೆ ಒಂದು ದೊಡ್ಡ ಗುರುಪರಂಪರೆ ಅಥವಾ ಗುರು ಇರಲೇಬೇಕು. ಆದರೆ ಆ ಗುರುವಿನ ಬಗ್ಗೆಯಾಗಲಿ, ಗುರುಪರಂಪರೆ ಬಗ್ಗೆಯಾಗಲಿ ಯಾವುದೇ ಮಾಹಿತಿ ಸಿಕ್ಕುವುದಿಲ್ಲ. ಆದರೆ ಆ ಕಾಲಘಟ್ಟದಲ್ಲಿ ಬಂದ ಕಾವ್ಯಗಳು[೩] ನೂರೊಂದು ವಿರಕ್ತರನ್ನು ಪ್ರಸ್ಥಾಪಿಸುತ್ತವೆಯೆ ಹೊರತು ಇವರ ಹಿಂದೆ ಇದ್ದಂತಹ ಗುರು ಪರಂಪರೆಯನ್ನು ಪ್ರಸ್ಥಾಪಿಸುವುದಿಲ್ಲ.

ಈ ನೂರೊಂದು ವಿರಕ್ತರ ಬಗೆಗೆ ಸಮರ್ಪಕ ಸಂಶೋಧನೆ ಇನ್ನೂ ಆಗಿಲ್ಲ, ಆಗಬೇಕಾಗಿದೆ. ಈ ಕಾವ್ಯಗಳು ಪ್ರಸ್ಥಾಪಿಸುವ ನೂರೊಂದು ವಿರಕ್ತರ ಹೆಸರುಗಳ ಬಗೆಗೆ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿಲ್ಲ.

ಪ್ರೌಢದೇವರಾಯನ ಕಾವ್ಯದಲ್ಲಿ

"ಹರರೂಪರಾದ ನೂರೊಂದು ಸುವಿರಕ್ತರುರೆ
ಕರಸ್ಥಲದ ನಾಗಿದೇವನು ಕಲ್ಲುಮಠದ ಪ್ರಭು
ವರನು ವೀರಣ್ಣೊಡೆಯರುಂ ಚಾಮರಸಾದಿ ಶಿವಭಕ್ತತತಿ ನೆರೆದು"

ಎಂಬ ಉಲ್ಲೇಖವಿದೆ. ಈ ಪದ್ಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರಸ್ಥಲದ ನಾಗಿದೇವ, ಕಲ್ಲುಮಠದ ಪ್ರಭುದೇವ, ವೀರಣ್ಣೊಡೆಯರುಗಳು ಮಾತ್ರ ನೂರೊಂದು ವಿರಕ್ತರ ಗುಂಪಿನಲ್ಲಿ ಬರುತ್ತಾರೆ ಎಂದು ಡಾ॥ ಆರ್.ಸಿ. ಹಿರೇಮಠರು ಅಭಿಪ್ರಾಯಪಡುತ್ತಾರೆ.

---

೧. ಡಾ॥ ಎಂ. ಎಂ. ಕಲಬುರ್ಗಿ, 'ಮಾರ್ಗ–೧,'ಪುಟ–೧೮೩

೨. ವೃತ್ತಿ ಜಾತಿಯಿಂದ ದೇವಾಲಯದ ರಂಗಭೋಗದ ವರ್ಗಕ್ಕೆ ಸೇರಿದವ ಅಲ್ಲಮ, ರಂಗಭೋಗದವರ ಮಧ್ಯೆ ಮದ್ದಳೆ ವಾದನ ಸೇವೆ ಸಲ್ಲಿಸುವವನು ಡಾ॥ ಎಂ.ಎಂ.ಕಲಬುರ್ಗಿ,'ಮಾರ್ಗ–೧,'ಪುಟ–೧೮೩

೩. ಅ. ಪ್ರೌಢರಾಯನ ಕಾವ್ಯ – ಅದೃಶ ಕವಿ
ಬ. ಚನ್ನಬಸವ ಪುರಾಣ – ವಿರುಪಾಕ್ಷ ಕವಿ
ಕ. ನೂರೊಂದು ವಿರಕ್ತರ ಕಾವ್ಯ – ಮೋದಿಯ ರುದ್ರ.

ಚೆನ್ನಬಸವ ಪುರಾಣದಲ್ಲಿ ನೂರೊಂದು ವಿರಕ್ತರ ಹನ್ನೊಂದು ಹೆಸರುಗಳು ಕಂಡುಬರುತ್ತವೆ.

೧. ಕರಸ್ಥಲದ ವೀರಣ್ಣೊಡೆಯ
೨. ಕರಸ್ಥಲದ ನಾಗಿದೇವ (ಅಕ್ಕಸಾಲೆಯನಾಗ)
೩. ಹೊನ್ನಯ್ಯ
೪. ಮಿಡಿಬಿಲ್ಲ ಶಾಂತದೇವ
೫. ಹೇಟೆಯ ಮರುಳ
೬. ತಗರ ಕಾಳೆಗದ ಪ್ರಭು
೭. ಬಾಲಲಿಂಗಣ್ಣ
೮. ಬತ್ತಲೇಶ್ವರ
೯. ಗುರುಬಸವ
೧೦. ನಿರ್ವಾಣಿ ಬೋಳೇಶ
೧೧. ಪರಪಟ್ಟಿ

ಪ್ರೌಢರಾಯನ ಕಾವ್ಯದಲ್ಲಿ ಕಲ್ಲುಮಠದ ಪ್ರಭುದೇವರನ್ನು ನೂರೊಂದು ವಿರಕ್ತರಲ್ಲಿ ಪರಿಗಣಿಸಲಾಗಿದೆ. ಆದರೆ ಚೆನ್ನಬಸವ ಪುರಾಣ ಮತ್ತು ನೂರೊಂದು ವಿರಕ್ತರ ಕಾವ್ಯಗಳು ಈತನನ್ನು ನೂರೊಂದು ವಿರಕ್ತರಲ್ಲಿ ಪರಿಗಣಿಸಿಲ್ಲ. ಕರಸ್ಥಲದ ವೀರಣ್ಣೊಡೆಯರು ಮೇಲೆ ತಿಳಿಸಿದ ಮೂರು ಕಾವ್ಯಗಳಲ್ಲೂ ನೂರೊಂದು ವಿರಕ್ತರ ಗುಂಪಿನಲ್ಲಿ ಕಂಡುಬರುತ್ತಾರೆ. ಆದರೆ ಡಾ॥ ಆರ್.ಸಿ. ಹಿರೇಮಠರು ಕರಸ್ಥಲದ ವೀರಣ್ಣೊಡೆಯರನ್ನು ನೂರೊಂದು ವಿರಕ್ತರ ವರ್ಗದಲ್ಲಿ ಸೇರಿಸುವುದು ಸರಿಯಲ್ಲವೆಂದು ಹೇಳುತ್ತಾರೆ.[೪] ಚೆನ್ನಬಸವ ಪುರಾಣ, ನೂರೊಂದು ವಿರಕ್ತರ ಕಾವ್ಯ ಕೃತಿಗಳಲ್ಲಿ ಬರುವ ಉಲ್ಲೇಖಗಳನ್ನು ಗುರುತಿಸಿ ಈ ಮಾತನ್ನು ಹೇಳುತ್ತಾರೆ. ಡಾ॥ ಆರ್.ಸಿ. ಹಿರೇಮಠರ ಮಾತಿಗೆ ಸ್ಫೂರ್ತಿಯನ್ನು ನೀಡುವಂತೆ, ಚೆನ್ನಬಸವ ಪುರಾಣದಲ್ಲಿ ಉಕ್ತವಾದಂತೆ[೫] ಕರಸ್ಥಲದ ವೀರಣ್ಣೊಡೆಯರಿಗೆ ಪ್ರೌಢರಾಯನು ತನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತಾನೆ. ಸಂಸಾರಿಯಾದ ವೀರಣ್ಣೊಡೆಯರು ಸ್ಥಾನಾಚಾರ್ಯರೆ ಹೊರತು, ವಿರಕ್ತರಲ್ಲವೆಂದು ಊಹಿಸಬಹುದು. ಈ ವಿಚಾರವನ್ನು ನೂರೊಂದು ವಿರಕ್ತರ ಕಾವ್ಯದ ಕರ್ತೃವಾದ ಮೋದಿಯ ರುದ್ರನು ಅನುಮೋದಿಸುತ್ತಾನೆ. ಕಾವ್ಯದಲ್ಲಿ ವೀರಣ್ಣೊಡೆಯರು ಮತ್ತು ಪ್ರೌಢ ದೇವರಾಯ ಇವರಲ್ಲಿ ನಡೆದ ಸಂಭಾಷಣೆ ಇಂತಿದೆ.

"ನೂರೊಂದು ವಿರಕ್ತರು ತಮ್ಮಯ ಘನ
ಮೇರೆಯೆ ತೋರದೆ ನಿರ್ವಯಲಾದರು
ಕಾರಣ ಪುರುಷರು ನೀವೆಮ್ಮಯ ಬಳಿವಿರ್ಪಿರೊ ಪೋಗುವಿರೋ
ದಾರಿಯ ಪೇಳೆನೆ ದರಹಸಿತದೆ
ಗುರು ವೀರಣ್ಣಯ್ಯನು ನುಡಿದನು ರಾಜಗೆ
ಕಾರಣಮೂರ್ತಿಯು ನಾಗೇಶನು ಕರೆದರೆ ನಾಪೋಗುವೆನು"[೬]

---

೪. ಡಾ॥ ಆರ್.ಸಿ.ಹಿರೇಮಠ– 'ಷಟ್‌ಸ್ಥಲ ಪ್ರಭೆ' –೧೯೭೨,ಪುಟ–೨೭೯

೫. _ _ _ _ _ _ _ _ ವೀರಣ್ಣೊಡೆಯ
ರುನ್ನತದ ಚಿಂತೆಯಿಂದಲ್ಲಿರದೆ ಭೋಗದಿಂ
ಮುನ್ನತಾನಿರ್ದ ವಿದ್ಯಾಗರಿಗೈತರಲ್ ಪ್ರೌಢದೇವೇಂದ್ರನರಿದು
ತನ್ನ ಮಗಳಂ ಕೊಟ್ಟು _ _ _ _ _" (ಚೆ.ಬ.ಪುರಾಣ ೬೩–೨೧)

೬. ನೂರೊಂದು ವಿರಕ್ತರ ಕಾವ್ಯ – ಸಂಧಿ ೨೬– ಪದ್ಯ ೧೨೧.

ಮೇಲಿನ ಸಂಭಾಷಣೆಯಿಂದ ವೀರಣ್ಣೊಡೆಯರು ನೂರೊಂದು ವಿರಕ್ತರ ಗುಂಪಿನಿಂದ ಭಿನ್ನರೆಂದು ನಿಚ್ಚಳವಾಗಿ ವ್ಯಕ್ತವಾಗುತ್ತದೆ. ಈ ಕಾವ್ಯಗಳಲ್ಲದೆ ವೀರಶೈವಾಮೃತ ಪುರಾಣ (೧೫೩೦), ರಾಘವಾಂಕ ಚರಿತೆ (೧೬ನೇ ಶ.ದ.ಉತ್ತರಾರ್ಧ), ಏಕೋತ್ತರಶತಸ್ಥಲ ಟೀಕೆ (೧೬೫೦), ಬಸವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ(೧೬೭೨), ನಿಜಶರಣತ್ರಿವಿಧಿ, (೧೭ನೇ ಶ) ಹಾಗೂ ನಿರಂಜನ ವಂಶರತ್ನಾಕರ ಹೀಗೆ ಹತ್ತು ಕೃತಿಗಳಲ್ಲಿ ನೂರೊಂದು ಪುರಾತನರ ಚರಿತ್ರೆ ಮತ್ತು ಹೆಸರುಗಳು ಬರುತ್ತವೆ.[೭]

ಮೇಲೆ ತಿಳಿಸಿದ ಎಲ್ಲಾ ಕೃತಿಗಳು ಹೇಳುವ ಹೆಸರುಗಳಲ್ಲಿ ಬಹುಮಟ್ಟಿಗೆ ಹೋಲಿಕೆಯಿದ್ದರೂ ಕೆಲಮಟ್ಟಿಗೆ ವ್ಯತ್ಯಾಸವಿರುವುದು ಕಂಡುಬರುತ್ತದೆ. 'ನೂರೊಂದು ವಿರಕ್ತರ ಕಾವ್ಯ'ದ ಹೊರತಾಗಿ ಇತರೆ ಕೃತಿಗಳು ನೂರೊಂದು ವಿರಕ್ತರಲ್ಲಿ ಕೆಲವು ಹೆಸರುಗಳನ್ನು ಹೇಳುತ್ತವೆಯೆ ಹೊರತು, ಎಲ್ಲಾ ಹೆಸರುಗಳನ್ನಲ್ಲ. ಆದರೆ ಇದೇ ಕಾಲದಲ್ಲಿದ್ದ ಲಕ್ಕಣ ದಂಡೇಶನು ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ 'ನೂರೊಂದು ವಿರಕ್ತರು' ಎಂಬ ಮಾತನ್ನಾಗಲಿ, ಅವರ ಹೆಸರುಗಳನ್ನಾಗಲಿ ಉಲ್ಲೇಖಿಸಿಲ್ಲ. ಪ್ರಥಮ ಗಣಂಗಳು, ರುದ್ರಗಣಂಗಳು, ದಶಗಣಂಗಳು, ೬೩ ಪುರಾತನರು, ಷೋಡಷರು, ಅಸಂಖ್ಯಾತರು ಮತ್ತು ನೂತನ ಗಣಂಗಳು ಇವರೆಲ್ಲರ ಹೆಸರುಗಳನ್ನು ವಿಸ್ತಾರವಾಗಿ ವಿವರಿಸುತ್ತಾನೆ.[೮] ಇದೇ ಅವಧಿಯಲ್ಲಿದ್ದ ಚಾಮರಸ, ಮಗ್ಗೆಯ ಮಾಯಿದೇವ, ಜಕ್ಕಣಾರ್ಯ, ಕಲ್ಲುಮಠದ ಪ್ರಭುದೇವ ಮುಂತಾದವರು, ತಮ್ಮ ಕಾವ್ಯ ಕೃತಿಗಳಲ್ಲಿ ನೂರೊಂದು ವಿರಕ್ತರ ಹೆಸರುಗಳನ್ನು ಉಲ್ಲೇಖಿಸುವುದಿಲ್ಲ. ಶಿವತತ್ವ ಚಿಂತಾಮಣಿ ಮತ್ತು ವೀರಶೈವಾಮೃತ ಪುರಾಣ (ಕರ್ತೃ ಮಲ್ಲಣಾರ್ಯ) ಗಳಲ್ಲಿ ನೂರೊಂದು ವಿರಕ್ತರಿಗೆ ಸಂಬಂಧಿಸಿದ ಕೆಲವೊಂದು ಹೆಸರುಗಳು ಉಕ್ತವಾಗಿದ್ದರೂ ಎಲ್ಲಿಯೂ 'ನೂರೊಂದು ವಿರಕ್ತರು' ಎಂಬ ಪದ ಬಳಕೆಯಾಗಿರುವುದಿಲ್ಲ. "ಆದುದರಿಂದ ಮಲ್ಲಣಾರ್ಯರ ಕಾಲದಲ್ಲಿ (ಕ್ರಿ.ಶ. ೧೫೧೩) ನೂರೊಂದು ವಿರಕ್ತರ ಗಣನೆ ಖಚಿತವಾಗಿರಲಿಕ್ಕಿಲ್ಲವೆಂದು ಊಹಿಸಬೇಕಾಗುತ್ತದೆ. ಪ್ರೌಢದೇವರಾಯನ ಕಾವ್ಯ (ಕ್ರಿ.ಶ.೧೫೮೦) ಚೆನ್ನಬಸವಪುರಾಣ (ಕ್ರಿ.ಶ. ೧೫೮೪) ದಲ್ಲಿ ನೂರೊಂದು ವಿರಕ್ತರು ಎಂಬ ಪದ ಪ್ರಯೋಗ ಮೊದಲ ಬಾರಿಗೆ ಕಂಡುಬರುವುದರಿಂದ ಕ್ರಿ.ಶ. ೧೫೧೩–೧೫೮೦ ರ ನಡುವಣ ಅವಧಿಯಲ್ಲಿ ನೂರೊಂದು ವಿರಕ್ತರ ಸಂಖ್ಯೆ ನಿರ್ಣಯವಾಗಿರಬೇಕೆಂದು ತೋರುತ್ತದೆ"[೯] ಎಂದು ಹೇಳುತ್ತಾರೆ.

ಆದರೆ ಈಗ 'ನೂರೊಂದು ವಿರಕ್ತರ ಸ್ತೋತ್ರ' ಎಂಬ ಹೆಸರಿನ ಸಣ್ಣ ಕೃತಿ ಲಭಿಸಿದೆ. ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತ ಪ್ರತಿ ಭಂಡಾರದಲ್ಲಿ ಸಿಂಗಳದ ಸಿದ್ಧ ಬಸವ ಸಂಕಲಿಸಿದ 'ಸಕಲ ಪುರಾತನರ ಬೆಡಗಿನ ವಚನಗಳ' ಒಂದು ತಾಳೆ ಗರಿ ಪ್ರತಿ ಇದೆ. (ನಂ ೩೨) ಇದರ ಕೊನೆಯಲ್ಲಿರುವ ಒಂದು ಗರಿಯ ಮೇಲೆ ಪ್ರಸ್ತುತ ನೂರೊಂದು ವಿರಕ್ತರ ಸ್ತೋತ್ರವನ್ನು ಬರೆಯಲಾಗಿದೆ.[೧೦] ಒಂಬತ್ತು ವಾರ್ಧಕ ಷಟ್ಪದಿಗಳನ್ನೊಳಗೊಂಡ ಈ ಸ್ತೋತ್ರ ಕೃತಿಯ ಕತೃವಾಗಲಿ, ಕಾಲವಾಗಲಿ ತಿಳಿದು ಬರುವುದಿಲ್ಲ. ಪ್ರಾರಂಭದಲ್ಲಿ ತೋಂಟದ ಸಿದ್ಧಲಿಂಗರ ಸ್ಮರಣೆಯಿರುವುದರಿಂದ ಕರ್ತೃ ತೋಂಟದ ಸಿದ್ಧಲಿಂಗನ ಶಿಷ್ಯ ಸಂಪ್ರದಾಯದವನೆಂದು ಡಾ॥ ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.

---

೭. ಡಾ॥ ಎಂ.ಎಂ. ಕಲಬುರ್ಗಿ, ಮಾರ್ಗ–೧, ಲೇಖನ 'ನೂರೊಂದು ವಿರಕ್ತರ ಸೂತ್ರ'

೮. ಲಕ್ಕಣ ದಂಡೇಶ, 'ಶಿವತತ್ವ ಚಿಂತಾಮಣಿ', ಸಂಧಿ ೩೪–೩೮

೯. ಡಾ॥ ಆರ್.ಸಿ. ಹಿರೇಮಠ, 'ಷಟ್‌ಸ್ಥಲ ಪ್ರಭೆ'– ಪುಟ ೨೮೪

೧೦. ಇದರಲ್ಲಿ ಶಾಂತ, ಶಾಂತಲಿಂಗ, ಶಾಂತೇಶ ಎಂದೆ ಮುಕ್ತಾಯವಾಗುವ ನೂರೊಂದು ಜನ ವಿರಕ್ತರ ಹೆಸರುಗಳನ್ನು ಹೇಳಲಾಗಿದೆ.

ಬಸವಾದಿ ಪ್ರಮುಖರು ೧೨ ನೇ ಶತಮಾನದ ಕ್ರಾಂತಿಗೆ ಕೇಂದ್ರ ಶಕ್ತಿಯಾದಂತೆ ೧೬ ನೇ ಶತಮಾನದ ಕ್ರಾಂತಿಗೆ ನೂರೊಂದು ವಿರಕ್ತರು ಕಾರಣರಾಗಿರಬೇಕು. ಇವರಲ್ಲಿ ಅನೇಕರು ಸಾಹಿತ್ಯ ಕೃತಿಗಳನ್ನು ನಿರ್ಮಿಸಿದವರಿದ್ದಾರೆ. ಕರಸ್ಥಲದ ನಾಗಿದೇವರು ತ್ರಿಪದಿಗಳನ್ನು ರಚಿಸಿದ್ದಾರೆ. ಆದರೆ ಇವರ ಕೃತಿಗಳು ಕಾಲನ ಕೊಡಲಿಗೆ ಸಿಕ್ಕು ನಾಶವಾಗಿರುವ ಸಾಧ್ಯತೆ ಇದೆ. ಹಾಗಾಗಿ ನೂರೊಂದು ವಿರಕ್ತರ ನೈಜ ಚರಿತ್ರೆ, ಅವರ ಕೃತಿಗಳು, ಅವರ ಗುರುಪರಂಪರೆ ನಮಗೆ ಕಾಣದಾಗಿದೆ. ಈ ನೂರೊಂದು ವಿರಕ್ತರನ್ನೆ ಅಲ್ಲಮ ಪ್ರಭು ಸಂಪ್ರದಾಯದ ಆದ್ಯರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವೆನ್ನುವಂತೆ ಡಾ॥ಎಂ.ಎಂ.ಕಲಬುರ್ಗಿಯವರು ಒಂದು ವಾದವನ್ನು ಮಂಡಿಸುತ್ತಾರೆ."ನಕುಲೀಶ ಪಾಶುಪತದಲ್ಲಿ ಸ್ಥಾನಾಚಾರ್ಯ, ತಪೋಧನ ಎಂಬ ಎರಡು ಪಂಗಡಗಳು ಅಸ್ಥಿತ್ವದಲ್ಲಿವೆ. ಇದರಲ್ಲಿ ಸ್ಥಾನಾಚಾರ್ಯರು ಸಂಸಾರಿಗಳು–ಪ್ರತಿಗಾಮಿಗಳು, ತಪೋಧನರು ಸನ್ಯಾಸಿಗಳು– ಪ್ರಗತಿಗಾಮಿಗಳು. ೧೫ ನೇ ಶ.ದಲ್ಲಿ ಈ ಎರಡೂ ಪಂಗಡಗಳಲ್ಲಿ ಭಿನ್ನಾಭಿಪ್ರಾಯ ಬಂದು ತಪೋಧನರು ನಕುಲೀಶ ಪಾಶುಪತದಿಂದ ಹೊರಬಂದರು. ಹೀಗೆ ಹೊರಬಂದ ತಪೋಧನರೇ ವಿರಕ್ತ ವರ್ಗದವರು. ಒಳಗೆ ಉಳಿದ ಸ್ಥಾನಾಚಾರ್ಯರೆ ಪರಂಪರಾಗತ ಪೀಠಗಳನ್ನು ಅಲಂಕರಿಸಿ ತಮ್ಮದೇ ಆದ ಗುರುಪರಂಪರೆಯನ್ನು ನಿರ್ಮಿಸಿಕೊಂಡರು. ವಿರಕ್ತವರ್ಗದವರಿಗೆ ಪೀಠಪರಂಪರೆ ಇಲ್ಲವಾಯಿತು. ಆಗ ಇವರು ಬಸವಾದಿ ಪ್ರಮಥರ ಯುಗದಲ್ಲಿಯ ಅಲ್ಲಮ ಪ್ರಭುದೇವರನ್ನು ತಮ್ಮ ಪೀಠ ಪರಂಪರೆಯ ಮೂಲ ವ್ಯಕ್ತಿಯನ್ನಾಗಿ ಪರಿಗಣಿಸಿಕೊಂಡರು. ಇದೇ ವಿರಕ್ತ ಪರಂಪರೆಯಾಗಿ ಬೆಳೆದು ಬಂದಿತು"[೧೧].

ಡಾ॥ ಎಂ.ಎಂ. ಕಲಬುರ್ಗಿಯವರೆ ತಮ್ಮ ಇನ್ನೊಂದು ವಾದದಲ್ಲಿ "ವೀರಶೈವ ವಿರಕ್ತ ಲಕ್ಷಣಗಳು ಈ ನೂರೊಂದು ವರ್ಗದವರಲ್ಲಿ ಕಾಣುವುದಿಲ್ಲ. ಇವರಲ್ಲಿ ಕೆಲವರು ಮದುವೆಯಾಗಿದ್ದಾರೆ. ಕೆಲವರು ಪರಸ್ತ್ರೀಯರನ್ನು ವ್ಯಾಮೋಹಿಸಿದವರಿದ್ದಾರೆ. ಇಂಥವರನ್ನು 'ವೀರಶೈವ ವಿರಕ್ತ'ರೆಂದು ಹೇಳಲು ಸಾಧ್ಯವೇ ಇಲ್ಲವೆಂದು ಹೇಳಿ, ಇವರಲ್ಲಿ ಒಬ್ಬನಾದ ಗುರುಬಸವನು 'ಅವಧೂತ ಗೀತೆ' ಬರೆದುದನ್ನು ಗಮನಿಸಿ ಬಹುಶಃ ಈ ನೂರೊಂದು ಜನರು ಅವಧೂತ ಸಂಪ್ರದಾಯದವರಾಗಿರಬಹುದೆಂದು" ಹೇಳಿದ್ದಾರೆ[೧೨]. ಶಿವಪರವಾದ ಇವರನ್ನು ಲಕ್ಕಣ ದಂಡೇಶ 'ಸಲ್ಲಲಿತ ಶತಗಣಂಗಳು' ಎಂದು ಸೂಚ್ಯವಾಗಿ ಉಲ್ಲೇಖಿಸಿದ್ದಾರೆ. ಅದೃಶ ಕವಿ, ವಿರುಪಾಕ್ಷ ಪಂಡಿತರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇವರನ್ನು " ನೂರೊಂದು ವಿರಕ್ತ'ರೆಂದೆ ಕರೆದರು. ಮುಂದಿನವರು ಇವರನ್ನು ಒಪ್ಪಿಕೊಳ್ಳುತ್ತ ಬರಲಾಗಿ ಇವರು ವೀರಶೈವ ವಿರಕ್ತರೆಂದೂ, ಪ್ರೌಢದೇವರಾಯನ ಕಾಲದಲ್ಲಿ ವೀರಶೈವದ ಪುನರುಜ್ಜೀವನಕ್ಕಾಗಿ ದುಡಿದರೆಂದೂ ಪ್ರಚಾರವಾಯಿತು."[೧೩]

ಕಲ್ಯಾಣ ಮಂಡಲದ ಶಿವಭಕ್ತರ ಸಂತಾನವೆನಿಸಿದ ನೂರೊಂದು ವಿರಕ್ತರು ಕಲ್ಯಾಣದ ಶಿವಶರಣರಂತೆ ಆದರ್ಶವಾಗಿ ಬಾಳಿದವರು. ಲಿಂಗಾಂಗ ಸಾಮರಸ್ಯವನ್ನು ಹೊಂದಿದವರು. ಜಂಗಮ ಸ್ಥಲವನ್ನೈದಿ, ಜೀವನ ಅಸಾರತೆಯನ್ನು ಕಂಡು ವಿರಾಗಿಗಳಾಗಿ ಅಲ್ಲಮ ಪ್ರಭುವಿನಂತೆ

---

೧೧. ವಿಜಯಶ್ರೀ. ಎಂ.ಹಿರೇಮಠ, 'ಸಂಪಾಧನ ಸಮಯ'– ಪುಟ –೪

೧೨. ಶ್ರೀಮತಿ ವಿಜಯ ಶ್ರೀ.ಎಂ.ಹಿರೇಮಠ– 'ಸಂಪಾದನ ಸಮಯ,' ಪುಟ–೪

೧೩. ______ ಅದೇ____

ಬೆಳಕಾದವರು. ಆ ಕಾಲದಲ್ಲಿ ನಡೆದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಪುನರುಜ್ಜೀವನಕ್ಕೆ ಕಾರಣರಾದವರು. ಆದರೆ ಈ ಯಾವ ವಿಚಾರಗಳು ಬೆಳಕಿಗೆ ಬರದೆ ಮೋಡದೊಳಗಿನ ಚಂದ್ರನಂತೆ ಮಸುಕು ಮಸುಕಾಗಿದ್ದಾರೆ.

ವೀರಶೈವ ವಿರಕ್ತ ಮಠ ಪರಂಪರೆಗೆ ೮೦೦ ವರ್ಷಗಳ ಇತಿಹಾಸವಿದೆ. ಈ ವಿರಕ್ತ ಸಂಪ್ರದಾಯ ಈ ಹಿಂದೆ ವಿಚಾರಮಾಡಿದಂತೆ ಶಿವಯೋಗಿಯೂ ಹಾಗೂ ಜ್ಞಾನಿಯೂ ಆಗಿದ್ದ ಅಲ್ಲಮ ಪ್ರಭುವಿನಿಂದ ಆರಂಭವಾಗುತ್ತದೆ. ಈ ಸಂಪ್ರದಾಯ "ಅಲ್ಲಮ ಪ್ರಭು ಸಂಪ್ರಧಾಯದ ಸಲ್ಲಲಿತ ಸನ್ಮಾರ್ಗ"ವೆಂದೇ ಹೆಸರಾಗಿದೆ. ಇದು ಈ ಸಂಪ್ರದಾಯದ ಮೊದಲ ಹಂತ. ಎರಡನೇ ಹಂತವನ್ನು ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಗುರುತಿಸಬಹುದಿತ್ತು. ಆದರೆ ಅಲ್ಲಿ ಗುರುಪರಂಪರೆ, ಮಠಪರಂಪರೆ , ಹಾಗೂ ನೂರೊಂದು ವಿರಕ್ತರ ಜೀವನ ಚರಿತ್ರೆಯೇ ಮಸುಕಾಗಿರುವುದರಿಂದ ತೋಂಟದ ಸಿದ್ಧಲಿಂಗ ಯತಿಗಳ ಕಾಲಾವಧಿಯನ್ನು ಈ ಸಂಪ್ರದಾಯದ ಎರಡನೆ ಹಂತವೆಂದು ಗುರುತಿಸಲಾಗಿದೆ. ಈ ಕಾಲದ ಅದ್ವಿತೀಯ ನಾಯಕರಾಗಿ ಮೆರೆದ ಶ್ರೀತೋಂಟದ ಸಿದ್ಧಲಿಂಗ ಯತಿಗಳು ಕಲ್ಯಾಣದ ಶರಣ ಪರಂಪರೆಯನ್ನು, ಅಲ್ಲಮಪ್ರಭು ಸಂಪ್ರದಾಯವನ್ನು ೧೬ ನೇ ಶ.ದಲ್ಲಿ ಮತ್ತೆ ಆರಂಭಿಸಿದರು. ಹಾಗಾಗಿ ವೀರಶೈವ ಕಾವ್ಯಗಳು ಇವರನ್ನು "ದ್ವಿತೀಯ ಅಲ್ಲಮ"ನೆಂದು ಕರೆದಿವೆ. ಮೂರನೇ ಹಂತ ಕಟ್ಟಿಗೆಹಳ್ಳಿ ಸಿದ್ಧಲಿಂಗರ ತರುವಾಯದ್ದು. ಈ ಹಂತವೆ ಅಲ್ಲಮಪ್ರಭು ಸಂಪ್ರದಾಯವನ್ನು ಮುಂದುವರೆಸುವಲ್ಲಿ ಕವಲೊಡೆದು ಸಮಸ್ಯೆಯನ್ನು ಸೃಷ್ಟಿಸಿರುವುದು.

ನೂರೊಂದು ವಿರಕ್ತರ ನಂತರ, ಪ್ರೌಢರಾಯನ ಅನಂತರ ವೀರಶೈವ ಧರ್ಮಕ್ಕೆ ಮತ್ತೆ ಗ್ಲಾನಿ ಉಂಟಾಯಿತು.[೧೪] ಶರಣರ ಆತ್ಮವಾಗಿದ್ದ ಅನುಭಾವ ಅನಾಥವಾಯಿತು. ಹದಿನಾರನೆಯ ಶ.ದ.ಹೊತ್ತಿಗೆ ಕಳೆದು ಹೋಗುತ್ತಲಿದ್ದ, ಬಸವಾದಿಗಳು ರೂಪಿಸಿದ ಷಟ್ಸ್ಥಲ ತತ್ವ ಸಿದ್ಧಾಂತಗಳನ್ನು ಸುವ್ಯವಸ್ಥೆಗೊಳಿಸಿ, ವ್ಯಾಪಕವಾಗಿ ಪ್ರಸಾರಮಾಡಿ, ಹನ್ನೆರಡನೆಯ ಶತಮಾನದ ಅನುಭವ ಮಂಟಪ ಸಂಸ್ಕೃತಿಯನ್ನು ಮತ್ತೆ ನಾಡಲ್ಲಿ ಹರಡಿದ ಕೀರ್ತಿ ಸಿದ್ಧಲಿಂಗರಿಗೆ ಸಲ್ಲುತ್ತದೆ. ಶರಣ ಪರಂಪರೆಯ ಶೂನ್ಯ ಸಿಂಹಾಸನದ ಅಧಿಪತಿಯಾಗಿ ಅನುಭಾವ ಪರಂಪರೆಯನ್ನು ಎತ್ತಿ ಹಿಡಿದ ಇವರು ಅಲ್ಲಮಪ್ರಭುವಿನ ಅನುಭಾವ, ಬಸವಣ್ಣನವರ ಭಕ್ತಿ ಮತ್ತು ಸಂಘಟನಾ ಶಕ್ತಿ, ಚನ್ನಬಸವಣ್ಣನವರ ಜ್ಞಾನ ಸಂಪತ್ತನ್ನು ಒಳಗೊಂಡ ವಿಶಿಷ್ಟ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದಾರೆ.

ಇವರು ಏಳು ನೂರು ಶಿಷ್ಯ ಸಮುದಾಯದೊಂದಿಗೆ ನಿರಂಜನ ಮೂರ್ತಿಯಾಗಿ ಸಂಚರಿಸಿ, ಷಟ್ಸ್ಥಲ ಬೋಧೆಯ ಮೂಲಕ ಜನಮನವನ್ನು ಬೆಳಗುತ್ತಾ, ಶರಣ ಧರ್ಮದ

---

೧೪. ಧರೆಯೊಳಗೆ ವೀರಶೈವಾಚಾರವಡಗಿತ್ತು
ಕರುಣದಿಂ ನೀವೆ ಚಿತ್ತೈಸಿ ಷಟ್ಸ್ಥಲವನು
ದ್ಧರಿಸೆಂದು ನಾರದಂ ಭಿನ್ನವಿಸಲೀಶಂ ನಿರಂಜನಗಣೇಶನೊಡನೆ
ವರಗಣೇಶ್ವರನೇಳ್ನೂರ್ವರಂ ಕೂಡಿಕೊಂ
ಡಿರದೆ ಭೂಮಿಯೊಳುದಿಸಿ ಜಂಗಮ ಸ್ಥಳವಾಂತು
ಪರಮ ಷಟ್ಸ್ಥಲವನುದ್ಧರಿಸೆಂದು ಕಳುಹಲು"
(ಆರ್.ಸಿ.ಹಿರೇಮಠ, 'ಷಟ್ಸ್ಥಲ ಪ್ರಭೆ,' ಪುಟ ೨೮೭)

ಜಾಗೃತಿಗಾಗಿ ಸಾಹಿತ್ಯ–ಸಂಸ್ಕೃತಿಗಳ ಪುನರುಜ್ಜೀವನ ಕಾರ್ಯಕ್ಕಾಗಿ ಹಗಲಿರುಳು ಶ್ರಮಿಸಿದರು. ಈ ಕಾರಣಕ್ಕಾಗಿಯೆ ಶರಣ ಸಾಹಿತ್ಯ ಚರಿತ್ರೆಯಲ್ಲಿ ಇವರಿಗೆ ತುಂಬಾ ಗೌರವದ ಸ್ಥಾನವಿದೆ.

ಅಲ್ಲಮ ಪ್ರಭುವಿನ ನಂತರ ಶೂನ್ಯಸಿಂಹಾಸನವನ್ನು ಏರಿದವರು ತೋಂಟದ ಸಿದ್ಧಲಿಂಗಯತಿಗಳು ಎಂಬುದು ಸ್ಪಷ್ಟ. ಅಲ್ಲಮಪ್ರಭುವಿನಿಂದ ಆರಂಭವಾದ ಈ ವಿರಕ್ತ ಪರಂಪರೆಯನ್ನು ಅಥವಾ ಸಂಪ್ರದಾಯವನ್ನು 'ಅಲ್ಲಮಪ್ರಭು ಸಂಪ್ರದಾಯ' ಎಂದು ಚಾಮರಸ ಮುಂತಾದವರು ಕರೆದಿದ್ದಾರೆ. ಆದರೆ ಅಲ್ಲಮ ಪ್ರಭುವಿನ ನಂತರ ತೋಂಟದ ಸಿದ್ಧಲಿಂಗರ ಮೊದಲು ಶೂನ್ಯ ಸಿಂಹಾಸನವನ್ನು ಏರಿದವರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಸುಮಾರು ಮುನ್ನೂರು ವರ್ಷಗಳ ಕಾಲ ಸ್ಥಗಿತವಾಗಿದ್ದ[೧೫] ಈ ಪೀಠ ಪರಿಕಲ್ಪನೆಯನ್ನು ತೋಂಟದ ಸಿದ್ಧಲಿಂಗರು ಮತ್ತೆ ಪುನರುಜ್ಜೀವನಗೊಳಿಸಿರುವುದು ಕಂಡುಬರುತ್ತದೆ. ೧೬ನೇ ಶತಮಾನಕ್ಕಾಗಲೇ ಸಿದ್ಧಲಿಂಗರು ಬಹುದೊಡ್ಡ ಗುರುವಾಗಿ, ಷಟ್ಸ್ಥಲಕರ್ತನಾಗಿ ಖ್ಯಾತಿ ಹೊಂದಿ ಅಲ್ಲಮನು ಅಲಂಕರಿಸಿದ್ದ ವಿರಕ್ತಪರಂಪರೆಯ ಗುರುಪೀಠವನ್ನು ಅಲಂಕರಿಸಿ ದ್ವಿತೀಯ ಅಲ್ಲಮ, ತೋಂಟದ ಅಲ್ಲಮ ಎಂಬ ವಿಶೇಷಣಗಳನ್ನು ಪಡೆದಿರುವುದು ಕಾವ್ಯಗಳಿಂದ ಸ್ಪಷ್ಟವಾಗುತ್ತದೆ.

ಗುಬ್ಬಿಯ ಚನ್ನಬಸವೇಶ್ವರರ ದಯಾಪಾತ್ರನಾಗಿ ಬೆಳೆದ ಸಿದ್ಧಲಿಂಗರು, ಹರದನಹಳ್ಳಿಯಲ್ಲಿ ೭೦೦ ವಿರಕ್ತರಿಗೆ ದೀಕ್ಷೆ ನಿಡಿ, ಅವರಲ್ಲಿ ಒಬ್ಬನಾದ ಬೋಳಬಸವನಿಗೆ ಸಾಕ್ಷರ ಜ್ಞಾನ ದಯಾಪಾಲಿಸಿದರು. ಈ ೭೦೦ ವಿರಕ್ತರಿಗೆ ವಿವಿಧ ಕಟ್ಟಳೆಗಳನ್ನು[೧೬] ನಿರೂಪಗೊಳಿಸಿ ದೇಶ ಪರ್ಯಟನ ಕೈಗೊಂಡು ಅನೇಕರಿಗೆ ಲಿಂಗದೀಕ್ಷೆಯನ್ನು ನೀಡಿ ನಂತರ ತಮ್ಮ ಶೂನ್ಯ ಸಿಂಹಾಸನಾಧಿಕಾರವನ್ನು ಬೋಳ ಬಸವೇಶ್ವರರಿಗೆ ನೀಡಿ ತಾವೂ ಸಂಚರಿಸುತ್ತ ಕಗ್ಗೆರೆಗೆ ಬಂದು ತೋಟದಲ್ಲಿ ತಪ್ಪಸ್ಸು ಮಾಡಿ (ಹುತ್ತದೊಳಗೆ), ಆ ನಂತರ ಗಣ ಸಮೂಹದೊಂದಿಗೆ ಎಡೆಯೂರಿಗೆ ಬಂದು ಯೋಗ ಸಮಾಧಿಯನ್ನು ಕಟ್ಟಿಸಿ ಲಿಂಗೈಕ್ಯರಾದರು. ಈ ಸಿದ್ಧಲಿಂಗಯತಿಗಳ ಶಿಷ್ಯ–ಪ್ರಶಿಷ್ಯ ಪರಂಪರೆ ಸುಧೀರ್ಘವಾಗಿದೆ.

ಷಟ್ಸ್ಥಲ ಜ್ಞಾನ ಸಾರಾಮೃತ, ಸಿದ್ಧೇಶ್ವರ ಮಹಾಪುರಾಣ, ನಿರಂಜನ ಜಂಗಮವಂಶದ ದರ್ಪಣಗಳಲ್ಲಿ ಅಲ್ಲಮ ಪ್ರಭುದೇವ, ತೋಂಟದ ಸಿದ್ಧಲಿಂಗೇಶ್ವರರಿಂದ ಉಜ್ವಲವಾಗಿ ಬೆಳಗಿದ ವಿರಕ್ತ ಸಂಪ್ರದಾಯದ ಗುರುಪರಂಪರೆ ಬಂದಿದೆ. "ಅನಾದಿಗಣೇಶ್ವರ, ಆದಿಗಣೇಶ್ವರ, ನಿರ್ಮಾಯಗಣೇಶ್ವರ, ನಿರಂಜನ ಸ್ವಾಮಿ, ಜ್ಞಾನಾನಂದಸ್ವಾಮಿ, ಆತ್ಮಗಣವರ, ಆಧ್ಯಾತ್ಮಗಣವರ, ರುದ್ರಮುನಿಸ್ವಾಮಿ, ಬಸವ ಪ್ರಭುಸ್ವಾಮಿ, ಆದಿಲಿಂಗಸ್ವಾಮಿ, ಚನ್ನವೀರಸ್ವಾಮಿ, ಗೋಸಲಸಿದ್ದೇಶ್ವರ ಸ್ವಾಮಿ, ಶಂಕರಚಾರ್ಯ ಸ್ವಾಮಿ, ದಿವ್ಯಲಿಂಗೇಶ್ವರ ಸ್ವಾಮಿ, ಚೆನ್ನಬಸವರಾಜೇಂದ್ರ, ತೋಂಟದ ಸಿದ್ಧಲಿಂಗ"[೧೭] ಎಂದು ಗುರುಪರಂಪರೆಯನ್ನು ನಿರೂಪಿಸುತ್ತವೆ.

---

೧೫. ನಿರಂಜನ ವಂಶರತ್ನಾಕರ, ನಿರಂಜನ ಜಂಗಮವಂಶ ದರ್ಪಣ, ಷಟ್ಸ್ಥಲ ಜ್ಞಾನ ಸಾರಾಮೃತ, ಮತ್ತು ಸಿದ್ದೇಶ್ವರ ಪುರಾಣ ಹಾಗೂ ತೋಂಟದ ಸಿದ್ಧಲಿಂಗರ ವಚನಗಳು ಗುರುಪರಂಪರೆಗೆ ಒಂದು ನಿರಂತರತೆಯನ್ನು ತೋರಿಸಿವೆ.

೧೬. ಪುರಾಣ ಚರಂತಿಗೆಯವರು, ಶಿವಾನುಭವ ಚರಂತಿಗೆಯವರು – ಇತ್ಯಾದಿ

೧೭. ತೋಂಟದ ಸಿದ್ಧಲಿಂಗರು ತಮ್ಮದೊಂದು ವಚನದಲ್ಲಿ ಇದೇ ಪರಂಪರೆಯನ್ನು ಹೇಳಿದ್ದಾರೆ.

ನಿರಂಜನ ವಂಶರತ್ನಾಕರ ಎಂಬ ಕೃತಿಯು ಶೂನ್ಯ ಸಿಂಹಾಸನ ಪರಂಪರೆಯ ಅಲ್ಲಮನ ಜೊತೆಯಲ್ಲಿ ಚೆನ್ನಬಸವಣ್ಣ, ಸಿದ್ಧರಾಮರ ಹೆಸರುಗಳನ್ನು ಸೇರಿಸಿಕೊಂಡು ತೋಂಟದಾರ್ಯ ಗುರುಪರಂಪರೆ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅನಾದಿಗಣೇಶ್ವರ -- ಹೀಗೆ ಶೂನ್ಯ ಸಿಂಹಾಸನ ಗುರುಪರಂಪರೆಗೆ ಒಂದು ನಿರಂತರತೆಯನ್ನು ಕಲ್ಪಿಸಲು ಯತ್ನಿಸುತ್ತದೆ.

ಮೇಲೆ ತಿಳಿಸಿದ ಗುರುಪರಂಪರೆಯಲ್ಲಿ ೧೨ ನೇ ಜಗದ್ಗುರುಗಳು ಗೋಸಲ ಸಿದ್ದೇಶ್ವರರು. ಇವರು ೧೫ನೇ ಶತಮಾನದಲ್ಲಿದ್ದರೆಂದು ವಿಧಿತವಾಗುತ್ತದೆ. ಇವರು ತುಮಕೂರಿನ ಸಿದ್ಧಗಂಗ ಮಠವನ್ನು ಸ್ಥಾಪಿಸಿದರೆಂದು ಪಂಡಿತ ಚನ್ನಪ್ಪ ಎರೆಸೀಮೆಯವರು 'ಸಿದ್ಧಗಂಗಾ ಶ್ರೀ'[೧೮] ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೆ ಗೋಸಲ ಸಿದ್ಧೇಶ್ವರರು ನೂರೊಂದು ವಿರಕ್ತರ ಗುರುವಾಗಿ ಸಂಚಾರ ಕೈಗೊಂಡು ಹರದನಹಳ್ಳಿಯಿಂದ ಶಿವಗಂಗೆ ಮತ್ತು ಸಿದ್ಧಗಂಗಾ ಕ್ಷೇತ್ರಕ್ಕೂ ದಯಮಾಡಿಸಿದರೆಂದು ತಿಳಿಸುತ್ತಾರೆ. ಗೋಸಲ ಸಿದ್ಧೇಶ್ವರರು ಸಿದ್ಧಗಂಗೆಯಲ್ಲಿಯೆ ನೆಲೆಸಿ, ಅಲ್ಲಿಯೆ ಮಠವನ್ನು ಸ್ಥಾಪಿಸಿ ವಿರಕ್ತರಿಗೆ ಅವಕಾಶ ಕಲ್ಪಿಸಿಕೊಟ್ಟು, ಅದರ ಮೂಲಕ ಧರ್ಮ ಪ್ರಚಾರವನ್ನು ಕೈಗೊಂಡರು. ಹೀಗೆ ತೋಂಟದ ಸಿದ್ಧಲಿಂಗೇಶ್ವರರ ಕಾಲಕ್ಕಿಂತ ಒಂದು ಶತಮಾನಕ್ಕೂ ಮೊದಲೇ ಸಿದ್ಧಗಂಗಾ ಕ್ಷೇತ್ರ ಸ್ಥಾಪಿತವಾಯಿತೆಂದು ತಿಳಿದುಬರುತ್ತದೆ.

ಬೆಳಗಾವಿ ಜಿಲ್ಲೆಯ ಗೊಡಚಿಯಲ್ಲಿ ಆದಿಲಿಂಗ ಸ್ವಾಮಿಗಳು ಮಠವೊಂದನ್ನು ನಿರ್ಮಾಣ ಮಾಡಿರುವ ಸಾಧ್ಯತೆ ಇದೆ. ಅವರು ತಮ್ಮ ನಂತರ ಚನ್ನವೀರ ಸ್ವಾಮಿಯವರಿಗೆ ಉತ್ತರಾಧಿಕಾರವನ್ನು ನೀಡಿದರೆಂದು ಈ ಮೇಲಿನ ಕೃತಿಗಳಲ್ಲಿ ಕಂಡುಬರುತ್ತದೆ. ಈ ಎರಡು ಮಠಗಳ ಗುರುಪರಂಪರೆಯನ್ನು ಗಮನಿಸಿದಾಗ ಈ ಕೃತಿಗಳಲ್ಲಿ ನಮೂದಾಗಿರುವ ಗುರುಪರಂಪರೆ ಕಲ್ಪಿತವಲ್ಲವೆನಿಸುತ್ತದೆ. ಸ್ವತಃ ತೋಂಟದ ಸಿದ್ಧಲಿಂಗರೆ ತಮ್ಮದೊಂದು ವಚನದಲ್ಲಿ ಗುರುಪರಂಪರೆಯನ್ನು ಹೇಳುತ್ತಾ "–ಅನಾದಿವಿಡಿದು ಬಂದ ಗುರು, ಅನಾದಿವಿಡಿದು ಬಂದ ಲಿಂಗ, ಅನಾದಿವಿಡಿದು ಬಂದ ಜಂಗಮ, ಅನಾದಿವಿಡಿದು ಬಂದ ಗುರು ಶಿಷ್ಯ ಸಂಬಂಧ, ಅನಾದಿವಿಡಿದು ಬಂದ ಪಾದೋದಕ, ಪ್ರಸಾದ, ಅನಾದಿವಿಡಿದು ಬಂದ ಭಕ್ತಿ, ಜ್ಞಾನ, ವೈರಾಗ್ಯ, ಅನಾದಿವಿಡಿದು ಬಂದ ಪ್ರಸಿದ್ಧವಾದ ವೀರಶೈವಾಚಾರ ಸಂಪತ್ತು ಮಹಾಲಿಂಗ ಗುರುಶಿವ ಸಿದ್ದೇಶ್ವರ ಪ್ರಭುವೆ"– ಹೀಗೆ ಅನಾದಿ ಹೇಳಿ, ಅವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶುತಾವೆಂದು ಹೇಳಿಕೊಂಡಿರುವುದರಿಂದ ಈ ಗುರುಪರಂಪರೆ ಬಗ್ಗೆ ವ್ಯತಿರಿಕ್ತ ಅಭಿಪ್ರಾಯ ಹೊಂದುವುದು ಸರಿಯಲ್ಲವೆನಿಸುತ್ತದೆ. ಆದರೆ ನಿರಂಜನ ವಂಶ ರತ್ನಾಕರ ಅಲ್ಲಮನೊಂದಿಗೆ ಚೆನ್ನಬಸವಣ್ಣ ಮತ್ತು ಸಿದ್ಧರಾಮರ ಹೆಸರುಗಳನ್ನು ಸೇರಿಸಿರುವುದು ಕಲ್ಪಿತವೆಂದು ಕಾಣುತ್ತದೆ.

ಹೀಗೆ ಶಾಖೋಪಶಾಖೆಯಾಗಿ ಮುಂದುವರೆದ ಈ ಪೀಠಪರಂಪರೆ ಅಪೂರ್ವವಾದ, ವಿಸ್ತಾರವಾದ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕಿತು. ಸ್ವತಃ ತೋಂಟದ ಸಿದ್ಧಲಿಂಗರೆ ಷಟ್ಸ್ಥಲಜ್ಞಾನ ಸಾರಾಮೃತ ಕೃತಿಯನ್ನು ಬರೆದುದಲ್ಲದೆ, ಬರಹಗಾರರ ಪಡೆಯನ್ನು ಸೃಷ್ಟಿಸಿದರು. ಇವರೆಲ್ಲ ಸೃಜನ ಸಾಹಿತ್ಯಕ್ಕಿಂತ ಶೂನ್ಯ ಸಂಪಾದನೆ, ಸಂಯೋಜನೆ ಸಾಹಿತ್ಯ, ಟೀಕಾಸಾಹಿತ್ಯಗಳಿಗೆ ಹೆಚ್ಚು ಗಮನ ನೀಡಿದರು.

---

೧೮. ಅಭಿನಂದನ ಗ್ರಂಥ– ಡಾ॥ ಶಿವಕುಮಾರ ಸ್ವಾಮಿಗಳಿಗೆ ಸುವರ್ಣ ಮಹೋತ್ಸವದಲ್ಲಿ ಅರ್ಪಿಸಿದ ಸಂಪುಟ.

ತೋಂಟದ ಸಿದ್ಧಲಿಂಗರ ಬಳಿಕ ಶೂನ್ಯ ಸಿಂಹಾಸನ ಏರಿದವರು ಬೋಳಬಸವರು. ಇವರಿಗೆ ನಿರಕ್ಷರಿ ಬೋಳಬಸವಾರ್ಯ, ಶಿವಪೂಜೆಯಾರ್ಯ ಎಂದು ಕರೆಯುತ್ತಾರೆ. ನಿರಂಜನ ವಂಶರತ್ನಾಕರ ಹೇಳುವಂತೆ ಇವರು ಏಳುನೂರು ವಿರಕ್ತರಿಗೂ, ಮೂರು ಸಾವಿರ ಚರಮೂರ್ತಿಗಳಿಗೂ ಗುರುಗಳಾಗಿದ್ದರು. ತರ್ಕ, ವ್ಯಾಕರಣ, ವೇದಶಾಸ್ತ್ರಾಗಮ, ಪುರಾಣೋಪನಿಷತ್ತು ಬಲ್ಲವರಾಗಿದ್ದರು. ನಂತರ ಈತನ ಗುರುಗಳ ಗದ್ದುಗೆ ಪೂಜೆಗಾಗಿ ಗಣವರರನ್ನು ನೇಮಿಸಿ ದೇಶಪರ್ಯಟನ ಕೈಗೊಂಡು ಮಧುಗಿರಿಗೆ ಬಂದು ಅಲ್ಲಿಯೆ ಐಕ್ಯರಾದರು.

ಬೋಳಬಸವೇಶ್ವರರ ಬಳಿಕ ಶೂನ್ಯ ಸಿಂಹಾಸನವನ್ನು ಏರಿದವರು ಯಾರು ಎಂಬ ಬಗ್ಗೆ ಒಮ್ಮತಾಭಿಪ್ರಾಯವಿಲ್ಲ. ಕೆಲವು ಕಾವ್ಯಗಳು ಬೋಳಬಸವೇಶ್ವರ– ಗುಮ್ಮಳಾಪುರದ ಸಿದ್ಧಲಿಂಗ–ಗುಳೂರು ಸಿದ್ಧವೀರಣ್ಣ –ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಎಂಬ ಕ್ರಮವನ್ನು ಹೇಳುತ್ತವೆ. ಷಟ್‌ಸ್ಥಲ ಶಿವಾಯಣವು ಬೋಳಬಸವೇಶ್ವರ–ಚೆನ್ನಂಜೇದೇವ–ಕಟ್ಟಿಗೆಹಳ್ಳಿ ಸಿದ್ಧಲಿಂಗ (ಚೀಲಾಳಸ್ವಾಮಿ, ಕಪಿಲಸಿದ್ಧ) ಎಂಬ ಬೇರೆಯದೆ ಆದ ಕ್ರಮವನ್ನು ಹೇಳುತ್ತದೆ. ಷಟ್‌ಸ್ಥಲ ಶಿವಾಯಣ ಗುಮ್ಮಳಾಪುರದ ಸಿದ್ಧಲಿಂಗ ಹಾಗೂ ಗೂಳೂರು ಸಿದ್ಧವೀರಣ್ಣ ಇವರ ಸ್ಥಾನದಲ್ಲಿ ಚೆನ್ನಂಜೇದೇವರನ್ನು ಮಾತ್ರ ಹೆಸರಿಸುತ್ತದೆ. ಷಟ್‌ಸ್ಥಲ ಶಿವಾಯಣವು ಪ್ರಾಚೀನ ಆಕರವಾಗಿರುವುದರಿಂದ ಇದರ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದೆನಿಸುತ್ತದೆ. ಇದಕ್ಕೆ ಪೂರಕವೆಂಬಂತೆ ಸಂಪಾದನೆಯ ಗುರುಲಿಂಗದೇವನ 'ಶೀಲವಂತನ ತ್ರಿವಿಧಿ ವ್ಯಾಖ್ಯಾನ'[೧೯] ಹಾಗು ಸಂಪಾದನೆಯ ಪರ್ವತೇಶನ 'ಚತುರಾರ್ಯ ಪುರಾಣ', ವಿರಕ್ತ ತೋಂಟದಾರ್ಯರ 'ಸಿದ್ದೇಶ್ವರ ಪುರಾಣ'ಗಳು, ಸಂಪಾದನೆಯ ಬೋಳಬಸವೇಶ್ವರ ದೇವರ 'ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನ'. ಹಾಗು ಸಂಪಾದನೆಯ ಚೆನ್ನಂಜೆದೇವ ಮತ್ತು ಸಂಪಾದನೆಯ ಬೋಳಬಸವರ 'ಬಸವ ಸ್ತೋತ್ರದ ವಚನ' ಕೃತಿಗಳು ಚೆನ್ನಂಜೆದೇವರು– ಬೋಳಬಸವೇಶ್ವರರ ಶಿಷ್ಯರೆಂದು ಪರಿಗಣಿಸಿವೆ.
ಷಟ್‌ಸ್ಥಲ ಶಿವಾಯಣದ ಪ್ರಕಾರ

"ಪ್ರಥಮ ಪಟ್ಟ ನಿರಂಜನ ಪ್ರಭು
ದ್ವಿತಿಯಕಲ್ಲಮ ಪ್ರಭುವೆ ನಿಜಗುರು
ತ್ರಿತಿಯ ಶ್ರೀ ಗುರುಸಿದ್ಧ ನಾಲ್ಕಕೆ ಬೋಳಬಸವಾರ್ಯ।
ಜಿತವೈದು ಚೆನ್ನಂಜೆದೇಶಿಕ
ಯತಿಪ ಶಮಿತಪುರೀಶಗಾರ
ಪ್ರತಿಮ ಷಟ್‌ಸ್ಥಲ ಪಟ್ಟ ಚೀಲಾಳ ಸ್ವಾಮಿಗೇಳರಲಿ॥"(ಷ.ಶಿ.೧೯–೧೯)

---

೧೯. "ಶ್ರೀಮತ್ಸಚ್ಚಿದಾನಂದ ನಿತ್ಯ ಪರಿಪೂರ್ಣ ನಿರಂಜನ ಪರಂಜ್ಯೋತಿ ಸ್ವರೂಪರಾದ ತೋಂಟದ ಸಿದ್ಧಲಿಂಗ ಪ್ರಭುವೆಂಬಾಚಾರ್ಯರು, ಅವರ ನಿಜದರಿವಿನಾಚರಣೆಯನುಭವಿಯೆ ಬೋಳಬಸವೇಶ್ವರನು; ಅವರ ನಿಜದರಿವಿನಾಚಾರಣೆಯನುಭವಿಗೆ ಹರತಾಳ ಚೆನ್ನಂಜೆದೇವರು; ಅವರನುಭವದ ಅಖಂಡತೇಜೋ ವಿಗ್ರಹವೆ ಎಳಮಲೆಯ ಗುರುಶಾಂತದೇವರು; ಅವರ ಭಕ್ತಿ ಜ್ಞಾನ ವೈರಾಗ್ಯದ ಸಮರಸಾನಂದಾನುಭವಿಯೆ ಸಂಪಾದನೆಯು ಸಿದ್ಧವೀರಣಾಚಾರ್ಯರು, ಅವರ ಲಿಂಗದನುಭವದಾಚರಣೆಯ ನಿಜದ ನಿರಿಗೆವಿಡಿದು ಸ್ವಲೀಲಾನಂದದಲ್ಲಾಚರಿಸಿದವರೆ ಸಂಪಾದನೆಯ ಬೋಳಬಸವದೇವರು; ಅವರ ಲಿಂಗಾಂಗ ಸಮರಸದರುಹಿನ ಪ್ರಸಾದ ಪೂರಿತ ಹೃದಯರಾದ ಸಂಪಾದನೆಯ ಗುರುಲಿಂಗದೇವರು––"

ಶ್ರೀಗುರು ಚೆನ್ನಂಜೆದೇವರ ತರುವಾಯ ಶೂನ್ಯ ಸಿಂಹಾಸನವನ್ನು ಏರಿದವರು ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರರು. ಇವರು ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಬಳಿ ಇರುವ ಕಟ್ಟಿಗೆಹಳ್ಳಿಯವರು. ಸಂಪ್ರದಾಯದಂತೆ ದೇಶ ಸಂಚಾರ ರೂಪದಲ್ಲಿಯೆ ತಮ್ಮ ಗುರುತ್ವವನ್ನು ಮುಂದುವರಿಸಿಕೊಂಡು ಬಂದವರು. ಹೀಗೆ ಲೋಕ ಸಂಚಾರ ಮಾಡುತ್ತಾ ಹರಪನಹಳ್ಳಿಗೆ ಬಂದಾಗ ಅಲ್ಲಿಯ ದೊರೆ ಬಸವಂತರಾಯನ ಭಕ್ತಿಗೆ ಮಾರುಹೋಗಿ ಅಲ್ಲಿಯೆ ನೆಲೆ ನಿಂತರು. ದೊರೆ ಇವರಿಗೆ ಹರಪನಹಳ್ಳಿ ಬಳಿಯ ಗುಡ್ಡದ ಪಕ್ಕದಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನೆಂದು ಷಟ್‌ಸ್ಥಲ ಶಿವಾಯಣ ತಿಳಿಸುತ್ತದೆ. ಷಟ್‌ಸ್ಥಲ ಶಿವಾಯಣವು ಈತನನ್ನು ಏಂದನ (ಇಂಧನ) ಪುರಾಧೀಶ, ಶಮಿತ(ಸಮಿಧೆ) ಪುರಾಧೀಶ ಎಂದು ಕರೆದಿದೆ. ಈತನು ಹರಪನ ಹಳ್ಳಿಗೆ ಚೀಲಾಳಸ್ವಾಮಿಯನ್ನು ಬರಮಾಡಿಕೊಂಡು ಶೂನ್ಯಸಿಂಹಾಸನಾಧಿಕಾರದ ಕುರುಹಾದ ಶಿಖೆಯನ್ನು ದಯಪಾಲಿಸಿ ಆರೋಹಣ ಮಾಡಿಸುತ್ತಾನೆ. ಈ ಕಟ್ಟಿಗೆಹಳ್ಳಿ ಸ್ವಾಮಿ ಬಹುಶಃ ಹರಪನಹಳ್ಳಿಯಲ್ಲಿ ಲಿಂಗೈಕ್ಯನಾದನೆಂದು ಷಟ್‌ಸ್ಥಲ ಶಿವಾಯಣ ತಿಳಿಸುತ್ತದೆ.

ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳನ್ನು ಇವರ ಇನ್ನೊಬ್ಬ ಶಿಷ್ಯನಾದ ಮುರಿಗಾ ಶಾಂತವೀರನು 'ಕಟ್ಟಿಗೆಹಳ್ಳಿ ತಾರಾವಳಿ' ಬರೆದಿದ್ದಾನೆ. ಮುರಿಗಾ ಶಾಂತವೀರನ ಶಿಷ್ಯನಾದ ಜ್ವಲತ್ಕಂಠಮಹಾಂತ ಸ್ವಾಮಿಗಳು(ಕಾಲ.ಸು.೧೭೧೪) ತಮ್ಮ ಮುರಿಗಾ ಸ್ವಾಮಿಗಳ ನಾಂದ್ಯದಲ್ಲಿ

"ಆದಿಯಲಿ ಗುರು ತೋಂಟದಾರ್ಯಂ
ಭೇದವಿಲ್ಲದೆ ಬಂದು ಇಳೆಯೊಳು
ನಾದ ಮೂರುತಿ ಕಟ್ಟಿಗೆ ಸಿದ್ಧಲಿಂಗಾರ್ಯ" ಎಂದು ಸ್ತುತಿಸಿದ್ದಾರೆ.

ನಿರಂಜನವಂಶ ರತ್ನಾಕರದಲ್ಲಿ ಮುರಿಗಾಸ್ವಾಮಿಗೆ ಶಿಖಾಪಟ್ಟವನ್ನು, ತನ್ನ ಇನ್ನೊಬ್ಬ ಹಿರಿಯ ಶಿಷ್ಯನಿಗೆ ನೋಡಸಿದ್ಧಲಿಂಗನೆಂಬ ಅಭಿಧಾನ ನೀಡಿ ಅವನಿಗೆ ಶಿವಾನುಭವ ಪಟ್ಟವನ್ನು ನೀಡಿದ ವಿಷಯ ಪ್ರಸ್ತಾಪವಾಗುತ್ತದೆ. ಆದರೆ ಷಟ್‌ಸ್ಥಲ ಶಿವಾಯಣವು ಇದಾವುದನ್ನು ಹೇಳದೆ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಬಳಿಕ ಶೂನ್ಯ ಪೀಠವನ್ನು ಅಲ್ಲಮಪ್ರಭುವಿನ ಮೂರನೆ ಅವತಾರ, ತೋಂಟದ ಸಿದ್ಧಲಿಂಗಯತಿಯ ಎರಡನೆ ಅವತಾರವೆನಿಸಿದ ಚೀಲಾಳಸ್ವಾಮಿ ವಹಿಸಿಕೊಂಡನೆಂದು ಹೇಳುತ್ತದೆ.[೨೦]

ಕಟ್ಟಿಗೆಹಳ್ಳಿ ಸಿದ್ಧಲಿಂಗನ ನಂತರ ಶೂನ್ಯಪೀಠವನ್ನು ಏರುವಲ್ಲಿ ಇವನ ಶಿಷ್ಯರಾದ ಹಾಗೂ ಪ್ರಭಾವಿಗಳೂ ಆದ ಚೀಲಾಳಸ್ವಾಮಿ ಹಾಗು ಮುರಿಗಾಶಾಂತವೀರ ಸ್ವಾಮಿಗಳ ನಡುವೆ ಮನಸ್ತಾಪ ಉಂಟಾಗಿದೆ. ಈ ಹಿನ್ನೆಲೆಯೊಳಗೆ ಮಠದಲ್ಲಿ ದೊಡ್ಡಗೊಂದಲವೇರ್ಪಟ್ಟು ಶರಣರ ಸಂಘಟನೆ ಚೀಲಾಳಸ್ವಾಮಿ ಹಾಗು ಮುರಿಗಾಸ್ವಾಮಿ ಪರವಾಗಿ ಇಬ್ಭಾಗವಾಗಿದೆ. ಜನಪ್ರಿಯರು ಹಾಗೂ ದೈವಿಕ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದ ಚೀಲಾಳಸ್ವಾಮಿಗೆ ಪಟ್ಟವಾದಾಗ ಪ್ರತಿಭಟಿಸಿದವರನ್ನು 'ಶಿವಮತಕೇಟಕರು'[೨೧] ದುಷ್ಟರಿಗೆ ಲಯಕಾಲ ಬಂದಿದೆ[೨೨] ಎಂದು ಷಟ್‌ಸ್ಥಲ ಶಿವಾಯಣ ಹೇಳುತ್ತದೆ.

---

೨೦. 'ಹಗೆಯ ಪುಂಡರ ಕಳೆದು ಹರಪುರ
ನಗ ವಿಚಿತ್ರದ ಮಂಟಪದ ಜಗ
ಜಗಿಪ ಸಿಂಹಾಸನವ ಚೀಲಾಳಸ್ವಾಮಿ ಏರಿದರು' (ಷಟ್‌ಸ್ಥಲ ಶಿವಾಯಣ.೨೧-೮)

೨೧. ಷಟ್‌ಸ್ಥಲ ಶಿವಾಯಣ -೨೧-೩೬

೨೨. ಚೀಲಾಳ ಸ್ವಾಮಿಗೆ ಪಟ್ಟಕಟ್ಟಲು ಶಮಿತ ಪುರೀಶಗೆ ಸುದ್ಧಿಬಂದಾಗ- ""ಪಟ್ಟವಾಯಿತೆ ಪರಮ ಗುರುವಿಗೆ ಪಟ್ಟ ಚೀಲಾಳಸ್ವಾಮಿಗಾದಡೆ --ದುಷ್ಟರಿಗೆ ಲಯಕಾಲ ಕರಸ್ಥಲ --" *ಷ.ಶಿ. ೧೯-೫೯

ಈ ಸಮಯದಲ್ಲಿ ಚೀಲಾಳಸ್ವಾಮಿಯ ಪಟ್ಟವನ್ನು ಒಪ್ಪಿಕೊಳ್ಳದೆ ಅತೃಪ್ತರಾದ ಕೆಲವರು ಬೇರೆ ಸಮಯವ ಮಾಡಿಕೊಂಡರು[೨೩] ಎಂದು ಷಟ್‌ಸ್ಥಲ ಶಿವಾಯಣ ತಿಳಿಸುತ್ತದೆ. ಈವರೆಗೆ ಏಕಮುಖವಾಗಿದ್ದ ವಿರಕ್ತ ಪರಂಪರೆ ಬಹುಮುಖವಾಯಿತು. ಮಠ ಹಾಗು ಗುರುಪರಂಪರೆಗಳು ಹೆಸರಿಗಾಗಿ, ಪ್ರತಿಷ್ಠೆಗಾಗಿ, ಮಠದ ಆಸ್ತಿಗಾಗಿ ಶೂನ್ಯ ಸಿಂಹಾಸನದ ಪರಂಪರೆ ಹಾಗು ಮಹತ್ವವನ್ನು ಮರೆತು ಕಚ್ಚಾಡಿ ತಮ್ಮ ಹೆಸರುಗಳ ಮೂಲಕ ಅನೇಕ ಸಮಯ (ಮತ)ಭೇದಗಳನ್ನು ಕಲ್ಪಿಸಿಕೊಂಡು ನಾನು ಮೇಲು, ತಾನು ಮೇಲು ಎಂದು ಅಹಂಕಾರದಿಂದ ಸಮಾಜವನ್ನೆ ಒಡೆದು ಕತ್ತಲಾವರಿಸಿದ ದಿನಗಳಿವೆ.

ಬಾಲಲೀಲಾ ಮಹಾಂತ ಸ್ವಾಮಿಗಳು ಆ ಕಾಲದ ಗುರುಪರಂಪರೆ ಬಗ್ಗೆ

"ಬರಿದೆ ಬಡಿದಾಡುವರು ಪಟ್ಟಾಧಿಕಾರಿಗಳು
ಶರಣ ಬಸವಾದಿ ಪ್ರಭು ಮುಕ್ತರ ಭಯವಿಲ್ಲದಲೆ
ಮರುಳು ಮಾಡಿದನೇನೊ ಯಮರಾಜನಿವರಿಗೆ
ಎದಕೆ ಬಡಿದಾಡುತಿಹರು"[೨೪]

ಎಂದು ಪಟ್ಟಾಧಿಕಾರಿಗಳು ಬಡಿದಾಡುವ, ಅವರ ಅಂಗದ ಅಜ್ಞಾನ ದುರ್ವತನೆಯನ್ನು ಕುರಿತು ಮರುಗುತ್ತಾರೆ. ಮುರುಗಿ ಸಮಯ, ಕುಮಾರ ಸಮಯ, ಚೀಲಾಳ ಸಮಯ, ಕೆಂಪಿನ ಸಮಯ, ಸಂಪಾದನ ಸಮಯದವರು ತಾವೆಂದು ವಿರತರಿಳೆಯೊಳು ಸಮಯ ಭೇದವ ಮಾಡುವರೇಕೆ ಎಂದು ಮರುಗುತ್ತಾರೆ.

ಚೀಲಾಳ ಸ್ವಾಮಿಗಳು ತನ್ನ ಉತ್ತರಾಧಿಕಾರಿಯನ್ನಾಗಿ ಕಪಿಲ ಸಿದ್ಧನನ್ನು ಆರಿಸುತ್ತಾರೆ. ಷಟ್‌ಸ್ಥಲ ಶಿವಾಯಣ ಹೀಗೆ ಹೇಳುತ್ತದೆ.

"ಅವನಿ ಬೋಗವನೆಲ್ಲ ಕರಸ್ಥಲ
ಶಿವನಿಗರ್ಪಿಸಿ ಶಿವಪ್ರಸಾದವ
ಸವಿದು ಶೇಷವ ಕಪಿಲ ಸಿದ್ಧಯತೀಶಗೊಪ್ಪಿಸುತ" (ಷ.ಶಿ.೨೧-೫೩)

---

೨೩. "ವೀರಶೈವಾಚಾರ ಹಗೆಗಳು
ದೂರವಾದರು ಷಟ್‌ಸ್ಥಲಕೆ ಸಂ
ಸಾರವಿಡಿದರು ಕೆಲರು ಕೆಲಬರು ಪಾತಕವ ಹಿಡಿದು
ಬೇರೆ ಸಮಯವ ಮಾಡಿಕೊಂಡರು
ಮಾರ ವೈರಿ ನಿರೂಪ ಮೇರೆಗೆ
ಮೂರು ಸಾವಿರದೊಡೆಯ ಚೀಲಾಳಸ್ವಾಮಿ ಹರಪುರದ"(ಷ.ಶಿ. ೨೧-೧೧)

೨೪. ಶಿ.ಶಿ.ಬಸವನಾಳ(ಸಂ) ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯದರ್ಪಣ' ಪದ್ಯ ೧೪೨, ಪುಟ-೧೯

"ಭೂಮಿ ಭಾರವನಿಳುಹಿ ಚೀಲಾಳ
ಸ್ವಾಮಿ ಷಟ್‌ಸ್ಥಲ ಪೀಠ ಪಟ್ಟದ
ಸಾಮರಾಜ್ಯದ ಶಿಖಿ ನಿರೂಪ ಕಪಿಲ ಸಿದ್ಧನಿಗೆ
ನೇಮಕವ ಮಾಡಿಸಿರಿ -- "

(ಷ.ಶಿ. ೨೨-೨೬)

ಇಲ್ಲಿ ಚೀಲಾಳ ಸ್ವಾಮಿಗಳು ಷಟ್‌ಸ್ಥಲ ಪೀಠ ಪಟ್ಟವನ್ನು ಕಪಿಲ ಸಿದ್ಧನಿಗೆ ಶಿಖಿ ನಿರೂಪದೊಂದಿಗೆ ನೀಡಿರುವುದು ಗಮನಿಸಬೇಕಾದ ಅಂಶ. 'ಶಿಖಾ' ಎಂದರೆ ಪರಂಪರಾತವಾಗಿ ಬಂದ ಅಧಿಕಾರದ ಮುದ್ರೆ. ಈ ಅಧಿಕಾರದ ಮುದ್ರೆ ಕಟ್ಟಿಗೆಹಳ್ಳಿ ಸಿದ್ಧಲಿಂಗರಿಂದ ಚೀಲಾಳಸ್ವಾಮಿಗೆ, ಚೀಲಾಳಸ್ವಾಮಿಯಿಂದ ಕಪಿಲಸಿದ್ಧನಿಗೆ ಹಸ್ತಾಂತರಿಸಲಾಗಿದೆ. ತೋಂಟದ ಸಿದ್ಧಲಿಂಗರ ಪರಂಪರೆಯ ಮುಂದುವರಿಕೆಯ, ಶೂನ್ಯ ಸಿಂಹಾಸನಾರೋಹಣದ ಅಧಿಕಾರ ಸೂಚಕವಾದ ಶಿಖಿ(ಮುದ್ರೆ) ಅಧಿಕೃತವಾಗಿ ಚೀಲಾಳಸ್ವಾಮಿಗೆ ಬಂದಿದೆ. ಅಲ್ಲಮಪ್ರಭು ಸಂಪ್ರದಾಯದ ಶೂನ್ಯಪೀಠ ಪರಂಪರೆಯ ಉತ್ತರಾಧಿಕಾರಿಯಾಗಿ ಕಪಿಲಸಿದ್ಧ ಶಿವಯೋಗಿ ಕಾಣಬರುತ್ತಾನೆ.

"ಧಾರವಾಡ ಕನ್ನಡ ಅಧ್ಯಯನ ಪೀಠದ ೨೬೪೯ನೆಯ ನಂಬರಿನ 'ವೀರಶೈವಾಮೃತ ಮಹಾಪುರಾಣ'ದ ಕಾಗದ ಪ್ರತಿಯ ಅಂತ್ಯ ಪ್ರಶಸ್ತಿ ಶ್ರೀ.ತೋಂಟದ ಸಿದ್ಧಲಿಂಗೇಶನ ಸಂಪ್ರದಾಯಕರಾದ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರ ಶಿಷ್ಯ - ಪ್ರಶಿಷ್ಯರಾದ ಚೀಲಾಳಸ್ವಾಮಿ ಮತ್ತು ಕಪಿಲಸಿದ್ಧ ಸ್ವಾಮಿಗಳ ಗುರು-ಶಿಷ್ಯ ಸಂಬಂಧವನ್ನು ದೃಢೀಕರಿಸುತ್ತದೆ. ಆದರೆ ಕಪಿಲಸಿದ್ಧ ಸ್ವಾಮಿಯ ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದಿಲ್ಲ. ಹಾಗೆಯೆ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಉತ್ತರಾಧಿಕಾರಿ ಎಂದು ಹೇಳಿಕೊಳ್ಳುವ ಮುರಿಗಾ ಸ್ವಾಮಿಗಳ ಬಗ್ಗೆಯೂ ಏನೂ ಹೇಳುವುದಿಲ್ಲ. ಹಾಗಾಗಿ ಕಟ್ಟಿಗೆಹಳ್ಳಿ ಸಿದ್ಧಲಿಂಗರ ನಂತರ ಪೀಠವೇರಿದವರು ಚೀಲಾಳಸ್ವಾಮಿ ಎಂಬುದನ್ನು ಧೃಡಪಡಿಸುತ್ತದೆ.[೨೫] ಹೀಗಾಗಿ ಮೂಲಶಾಖೆಯ ನೇರವಾರಸುದಾರರೆನಿಸಿದ ಚೀಲಾಳಸ್ವಾಮಿಯ ಹೆಸರಿನಲ್ಲಿ 'ಚೀಲಾಳ ಸಮಯ' ಹುಟ್ಟಿಕೊಂಡಿತು.

ಆದರೆ ಚಿತ್ರದುರ್ಗದ ಮುರುಗಾಮಠದವರು ತಮ್ಮ ಗುರು ಪರಂಪರೆಯನ್ನು ಕಟ್ಟಿಗೆಹಳ್ಳಿ ಸಿದ್ಧಲಿಂಗನವರೆಗೆ ಒಪ್ಪಿಕೊಂಡು ಆನಂತರದ ಉತ್ತರಾಧಿಕಾರಿಗಳು ಅಥವಾ ಶೂನ್ಯಪೀಠ ಏರಿದವರು. ತಾವೇ ಎಂದು ಹೇಳಿಕೊಳ್ಳುತ್ತಾರೆ.

ತೋಂಟದ ಸಿದ್ಧಲಿಂಗೇಶ್ವರರ ನಂತರದ ಪರಂಪರೆಯನ್ನು ಜ್ವಲತ್ಕಂಠ ಮಹಾಂತ ಸ್ವಾಮಿಗಳು ನಿರೂಪಿಸಿದ ಮುರಿಗಾ ನಾಂದ್ಯದ ಹನ್ನೊಂದನೆ ಪದ್ಯದಲ್ಲಿ ಹೇಳಲಾಗಿದೆ.

"ಸಿದ್ಧಲಿಂಗನ ಕರುಣಶೇಷಂ
ಸಿದ್ಧಿಸಿದ ನಿಜ ಬೋಳಬಸವನ
ಉದ್ಧತ ಪ್ರಸಾದ ಸೇವನೆಯಿಂದ ಬೆಳಿದಿರ್ದಂ
ಉದ್ದವಾದಂ ಗುರುವಿನಿಂ ಸಲೆ
ಸಿದ್ಧ ಕಟ್ಟಿಗೆ ಹಳ್ಳಿದೇವನ
ಶುದ್ಧ ಜ್ಞಾನದಿ ಬೆಳೆದ ಮುರಿಗೆಯದೇವಪಾಲಿಪುದು"

---

೨೫. ಡಾ॥ ಎಂ.ಎಂ.ಕಲಬುರ್ಗಿ ಮತ್ತು ಸಿ.ಪಿ.ಕೆ.-(ಸಂ)-'ಷಟ್‌ಸ್ಥಲ ಶಿವಾಯಣ' ಪ್ರಸ್ಥಾವನೆ ಪುಟ -೧೫

ಅಂದರೆ ಶಿಷ್ಯಪರಂಪರೆ ಈ ರೀತಿ ಇದೆ

ತೋಂಟದಸಿದ್ಧಲಿಂಗ-ಬೋಳಬಸವ-ಉದ್ದವಾದಗುರು (ಗಗನದಾರ್ಯ) - ಸಿದ್ಧಕಟ್ಟಿಗೆಹಳ್ಳಿದೇವ -ಮುರಿಗೆಯದೇವ (ಮುರಿಗೆಶಾಂತವೀರ). ಮುರಿಗಾಶಾಂತವೀರರ ಶಿಷ್ಯರಾದ, ಜ್ವಲತ್ಕಂಠ ಮಹಾಸ್ವಾಮಿಗಳ[೨೬] ಕಾಲ ಸುಮಾರು ೧೭೧೪. ಕವಿ ಚರಿತೆಗಾರರು ದ್ವಿತೀಯ ಸಂಪುಟದಲ್ಲಿ ಮಹಾಂತಸ್ವಾಮಿಗಳ ಕಾಲ ಸುಮಾರು ೧೫೬೦ ಎಂದು ಗುರುತಿಸಿದ್ದಾರೆ. ಮಹಾಂತ ಸ್ವಾಮಿಗಳ ಎರಡು ಲಘು ಕೃತಿಗಳಿವೆ. ೧. ಮಹಾಂತ ಸ್ವಾಮಿಗಳು ನಿರೂಪಿಸಿದ ಕಾವ್ಯ. ೨. ಶಿವಗಣ ಸಹಸ್ರ ತಾರಾವಳಿ. ಇವುಗಳಲ್ಲಿ ಶಿವಗಣ ಸಹಸ್ರ ತಾರಾವಳಿ ಕೃತಿ ಕರ್ನಾಟಕ ವಿಶ್ವವಿದ್ಯಾನಿಲಯದ ಡಾ॥ ಆರ್.ಸಿ.ಹಿರೇಮಠ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದ ೩೬೮೨ ನೆ ಸಂಖ್ಯೆಯ ಕಾಗದದ ಹಸ್ತ ಪ್ರತಿ ಡಾ॥ವೀರಣ್ಣ ರಾಜೂರು ಅವರಿಂದ ಸಂಪಾದನೆಗೊಂಡು ವೀರಶೈವ ತಾರಾವಳಿ ಸಂಪುಟ (೧೯೯೪) ಗದುಗಿನ ತೋಂಟದಾರ್ಯ ಮಠದಿಂದ ಪ್ರಕಟವಾಗಿದೆ. ಈ ಕೃತಿಯ ಅಂತ್ಯ ಪ್ರಶಸ್ತಿ ಗದ್ಯದಲ್ಲಿದೆ. "--ಸಹಸ್ರಗಣನಾಮ ತಾರಾವಳಿಯು, ಕಲಿಯುಗ ಸಾಲಿವಾಹನ ಶಕವರುಷ ೧೬೩೬ ನಡೆವ ಜಯನಾಮ ಸಂವತ್ಸರ ಭಾದ್ರಪದ ಬಹುಳ ತ್ರಯೋದಶಿ ಆದಿತ್ಯವಾರ ಮುಂಜಾವದಲ್ಲಿ ಸಮಾಪ್ತಿಯಾಯಿತು". ಈ ಗದ್ಯದಲ್ಲಿ ಕಾಲ ಸ್ಪಷ್ಟವಾಗಿರುವುದರಿಂದ ಕೃತಿರಚನೆಯಾಗಿರುವುದು ಕ್ರಿ.ಶ. ೧೭೧೪ ಎಂದು ತಿಳಿದುಬರುತ್ತದೆ. ಅಂದರೆ ಜ್ವಲತ್ಕಂಠ ಮಹಾಂತ ಸ್ವಾಮಿಗಳ ಕಾಲ ಸುಮಾರು ಕ್ರಿ.ಶ. ೧೭೦೦ ಎಂದು ಇಟ್ಟುಕೊಳ್ಳಬಹುದು.

ಸೋಮಶೇಖರ ಶಿವಯೋಗಿಯ 'ತೋಂಟದ ಸಿದ್ಧಲಿಂಗನ ಷಟ್‌ಸ್ಥಲ ಜ್ಞಾನ ಸಾರಾಮೃತ'ದ ಟೀಕೆಯಲ್ಲಿ ಈ ಗುರುಪರಂಪರೆ " ತೋಂಟದ ಸಿದ್ಧಲಿಂಗ ಶಿವಯೋಗಿಗಳು,- ಬೋಳಬಸವ- ಗೂಳೂರು ಸಿದ್ಧಲಿಂಗ- ಗುಮ್ಮಳಾಪುರದ ಸಿದ್ಧಲಿಂಗ- ಗಗನದಯ್ಯ-ಕಟ್ಟಿಗೆಹಳ್ಳಿ ಸಿದ್ಧಲಿಂಗ- ಮುರಿಗೆಯ ಶಾಂತವೀರ-ಮುರಿಗೆಯ ಗುರುಸಿದ್ದೇಶ್ವರ- ಸೋಮಶೇಖರ ಶಿವಯೋಗಿ" ಹೀಗೆ ವ್ಯಕ್ತವಾಗಿದೆ. ಬೋಳಬಸವನ ತರುವಾಯ ಗುಮ್ಮಳಾಪುರದ ಸಿದ್ಧಲಿಂಗನ ಬದಲಾಗಿ ಗೂಳೂರು ಸಿದ್ಧವೀರಣ್ಣ ಅವರ ಹೆಸರನ್ನು, ಆನಂತರ ಗುಮ್ಮಳಾಪುರದ ಸಿದ್ಧಲಿಂಗನ ಹೆಸರನ್ನು ಉಲ್ಲೇಖಿಸಲಾಗಿದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನ ನಂತರ ಮುರಿಗೆಯ ಶಾಂತವೀರನನ್ನು ಹೆಸರಿಸುತ್ತದೆ.

ಚಿತ್ರದುರ್ಗದ ಮುರುಗಾಮಠ ಪ್ರಕಟಿಸಿದ 'ಮಹಾಲಿಂಗೇಂದ್ರ ವಿಜಯ'(೧೮೭೦) ಮತ್ತು 'ನಿರಂಜನ ವಂಶ ರತ್ನಾಕರ'ಗಳ ಪ್ರಕಾರ ಎಡೆಯೂರಿನ ತೋಂಟದಾರ್ಯರ ಬಳಿಕ 'ಬೋಳಬಸವಾರ್ಯ ಗುಮ್ಮಳಾಪುರದ ಸಿದ್ಧಲಿಂಗ-ಗೂಳೂರು ಸಿದ್ಧವೀರಣ್ಣ-ಗಗನ ಸ್ವಾಮಿ-ಕಟ್ಟಿಗೆಹಳ್ಳಿ

---

೨೬. ಜ್ವಲತ್ಕಂಠ ಮಹಾಂತ ಸ್ವಾಮಿಗಳ ಮಠ ಇದ್ದುದ್ದು ತುಮಕೂರು ಜಿಲ್ಲೆ, ಚಿಕ್ಕನಾಯಕನ ಹಳ್ಳಿ ತಾಲೂಕು ಹುಳಿಯಾರಿನಲ್ಲಿ. ಈ ಮಠದ ತಾಮ್ರ ಶಾಸನ EC XVI Supplementary inscriptions,Tumkur Dist ೧೯೫೬. ಈ ಪುಸ್ತಕದ ಪುಟ ೨೨-೨೪ ರಲ್ಲಿ ಈ ಶಾಸನ ಪ್ರಕಟವಾಗಿದೆ. ಜ್ವಲತ್ಕಂಠ ಮಹಾಂತಸ್ವಾಮಿಗಳು ಇಲ್ಲಿಯೆ ಗದ್ದಿಗೆಯಾಗಿರಬೇಕು". "--ಶ್ರೀಮುರಿಗೆ ಸ್ವಾಮಿಗಳೈಯನವರ ಸಂಪ್ರದಾಯಕರಾದ। ಜ್ವಲತ್ಕಂಠ ಮಹಾಂತಪ್ಪನವರ ಮಠಯೀ ಹುಳಿಯಾರಲ್ಲಿ । ನಿರ್ಮಿತ್ತವಾಗಿಯಿರುವಂತ್ಥ ವಿರಕ್ತಮಠಕ್ಕೆ ಧರ್ಮ ಶಾಸನವಂನುನಿರ್ನಯ। ಬರಶಿ--" ಮುಂತಾಗಿ ಶಾಸನ ಇದೆ.

ಸಿದ್ಧಲಿಂಗ-ಮುರಿಗಾಶಾಂತವೀರ-ಕುಮಾರ ದೇಶಿ ಕೇಂದ್ರರು, ಕ್ರಮವಾಗಿ ನಿರಂಜನ ಪೀಠವನ್ನೇರಿದರೆಂದು ಹೇಳುತ್ತದೆ. ಮುರಿಗಾ ಶಾಂತವೀರರಿಂದ (೧೬೫೬-೧೭೦೩) ಚಿತ್ರದುರ್ಗದಲ್ಲಿ ಬೃಹನ್ಮಠ ಅಸ್ತಿತ್ವಕ್ಕೆ ಬಂದಿತು. ಈ ಮುರಿಗಾ ಶಾಂತವೀರರ ಶಿಷ್ಯರು ಇಮ್ಮಡಿ ಮುರಿಗಾ ಗುರುಸಿದ್ಧ, ಕುಮಾರಸ್ವಾಮಿ ಮತ್ತು ಚೀಲಾಳ ಸ್ವಾಮಿಗಳೆಂದು ತಿಳಿಸುತ್ತದೆ. ಮುಂದೆ ಮುರಿಗಾ ಶಾಂತವೀರರು ಇಮ್ಮಡಿ ಮುರಿಗಾ ಗುರುಸಿದ್ಧರಿಗೆ ಪಟ್ಟಕಟ್ಟಿದಾಗ ಗುರುಮುರಿಗಾ ಶಾಂತವೀರರ ಬಗ್ಗೆ ಅಸಮಧಾನಗೊಂಡು ಚಿತ್ರದುರ್ಗದಿಂದ ಬೇರೆ ಕಡೆಗೆ ಹೋಗಿ ತಮ್ಮವೆ ಸಂಪ್ರದಾಯದ ಅಥವಾ ಸಮಯದ ಪ್ರತ್ಯೇಕ ಮಠಗಳನ್ನು ಕುಮಾರಸ್ವಾಮಿ-ಚೀಲಾಳಸ್ವಾಮಿ-ಕೆಂಪಿನಯ್ಯನವರು ಸ್ಥಾಪಿಸಿಕೊಂಡರೆಂದು ಹೇಳುತ್ತದೆ. ಚೀಲಾಳಸ್ವಾಮಿಗಳು ಹರಪನಹಳ್ಳಿಯ ನಾಯಕರ ಬಳಿ ಹೋಗಿ ಅಲ್ಲಿಯೆ ತಮ್ಮ ಹೆಸರಿನ ಸಂಪ್ರದಾಯದ ಮಠವೊಂದನ್ನು ಸ್ಥಾಪಿಸಿಕೊಂಡು ನಿಂತರೆಂದು ಹೇಳುತ್ತದೆ.

ಮೇಲೆ ಹೇಳಿದ ಜ್ವಲತ್ಕಂಠ ಮಹಾಂತ ಸ್ವಾಮಿಗಳ ಮುರಿಗಾ ನಾಂದ್ಯ, ಮಹಾಲಿಂಗೇಂದ್ರ ವಿಜಯ ಹಾಗು ಸೋಮಶೇಖರ ಶಿವಯೋಗಿಯ 'ತೋಂಟದ ಸಿದ್ಧಲಿಂಗನ ಷಟ್‌ಸ್ಥಲ ಜ್ಞಾನ ಸಾರಾಮೃತ'ಗಳ ಪ್ರಕಾರ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯ ಮುರಿಗಾ ಶಾಂತವೀರರಾಗಿದ್ದಾರೆ. ಆದರೆ ಮಹಾಲಿಂಗೇಂದ್ರ ವಿಜಯ ಮುಂದುವರಿದು ಮುರಿಗಾಶಾಂತವೀರರ ಶಿಷ್ಯ ಚೀಲಾಳಸ್ವಾಮಿಗಳು ಎಂದು ಹೇಳುತ್ತದೆ. ಕನ್ನಡ ಅಧ್ಯಯನ ಪೀಠದ ೨೬೪೯ ನೆಯ ನಂಬರಿನ 'ವೀರಶೈವಾಮೃತ ಪುರಾಣ'ದ ತಾಳೆ ಪ್ರತಿಯ 'ಅಂತ್ಯ ಪ್ರಶಸ್ತಿ'[೨೭] ಹಾಗು ಷಟ್‌ಸ್ಥಲ ಶಿವಾಯಣ (೧೭೦೦) ಕೃತಿಗಳು ಚೀಲಾಳಸ್ವಾಮಿ ಮತ್ತು ಮುರಿಗಾ ಸ್ವಾಮಿಗಳ ಸಂಬಂಧದ ಬಗ್ಗೆ ಬೇರೆಯದೆ ಆದ ವಿಷಯವನ್ನು ಪ್ರಕಟಿಸುತ್ತವೆ. ಇವುಗಳ ಪ್ರಕಾರ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯರು ಚೀಲಾಳ ಸ್ವಾಮಿಗಳು.

ಇವುಗಳಲ್ಲಿ ಚೀಲಾಳ ಸ್ವಾಮಿಗಳ ಸಮಕಾಲೀನ ಬರವಣಿಗೆಯಾದ ವೀರಶೈವ ಮಹಾಪುರಾಣದ ಅಂತ್ಯಪ್ರಶಸ್ತಿ ಹಾಗು ಚೀಲಾಳ ಸ್ವಾಮಿಗಳ ಬೋಧನೆಯನ್ನು ಕಿವಿಯಾರೆ ಕೇಳಿ ಷಟ್‌ಸ್ಥಲ ಶಿವಾಯಣ ಬರೆದ ಸಿದ್ಧಲಿಂಗಾಚಾರ್ಯ, ಚೀಲಾಳ ಸ್ವಾಮಿಯ ಶಿಷ್ಯನೆ ಆಗಿರುವುದರಿಂದ ಈ ಹೇಳಿಕೆಗಳೇ ವಿಶ್ವಾಸಾರ್ಹವೆಂದು ನಂಬಬೇಕಾಗುತ್ತದೆ. ಹೀಗಾಗಿ ಮುರಿಗಾ ಶಾಂತವೀರರೂ, ಚೀಲಾಳಸ್ವಾಮಿಗಳು ಗುರು ಶಿಷ್ಯರಲ್ಲ. ಇಬ್ಬರೂ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯರು ಹಾಗು ಸಮಕಾಲೀನರು ಆಗಿದ್ದಾರೆ ಎಂದು ಹೇಳಬಹುದು. ಷಟ್‌ಸ್ಥಲ ಶಿವಾಯಣ ಕೃತಿ, ಮಹಾಲಿಂಗೇಂದ್ರ ವಿಜಯಕ್ಕಿಂತ ಸುಮಾರು ೧೭೦ ವರ್ಷಗಳಷ್ಟು ಪ್ರಾಚೀನವಾದುದಾಗಿದೆ. ಇದರ ವಿಷಯಗಳು ಸಾಮಾನ್ಯವಾಗಿ ಸತ್ಯಕ್ಕೆ ಹತ್ತಿರವಾಗಿವೆ ಎಂದು ನಂಬಬಹುದು. ಹಾಗಾಗಿ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಪರಂಪರೆ ಚೀಲಾಳ ಸ್ವಾಮಿ ಮುಖಾಂತರ ಮುಂದುವರೆದಿದೆ. ಗದುಗಿನ ತೋಂಟದಾರ್ಯಮಠ ಚೀಲಾಳ ಸ್ವಾಮಿ ಪರಂಪರೆ ಅಂದರೆ ತೋಂಟದ ಸಿದ್ಧಲಿಂಗ ಸಂಪ್ರದಾಯದ ನೇರವಾರಸು ಶಾಖೆಯಾಗಿದೆ. ಇದಕ್ಕೆ ಎರಡು ಮುಖ್ಯ ಆಚರಣಾತ್ಮಕ ಆಧಾರಗಳಿವೆ ಎಂದು ಡಾ॥ಎಂ.ಎಂ.ಕಲಬುರ್ಗಿಯವರು ಗುರುತಿಸಿದ್ದಾರೆ.

---

೨೭. ಈ ಪುರಾಣ ಬೆಳಗಾವಿಯ ಶ್ರೀ. ನಾಗನೂರು ಮಠದಿಂದ ಪ್ರಕಟವಾಗಿದೆ. ಇದರ ಮುನ್ನುಡಿಯಲ್ಲಿ ಅಂತ್ಯ ಪ್ರಶಸ್ತಿ ಪ್ರಕಟವಾಗಿದೆ.

೧. ಮುರುಗಾ ಸಮಯದವರು ನೇರವಾರಸುದಾರರಾಗಿದ್ದರೆ, ಇವರು ಎಡೆಯೂರು ಸಿದ್ಧಲಿಂಗ ಕ್ಷೇತ್ರದೊಂದಿಗೆ ಗಾಢವಾದ ಸಂಬಂಧ ಇಟ್ಟುಕೊಳ್ಳದೆ, ಸ್ವತಂತ್ರ ಪರಂಪರೆಯಂತೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಯಡೆಯೂರಿನ ಸಿದ್ಧಲಿಂಗ ಮಠದೊಂದಿಗೆ ಸಂಬಂಧ ಇಟ್ಟುಕೊಂಡದ್ದು ಗದುಗಿನ ಚೀಲಾಳ ಸಮಯ.

೨. ಮುರುಗಾ ಸಮಯದ ಪ್ರತಿಯೊಬ್ಬ ಪೀಠಾಧಿಕಾರಿಯೂ ತಮ್ಮ ಹೆಸರಿನ ಹಿಂದೆ 'ತೋಂಟದ' ಎಂಬ ವಿಶೇಷಣ ಬಳಸದೆ 'ಮುರುಗಾ' ವಿಶೇಷಣಾ ಮಾತ್ರ ಬಳಸುತ್ತಾರೆ. ಗದುಗಿನ ಚೀಲಾಳ ಸಮಯದ ಪೀಠಾಧಿಕಾರಿಗಳು ಮಾತ್ರ ತಪ್ಪದೆ ತಮ್ಮ ಹೆಸರಿನ ಹಿಂದೆ 'ತೋಂಟದ' ಎಂಬ ವಿಶೇಷಣ ಬಳಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅಲ್ಲಮ ಸಂಪ್ರದಾಯದ ಮುಂದುವರಿಕೆಯಾಗಿರುವ ತೋಂಟದ ಸಿದ್ಧಲಿಂಗ ಸಂಪ್ರದಾಯದ ನೇರ ಉತ್ತರಾಧಿಕಾರಿ 'ಮುರುಗಾ' ಸಮಯವಲ್ಲ. 'ಚೀಲಾಳ ಸಮಯ' ವೆಂಬುದು ತಿಳಿದುಬರುತ್ತದೆ. ಈ ಚೀಲಾಳ ಸ್ವಾಮಿಯ ಮಠಗಳು ಬಳ್ಳಾರಿ ಪ್ರದೇಶದ ಉರವಕೊಂಡೆ, ಹೊಸಪೇಟೆ, ಕೊಪ್ಪಳ ಮೊದಲಾದ ಊರುಗಳಲ್ಲಿವೆ. ಗದುಗಿನಲ್ಲಿರುವ ಚೀಲಾಳ ಸಮಯದ ತೋಂಟದಾರ್ಯ ಜಗದ್ಗುರು ಪೀಠ ಮೊದಲು ಡಂಬಳಕ್ಕೆ ನಂತರ ಗದುಗಿಗೆ ಬಂದಿದೆ ಎಂದು ಹೇಳಲು ಆಧಾರಗಳಿವೆ.

ಆದರೆ ಷಟ್‌ಸ್ಥಲ ಶಿವಾಯಣ ತಿಳಿಸುವಂತೆ ಚೀಲಾಳ ಸ್ವಾಮಿಯ ಉತ್ತರಾಧಿಕಾರಿಯಾಗಿ ಪೀಠವನ್ನೇರಿದ ಕಪಿಲಸಿದ್ಧನ ಹೆಸರು ಈ ಮೇಲೆ ತಿಳಿಸಿದ ಮಠಗಳ ಗುರುಪರಂಪರೆಯಲ್ಲಿ ಕಂಡು ಬರುವುದಿಲ್ಲ. ಚೀಲಾಳ ಸಂಪ್ರದಾಯದ ನೇರ ಮುಂದುವರಿಕೆಯಾದ ಗದುಗಿನ ಜಗದ್ಗುರು ಪೀಠ ತಾನು ಪ್ರಕಟಿಸಿದ ನಿರಂಜನ ಜಂಗಮವಂಶದರ್ಪಣದಲ್ಲಿ ಮೂಲ ಗುರುಪರಂಪರೆಯನ್ನು ಷಟ್‌ಸ್ಥಲ ಶಿವಾಯಣಕ್ಕಿಂತ ಭಿನ್ನವಾಗಿ ಪ್ರಕಟಿಸಿದೆ.[೨೮] ಆ ಪರಂಪರೆ ತೋಂಟದ ಸಿದ್ಧಲಿಂಗ– ಬೋಳಬಸವಾರ್ಯ– ಗೂಳೂರು ಸಿದ್ಧವೀರೇಶ– ಉದ್ಧಾನಾರ್ಯ – ಹರಿಹರಸ್ವಾಮಿ – ಭಿಕ್ಷುಕದ ಬಸವಲಿಂಗಾರ್ಯ–ಕಟ್ಟಿಗೆಹಳ್ಳಿರಾಚೋಟಿಸ್ವಾಮಿಗಳು– ಮಹಾಂತಸ್ವಾಮಿ(ಕೌಮುದಿಮಹಾಂತ) – ಅರ್ಧನಾರೀಶ್ವರಸ್ವಾಮಿ – ಈಸೂರುನಂದೀಶ್ವರಸ್ವಾಮಿ– ಉಗ್ಗದಸಿದ್ಧಲಿಂಗಸ್ವಾಮಿ – ಸದಾಶಿವಸ್ವಾಮಿ – ಮಹಾಂತಸ್ವಾಮಿ –ತೋಂಟದಾರ್ಯಸ್ವಾಮಿ–ಮೃತ್ಯುಂಜಯದೇವರು– ಸಿದ್ಧಲಿಂಗಸ್ವಾಮಿ–ಗುರುಬಸವಸ್ವಾಮಿ–ಶಿವಕುಮಾರಸ್ವಾಮಿ ತೋಂಟದಸಿದ್ಧಲಿಂಗಸ್ವಾಮಿ ಎಂದು ಹೇಳುತ್ತದೆ.

ನಿರಂಜನಜಂಗಮ ವಂಶದರ್ಪಣವು ತೋಂಟದಾರ್ಯ ಪರಂಪರೆಯು ಚೀಲಾಳ ಸಮಯವಾಗಿಯಾಗಲಿ ಅಥವಾ ಚೀಲಾಳ ಸಮಯವು ತೋಂಟದಾರ್ಯ ಪರಂಪರೆಯನ್ನು ಒಪ್ಪಿಕೊಂಡು ಅದರಲ್ಲೇ ಮುಂದುವರಿದ ವಿಷಯವನ್ನಾಗಲಿ ಪ್ರಸ್ತಾಪ ಮಾಡುವುದಿಲ್ಲ. ಜೊತೆಗೆ ಚೀಲಾಳ ಸ್ವಾಮಿಯ ಹೆಸರನ್ನಾಗಲಿ, ಕಪಿಲಸಿದ್ಧರ ಹೆಸರನ್ನಾಗಲಿ ಎಲ್ಲೂ ಪ್ರಸ್ತಾಪ ಮಾಡುವುದಿಲ್ಲ. ಈ ನ್ಯೂನತೆಯನ್ನು ಗಮನಿಸಿದಾಗ ಜಂಗಮವಂಶದರ್ಪಣವು ಗುರುಪರಂಪರೆಯ ಸಮಗ್ರತೆಯನ್ನು ಹಿಡಿದಿಡುವಲ್ಲಿ ಸಮರ್ಪಕವಾಗಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಲು ಆಕರ ಸಾಮಗ್ರಿಯೂ ಸಿಗುವ ಲಕ್ಷಣ ಇಲ್ಲವಾಗಿದೆ. ಷಟ್‌ಸ್ಥಲ ಶಿವಾಯಣ ಹೇಳುವ ಗುರುಪರಂಪರೆಯನ್ನು

---

೨೮. ತೋಂಟದಾರ್ಯ –ಬೋಳಬಸವ– ಚೆನ್ನಂಜೆದೇವ– ಕಟ್ಟಿಗೆಹಳ್ಳಿ ಸಿದ್ಧಲಿಂಗ– ಚೀಲಾಳಸ್ವಾಮಿ–ಕಪಿಲಸಿದ್ಧ

ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಇದರಲ್ಲಿ ಪೀಠವನ್ನೇರಿದ ಗುರುಗಳ ಕಾಲಾವಧಿಯನ್ನು, ಅವರ ಗದ್ದುಗೆಗಳು ಇರುವ ಸ್ಥಳಗಳನ್ನು ವಿವರಿಸುತ್ತದೆ. ಅಲ್ಲಿ ಉಕ್ತವಾಗಿರುವ ಡಂಬಳ, ಗದಗ, ಅಣ್ಣಿಗೇರಿ ಮೊದಲಾದ ಸ್ಥಳಗಳಲ್ಲಿ ತೋಂಟದಾರ್ಯ ಪರಂಪರೆಯ ಮಠಗಳು ಇಂದಿಗೂ ಧಾರ್ಮಿಕ ಹಾಗು ಸಮಾಜೋನ್ನತಿಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಿಗಿಸಿಕೊಂಡಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಗದುಗಿನ ತೋಂಟದಾರ್ಯ ಪೀಠವು ಅಲ್ಲಮಪ್ರಭು ಸಂಪ್ರದಾಯದ, ತೋಂಟದ ಸಿದ್ಧಲಿಂಗರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇದುವರೆಗೂ ವಿವೇಚಿಸಿದಂತೆ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆ ಏಕಮುಖವಾಗಿಲ್ಲ. ಶಿಷ್ಯ ಪರಂಪರೆಯಲ್ಲಿಯೆ ಭಿನ್ನತೆ ಕಂಡುಬರುತ್ತದೆ. ಒಬ್ಬೊಬ್ಬ ಪ್ರಭಾವಿ ಗುರುವು ತನ್ನ ಗುರು ಪರಂಪರೆಯನ್ನು ದಾಖಲಿಸುವಾಗ ತೋಂಟದ ಸಿದ್ಧಲಿಂಗರಿಂದ ಆರಂಭಿಸಿರುವುದು ಕಂಡುಬರುತ್ತದೆ. ಹಾಗೆ ಕೆಲವು ಕಾವ್ಯ ಕೃತಿಗಳು ಸಹ ತೋಂಟದಾರ್ಯರಿಂದ ಪರಂಪರೆಯನ್ನು ಆರಂಭಿಸಿದರೂ ಅವುಗಳಲ್ಲಿಯೂ ಶಿಷ್ಯ ಪರಂಪರೆಯ ಭಿನ್ನತೆ ಕಂಡುಬರುತ್ತದೆ. ಪ್ರಭುದೇವರ ಅವತಾರವೆಂದೆ ಭಾವಿಸಿದ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಗುರು ಶಿಷ್ಯ ಪರಂಪರೆಯನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

೧. ತೋಂಟದ ಸಿದ್ಧಲಿಂಗರ ವಚನದ ಪ್ರಕಾರ

ಅನಾದಿ ಗಣೇಶ್ವರ
↓
ಆದಿಗಣೇಶ್ವರ
↓
ನಿರ್ಮಾಯ ಗಣೇಶ್ವರ
↓
ನಿರಂಜನ ಗಣೇಶ್ವರ
↓
ಜ್ಞಾನಾನಂದ ಗಣೇಶ್ವರ
↓
ಆತ್ಮಗಣೇಶ್ವರ
↓
ಆಧ್ಯಾತ್ಮಗಣೇಶ್ವರ
↓
ರುದ್ರಗಣೇಶ್ವರ
↓
ಬಸವ ಪ್ರಭುದೇವ
↓
ಆದಿಲಿಂಗದೇವರು
↓
ಚನ್ನವೀರೇಶ್ವರದೇವರು
↓
ಗೋಸಲದೇವರ
↓
ದಿವ್ಯಲಿಂಗದೇವರು

ಚನ್ನಬಸವದೇವರು
↓
ತೋಂಟದ ಸಿದ್ಧಲಿಂಗ

೨. ನಿರಂಜನ ವಂಶರತ್ನಾಕರದ ಪ್ರಕಾರ

ಅಲ್ಲಮ ಪ್ರಭುದೇವ
↓
ಚೆನ್ನಬಸವಣ್ಣ
↓
ಸಿದ್ಧರಾಮ
↓
ಅನಾದಿಗಣನಾಥ
↓
ಆದಿಗಣೇಶ್ವರ
↓
ನಿರ್ಮಾಯಗಣೇಶ್ವರ
↓
ನಿರಂಜನಸ್ವಾಮಿಗಳು
↓
ಜ್ಞಾನಾನಂದಸ್ವಾಮಿಗಳು
↓
ಆತ್ಮಗಣವರ
↓
ಆಧ್ಯಾತ್ಮ ಗಣನಾಥ
↓
ರುದ್ರಮುನಿಸ್ವಾಮಿಗಳು
↓
ಬಸವ ಪ್ರಭುಸ್ವಾಮಿಗಳು
↓
ಆದಿಲಿಂಗ ಸ್ವಾಮಿಗಳು
↓
ಚನ್ನವೀರ ಸ್ವಾಮಿಗಳು
↓
ಗೋಸಲ ಸಿದ್ಧೇಶ್ವರಸ್ವಾಮಿಗಳು
↓
ಚೆನ್ನಬಸವ ರಾಜೇಂದ್ರರು
↓
ತೋಂಟದ ಸಿದ್ಧಲಿಂಗ
↓
ನಿರಕ್ಷರ ಬೋಳಬಸವ
↓
ಸಿದ್ಧವಿರೇಶ

ಗುರುಸಿದ್ಧದೇಶಿಕೇಂದ್ರಸ್ವಾಮಿಗಳು
↓
ಗಗನದಾರ್ಯ
↓
ಸಿದ್ಧವೀರ ಸ್ವಾಮಿಗಳು
↓
ನೋಡಸಿದ್ಧಲಿಂಗ ದೇಶಿಕೇಂದ್ರರು
↓
ಮುರುಗಾರಾಜೇಂದ್ರ ಸ್ವಾಮಿಗಳು

೩. ನಿರಂಜನ ಜಂಗಮ ವಂಶ ದರ್ಪಣದ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳ ಬಸವಾರ್ಯ
↓
ಗೂಳೂರು ಸಿದ್ಧವೀರೇಶ್ವರ
↓
ಉದ್ಧಾನಾರ್ಯ
↓
ಹರಿಹರ ಸ್ವಾಮಿ
↓
ಭಿಕ್ಷುಕದ ಬಸವಲಿಂಗಾರ್ಯ
↓
ಕಟ್ಟಿಗೆಹಳ್ಳಿ ರಾಚೋಟಿ ಸ್ವಾಮಿಗಳು
↓
ಮಹಾಂತ ಸ್ವಾಮಿಗಳು (ಕೌಮುದಿ ಮಹಾಂತ)
↓
ಅರ್ಧನಾರೀಶ್ವರ ಸ್ವಾಮಿ
↓
ಈಸೂರು ನಂದೀಶ್ವರ ಸ್ವಾಮಿ
↓
ಉಗ್ಗದ ಸಿದ್ಧಲಿಂಗಸ್ವಾಮಿಗಳು
↓
ಸದಾಶಿವ ಸ್ವಾಮಿಗಳು
↓
ಮಹಾಂತ ಸ್ವಾಮಿಗಳು
↓
ತೋಂಟದಾರ್ಯ ಸ್ವಾಮಿಗಳು
↓
ಮೃತ್ಯುಂಜಯ ದೇವರು

ಸಿದ್ಧಲಿಂಗ ಸ್ವಾಮಿಗಳು
↓
ಗುರುಬಸವ ಮಹಾಸ್ವಾಮಿಗಳು
↓
ಶಿವಕುಮಾರ ಸ್ವಾಮಿ
↓
ತೋಂಟದ ಸಿದ್ಧಲಿಂಗಸ್ವಾಮಿಗಳು

೪. ಷಟ್‌ಸ್ಥಲ ಶಿವಾಯಣದ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವೇಶ್ವರ
↓
ಚೆನ್ನಂಜೇದೇವ
↓
ಕಟ್ಟಿಗೆಹಳ್ಳಿ ಸಿದ್ಧಲಿಂಗ
↓
ಚೀಲಾಳ ಸ್ವಾಮಿ
↓
ಕಪಿಲಸಿದ್ಧ

೫.ಮಹಾಲಿಂಗೇಂದ್ರ ವಿಜಯದ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವಾರ್ಯ
↓
ಗುಮ್ಮಳಾಪುರದ ಸಿದ್ಧಲಿಂಗ
↓
ಗೂಳೂರು ಸಿದ್ಧವೀರಣ್ಣ
↓
ಗಗನ ಸ್ವಾಮಿ
↓
ಕಟ್ಟಿಗೆಹಳ್ಳಿ ಸಿದ್ಧಲಿಂಗ
↓
ಮುರಿಗಾಶಾಂತವೀರ

೬.ಸೋಮಶೇಖರ ಶಿವಯೋಗಿ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವೇಶ್ವರ
↓
ಗೂಳೂರು ಸಿದ್ಧಲಿಂಗ
↓
ಗುಮ್ಮಳಾಪುರದ ಸಿದ್ಧಲಿಂಗ
↓
ಗಗನದಯ್ಯ
↓
ಕಟ್ಟಿಗೆಹಳ್ಳಿ ಸಿದ್ಧಲಿಂಗ
↓
ಮುರಿಗೆಯ ಶಾಂತವೀರ
↓
ಮುರಿಗೆಯ ಗುರುಸಿದ್ದೇಶ್ವರ
↓
ಸೋಮಶೇಖರ ಶಿವಯೋಗಿ

೭. ಜ್ವಲತ್ಕಂಠ ಮಹಾಂತಸ್ವಾಮಿ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವ
↓
ಉದ್ಧವಾದ ಗುರು(ಗಗನದಾರ್ಯ)
↓
ಕಟ್ಟಿಗೆಹಳ್ಳಿದೇವ
↓
ಮುರಿಗೆಯ ದೇವ

೮. ಸಂಪಾದನೆಯ ಪರ್ವತೇಶನ'ಚತುರಾಸ್ಯ ಪುರಾಣ' ಮತ್ತು ವಿರಕ್ತ ತೋಂಟದಾರ್ಯರ 'ಪಾಲ್ಕುರಿಕೆ ಸೋಮನಾಥ'ಪುರಾಣಗಳ ಆಧಾರದಿಂದ

ತೋಂಟದ ಸಿದ್ಧಲಿಂಗ
↓
ಬೋಳಬಸವ
↓
ಚೆನ್ನಾಚಾರ್ಯ
↓
ಮಲಯಗುರುಶಾಂತೇಶ
↓
ಸಂಪಾದನೆಯ ಸಿದ್ಧವೀರೇಶ
↓
ಚೆನ್ನಮಲ್ಲಿಕಾರ್ಜುನದೇವ
↓
ಸಂಪಾದನೆಯ ಪರ್ವತೇಶ
↓
ವಿರಕ್ತ ತೋಂಟದಾರ್ಯ

೯. ಸಂಪಾದನೆಯ ಗುರುಲಿಂಗನ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವ
↓
ಹರತಾಳ ಚೆನ್ನಾಂಜೇದೇವ
↓
ಎಳಮಲೆಯ ಗುರುಶಾಂತದೇವ
↓
ಸಂಪಾದನೆಯಸಿದ್ಧವೀರಣಾಚಾರ್ಯ
↓
ಸಂಪಾದನೆಯ ಬೋಳಬಸವ
↓
ಸಂಪಾದನೆಯ ಗುರುಲಿಂಗದೇವ

೧೦.ಸಂಪಾದನೆಯ ಚೆನ್ನಂಜೇದೇವ ಹಾಗು ಸಂಪಾದನೆಯ ಬೋಳಬಸವ ಕೃತಿಗಳ ಪ್ರಕಾರ

ತೋಂಟದ ಸಿದ್ಧಲಿಂಗ
↓
ಬೋಳಬಸವ
↓
ಹರತಾಳ ಚೆನ್ನಂಜೇದೇವ
↓

ಪರ್ವತೇಂದ್ರ	ಎಳಮಲೆಯ ಗುರುಶಾಂತದೇವ
↓	↓
ವಿರಕ್ತ ತೋಂಟದಾರ್ಯ	ಸಂಪಾದನೆಯ ಸಿದ್ಧವೀರಣಾರ್ಯ
↓	↓
ಸಂಪಾದನೆಯ ಬೋಳಬಸವ	ಚೆನ್ನಮಲ್ಲಿಕಾರ್ಜುನದೇವ
↓	↓
ಸಂಪಾದನೆಯ ಗುರುಲಿಂಗದೇವ	ಸಂಪಾದನೆಯ ಪರ್ವತೇಶ

ಅಧ್ಯಾಯ –೪

ತೋಂಟದಾರ್ಯ ಪರಂಪರೆಯ
ವಚನ ಸಾಹಿತ್ಯದ ಸ್ಥೂಲ ಪರಿಚಯ

ಅಧ್ಯಾಯ –೪

ತೋಂಟದಾರ್ಯ ಪರಂಪರೆಯವಚನ ಸಾಹಿತ್ಯದ ಸ್ಥೂಲ ಪರಿಚಯ

ಒಂದೊಂದು ಕಾಲಘಟ್ಟದ ಸಾಹಿತ್ಯ ಚರಿತ್ರೆಗೆ ಅವುಗಳದೇ ಆದ ಯುಗಧರ್ಮ, ಉದ್ದೇಶ – ಆಶಯಗಳು, ಪ್ರೇರಣೆ– ಧೋರಣೆಗಳು,ಅವೆಲ್ಲವನ್ನು ಪ್ರೇರೇಪಿಸಬಲ್ಲ ಪ್ರತಿಷ್ಠಿತ ವ್ಯಕ್ತಿ–ಶಕ್ತಿಗಳು, ಅಂದಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಿನ್ನೆಲೆ ಇರುವುದನ್ನು ಕಾಣುತ್ತೇವೆ. ಈ ಹಿನ್ನಲೆಯಲ್ಲಿ ಹನ್ನೆರಡನೆಯ ಮತ್ತು ೧೫–೧೬ನೇ ಶತಮಾನದ ವೀರಶೈವ ಧರ್ಮ ಹಾಗೂ ವಚನಗಳನ್ನು ಪರಿಶೀಲನೆ ಮಾಡಬಹುದಾಗಿದೆ.

೧೨ನೇ ಶತಮಾನದ ಶರಣ ಚಳವಳಿಯ ಸಂದರ್ಭದಲ್ಲಿ ಮಾನವನ ದೈನಂದಿನ ಚಟುವಟಿಕೆಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಧರ್ಮದಿಂದ ಪ್ರಭಾವಿತವಾಗಿದ್ದವು. ವೈಯಕ್ತಿಕ ಬದುಕು ಹೇಗೋ ಸಾಮಾಜಿಕ ಜೀವನವೂ ಹಾಗೆಯೇ ಮತಧರ್ಮ ಸಂಬಂಧಿಯಾದ ನೀತಿ ನಿಯಮಗಳಿಂದ ನಿಯಂತ್ರಿತವಾಗುತ್ತಿದ್ದವು. ವಚನಕಾರರು ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ಹೆಜ್ಜೆಯೂರಿದ ವೇಳೆಯಲ್ಲಿ ಬೌದ್ಧ–ಜೈನಗಳಂತಹ ಅವೈದಿಕ ಪಂಥಗಳ ಜೊತೆಗೆ ವೈದಿಕ ಪರಂಪರೆಗೆ ಸೇರಿದ ಶೈವ–ವೈಷ್ಣವಗಳ ವಿವಿಧ ಪಂಥಗಳು ವಿಧ ವಿಧವಾದ ವಿಧಿಯಾಚರಣೆಗಳನ್ನು ಹೊಂದಿದ್ದವು.

ಪಂಥಗಳು, ಉಪಾಸನ ಧೈವಗಳು ಯಾವುದೇ ಆಗಿರಲಿ, ಆರಾಧನಾ ವಿಧಾನದಲ್ಲಿ ಹಿಂಸೆ– ಭೀಭತ್ಸಗಳು ತುಂಬಿಕೊಂಡಿದ್ದವು. ಪೂಜೆಯ ನೆಪದಲ್ಲಿ ಅಸಹ್ಯಕರ ಆಚರಣೆಗಳು ಇದ್ದವು. ಜನರು ಸಹಜವಾದ ಭಯದ ಕಾರಣದಿಂದಲೂ ಮೂಢನಂಬಿಕೆಗಳಿಂದ ಕೂಡಿದವರಾದುದರಿಂದ ಸಿಕ್ಕಿದ ವಸ್ತುಗಳನ್ನೆಲ್ಲ ಪೂಜಿಸುವ ಪರಿಪಾಠವಿತ್ತು. ಹೀಗಾಗಿ ಜನರ ಮಾನಸಿಕ ಅಸ್ಥಿರತೆ, ಲಂಪಟತೆ, ಧರ್ಮದ ಹೆಸರಿನಲ್ಲಿ ಸುಖಾನ್ವೇಷಣೆ, ಅನಾಚಾರ, ದುರಾಸೆ ಮುಂತಾದವುಗಳು ಆ ಕಾಲದ ಮತ – ಧಾರ್ಮಿಕ ಆಚರಣೆಗಳ ಹಿಂದೆ ತುಂಬಿಕೊಂಡು ವ್ಯಕ್ತಿಗಳಲ್ಲಿ ಅಸಹ್ಯವನ್ನುಂಟು ಮಾಡುವ ಪರಿಸ್ಥಿತಿ ಇತ್ತು.

ಸಮಾಜದ ಬದುಕನ್ನು ರಾಜಕೀಯ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆಗಳೆರಡು ತಮ್ಮ ಬಿಗಿ ಹಿಡಿತದಿಂದ ನಿಯಂತ್ರಿಸುತ್ತಿದ್ದವು. ಸಾಮಾಜಿಕ ಪರಿಸ್ಥಿತಿಯಂತೂ ಧಾರ್ಮಿಕ ಕಟ್ಟು ಪಾಡುಗಳಿಂದ ರೂಪಿತವಾಗಿತ್ತು. ಇದರ ಯಥಾ ಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದು ತನ್ನ ಜವಾಬ್ದಾರಿಯೆಂದು ರಾಜ್ಯಾಡಳಿತ ಭಾವಿಸಿತ್ತು. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯೊಬ್ಬನ ಜೀವಿತವು ಅವನು ಹುಟ್ಟಿದ ಜಾತಿಯ ನೆಲೆಯಲ್ಲಿ ರೂಪಿತವಾಗುತಿತ್ತು. ಜಾತಿ ವ್ಯವಸ್ಥೆಯು ಉಲ್ಲಂಘಿಸಲಾಗದ ಭದ್ರಕೋಟೆಯಾಗಿತ್ತು. ವರ್ಣಾಶ್ರಮದ ಮೇಲಿನ ಮೂರು ವರ್ಗದವರು[೧] ಪರಸ್ಪರ ಪೂರಕವಾಗಿ ನಡೆದು ಕೊಳ್ಳುತ್ತಿದ್ದರು. ಶೂದ್ರವರ್ಗದಲ್ಲಿ ದಿನ ದಿನಕ್ಕೆ ಜಾತಿಗಳ ಸಂಖ್ಯೆ ಕಸುಬನ್ನಾಧರಿಸಿ ಹೆಚ್ಚಾಗುತ್ತಲೇ ಇದ್ದವು. ನಂತರ ಇವು ವಂಶಪಾರಂಪರಿಕವಾಗಿ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುತ್ತಾ ಬಂದವು. ಶರಣರ ಚಳುವಳಿ ಕಾಲಕ್ಕೆ 'ಹೊಲೆ ಹದಿನೆಂಟು ಜಾತಿ' ಎಂಬಂತಹ ಸ್ಥಿತಿ ಉಂಟಾಗಿತ್ತು.

---

೧. ಬ್ರಾಹ್ಮಣರು ಬುದ್ಧಿಯ ಬಲದಿಂದ, ಕ್ಷತ್ರಿಯರು ಅಧಿಕಾರ ಬಲದಿಂದ, ವೈಶ್ಯರು ಹಣ ಬಲದಿಂದ

ಈ ಜಾತಿಗಳಿಂದಾಗಿ ಸಮಾಜವು ವಿಘಟನೆಯಾಗಿ ಭಿನ್ನ ಭಿನ್ನಸಾಮಾಜಿಕ ನೆಲೆಗಟ್ಟುಗಳು ರೂಢಿಗೆ ಬಂದು, ಮೇಲು ಕೀಳೆಂದು ಇಭ್ಭಾಗವಾಗಿ ಸೀಳಿಕೊಂಡವು. ಸ್ತ್ರೀಯರಿಗೆ ಸಮಾಜದಲ್ಲಿ ಯಾವುದೇ ರೀತಿಯ ಮನ್ನಣೆ ಗೌರವಗಳಿರಲಿಲ್ಲ. ಅವಳು ಸ್ವಾತಂತ್ರ್ಯಕ್ಕೆ ಅನರ್ಹಳು ಎಂಬ ವಿಧಿ ನಿಯಮಗಳು ಅವಳನ್ನು ಕಂದಾಚಾರದ ಮಡುವಿನಲ್ಲಿ ಮುಳುಗಿಸಿದವು.

ಕರ್ಮಸಿದ್ಧಾಂತದ ಹಿನ್ನೆಲೆಯಲ್ಲಿ , ಜಾತಿ ವ್ಯವಸ್ಥೆಯ ಅಡಿಯಲ್ಲಿ ವೃತ್ತಿಗಳಲ್ಲೂ ತಾರತಮ್ಯ ಇತ್ತು. ಸಮಾಜದಲ್ಲಿ ಎಲ್ಲಾ ವೃತ್ತಿಗಳೂ ಅವಶ್ಯಕವಾದುದರಿಂದ ಅವುಗಳಲ್ಲಿ ಕೀಳು–ಮೇಲೆಂದು ಪರಿಗಣಿಸುವುದು ಸರಿಯಲ್ಲ ಎಂಬುದು ವಚನಕಾರರ ಅಭಿಪ್ರಾಯ. ಪ್ರತಿಯೊಬ್ಬ ವ್ಯಕ್ತಿ ಬದುಕಲು, ಬದುಕಲು ಬೇಕಾದ ಹಣ ಸಂಗ್ರಹಿಸಲು ಯಾವುದಾದರೊಂದು ವೃತ್ತಿ ಅವಶ್ಯಕವಾಗಿತ್ತು. ಅಂತಹ ವೃತ್ತಿಗಳಿಗೆ ಬಸವಾದಿ ಶರಣರು "ಕಾಯಕ" ಎಂಬ ಹೊಸ ಪರಿಕಲ್ಪನೆಯನ್ನು ರೂಢಿಗೆ ತಂದರು. ಸವಾಜದ ಪ್ರತಿಯೊಬ್ಬ ವ್ಯಕ್ತಿಯು ದುಡಿಯಬೇಕು. ಆ ದುಡಿಮೆ ಪ್ರಾಮಾಣಿಕವಾಗಿರಬೇಕು. ದುಡಿಮೆಗೆ ತಕ್ಕ ಪ್ರತಿಫಲವನ್ನು ಪಡೆಯಬೇಕು. ತನಗೆ ಅವಶ್ಯಕವಾದುದನ್ನು ಬಳಸಿಕೊಂಡು ಉಳಿದುದನ್ನು "ದಾಸೋಹ"ದ ಮೂಲಕ ಸವೆಸಬೇಕು. ಹೀಗೆ ಕಾಯಕ ಮತ್ತು ದಾಸೋಹಗಳಿಂದ ಹೊಸ ಆರ್ಥಿಕ ಸಿದ್ಧಾಂತವೊಂದನ್ನು ತಮ್ಮ ಕನಸಿನ ಒಂದು ಪ್ರಮುಖ ಅಂಶವನ್ನಾಗಿ ಶರಣರು ಅಳವಡಿಸಿಕೊಂಡರು.

ಜೈನ ಮತ್ತು ವೈದಿಕ ಸಮಾಜದ ವ್ಯವಸ್ಥೆಗೆ ಒಂದು ಪರ್ಯಾಯ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಪ್ರಯತ್ನ ವಚನಕಾರರದಾಗಿತ್ತು. ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ರಂಗಗಳಿಗೆ ಸಂಬಂಧಿಸಿದಂತೆ ತಮ್ಮ ಸ್ಪಷ್ಟ ನಿಲುವನ್ನು ಹೊಂದಿದ್ದ ವಚನಕಾರರು ಹೆಚ್ಚಿನ ಸಂಖ್ಯೆಯ ಜನ ಸಾಮಾನ್ಯರನ್ನು ತಮ್ಮೆಡೆಗೆ ಆಕರ್ಷಿಸಿದರು. ಹೀಗೆ ಆಕರ್ಷಿತವಾಗಿ ರೂಪಗೊಂಡ ಬಹುತೇಕ ವಚನಕಾರರು ಕೆಳವರ್ಗದಿಂದ ಬಂದವರಾಗಿದ್ದರೆಂಬುದು ಗಮನಾರ್ಹ. ಅವರಿಗೆ ಆತ್ಮಸ್ಥೈರ್ಯ, ಭರವಸೆಗಳು ಸಿಕ್ಕಿದ್ದು, ಬಸವಾದಿ ಶರಣರ ಸಮ್ಮುಖದಲ್ಲಿ. ಈ ರೀತಿಯ ಜನಪರ ಧೋರಣೆಯಿಂದಾಗಿ ವೀರಶೈವ ಚಳವಳಿಯ ಜಾತಿ ವಿಹೀನ ಸಮಾಜ ವ್ಯವಸ್ಥೆಯೊಂದನ್ನು ರೂಪಿಸುವ ಪ್ರಯತ್ನ ಮಾಡಿದರು.

ಈ ಚಳವಳಿಯ ಕೆಳವರ್ಗದ ಜನರ ನಾಡಿಯಲ್ಲಿ ರಕ್ತ ಸಂಚರಿಸಿ, ಕಣ್ಣಿನಲ್ಲಿ ಹೊಸಕಾಂತಿ ಕಂಡುಬಂದಿರುವುದು ಈ ಕಾಲದಲ್ಲಿ. ಅವರ ಉಸಿರು ದನಿಯಾಗಿ ಹೊರಹೊಮ್ಮಿರುವುದು ಕಂಡುಬರುತ್ತದೆ. ಈ ಜನತೆ ಸಾಮಾಜಿಕ, ಧಾರ್ಮಿಕ ಕ್ರಾಂತಿಯಲ್ಲಿ ಸುಮ್ಮನೆ ಭಾಗವಹಿಸಲಿಲ್ಲ. ಕ್ರಾಂತಿಯ ಮೂಲ ಸೆಲೆಯನ್ನು ಅರ್ಥಮಾಡಿಕೊಂಡು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಕ್ರಾಂತಿ ಆರಂಭವಾಗಿದ್ದೆ ಕೆಳವರ್ಗದವರ ಜೀವಧ್ವನಿಯಾಗಿ. ಇವರಿಗೆ ಮೂಲಾಶ್ರಯವಾಗಿ ವೀರಶೈವ ಧರ್ಮವಿತ್ತು. ಈ ಧರ್ಮವನ್ನು ಒಪ್ಪಿಕೊಂಡ ಎಲ್ಲರೂ ಸರ್ವ ದೃಷ್ಟಿಯಿಂದಲೂ ಸಮಾನರಾಗುತ್ತಿದ್ದರು. ಸಾಮಾಜಿಕ ಅಸಮಾನತೆಯನ್ನು ಧರ್ಮದ ಚೌಕಟ್ಟಿನಲ್ಲಿ ಹೋಗಲಾಡಿಸಿದ್ದು ಸಾಮಾಜಿಕ ಹಿತದೃಷ್ಟಿಯಿಂದ ಬಹುಮುಖ್ಯವಾದುದು.

೧೨ ನೇ ಶತಮಾನದ ವಚನಕಾರರ ಈ ಚಿಂತನೆ ಸಮಾಜದಲ್ಲಿ ಒಂದು ರೀತಿಯ ಚಲನಶೀಲತೆಯನ್ನು ಉಂಟುಮಾಡಿತು. ಈ ಚಲನೆ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿತು. ವಚನಕಾರರು ವ್ಯಕ್ತಿಗಳ ಮುಕ್ತ ಸಂವೇದನೆಗೆ, ಮುಕ್ತ ಛಂದಸ್ಸಿನ ರಚನೆಗಳನ್ನು

ಆಧರಿಸಿದರು. "ಆನು ಒಲಿದಂತೆ ಹಾಡುವೆ" ಎಂಬ ಬಸವಣ್ಣನವರ ಮಾತು ವಚನಕಾರರಿಗೆ ಒಲಿದಂತೆ ಹಾಡುವ ಮುಕ್ತ ಸ್ವಾತಂತ್ರ್ಯ ನೀಡಿತು. ಅಕ್ಕಮಹಾದೇವಿ ಪರಂಪರೆಯೆಂಬ ಬಂಡೆಗಲ್ಲನ್ನು ಸರಿಸಿ ಅಲ್ಲಿ ಹೊಸ ಬೀಜ ಬಿತ್ತುವ ಪ್ರಯತ್ನವನ್ನು ಮಾಡುತ್ತಾಳೆ. ಹೀಗೆ ಮೊಳಕೆಯೊಡೆದು ತಲೆ ಎತ್ತಿ ನಿಂತದ್ದೆ ವಚನ ಸಾಹಿತ್ಯ. ವಚನಕಾರ ತನ್ನ ಬದುಕಿನ ಅನುಭವಗಳನ್ನ ವಚನಗಳ ವಸ್ತುವಾಗಿಸಿಕೊಂಡ. ಅನುಭವಗಳ ಅಭಿವ್ಯಕ್ತಿಯಿಂದಾಗಿ ಬೇರೆ ಬೇರೆ ವಚನಕಾರರ ವಚನಗಳಲ್ಲಿ ವೈವಿಧ್ಯ ಕಾಣಲು ಸಾಧ್ಯವಾಯಿತು. ಅವರು ಬಳಸಿದ ಭಾಷೆ ನೇರವಾಗಿ ಮತ್ತು ಸರಳವಾಗಿತ್ತು.

ಈ ಕಾಲದ ಶರಣರು ಯಾರನ್ನೂ ಸಂತೋಷಪಡಿಸಲು ಬರೆಯಲಿಲ್ಲ. ಇತರರಿಗೆ ನೋವಾಗುತ್ತದೆಂದು ಬರೆಯುವುದನ್ನು ನಿಲ್ಲಿಸಲಿಲ್ಲ. ಅವರು ನುಡಿದಂತೆ ನಡೆದರು. ನಡೆದಂತೆ ನುಡಿದರು. ತಮ್ಮ ಸಿದ್ಧಾಂತಗಳಿಂದ ಒಂದಿನಿತು ಹಿಂದೆ ಸರಿಯಲಿಲ್ಲ. ಅದೇ ಅವರ ವೈಶಿಷ್ಟ್ಯವಾಗಿತ್ತು. ಶರಣರು ಪರ್ಯಾಯ ಸಮಾಜವನ್ನು ನಿರ್ಮಿಸಲು ಸಾಮೂಹಿಕವಾಗಿ ಹೆಣಗಿದರು. ಇವರು ಆರಂಭಿಸಿದ ಸಾಮಾಜಿಕ ಪರಿವರ್ತನೆಯ ಈ ಧಾರ್ಮಿಕ ಕ್ರಾಂತಿ ಒಂದು ಅದ್ಭುತ ಪ್ರಯೋಗ. ಇಲ್ಲಿ ಮಾತು ಬಾರದ ಜನರು ಮಾತಾಡಿದ್ದಾರೆ. ಈ ಚಳುವಳಿಯಲ್ಲಿ ಬಡವರು, ದೀನರು, ದಲಿತರು, ಸಿರಿವಂತರು ಹೀಗೆ ಎಲ್ಲಾ ವರ್ಗದವರು ಭಾಗವಹಿಸಿದರು. ಬರೆದರು ದೇಹವನ್ನೇ ದೇವಾಲಯವನ್ನಾಗಿಸಿ "ಸ್ಥಾವರ" ವನ್ನು ತಿರಸ್ಕರಿಸಿದರು. ಚಲನ ಶೀಲತೆಯನ್ನೇ ಮುಖ್ಯ ತತ್ವವನ್ನಾಗಿ ಸ್ವೀಕರಿಸಿ "ಜಂಗಮ" ತತ್ವವನ್ನು ಪುರಸ್ಕರಿಸಿದರು. ಈ ಎಲ್ಲಾ ಚಿಂತನೆಗಳು ಮತ್ತು ಪರಿವರ್ತನೆಗಳು ಅವರ ವಚನಗಳಲ್ಲಿ ಕಾಣಸಿಗುತ್ತವೆ. "ವಚನಗಳು ಸಾಮಾಜಿಕ–ಧಾರ್ಮಿಕ ಕ್ಷೇತ್ರದಲ್ಲಿ ವಚನಕಾರರು ಕ್ರಾಂತಿಯನ್ನುಂಟುಮಾಡಲು ಬಳಸಿದ ಉಪಕರಣಗಳು".[೨] ಇವು ಆ ಕಾಲದ ಸಮಾಜದ ಅಗತ್ಯದ ಫಲವಾಗಿ ರಚನೆಯಾದವುಗಳು.

ವಚನಕಾರರು ವಸ್ತು, ಭಾಷೆ, ಶೈಲಿಯಲ್ಲಿಯೂ ಸಂಪೂರ್ಣ ಭಿನ್ನವಾದ ಮಾರ್ಗವನ್ನು ಕಂಡುಕೊಂಡರು. ಬೇರೆ ಬೇರೆ ವೃತ್ತಿಯಲ್ಲಿದ್ದ ಸಾಮಾನ್ಯ ಜನರೂ ಕೂಡಾ ವಚನಗಳನ್ನು ಬರೆದರು. ವಚನಗಳ ಮೂಲಕ ತಮ್ಮ ಅನುಭವಗಳನ್ನು, ಚಿಂತನೆಗಳನ್ನು ಅಭಿವ್ಯಕ್ತಗೊಳಿಸಿದರು. ಇವರೆಲ್ಲರಿಗೂ ಹಿನ್ನೆಲೆಯಾಗಿದ್ದ, ವೀರಶೈವಧರ್ಮವು ಬಹಳ ಸರಳ ಬೋಧನೆಗಳಿಂದೊಡಗೂಡಿದ್ದರಿಂದ ಶರಣರಲ್ಲಿ ಮೇಲು ಕೀಳುಗಳಿಲ್ಲದೆ ಎಲ್ಲರೂ ಸಮಾನವೆಂದು ಧರ್ಮವು ವ್ಯಕ್ತಪಡಿಸಿದ್ದರಿಂದ , ಬಸವಣ್ಣನವರ ರಾಜಕೀಯ ಹಾಗೂ ವೈಯಕ್ತಿಕ ಪ್ರಭಾವದಿಂದಾಗಿ ವೀರಶೈವ ಧರ್ಮವು ಬಹುಬೇಗ ಜನರನ್ನು ಆಕರ್ಷಿಸಿತು. ಜನರು ತಂಡೋಪತಂಡವಾಗಿ ಬಂದು ಧರ್ಮದೀಕ್ಷೆಯನ್ನು ಕೈಗೊಂಡರು. ವೀರಶೈವ ಧರ್ಮ ಅಲ್ಪಾವಧಿಯಲ್ಲಿಯೆ ಕರ್ನಾಟಕದ ಪ್ರಬಲ ಧರ್ಮವಾಯಿತು. ಇತರ ಧರ್ಮಗಳಲ್ಲಿ ಅಸಹನೆ ಮಿತಿ ಮೀರಿತು. ಅವು ವೀರಶೈವ ಧರ್ಮವನ್ನು ತುಳಿಯಲು ಪ್ರಯತ್ನಿಸಿದವು.

ಅವುಗಳಲ್ಲಿ ಜೈನ ಮತ್ತು ಪಾಶುಪತ ಧರ್ಮಗಳಿಗಿಂತ ವೈದಿಕ ಧರ್ಮ ರಾಜಕೀಯ ಪ್ರಭಾವ ಬೆಳೆಸಿ ತುಳಿಯಲು ಸರ್ವ ಪ್ರಯತ್ನ ನಡೆಸಿತು. ಹಾಗಾಗಿ ನೇರ ಘರ್ಷಣೆ ವೀರಶೈವಧರ್ಮ ಹಾಗೂ ವೈದಿಕ ಧರ್ಮದ ನಡುವೆ ನಡೆಯಿತು. ವೀರಶೈವ ಧರ್ಮ ತನ್ನಷ್ಟಕ್ಕೆ ತಾನು ಬೆಳೆದಿದ್ದರೆ

---

೨. ಡಾ॥ ಎಂ.ಚಿದಾನಂದ ಮೂರ್ತಿ–'ವಚನ ಸಾಹಿತ್ಯ,' ಪುಟ–೧೫೭

ಘರ್ಷಣೆಗಳಾಗುತ್ತಿರಲಿಲ್ಲವೇನೊ. ಆದರೆ ಪರಂಪರಾಗತವಾಗಿ ಆಚರಣೆಯಲ್ಲಿ ಬಂದಿದ್ದ ಯಜ್ಞವಿಧಿಗಳನ್ನು, ದೇವಾಲಯಗಳನ್ನು, ವರ್ಣವ್ಯವಸ್ಥೆಯನ್ನು ಖಂಡಿಸಿದ್ದೆ ಅಲ್ಲದೆ ಎಲ್ಲರೂ ಒಂದೆ ಎಂಬ ಬೀಜ ಮಂತ್ರ ವೈದಿಕ ಧರ್ಮದ ಅನುಯಾಯಿಗಳಿಗೆ ನುಂಗಲಾರದ ಬಿಸಿತುಪ್ಪವಾಯಿತು. ವೀರಶೈವ ಧರ್ಮ ಉಚ್ಛ್ರಾಯಸ್ಥಿತಿಯಲ್ಲಿದ್ದಾಗಲೆ ಕಲ್ಯಾಣದಲ್ಲಿ ಕ್ಷೋಭೆ ನಡೆಯಿತು. ವೀರಶೈವ ಸಂಘಟನೆ ಛಿದ್ರವಾಯಿತು. ವೀರಶೈವ ಧರ್ಮಕ್ಕೆ ಅದರ ಕ್ರಾಂತಿಕಾರಕ ತತ್ವಗಳೆ ಅದಕ್ಕೆ ಮಾರಕವಾದವು. ಮಾನವೀಯ ನೆಲೆಗಟ್ಟಿನ ಹಿನ್ನಲೆಯ ಸಮಾಜಮುಖಿ ಹೋರಾಟ ಧರ್ಮ, ಜಾತಿ, ದ್ವೇಷಗಳ ವಿಷಬೀಜದಿಂದ ಉತ್ಪತ್ತಿಯಾದ ಬೆಂಕಿಗೆ ಸಿಕ್ಕು ನಾಶವಾಯಿತು. ಜನ ಶಾಂತಿಯನ್ನು ಅರಸಿ ವಲಸೆ ಹೋದರು. ಇದೆ ಸಂದರ್ಭದಲ್ಲಿ ಶರಣರು ವಚನಗಳನ್ನು, ವಚನಗಳ ಕಡತಗಳನ್ನು ಕೈಗೆತ್ತಿಕೊಂಡು ದೇಶಾಂತರ ಹೋದರು. ಈ ಸಂಘರ್ಷದ ಸಂದರ್ಭದಲ್ಲಿ ಎಷ್ಟೋ ವಚನ ಗ್ರಂಥಗಳು, ಹಸ್ತಪ್ರತಿಗಳು ಪ್ರತಿಗಾಮಿ ಶಕ್ತಿಗಳ ಕೈಗೆ ಸಿಕ್ಕಿ ನಾಶವಾದವು. ನಂತರದ ಒಂದೆರಡು ಶತಮಾನದಲ್ಲಿ ಬಸವಾದಿ ಶರಣರು ಹುಟ್ಟುಹಾಕಿದ್ದ ತೀವ್ರವಾದ ಚಳುವಳಿ ಎಲ್ಲಿಯೂ ತಲೆ ಎತ್ತಲಿಲ್ಲ.

ಮಹಮ್ಮದೀಯರ ದಾಳಿಗಳು ಸಹ ಕರ್ನಾಟಕದ ಜನ ಜೀವನವನ್ನು ಅಲ್ಲೋಲ ಕಲ್ಲೋಲ ಮಾಡಿದವು. ಈ ದಾಳಿಗಳು ಮತ ಪ್ರಸಾರದ ಉದ್ದೇಶವನ್ನು ಹೊಂದಿದ್ದುದರಿಂದ ಅನೇಕ ಹಿಂದು ದೇವಾಲಯಗಳು, ಹಿಂದು ಧರ್ಮಕ್ಕೆ ಸಂಬಂಧಪಟ್ಟ ಕೃತಿಗಳು ನಾಶಹೊಂದಿದವು. ಭಾರತೀಯ ಸನಾತನ ಧರ್ಮ ಅವನತಿಯ ಹಾದಿ ಹಿಡಿಯಿತು. ವೀರಶೈವ ಧರ್ಮವನ್ನು ಅವರು ಹಾಳುಮಾಡಿದರೆ, ವೈದಿಕ ಧರ್ಮವನ್ನು ಮಹಮ್ಮದಿಯರು ನಾಶಮಾಡಿದರು. ಎರಡೂ ಧರ್ಮಗಳು ಸಂಕಷ್ಟದ ಸ್ಥಿತಿಯಲ್ಲಿದ್ದಾಗ ವಿಜಯನಗರ ಸಾಮ್ರಾಜ್ಯ ಉದಯವಾಯಿತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಜಯನಗರ ಸಾಮ್ರಾಜ್ಯ ಮೊದಲು ಕೈಗೊಂಡ ಕಾರ್ಯ ಸನಾತನ ಧರ್ಮ ರಕ್ಷಣೆ. ಸನಾತನ ಧರ್ಮದ ಮೂಲಕ ಮಹಮ್ಮದಿಯರನ್ನು ಎದುರಿಸಿ ನಿಲ್ಲಲು ಸಾಧ್ಯವಾಯಿತು. ಅಸ್ತವ್ಯಸ್ತವಾಗಿ ಚದುರಿಹೋಗಿದ್ದ ಧಾರ್ಮಿಕ ಗ್ರಂಥಗಳು ಮತ್ತೆ ಬೆಳಕಿಗೆ ಬಂದವು. ವೈದಿಕ ಧರ್ಮ ಮತ್ತೆ ತಲೆ ಎತ್ತಿ ನಿಲ್ಲುವಂತಾಯಿತು. ಇದಕ್ಕಾಗಿ ಅನೇಕ ವಿದ್ವಾಂಸರು, ದಾಸರು, ರಾಜರುಗಳು ಕಂಕಣ ಬದ್ಧರಾಗಿದ್ದರು. ವೈದಿಕ ಸಾಹಿತ್ಯ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳುತ್ತಲೆ ಪ್ರಬಲವಾಗಿ ಬೆಳೆಯಿತು. ಪ್ರಾಚೀನ ಧರ್ಮಗ್ರಂಥಗಳ ಸಂಗ್ರಹ ಮತ್ತು ವ್ಯಾಖ್ಯಾನಗಳಿಗೆ ಬೇಕಾದ ವಿದ್ವಾಂಸರನ್ನು[೩] ಅರಸರೇ ನಿಯೋಜಿಸಿದರು. "ಈ ಪ್ರಯತ್ನದಲ್ಲಿ ಪರಾಶರ ಸ್ಮೃತಿ, ಸರ್ವ ದರ್ಶನ ಸಂಗ್ರಹ, ಬ್ರಹ್ಮಸೂತ್ರ ವೃತ್ತಿ, ವಿವರ್ಣ ಪ್ರಮೇಯ ಸಂಗ್ರಹ ಮುಂತಾದ ಕೃತಿಗಳು ಮೂಡಿಬಂದವು. ೧೪ನೇ ಶತಮಾನದ ಮಧ್ಯ ಹಾಗೂ ಉತ್ತರ ಭಾಗದಲ್ಲಿ ನಡೆದ ವೈದಿಕ ಸಾಹಿತ್ಯದ ಸಂಕಲನ, ಪರಿಸ್ಕರಣ ಮತ್ತು ವ್ಯಾಖ್ಯಾನ ಸಂಬಂಧಿ ಚಟುವಟಿಕೆಗಳು ಬಹಳ ಬಿರುಸಿನಿಂದ ಸಾಗಿದವು"[೪]. ಇವು ಈ ಕಾಲದ ವಚನ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು.

---

೩. ವಿದ್ವಾಂಸರಾದ ಮಾಧವಾಚಾರ್ಯ ಮತ್ತು ಸಾಯಣಾಚಾರ್ಯರು ವೇದಗಳಿಗೆ ವ್ಯಾಖ್ಯಾನ ಬರೆಯುವ ಸಾಹಸ ಮಾಡಿದರು. ಈ ಕೆಲಸದಲ್ಲಿ ಪಂಚಾಗ್ನಿ ಮಾಧವ, ನರಹರಿ, ಸೋಮಯಾಜಿ, ನಾರಾಯಣ ವಾಜಪೇಯಿ, ಪಂಡರಿದೀಕ್ಷಿತ್ ಮುಂತಾದವರು ಸಹಾಯ ಮಾಡಿದರು.

೪. ಡಾ॥ ಎಸ್.ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ – ದ್ವಿತಿಯಘಟ್ಟ.'. ಪುಟ –೪

ಮಾಧ್ವ ಸಂಪ್ರದಾಯದ ವ್ಯಾಸತೀರ್ಥರು ಹಂಪಿಯ ಬಳಿ ಆನೆಗೊಂದಿಯಲ್ಲಿ ವೃಂದಾವನ ರಚಿಸಿಕೊಂಡು ವಾಸವಾಗಿದ್ದರು. ಇವರು ವಿಜಯ ನಗರ ಅರಸರ ಮೇಲೆ ಸಾಕಷ್ಟು ವಿಶೇಷ ಪ್ರಭಾವ ಉಳ್ಳವರಾಗಿದ್ದರು. ಇವರ ಶಿಷ್ಯ, ಪ್ರಶಿಷ್ಯರಾದ ನರಹರಿತೀರ್ಥ, ಅಕ್ಷೋಭ್ಯ ತೀರ್ಥರು, ವ್ಯಾಸರಾಯ ಮುಂತಾದವರು ತಮ್ಮ ಸಂಪ್ರದಾಯವನ್ನು ಪ್ರಚಾರಮಾಡಿದರು. ಕೀರ್ತನೆಗಳನ್ನು ಬರೆದು ದಾಸ ಸಾಹಿತ್ಯದ ಪ್ರಾಬಲ್ಯಕ್ಕೆ ಕಾರಣರಾದರು.

ಸಾಮ್ರಾಜ್ಯಶಾಹಿ ಹಾಗೂ ಪುರೋಹಿತ ವರ್ಗದವರಿಂದ ಹಿಮ್ಮೆಟ್ಟಿದ್ದ, ೧೩ನೇ ಶತಮಾನದಲ್ಲಿ ಬರಿ ಕಾವ್ಯಗಳಲ್ಲಿ ಉಸಿರಾಡುತ್ತಿದ್ದ ವೀರಶೈವ ಧರ್ಮ ೧೪ ನೇ ಶತಮಾನದ ಹೊತ್ತಿಗೆ ನಿಧಾನವಾಗಿ ಎಚ್ಚೆತ್ತುಕೊಳ್ಳಲಾರಂಭಿಸಿತು. ಇದಕ್ಕೆ ಪ್ರಬಲವಾದ ಪ್ರೇರಣೆ ವೈದಿಕಧರ್ಮ ಮತ್ತು ಸಾಹಿತ್ಯ ಸಂಬಂಧಗಳ ಚಟುವಟಿಕೆಗಳು. ಈ ಚಟುವಟಿಕೆಗಳಿಂದ ಉತ್ತೇಜಿತರಾಗಿಯೋ ಅಥವಾ ಅಲ್ಲಿಂದ ಸೂಚನೆಗಳನ್ನು ತೆಗೆದುಕೊಂಡೊ ವೀರಶೈವಧರ್ಮ ಮತ್ತು ವಚನ ಸಾಹಿತ್ಯದ ಪುನರುಜ್ಜೀವನದಲ್ಲಿ ತೊಡಗುವಂತೆ ಪ್ರೇರೆಪಿತರಾದರು. ಈ ಕಾಲದಲ್ಲಿ ಆಡಳಿತ ನಡೆಸಿದ ಪ್ರೌಢದೇವರಾಯನ ಆಳ್ವಿಕೆಯಂತೂ ವೀರಶೈವ ಸಾಹಿತ್ಯ, ವೀರಶೈವ ಧರ್ಮಗಳ ವಸಂತಕಾಲ. ಪ್ರೌಢದೇವರಾಯನು ಸ್ವತಃ ವೀರಶೈವನಾಗಿದ್ದುದರಿಂದಲೂ, ಅಲ್ಲದೆ ಅವನ ಆಳ್ವಿಕೆಯ ಆಡಳಿತ ಕ್ಷೇತ್ರದಲ್ಲಿ ಮಹಾಮಂತ್ರಿ, ದಂಡನಾಯಕ ಹಾಗೂ ಸಾಮಂತರು ವೀರಶೈವ ಮತಾವಲಂಭಿಗಳಾಗಿದ್ದುದರಿಂದಲೂ ಅಂದು ವೀರಶೈವ ಧರ್ಮಕ್ಕೆ ಸಹಜವಾಗಿ ರಾಜಾಶ್ರಯ ಪ್ರಾಪ್ತವಾಯಿತು.[೫]

ಈ ಕಾಲದಲ್ಲಿ ಪ್ರಸಿದ್ಧರಾದ ನೂರೊಂದು ವಿರಕ್ತರು ವೀರಶೈವ ಧರ್ಮ ಮತ್ತು ಸಾಹಿತ್ಯಕ್ಕೆ ಬಹುದೊಡ್ಡ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಚಾಮರಸ, ಕರಸ್ಥಲದ ವೀರಣ್ಣೊಡೆಯ, ಕರಸ್ಥಲದ ನಾಗಿದೇವ, ಕರಸ್ಥಲದ ಮಲ್ಲಿಕಾರ್ಜುನ, ಸಪ್ತಕಾವ್ಯದ ಗುರುಬಸವ, ಬತ್ತಲೇಶ್ವರ, ನಿರ್ವಾಣಿ ಬೋಳೇಶ ಮೊದಲಾದವರು ಕೃತಿಗಳನ್ನು ರಚಿಸಿ ವೀರಶೈವ ಸಾಹಿತ್ಯವನ್ನು ಉಳಿಸಿ ಬೆಳೆಸಿದ್ದಾರೆ. ಆದರೆ ಬಸವಾದಿ ಶರಣರ ಚಳುವಳಿಯ ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಗಳಿಗೂ ಇವರ ಚಿಂತನೆಗಳಿಗೂ ಬಹಳ ವ್ಯತ್ಯಾಸಗಳಿವೆ. ಇವರ ಚಿಂತನೆಗಳು ವೀರಶೈವ ಧರ್ಮ ಮುಖಿ ಚಿಂತನೆ, ತಾತ್ವಿಕ ನಿಲುವುಗಳು, ಭಕ್ತಿ, ಪೂಜೆ, ಆಚಾರ, ಆಚರಣೆ, ಗುರು ಲಿಂಗ–ಜಂಗಮ, ಮಠ ಪರಂಪರೆಗಳಿಗೆ ಒತ್ತು ನೀಡಿದರು.

ಇದೇ ರೀತಿಯ ಚಿಂತನೆ ಮತ್ತು ಚಟುವಟಿಕೆಗಳು ವೈದಿಕ ಸಂಸ್ಕೃತಿಯಲ್ಲಿ ವೇಗವಾಗಿ ನಡೆಯುತ್ತಿದ್ದಾಗ ಎರಡನೇ ಘಟ್ಟದ ವೀರಶೈವರು ಧರ್ಮದ ಉಳಿವಿಗಾಗಿ ಅದೇ ಮಾರ್ಗವನ್ನು ಅನುಸರಿಸಬೇಕಾಯಿತು. ಹಾಗಾಗಿ ವೀರ ಶೈವಧರ್ಮ, ವೈದಿಕ ಧರ್ಮದ ಅಂಗಧರ್ಮವೇನೋ ಎಂಬಂತೆ ತನ್ನ ಅಸ್ಥಿತ್ವವನ್ನು ಗುರುತಿಸಿಕೊಳ್ಳತೊಡಗಿತು. ಈ ಹಿನ್ನೆಲೆಯೊಳಗೆ ವಚನ ರಚನೆ, ಸಂಕಲನ, ಸಂಪಾದನೆ ಕಾರ್ಯಗಳು ಆರಂಭವಾದವು. ಚದುರಿಹೋಗಿದ್ದ ಹಾಗೂ ಮರೆಯಾಗಿ ಹೋಗಿದ್ದ ವಚನ ಸಾಹಿತ್ಯ ಮತ್ತು ವೀರಶೈವ ಧರ್ಮವನ್ನು ಒಗ್ಗೂಡಿಸುವ ಒಂದು ರೀತಿಯ ಪುನರುಜ್ಜೀವನ ಪ್ರಯತ್ನ ನಡೆಯಿತು.

---

೫. ಲಕ್ಕಣ ದಂಡೇಶ, ಭಕ್ತಿ ಭಂಡಾರಿ ಜಕ್ಕಣಾರ್ಯ, ಗುರುರಾಯಮಂತ್ರಿ, ಭಿಕ್ಷಾವೃತ್ತಿ ಒಡೆಯ, ನಾಗಣ್ಣ ದಣ್ಣಾಯಕ, ಕರಸ್ಥಲದ ವೀರಣ್ಣೊಡೆಯ ಮುಂತಾದ ಮಂತ್ರಿ ಹಾಗು ದಣ್ಣಾಯಕರುಗಳು ವೀರಶೈವ ಮತವಲಂಬಿಗಳಾಗಿದ್ದರು.

ಬಸವಾದಿ ಶರಣರ ಮೊದಲ ಘಟ್ಟದ ವಚನ ಸಾಹಿತ್ಯವನ್ನು ವೀರಶೈವಧರ್ಮದ ಹೊರಗಿಟ್ಟು ಶುದ್ಧ ಸಾಹಿತ್ಯವಾಗಿ ನೋಡುವುದು ಬಹುಶಃ ಸಾಧ್ಯವಾಗಬಹುದು. ಆದರೆ ಎರಡನೇ ಮತ್ತು ಮೂರನೇ ಘಟ್ಟದಲ್ಲಿ[೧] ವೀರಶೈವಧರ್ಮವೇ ಪ್ರಮುಖ ನೆಲೆಗಟ್ಟಾಗಿತ್ತು. ಅದರ ಉಳಿವು ಬಹಳ ಪ್ರಮುಖ ಚಿಂತನೆಯಾಗಿತ್ತು. ಅದಕ್ಕೆ ಬೇಕಾದ ಎಲ್ಲಾ ರೀತಿಯ ದಾರಿಗಳನ್ನು ಈ ಕಾಲದ ವೀರಶೈವರು ಗುರುತಿಸಿಕೊಂಡರು. ಹಿಂದಿನ ವಚನಕಾರರ ಮತ್ತು ವಚನಗಳ ಪ್ರಭಾವಕ್ಕೆ ಒಳಗಾದರೂ ಅವರನ್ನು ಮತ್ತು ಅವರ ವಚನಗಳನ್ನು ಕೇವಲ ಧಾರ್ಮಿಕ ದೃಷ್ಟಿಯಿಂದ ನೋಡಿ ಭಕ್ತರಾಗಿ ಉಳಿದರು. ಈ ಹಿನ್ನೆಲೆಯಲ್ಲಿಯೆ ಬಸವಾದಿ ಶರಣರ ವಚನಗಳ ಸಂಗ್ರಹ, ಸಂಕಲನ, ಸಂಪಾದನೆ ಮತ್ತು ವಚನ ರಚನೆಗಳು ನಡೆದವು. ಈ ಕಾಲದಲ್ಲಿ ಸೃಜನಾತ್ಮಕ ಹಾಗು ಸೃಜನೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದ ವಚನಕಾರರಲ್ಲಿ ಸಾಮಾನ್ಯವಾಗಿ ವಿರಕ್ತರು, ಮಠಪರಂಪರೆಯವರು, ಗುರು–ಶಿಷ್ಯ ಪರಂಪರೆಯವರಾಗಿದ್ದಾರೆ. ಇವರಲ್ಲಿ ಯಾರೂ ಕೆಳವರ್ಗದವರಿಲ್ಲ. ಸ್ತ್ರೀಯರೂ ಇಲ್ಲ. ಇವರ ಪ್ರಮುಖ ಆಸಕ್ತಿಯ ಕೇಂದ್ರ ವೀರಶೈವ ಧರ್ಮದ ಪುನರುಜ್ಜೀವನವಾಗಿತ್ತು. ವಚನ ಸಾಹಿತ್ಯಿಕ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ಸಂಗ್ರಹಿಸಿದ ವಚನಗಳಿಗೆ ವ್ಯಾಖ್ಯಾನ ಸಹಿತ, ಸರಳವಾಗಿ ಅರ್ಥೈಸುವ, ವಿಶಿಷ್ಟವಾದ ತಾತ್ವಿಕ ಅರ್ಥವಿಟ್ಟು ಹೇಳುವ ಹೊಣೆಯನ್ನು ಹೊತ್ತು ಕೊಂಡರು. ಈ ಎಲ್ಲಾ ಪ್ರಯತ್ನಗಳು ವೀರಶೈವ ಧರ್ಮದ ಮಹತ್ವವನ್ನು ಸಾರುವ, ಅದರ ಉಳಿವಿಗಾಗಿ, ಬೆಳವಣಿಗೆಗಾಗಿ ಮಾಡಿದ ಪ್ರಯತ್ನಗಳಾಗಿವೆ. ಈ ಯಾವುದೇ ಪ್ರಯತ್ನಗಳು ಬಸವಾದಿ ಶರಣರು ಮಾಡಿದ ಪ್ರಯತ್ನಗಳಾಗಲಿಲ್ಲ.[೨]

ಇದಕ್ಕೆ ಮೂಲ ಕಾರಣ ಎರಡೂ ಕಾಲಘಟ್ಟಗಳ ತುಡಿತ ಭಿನ್ನ ಸ್ವರೂಪದ್ದಾಗಿತ್ತು. ಎರಡು ಮತ್ತು ಮೂರನೆ ಘಟ್ಟದ ಈ ಶರಣರಿಗೆ ಬಸವಾದಿ ಶರಣರ ವಚನಗಳನ್ನು ಉಳಿಸುವುದರ ಜೊತೆ ಧರ್ಮದ ಪುನರುಜ್ಜೀವನ ಮಹತ್ವದ ಕರ್ತವ್ಯವಾಗಿತ್ತು. ಹಾಗಾಗಿ ಇವರ ವಚನ ರಚನೆ ಜೀವನ ಹಾಗೂ ಸಮಾಜ ಮುಖಿಯಾಗದೆ ಧರ್ಮಮುಖಿಯಾದುದು ಇವರು ತಮ್ಮಷ್ಟಕ್ಕೆ ತಾವೇ ನಿರ್ಮಿಸಿಕೊಂಡ ಪರಿಧಿಯಾಗಿದೆ. ಸಂಪ್ರದಾಯ, ಆಚಾರ ವ್ಯವಹಾರಗಳನ್ನು, ಪರಂಪರಾಗತ ಮೌಲ್ಯಗಳನ್ನು ಒಪ್ಪಿಕೊಂಡ, ವ್ಯವಸ್ಥಿತ ಧರ್ಮದ ಪರಿಪಾಲಕರಾಗಿ ಕಾಣುವ ಇವರ ವಚನಗಳಲ್ಲಿ ಅನುಭವ ನಗಣ್ಯವಾಗಿ ಶಾಸ್ತ್ರ ಪಠಣ, ಓದು, ಪೂಜೆ, ಅನುಷ್ಠಾನ, ಧ್ಯಾನ ಅನುಸಂಧಾನಗಳಿಗೆ ಮಾತ್ರ ಹೆಚ್ಚು ಮೀಸಲಾದ ಬದುಕು ಇವರದಾಗಿತ್ತು. ಸಾಮಾಜಿಕ ವಿಷಮತೆಗಳಾದ ಮೇಲ್ಜಾತಿ–ಕೆಳಜಾತಿ, ಮೇಲ್ವರ್ಗ–ಕೆಳವರ್ಗ, ಆಳು–ಅರಸ, ಹೆಣ್ಣು–ಗಂಡು ಮುಂತಾದುವುಗಳ ಅರಿವು ಅಷ್ಟಾಗಿ ಬರಲಿಲ್ಲ. ಆದ್ದರಿಂದಲೇ ಇವರ ಯಾವ ವಚನಗಳಲ್ಲೂ ಇವುಗಳ ಪ್ರಸ್ತಾಪವಿಲ್ಲ. ಇವರ ವಚನಗಳಲ್ಲಿ ತತ್ವೋಪದೇಶ ಮುಖ್ಯವಾಗಿ ಕಾಣುತ್ತದೆ.

---

೧. ಎರಡನೆ ಘಟ್ಟ– ೧೧೧ ವಿರಕ್ತರ ಕಾಲ, ೩ನೇ ಘಟ್ಟ ತೋಂಟದ ಸಿದ್ಧಲಿಂಗರ ನೇತೃತ್ವದ ೭೦೧ ವಿರಕ್ತರ ಕಾಲ.

೨. ಧಾರ್ಮಿಕ ಪ್ರತಿಭಟನೆ, ಧೈರ್ಯ ಕೆಚ್ಚು, ಉತ್ಸಾಹ, ಸರ್ವ ಸಮಾನತೆ ದೃಷ್ಟಿ ಸಾಮಾಜಿಕ ಕಳಕಳಿಗಳು ಮುಖ್ಯವಾಗಿದ್ದವು. ವರ್ಗ, ವರ್ಣ ಮತ್ತು ಲಿಂಗ ಭೇದಗಳನ್ನು ಖಂಡಿಸಿದರು. ಸ್ವಾತಂತ್ರ್ಯ ಸೌಹಾರ್ದತೆಯನ್ನು ಸಾರಿದರು.

ಈ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಮಠಗಳ ನಿರ್ಮಾಣ, ಗುರುಗಳ ಪಟ್ಟಾಭಿಷೇಕ ಕ್ರಿಯೆಗಳು ನಡೆದವು. ಈ ಗುರುಗಳು ಸಮಾಜ ಕೇಂದ್ರಿತ ವ್ಯಕ್ತಿಗಳಾದರು. ದೇವರ ಅಪರಾವತಾರವಾದರು. ಪವಾಡ ಪುರುಷರಾದರು. ಇವರಿಗೆ ವ್ಯಕ್ತಿ ಪೂಜಿತ ಭಕ್ತರು ಹುಟ್ಟಿಕೊಂಡರು. ಮಠಗಳು ವೀರಶೈವ ಧರ್ಮದ ಧಾರ್ಮಿಕ ಕೇಂದ್ರಗಳಾದವು. ಬಸವಾದಿ ಶರಣರಂತಹ ಧಾರ್ಮಿಕ ಕ್ರಾಂತಿಕಾರಿಗಳು ಈ ಕಾಲದಲ್ಲಿ ದೈವ ಸ್ವರೂಪವನ್ನು ಪಡೆದುಕೊಂಡರು. ಅವರುಗಳು ರಚಿಸಿದ ವಚನಗಳು ದೈವತ್ವದ ಸಾಕ್ಷಾತ್ಕಾರಕ್ಕೆ ಸೋಪಾನಗಳಾದವು. ಈ ಕೆಲಸ ಹರಿಹರ, ರಾಘವಾಂಕ, ಸಿದ್ಧರಾಮರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಬಸವಣ್ಣನಲ್ಲಿ ಮೂಲ ಜೀವ ಸೆಲೆಯಾಗಿದ್ದ ಸಾಮಾಜಿಕ ಕಳಕಳಿ ಸಂಪೂರ್ಣ ಮಾಯವಾಗಿ ಬಿಡುತ್ತದೆ. ಪ್ರತಿಭಟನಾತ್ಮಕವಾದ ಸಮಾಜ ದರ್ಶನ ಮುಖ್ಯವಾಗಲೇ ಇಲ್ಲ. ಅದರ ಪರಿಣಾಮವಾಗಿ ಬಸವಾದಿ ಶರಣರ ಕಾಲದಲ್ಲಿ ಈ ಪ್ರತಿಭಟನೆಯಲ್ಲಿ ತೊಡಗಿಸಿಕೊಂಡಿದ್ದ ಸಾಮಾನ್ಯ ವರ್ಗ ಮುಂಚೂಣಿಗೆ ಬರಲೇ ಇಲ್ಲ. ವಚನ ರಚನೆಯಲ್ಲೂ, ಧಾರ್ಮಿಕ ಚಟುವಟಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ. ಅಂತಹ ವಾತಾವರಣ ಸಮಾಜದಲ್ಲಿ ನಿರ್ಮಾಣವಾಗಲೇ ಇಲ್ಲ. ಹಾಗಾಗಿ ಇಲ್ಲಿ ಸಾಮಾಜಿಕ ಪ್ರತಿಭಟನೆ ಕಡಿಮೆಯಾಯಿತು. ವೀರಶೈವ ಧರ್ಮದ ಕ್ರಾಂತಿಕಾರಕ ಗುಣ ತಣ್ಣಗಾಗಿ ಅದು ವ್ಯವಸ್ಥಿತ ಮತವಾಗಿ ಸ್ಥಾವರವಾಗುತ್ತ ಬಂದಿರುವುದು ಕಂಡುಬರುತ್ತದೆ.

ಇಲ್ಲಿ ಸಾಧಕನ ಅಂತರಂಗದ ಪ್ರಪಂಚಕ್ಕೆ ಒತ್ತು ನೀಡಲಾಗಿದೆ. ವ್ಯಕ್ತಿಯ ಲೌಕಿಕ ಜೀವನ ಮುಖ್ಯವಾಗಲೇ ಇಲ್ಲ. ಅವನ ಮನೋಮಯ ಜೀವನ ಮತ್ತು ಅದರ ಸಮಸ್ಯೆಗಳು ಪ್ರಾಮುಖ್ಯವನ್ನು ಪಡೆದುಕೊಂಡವು. ಇಲ್ಲಿ ಸಂಸಾರ ಭವ್ಯ ಅರಣ್ಯವಾಗಿದೆ. ಮಾಯೆ ನಮ್ಮನ್ನು ಕಾಡುತ್ತಾಳೆ. ದಾರಿತಪ್ಪಿಸುತ್ತಾಳೆ. ಗುರು ಕರುಣೆಯಿಂದ ವ್ಯಕ್ತಿಗೆ ಮುಂದಿನ ದಾರಿ ಕಾಣುತ್ತದೆ. ಅದೇ ದಾರಿಯಲ್ಲಿ ಮುನ್ನಡೆದರೆ ಪರಮಾತ್ಮನಲ್ಲಿ ಐಕ್ಯನಾಗುತ್ತಾನೆ. ಈ ಹಿನ್ನಲೆಯಲ್ಲಿ ರಚನೆಯಾದ ಇವರ ರಚನೆಗಳು ಧರ್ಮಕೇಂದ್ರಿತ ರಚನೆಗಳಾದವು.

ಧರ್ಮ ಪ್ರಚಾರಕ್ಕೆ, ಧರ್ಮದ ಅಸ್ತಿತ್ವಕ್ಕೆ ಮತ್ತೆ ಪುಷ್ಟಿಯನ್ನು ನೀಡಿದ್ದು ವಚನ ಸಾಹಿತ್ಯವೆಂಬುದು ವಿಪರ್ಯಾಸ. ವಚನಗಳ ಮೂಲ ಉದ್ದೇಶವೇ ಇಲ್ಲಿ ಅದಲು ಬದಲಾಯಿತು. ಅವರು ಬರೆದದ್ದು ಸಮಾಜಕ್ಕಾಗಿ, ಅವರಲ್ಲಿ ಸಮಾಜ ನಿಷ್ಠ ಕ್ರಾಂತಿಕಾರಕ ಗುಣಗಳಿದ್ದವು. ಜಾತಿಮುಕ್ತ, ಸಮಾಜ ನಿಷ್ಠಗುಣಗಳು, ಬಸವಣ್ಣ ಮತ್ತು ಅವರ ಅನುಯಾಯಿಗಳ ತತ್ವಚಿಂತನೆಗಳೆ ವೀರಶೈವ ಧರ್ಮದ ಅವನತಿಗೆ ಮೂಲಕಾರಣವೆಂದು ಭಾವಿಸಿದ ಇವರು ಬಸವಾದಿ ಶರಣರ ಸಮಾಜ ಕೇಂದ್ರಿತ ಆಂದೋಲನ ವಿಚಾರವನ್ನು ಕೈಬಿಟ್ಟು ಧರ್ಮಕೇಂದ್ರಿತ ವಿಚಾರಗಳನ್ನು ಮಾತ್ರ ಕೈಗೆತ್ತಿಕೊಂಡರು. ಧರ್ಮವನ್ನು ಕೇವಲ ಧರ್ಮವಾಗಿ ಮಾತ್ರ ಪ್ರಸಾರ ಮಾಡಲು ಬೇಕಾದ ಭೂಮಿಕೆ ಸಿದ್ಧವಾಯಿತು. ಇತರ ಧರ್ಮಗಳಂತೆಯೆ ವಿಧಿ, ನಿಷೇಧ, ಕರ್ಮಾಚರಣೆಗಳನ್ನು ಬೆಳಸಿಕೊಂಡು ಒಂದು ಜಡ ಧರ್ಮವಾಗಿದ್ದ ಕಾಲವಾಯಿತು.[೮] ಇದು ವೀರಶೈವ ಧರ್ಮ ಈ ಕಾಲಕ್ಕೆ ವಿಧಿ ನಿಷೇಧಗಳುಳ್ಳ ಒಂದು ಸ್ಥಾವರವಾಗಿ ಮತ್ತು ಮತವಾಗಿ ನೆಲೆಗೊಂಡಿತ್ತೆಂಬುದರ ದ್ಯೋತಕವಾಗಿದೆ.

---

೮. ಸ್ವತಂತ್ರ ಸಿದ್ಧಲಿಂಗೇಶನು ತನ್ನದೊಂದು ವಚನ (ವ.೧೧೦)ದಲ್ಲಿ 'ಜನ ತಮ್ಮ ಕುಲಗೋತ್ರ, ಜಾತಿ, ಧರ್ಮಗಳ ಆಚಾರವನ್ನು ತಪ್ಪಿನಡೆಯಬಾರದು" ಎಂದು ಹೇಳುತ್ತಾನೆ. (ಸಂ). ಚಂದ್ರಶೇಖರಶಾಸ್ತ್ರಿ ಮತ್ತು ಸೋಮಶೇಖರ ಶಾಸ್ತ್ರಿ.

ಕಲ್ಯಾಣ ಕ್ರಾಂತಿಯ ನಂತರ ಮೊದಲ ಬಾರಿಗೆ ನೂರೊಂದು ವಿರಕ್ತರು ವೀರಶೈವ ಧರ್ಮದ ಉಳಿವಿಗಾಗಿ ಶ್ರಮಿಸಿದರು. ಧಾರ್ಮಿಕ ಹಿನ್ನಲೆಯಲ್ಲಿ ಬಸವಾದಿ ಶರಣರ ವಚನಗಳನ್ನು ಸಂಗ್ರಹಿಸಿದರು, ಸಂಕಲಿಸಿದರು, ಸಂಪಾದನೆ ಮಾಡಿದರು. ವ್ಯಾಖ್ಯಾನ ಟೀಕೆ ಮುಂತಾದ ಕಾರ್ಯಗಳನ್ನು ಮಾಡಿದರು. ಇವರಲ್ಲಿ ಮಹಾಲಿಂಗದೇವ, ಜಕ್ಕಣಾರ್ಯ, ಲಕ್ಕಣ್ಣ ದಂಡೇಶ ಕಲ್ಲುಮಠದ ಪ್ರಭುದೇವ, ಕರಸ್ಥಲದ ನಾಗಿದೇವ, ಕರಸ್ಥಲದ ಮಲ್ಲಿಕಾರ್ಜುನ ಮುಂತಾದವರು ಪ್ರಮುಖರಾಗಿದ್ದಾರೆ. ಚಾಮರಸ 'ಪ್ರಭುಲಿಂಗಲೀಲೆ'ಯನ್ನು ಬರೆದರೆ, ಶಿವಗಣ ಪ್ರಸಾದಿ ಮಹಾದೇವಯ್ಯ 'ಶೂನ್ಯ ಸಂಪಾದನೆ'ಯನ್ನು ರಚಿಸಿದನು. ಹೀಗೆ ವೀರಶೈವ ಸಾಹಿತ್ಯಕ್ಕೆ, ಶರಣರಿಗೆ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳು ಬಿರುಸಾಗಿ ನಡೆದದ್ದರಿಂದ ವಚನ ಸಾಹಿತ್ಯ ಹಾಗೂ ಧರ್ಮ ಎರಡೂ ಉಳಿದವು ಹಾಗೂ ಪ್ರಚಾರವನ್ನು ಪಡೆದುಕೊಂಡವು.

ವೀರಶೈವ ಸಾಹಿತ್ಯ ಮತ್ತು ಧರ್ಮ ಬಹಳ ಉತ್ಕರ್ಷವನ್ನು ಪಡೆದದ್ದು ತೋಂಟದ ಸಿದ್ಧಲಿಂಗರ ನೇತೃತ್ವದಲ್ಲಿ. ವೀರಶೈವ ಧರ್ಮದ ಇತಿಹಾಸದಲ್ಲಿ ಅಲ್ಲಮನನ್ನು ಬಿಟ್ಟರೆ ಇವನಷ್ಟು ಪ್ರಭಾವಶಾಲಿಯಾದ ಧಾರ್ಮಿಕ ಗುರು ಮತ್ತೊಬ್ಬನಿಲ್ಲ. ಇವನ ಪ್ರಶಿಷ್ಯ ವಿರಕ್ತ ತೋಂಟದಾರ್ಯನು 'ಸಿದ್ದೇಶ್ವರ ಪುರಾಣ'ವನ್ನು, ಇದೇ ಕಾಲದಲ್ಲಿದ್ದ ಶಾಂತೇಶನು " ತೋಂಟದ ಸಿದ್ಧೇಶ್ವರ ಪುರಾಣ" ವನ್ನು ಬರೆದಿರುವುದು ತೋಂಟದ ಸಿದ್ಧಲಿಂಗಯತಿಯ ಧಾರ್ಮಿಕ ಪ್ರಭುತ್ವದ ಅರಿವಾಗುತ್ತದೆ. ಇದಲ್ಲದೆ ಸ್ವತ: ತೋಂಟದ ಸಿದ್ದಲಿಂಗರೆ 'ಷಟ್‌ಸ್ಥಲ ಜ್ಞಾನಸಾರಾಮೃತ' ಎಂಬ ಗ್ರಂಥವನ್ನು ಬರೆದಿದ್ದಾರೆ. ಎಂ.ಚಿದಾನಂದ ಮೂರ್ತಿಯವರು "ತೋಂಟದ ಸಿದ್ಧಲಿಂಗರು ಕೃತಿಯನ್ನು ಮಾತ್ರ ಬರೆಯಲಿಲ್ಲ. ಆತ ಬರೆದದ್ದು ಕವಿಗಳನ್ನು, ವಚನಕಾರರನ್ನು, ವೀರಶೈವ ಮೂರ್ತಿಮತ್ತಾಗಿರುವ ಗುರುಗಳನ್ನು ಮತ್ತು ಶಿಷ್ಯರನ್ನು[೯]" ಎಂದು ಹೇಳುತ್ತಾರೆ. ಅಂದರೆ ಈತನ ನಂತರ ಒಂದು ಪರಂಪರೆಯ ನಿರ್ಮಾಣವಾಯಿತು. ವಚನ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ವೀರಶೈವ ಧರ್ಮ ತೋಂಟದ ಸಿದ್ಧಲಿಂಗರ ಶಿಷ್ಯ – ಪ್ರಶಿಷ್ಯರಿಂದಾಗಿ ನಾಡಿನಾದ್ಯಂತ ಹರಡಿತು. ಮಠ ಪರಂಪರೆಗೆ ನಾಂದಿಹಾಡಿತು. ಇಂದಿಗೂ ತೋಂಟದ ಸಿದ್ಧಲಿಂಗ ಪರಂಪರೆ ನಾಡಿನ ಉದ್ದಗಲಕ್ಕು ತಲೆ ಎತ್ತಿ ನಿಂತಿರುವುದು ಕಂಡುಬರುತ್ತದೆ."ಮೂಲೆಯಲ್ಲಿ ಹುದುಗಿದ್ದ ಧರ್ಮಕ್ಕೆ ಸಾಮಾಜಿಕ ಆಯಾಮ ಎಂಬ ಪ್ರಾಣ ತುಂಬಿ ಪ್ರಚಾರ ಮಾಡಿದವರು ಬಸವಾದಿ ಶರಣರು. ಅದು ಪ್ರಬಲ ಧರ್ಮವಾಗಿ ಲಕ್ಷಾಂತರ ಅನುಯಾಯಿಗಳನ್ನು ಪಡೆದದ್ದು ಹದಿನೈದನೆಯ ಶತಮಾನದಲ್ಲಿ[೧೦] ಎಂಬ ಮಾತು ಉತ್ಪ್ರೇಕ್ಷೆಯಲ್ಲ.

ಹನ್ನೆರಡನೆಯ ಶತಮಾನದಲ್ಲಿ ಪೂರ್ಣ ಪ್ರವಾಹವಾಗಿ ಹರಿಯಲು ಹೊರಟು ಕಲ್ಯಾಣದ ಕ್ರಾಂತಿಯಿಂದ ನಿಂತು ಹೋಗಿದ್ದ ವಚನ ಸಾಹಿತ್ಯ, ವಿಜಯ ನಗರದ ಅರಸು ಪ್ರೌಢದೇವರಾಯ ಮತ್ತು ತೋಂಟದ ಸಿದ್ಧಲಿಂಗಯತಿಗಳ ಕಾಲದಲ್ಲಿ ಅರಮನೆ–ಗುರುಮನೆಗಳನ್ನು ಆಶ್ರಯಿಸಿ ಮತ್ತೆ ಹರಿಯತೊಡಗಿತು. ಬಸವ ಮುಂತಾದ ವಚನಕಾರರ ನಂತರ ಸುಮಾರು ಮುನ್ನೂರು ವರ್ಷಗಳಾದ ಮೇಲೆ ಮತ್ತೆ ವಚನಗಳನ್ನು ರಚಿಸಿದವರಲ್ಲಿ ಸಿದ್ಧಲಿಂಗಯತಿಗಳೇ

---

೯. ಡಾ॥ ಎಂ. ಚಿದಾನಂದ ಮೂರ್ತಿ – 'ಸಂಶೋಧನ ತರಂಗ.' ಪುಟ ೬೬.

೧೦. ಡಾ॥ ಎಂ. ಚಿದಾನಂದ ಮೂರ್ತಿ– 'ಸಂಶೋಧನ ತರಂಗ.' ಪುಟ ೬೭

ಮೊದಲನೇಯವರು. ತಮ್ಮ ಶಿಷ್ಯರಿಗೂ ವಚನ ರಚನೆ, ಸಂಗ್ರಹ, ಸಂಕಲನ ಮತ್ತು ವ್ಯಾಖ್ಯಾನ ಮಾಡಲು ಪ್ರೇರಣೆ ನೀಡಿದರು. ವಚನಗಳ ರಚನೆಯ ಇತಿಹಾಸದಲ್ಲಿ ಎರಡನೆಯ ಯುಗವೆಂದು ಕರೆಯಿಸಿಕೊಂಡಿರುವ ಹದಿನೈದನೆಯ ಶತಮಾನದ ವ್ಯಕ್ತಿಗಳಲ್ಲಿ ಅಗ್ರ ಪಂಕ್ತಿಗೆ ಸೇರತಕ್ಕ ಮಹಾನುಭಾವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇವರು ಮತ್ತು ಇವರ ಶಿಷ್ಯ ಪರಂಪರೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು[೧೧].

*. ಸ್ವತಂತ್ರ ವಚನಕಾರರು
*. ವಚನ ಸಂಕಲನಕಾರರು.

*** ಸ್ವತಂತ್ರ ವಚನಕಾರರು :-**

೧. ತೋಂಟದ ಸಿದ್ಧಲಿಂಗೇಶ್ವರ
೨. ಗುಮ್ಮಾಳಾಪುರದ ಸಿದ್ಧಲಿಂಗ
೩. ಸ್ವತಂತ್ರ ಸಿದ್ಧಲಿಂಗೇಶ್ವರ
೪. ಘನಲಿಂಗಿದೇವ
೫. ದೇಶಿಕೇಂದ್ರ ಸಂಗನ ಬಸವಯ್ಯ
೬. ಇಮ್ಮಡಿ ಮುರಿಗಾ ಗುರುಸಿದ್ಧ
೭. ಗುರುಸಿದ್ಧ ದೇವ
೮. ಬಸವಲಿಂಗದೇವ
೯. ಸಂಗನ ಬಸವೇಶ್ವರ ದೇವರು
೧೦. ಸಿದ್ಧವೀರ ದೇಶಿಕೇಂದ್ರ
೧೧. ಎಳಂದೂರು ಪರ್ವತ ಶಿವಯೋಗಿ
೧೨. ಮುದ್ವೀರ ಸ್ವಾಮಿ
೧೩. ಮೂರು ಸಾವಿರ ಮುಕ್ತಿಮುನಿ.
೧೪. ಗೋಣಿಯ ಮಾರಯ್ಯ
೧೫. ನಿರಾಲಂಭ ಪ್ರಭುದೇವ
೧೬. ಪರಂಜ್ಯೋತಿ
೧೭ ಅಜ್ಞಾತ ವಚನ ಸಂಕಲನಕಾರ-೧
೧೮ ಅಜ್ಞಾತ ವಚನ ಸಂಕಲನಕಾರ-೨
೧೯ ಅಜ್ಞಾತ ವಚನ ಸಂಕಲನಕಾರ-೩
೨೦. ಗುಹೇಶ್ವರಯ್ಯ
೨೧. ಚನ್ನಯ್ಯ (ಕಂಡಿತದ ವಚನಗಳು)

---

೧೧. ಇದೇ ಕಾಲದಲ್ಲಿ ವಚನ ಸಂಗ್ರಹಕಾರರು, ಸಂಪಾದನಕಾರರು,ವ್ಯಾಖ್ಯಾನಕಾರರು ಇದ್ದಾರೆ.

೧. ತೋಂಟದ ಸಿದ್ಧಲಿಂಗೇಶ್ವರ (ಸು.೧೫೪೦)

ಕಲ್ಯಾಣದ ಕ್ರಾಂತಿಯ ತರುವಾಯದ ದಿನಮಾನಗಳಲ್ಲಿ ವೀರಶೈವ ಧರ್ಮ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವಲ್ಲಿ ಮಹತ್ವದ ಪಾತ್ರ ತೋಂಟದ ಸಿದ್ಧಲಿಂಗ ಶಿವಯೋಗಿಗಳದು. ಅಲ್ಲಮ ಪ್ರಭು ಸಂಪ್ರದಾಯದ ಶೂನ್ಯ ಸಿಂಹಾಸನದ ಅಧಿಪತಿಗಳಾಗಿ ಅನಾಥವಾಗಿದ್ದ ಅನುಭವ ಪರಂಪರೆಯನ್ನು ಎತ್ತಿ ಹಿಡಿದ ರೀತಿ ಅನನ್ಯವಾದುದು. ಇದಕ್ಕೋಸ್ಕರ ನಿರಂಜನ ಮೂರ್ತಿಯಾಗಿ ಲೋಕ ಸಂಚಾರ ಮಾಡಿದರು. ಈ ಹಿನ್ನೆಲೆಯಲ್ಲಿ ಸ್ವತ: ತಾವೇ ವಚನ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕಿದರು. ಹಾಗೆಯೆ ಕಳೆದು ಹೋಗುತ್ತಲಿದ್ದ ವಚನ ಸಾಹಿತ್ಯವನ್ನು ಸಂರಕ್ಷಿಸಲು ಹಾಗೂ ಸೃಷ್ಟಿಸಲು ಶಿಷ್ಯರಿಗೆ ಮಾರ್ಗದರ್ಶನ ನೀಡಿದರು. ಸಿದ್ಧಲಿಂಗರ ಪರಿಶ್ರಮ ಹಾಗೂ ಮಾರ್ಗದರ್ಶನದಿಂದಾಗಿ ಅಪಾರವಾದ ವಚನ ರಾಶಿ ನಿರ್ಮಾಣವಾದುದಲ್ಲದೆ ಬಸವಾದಿ ಶರಣರ ವಚನಗಳನ್ನು ಸಂಗ್ರಹ, ಸಂಕಲನ, ಸಂಪಾದನೆ ಮಾಡಿದ್ದಲ್ಲದೆ, ಈ ಕಾಲದಲ್ಲಿ ಶಾಸ್ತ್ರಸಾಹಿತ್ಯ, ಕಾವ್ಯ ಕೃತಿಗಳು ಜನ್ಮ ತಾಳಿದವು. ಹಾಗಾಗಿ ಶರಣ ಸಾಹಿತ್ಯ ಚರಿತ್ರೆಯಲ್ಲಿ ಇವರಿಗೆ ತುಂಬಾ ಗೌರವದ ಸ್ಥಾನ ಲಭಿಸಿದೆ.

ಇವರು ಬಸವೋತ್ತರ ಯುಗದ, ವಚನ ಸಾಹಿತ್ಯದ ಆದ್ಯ ಪ್ರವರ್ತಕ ಎಂಬುದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿದೆ. ತೋಂಟದ ಸಿದ್ಧಲಿಂಗಯತಿಗಳನ್ನು ಧರ್ಮಗುರು, ಮಹಾಜ್ಞಾನಿ, ಅನುಭಾವಿ, ಶಿವಯೋಗಸಾಧಕ, ಪರಮ ತಪಸ್ವಿ, ವೀರ ವಿರಕ್ತ, ಷಟ್ ಸ್ಥಲ ಜ್ಞಾನ ಚಕ್ರವರ್ತಿ, ದ್ವಿತಿಯ ಅಲ್ಲಮ, ತೋಂಟದ ಅಲ್ಲಮ,[೧೨] ಜಂಗಮ ಸಾರ್ವಭೌಮ, ಷಟ್ ಸ್ಥಲ ವಲ್ಲಭ, ನಿರಂಜನ ಗಣೇಶ್ವರನ ಅಪರಾವತಾರಿ ಎಂದು ಮುಂತಾಗಿ ಗುರುತಿಸಿದುದನ್ನು ನೋಡಿದರೆ ವೀರಶೈವ ಪರಂಪರೆಯಲ್ಲಿ ಆರಾಧ್ಯಮೂರ್ತಿಯಾಗಿ ಅಪಾರ ಪ್ರಭಾವವನ್ನು ಬೀರಿರುವುದು ಅರಿವಾಗುತ್ತದೆ. ಇವರನ್ನು ತೋಂಟದ ಸಿದ್ಧಲಿಂಗೇಶ್ವರ, ಸಿದ್ಧಲಿಂಗೇಶ್ವರ, ತೋಂಟದಾರ್ಯ, ಸಿದ್ಧೇಶ್ವರ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ.

ಇವರ ಮೊದಲ ಹೆಸರು ಸಿದ್ಧಲಿಂಗ. 'ತೋಂಟದ' ಎಂಬುದು ಕಗ್ಗೆರೆಯ ತೋಟದಲ್ಲಿ ಇವರು ಅನುಷ್ಠಾನಗೈದುದರ ಹಿನ್ನೆಲೆಯಲ್ಲಿ ಬಂದ ವಿಶೇಷಣ. ಇವರು ಅಲ್ಲಮ ಪ್ರಭು ಸಂಪ್ರದಾಯಕ್ಕೆ ಸೇರಿದವರಾದುದರಿಂದ 'ಅಲ್ಲಮ' ಎಂಬ ಅನ್ವರ್ಥನಾಮವೂ ಬಂದಿದೆ. ಹಾಗಾಗಿ ಅಲ್ಲಮನ ಅವತಾರಿ, ಅಭಿನವ ಅಲ್ಲಮ, ಎಂಬ ಹೆಸರಗಳೂ ಇವರಿಗೆ ಲಭಿಸಿವೆ.[೧೩]ನೂರೊಂದು ವಿರಕ್ತರ ತರುವಾಯ ೭೦೧ ವಿರಕ್ತರ ಸಂಘಟನೆಯ ನೇತೃತ್ವವನ್ನು ವಹಿಸಿದ ಭವ್ಯಮಾನವರಿವರು. ಇವರ ಗುರುಪರಂಪರೆಯು ಅನಾದಿ ಗಣೇಶ್ವರನಿಂದ ಆರಂಭವಾಗುತ್ತದೆ.[೧೪]

---

೧೨. ಘನಲಿಂಗಿದೇವರ ವಚನಗಳು. 'ಸಂಕೀರ್ಣ ವಚನ ಸಂಪುಟ–೬.' ಪುಟ–೩೫೧.
೧೩. ಡಾ॥. ವೀರಣ್ಣ ರಾಜೂರು, 'ಬಸವೋತ್ತರ ಯುಗದ ವಚನಕಾರರು,' ಪುಟ–೩೮.
೧೪. ಆರ್.ಸಿ. ಹೀರೆಮಠ, (ಸಂ) 'ಷಟ್ ಸ್ಥಲ ಜ್ಞಾನಸಾರಾಮೃತ,' ವಚನ–೮.

* ಜೀವನ ಚರಿತ್ರೆ :–

ತೋಂಟದ ಸಿದ್ಧಲಿಂಗ ಯತಿಗಳ ಜೀವಿತದ ರೂಪರೇಷೆಗಳನ್ನು ಪುನ: ರಚಿಸಲು ಇರುವ ಆಕರ ಸಾಮಗ್ರಿಗಳೆಂದರೆ, ತೋಂಟದ ಸಿದ್ಧಲಿಂಗ ಯತಿಗಳ ಸ್ವಂತ ಕೃತಿಗಳು, ಸಮಕಾಲೀನ ಹಾಗೂ ನಂತರದ ಶಾಸನಗಳು, ವಚನಕಾರರ ವಚನಗಳು, ಕವಿಗಳ ಕಾವ್ಯ, ಪುರಾಣಗಳು ಮತ್ತು ಇತರೆ ಮೂಲಗಳಿಂದ ದೊರೆತ ಮಾಹಿತಿಗಳು.

೧೫ನೇ ಶತಮಾನದಿಂದ ಹಿಡಿದು ೧೯ನೇ ಶತಮಾನದವರೆಗಿನ ಶಾಸನ ಹಾಗೂ ವೀರಶೈವ ಸಾಹಿತ್ಯದಲ್ಲಿ ತೋಂಟದ ಸಿದ್ಧಲಿಂಗರ ಬದುಕಿನ ಕತೆ ಹಲವಾರು ಮಾರ್ಪಾಡುಗಳೊಡನೆ ಮೈದಾಳಿದೆ. ಸಿದ್ಧಲಿಂಗರನ್ನು ಕಾವ್ಯ, ಪುರಾಣಗಳು ಪರೋಕ್ಷವಾಗಿ ಉಲ್ಲೇಖಿಸುತ್ತವೆ. ಚಂಪು, ರಗಳೆ, ಸಾಂಗತ್ಯ ಮುಂತಾದ ಪ್ರಕಾರಗಳಲ್ಲಿ ಸಿದ್ಧಲಿಂಗರ ಬದುಕಿನ ವಿವರ ಹರಡಿಕೊಂಡಿದೆ. ಇದನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು.

೧. ಸಿದ್ಧಲಿಂಗರ ಜೀವನ ಚರಿತ್ರೆಗಾಗಿಯೆ ಸಂಪೂರ್ಣ ಮೀಸಲಾದ ಕೃತಿಗಳು

೨. ಸಿದ್ಧಲಿಂಗರನ್ನು ಪರೋಕ್ಷವಾಗಿ ಸ್ತುತಿಸಿರುವ ಕಾವ್ಯ– ಪುರಾಣಗಳು.

೧. ಸಿದ್ಧಲಿಂಗರ ಜೀವನ ಚರಿತ್ರೆಗಾಗಿಯೇ ಸಂಪೂರ್ಣ ಮೀಸಲಾದ ಕೃತಿಗಳು:

* ಶಾಂತೇಶ – ಸಿದ್ಧೇಶ್ವರ ಪುರಾಣ (೧೫೬೧) ಭಾಮಿನಿಷಟ್ಪದಿ
* ಸುಪ್ಪಿಮಲ್ಲ – ಸಿದ್ಧೇಶ್ವರ ಸಾಂಗತ್ಯ(೧೬೦೦)
* ಸಿದ್ಧನಂಜೇಶ – ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ (೧೬೦೦)
* ಚೆನ್ನವೀರ ಜಂಗಮದೇವ– ಷಟ್‌ಸ್ಥಲ ವಲ್ಲಭ (೧೬೦೦) ಚಂಪೂ
* ವಿರಕ್ತ ತೋಂಟದಾರ್ಯ– ಸಿದ್ಧೇಶ್ವರ ಪುರಾಣ(೧೬೦೦)ವಾ. ಷಟ್ಪದಿ
* ವಿರಕ್ತ ತೋಂಟದಾರ್ಯ– ತೋಂಟದಾರ್ಯ ರಗಳೆ(೧೬೧೬)
* ಯತಿ ಬಸವಲಿಂಗ – ತೋಂಟದಸಿದ್ಧೇಶ್ವರ ಸಾಂಗತ್ಯ (೧೬೨೦–೧೬೩೦)
* ಹೇರಂಬ (ನಾರಾಯಣ)– ಸಿದ್ಧಲಿಂಗೇಶ್ವರ ಸಾಂಗತ್ಯ (೧೭೯–೭೧)
* ಶಿವಪ್ಪ ಶಾಸ್ತ್ರಿ (ಸಂ) – ಸಿದ್ಧಲಿಂಗೇಶ್ವರ ವಿಜಯ (೧೯೧೨)

೨. ಸಿದ್ಧಲಿಂಗರನ್ನು ಪರೋಕ್ಷವಾಗಿ ಸ್ತುತಿಸಿರುವ ಕಾವ್ಯ ಪುರಾಣಗಳು:

* ವಿರುಪಾಕ್ಷ ಪಂಡಿತ – ಚೆನ್ನಬಸವ ಪುರಾಣ(೧೫೮೪) ವಾ.ಷಟ್ಪದಿ
* ಸಿದ್ಧನಂಜೇಶ – ಗುರುರಾಜಚಾರಿತ್ರ್ಯ(೧೬೦೦) ವಾ.ಷಟ್ಪದಿ
* ಮರುಳು ಸಿದ್ಧೇಶ – ಗುರುಲಿಂಗ ಜಂಗಮ ಚಾರಿತ್ರ್ಯ (೧೬೫೦) ಸಾಂಗತ್ಯ
* ಪುರಾಣದ ಶಿವಲಿಂಗ – ಷಟ್ ಸ್ಥಲ ಶಿವಾಯಣ(೧೭೫೦) ಭಾ. ಷಟ್ಪದಿ
* ಮಹಾದೇವ – ಮಹಾಲಿಂಗೇಂದ್ರ ವಿಜಯ (೧೮೬೩–೭೦) ವಾ.ಷಟ್ಪದಿ
* ಫ.ಗು. ಹಳಕಟ್ಟಿ (ಸಂ) – ನಿರಂಜನ ವಂಶರತ್ನಾಕರ (೧೯ನೇ.ಶ) ೨ನೇ ಭಾಗ
* ಬಸವಪ್ಪ ವೀರಪ್ಪ ಕೋಟಿ– ನಿರಂಜನ ಜಂಗಮ ವಂಶ ದರ್ಪಣ (೧೯೦೯) ಗದ್ಯ
* ಅಜ್ಞಾತ ಕರ್ತೃ – ಪಟ್ಟವಲ್ಲರಿ (೧೯ನೇ ಶ.) ಗದ್ಯ

೩. ಸಿದ್ಧಲಿಂಗರ ಮಹಿಮಾತಿಶಯಗಳನ್ನು ಸ್ತುತಿಸುವ ಸ್ತೋತ್ರ ರೂಪದ ಕೃತಿಗಳು:

* ಕವಿ ಪವಾಡ – ತೋಂಟದ ಸಿದ್ಧಲಿಂಗರ ತಾರಾವಾಳಿ (೧೫೭೦)
* ಸುವ್ವಿಮಲ್ಲ – ತೋಂಟದ ಸಿದ್ಧೇಶ್ವರ ತಾರಾವಳಿ (೧೬೦೦)
* ಗರಣಿ ಬಸವಲಿಂಗ – ಸಿದ್ಧೇಶ್ವರನ ಮಹಿಮಾ ತಾರಾವಳಿ(೧೬೪೦)
* ನಂದೀಕೃತ – ಸಿದ್ಧೇಶ್ವರ ತ್ರಿವಿಧಿ (೧೬೫೦)೫೫ ತ್ರಿಪದಿಗಳು
* ಸಿದ್ಧಲಿಂಗೇಶ್ವರ – ಸಿದ್ಧೇಶ್ವರ ತ್ರಿವಿದಿ(೧೬೫೦) ೩೭ ತ್ರಿಪದಿಗಳು
* ಸಿದ್ಧಲಿಂಗಮುನಿ – ಸಿದ್ಧಲಿಂಗ ರಗಳೆ (೧೭೫೦)
* ಅಜ್ಞಾತ ಕರ್ತೃಗಳ – ಸಿದ್ಧಲಿಂಗರ ಅಷ್ಟಕ(೧೮೦೦)
  – ಸಿದ್ಧಲಿಂಗಾಷ್ಟಕ (೧೮೦೦)
  – ಸಿದ್ಧೇಶ್ವರನ ಅಷ್ಟಕ (೧೮೦೦)
* ಮಾಗಡಿ ವೀರಪ್ಪಶಾಸ್ತ್ರಿ – ಸಿದ್ಧಲಿಂಗೇಶ್ವರ ಶತಕ (೧೯೧೨) ವಾ. ಷಟ್ಪದಿ
* ಸಂಕಲನ ರೂಪದ ಕೃತಿ–'ಸಿದ್ಧಲಿಂಗ ಸ್ತೋತ್ರ ಪರಿಮಳ'೫೫ ಸ್ವರವಚನಗಳಿವೆ[೧೫]

ಇವಲ್ಲದೆ ಕೆಲವು (೭) ಶಿಲಾ ಶಾಸನಗಳು ದೊರೆತಿವೆ.[೧೬] ಸಿದ್ಧಲಿಂಗರ ಶಿಷ್ಯ ಪ್ರಶಿಷ್ಯರು ತಮ್ಮ ಕೃತಿಗಳ ಆದಿ–ಅಂತ್ಯದಲ್ಲಿ ಇವರ ಮಹಿಮಾತಿಶಯಗಳನ್ನು ಕೊಂಡಾಡಿದ್ದಾರೆ. ಕರ್ನಾಟಕದಾದ್ಯಂತ ಎದ್ದು ನಿಂತಿರುವ ಸಿದ್ಧಲಿಂಗರ ಹೆಸರಿನ ಗದ್ದುಗೆ, ಮಠ, ದೇವಾಲಯಗಳು, ಅವುಗಳ ಹಿಂದೆ ಹುಟ್ಟಿಕೊಂಡ ಐತಿಹ್ಯಗಳು ಇವರ ಪ್ರಭಾವವನ್ನು ಸಾರಿಹೇಳುತ್ತವೆ. ಸಿದ್ಧಲಿಂಗರ ಬಗ್ಗೆ ದೊರಕಿದ ಈ ಆಕರಗಳಲ್ಲಿ ಐತಿಹಾಸಿಕ ಸಂಗತಿಗಳಿಗಿಂತ ಅಲೌಕಿಕ ಪವಾಡಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿರುವುದರಿಂದ ಇವರ ಸ್ಪಷ್ಟ ಚರಿತ್ರೆಯನ್ನು ನಿರೂಪಿಸುವುದು ಅಸಾಧ್ಯವಾಗಿದೆ. ಆದರೂ ದೊರೆತಿರುವ ಆಧಾರಗಳನ್ನೆ ಇಟ್ಟುಕೊಂಡು ಅವರ ಜೀವನ ಚರಿತ್ರೆಯನ್ನು ಈ ರೀತಿ ನಿರೂಪಿಸಬಹುದು.

ಸಿದ್ಧಲಿಂಗರ ಜನ್ಮ ವೃತ್ತಾಂತ ಅಲೌಕಿಕ ವಿವರಗಳಿಂದ ವಿಸ್ಮಯಕರವಾಗಿದೆ. ಇತರ ಶರಣರಂತೆ ತಾಯಿಯ ಉದರದಿಂದ ಯೋನಿಜರಾಗಿ, ಇಲ್ಲವೆ ಲಿಂಗಮುಖದಿಂದ ಅಯೋನಿಜರಾಗಿ ಉದ್ಭವಿಸುವುದಿಲ್ಲ.[೧೭] ಸಿದ್ಧಲಿಂಗರ ಚರಿತ್ರೆಯನ್ನು ವೀರಶೈವ ಕವಿಗಳೆಲ್ಲರೂ ನಿರಂಜನ ಗಣೇಶ್ವರನು ಎಂಟು ವರ್ಷದ ಬಾಲಕನಾಗಿ ಗೋಸಲ ಚನ್ನಬಸವೇಶ್ವರ ದೇವರ ಸನ್ನಿಧಿಗೆ ಬಂದು ದೀಕ್ಷೆಯನ್ನು ಪಡೆದು ಸಿದ್ಧಲಿಂಗನೆಂಬ ನಾಮವನ್ನು ಧರಿಸಿದನೆಂದು ಹೇಳುವರು.

---

೧೫. ಈ ಮೇಲಿನ ಮಾಹಿತಿಯನ್ನು
(ಅ) ಡಾ॥. ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು,' ಪುಟ–೩೯.
ಬ) ಡಾ॥. ಸಿ. ನಾಗಭೂಷಣ, 'ಶ್ರೀತೋಂಟದ ಸಿದ್ಧಲಿಂಗೇಶ್ವರ,' ಪುಟ–೧೫
ಈ ಕೃತಿಗಳಿಂದ ಸಂಗ್ರಹಿಸಲಾಗಿದೆ.

೧೬. ಡಾ॥ ಎಂ. ಎಂ. ಕಲಬುರ್ಗಿ, 'ಶಾಸನಗಳಲ್ಲಿ ಶಿವಶರಣರು,'(ದ್ವಿ.ಆ.೧೯೭೮) ಪುಟ–೧೫೩–೧೬೦

೧೭. ಡಾ॥. ವೀರಣ್ಣ ರಾಜೂರ– 'ಬಸವೋತ್ತರ ಯುಗದ ವಚನಕಾರರು,' ಪು –೪೦.

"ಕಾಮರಿಪು ತನ್ನ ಕೈಲಾಸದಿಂದಿಳಿದು ನೆರೆ
ಭೂಮಿಗೆಯ್ತೆಂಟು ಬರಿಸದ ಶಿಶುತ್ವಮಂ
ಪ್ರೇಮದಿಂದಳವಡಿಸಿಕೊಂಡು ತಳತಳಸಿ ಬೆಳಗುತ್ತ ಪುರವಂ ಪೊಕ್ಕನು."[೧೮]

ಎಂದು ಹೇಳಿದರೆ, "ಈ ನಿರಂಜನ ಜಂಗಮವೇ ಎಂಟು ವರ್ಷದ ಶಿಶು ರೂಪವಂ ತಾಳ್ದು ಬರುವ ಕಾಲದಿ ಅಂತರಿಕ್ಷದ ಜಯದುಂದುಭಿ ವಾದ್ಯಗಳಾದವು"[೧೯] ಎಂದು ಹೇಳುತ್ತದೆ. "ಆ ನಿರಂಜನ ಜಂಗಮವು ಎಂಟು ವರ್ಷದ ಶಿಶುರೂಪವನ್ನು ತಳೆದು ಭೂಮಿಗವತರಿಸಿದನು,"[೨೦] ಎಂದು ತಿಳಿಸುತ್ತದೆ ಉಳಿದೆಲ್ಲ ಆಕರಗಳು ಈ ಹೇಳಿಕೆಗಳನ್ನು ಅನುಮೋದಿಸುತ್ತವೆ. ಸಿದ್ಧಲಿಂಗರ ಕುರಿತ ಯಾವುದೇ ಕೃತಿಗಳಲ್ಲಿ ಅವರ ತಂದೆ ತಾಯಿಗಳ ಹೆಸರಾಗಲಿ, ಬಾಲ್ಯದ ವಿವರಗಳಾಗಲಿ, ಹುಟ್ಟಿದ ಸ್ಥಳ ಇತ್ಯಾದಿ ವಿವರಗಳಾಗಲಿ ದೊರೆಯುವುದಿಲ್ಲ. ಹೀಗೆ ಹೇಳಲು ಕಾರಣ ಶರಣರ ನೈಜ ಜೀವನ ಆರಂಭವಾಗುವುದು ಅವರಿಗೆ ದೀಕ್ಷೆಯಾದ ಮೇಲೆ. ಅವರ ಪೂರ್ವಾಶ್ರಯಕ್ಕೆ ಸಂಬಂಧಿಸಿದ ತಂದೆ ತಾಯಿ ಇತ್ಯಾದಿ ವಿಷಯಗಳೆಲ್ಲ ಅಮುಖ್ಯವಾಗುತ್ತವೆ. ಶರಣರು ತಮ್ಮ ಜೀವನ ಚರಿತ್ರೆಯನ್ನು ಹೇಳುವ ಪ್ರಸಂಗ ಬಂದಲ್ಲಿ, ಇಲ್ಲವೆ ಇತರರು ಅವರ ಚರಿತ್ರೆಯನ್ನು ವಿವರಿಸುವ ಸಂದರ್ಭ ವದಗಿ ಬಂದಲ್ಲಿ ಅವರಿಗೆ ದೀಕ್ಷೆ ಮಾಡಿದ ಗುರುವಿನ ಹೆಸರನ್ನು, ಮತ್ತು ಅವರ ಪರಂಪರೆಯನ್ನು ಮಾತ್ರ ಹೇಳುತ್ತಾರೆ. ಅವರ ಹಿಂದಿನ ಯಾವವಿಷಯವನ್ನು ಪ್ರಸ್ಥಾಪಿಸುವುದಿಲ್ಲ.[೨೧]

ಇದು ವೀರಶೈವ ಕವಿಗಳಿಗೆ ತಿಳಿದಿದ್ದರೂ ಅವರು ತಮ್ಮ ಸಂಪ್ರದಾಯಕ್ಕನುಗುಣವಾಗಿ ಅದಕ್ಕೆ ಮಹತ್ವವನ್ನು ಕೊಡುವುದಿಲ್ಲ. ಸ್ವತಃ ತೋಂಟದ ಸಿದ್ಧಲಿಂಗರೆ ಜನ್ಮ ನೀಡಿದ ತಂದೆ ತಾಯಿಗಳ ಹೆಸರನ್ನು ಹೇಳಿಕೊಳ್ಳದೆ ಗುರುವೇ ತಾಯಿ, ಗುರುವೇ ತಂದೆ, ಗುರುವೆ ಬಂಧು, ಗುರುವಿನಿಂದ ಪರವಿನ್ನಿಲ್ಲ" ಎಂದು ಹೇಳಿಕೊಳ್ಳುತ್ತಾರೆ.[೨೨] ಆದರೆ ವೀರಶೈವ ಸಂಪ್ರದಾಯಕ್ಕೆ ಸಂಬಂಧಪಡದ ಹೇರಂಬನೆಂಬ ಬ್ರಾಹ್ಮಣ ಕವಿಯು ಸಿದ್ಧಲಿಂಗೇಶ್ವರರ ತಂದೆ– ತಾಯಿಗಳ

---

೧೮. ಶಾಂತೇಶ ಕವಿ, 'ಸಿದ್ಧೇಶ್ವರ ಪುರಾಣ'– ಸಂ ೨, ಪುಟ–೪

೧೯. ಫ.ಗು. ಹಳಕಟ್ಟಿ (ಸಂ) 'ನಿರಂಜನ ವಂಶ ರತ್ನಾಕರ', ಪುಟ–೩೬

೨೦. ನಿರಂಜನ ಜಂಗಮ ವಂಶ ದರ್ಪಣ– ಪುಟ –೧೬

೨೧. ಡಾ. ವೀರಣ್ಣ ರಾಜೂರ ಬಸವೋತ್ತರ ಯುಗದ ವಚನಕಾರರು, ಪುಟ –೪೧

೨೨. "ಗುರುವಿನಿಂದ ಉಪದೇಶವ ಪಡೆದು ಗುರುಪುತ್ರನೆನಿಸಿಕೊಂಡ ಬಳಿಕ
ಪೂರ್ವದ ತಾಯಿ ತಂದೆಯೆಂದು, ಬಂಧುಗಳೆಂದು,
ಮಲ ಸಂಬಂಧವ ನೆನೆಯಲಾಗದು ಕಾಣಿರೋ
ಇನ್ನಿವ ನೆನೆದಿರಾದರೆ ಶಿವದ್ರೋಹ ತಪ್ಪದಯ್ಯ
ಇನ್ನೂ ನಿಮಗೆ ತಾಯಿ ತಂದೆಗಳ ಹೇಳಿಹೆ ಕೇಳಿರೇ
ಗುರುವೆ ತಾಯಿ, ಗುರುವೆ ತಂದೆ, ಗುರುವೆ ಬಂಧುಗಳು
ಗುರುವಿಂದ ಪರವಿನ್ನಾರು ಇಲ್ಲ "(ಷಟ್ ಸ್ಥಲ ಜ್ಞಾನ ಸಾರಾಮೃತ ವಚನ ೧೬೮)

ಹೆಸರುಗಳನ್ನು, ಬಾಲ್ಯ ಜೀವನವನ್ನು , ಅವರು ಹುಟ್ಟಿದ ಸ್ಥಳವನ್ನು ತನ್ನ ಕೃತಿ "ಸಿದ್ಧಲಿಂಗ ಸಾಂಗತ್ಯ" ದಲ್ಲಿ ಪ್ರಸ್ತಾಪಿಸುತ್ತಾನೆ. ಈ ಹಿನ್ನೆಲೆಯಲ್ಲಿ ಸಿದ್ಧಲಿಂಗರು ಹರದನ ಹಳ್ಳಿಯ ಶರಣ ದಂಪತಿಗಳಾದ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆಯ ಪುತ್ರನಾಗಿ ಜನಿಸಿರುವುದು ವ್ಯಕ್ತವಾಗುತ್ತದೆ.[೨೩] ಸಿದ್ಧಲಿಂಗರು ಷಟ್‌ಸ್ಥಲ ಜ್ಞಾನ ಸಂಪನ್ನರಾಗುತ್ತಾರೆ. ಇದರಿಂದ ಗುರುಗಳು ಸಂತುಷ್ಟರಾಗಿ ಅವನಿಗೆ ನಿರಂಜನ ಪಟ್ಟವನ್ನು ಕಟ್ಟುತ್ತಾರೆ. ಭಕ್ತ ಜನ ಸಿದ್ಧಲಿಂಗರನ್ನು ನಿರಂಜನ ಗಣೇಶ್ವರನ ಅಪರಾವತಾರವೆಂದು ಭಾವಿಸಿ ಪೂಜಿಸುತ್ತಾರೆ.

ಗುರು ಗೋಸಲ ಚೆನ್ನಬಸವರ ಸಾನಿಧ್ಯದಲ್ಲಿ ಲಿಂಗ ದೀಕ್ಷೆಯನ್ನು ಪಡೆದು ಮುಂದೆ ಗುರು ಸೇವೆ ಮಾಡುತ್ತ ಆಧ್ಯಾತ್ಮಿಕ ವಿದ್ಯೆಯನ್ನು ಕಲಿತು, ವೀರಶೈವ ಧರ್ಮತತ್ವ, ಸಾಹಿತ್ಯ-ಸಂಸ್ಕೃತಿಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ಸಿದ್ಧಲಿಂಗರ ಅಸದೃಶ ಜ್ಞಾನವನ್ನು ಗಮನಿಸಿದ ಗುರು ಚೆನ್ನ ಬಸವೇಶ್ವರರು ಅವನಿಗೆ ಷಟ್‌ಸ್ಥಲ ಸಿದ್ಧಾಂತ ಮಾರ್ಗ ರಹಸ್ಯ ಬೋಧಿಸುತ್ತಾರೆ. ಸಿದ್ಧಲಿಂಗರು ಗುರುವಿನ ಆದೇಶದಂತೆ ಲೋಕ ಸಂಚಾರ ಮಾಡಿ ಪವಾಡಗಳನ್ನು ಮೆರೆದು ಶೈವಧರ್ಮದ ತತ್ವಬೋಧೆ ಮಾಡುತ್ತ ಭಕ್ತರನ್ನು ಉದ್ಧರಿಸಿದರು. ಹಾಗೆ ಸಂಚರಿಸುತ್ತ ಕಗ್ಗೆರೆಗೆ ಬಂದು ಅಲ್ಲಿ ಧ್ಯಾನ ಮಗ್ನನಾಗಿ ಹುತ್ತದಲ್ಲಿ ಶಿವಯೋಗ ನಿದ್ರೆಯಲ್ಲಿದ್ದು ಎದ್ದು ಬಂದುದರಿಂದ ಜನ ಅವರಿಗೆ ತೋಂಟದ ಸಿದ್ಧಲಿಂಗ ಎಂದು ಕರೆಯತೊಡಗುತ್ತಾರೆ. ಸಿದ್ಧಲಿಂಗರ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪುರಾಣಗಳಲ್ಲಿ ಸಿದ್ಧಲಿಂಗ ಶಿವಯೋಗಿಗಳ ವಿಷಯವಾಗಿ ವಾಸ್ತವಿಕ, ಐತಿಹಾಸಿಕ ವಿಷಯಗಳು ಸಿಗುವುದು ಬಹಳ ಕಡಿಮೆ. ಅವರ ಪವಾಡಗಳ ಬಗ್ಗೆ ವಿಪುಲವಾದ ವರ್ಣನೆಯಿದೆ. ಆ ಪವಾಡಗಳಿಗೆ ಐತಿಹಾಸಿಕ ಮಹತ್ವವಿರದಿದ್ದರೂ ಜನತೆಯ ಮನದಲ್ಲಿ ಆ ಮಹಾನುಭವರ ಬಗೆಗಿದ್ದ ಅಸಾಧಾರಣ ಕಲ್ಪನೆಯನ್ನು, ಭಕ್ತಿ ಭಾವವನ್ನು ಅವು ಅಭಿವ್ಯಕ್ತಿಸುತ್ತವೆ.

ಸಿದ್ಧಲಿಂಗರು ಕರ್ನಾಟಕದಾದ್ಯಂತ ಸಂಚಾರ ಮಾಡುತ್ತ, ವೀರಶೈವ ಧರ್ಮತತ್ವವನ್ನು ಬೋಧಿಸುತ್ತ ಕೊನೆಗೆ ನಾಗಿಣೀ ನದಿ ತೀರದಲ್ಲಿರುವ ಎಡೆಯೂರಿಗೆ ಬಂದು ಅಲ್ಲಿ ಬಹುಕಾಲ ತಪೋನಿರತರಾಗುತ್ತಾರೆ. ಅವರ ಶಿಷ್ಯರಲ್ಲೊಬ್ಬರಾದ ಚಿಟ್ಟಿಗದೇವರ ಶಿಷ್ಯ ಚೆನ್ನವೀರಪ್ಪ ಒಡೆಯರು ಗುರುಗಳಿಗೆ ಭಕ್ತಿಯ ಕಾಣಿಕೆಯೆಂದು ಒಂದು ಕಲ್ಲು ಮಠವನ್ನು ಕಟ್ಟಿಸಿಕೊಡುತ್ತಾರೆ.[೨೪] ಸಿದ್ಧಲಿಂಗರು ಆ ಮಠದಲ್ಲಿಯೆ ಇದ್ದು ಷಟ್‌ಸ್ಥಲ ತತ್ವ ಬೋಧೆ ಮಾಡುತ್ತ ಕೊನೆಗೆ ತಮ್ಮ ಶಿಷ್ಯರಲ್ಲಿ ಒಬ್ಬರಾದ ಬೋಳಬಸವರಿಗೆ ನಿರಂಜನ ಪಟ್ಟಾಧಿಕಾರವನ್ನು ವಹಿಸಿ ತಾವು ನಿರ್ವಿಕಲ್ಪ ಸಮಾಧಿಯನ್ನು ಹೊಂದುತ್ತಾರೆ.[೨೫] ಆನಂತರ ಈ ಸ್ಥಳದಲ್ಲಿ ದೇವಾಲಯ ನಿರ್ಮಾಣವಾಯಿತು. ಇಂದು ಅದು ಒಂದು ಪುಣ್ಯ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದಿದೆ.

---

೨೩. "ಹರದನು ಮಲ್ಲಿಕಾರ್ಜುನನೆಂಬ ಜನಕನು
ತರುಣಿ ಜ್ಞಾನಾಂಗನೆ ತಾಯಿ
ಹರುಷಾಬ್ಧಿಯೊಳು ತೇಲುತಿರ್ವರಿದ್ದರು ಬಾಲ
ವರ ಸಿದ್ಧಲಿಂಗನ ನೋಡಿ" (ಸಂಧಿ ೮– ಪದ್ಯ –೬)

೨೪. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ –೪೩

೨೫. ಇ.ಸಿ.ವಿ.ಒ.ಎಲ್–೧ ಕುಣಿಗಲ್ ತಾಲ್ಲೂಕು, ೪೯ ನೇ ಶಾಸನ.

ಸಿದ್ಧಲಿಂಗರ ಕಾಲ

ತೋಂಟದ ಸಿದ್ಧಲಿಂಗರ ಜೀವಿತ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಇದು ಕ್ರಿ.ಶ. ೧೩ ರಿಂದ ೧೬ ನೇ ಶತಮಾನದವರೆಗೂ ಹೋಗುತ್ತದೆ. ತೋಂಟದ ಸಿದ್ಧಲಿಂಗೇಶ್ವರರು ಬರೆದ 'ಷಟ್ ಸ್ಥಲ ಜ್ಞಾನ ಸಾರಾಮೃತ' ವಚನ ಕೃತಿಯಲ್ಲಿ ಅವರ ಕಾಲದ ಸೂಚನೆಗಳಿಲ್ಲ. ಸಿದ್ಧಲಿಂಗರನ್ನು ಕುರಿತು ಬರೆದ ಪುರಾಣ ಕೃತಿಗಳಲ್ಲಿ ದೊರೆಯುವ ಪರೋಕ್ಷ ಪ್ರಮಾಣಗಳನ್ನು ಅವಲಂಭಿಸಬೇಕಾಗಿದೆ. ಈ ಮಿತಿಯಲ್ಲಿಯೆ ವಿದ್ವಾಂಸರು ತೋಂಟದ ಸಿದ್ಧಲಿಂಗ ಯತಿಗಳ ಕಾಲ ನಿರ್ಣಯಕ್ಕಾಗಿ ಪ್ರಯತ್ನಿಸಿದ್ದಾರೆ. ಖಚಿತವಾದ ಕಾಲ ನಿರ್ಣಯ ಸಾಧ್ಯವಾಗದೆ ಅಂದಾಜು ಕಾಲಮಾನವನ್ನು ನಿರ್ಣಯಿಸಲಾಗಿದೆ. ವಿದ್ವಾಂಸರು ಸೂಚಿಸಿರುವ ಕಾಲದ ವಿವರವನ್ನು ಈ ರೀತಿ ಸಂಗ್ರಹಿಸಬಹುದು.

೧.	ಬಸಪ್ಪ ವೀರಪ್ಪಕೋಟಿ	– ಕ್ರಿ.ಶ. ೧೨೮೧–೧೩೮೧
೨.	ಪ್ರೋ.ಸಿ.ಮಹಾದೇವಪ್ಪ	– ಕ್ರಿ.ಶ. ೧೪೦೦–೧೪೭೦
೩.	ಆರ್. ನರಸಿಂಹಾಚಾರ್	– ಕ್ರಿ.ಶ. ೧೪೭೦
೪.	ಹೆಚ್. ದೇವಿರಪ್ಪ	– ಕ್ರಿ.ಶ. ೧೪೫೦–೧೫೦೦
೫.	ಆರ್.ಸಿ. ಹಿರೇಮಠ	– ಕ್ರಿ.ಶ. ೧೪೦೦–೧೪೮೦
೬.	ಬಿ.ಶಿವಮೂರ್ತಿ ಶಾಸ್ತ್ರಿ	– ೧೫ ನೇ ಶತಮಾನ
೭.	ಎಂ.ಆರ್. ಶ್ರೀನಿವಾಸ ಮೂರ್ತಿ	– ಕ್ರಿ.ಶ. ೧೫೧೦

ಈ ಎಲ್ಲಾ ಅಭಿಪ್ರಾಯಗಳು ಸಿದ್ಧಲಿಂಗರ ಬಗೆಗೆ ಹೆಚ್ಚಿನ ಆಧಾರಗಳು ದೊರೆಯುವ ಪೂರ್ವದಲ್ಲಿ ವ್ಯಕ್ತಪಡಿಸಿರುವ ಪ್ರಾಥಮಿಕ ಹಂತದ ಪ್ರಮುಖ ಪ್ರಯತ್ನಗಳೆಂದು ಹೇಳಬಹುದು. ಈಚೆಗೆ ದೊರೆತ ಹೊಸ ಆಧಾರಾಂಶಗಳ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗರ ಕಾಲವನ್ನು ೧೬ ನೇ ಶತಮಾನದ ಉತ್ತರಾರ್ಧವೆಂದು ಕೆಲವು ವಿದ್ವಾಂಸರು ನಿರ್ಧರಿಸಿದ್ದಾರೆ.

ಎಲ್.ಬಸವರಾಜು ಅವರು ಒಂದನೇ ಗುಬ್ಬಿಮಲ್ಲಣನ (ಕಾಲ ಸು.ಕ್ರಿ.ಶ.೧೪೭೦) "ಗುಣ ಭಾಷಿತ ರತ್ನಮಾಲೆ", ಇವರ ಮೊಮ್ಮಗನಾದ ಎರಡನೆ ಗುಬ್ಬಿ ಮಲ್ಲಣಾರ್ಯನ (೧೫೧೩) 'ಭಾವಚಿಂತಾರತ್ನ' ೧೫೩೦ ರಲ್ಲಿ ರಚಿಸಿದ ವೀರಶೈವ ಪುರಾಣಗಳನ್ನು ಹಾಗೂ ಎರಡನೇ ಗುಬ್ಬಿ ಮಲ್ಲಣಾರ್ಯನ ಮಗನಾದ ಶಾಂತೇಶನ ಕೃತಿ 'ಸಿದ್ದೇಶ್ವರ ಪುರಾಣ' (೧೫೬೧)ವನ್ನು ಮತ್ತು ಚೆನ್ನಬಸವ ಪುರಾಣಗಳ ಕಾಲವನ್ನು, ಅವುಗಳಲ್ಲಿ ಪ್ರಸ್ಥಾಪಿತವಾದ ವಿಚಾರಗಳನ್ನು ಇಟ್ಟುಕೊಂಡು ಚರ್ಚಿಸಿ ಸಿದ್ಧಲಿಂಗರು ೧೫೬೧ ರಲ್ಲಿ ಜೀವಿಸಿದ್ಧರೆಂದು ಪ್ರತಿಪಾದಿಸಿದ್ದಲ್ಲದೆ, ಸಿದ್ಧಲಿಂಗ ಯತಿಯ ಜೀವಿತಾವಧಿಯ ಆದಿ ಅಂತ್ಯಗಳ ಗರಿಷ್ಠ ಮಿತಿಯನ್ನು ಕ್ರಿ.ಶ. ೧೫೦೦–೧೫೮೪ ಎಂದು ಸ್ವೀಕರಿಸಬಹುದು ಎನ್ನುತ್ತಾರೆ.[೨೬] ಎಸ್.ಶಿವಣ್ಣ ಅವರು ಸಿದ್ಧಲಿಂಗ ಯತಿಗಳ ಕಾಲ ವಿಚಾರವನ್ನು ಮರುಪರಿಶೀಲನೆ ಮಾಡಿದ್ದಾರೆ. ತೋಂಟದಾರ್ಯನ ಪ್ರಮುಖ ಶಿಷ್ಯರಲ್ಲೊಬ್ಬನಾದ ಘನಲಿಂಗಿದೇವನ ಪರಂಪರೆಯಲ್ಲಿ ಬರುವ ಪರ್ವತದೇವ–ಭಂಡಾರಿ

---

೨೬. ಡಾ.ಸಿ. ನಾಗಭೂಷಣ – 'ತೋಂಟದ ಸಿದ್ಧಲಿಂಗೇಶ್ವರ ' , ಪುಟ – ೧೩

ಬಸವಪ್ಪೊಡೆಯರಿಗೆ ಸಂಬಂಧಿಸಿದ ನಂಜನಗೂಡಿನಲ್ಲಿ ಸಿಕ್ಕ ಎರಡು ಶಾಸನ (೧೫೧೪) ಗಳನ್ನು ಇಟ್ಟುಕೊಂಡು ಘನಲಿಂಗಿ ದೇವನು ಹೇಳಿಕೊಂಡಿರುವ ತನ್ನ ಪರಂಪರೆಯ ಜಾಡನ್ನು ಅವಲಂಭಿಸಿ ಸಿದ್ಧಲಿಂಗರ ಕಾಲ ಕ್ರಿ.ಶ. ೧೫೬೧ ಎಂದು ಹೇಳುತ್ತಾರೆ.[೨೭]

ಎಂ.ಎಂ. ಕಲಬುರ್ಗಿಯವರು ಎಲ್.ಬಸವರಾಜು ಹಾಗೂ ಎಸ್.ಶಿವಣ್ಣ ಅವರ ಅಭಿಪ್ರಾಯಗಳನ್ನು ಒಪ್ಪಿಕೊಂಡು ಇದಕ್ಕೆ ಪೂರಕವೆಂಬಂತೆ ಹೊಸ ಆಧಾರವನ್ನು ಹುಡುಕಿದ್ದಾರೆ. ಇಂದಿನ ತುಮಕೂರು ಜಿಲ್ಲೆ ಒಳ ಹೊರಗಿನ ಪ್ರದೇಶವನ್ನು ಬಿಜ್ಜಾವರ ರಾಜಧಾನಿಯಿಂದ ಆಳುತ್ತಲಿದ್ದ ಅರಸನನ್ನು ಕುರಿತು ಹುಟ್ಟಿದ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' , ಇಮ್ಮಡಿ ಚಿಕ್ಕ ಭೂಪಾಲನ ಆಶ್ರಯದಲ್ಲಿಯೇ ರಚಿತವಾದ "ಅಮೃತೇಶ್ವರ ಭಾಷ್ಯ" (೧೫೪೯) ಮತ್ತು ಇಮ್ಮಡಿ ಚಿಕ್ಕ ಭೂಪಾಲನು ೧೫೫೪ ರಲ್ಲಿ ಬರೆಯಿಸಿದ ಸಿದ್ಧಾಪುರ ಶಾಸನವನ್ನು ಇಟ್ಟುಕೊಂಡು ಚರ್ಚಿಸಿ ತೋಂಟದ ಸಿದ್ಧಲಿಂಗರ ಕಾಲ ೧೬ ನೇ ಶತಮಾನದ ೩ನೇ ಪಾದವೆಂದು ಅಭಿಪ್ರಾಯ ಪಡುತ್ತಾರೆ.[೨೮]

ಡಾ॥ ವೀರಣ್ಣ ರಾಜೂರ ಅವರು ಸಿದ್ಧನಂಜೇಶನ ತೋಂಟದ "ಸಿದ್ಧೇಶ್ವರ ಭಾವ ಭಾವರತ್ನಾಭರಣ"ದಲ್ಲಿನ ಶಾಂತೇಶನ ಲಿಂಗೈಕ್ಯ (೧೫೬೧) ದ ಉಲ್ಲೇಖ, ಜಿಗುನಿ ಮರುಳಾರ್ಯನ (೧೫೮೦)ಸ್ವರ ವಚನದಲ್ಲಿ ವಿರಕ್ತ ಸಿದ್ಧಲಿಂಗನ ಉಲ್ಲೇಖವಾಗಿರುವ ವಿಚಾರ, ವಿರಕ್ತ ತೋಂಟದಾರ್ಯನು, ಗೂಳೂರು ಸಿದ್ದೇಶ್ವರನ " ಶೂನ್ಯ ಸಂಪಾದನೆ" ಕೃತಿಯನ್ನು ಪ್ರತಿ ಮಾಡಿದ ಕಾಲದ (೧೫೮೦) ಉಲ್ಲೇಖಗಳನ್ನು ಚರ್ಚಿಸಿ ತೋಂಟದ ಸಿದ್ಧಲಿಂಗರು ಕ್ರಿ.ಶ.ಸು.೧೫೧೪ ರಿಂದ ೧೫೮೦ ರ ಮಧ್ಯದ ಅವಧಿಯಲ್ಲಿ ಜೀವಿಸಿದ್ದರೆಂದು ಅಭಿಪ್ರಾಯ ಪಡುತ್ತಾರೆ.[೨೯] ಈ ಎಲ್ಲಾ ಸಂಗತಿಗಳ ಆಧಾರದಿಂದ ತೋಂಟದಾರ್ಯರು ಬದುಕಿದ ಅವಧಿ ಕ್ರಿ.ಶ. ೧೫೦೦–೧೫೮೪ ರ ನಡುವೆ ಎಂದು ನಿರ್ಣಯಿಸಬಹುದಾಗಿದೆ.

ತೋಂಟದ ಸಿದ್ಧಲಿಂಗರ ವಚನ ಸಾಹಿತ್ಯ

ಶ್ರೀಮಂತ ಗುರು ಶಿಷ್ಯ ಪರಂಪರೆಯನ್ನು ಪಡೆದ ತೋಂಟದ ಸಿದ್ಧಲಿಂಗರು ವಚನ ಸಾಹಿತ್ಯ ಕ್ಷೇತ್ರಕ್ಕೆ ಅಪರವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಸ್ವತಃ ವಚನಗಳನ್ನು ರಚಿಸಿದುದಲ್ಲದೆ 'ಜಂಗಮ ರಗಳೆ' ಮತ್ತು 'ಏಕೋತ್ತರ ಶತಸ್ಥಲ' ಕೃತಿಗಳು ಇವರ ರಚನೆ ಎಂಬ ಅಭಿಪ್ರಾಯಗಳಿವೆ. ಆದರೆ ಈ ಕೃತಿಗಳು ಉಪಲಬ್ಧವಿಲ್ಲದ ಕಾರಣ ಖಚಿತವಾಗಿ ಏನನ್ನು ಹೇಳಲು ಸಾಧ್ಯವಿಲ್ಲ.[೩೦] ಅವರ ಉಪಲಬ್ಧ ಏಕೈಕ ಕೃತಿಯೆಂದರೆ 'ಷಟ್‌ಸ್ಥಲ ಜ್ಞಾನ ಸಾರಾಮೃತ'. ಇದು ವೀರಶೈವ ಜೀವ ಜೀವಾಳವೆನಿಸಿದ ಷಟ್‌ಸ್ಥಲ ಸಿದ್ಧಾಂತವನ್ನು ವ್ಯವಸ್ಥಿತವಾಗಿ ಪ್ರತಿಪಾದಿಸುತ್ತದೆ. ಇದರಲ್ಲಿ ಏಳುನೂರೊಂದು ವಚನಗಳಿವೆ. ಇದು ಏಳು ನೂರೊಂದು ವಿರಕ್ತರನ್ನು ಸಂಕೇತಿಸುವಂತಿದೆ. " ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೆ'ಎಂಬುದು ಇವರ ವಚನಗಳ ಅಂಕಿತ, ವಚನಗಳ ರಚನೆಯ ಉದ್ದೇಶವನ್ನು ಕೃತಿಯ ಹೆಸರೆ ಸ್ಪಷ್ಟಪಡಿಸುತ್ತದೆ.

೨೭,೨೮. ಡಾ॥ ಎಂ.ಎಂ. ಕಲಬುರ್ಗಿ,'ಮಾರ್ಗ–೧', ಪುಟ –೩೬೦–೩೬೧.
೨೯. ಡಾ. ವೀರಣ್ಣ ರಾಜೂರ– 'ಬಸವೋತ್ತರ ಯುಗದ ವಚನಕಾರರು,'ಪುಟ–೪೫
೩೦. ಡಾ॥ ಗುರುಪಾದ ಮರಿಗುದ್ದಿ, (ಸಂ)– 'ಬಸವೋತ್ತರ ಯುಗದ ವಚನ ಸಾಹಿತ್ಯ,' ಪುಟ–೬೬

ಷಟ್ ಸ್ಥಲ ಜ್ಞಾನ ಸಾರಾಮೃತವು ಸರ್ವ ಶೂನ್ಯ ನಿರಾಲಂಭ ಸ್ಥಲದಿಂದ ಹಿಡಿದು ಕೊನೆಯ ನಿರವಲಯ ಸ್ಥಲದವರೆಗೆ ಒಟ್ಟು ೪೨ ಸ್ಥಲಗಳಿವೆ.[೩೧] ವೀರಶೈವ ಧರ್ಮದ ಪರಿಭಾಷೆಗೆ ಅನುಗುಣವಾಗಿ ಸ್ಥಲಕಟ್ಟುಗಳನ್ನು ಮಾಡಿ ಆಯಾಸ್ಥಲಕಟ್ಟಿನ ವಿಚಾರಗಳನ್ನೊಳಗೊಂಡಂತೆ ವಚನಗಳನ್ನು ಸಂಕಲ್ಪಿಸಲಾಗಿದೆ. ಒಂದು ಶಾಸ್ತ್ರೀಯತೆಯನ್ನು ಇಲ್ಲಿ ಕಾಣಬಹುದಾಗಿದೆ. ಈ ಕೃತಿಯ ಪ್ರತಿಸ್ಥಲಾರಂಭದಲ್ಲಿ ಸೂತ್ರಗಳಿರುವುದು ವಿಶೇಷತೆಯೆನಿಸಿದೆ. ಕೃತಿಯ ಆರಂಭದಲ್ಲಿ ಬರುವ ಒಂಬತ್ತು ಸ್ತೋತ್ರದ ವಚನಗಳು ಸಂಪ್ರದಾಯ ಕಾವ್ಯಾರಂಭದ ಕವಿ, ಕಾವ್ಯವಿಚಾರಗಳನ್ನು ನೆನಪಿಸುವಂತಿವೆ. ಸ್ಥಲಾರಂಭದ ಸೂತ್ರಗಳು ಅನ್ವರ್ಥವಾಗಿವೆ.[೩೨] ಇಂಥ ಸೂತ್ರದ ನಿರೂಪಣೆಗಳು ಸಾಧಕನ ಅರಿವು, ಆಚಾರ, ನಿಂತ ಹಾಗೂ ತಲುಪಬೇಕಾದ ನೆಲೆಯನ್ನು ಜೋಡಿಸುವ ಕೊಂಡಿಗಳಂತಿವೆ. ಇವುಗಳನ್ನು ಬಿಡಿ ಬಿಡಿಯಾಗಿ ನೋಡಿದಾಗ ಆಯಾಸ್ಥಲದ, ಇಡಿಯಾಗಿ ನೋಡಿದಾಗ ಸಮಗ್ರ ಷಟ್‌ಸ್ಥಲದ ಕಲ್ಪನೆ ಸುಂದರವಾಗಿದೆ. ಇಂತಹ ಸೂತ್ರಗಳ ನಂತರ ಆರಂಭವಾಗುವ ಸಿದ್ಧಯತಿಗಳ ವಚನಗಳು ಸಿದ್ಧಾಂತದ ಸಾರಕ್ಕೆ, ಸ್ವಂತ ಅನುಭವವನ್ನು ಯರಕ ಹೊಯ್ದಂತಾಗಿವೆ.[೩೩]

ತೋಂಟದ ಸಿದ್ಧಲಿಂಗ ಯತಿಗಳ ವಚನಗಳು ಸೈದ್ಧಾಂತಿಕ ಹಾಗು ಸಾಹಿತ್ಯಿಕ ದೃಷ್ಟಿಗಳಿಂದಲೂ ಬಹಳ ಮಹತ್ವದವೆನಿಸಿವೆ. ಇವರ ವಚನಗಳಲ್ಲಿ ಬಸವಾದಿ ಶರಣರ ವಚನಗಳಲ್ಲಿದ್ದಂತಹ ಸಾಮಾಜಿಕ ಸಂಘರ್ಷ, ತೊಳಲಾಟ, ತೀವ್ರತೆ, ಸ್ವಾತಂತ್ರ್ಯದ ಹಂಬಲಗಳಿಲ್ಲ. ಇವರಲ್ಲಿ ಪ್ರಗತಿ, ಪ್ರಯೋಗಶೀಲತೆ, ಹೊಸಮಾರ್ಗದ, ಜಂಗಮ ಶೀಲದ ಸಮಾಜ ನಿರ್ಮಾಣ ಇವರ ಮುಂದಿರಲಿಲ್ಲ. ಕಾರಣ ಇವರು ಇದ್ದಂತಹ ಪರಿಸರ. ಇದು ಒಂದು ರೀತಿಯ ಸಿದ್ಧ ಚೌಕಟ್ಟಿಗೆ ಸತ್ವ ತುಂಬುವ, ಅಳವಡಿಸುವ, ವ್ಯಾಖ್ಯಾನಿಸುವ ಜವಬ್ದಾರಿಯನ್ನು ನೀಡಿತು. ಜೊತೆಗೆ ರೂಢಿಗತವಾದ ಒಂದು ವ್ಯವಸ್ಥೆಯನ್ನು ಸಂರಕ್ಷಿಸುವ ತುರ್ತು ಇವರ ಮತ್ತು ಇವರ ಶಿಷ್ಯರಾದ ೭೦೦ ವಿರಕ್ತರ ಮುಂದಿತ್ತೆನ್ನಬಹುದು. ಹಾಗಾಗಿ ಷಟ್‌ಸ್ಥಲ ಶಾಸ್ತ್ರವನ್ನು ಸುಸಂಬದ್ಧವಾಗಿ ವಿವರಿಸಬೇಕೆಂದು ಹೊರಟವರು ಸಿದ್ಧಲಿಂಗಯತಿಗಳು. ಬಸವಾದಿ ಶರಣರಂತೆ ಇವರ ವಚನಗಳ ಉದ್ದೇಶ ಸಾಹಿತ್ಯ ಸಾಧನೆಯಲ್ಲ. ಆದರೂ ಇವರ ವಚನಗಳಲ್ಲಿ ಸಾಹಿತ್ಯ ಗುಣಗಳಿರುವುದು ಕಂಡುಬರುತ್ತದೆ.

ಉದಾ : ಮೋಹನ ಮೊಲೆಯ ಮುದ್ದು ಮೊಗದ ಭಾವಕಿಯರ
ಲಲ್ಲೆ ನುಡಿಯೆಂಬ ನಯಗತ್ತಿ ಎಲ್ಲರ ಹೃದಯವ ಕೊರೆವುತ್ತಿದೆ ನೋಡಾ
ಇನ್ನೆಲ್ಲಿಯ ಅರುಹೊ ಶಿವಶಿವಾ
ಬಲ್ಲತನ ಬರುದೊರೆ ಹೋಯಿತ್ತು ಕಾಣಾ
ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ (ವ. ೧೦೬)

---

೩೧. ಡಾ॥ ಸಿ.ನಾಗಭೂಷಣ– 'ತೋಂಟದ ಸಿದ್ಧಲಿಂಗೇಶ್ವರ ' ಪುಟಸ-೪೪
೩೨. ಡಾ॥ ಗುರುಪಾದ ಮರಿಗುದ್ದಿ (ಸಂ) 'ಬಸವೋತ್ತರ ಯುಗದ ವಚನ ಸಾಹಿತ್ಯ,' ಪುಟ-೬೯
೩೩. ಡಾ॥ ಗುರುಪಾದ ಮರಿಗುದ್ದಿ (ಸಂ) 'ಬಸವೋತ್ತರ ಯುಗದ ವಚನ ಸಾಹಿತ್ಯ,' ಪುಟ-೬೯

ಈ ವಚನದಲ್ಲಿ ಮೊದಲೆರಡು ಸಾಲುಗಳಲ್ಲಿ ಬ್ರಾಂತ ಲೋಕದ ಚಿತ್ರ, ಆನಂತರದ ಎರಡು ಸಾಲುಗಳಲ್ಲಿ ಭಾವ ತೀವ್ರತೆ, ತೀವ್ರ ಸಂತಾಪ ವ್ಯಕ್ತವಾಗಿದೆ. 'ಲಲ್ಲೆನುಡಿಯೆಂಬ ನಯಗತ್ತಿ', 'ಬಲ್ಲತನ ಬರುದೊರೆ' ಎಂಬಲ್ಲಿನ ಸಹಜ ಹೋಲಿಕೆ ರೂಪಕಗಳು ತುಂಬಾ ಪರಿಣಾಮಕಾರಿಯೆನಿಸುತ್ತವೆ.

ಲಲನೆಯರ ನಟನೆಯೆಂಬ ಕುಟಿಲಕ್ಕೆ ಸಿಕ್ಕಿ
ಕೋಟಲೆಗೊಳದಿರಾ ಮರುಳು ಮಾನವಾ
ನಿಟಿಲ ತಟದಲ್ಲಿ ಮಠವ ಮಾಡಿಕೊಂಡು
ನಿಶ್ಚಿಂತ ನಿರಾಳನಾಗಿರಾ
ಹುಸಿಯ ಮಾಯಾ ತಮಂಧಕೆ ದಿಟ ಪುಟ ದಿವಾಕರ ಎನ್ನೊಡೆಯ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವ ಕಾಣಿರೋ (ವ.೧೧೦)

ಇಲ್ಲಿ ಪದ ಪ್ರಾಸಗಳು ಪುಟಿದೇಳುವ ಕಾರಂಜಿಯ ಸೊಬಗನ್ನು ಪಡೆಯುತ್ತವೆ. ನಟನೆ, ಕುಟಿಲ, ಕೋಟಲೆ, ನಿಟಿಲ ತಟದಲ್ಲಿ ಮಠ, ದಿಟ, ಪುಟ, ದಿವಾಕರ ಮುಂತಾದ ಪದಗಳು ಪಟಪಟನೆ ಅರಳುವ ಮಲ್ಲಿಗೆಯರಳಂತೆ ಬಾಸವಾಗುತ್ತವೆ. ಇಲ್ಲಿ ಬರುವ ಅನುಪ್ರಾಸವು ಸಹೃಹದನ ಮನಸ್ಸನ್ನು ಆಕರ್ಷಿಸುತ್ತದೆ.

ಸಿದ್ಧಲಿಂಗ ಯತಿಗಳು ಪರಮ ತಪಸ್ವಿಗಳು. ವೀರ ವಿರಕ್ತರು ಮತ್ತು ಅನನ್ಯ ಅನುಭಾವಿಗಳು. ಅವರ ವಚನಗಳು ಸಮಾಜ ಮುಖಿಯಾಗದೆ ಲಿಂಗಮುಖಿಯಾಗಿ ಹೊರ ಹೊಮ್ಮಿವೆ. ಭಕ್ತನ ಐಕ್ಯ ಸ್ಥಲದ ಒಂದು ವಚನದಲ್ಲಿ ಜೀವಾತ್ಮ ಪರಮಾತ್ಮರ ರಹಸ್ಯವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ಕಡೆಯಲ್ಲಿ ಮೊದಲಲ್ಲಿ ಸುವರ್ಣವೊಂದಲ್ಲದೆ ಬೇರಿಲ್ಲ ಕಾಣಿರೋ
ಬಂಗಾರದ ಪ್ರಕೃತಿಯಿಂದ ಬೇರಿಟ್ಟು ತೋರಿತ್ತು ಎಂದಡೆ
ಬೇರಾಗ ಬಲ್ಲುದೆ ಅಯ್ಯಾ ?
ಶುದ್ದ ಪರಮಾತ್ಮ ತಾನೆ
ಒಂದೆರಡಾಗಿ ಜೀವಪರಮನೆಂದು ತೋರಿತ್ತೆಂದಡೆ
ಆವಾಗ ಜೀವ, ಆವಾಗ ಪರಮನೆಂಬ ಭೇದವನರಿಯದೆ
ಅರೆಮರುಳು ಆದಿರಲ್ಲಾ !
ದೇಹ ಭಾವದ ಉಪಾದಿಯುಳ್ಳನ್ನಕ್ಕರ ಜೀವನು,
ದೇಹ ಭಾವದ ಉಪಾದಿ ಶಿವಭಾವದಲ್ಲಿ ಅಳಿದ ಬಳಿಕ
ಜೀವನೆಂಬುವನು ಪರಮನೆಂಬವನು ತೀವಿ
ಪರಿಪೂರ್ಣ ವಸ್ತು ತಾನೆ ತಾನೆಂಬಾತ
ಮಹಾಲಿಂಗ ಗುರುಶಿವ ಸಿದ್ದೇಶ್ವರ ಪ್ರಭು ತಾನೆ ಕಾಣಿರೊ (ವ. ೨೬೦)

ಇಲ್ಲಿ ಸಿದ್ಧಲಿಂಗರು ಹೇಳಬೇಕಾದ ತತ್ವವನ್ನು ಸರಳವಾಗಿ, ನೇರವಾಗಿ ಹೇಳಿದ್ದಾರೆ.ತಾನಾಗಿದ್ದ ತತ್ವವು ಅಂಗ–ಲಿಂಗವೆಂದೆರಡಾಗಿ, ಶಕ್ತಿ–ಭಕ್ತಿಗಳನ್ನಾಶ್ರಯಿಸಿ, ಹಸ್ತ–ಮುಖಗಳಿಂದ ಪದಾರ್ಥಗಳನ್ನು ಪ್ರಸಾದ ರೂಪವಾಗಿ ಅರ್ಪಿಸಿ ಮತ್ತೆ ಒಂದರಲ್ಲಿ ಅಡಗಿ ಪರಿಪೂರ್ಣನಾಗುವುದನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ಸಿದ್ದಲಿಂಗರ ವಚನಗಳನ್ನು ಬಹುಶಃ ಎರಡು ನೆಲೆಯಲ್ಲಿ ವಿವೇಚಿಸಬಹುದು. ಒಂದು ತಾತ್ವಿಕ ನೆಲೆ, ಎರಡು ಅನುಭಾವಿಕ ನೆಲೆ[೩೪]. ತಾತ್ವಿಕ ವಚನಗಳಲ್ಲಿ ಶಾಸ್ತ್ರನಿಷ್ಟೆ, ಧರ್ಮ ಶ್ರದ್ಧೆ ಕಂಡುಬಂದರೆ, ಅನುಭಾವಿಕ ವಚನಗಳಲ್ಲಿ ಕವಿ ಹೃದಯ ಅರಳಿದರೂ ಅಲ್ಲಿಯೂ ತಾತ್ವಿಕ ಗುಣ ಸುಳಿದಾಡಿರುವುದು ಕಂಡುಬರುತ್ತದೆ. ತತ್ವ ಪ್ರಧಾನ ವಚನಗಳು ಹೆಚ್ಚು ದೀರ್ಘವಾಗಿದ್ದರೆ, ಅನುಭಾವ ಪ್ರಧಾನ ವಚನಗಳು ಕಿರಿದಾಗಿ, ಭಾವಸಾಂದ್ರತೆಯನ್ನು ಪಡೆದುಕೊಂಡಿದೆ.

ಸಂಸಾರ ಹೇಯ ಸ್ಥಲದಲ್ಲಿ ಸಂಸಾರ ಬಂಧನದಲ್ಲಿರುವವರನ್ನು ಕುರಿತು "ಉರಿಗೆ ತೋರಿದ ಬೆಣ್ಣೆ ಕರಗುವಂತೆ ಅಸಿಯ ಜವ್ವನೆಯರ ಕಂಡು ವಿಷಯಾತುರರಾಗಿ ಕುಸಿವುತ್ತಿಪ್ಪರು ನೋಡ–"(ವ.೧೧೧), "ಪಶುಪತಿ ನೀ ಮಾಡಿದ ವಿಷಯ ವಿಧಿ ಈರೇಳು ಲೋಕವನಂಡಲೆವುತ್ತಿದೆ ನೋಡಾ. ಈ ಸಂಸಾರ ಪ್ರಪಂಚ ದೇವದಾನವ ಮಾನವರು ಪರಿಹರಿಸಲಾರದೆ ಅಳುತ್ತ ಮುಳುಗುತ್ತಲಿಪ್ಪರು ನೋಡಾ–"(ವ.೧೧೨), "ಹೆಂಗಳೊಲವೆಂಬುದು ಅಂಗಜನ ಅರಮನೆ, ಭಂಗ ಬಡುತ್ತಿದ್ದಾರೆ ನೋಡಾ ತ್ರೈಜಗವೆಲ್ಲಾ–"(ವ.೧೧೫), "ವಿಷಯರತಿಯುಳ್ಳವಂಗೆ ಈಶ್ವರ ರತಿಯಿನ್ನೆಲ್ಲಿಯದೊ.."(ವ.೧೧೯) ಎಂದು ಹಾಲೋಗರವನುಂಡು ಬಾಲೆಯರ ತೋಳಮೇಲೋರಗಿದೊಡೆ ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಿರಣ್ಣಾ –"(ವ ೧೪೦) "ಯುವತಿಯರ ವ್ಯವಹಾರವೆಂಬ ವಿಕಳತೆ ಹತ್ತಿ ಯೋಗದ ಸಮತೆ ಸಡಿಲಿತ್ತು ನೋಡಾ–– "ಸತ್ಯ ಸತ್ತಿತ್ತು, ಭಕ್ತಿಯರತ್ತಿತ್ತು–"(ವ. ೧೫೦) ಎಂದು ಹೇಳುತ್ತಾರೆ.

ಸಂಸಾರ ಬಂಧನದಲ್ಲಿದ್ದವರನ್ನು ಕುರಿತು ಹೇಳಿದಂತೆ ತಾವೂ ಸಹ ಮಾಯೆಯ ಮೋಡಿಯ ಸೆಳೆತಕ್ಕೆ ಒಳಗಾಗಿರುವುದನ್ನು ಸಿದ್ಧಲಿಂಗರು ಹೇಳಿಕೊಂಡಿದ್ದಾರೆ."ಕಾಮದಿಂದ ಕರಗಿದೆನಯ್ಯಾ – ಎನ್ನ ಕಾಮಾದಿ ಷಡುವರ್ಗಂಗಳ ಕಳೆದು ಅಹಂಕಾರ ಮಮಕಾರಂಗಳ ಮಾಣಿಸಿ ನಿರಹಂಕಾರಿ ಎಂದೆನಿಸಯ್ಯಾ –"(ವ.೧೨೭) ಎಂದು ಬೇಡಿಕೊಂಡರೆ ಮತ್ತೊಂದು ವಚನದಲ್ಲಿ "ಎನ್ನ ಮನಸ್ಸು ಹೊನ್ನು, ಹೆಣ್ಣು, ಮಣ್ಣು ನೆನನೆನೆದು, ನಿಮ್ಮ ನೆನೆಯಲೊಲ್ಲದು ನೋಡಾ–" (ವ.೧೩೧)" ಮಾಯಾ ವಿಲಾಸವೆಂಬ ಮೃತ್ಯು ಮುಟ್ಟದ ಮುನ್ನ ನಿಮ್ಮತ್ತ ಹಿಡಿದು ಎತ್ತಿಕೊಳ್ಳಯ್ಯ " (ವ.೧೫೦) ಎಂದು ಮೊರೆಯಿಡುತ್ತಾರೆ.
ಶರಣನಿಗೂ ಲಿಂಗಕ್ಕೂ ಅಭೇದ ಕಲ್ಪಿಸುವ ಈ ವಚನ ಸಾರ್ಥಕ ಸಾದೃಶ್ಯದಿಂದ ಕೂಡಿದೆ.

> "ಸೂರ್ಯನಿಂದ ತೋರಿದ ಕಿರಣಂಗಳಿಗೂ
> ಆ ಸೂರ್ಯನಿಗೂ ಭಿನ್ನವುಂಟೆ ?
> ಚಂದ್ರನಿಂದ ತೋರಿದ ಕಲೆಗೂ ಆ ಚಂದ್ರನಿಗೂ ಭಿನ್ನವುಂಟೆ ?
> ಅಗ್ನಿಯಿಂದ ತೋರಿದ ಕಾಂತಿಗೂ ಆ ಅಗ್ನಿಗೂ ಭಿನ್ನವುಂಟೆ ?
> ಜ್ಯೋತಿಯಿಂದ ತೋರಿದ ಬೆಳಗಿಗೂ
> ಆ ಜ್ಯೋತಿಗೂ ಭಿನ್ನವುಂಟೆ ? (ವ.ಸಂ.೪೨)

ಶರಣ ಮತ್ತು ಲಿಂಗದ ಸಂಬಂಧ , ಸೂರ್ಯ– ಕಿರಣ , ಚಂದ್ರ – ಕಲೆ , ಅಗ್ನಿ – ಕಾಂತಿ, ಜ್ಯೋತಿ– ಬೆಳಗಿನ ಸಂಬಂಧದಂತೆ ಒಂದನ್ನು ಬಿಟ್ಟು ಒಂದು ಇರಲಾರವು. ಅವು ಪರಸ್ಪರ ಪೂರಕವಾಗಿ ಇರುತ್ತವೆ ಎಂಬುದು ವಚನಕಾರನ ಆಶಯ.

---

೩೪. ಡಾ. ವೀರಣ್ಣ ರಾಜೂರ. 'ಬಸವೋತ್ತರ ಯುಗದ ವಚನಕಾರರು,' ಪುಟ – ೪೯

[illegible]

[illegible]

[illegible]

[illegible]

[illegible]

ಮಹಾಜ್ಞಾನ ಸ್ವರೂಪರಪ್ಪ ಶರಣರಿಗೆ ಸಂಕಲ್ಪ , ವಿಕಲ್ಪವೆಂಬುದಿಲ್ಲ ಎಂಬುದನ್ನು ಈ ವಚನ ಧ್ವನಿ ಪೂರ್ಣವಾಗಿ ತಿಳಿಸುತ್ತದೆ.

"ಸುಧೆಯೊಳಗೆ ವಿಷವುಂಟೆ ? ಮಧುರದೊಳಗೆ ಕಹಿಯುಂಟೆ ?
ದಿನಮಣಿಯೊಳಗೆ ಕಪ್ಪುಂಟೆ ? ಬೆಳದಿಂಗಳೊಳಗೆ ಕಿಚ್ಚುಂಟೆ ?
ಅಮೃತ ಸಾಗರದೊಳಗೆ ಬೇವಿನ ಬಿಂಧುವುಂಟೆ ?

ಕತೃ ಹೀನವಾಗಿ ಆತ್ಮನು ತನ್ನಿಂದ ತಾನೆ ಮುಕ್ತನಾಗುವುದು ಅಸಾಧ್ಯದ ಮಾತು. ಹಾಗೆ ದ್ವೈತಕ್ಕೆ ಎಂದೂ ಮುಕ್ತಿಯಿಲ್ಲ ಎಂಬ ತಾತ್ವಿಕ ವಿಚಾರವನ್ನು ಹೇಳುವ ಈ ವಚನ ಅಷ್ಟೆ ಕಾವ್ಯ ಸತ್ವದಿಂದಲೂ ಕೂಡಿದೆ.

"ಮಸಿ ಎಂದಾದರೂ ಬೆಳ್ಪಾದುದುಂಟೆ ?
ಅಂಬರ ಮಾಸಿದರೆ ತೊಳೆದಡೆ ಬೆಳ್ಪಹುದಲ್ಲದೆ
ಮಲದಲ್ಲಿ ಸೀರೆಯ ಮಡಿ ಮಾಡಿ ತೊಳೆದರೆ ಬಿಳಿದಾಗಬಲ್ಲುದೆ?"(ವ. ೫೯)

ಗುರುವಿನ ಮಹತ್ವವನ್ನು ಹೇಳುವಾಗ ಶಿಷ್ಯನಿಗೆ ಗುರು ಕೇವಲ ನರಮಾನವನಲ್ಲ . ಅದನ್ನು ಮೀರಿದ ಒಂದು ಶಕ್ತಿ ಆತ. ಮುಕ್ತಿಗೆ ಮಾರ್ಗದಾತ, ಪಾಪನಾಶಕ, ಗುರುವೇ ಪರಮೇಶ್ವರ ಎಂಬುದನ್ನು ಈ ವಚನದಲ್ಲಿ ಹೇಳುತ್ತಾನೆ. ಈ ವಚನ ಕಾವ್ಯ ಸೌಂದರ್ಯವನ್ನು ಒಳಗೊಂಡು ಸಹೃದಯನ ಮನಸ್ಸಿಗೆ ಹಿತವನ್ನುಂಟುಮಾಡುತ್ತದೆ.

"ಸುರತರು ವೃಕ್ಷದೊಳಗಲ್ಲ
ಸುರಧೇನು ಪಶುವಿನೊಳಗಲ್ಲ
ಪರುಷ ಪಾಷಾಣದೊಳಗಲ್ಲ
ಶಿಷ್ಯನ ಭಾವಕ್ಕೆ ಗುರು ನರನಲ್ಲ " (ವ. ೧೬೧)

ಮಹಾಲಿಂಗದಲ್ಲಿ ಲೀನವಾದ ಮನಸ್ಸಿನ ಸ್ಥಿತಿಯನ್ನು ಸಿದ್ಧಲಿಂಗರು ಹಲವು ಸುಂದರ ದೃಷ್ಟಾಂತ ಉಪಮೆಗಳ ಮೂಲಕ ಸ್ಪಷ್ಟಪಡಿಸಿರುವರು.

"ಕತ್ತಲೆಯನೊಳಕೊಂಡ ಬೆಳಕಿನಂತೆ
ಪಕ್ಷಿಯನೊಳಕೊಂಡ ತತ್ತಿಯಂತೆ
ಮುತ್ತನೊಳಕೊಂಡ ಚಿಪ್ಪಿನಂತೆ
ಸಾಗರವನೊಳಕೊಂಡ ಶಶಿಯಂತೆ
ಜಗವನೊಳಕೊಂಡ ಆಕಾಶದಂತೆ
ಎನ್ನ ನೀವು ಒಳಕೊಂಡಿರಿಯಾಗಿ
ನಾನೋ ನೀನೋ ಏನೆಂದರಿಯೆನಯ್ಯಾ " (ವ. ೨೬೨)

ಇದಕ್ಕೆ ಪೂರಕವಾದ ಇನ್ನೊಂದು ವಚನ ಹೀಗಿದೆ," ಹೊನ್ನು ತನ್ನ ಬಣ್ಣವನ್ನು ತಾನರಿಯದಂತೆ, ಬೆಲ್ಲ ತನ್ನ ಮಧುರವ ತಾನರಿಯದಂತೆ, ಪುಷ್ಪ ತನ್ನ ಪರಿಮಳವ ತಾನರಿಯದಂತೆ

ಮನವು ಮಹಾಲಿಂಗದಲ್ಲಿ ಲೀಯವಾಗಿ ನಾನು ನೀನಾಗಿರ್ದೆನಯ್ಯಾ"(ವ. ೧೬೩)ಎಂದು ಹೇಳುತ್ತಾರೆ.

ತೋಂಟದ ಸಿದ್ಧಲಿಂಗರು ವಚನಗಳಲ್ಲದೆ ಅನೇಕ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಇವು ತತ್ವ ಮತ್ತು ಸಾಹಿತ್ಯಗಳ ಸಮರಸವಾಗಿವೆ. ಸಮುದ್ರದ ಹಾಗೆ ಮೇಲು ನೋಟಕ್ಕೆ ನಿಗೂಢವಾಗಿರುವ ಈ ಬೆಡಗಿನ ವಚನಗಳನ್ನು ಅರ್ಥ ಮಾಡಿಕೊಂಡರೆ ಆನಂದವಾಗುತ್ತದೆ.

" ಹಾರುವ ಹಕ್ಕಿಗೆ ಗರಿಯಿಲ್ಲ ನೋಡಾ
ಊರೊಳಗಿಪ್ಪ ಕಪಿಗೆ ತಲೆಯಿಲ್ಲ ನೋಡಾ
ಹಾರುವ ಹಕ್ಕಿಗೆ ಗರಿ ಬಂದು
ಊರೊಳಗಿಪ್ಪ ಕಪಿಗೆ ತಲೆ ಬಂದಲ್ಲದೆ
ತಾನಾರೆಂಬುದನರಿಯಬಾರದು
ತನ್ನಾದಿಯ ಶಿವತತ್ವದ ಭೇದಿಸಲರಿಯದೆ
ವೇದಾಗಮ ಮುಖದಿಂದ ನಿಮ್ಮ ನರಿದೆನೆಂಬ
ಅಜ್ಞಾನಿಗಳನೇನೆಂಬೆನಯ್ಯ –" (ವ. ೩೭೯)

ಇಲ್ಲಿ ಮಲತ್ರಯಕ್ಕೆ ಒಳಗಾದ ಪಕ್ಷಿಗೆ ಗರಿಯೂ ಇಲ್ಲ, ಗುರಿಯೂ ಇಲ್ಲ. ಊರೊಳಗಿಪ್ಪ ಕಪಿ ಎಂದರೆ ಅಜ್ಞಾನವೆಂಬ ಭವಬಂಧನದಲ್ಲಿ ಮುಳುಗಿರುವ ಮರ್ಕಟ ಸ್ವಭಾವದ ಮಾನವನ್ನು ಸೂಚಿಸುತ್ತದೆ. ಹಕ್ಕಿಗೆ ಗರಿ ಬಂದರೆ, ಕಪಿಗೆ ಸುಜ್ಞಾನದ ತಲೆ ಬಂದರೆ ತನ್ನ ಆದಿಯ ಶಿವತತ್ವ ತಾನಗಿಯೆ ಅರ್ಥವಾಗುತ್ತದೆ. ಅದ ಬಿಟ್ಟು ಆಗಮಗಳ ಮೂಲಕ ನಿಮ್ಮನ್ನು ಅರಿಯಲಾಗದು. ಹಾಗೆ ಅರಿಯಲು ಪ್ರಯತ್ನಿಸುವರಿಗೆ ಜ್ಞಾನವೂ ಇಲ್ಲ, ಮುಂದೆ ಗುರಿಯೂ ಇಲ್ಲದೆ ಬಳಲುವ ಅಜ್ಞಾನಿಗಳೆಂದು ಕರೆಯುತ್ತೇನೆ ಎನ್ನುತ್ತಾರೆ.

"ಮುಂಡದಲ್ಲಿ ಹುಟ್ಟಿದ ತಲೆ
ಕೆಂಡವ ಕಚ್ಚಿ ಕುಣಿದಾಡುವುದ ಕಂಡೆನಯ್ಯಾ,
ಮುಂಡ ಬೆಂದು ತಲೆವುಳಿದು ಕೆಂಡ ಕೆದರಲಾಗಿ
ಅಖಂಡ ಪರಿಪೂರ್ಣ ಪರಕ್ಕೆ ಪರನಾದ
ಲಿಂಗೈಕ್ಯನನೆಂಬೆನಯ್ಯಾ–" (ವ. ೫೮೨)

ಈ ಬೆಡಗಿನ ವಚನದ ಅರ್ಥ ದೇಹದಲ್ಲಿ ಜ್ಞಾನೋದಯವಾಗಿ ಕ್ರಿಯಾ ಪಿಂಡವು ಸುಟ್ಟು, ಮಹಾಜ್ಞಾನವು ಪ್ರಕಾಶಮಾನವಾಗಿ ಬೆಳಗಿದ ಶಿವಯೋಗದ ಆನಂದವನ್ನು ವರ್ಣಿಸಲಾಗದ ಸ್ಥಿತಿಯನ್ನು ಸಿದ್ಧಲಿಂಗರು ಇಲ್ಲಿ ಚಿತ್ರಿಸಿದ್ದಾರೆ. ಹೀಗೆ ವಿಶಿಷ್ಟವಾದ ಅನುಭವದ ಸೂಕ್ಷ್ಮಗಳನ್ನು ಉತ್ಕಟವಾದ ರೀತಿಯಲ್ಲಿ ಬೆಡಗಿನ ವಚನಗಳ ಮೂಲಕ ಹೇಳುವ ರೀತಿಯೆ ವಿಶಿಷ್ಟವಾದುದು. ಇವರ ವಚನಗಳ ಶಿಲ್ಪ ಮತ್ತು ಶೈಲಿ ಬಸವಾದಿ ಶಿವ ಶರಣರ ವಚನಗಳನ್ನು ಹೋಲುತ್ತವೆ. ತೋಂಟದ ಸಿದ್ಧಲಿಂಗರನ್ನು ತೋಂಟದ ಅಲ್ಲಮ, ಅಲ್ಲಮನ ಅವತಾರವೆಂದು ಜನ ಭಾವಿಸಿದ್ದರೂ ಸಿದ್ಧಲಿಂಗರು ಮಾತ್ರ ತಮ್ಮನ್ನು ಬಸವ, ಅಲ್ಲಮ ಮೊದಲಾದ ಪ್ರಮಥರ ಶಿಶು ಎಂದೇ ಭಾವಿಸಿಕೊಂಡಿದ್ದಾರೆ.

ಅವರ ವಚನಗಳ ಪ್ರಭಾವ ಇವರ ಮೇಲೆ ಆಗಿರುವುದು ಕಂಡುಬರುತ್ತದೆ. ಅದರೊಂದಿಗೆ ವ್ಯಕ್ತಿಗತವಾದ ಅನುಭವ ಸಮ್ಮಿಳಿತವಾಗಿದೆ.

"ಉಳ್ಳವರು ಶಿವಾಲಯ ಮಾಡಿಹರು
ನಾನೇನ ಮಾಡಲಿ ಬಡವನಯ್ಯಾ "

ಬಸವಣ್ಣನವರ ಈ ವಚನವನ್ನು ಅನುಸರಿಸಿಯೆ ಹೊಸರೂಪ ತಾಳಿರುವ ಸಿದ್ಧಲಿಂಗರ ವಚನ :

"ದೇಹವೇ ದೇಗುಲ,ಕಾಲೇ ಕಂಬ, ಶಿರಸ್ಸೇ ಶಿಖರ ನೋಡಾ
ಹೃದಯ ಕಮಲ ಕರ್ಣಿಕಾವಸವೇ ಸಿಂಹಾಸನ –(ವ.೫೫೪)

ಈ ವಚನವನ್ನು ನೋಡಿದಾಗ ಶರಣರ ಪ್ರಭಾವಗಳನ್ನು ದಕ್ಕಿಸಿಕೊಂಡು ಸ್ವಾನುಭವಗಳನ್ನು ಮೈಗೂಡಿಸಿಕೊಂಡಿರುವ ಸಿದ್ಧಲಿಂಗರ ವ್ಯಕ್ತಿತ್ವ ಮತ್ತು ಕವಿತ್ವದ ಪರಿಚಯ ನಮಗಾಗುತ್ತದೆ. ಇದೇ ರೀತಿ ಬಸವಣ್ಣನವರ ಅನೇಕ ವಚನಗಳು ಸಿದ್ಧಲಿಂಗರ ಮೇಲೆ ಪ್ರಭಾವ ಬೀರಿದೆ. ಅಲ್ಲಮ ಪ್ರಭುವಿನ ಪ್ರಭಾವವೂ ಹಾಗೆಯೆ ಅಕ್ಕಮಹಾದೇವಿಯ ಪ್ರಭಾವವೂ ಸಿದ್ಧಲಿಂಗರ ಮೇಲಾಗಿರುವುದನ್ನು ಈ ಕೆಳಗಿನ ಉದಾಹರಣೆಯಿಂದ ತಿಳಿಯಬಹುದು.

ಅಲ್ಲಮ ಪ್ರಭುವಿನ ವಚನ :

" ನೆಲದ ಮರೆಯ ನಿಧಾನದಂತೆ,
ಮುಗಿಲ ಮರೆಯಲಡಗಿದ ಮಿಂಚಿನಂತೆ
ಬಯಲ ಮರೆಯಲಡಗಿದ ಮರೀಚನಂತೆ(ಮರೀಚಿಯಂತೆ)
ಕಂಗಳ ಮರೆಯಲಡಗಿದ ಬೆಳಗಿನಂತೆ –"

ಅಕ್ಕಮಹಾದೇವಿಯ ವಚನ :

"ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ,
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ –"

ಎಂಬ ವಚನಗಳು ಸಿದ್ಧಲಿಂಗರ ಮೇಲೆ ಅಪಾರ ಪ್ರಭಾವ ಬೀರಿರುವುದು ಅವುಗಳ ಅನುಕರಣೆ ಮಾಡಿರುವುದರಿಂದ ತಿಳಿದು ಬರುತ್ತದೆ.

ಸಿದ್ಧಲಿಂಗರ ವಚನ ಈ ರೀತಿ ಇದೆ.

"ಮುಗಿಲ ಮರೆಯ ಸೂರ್ಯನಂತೆ
ನೆಲದ ಮರೆಯ ನಿಧಾನದಂತೆ

ಒರೆಯ ಮರೆಯ ಅಲಗಿನಂತೆ
ಹಣ್ಣಿನೊಳಗಣ ರಸದಂತೆ
ಶರಣನ ಶರೀರವ ಮರೆಗೊಂಡು-"(ವ.೬೧೯)

ಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಜೇಡರದಾಸಿಮಯ್ಯ, ಚೆನ್ನಬಸವಣ್ಣ ಮುಂತಾದವರ ವಚನಗಳ ಪ್ರಭಾವ ಇವರ ಮೇಲಾಗಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಬಸವಣ್ಣನವರ ಪ್ರಭಾವ ವ್ಯಾಪಕವಾದುದು. ಅತ್ತಿಯ ಹಣ್ಣಿನ ಚಿತ್ರ, ಈಚಲ ಹಣ್ಣನ್ನು ತಿಂದು ಕೂಗುವ ನರಿಯ ಚಿತ್ರ. ಮನೆಯೊಳಗೆ ಕಸ ತುಂಬಿರುವ ಚಿತ್ರ ಇವೆಲ್ಲ ಬಸವಣ್ಣನವರ ವಚನಗಳನ್ನು ಜ್ಞಾಪಕಕ್ಕೆ ತರುತ್ತವೆ.

ಕೆಲವು ಕಡೆ ಬಸವಣ್ಣನವರ ಉಕ್ತಿಗಳು ಸ್ವಲ್ಪ ಮಾರ್ಪಾಟಾಗಿ ಬಂದಿವೆ. ಬಸವಣ್ಣನವರ "ಮೊಲನಿಂದ ಕರಕಷ್ಟ"ಸಿದ್ಧಲಿಂಗರಲ್ಲಿ"ನಾಯ ಬಾಲಕಿಂದ ಕರಕಷ್ಟ"ವಾಗುತ್ತದೆ. ಬಸವಣ್ಣನವರಲ್ಲಿ "ಭಗವಂತ ಬಂದರೆ ಕೊರಡು ಕೊನರುತ್ತದೆ, ಬರಡು ಹಯನಾಗುತ್ತದೆ" ಎಂಬ ಮಾತು ಸಿದ್ಧಲಿಂಗರಲ್ಲಿ ಮಾರ್ಪಾಟಾಗಿ "ಕೊರಡು ಎಂದು ಕೊನರದು, ಬರಡು ಎಂದು ಹಯನಾಗದು, ಮೂರ್ಖ ಎಂದೂ ಬುದ್ಧಿಯನ್ನು ಕಲಿಯನು" ಎಂಬ ಮಾತಾಗಿ ಬರುತ್ತದೆ. ಆದರೆ ಮಾತಿನ ಸಂದರ್ಭಗಳು ಬೇರೆ ಬೇರೆಯಾಗಿ ಬಂದಿರುವುದನ್ನು ಗಮನಿಸಬಹುದು. ಮೂಲ ವಚನಗಳ ಸೊಗಸು ಇಂತಹ ಕಡೆಗಳಲ್ಲಿ ತನ್ನ ಅರ್ಥಗಂಭೀರತೆಯನ್ನು ಕಳೆದುಕೊಳ್ಳುತ್ತವೆ.

ತೋಂಟದ ಸಿದ್ಧಲಿಂಗರ ವಚನಗಳಲ್ಲಿ ಹೇರಳವಾದಂತಹ ಲೋಕಾನುಭವ, ಉಪಮಾಕೃತಿಗಳು, ಪ್ರತಿಮಾ ವಿಧಾನದಿಂದ ಶಾಸ್ತ್ರ ವಿಷಯ ಮಹೋನ್ನತ ಸ್ಥಲಕ್ಕೆ ತಲುಪುವ ಶೈಲಿ, ಉದಾಹರಣೆಗಳ ಮೂಲಕ ತಿಳಿಸಿ ಹೇಳುವ, ಪ್ರತಿಪಾದಿಸುವ ಇಲ್ಲವೆ ವಿಷಯವನ್ನು ಪ್ರತಿಷ್ಠಾಪಿಸುವ , ಸಮರ್ಥಿಸುವ ಅಂಶಗಳನ್ನು ವಚನಗಳಲ್ಲಿ ಬಳಸಿಕೊಳ್ಳುವುದನ್ನು ನೋಡಬಹುದು. ಆಡುನುಡಿ, ಲೋಕೋಕ್ತಿ, ಉಪಮಾ, ರೂಪಕ, ಪ್ರತಿಮೆ, ಪ್ರಾಸ, ಲಯ ಮುಂತಾದ ಸಾಹಿತ್ಯಿಕ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

"ತುರಿಯ ಮೇಲೆ ಉಗುರನಿಕ್ಕಿದರೆ, ಹಿತವಾಗಿಹುದು" (ವ.೧೧೨)
"ಪಡುವ ಕಚ್ಚಿದ ನಾಯಿ ಒಡೆಯನ ಕುರುಹುಬಲ್ಲುದೆ ?" (ವ.೧೧೮)
" ಗಂಡಗಿಂದ ಹೆಂಡತಿ ಮೊದಲೇ ಹುಟ್ಟಿದರೂ
ಆ ಗಂಡಗಿಂದ ಕಿರಿಯಳಲ್ಲದೆ ಹಿರಿಯಳಲ್ಲವಯ್ಯಾ"(ವ.೧೬೨)
" ನವಿಲಾಡಿತೆಂದು ಕೆಂಬೂತ ಪಕ್ಕ ತರಿಕೊಂಡಂತೆ
ಹುಲಿಯ ಬಣ್ಣಕ್ಕೆ ನರಿ ಮೈಯ ಸುಟ್ಟುಕೊಂಡಂತೆ " (ವ. ೨೧೯)
"ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹೆಂಗೆ ಹಡೆವಳಯ್ಯ
ಲಿಂಗಕ್ಕೆ ನಾಚಿದಾತ ಶರಣನೆಂತಪ್ಪನಯ್ಯಾ ?" (ವ ೨೫೧)
"ಕತ್ತಲೆಯನೊಳಕೊಂಡ ಬೆಳಗಿನಂತೆ " (ವ. ೨೬೨)

[illegible]

[illegible]

[illegible]

[illegible]

[illegible]

"ಕೈಯಲ್ಲಿ ಹಣ್ಣಿದ್ದಂತೆ ಮರನನೇರಿ, ಕೊಂಬಬಾಗಿಸಿ
ಕಾಯ ಕೊಯಿವ ಅರೆಮರುಳನಂತೆ " (ವ.೨೬೮)
"ಗಂಡಿಂಗೆ ಹೆಣ್ಣಲ್ಲದೆ ಹೆಣ್ಣಿಂಗೆ ಹೆಣ್ಣುಂಟೆ ಜಗದೊಳಗೆ " (ವ. ೨೮೮)
"ಈಚಲ ತಿಂದ ನರಿ ತನ್ನ ವಿಕಾರಕ್ಕೆ ಒರಲುವಂತೆ" (ವ.೩೫೪)
"ಬೂದಿಯಲ್ಲಿ ಹೊರಳುವ ಕತ್ತೆಯಂತೆ
ಎಲುವ ಕಡಿವ ಸ್ವಾನನಂತೆ
ಹಾತೆಯ ತಿಂಬ ಹಲ್ಲಿಯಂತೆ " (ವ. ೪೦೦)
"ಕತ್ತೆಗೇಕಯ್ಯಾ ಕಡಿವಾಣ
ತೊತ್ತಿಗೆ ಗೋಳಬಂದಿಯೇಕಯ್ಯ
ಶ್ವಾನಗೇಕೆ ಆನೆಯ ಚೋಹವಯ್ಯಾ" (ವ. ೪೦೨)
"ಕೋತಿಗೆ ಕೊಂಬು ಹುಟ್ಟ ಬಲ್ಲುದೆ?
ನುಚ್ಚಕ್ಕಿ ಮೊಳೆಯಬಲ್ಲುದೆ?
ಅರೆಯ ಮೇಲೆ ತಾವರೆ ಬೆಳೆಯಬಲ್ಲುದೆ ?" (ವ. ೪೦೩)
"ಕಬ್ಬಿನ ಹೊರಗಣ ಸೊಗೆಯ ಮೆದ್ದು ಪರಿಣಾಮಿಸುವ ಹಸುವಿನಂತೆ " (ವ. ೪೬೬)
"ಹೆಣನ ಕಂಡರೆ ನಾಯಿ ಕಚ್ಚದೆ ಮಾಣ್ಬುದೆ ?
ನೊಣನ ಕಂಡರೆ ಕಪ್ಪೆ ಹಿಡಿದಲ್ಲದೆ ಮಾಣ್ಬುದೆ ?
ಹಣವ ಕಂಡರೆ ಮನ ಕನಲಿದಲ್ಲದೆ ಮಾಣ್ಬುದೆ? " (ವ. ೪೭೩)
"ಸಟ್ಟುಗ ಸವಿಯ ಬಲ್ಲುದೆ ?
ಅಟ್ಟ ಮಡಕೆ ಉಣಬಲ್ಲುದೆ ?" (ವ. ೬೪೩)
" ಕೆರೆಯೊಡೆದ ಬಳಿಕ ತೂಬು ತಡೆಯಬಲ್ಲುದೆ ?" (ವ. ೬೪೬)
"ಕುರುಡಗೆ ಕನ್ನಡಿಯ ತೋರಿದರೆ ನೋಡಬಲ್ಲನೆ?
ಮೂಗರಾಗವ ಹೇಳಿದರೆ ಹಾಡಬಲ್ಲನೆ ಅಯ್ಯಾ ?" (ವ.೬೪೫)
"ಗಾಳಿ ಗಂಧವನಪ್ಪಿದಂತೆ " (ವ. ೬೮೪)
"ಮಳೆ ಹುಯ್ದರಾಕಾಶ ನೆನೆವುದೆ ?
ಬಿರುಗಾಳಿ ಬೀಸಿದರಾಕಾಶ ನೋವುದೆ?
ಕಿತ್ತಲಗಿನಿಂದಿರಿದರೆ ಆಕಾಶ ಹರಿವುದೆ ?" (ವ. ೬೭೦)
"ಕಂಡುದನೊಂದ ನುಡಿವುದೀಲೋಕ
ಕಾಣದೊಂದ ನುಡಿವುದೀ ಲೋಕ" (ವ.೬೭೧)

ಈ ಉಕ್ತಿಗಳಲ್ಲಿ ಹುದುಗಿರುವ ಲೋಕಾನುಭವ, ಕಾವ್ಯ ಸೌಂದರ್ಯವನ್ನು ಅನುಭವಿಸಿಯೇ ಅರಿಯಬೇಕು. ನಿತ್ಯ ಜೀವನ, ಸುತ್ತಲಿನ ಪ್ರಕೃತಿ, ಸಾಮಾಜಿನ ಸ್ಥಿತಿಗತಿ ಇವೆಲ್ಲ ಕ್ಷೇತ್ರಗಳಿಂದ ಈ ಉಕ್ತಿಗಳು ಹೊರ ಹೊಮ್ಮಿವೆ. ಅವರು ಹೇಳುವ ತಾತ್ವಿಕ ವಿಚಾರಗಳಿಗೆ, ಅವರ ಶೈಲಿಗೆ ವಿನೂತನವಾದ ಮೆರಗನ್ನು ತಂದಿವೆ. ಇವರ ವಚನಗಳು ಮೇಲ್ನೋಟಕ್ಕೆ ನೀರಸವೆನಿಸಿದರು ಒಳಗಡೆ ಸಮಾಜದ ಕಳಕಳಿ ಇದೆ. ಬದುಕಿಗೊಂದು ನೀತಿಯ ಚೌಕಟ್ಟನ್ನು ಹಾಕುವ ಮಾತುಗಳು ಸಾಮಾನ್ಯವಾಗಿ ಲೋಕದ ಜನತೆಗೆ ಕಠಿಣವಾಗಿ ಕಾಣುವುದು ಸಹಜ. ಆದರೂ ಅದರೊಳಗೆ

ಶರಣನ ಪರಿವರ್ತನೆಗೆ ಬೇಕಾದ ಸಂಪತ್ತಿದೆ. ಕೆಲವೊಂದು ವಚನಗಳಲ್ಲಿನ ಅವರ ನಿಷ್ಠುರ ಮತ್ತು ನೇರ ಮಾತುಗಳು ಡಾಂಭಿಕ ಸಮಾಜವನ್ನು ಅಧರ್ಮದ ಹಾದಿಯಲ್ಲಿರುವ ಮಾನವ ಕೋಟಿಯನ್ನು ಎಚ್ಚರಿಸುವುದೆ ಆಗಿದೆ. ತೋಂಟದ ಸಿದ್ಧಲಿಂಗರು ಸಮಕಾಲೀನ ಸಮಾಜವನ್ನು ಪರಾಮರ್ಶಿಸಿದ್ದಾರೆ. ಅದಕ್ಕೆ ಬೇಕಾದ ಸತ್ಪಥವನ್ನು ತೋರಿಸಿದ್ದಾರೆ. ಇಹಪರ ಒಂದಾಗಬೇಕೆಂಬ ಕಳಕಳಿಯಿದೆ.

ಬಸವಾದಿ ಶರಣರ ವಚನಗಳ ಕಾಂತಿ ಪ್ರಖರತೆ ಮತ್ತು ಅದೇ ಮಟ್ಟದ ಸಾಹಿತ್ಯ ಗುಣಗಳಿಗೆ ಹೋಲಿಸಿದರೆ ಸಿದ್ಧಲಿಂಗರ ವಚನಗಳು ಆಮಟ್ಟಕ್ಕೆ ನಿಲ್ಲದಿದ್ದರೂ ವಚನದ ಸೃಜನ ಶೀಲತೆಯನ್ನು ಉಳಿಸಿಕೊಂಡು ಬಂದು ಎರಡನೆ ಘಟ್ಟದ ಸೃಜನ ಶೀಲ ವಚನ ಕ್ರಾಂತಿಗೆ ಹರಿಕಾರನಾದವನು. ಇವನಲ್ಲೂ ಹಲವಾರು ಒಳ್ಳೆಯ ವಚನಗಳಿರುವುದನ್ನು ಗಮನಿಸಬಹುದು.

ಬಸವಾದಿ ಶರಣರಿಗೆ ದೊರೆತಂತಹ ಪರಿಸರವಾಗಲೀ, ಸೌಲಭ್ಯವಾಗಲಿ ಸಿದ್ಧಲಿಂಗರಿಗೆ ಸಿಗಲಿಲ್ಲ. ಬಸವಣ್ಣ ಸಂಸಾರಿಯಾಗಿದ್ದ. ಲೌಕಿಕನಾಗಿದ್ದ. ಜೀವನದ ಸಮೃದ್ಧವಾದ ಅನುಭವದಿಂದ ಶ್ರೀಮಂತವಾಗಿದ್ದ ಪ್ರತಿಭೆಯನ್ನು ಹೊಂದಿದ್ದ. ಆದರೆ ಸಿದ್ಧಲಿಂಗರು ವಿರಕ್ತರಾಗಿದ್ದರು. ಶೂನ್ಯಪೀಠದ ಗುರುವಾಗಿದ್ದವರು. ಗುರುಪೀಠದಲ್ಲಿ ಕುಳಿತು ಲೋಕದ ಹಿತವನ್ನು, ಜನರ ಧಾರ್ಮಿಕ ಹಿತವನ್ನು ಸಂರಕ್ಷಿಸುವ ಜವಬ್ದಾರಿಗೆ ಬದ್ಧರಾದವರು. ಈ ಹಿನ್ನೆಲೆಯಲ್ಲಿ ಅವರ ವಚನಗಳು ರಚನೆಯಾಗಿರುವುದನ್ನು ಕಾಣಬಹುದು.

'ಷಟ್ ಸ್ಥಲ ಜ್ಞಾನ ಸಾರಾಮೃತ' ತೋಂಟದ ಸಿದ್ಧಲಿಂಗಯತಿಗಳ ವಚನಾಮೃತ, ಷಟ್ ಸ್ಥಲ ತತ್ವ ನಿರೂಪಣೆಯ ಆದರ್ಶ ಕೃತಿ. ತಮ್ಮ ವಚನಗಳನ್ನು ತಾವೇ ಸ್ಥಲ ಕಟ್ಟಿನ ಯೋಜನೆಯಲ್ಲಿ ಅಳವಡಿಸಿದ್ದಾರೆ. ಇದು ಕೇವಲ ಬುದ್ಧಿಯಿಂದ ನೆಯ್ದು ಬಟ್ಟೆಯಲ್ಲ. ಶಿವಾನುಭವದ ತುತ್ತತುದಿಯನ್ನೇರಿದ ಅಪ್ರತಿಮನ ಪ್ರಾಣಲಿಂಗದ ಉಸಿರು. ಸ್ವಾನುಭವದ ನಿಜಾನಂದದಲ್ಲಿ ಅರಳಿದ ಸುಜ್ಞಾನ ಪುಷ್ಪಗಳ ಸುಂದರ ಗುಚ್ಛವಿದು.[೩೫] ಇಂತಹ ಮಹತ್ವದ ಕೃತಿಯನ್ನು ನಿರ್ಮಿಸಿದ ತೋಂಟದ ಸಿದ್ಧಲಿಂಗ ಯತಿಗಳು ಹನ್ನೆರಡನೆಯ ಶತಮಾನದ ನಂತರ ಹದಿನಾರನೇ ಶತಮಾನದ ಮಧ್ಯದ ಅವಧಿಯಲ್ಲಿ ವೀರಶೈವ ಸಾಹಿತ್ಯ-ಸಂಸ್ಕೃತಿಯ ಚೇತನ ಶಕ್ತಿ ಕಮರಿ ಹೋಗಿದ್ದಾಗ ಅದಕ್ಕೆ ಪುನಶ್ಚೇತನ ಶಕ್ತಿ ತುಂಬಿದವರು. ಮುಂದಿನ ಜನಾಂಗದವರಿಗೂ ಇಂತಹ ಸಾಹಿತ್ಯ-ಸಂಸ್ಕೃತಿ ಉಳಿಸಿ ಬೆಳೆಸಿಕೊಂಡು ಹೋಗಲು ಸ್ಫೂರ್ತಿ ನೀಡಿದವರು.

---

೩೫. ಆರ್.ಸಿ. ಹಿರೇಮಠ-(ಸಂ)'ಷಟ್‌ಸ್ಥಲ ಜ್ಞಾನ ಸಾರಾಮೃತ' - ಪ್ರಸ್ತಾವನೆ ಪುಟ- ೧೧

೨. ಗುಮ್ಮಳಾಪುರದ ಸಿದ್ಧಲಿಂಗ – (೧೫೮೦)

ಈತ ಸಂಕಲನಕಾರ ಹಾಗೂ ವಚನಕಾರ. ಗುಮ್ಮಳಾಪುರದ ಸಿದ್ಧಲಿಂಗ, ಗುಮ್ಮಳಾಪುರದ ಸಿದ್ಧಲಿಂಗಯತಿ, ಗುಮ್ಮಳಾಪುರದ ಸಿದ್ಧದೇಶಿಕ, ಗುಮ್ಮಳಾಪುರದ ಸಿದ್ಧಲಿಂಗದೇವ ಎಂಬ ಹೆಸರಿನಿಂದ ಕರೆಯಿಸಿಕೊಳ್ಳುವ ಈತ ತೋಂಟದ ಸಿದ್ಧಲಿಂಗರ ಪ್ರಶಿಷ್ಯ. ಬೋಳಬಸವೇಶ್ವರನ ಶಿಷ್ಯ. ಈತನ ಹೆಸರಿನ ಹಿಂದೆ ಇರುವ 'ಗುಮ್ಮಳಾಪುರ' ಈತನ ಜನ್ಮಸ್ಥಳವಾಗಿದೆ. " ಇದು ಮದ್ರಾಸ ಪ್ರಾಂತದ ಸೇಲಂ ಜಿಲ್ಲೆಯ ಹೊಸೂರು ತಾಲ್ಲೂಕಿನ ಒಂದು ಚಿಕ್ಕ ಹಳ್ಳಿಯಾಗಿದೆ. ಹಿಂದೆ ಇದೊಂದು ಪ್ರಸಿದ್ಧ ವೀರಶೈವ ಕೇಂದ್ರವಾಗಿತ್ತೆಂದು ಅಲ್ಲಿರುವ ಅವಶೇಷಗಳು, ಶಾಸನಗಳು ಹಾಗೂ ಐತಿಹ್ಯಗಳು ಹೇಳುತ್ತವೆ.[೩೬]

ಇವರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಜೊತೆಯಲ್ಲಿದ್ದ ಇತರ ವಿರಕ್ತರಲ್ಲಿ ಒಬ್ಬರೆಂದು ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯದ ಪ್ರಕಾರದ ಶಾಸನವೊಂದರಿಂದ ತಿಳಿದು ಬರುತ್ತದೆ. ಅಲ್ಲದೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ತರುವಾಯ ಬೋಳ ಬಸವೇಶ್ವರರ ಉತ್ತರಾಧಿಕಾರಿಗಳಾಗಿ ನಿರಂಜನ ಪೀಠವನ್ನು ಅಲಂಕರಿಸಿದ್ದಾರೆ.[೩೭]

ವಿರಕ್ತ ತೋಂಟದಾರ್ಯನು (೧೬೧೬) ತನ್ನ ಸಿದ್ದೇಶ್ವರ ಪುರಾಣದಲ್ಲಿ ಈತನ ವ್ಯಕ್ತಿ ಚಿತ್ರಣವನ್ನು "ಲಲಿತ ರುದ್ರಾಕ್ಷಿಯಾಭರಣವನಲಂಕರಿಸಿ, ಸಲೆಭಸಿತಮಂ ನೊಸಲೊಳಿಟ್ಟು ಕೆಂಜೆಡೆಯನೆಳವಿಟ್ಟು" ಇದ್ದಂತೆ ತಿಳಿಸಿದ್ದಾನೆ. ಈತ "ಬಸವಾದಿಗಳ ವಚನಮಂ ಜಂಗಮಕೆ ಮುದದಿ ವ್ಯಾಖ್ಯಾನಮಂ ಮಾಡುತ್ತಿದ್ದ"ನೆಂಬ ಅಂಶ ಸಿದ್ಧನಂಜೇಶನ (೧೬೦೦) 'ರಾಘವಾಂಕ ಚಾರಿತ್ರ' (೧೯–೮೭) ದಿಂದ ತಿಳಿಯುತ್ತದೆ.

ಈತ ತನ್ನ ಶೂನ್ಯ ಸಂಪಾದನೆಯ ಅಂತ್ಯ ಗದ್ಯದಲ್ಲಿ ಸಿದ್ಧಲಿಂಗನನ್ನು ಕುರಿತು "ತೋಂಟದ ಸಿದ್ಧೇಶ್ವರ ದೇವ ಪುತ್ರರಾಗಿ, ಜಗಹಿತಾರ್ಥವಾಗಿ ಗುಮ್ಮಳಾಪುರದ ಸಿದ್ಧಲಿಂಗ ದೇವರೆಂಬ ನಾಮವಿಡಿದು ಬಸವಾದಿ ಪ್ರಮಥರ ವಚನಗಳಿಂದ " ಶೂನ್ಯ ಸಂಪಾದನೆಯನ್ನು ರಚಿಸಿದುದಾಗಿ ತಿಳಿಸುತ್ತಾನೆ. ವೃತ್ತದಲ್ಲಿ "ತೋಂಟದ ಸಿದ್ಧಲಿಂಗರ ಶಿಷ್ಯ ಬೋಳಬಸವೇಶಾಚಾರ್ಯರ ಕಾರುಣ್ಯದಿಂದ ಸಿದ್ಧಲಿಂಗನಾದ ನಾನು ಶೂನ್ಯ ಸಂಬೋಧೆಯನ್ನು ಹೇಳಿದೆನು" ಎಂದು ನುಡಿಯುತ್ತಾನೆ. ಗುಮ್ಮಳಾಪುರದ ಸಿದ್ಧಲಿಂಗನ ಕಾಲವನ್ನು ೧೫೮೦. ಅಂದರೆ ೧೬ ನೇ ಶತಮಾನ ಎಂದು ಗುರುತಿಸಲಾಗಿದೆ. ಈತನ ಶೂನ್ಯ ಸಂಪಾದನೆಯನ್ನು ಕ್ರಿ.ಶ. ೧೫೮೦ ರಲ್ಲಿ ಎಳಂದೂರು ಚನ್ನರಾಜನು ಪ್ರತಿಮಾಡಿಸಿ ವಿರಕ್ತ ಸಿದ್ಧಲಿಂಗರಿಗೆ ಅರ್ಪಿಸಿದುದಾಗಿ ತಿಳಿದುಬರುತ್ತದೆ. ಇದರಿಂದ ಗುಮ್ಮಳಾಪುರದ ಸಿದ್ಧಲಿಂಗ ಅದಕ್ಕೆ ಪೂರ್ವದಲ್ಲಿ ಇದ್ದನೆಂಬುದು ಸ್ಪಷ್ಟವಾಗುತ್ತದೆ.[೩೮]

---

೩೬. ಡಾ.ವೀರಣ್ಣ ರಾಜೂರ "ಬಸವೋತ್ತರ ಯುಗದ ವಚನಕಾರು", ಪುಟ–೬೧

೩೭. ಡಾ. ಆರ್. ಸಿ. ಹಿರೇಮಠ (ಸಂ) ಗುಮ್ಮಳಾಪುರದ ಸಿದ್ಧಲಿಂಗದೇವರ 'ಶೂನ್ಯ ಸಂಪಾದನೆ.' ಪುಟ–೧೭

೩೮. ಡಾ. ವೀರಣ್ಣರಾಜೂರ, 'ಬಸವೋತ್ತರ ಯುಗದ ವಚನಕಾರರು'. ಪುಟ–೬೨

ತನಗಿಂತ ಮೊದಲಿದ್ದ ಶೂನ್ಯ ಸಂಪಾದನಕಾರರಾದ ಶಿವಗಣ ಪ್ರಸಾದಿ ಮಹಾದೇವಯ್ಯ ಮತ್ತು ಕೆಂಚವೀರಣ್ಣೊಡೆಯರನ್ನು ಹೆಸರಿಸಿದ್ದಾನೆ.[೩೯] ಈತನನ್ನು ಸಿದ್ಧವೀರಣ್ಣೊಡೆಯರು ತಮ್ಮ ಶೂನ್ಯ ಸಂಪಾದನೆಯಲ್ಲಿ ಹೆಸರಿಸಿದ್ದಾನೆ.

ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯ ಸಂಪಾದನೆಯಲ್ಲಿ ೧೩೩೭ ವಚನ ಹಾಗು ೧೮ ಸ್ವರ ವಚನಗಳಿವೆ.[೪೦] ಶೂನ್ಯ ಸಂಪಾದನೆಯನ್ನು ಗುರು ತೋಂಟದ ಸಿದ್ಧಲಿಂಗರ ಅಪ್ಪಣೆಯಂತೆ ರಚಿಸಿ "ತೋಂಟದ ಸಿದ್ದೇಶ್ವರ ದೇವರ ದಿವ್ಯ ಶ್ರೀಪಾದಕ್ಕೆ ಸಮರ್ಪಿಸಿದ ಶೂನ್ಯ ಸಂಪಾದನೆ" ಎಂದು ಗುರುವಿಗೆ ಇದನ್ನು ಅರ್ಪಿಸಿದ್ದಾನೆ.[೪೧] ಇದರಿಂದ ಶೂನ್ಯ ಸಂಪಾದನೆಯ ಪರಿಷ್ಕರಣೆಗಳಿಗೂ ತೋಂಟದ ಸಿದ್ಧಲಿಂಗ ಯತಿಗಳೆ ಮೂಲಕಾರಣವೆನಿಸುತ್ತಾರೆ.

ಈತನ 'ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ' ಎಂಬ ಕೃತಿಯಲ್ಲಿ 'ಬಸವೇಶ್ವರ ನಿಮ್ಮ ಧರ್ಮ, ನಿಮ್ಮ ಧರ್ಮ' ಎಂಬ ಅಂಕಿತದಲ್ಲಿ ಇವರ ೧೮ ವಚನಗಳು ಪ್ರಕಟವಾಗಿವೆ.[೪೨] 'ಬೋಳ ಬಸವೇಶ್ವರ' ಎಂಬುದು ಈತನ ಗುರುವಿನ ಹೆಸರಾಗಿದೆ. ಈ ಕೃತಿಯ ಹೆಸರೇ ಹೇಳುವಂತೆ ಈ ವಚನಗಳು ಷಟ್‌ಸ್ಥಲ ನಿರೂಪಣೆ ಮಾಡುತ್ತವೆ. 'ಶೂನ್ಯ ಬ್ರಹ್ಮದ' ಸ್ವರೂಪದಿಂದ ಹಿಡಿದು ಲಿಂಗಾಂಗ ಸಾಮರಸ್ಯದ ವರೆಗಿನ ವಿವರಣೆ ನೀಡುತ್ತವೆ.

ಇವನ ವಚನಗಳು ಒಂದೊಂದು ಸುದೀರ್ಘವಾಗಿವೆ. "ಈ ವಚನಕಾರನು ತನ್ನ ವಚನಗಳಲ್ಲಿ ಮನುಷ್ಯನ ಅಂಗಗಳು, ಉಪಾಂಗಗಳು, ಇಂದ್ರೀಯಗಳು, ಚಕ್ರಗಳು ಮೊದಲಾದ ಕರಣ ಹಸುಗೆಯ ವಿಷಯಗಳನ್ನು ವಿವರಿಸುತ್ತಾ, ಅವುಗಳಿಗೆ ಸಂಬಂದಿಸಿದ ಲಿಂಗಗಳು, ಶಕ್ತಿಗಳು, ಭಕ್ತಿಗಳು, ಕಲೆಗಳು ಇವೇ ಮೊದಲಾದವುಗಳನ್ನು ಉಲ್ಲೇಖಿಸುತ್ತಾನೆ.

ಇವರ ವಚನಗಳಲ್ಲಿ ಗದ್ಯದ ಲಕ್ಷಣ ಹೆಚ್ಚಾಗಿ ಕಂಡುಬರುತ್ತದೆ.ಕಾವ್ಯ ಸ್ಪರ್ಷ ಕಡಿಮೆ." ವಾಯುವನಪ್ಪಿದ ಪರಿಮಳದಂತೆ". "ಉರಿಯುಂಡ ಕರ್ಪೂರದಂತೆ," ಸಮುದ್ರದೊಳಗೆ ಮುಳುಗಿದ ವಾರಿಕಲ್ಲಿನಂತೆ", " ಮೇರೆದಪ್ಪಿದ ಸಮುದ್ರದಲ್ಲಿ ಅದ್ದಿದಂತೆ". "ಉಪ್ಪಿನ ಪೊಟ್ಟಣವನಪ್ಪುವಿನೊಳು ಬಯಚಿಟ್ಟ ಹಾಗೆ" ಮುಂತಾದ ಉಪಮೆಗಳು ಬಳಕೆಯಾಗಿದ್ದರೂ ಅವು ಸಂಪ್ರದಾಯಕವಾಗಿವೆ. ಇವರು ಬರೆದ ವಚನಗಳ ವೈಶಿಷ್ಟ್ಯವಿರುವುದು ತತ್ವ ಹಾಗು ಬಸವಾದಿ ಶರಣರ ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನದಲ್ಲಿ ಎನ್ನಬಹುದು. 'ಓಂಕಾರವೇ ಬಸವಣ್ಣ, ಇಷ್ಟ ಬ್ರಹ್ಮವೇ ಬಸವಣ್ಣ, ಎನ್ನತನುವೆ ಬಸವಣ್ಣ'. ಮುಂತಾಗಿ ಬಸವಣ್ಣನವರನ್ನು ಮನದುಂಬಿ ಸ್ತುತಿಸುತ್ತಾನೆ.

---

೩೯. ಕೆಂಚ ವೀರಣ್ಣೊಡೆಯರ ಸಂಪಾದನೆಯ ಬಗ್ಗೆ ಬಹುತೇಕ ವಿದ್ವಾಂಸರು ನಕಾರಾತ್ಮಕವಾಗಿಯೇ ಹೇಳಿದ್ದಾರೆ.

೪೦. ಡಾ॥ ಎಸ್.ವಿದ್ಯಾಶಂಕರ್, (ಸಂ) 'ವಚನ ಸಾಹಿತ್ಯ ದ್ವಿತೀಯ ಘಟ್ಟ,' ಪುಟ– ೧೮.

೪೧. –ಅದೇ – ಪುಟ ೫೩೨ (ಶೂನ್ಯ ಸಂಪಾದನೆ)

೪೨. 'ಗುಮ್ಮಳಾಪುರದ ಸಿದ್ಧಲಿಂಗ ದೇವರ ವಚನಗಳು' ಪುಟ– ೬೨–೧೧೭, (ಶಿವಾನುಭವ ೧೮, ೧–೪)

ಈತನ ವಚನಗಳಲ್ಲಿ ಒಂದು ಹೊಸ ಆಟದ ಚಮತ್ಕಾರವನ್ನು ಗುರುತಿಸಬಹುದು. ವಚನಗಳ ಪಾದದ ಒಂದು ನಿರ್ದಿಷ್ಟ ಸ್ಥಳದಲ್ಲಿ ಬರುವ ಅಕ್ಷರಗಳ ಮೂಲಕ ಬಸವಣ್ಣನವರ ಹೆಸರನ್ನು, ವೀರಶೈವ ಧರ್ಮದ ತಾತ್ವಿಕ ಪರಿಭಾಷೆಯನ್ನು ಹೇಳುವ ಪ್ರಯತ್ನ ಮಾಡಿದ್ದಾನೆ.

"ಎನ್ನ ಆಯತಕ್ಕೆ **'ಬ'** ಕಾರವಾಗಿ ಬಂದನಯ್ಯಾ ಬಸವಣ್ಣ
ಎನ್ನ ಸ್ವಾಯತಕ್ಕೆ **'ಸ'** ಕಾರವಾಗಿ ಬಂದನಯ್ಯ ಬಸವಣ್ಣ
ಎನ್ನ ಸನ್ನಿಹಿತಕ್ಕೆ **'ವ'** ಕಾರವಾಗಿ ಬಂದನಯ್ಯ ಬಸವಣ್ಣ ಈ ವಚನದ ಪ್ರತಿಸಾಲಿನ ಮಧ್ಯದಲ್ಲಿ ಬರುವ **'ಬ'**ಕಾರವಾಗಿ, **'ಸ'**ಕಾರವಾಗಿ, **'ವ'** ಕಾರವಾಗಿ ಎಂಬ ಪದಗಳ ಮೊದಲ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿದರೆ **'ಬಸವ'** ಎಂಬ ಪದ ಮೂಡುತ್ತದೆ. ಹಾಗೆಯೆ **'ಓಂ ನಮ: ಶಿವಾಯ'** ಮುಂತಾದ ಶೈವತತ್ವ ಸಿದ್ಧಾಂತಗಳಿಗೆ ಶರಣರ ಪರಿಭಾಷೆಯನ್ನು ಜೋಡಿಸುವ ಕ್ರಮದಿಂದಾಗಿ ಒಂದೊಂದು ವಚನವೂ ಬಹುದೀರ್ಘವಾಗಿ ಬೆಳೆಯುತ್ತಾ ಹೋಗುತ್ತವೆ.

ಇವನ ವಚನಗಳಿಗೆ ಯಾವುದೇ ಸಾಮಾಜಿಕ, ಜವಬ್ದಾರಿಯಾಗಲಿ, ವೀರಶೈವ ಧರ್ಮ ಸಿದ್ಧಾಂತವನ್ನು ಪ್ರತಿಪಾದಿಸುವುದಾಗಲೀ, ವಚನ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವುದಾಗಲಿ ಆಗಿರಲಿಲ್ಲ. ಹಾಗಾಗಿ ಇವರ ಸೃಜನಶೀಲ ಪ್ರತಿಭೆ ಏನು ಎನ್ನುವುದು ಇವರವಚನಗಳಲ್ಲಿ ಕಂಡುಬರುವುದಿಲ್ಲ. ಸಂಪಾಧನ ಕಾರ್ಯವನ್ನು ಬಹುಗಂಭೀರವಾಗಿ ತೆಗೆದುಕೊಂಡ ಇವರು ಸ್ವತಂತ್ರ ವಚನ ರಚನೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ಶೂನ್ಯ ಸಂಪಾದನೆಯ ಪರಿಷ್ಕರಣ ಮಾಡುವಾಗ ಅಲ್ಲಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ ಹಾಗೂ ಗೋರಕ್ಷಕರ ಇಡಿ ಪ್ರಸಂಗಗಳನ್ನು ಹೊಸದಾಗಿಯೆ ಸೇರಿಸಿದ್ದಾನೆ. ಮೊದಲ 'ಶೂನ್ಯ ಸಂಪಾದನೆ'ಯ ಕೊರತೆಗಳನ್ನು ನಿವಾರಿಸಿ ಹೆಚ್ಚು ಗಂಭೀರ, ಶುಷ್ಕ ವಿವರಗಳನ್ನು ಕತ್ತರಿಸಿ, ಅಲ್ಲಲ್ಲಿ ಕಾವ್ಯದ ತುಣುಕುಗಳಂತೆ ಕಾಣುವ ಅಭಿವ್ಯಕ್ತಿಯ ಭಾಗಗಳನ್ನು ಸೇರಿಸಿ, ಹೊಸ ಒಪ್ಪಹಾಕಿ 'ಶೂನ್ಯ ಸಂಪಾದನೆ'ಗೆ ಒಂದು ಹೊಸ ಕಾಂತಿಯನ್ನು ನೀಡಿದ್ದಾನೆ. ಮರುಳು ಶಂಕರ ದೇವನು ಪ್ರಸಾದ ಕುಂಡದಿಂದ ಮೇಲೇಳುವ ದೃಶ್ಯದ ವರ್ಣನೆ, ಬಿಜ್ಜಳನ ಕೊಲೆಯ ಸನ್ನಿವೇಶ, ಬಸವಣ್ಣನ ಐಕ್ಯ ಇವೆ ಮುಂತಾದ ಕಡೆ ಬರುವ ವರ್ಣನೆಗಳು ಸಿದ್ಧಲಿಂಗನ ಕಾವ್ಯ ಪ್ರತಿಭೆಗೆ ಸಾಕ್ಷಿಯಾಗಿವೆ.

"ಗುಮ್ಮಳಾಪುರದ ಸಿದ್ಧಲಿಂಗನು ಶೂನ್ಯ ಸಂಪಾದನೆಯ ಪರಿಷ್ಕರಣದ ಗೊಡವೆಗೆ ಹೋಗದೆ, ಸ್ವತಂತ್ರ ಕೃತಿಗಳನ್ನೇನಾದರೂ ಬರೆದಿದ್ದರೆ, ಹರಿಹರ, ರಾಘವಾಂಕರಂತಹ ಇನ್ನೊಬ್ಬ ಶ್ರೇಷ್ಠ ಕವಿಯಾಗಿ ಹೊಮ್ಮುತ್ತಿದ್ದನೇನೋ. ಅವನ ವರ್ಣನೆಗಳನ್ನು, ಹರಿಹರನ ವರ್ಣನೆಗಳನ್ನು ಒಟ್ಟಿಗೆ ಇರಿಸಿ ನೋಡಿದರೆ ಇಬ್ಬರಲ್ಲೂ ಸಮಾನ ಪ್ರತಿಭೆಯ ದರ್ಶನವಾಗುತ್ತದೆ. ಸನ್ನಿವೇಶ ನಿರ್ಮಾಣ, ಪಾತ್ರ ಚಿತ್ರಣ, ವರ್ಣನಾ ವೈಖರಿ, ತಾವೇ ರಚಿಸಿದ ವಚನಗಳು, ಮುಕ್ತಕಗಳು, ಹಾಡುಗಳು, ಗದ್ಯಭಾಗಗಳು, ನಾಟಕೀಯ ಸನ್ನಿವೇಶಗಳು, ವಚನ ಮಾದರಿಯಲ್ಲಿರುವ ಹೇಳಿಕೆಗಳು ಕಾವ್ಯ ಶೈಲಿಯ ವರ್ಣನಾ ಬಂಧವಾಗಿವೆ. ಹೀಗೆ ಎಲ್ಲದರಲ್ಲೂ ಗುಮ್ಮಳಾಪುರದ ಸಿದ್ಧಲಿಂಗನ 'ಶೂನ್ಯ ಸಂಪಾದನೆ' ನಮ್ಮನ್ನು ಸರ್ವ ವಿಧದಲ್ಲೂ ಆಕರ್ಷಿಸುತ್ತದೆ. ಬಿಡಿ ಬಿಡಿಯಾಗಿದ್ದ ಶರಣರ ವಚನಗಳನ್ನು ಬಳಸಿಕೊಂಡು ಒಂದು ಸುಂದರ ಕಲಾ ಕೃತಿಯನ್ನು ರೂಪಿಸಿಕೊಟ್ಟಿರುವುದು ಅರ್ಥಪೂರ್ಣವಾಗಿದೆ.[೪೩]

೪೩. ಗಿರಡ್ಡಿ ಗೋವಿಂದರಾಜು (ಸಂ) 'ಶೂನ್ಯ ಸಂಪಾದನೆ,' ಪುಟ –೫೧.

೩. ಸ್ವತಂತ್ರ ಸಿದ್ಧಲಿಂಗೇಶ್ವರ (೧೬ ನೇ .ಶ)

ತೋಂಟದ ಸಿದ್ಧಲಿಂಗೇಶ್ವರರ ಪರಮ ಶಿಷ್ಯರಾಗಿದ್ದ ಸ್ವತಂತ್ರ ಸಿದ್ಧಲಿಂಗೇಶ್ವರರು ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆಯ ಸಮೀಪ ಇರುವ ಗಿರಿರಾಜಗಿರಿಯನ್ನು ತಮ್ಮ ಶಿವಯೋಗಧಾಮವನ್ನಾಗಿ ಮಾಡಿಕೊಂಡು ಪವಾಡ ಸದೃಷ ಬದುಕನ್ನು ಬದುಕಿದ ಇವರು ಮಹಾಜ್ಞಾನಿಗಳು, ಬಹುದೊಡ್ಡ ಅನುಭಾವಿಗಳು, ವೈರಾಗ್ಯ ಮೂರ್ತಿಗಳು, ಷಟ್ ಸ್ಥಲ ಸಾಧಕರು, ಶಿವಯೋಗಿಗಳು ಆಗಿದ್ದಾರೆ. ಸಮಾಜೋದ್ಧಾರಕ್ಕಾಗಿ ಲೋಕ ಸಂಚಾರಮಾಡುತ್ತ ವೀರಶೈವ ಧರ್ಮದ ರಹಸ್ಯವನ್ನು ಬೋಧಿಸುತ್ತ ತಮ್ಮ ಇಡಿ ಜೀವನವನ್ನು ಕಳೆದರು. "ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ" ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿಯೆ ಅತಿ ಹೆಚ್ಚು ವಚನಗಳನ್ನು ರಚಿಸಿದವರಾಗಿದ್ದಾರೆ. ಇವರು ಸುಮಾರು ೭೦೦ ವಚನಗಳನ್ನು ರಚಿಸಿರುವುದಾಗಿ ಎಸ್. ಶಿವಣ್ಣನವರು ಅಭಿಪ್ರಾಯಪಡುತ್ತಾರೆ.[೪೪] ಇದರಲ್ಲಿ ೪೩೦ ವಚನಗಳು ಈಗಾಗಲೆ ಪ್ರಕಟವಾಗಿವೆ.[೪೫]

ಸ್ವತಂತ್ರ ಸಿದ್ಧಲಿಂಗೇಶ್ವರರು "ಮುಕ್ತಾಂಗನಾಕಂಠಮಾಲೆ" ಎಂಬ ಹೆಸರಿನ ವಚನಗಳ ಸಂಗ್ರಹವನ್ನು ಮಾಡಿದ್ದಾರೆ. ಇದರಲ್ಲಿ ವೀರಶೈವ ಸಿದ್ಧಾಂತನುಸಾರಿಯಾದ ಸೃಷ್ಟಿಗೆ ಸಂಬಂಧಿಸಿದ ೩೪ ವಚನಗಳಿವೆ. ಪ್ರತಿ ವಚನಗಳಲ್ಲೂ 'ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ' ಎಂಬ ಅಂಕಿತವಿದೆ. ಅವುಗಳಲ್ಲಿ ೨೧ ವಚನಗಳಿಗೆ ಶ್ರೀ ಚೆನ್ನದೇವರು ವ್ಯಾಖ್ಯಾನ ಬರೆದುದಾಗಿಯೂ ತಿಳಿದುಬರುತ್ತದೆ. ಆ ವ್ಯಾಖ್ಯಾನ ಗ್ರಂಥ ಇಂದು ಪ್ರಕಟವಾಗಿದೆ. ಲಿಂಗಜಂಗಮರಲ್ಲಿ ಅಭೇದವನ್ನು ವರ್ಣಿಸುವ 'ಜಂಗಮರಗಳೆ' ಎಂಬುದು ಒಂದು ಚಿಕ್ಕ ಕೃತಿ. ಅಷ್ಟಾವರಣಗಳಲ್ಲೊಂದಾದ ಜಂಗಮ ಮಹತ್ವ ಈ ಕೃತಿಯ ವಸ್ತು. ಇದರಲ್ಲಿ ೧೦೮ ಪಂಕ್ತಿಗಳಿದ್ದು ಪ್ರತಿ ಪಂಕ್ತಿಯು 'ಜಂಗಮ' ಎಂದು ಮುಗಿಯುತ್ತದೆ[೪೬]. ಇದುವೆ ಅವರ ಪ್ರಥಮ ಕೃತಿಯಾಗಿರಬೇಕೆಂದು ಪಂಡಿತರ ಅಭಿಪ್ರಾಯ.[೪೭]

ಸ್ವತಂತ್ರ ಸಿದ್ಧಲಿಂಗೇಶ್ವರರ ಹೆಸರು, ಗುರುಪರಂಪರೆ ಹಾಗು ಜೀವಿತ ಕಾಲದ ಬಗೆಗೆ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ವಿರೂಪಾಕ್ಷ ಪಂಡಿತನ (೧೫೮೪) 'ಚನ್ನಬಸವ ಪುರಾಣ'ದಲ್ಲಿ (೬೩–೪೭) ಬರುವ ತೋಂಟದ ಸಿದ್ಧಲಿಂಗ ಶಿಷ್ಯರ ಹೆಸರುಗಳಲ್ಲಿ ಉಲ್ಲೇಖಗೊಂಡಿರುವ ಸಿದ್ಧಲಿಂಗೇಶ್ವರ ಹಾಗು ದೊಡ್ಡ ಸಿದ್ಧಲಿಂಗೇಶ್ವರ ಎಂಬುದರಲ್ಲಿ ಒಂದು ಹೆಸರು ಸ್ವತಂತ್ರ ಸಿದ್ಧ ಲಿಂಗೇಶ್ವರನದಾಗಿರಬೇಕು ಎಂದು ಆರ್. ನರಸಿಂಹಾಚಾರ್ ತಮ್ಮ ಅನುಮಾನ ವ್ಯಕ್ತಪಡಿಸಿದ್ದಾರೆ. ಪ್ರೋ.ಸಿ. ಮಹಾದೇವಪ್ಪನವರು "ಸಿದ್ದಲಿಂಗೇಶ್ವರನೇ ಸ್ವತಂತ್ರ ಸಿದ್ಧಲಿಂಗೇಶ್ವರ"ನೆಂದು ಹೇಳಿದರೆ, ಡಾ॥ ಹೆಚ್.ಪಿ. ಮಲ್ಲೇದೇವರು 'ದೊಡ್ಡ ಸಿದ್ಧ ಲಿಂಗೇಶ್ವರ'ನೆ ಸ್ವತಂತ್ರ ಸಿದ್ಧಲಿಂಗೇಶ್ವರನೆಂದು ಅಭಿಪ್ರಾಯ ಪಡುತ್ತಾರೆ.

---

೪೪. ಎಸ್.ಶಿವಣ್ಣ (ಸಂ) 'ಸಂಕೀರ್ಣ ವಚನ, ಸಂಪುಟ–೬' – ಪ್ರಸ್ತಾವನೆ ಪುಟ –೧೯

೪೫. ಚಂದ್ರಶೇಖರ್ ಶಾಸ್ತ್ರಿ– ಸೋಮಶೇಖರ ಶಾಸ್ತ್ರಿ, (ಸಂ) 'ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು'

೪೬. ಸದಾನಂದ ಕನವಳ್ಳಿ– ಚೆನ್ನಪ್ಪ ಕೆರಿಮನಿ, (ಸಂ) 'ವೀರಶೈವ ಸಾಹಿತ್ಯ ಸಮೀಕ್ಷೆ'– ಪುಟ ೨೮೪

೪೭. ಹೆಚ್.ಪಿ. ಮಲ್ಲೇದೇವರು ,(ಸಂ) 'ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು,' ಪ್ರಸ್ತಾವನೆ ಪುಟ– ೩೧

ಪಿ.ಎಂ. ಗಿರಿರಾಜು ಅವರು ಗುರುಸಿದ್ಧಸ್ವಾಮಿ(೧೭೦೦) ನಿಜಾಚರಣೆಯ ವಚನ ಸಂಕಲನದ ಅಂತ್ಯದಲ್ಲಿ ಬರುವ ಗುರುಪರಂಪರೆಯಲ್ಲಿ ಉಕ್ತವಾಗಿರುವ ಮರಿ ಬಸವ ಲಿಂಗೇಶ್ವರ ಸ್ವಾಮಿಯ ಶಿಷ್ಯ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಯೆ ಈ ಸ್ವತಂತ್ರ ಸಿದ್ಧಲಿಂಗೇಶ್ವರ ಎಂದು ತಿಳಿಸುತ್ತಾರೆ.

ಡಾ॥ ಮಲ್ಲೇದೇವರು ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣದಲ್ಲಿ (೧೫-೪೨) ಬರುವ ಈ ಕೆಳಗಿನ ಪದ್ಯವನ್ನು ಉದಾಹರಿಸುತ್ತಾರೆ.

"ಒಡಲೊಳತಿ ದವಳ ಭಸಿತವ ಪೂಸಿಮಿಗೆ ಕಾಂತಿ

- - - - - - - - - - - - - - - - - -

ಮೃಡ ಸದೃಶನೆನಿಪ ಗುರು ದೊಡ್ಡ ಸಿದ್ಧೇಶನೇ ಕಾಣೆ ಬಡನಡುವ ಚಲುವೆ"

ಇಲ್ಲಿ ಉಕ್ತವಾದ 'ದೊಡ್ಡ ಸಿದ್ಧೇಶನೆ' ಸ್ವತಂತ್ರ ಸಿದ್ಧಲಿಂಗೇಶ್ವರ. ಈ ಕಾಲದಲ್ಲಿ ಸಿದ್ಧಲಿಂಗ ಹೆಸರಿನ ಇತರರು ಇದ್ದುದರಿಂದ ಕವಿಗಳು ಅನುಭಾವದಲ್ಲಿ, ವಯಸ್ಸಿನಲ್ಲಿ ಹಿರಿಯನಾದ ಈತನನ್ನು ದೊಡ್ಡ ಸಿದ್ಧಲಿಂಗೇಶ್ವರ ಎಂದು ಕರೆದಿರಬೇಕು ಎಂದು ಊಹಿಸುತ್ತಾರೆ[೪೮].

ಈತನ ಕಾಲದ ಬಗ್ಗೆಯೂ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿಲ್ಲ. ಆರ್. ನರಸಿಂಹಾಚಾರ್ಯರು ಈತನ ಕಾಲ ೧೪೮೦ ಎಂದು ತಿಳಿಸುತ್ತಾರೆ. ಡಾ॥ ಹೆಚ್.ಸಿ. ಮಲ್ಲೇದೇವರು ೧೫ ನೇ ಶತಮಾನದ ಉತ್ತರಾರ್ಧ – ೧೬ ನೇಶತಮಾನದ ಆದಿಯಲ್ಲಿರಬೇಕು ಎಂದು ಹೇಳುತ್ತಾರೆ. ಪಿ.ಎಂ.ಗಿರಿರಾಜು ಅವರು ೧೫೫೦–೧೫೭೦ ರ ನಡುವೆ ಎಂದು ಊಹಿಸಿದ್ದಾರೆ. ಸಂಪಾದನೆಯ ಚೆನ್ನಂಜೆದೇವ (೧೫೮೦), ಸಂಪಾದನೆಯ ಸಿದ್ಧವೀರಣ್ಣೊಡೆಯದೇವರು ಮತ್ತು ಎಳಮಲೆಯ ಗುರುಶಾಂತದೇವರ ಸಂಪಾದನೆಗಳಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು ಎಡೆ ಪಡೆದಿರುವುದರಿಂದ ಮತ್ತು ವಿರೂಪಾಕ್ಷ ಪಂಡಿತ (೧೫೮೪), ವಿರಕ್ತ ತೋಂಟದಾರ್ಯ (೧೬೧೬) ರು ತಮ್ಮ ಕೃತಿಗಳಲ್ಲಿ ಈತನನ್ನು ಉಲ್ಲೇಖಿಸಿರುವುದರಿಂದ, ಸೋಮಶೇಖರ ಶಿವಯೋಗಿ(೧೭೦೦)ಇವರು ತಮ್ಮ ಬಸವಣ್ಣನವರ ವಚನಗಳ ಟೀಕೆಯಲ್ಲಿ 'ಸಾಧ್ಯಗಣಗಳ' ಮಾಲಿಕೆಯಲ್ಲಿ ಸ್ವತಂತ್ರ ಸಿದ್ಧಲಿಂಗನನ್ನು ಸೇರಿಸಿರುವುದರಿಂದ ಈತನ ಕಾಲವನ್ನು ೧೬ ನೇ ಶತಮಾನದ ಉತ್ತರಾರ್ಧವೆಂದು ಹೇಳಬಹುದು.

"ಸ್ವತಂತ್ರ ಸಿದ್ಧಲಿಂಗರ ಜನ್ಮಸ್ಥಳ ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿನ 'ಕಾಪನಹಳ್ಳಿ' ಎಂದು ಡಾ॥ ಮಲ್ಲೇದೇವರು ತಿಳಿಸುತ್ತಾರೆ. ಇದಕ್ಕೆ ಅವರು ಕೊಡುವ ಆಧಾರ ಎಸ್.ಶಿವಣ್ಣ ಅವರು ಸಂಗ್ರಹಿಸಿದ ಒಂದು ಮಂಗಳಾರತಿ ಪದ.

---

೪೮. ಡಾ॥ ಹೆಚ್.ಪಿ. ಮಲ್ಲೇದೇವರು- (ಸಂ)'ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು'. ಪ್ರಸ್ಥಾವನೆ ಪುಟ-೯

" ಬೆಳಗಿರೆ ಮಂಗಳಾರತಿಯ ಮುಂದೆ
ಹೊಳೆವ ಸ್ವತಂತ್ರ ಸಿದ್ಧಲಿಂಗನಿಗೆ
ಬೆಳಗಿರೆ ಮಂಗಳಾರತಿಯ ॥ಪ॥
– – – ಷಟ್ ಸ್ಥಲ ಸಾರ್ವಭೌಮ
ಕಾಪನಹಳ್ಳಿಯ ಗವಿಯ ಸರ್ವ
ಪಾಪನಾಶನ ನದೀ ತೀರ ವಾಸನಿಗೆ
ಬೆಳಗಿರೆ ಮಂಗಳಾರತಿಯ"[೪೯]

ಕಾಪನಹಳ್ಳಿಗೆ ಸಮೀಪದಲ್ಲಿದ್ದ 'ಗಜರಾಜಗಿರಿ' ಸ್ವತಂತ್ರ ಸಿದ್ಧಲಿಂಗನ ಶಿವಯೋಗ ಸಾಧನೆಯ ತಾಣವೆನಿಸಿತ್ತು. ಗಿರಿಯ ತಪ್ಪಲಿನ ಪಶ್ಚಿಮ ಭಾಗದಲ್ಲಿ ಹರಿಯುವನದಿ ಈತನ ಪಾದ ಸ್ಪರ್ಶದಿಂದ ಪಾವನ ತೀರ್ಥವಾಗಿ "ಜೀವನದಿ" ಎಂದು ಹೆಸರಾಯಿತು. ಸ್ವತಂತ್ರ ಸಿದ್ಧಲಿಂಗರು ತಮ್ಮ ಕೊನೆಗಾಲದವರೆಗೂ ಅಲ್ಲಿಯೇ ಇದ್ದು ಐಕ್ಯರಾಗಿದ್ದಾರೆ. ಅಲ್ಲಿ ಅವನ ಸಮಾಧಿ ಮಾಡಿ ಗದ್ದುಗೆಯನ್ನು ಕಟ್ಟಲಾಯಿತು. ಅದು ಇಂದು ಜಾಗ್ರತ ಸ್ಥಾನವಾಗಿ ಭಕ್ತಕೋಟಿಯನ್ನು ಅಕರ್ಷಿಸುತ್ತಿದೆ. ಪ್ರತಿವರ್ಷ ಮಾಘಶುದ್ದ ಪೂರ್ಣಿಮೆಯ ದಿನದಂದು ಈಗಲೂ ಅಲ್ಲಿ ಉತ್ಸವ ನಡೆಯುತ್ತದೆ"[೫೦]

ಈತನ ವಚನಗಳ ಮುಖ್ಯವಸ್ತು ಷಟ್ ಸ್ಥಲ ತತ್ವ ನಿರೂಪಣೆ. ಸಾಂಪ್ರದಾಯಿಕ ರೀತಿಯಲ್ಲಿ ಸಕ್ರಮವಾಗಿ ತತ್ವ ಪ್ರತಿಪಾದನೆ ಮಾಡಿದ್ದಾನೆ. ಈತನ ವಚನಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸವಾಲುಗಳಿಲ್ಲ. ಹೊಸ ಸಮಾಜ ರಚನೆಯ ಜವಬ್ದಾರಿಯಾಗಲಿ, ಹೊಸತತ್ವ ಸಿದ್ದಾಂತಗಳ ಆತ್ಮ ನಿರೀಕ್ಷೆಗಳಾಗಲಿ ಇಲ್ಲ. ಪಿಂಡ, ಪಿಂಡಜ್ಞಾನ, ಷಟ್ ಸ್ಥಲ, ಅಷ್ಟಾವರಣ, ಯೋಗ, ಶಿವಯೋಗ ಮುಂತಾದವುಗಳ ಬಗ್ಗೆ ಗಂಭಿರ ವಿವರಣೆ, ವಿವೇಚನೆಗಳಿವೆ. ತತ್ವ ಪ್ರತಿಪಾದನೆಗಾಗಿ ಆಗಮೋಕ್ತಿಗಳನ್ನು ಔಚಿತ್ಯವರಿತು ಬಳಸುತ್ತಾನೆ. ವಚನಗಳ ನಿರೂಪಣೆಯಲ್ಲಿ ಖಚಿತತೆ ಮತ್ತು ಸ್ಪಷ್ಟತೆ ಕಂಡುಬರುತ್ತದೆ. ಹೇಳುವ ರೀತಿಯಲ್ಲಿ ಬಳಸುವ ಉಪಮೆ ದೃಷ್ಟಾಂತಗಳಲ್ಲಿ ಬಸವಾದಿ ಶರಣರ ಪ್ರಭಾವ ದಟ್ಟವಾಗಿ ತೋರಿದರೂ ಅಲ್ಲಲ್ಲಿ ನೂತನ ಕಲ್ಪನೆಗಳ ಹೊಳಪುಗಳನ್ನು ಈತನ ವಚನಗಳಲ್ಲಿ ಕಾಣಬಹುದಾಗಿದೆ. ತತ್ವನಿರೂಪಣೆಯಲ್ಲಿ ಚೆನ್ನಬಸವಣ್ಣ, ತೋಂಟದ ಸಿದ್ಧಲಿಂಗರ ಅನುಕರಣೆಯನ್ನು ಕಾಣಬಹುದು.

ಇವರ ವಚನಗಳು ಆರು ಸ್ಥಲಗಳಲ್ಲಿ ಹಂಚಿಕೊಂಡಿವೆ. ಭಕ್ತ ಸ್ಥಲದ ಪೂರ್ವದಲ್ಲಿ ಪಿಂಡಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರಹೇಯ ಸ್ಥಲ, ಗುರು ಕರುಣ ಸ್ಥಲ, ಲಿಂಗಧಾರಣಸ್ಥಲ, ವಿಭೂತಿ ಸ್ಥಲ ಮತ್ತು ರುದ್ರಾಕ್ಷಿಸ್ಥಲ ಎಂಬ ಏಳು ಸ್ಥಲಗಳು ಜೋಡಿಸಲ್ಪಟ್ಟಿವೆ[೫೧].

'ಪಿಂಡ'ಎಂದರೇನು ? ಪ್ರಶ್ನೆ ಹಾಕಿಕೊಂಡು ಅದಕ್ಕೆ ಉತ್ತರ ಹುಡುಕಿ ಕೊಡುವ ವಿಧಾನ ಸೊಗಸಾಗಿದೆ.

---

೪೯. ಎಸ್.ಶಿವಣ್ಣ,{ಸಂ} 'ಸಂಕೀರ್ಣ ವಚನ ಸಂಪುಟ–೬,' ಪ್ರಸ್ತಾವನೆ ಪುಟ–೨೫
೫೦. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು,' ಪುಟ –೭೧.
೫೧. ಡಾ॥ ವೀರಣ್ಣ ರಾಜೂರ – 'ಬಸವೋತ್ತರ ಯುಗದ ವಚನಕಾರರು,' ಪುಟ –೭೨

"ಪಿಂಡವೆಂದರೇನು ? ತನುಪಿಂಡವೆ ?
ಮನ ಪಿಂಡವೆ ? ವಾಯು ಪಿಂಡವೆ ? ಅಲ್ಲ
ಆದಿ ಪಿಂಡವಿಡಿದು ಬಂದ ಜ್ಞಾನ ಪಿಂಡವೆ ಪಿಂಡ" (ವ-೧೦)

ಪಿಂಡದೊಳಗೆ ಪಿಂಡರೂಪವಾಗಿ ಇರುವ ಶಿವನ ನಿರಾಕಾರ ಸ್ವರೂಪವನ್ನು "ಚಂದ್ರ ಕಾಂತಶಿಲೆಯಲ್ಲಿ ಉದಕ ಒಸರದಿಪ್ಪಂತೆ. . . . ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಸ್ಫುರಿಸದಿಪ್ಪಂತೆ, ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ" (ವ-೯) ಎಂದು ಹೇಳಿದರೆ, ಪಿಂಡದಲ್ಲಿ ಜ್ಞಾನ ಮೂಡಿದ ರೀತಿಯನ್ನು "ಪಕ್ವ ಫಲದಲ್ಲಿರುವ ಸ್ವಾದುವಿನಂತೆ, ತುಪ್ಪದಲ್ಲಿಹ ಕಂಪಿನಂತೆ, ಚಿನ್ನದಲ್ಲಿನ ಬಣ್ಣದಂತೆ. ಅಲ್ಲಿಯೇ ಹುಟ್ಟಿ, ಅಲ್ಲಿಯೇ ತೋರುವಂತೆ ಎನ್ನಂತರಂಗದಲ್ಲಿರ್ದು ತೋರುತಿಹ ನಿಮ್ಮ ನಿಜವನು ನಿಮ್ಮಿಂದರಿದೆನು" ಎಂದು ಹೇಳುತ್ತಾರೆ.

'ಕ್ಷೀರದೊಳಗಣ ಆಜ್ಯದಂತೆ, ಪಾಷಾಣದೊಳಗಣ ಪಾವಕದಂತೆ' (ವ-೧೦) 'ಒಡೆಯರಿಲ್ಲದ ಮನೆಯಂತೆ' (ವ-೧೯), 'ತೋರಿಯಡಗುವ ಮೇಘಾಡಂಬರದಂತೆ' (ವ-೨೦) ಮುಂತಾದ ಉಪಮೆಗಳು ಇವನ ವಚನಗಳುದ್ದಕ್ಕು ಕಾಣಸಿಗುತ್ತವೆ.

"ದೇಹವೆಂಬುದೊಂದು ನಡುಮನೆಗೆ ಕಾಲುಗಳೆಂಬ ಕಂಭ ಕಂಡಯ್ಯ,"
"ಸಂಸಾರವೆಂಬ ವಿಷ ವೃತ್ತಕ್ಕೆ ಪಂಚೇಂದ್ರಿಯಂಗಳು ಶಾಖೆಗಳು",
"ತನುವೆಂಬ ವೃಕ್ಷದಲ್ಲಿ ಇಂದ್ರಿಯಂಗಳೆಂಬ ಶಾಖೋಪಶಾಖೆಗಳಿಗೆ ಲಂಘಿಸುತ್ತಿದೆ"

ಎಂಬಂತಹ ರೂಪಕಗಳು ೧೨ನೇ ಶತಮಾನದ ವಚನ ಭಂಡಾರದಿಂದ ಎತ್ತಿಕೊಂಡಂಥಹುಗಳಾಗಿವೆ. ಈ ರೀತಿಯ ಅನುಕರಣೆಯಿಂದ ಇವರ ವ್ಯಕ್ತಿತ್ವಕ್ಕೇನು ದಕ್ಕೆಯಾಗುವುದಿಲ್ಲ. ಷಟ್‌ಸ್ಥಲ ಸಿದ್ಧಾಂತದ ತತ್ವ ನಿರೂಪಣೆಗಾಗಿ ರೂಪಕಗಳನ್ನು, ಜಾಣ್ನುಡಿಗಳನ್ನು ವಿಷಯದ ಸ್ಪಷ್ಟತೆಗಾಗಿ ಬಳಸಿಕೊಂಡಿದ್ದಾನೆ. ಆದರೂ ಸ್ವತಂತ್ರ ಸಿದ್ಧಲಿಂಗರಲ್ಲಿ ಸ್ವಂತಿಕೆಯಿದೆ. ಇವರು ಬಳಸುವ ಭಾಷೆ, ವಿಷಯದ ಮೇಲೆ ಬೆಳಕು ಚಲ್ಲುವ ರೀತಿ ವಿಶಿಷ್ಟವಾದುದಾಗಿದೆ.

"ತುಂಬಿ, ಇಂಬಿನ ತುಂಬಿ, ಕಾಯತುಂಬಿ, ಕರಣ ತುಂಬಿ
ಈರೇಳ ಭವನ ತುಂಬಿ
ತುಂಬಿ ಪರಿಮಳವನುಂಡು ಅಂಬರದಲ್ಲಿ ನಿಂದಿತ್ತು
ಸಂಭ್ರಮ ನಿಂದಿತ್ತು" (ವ-೪೦೨)

ಈ ವಚನದಲ್ಲಿ ಬಳಸಿರುವ ಶಬ್ದ ಪ್ರಯೋಗದಲ್ಲಿನ ಚಮತ್ಕಾರ, ಶಬ್ದಾಲಂಕಾರವಾಗಿ ಗೋಚರಿಸಿ, ಅರ್ಥಾಲಂಕಾರವಾಗಿ ಅರಳಿ, ಅಮೂರ್ತ ರಹಸ್ಯವನ್ನು ಬಿಚ್ಚಿಕೊಡುತ್ತದೆ.

"ಏನನೋದಿ, ಏನಕೇಳಿ , ಏನಹೇಳಿದಡೆ ಏನು ಫಲ
ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕ - - - " (ವ-೧೬೦)
"- - - ಅರ್ಥದಲ್ಲೇನು ಸುಖವಿಲ್ಲ
ಅರ್ಥವನಾರ್ಜಿಸುವಲ್ಲಿ ದುಃಖ, ಅರ್ಜಿಸಿದ ಧನವ ರಕ್ಷಿಸುವಲ್ಲಿ ದುಃಖ

ನಾಶವಾದಡೆ ದುಃಖ, ವೆಚ್ಚವಾದಡೆ ದುಃಖ"
"ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ
ಆವಮಾತನಾಡಿದರೂ ತನ್ನ ಕಾಯ್ದುಕೊಂಡು ಆಡಬೇಕು".
"ಜ್ಞಾನ ರಹಿತನಾಗಿ ಕ್ರೀಯೆನೆಷ್ಟು ಮಾಡಿದಡೇನು ?
ಅದು ಕಣ್ಣಿಲ್ಲದವನ ನಡೆಯಂತೆ
ಕ್ರೀ ರಹಿತನಾಗಿ ಜ್ಞಾನಿಯಾದಡೇನು ?
ಅದು ಕಾಲಿಲ್ಲದವನ ಇರವಿನಂತೆ"
"ಅಗಡೆತ್ತು ಹಗ್ಗವ ಹರಿದು ಕೊಂಡಂತಾಯಿತು"

ಈ ಮೇಲಿನ ವಚನಗಳಲ್ಲಿ ಯಾವ ಆಡಂಬರವೂ ಇಲ್ಲದ ಸಹಜವಾದ ಕಳಕಳಿ ಮೈದಾಳಿ ನಿಂತಿರುವುದನ್ನು ನೋಡಬಹುದು. ಇವರ ವಚನಗಳಲ್ಲಿ ಕಂಡುಬರುವ ವಸ್ತು ವಚನ ಪ್ರಪಂಚಕ್ಕೇನು ಹೊಸದಲ್ಲ. ದೇಹವನ್ನು ಒಂಬತ್ತು ಬಾಗಿಲ ಮನೆಗೆ ಹೋಲಿಸಿರುವುದು ಸಾಂಪ್ರದಾಯಕವಾಗಿದ್ದರೂ, 'ಆದಾರಿಯಾಗಿ ಹೋಹ ಬಾಹರಿಗೆ ಲೆಕ್ಕವಿಲ್ಲ.' ಎಂಬುದು ಮನುಷ್ಯನ ಅನಂತ ಅನುಭವಗಳ ಸೂಚಕವಾಗಿದ್ದು ಹೇಳಿರುವ ರೀತಿ ಚೆನ್ನಾಗಿದೆ.

"ಜನ ತಮ್ಮ ಕುಲಗೋತ್ರ ಜಾತಿ ಧರ್ಮಗಳ ಆಚಾರವನ್ನು ತಪ್ಪಿ ನಡೆಯಬಾರದು"(ವ.೧೧೦) ಎಂಬ ಮಾತು ವೀರಶೈವ ಧರ್ಮವು ಸನಾತನದ ಹಿಂದೂ ಧರ್ಮದಂತೆ ವಿಧಿ ನಿಷೇಧಗಳುಳ್ಳ ಒಂದು ಸ್ಥಾವರವಾಗಿ ಮತ್ತು ಮತವಾಗಿ ನೆಲೆಗೊಂಡಿತ್ತೆಂಬುದನ್ನು ದೃಢಪಡಿಸುತ್ತದೆ. ಬಸವಾದಿ ವಚನಕಾರರ ಸಾಮಾಜಿಕ, ಧಾರ್ಮಿಕ ಚಿಂತನೆ ಇಲ್ಲಿ ಮರೆಯಾಗಿ ವೀರಶೈವ ಧರ್ಮವು ಈ ಕಾಲಕ್ಕಾಗಲೇ ಸಮಾಜದ ಪ್ರಬಲ ಲಿಂಗಾಯಿತ ಜಾತಿಯಾಗಿ ಪರಿವರ್ತನೆಯಾಗಿರುವುದು ಕಂಡು ಬರುತ್ತದೆ.

ಸ್ವತಂತ್ರ ಸಿದ್ಧಲಿಂಗೇಶ್ವರರು ಬಸವ, ಅಲ್ಲಮ, ಅಕ್ಕಮಹಾದೇವಿ ಮುಂತಾದ ಹಿಂದಿನ ವಚನಕಾರರಿಂದ ಪ್ರಭಾವಿತನಾಗಿದ್ದಾನೆ. ಇವನ ವಚನ ಅಭಿವ್ಯಕ್ತಿಯಲ್ಲಿ ಅಂತಹ ಅನನ್ಯತೆಯೇನು ಕಂಡುಬರುವುದಿಲ್ಲ. ಆದರೆ ತೋಂಟದ ಸಿದ್ಧಲಿಂಗ ಯತಿಗಳಿಂದ ಆರಂಭವಾದ ವಚನ ಪರಂಪರೆಯನ್ನು ಸ್ವತಂತ್ರ ಸಿದ್ಧಲಿಂಗೇಶ್ವರರು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದಿರುವುದು ಗುರುತಿಸುವಂತ ಕಾರ್ಯ.

೪ ಘನಲಿಂಗಿದೇವ-(೧೬ ನೇ.ಶ.)

ತೋಂಟದ ಸಿದ್ಧಲಿಂಗನ ಶಿಷ್ಯ ಪರಂಪರೆಗೆ ಸೇರಿದ ಅವನ ಕಿರಿಯ ಸಮಕಾಲೀನ ಇವನು ಮೈಸೂರು ಜಿಲ್ಲೆಯ ಸುತ್ತೂರಿನ ವೀರಸಿಂಹಾಸನ ಮಠದ ಹನ್ನೊಂದನೆ ಪೀಠಧ್ಯಕ್ಷನಾಗಿದ್ದನು. ಇವನ ಜನ್ಮ ಸ್ಥಳ ಹರದನಹಳ್ಳಿ. ಇವನ ಕಾರ್ಯಕ್ಷೇತ್ರ ಸುತ್ತೂರು. ಸಮಾಜಕ್ಕೆ ಧಾರ್ಮಿಕ ಮಾರ್ಗದರ್ಶನ ಮಾಡಿದವನು. ಇವನು ಉನ್ನತವಾದ ಗುರುಪರಂಪರೆಯನ್ನು ಹೊಂದಿದವನು. ಇದನ್ನು ಆತ ಒಂದು ವಚನದಲ್ಲಿ ಹೇಳಿಕೊಂಡಿದ್ದಾನೆ .'ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು ಭಂಡಾರಿ ಬಸವಪ್ಪೊಡೆಯದೇವರು ಆ ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು

ಕುಗಲೂರು ನಂಜಯ್ಯದೇವರು ಆ ನಂಜಯ್ಯ ದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು. ಎನ್ನ ಗುರುವಿನ ಗುರು, ಪರಮ ಗುರು ಪರಮಾರಾಧ್ಯ ತೋಂಟದಾರ್ಯನಿಗೆ ಗುರುಭಕ್ತಿಯಿಂದೆನ್ನ ಶರಣು ಮಾಡಿದರು. ಆ ತೋಂಟದಾರ್ಯನು ತನ್ನ ಕೃಪೆಯೆಂಬ ತೋಟ್ಟಿಲೊಳಗೆನ್ನಂ ಮಲಗಿಸಿ ಪ್ರಮಥಗಣಂಗಳ ವಚನ ಸ್ವರೂಪ ತತ್ವಾರ್ಥವೆಂಬ ಹಾಲು ತುಪ್ಪಮಂ ಸದಾ ದಣಿಯಲೆರೆದು ಅಕ್ಕರಿಂ ರಕ್ಷಣೆಯ ಮಾಡಿ 'ಘನಲಿಂಗಿ' ಎಂಬ ನಾಮ ಕರಣಮಂ ಕೊಟ್ಟು ಪ್ರಾಯ ಸಮರ್ಥಯಂ ಮಾಡಿ ಸತ್ಯ, ಸದಾಚಾರ, ಜ್ಞಾನ, ಕ್ರಿಯೆಗಳೆಂಬ ದಿವ್ಯಾಭರಣಂಗಳಂ ತೊಡಿಸಿ ಅರುಹೆಂಬ ಬಣ್ಣದ ನಿರಿವಿಡಿದುಡಿಸಿ ಅರ್ತಿಯ ಮಾಡುತಿಪ್ಪ ಸಮಯದಲ್ಲಿ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ ತನಗೆ ನಾನಾಗ ಬೇಕೆಂದು ಬೇಡಿ ಕಳುಹಲು ಎಮ್ಮವರು ಅವರಿಗೆ ಮಾತನಿಕ್ಕಿದರಮ್ಮ"[೫೨] ಎಂದು ಹೇಳಿದ್ದಾನೆ. ಇಲ್ಲಿ ಇವನು ಕೊಟ್ಟಂತಹ ಗುರುಪರಂಪೆಯನ್ನು ಈ ರೀತಿ ಹೇಳಬಹುದು.

ಸುತ್ತೂರು ಸಿಂಹಾಸನದ ಪರ್ವತದೇವರು
ಭಂಡಾರಿ ಬಸವಪ್ಪೊಡೆಯದೇವರು
ಕುಗಲೂರು ನಂಜಯ್ಯದೇವರು
ಘನಲಿಂಗಿ ದೇವರು

ಈ ಪೀಠ ಪರಂಪರೆಯನ್ನು ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ (೬೩-೪೨) ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ (೧೫-೪೬) ನಿರಂಜನ ವಂಶರತ್ನಾಕರ ಈ ಕೃತಿಗಳು ಸಮರ್ಥಿಸುತ್ತವೆ. ಮತ್ತೊಂದು ವಚನದಲ್ಲಿ ತನ್ನ ಗುರುವಾದ ತೋಂಟದ ಸಿದ್ದಲಿಂಗನನ್ನು ನೆನೆದಿದ್ದಾನೆ."ಇಂತಪ್ಪ ಷಟ್ ಸ್ಥಲ ಬ್ರಹ್ಮವೆನಿಸುವ ತೋಂಟದ ಸಿದ್ಧಲಿಂಗ ಪ್ರಭುವಿನ ಕರುಣಮಂ ಪಡೆದು ಘನ ಲಿಂಗದೇವರು ತಮ್ಮ ಸ್ವಯಂ ಲಿಂಗಾನುಭವದಿಂದ ಹಾಡಿದ ವಚನ"[೫೩] ಎಂದು ಹೇಳಿದ್ದಾನೆ. ಮಹಾಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳಲ್ಲಿ ಜ್ಞಾನ ದೀಕ್ಷೆಯನ್ನು ಪಡೆದ ನೇರ ಶಿಷ್ಯನು ಇವನಾಗಿದ್ದಾನೆ. 'ತೋಂಟದ ಅಲ್ಲಮ'[೫೪] ಎಂದು ಕರೆದಿದ್ದಾನೆ. ತಾವು ಚಿಕ್ಕಂದಿನಿಂದಲೂ ತೋಂಟದ ಸಿದ್ಧಲಿಂಗರ ಪಾಲನೆ ಪೋಷಣೆಯಲ್ಲಿ ಬೆಳೆದವನೆಂದೂ ಅಲ್ಲದೆ ಲಿಂಗಪತಿಯ ಅನುಸಂಧಾನಕ್ಕೆ ತಮ್ಮನ್ನು ಪ್ರಾಯ ಸಮರ್ಥಯನ್ನಾಗಿ ಮಾಡಿದವರೂ ಅವರೆ ಎಂದೂ, ಅವರು ಕರುಣಿಸಿದ ಶಿವ ಜ್ಞಾನದಿಂದ ತಾವು ತಮ್ಮ ಪೂರ್ವಾಶ್ರಯ, ಬಂಧು, ಭ್ರಮೆ, ಆತ್ಮತೇಜ, ಲೋಕದ ನಚ್ಚು ಮೆಚ್ಚು ಇಂತಿವ ಸುಟ್ಟು ಮಲತ್ರಯಂಗಳ ಹಿಟ್ಟುಗುಟ್ಟಿ ತೂರಿ ಬಿಟ್ಟುದಾಗಿ ಹೇಳಿಕೊಂಡಿದ್ದಾನೆ.[೫೫]

---

೫೨. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು. (ಸಂ) 'ಘನಲಿಂಗಿದೇವರ ವಚನಗಳು.' ವ- ಸಂಖ್ಯೆ-೧೧

೫೩. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು (ಸಂ)- 'ಘನಲಿಂಗಿದೇವರ ವಚನಗಳು,' ಪುಟ-೫.

೫೪. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು (ಸಂ)- 'ಘನಲಿಂಗಿದೇವರ ವಚನಗಳು,'ವ-೩೨

೫೫. ಎಸ್. ಶಿವಣ್ಣ (ಸಂ) 'ಸಂಕೀರ್ಣ ವಚನ, ಸಂಪುಟ-೬.' ವ-೭೩೦

ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ' ವಿರಕ್ತ ತೋಂಟದಾರ್ಯನ (೧೬೧೬) 'ಸಿದ್ಧೇಶ್ವರ ಪುರಾಣ' ಹಾಗು 'ನಿರಂಜನ ವಂಶ ರತ್ನಾಕರ'ಗಳಲ್ಲಿ ಘನಲಿಂಗಿದೇವ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನೆಂದು ಹೇಳಲಾಗಿದೆ.[೫೬] ವಿರಕ್ತ ತೋಂಟದಾರ್ಯ ತನ್ನ ಸಿದ್ಧೇಶ್ವರ ಪುರಾಣದಲ್ಲಿ (ಸಂ-೧೫-ಪು-೪೬) ತುಮಕೂರಿನಲ್ಲಿ ನಡೆದ ತೋಂಟದ ಸಿದ್ಧಲಿಂಗರ ಯತಿಗಳ ಮೆರವಣಿಗೆ ನಡೆದಾಗ ಅದರಲ್ಲಿ ಭಾಗವಹಿಸಿದ್ದ ಶರಣ ಸಮೂಹದಲ್ಲಿ ಘನಲಿಂಗಿದೇವರೂ ಭಾಗವಹಿಸಿದ್ದರು ಎಂದು ಹೇಳುತ್ತಾ ಈ ಚಿತ್ರವನ್ನು ನೀಡಿದ್ದಾನೆ.

"ಉರೆ ಕೃಷ್ಣ ಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂಗೆಯ್ದು ಕರತಳದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಷ್ಕಳ ವಿರರನೀತನಾರೆ
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನ ಮಾರ್ಗದೊಳು ನಿಂದುಗುಣ
ಕರಿಗೊಂಡ ಘನಲಿಂಗಿದೇವನೇ ಕಾಣೆ ಶುಕವಾಣಿ ಕಾಳಾಹಿವೇಣಿ"

ವಿರಕ್ತ ತೋಂಟದಾರ್ಯನ ಈ ಅಭಿಪ್ರಾಯ ಘನಲಿಂಗದೇವರು ತೋಂಟದ ಸಿದ್ಧಲಿಂಗರ ಯತಿಗಳ ಕಿರಿಯ ಸಮಕಾಲೀನನಾಗಿರಬೇಕೆಂಬ ಎಸ್. ಶಿವಣ್ಣನವರ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

ಕವಿ ಚರಿತೆಕಾರರು ಈತನ ಕಾಲ ಕ್ರಿ.ಶ. ೧೪೮೦[೫೭] ಎಂದರೆ, ಬಿ. ಶಿವಮೂರ್ತಿಶಾಸ್ತ್ರಿಯವರು ೧೫ನೇ ಶತಮಾನ ಎಂದಿದ್ದಾರೆ[೫೮]. ವೀರಣ್ಣ ರಾಜೂರ ಅವರು "ಘನಲಿಂಗಿದೇವನ ವಚನಗಳು ಕ್ರಿ.ಶ. ಸು.೧೬೦೦ರಲ್ಲಿದ್ದ ಎಳಮಲೆಯ ಗುರುಶಾಂತದೇವ ಮತ್ತು ಕ್ರಿ.ಶ. ಸು.೧೬೭೫ರಲ್ಲಿದ್ದ ಸಂಪಾದನೆಯ ಬೋಳಬಸವರ ವಚನ ಸಂಕಲನಗಳಲ್ಲಿ ಎಡೆ ಪಡೆದಿದೆ. ಈ ಹಿನ್ನಲೆಯಲ್ಲಿ ಘನಲಿಂಗಿದೇವನ ಕಾಲವನ್ನು ೧೬ನೇ ಶತಮಾನವೆಂದು ನಿರ್ಧರಿಸಬಹುದಾಗಿದೆ[೫೯] ಎಂದಿದ್ದಾರೆ. ಎಸ್.ಶಿವಣ್ಣ ಅವರೂ ಕೂಡಾ 'ಘನಲಿಂಗದೇವ, ತೋಂಟದ ಸಿದ್ಧಲಿಂಗರ ಕಿರಿಯ ಸಮಕಾಲೀನ ಸಿದ್ಧಲಿಂಗರು ಕ್ರಿ.ಶ. ೧೫೬೧ರಲ್ಲಿ ಜೀವಂತರಾಗಿದ್ದ ಅಂಶ ಶಾಂತೇಶನ ಸಿದ್ದೇಶ್ವರ ಪುರಾಣದಿಂದ ತಿಳಿಯುತ್ತದೆ. ಘನಲಿಂಗಿದೇವ ತನ್ನ ವಚನದಲ್ಲಿ ಹೆಸರಿಸಿದ ಭಂಡಾರಿ ಬಸವಪ್ಪೊಡೆಯದೇವ ಕ್ರಿ.ಶ. ೧೫೧೪ರಲ್ಲಿನ ನಂಜನಗೂಡಿನ ಮೂರು ಶಿಲಾ ಶಾಸನಗಳಲ್ಲಿ ಉಕ್ತನಾಗಿದ್ದಾನೆ'.[೬೦] ಹೀಗಾಗಿ ಘನಲಿಂಗಿದೇವ ೧೬ನೇ ಶತಮಾನದ ಪೂರ್ವೋತ್ತರ ಕಾಲಮಾನದಲ್ಲಿ ಬದುಕಿ ಬಾಳಿದ್ದಾನೆ ಎಂದಿದ್ದಾರೆ.[೬೧]

---

೫೬. ಡಾ॥.ವೀರಣ್ಣ ರಾಜೂರ. 'ಬಸವೋತ್ತರ ಯುಗದ ವಚನಕಾರರು,' ಪುಟ-೬೪
೫೭. ಆರ್.ನರಸಿಂಹಾಚಾರ್.'ಕರ್ನಾಟಕ ಕವಿ ಚರಿತೆ', ಭಾಗ -೨ ಪುಟ- ೩೫೬
೫೮. ಬಿ.ಶಿವಮೂರ್ತಿಶಾಸ್ತ್ರಿ, "ವೀರಶೈವ ಸಾಹಿತ್ಯ," ಪುಟ-೨೪೬
೫೯. ಡಾ॥. ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು', ಪುಟ-೬೫
೬೦. ಎ.ಕ.III ನಂಜನಗೂಡು, ೧೯೩೪, ೯೫,೯೬,೪೦೧.
೬೧. ಎಸ್.ಶಿವಣ್ಣ-ಸಂಕೀರ್ಣ ವಚನ, ಸಂಪುಟ -೬, ಪ್ರಸ್ಥಾವನೆ ಪುಟ-೧೭

ಘನಲಿಂಗಿದೇವ ಹದಿನಾರನೇ ಶತಮಾನ ಕಂಡ ಕನ್ನಡನಾಡಿನ ಸೀಮಾ ಪುರುಷರಲ್ಲೊಬ್ಬರೆನ್ನಬೇಕು. ಮಹಾಶಿವಯೋಗಿಗಳೆಂದು ಸಮಕಾಲೀನ ಶರಣ ಜಗತ್ತು ಗುರುತಿಸಿ, ಅತ್ಯಂತ ಪೂಜ್ಯ ಭಾವನೆಯಿಂದ ಗೌರವಿಸಿದ ಘನಲಿಂಗಿದೇವರು ದ್ವಿತೀಯ ಘಟ್ಟದ ಶ್ರೇಷ್ಠ ವಚನಕಾರರಲ್ಲೊಬ್ಬರು. ನೂರಾರು ಜನ ವಿರಕ್ತರು, ಅಮರಗಣಂಗಳ ನಡುವೆ ಒಬ್ಬರಾಗಿ ಈ ನಾಡಿನ ಉದ್ದಗಲಕ್ಕೂ ಸಂಚರಿಸಿ ಧರ್ಮ ಪ್ರಸಾರಮಾಡಿದರು. ಈತ ಉನ್ನತ ಅನುಭಾವಿ, ಉತ್ಕಟ ವಿರಕ್ತನೂ ಆಗಿದ್ದನು.[೬೨] ಘನಲಿಂಗದೇವ[೬೩] ಎನ್ನುವ ಹೆಸರೇ ಅವನ ವ್ಯಕ್ತಿತ್ವಕ್ಕೆ ವ್ಯಾಖ್ಯಾನದಂತಿದೆ. ವಿರಕ್ತನಾದವನು ಏರಿದ ಎತ್ತರದ ಸಾಂಕೇತಿಕತೆಯನ್ನು ಘನಲಿಂಗಿದೇವ ಎಂಬ ಈ ನಾಮ ವಾಚಿಯು ಸೂಚಿಸುತ್ತದೆ, ಎಂಬ ಮಾತುಗಳು ಘನಲಿಂಗಿದೇವರ ಘನವ್ಯಕ್ತಿತ್ವವನ್ನು ಸಾದರಪಡಿಸುತ್ತವೆ.

ಘನಲಿಂಗಿದೇವರ ೬೬ ವಚನಗಳು ದೊರೆತಿವೆ. ಈ ಕಾಲದ ಇತರರ ವಚನಗಳಂತೆ ಇವು ದೀರ್ಘವಾಗಿದೆ. ಇವನ ಅಂಕಿತ 'ಘನಲಿಂಗಿಮೋಹದ ಚನ್ನಮಲ್ಲಿಕಾರ್ಜುನ.' ಈತನ ವಚನಗಳಲ್ಲಿ ಮಾಯೆಯ ವಿಡಂಬನೆ, ಸಂಸಾರಹೇಯ, ಭಕ್ತನಮೊರೆ, ಭೃತ್ಯಭಾವ, ಸತಿಪತಿಭಾವ, ಸ್ವವಿಮರ್ಶೆ, ವಿನಯ, ಡಾಂಭಿಕ ವಿರಕ್ತರ ಟೀಕೆ, ಲಿಂಗಾಂಗಿಯ ಇರವು ಮೊದಲಾದ ವಿಷಯಗಳು ನಿರೂಪಿತವಾಗಿವೆ.

ವೀರಶೈವ ಮತತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಲಿಂಗಾಂಗ ಸಾಮರಸ್ಯಗಳ ಜೊತೆಗೆ ಇವನ ವಚನ ರಚನೆಗಳಲ್ಲಿ ಒಂದು ಬಗೆಯ ಮುಗ್ಧತೆ ಇದೆ. ಮೋಹಕತೆ ಇದೆ. ಅವುಗಳ ಅಭಿವ್ಯಕ್ತಿಯಲ್ಲಿ ವೈಶಿಷ್ಟ್ಯವಿದೆ.[೬೪]

ಘನಲಿಂಗಿದೇವನಿಗೆ ವೇದ ಆಗಮುಗಳ ಬಗೆಗೆ ಗೌರವ ಭಾವನೆ ಇರುವುದು ಅವನ ವಚನಗಳಲ್ಲಿ ತಿಳಿಯುತ್ತದೆ. ಅದಕ್ಕಿಂತ ಹೆಚ್ಚಾಗಿ ಬಸವಾದಿ ಶಿವಶರಣರು ರಚಿಸಿದ ವಚನಗಳ ಬಗೆಗೆ ಅತ್ಯಂತ ಗೌರವ ವ್ಯಕ್ತವಾಗಿದೆ.

> " ಪುರಾತನರ ವಚನಾನುಭವ ಭಕ್ತಿಜ್ಞಾನ ವೈರಾಗ್ಯವೆಂಬ
> ಜೇನು ಸಕ್ಕರೆ ಪರಮಾಮೃತ "[೬೫]
> "ಪುರಾತನರ ಗೀತವನೋದಿ ಪುರಾತನರ ಮಕ್ಕಳಾದ ಬಳಿಕ
> ಕಿರಾತರ ಮಕ್ಕಳಂತೆ ಮನಬಂದ ಪರಿಯಲ್ಲಿ ನಡೆಯಲಾಗದು
> ಪುರಾತನರಂತೆ ನಡೆವುದು."[೬೬]

---

೬೨. ಡಾ॥. ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು', ಪುಟ–೬೩

೬೩. ಘನ ಎಂದರೆ ಪರಾತ್ಪರ ವಸ್ತು ಅಥವಾ ನಿಷ್ಕಲ ಬ್ರಹ್ಮವೆ.'ಲಿಂಗ',ಲಿಂಗ ರೂಪವಾಗಿರುವವನು. 'ದೇವರು' ಪದ ಗೌರವವಾಚಿ, ಮೈಸೂರು ಭಾಗದಲ್ಲಿ ಹೆಸರಿನ ಮುಂದೆ ದೇವರು ಗೌರವವಾಚಿಯಾಗಿ ಬಳಕೆಯಲ್ಲಿದೆ. ಉದಾ: ಮಹಾಂತದೇವರು, ಗುರುಶಾಂತದೇವರು ಇತ್ಯಾದಿ.(ಸಂ.ಎಸ್.ವಿದ್ಯಾಶಂಕರ್, 'ವಚನ ಸಾಹಿತ್ಯ–ದ್ವಿತೀಯ ಘಟ್ಟ'–ಪುಟ–೧೨೦)

೬೪.. ಡಾ॥ ಎಂ.ಚಿದಾನಂದಮೂರ್ತಿ, 'ವಚನಸಾಹಿತ್ಯ.' ಪುಟ–೨೩೨

೬೫,೬೬. ಎಸ್.ಶಿವಣ್ಣ ,(ಸಂ) 'ಸಂಕೀರ್ಣ ವಚನ. ಸಂಪುಟ–೬,' ವ–೭೧೩, ೭೩೪.

ಎಂಬ ಮಾತುಗಳಲ್ಲಿ ಪುರಾತನ ವಚನಕಾರರ ಬಗ್ಗೆ ಈತನಿಗಿದ್ದ ಗೌರವವನ್ನು ಸೂಚಿಸುತ್ತದೆ. ಹಾಗೆಯೆ 'ಆದ್ಯರ ವಚನವೆಂಬುದು ಸಂತೆಯ ಮಾತೆ? ಪುಂಡರ ಪುರಾಣವೇ ? ಲೋಕದ ಜನರ ಮೆಚ್ಚಿಸುವ ಬೀದಿಯ ಮಾತೆ?"[೬೭] ಎಂದು ಪ್ರಶ್ನಿಸುತ್ತಲೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ ಪ್ರಭು, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ, ಘಟ್ಟಿವಾಳಯ್ಯ, ನಿಜಗುಣ, ಕರಸ್ಥಲದ ನಾಗಿದೇವರು, ಶಿವಭಕ್ತಿ ಸತ್ಯಕ್ಕ, ಸಿದ್ಧಲಿಂಗಪ್ರಭು, ಅಕ್ಕಮಹಾದೇವಿ ಮುಂತಾದ ಶಿವ ಶರಣ–ಶರಣೆಯರನ್ನು ಸ್ಮರಿಸಿದ್ದಾನೆ. ಅವರಂತೆ ಸಮ್ಯಜ್ಞಾನವನ್ನು ಕ್ರೀಯಿಂದಲೆ ಆಚರಿಸಬೇಕು. ಅವರ ವಚನಗಳನ್ನು ಹೊಟ್ಟೆಪಾಡಿಗಾಗಿ ಬಳಸಿಕೊಳ್ಳಬಾರದು ಎಂದು ಎಚ್ಚರಿಸುತ್ತಾನೆ. ಘನಲಿಂಗಿದೇವನು ಪುರಾತನರ ದಾರಿಯಲ್ಲಿಯೆ ನಡೆದು, ಅವರ ಆತ್ಮ ವಿಶ್ವಾಸದ ಕಿಚ್ಚನ್ನು ತನ್ನಲ್ಲಿ ಹಚ್ಚಿಕೊಂಡು ಅವರಂತೆಯೆ ವಚನಗಳನ್ನು ರಚಿಸ ಹೊರಟಿದ್ದಾನೆ. ಅವನೇ ಹೇಳಿಕೊಂಡಂತೆ " ಶಿವಜ್ಞಾನೋದಯವಾದ ಲಿಂಗಾಂಗಿಗಳಿಗೆ ಎನ್ನ ನುಡಿ ಮೃಗಂದೆಯಂ ತುರಿಸಿದಂತೆ, ಹಾಲು ಸಕ್ಕರೆಯನುಂಡಂತೆ ಸವಿದೋರುತ್ತದೆ. ವೇಷದಾರಿ ವಿಶ್ವಾಸ ಘಾತುಕರಿಗೆ ಎನ್ನನುಡಿ ಅಲಗಿನ ಮೊನೆಯಂತೆ ಇರಿಯುತ್ತದೆಯಯ್ಯಾ"[೬೮]

ಘನಲಿಂಗಿ ದೇವರ ವಚನಗಳಲ್ಲಿ ತಾತ್ವಿಕ ವಿವೇಚನೆ ಮತ್ತು ಅದರಂಗವಾಗಿ ಬರುವ ಭಕ್ತಿ–ಜ್ಞಾನ –ವೈರಾಗ್ಯಗಳ, ಕ್ರಿಯಾ –ಜ್ಞಾನಗಳ , ಗುರುಲಿಂಗ, ಜಂಗಮದ ಸ್ವರೂಪ ಲಕ್ಷಣಗಳ ವಿವರಣೆ ಕಂಡು ಬರುವುದಾದರೂ ರಮ್ಯವಾಗಿ ರೂಪಗೊಳ್ಳುವ ಆತ್ಮ ನಿರೀಕ್ಷೆ, ಆತ್ಮ ಪರೀಕ್ಷೆ, ಆತ್ಮ ವಿಡಂಬನೆ, ಆತ್ಮ ನಿವೇಧನೆ ಎಂಬಿವುಗಳು ಆತನ ಅಭಿವ್ಯಕ್ತಿಯ ಸ್ಥಾಯಿ ಪ್ರಜ್ಞೆಯಾಗಿ ಪ್ರಮುಖ ವೈಶಿಷ್ಟ್ಯ ಹಾಗು ರೋಮಾಂಚನಕಾರಿಯಾದ ಆಕರ್ಷಣೆಯಾಗಿ ನಿಲ್ಲುತ್ತವೆ.[೬೯]

ಈ ಗುಣವಿಶೇಷಗಳು ಆಕಾಲದ ವಿರಕ್ತ ಮಠಾಧಿಪತಿಗಳಲ್ಲಿ ಕಾಣಿಸಿಕೊಳ್ಳುವುದು ಕಷ್ಟ. ಏಕೆಂದರೆ ಪೀಠದ ಘನತೆ, ಗಾಂಭಿರ್ಯವನ್ನು ಕಾಯ್ದುಕೊಳ್ಳಬೇಕಿತ್ತು. ಜೊತೆಗೆ ತಮ್ಮನ್ನು ತಾವೇ ಅತಿ ಗೌರವ ಭಾವದಿಂದಲೆ ಸಂಬೋಧಿಸಿಕೊಳ್ಳುವ ಮಠಾಧೀಶರಿಗೆ ಆತ್ಮ ವಿಮರ್ಷೆ, ಆತ್ಮ ವಿಡಂಭನೆ ಅಸಾಧ್ಯ. ವಚನ ರಚನೆ ಸಂದರ್ಭದಲ್ಲೂ ಇದು ಅಸಾಧ್ಯವಾದುದಾಗಿತ್ತು. ಆದರೆ ಇದಕ್ಕೆ ಹೊರತಾಗಿ ಘನಲಿಂಗಿದೇವರು ವಿರಕ್ತರಾಗಿದ್ದೂ, ಪೀಠಾಧಿ ಪತಿಯಾಗಿದ್ದರೂ ವಿಮರ್ಶೆಗೆ, ವಿಡಂಭನೆಗೆ ಒಳಪಡಿಸಿಕೊಂಡಿದ್ದು ಅವರ ವ್ಯಕ್ತಿತ್ವದ ಔನ್ನತ್ಯಕ್ಕೆ ನಿದರ್ಶನವಾಗಿದೆ. "–ಇಂತಪ್ಪ ಮಹಾಪಾತಕಂಗಳ ಮಾಡಿದ ಹೊಲೆಯ ನೀನೆಂದು ನೀನರಿದ ಬಳಿಕ ಎನಗೆ ವಿರಕ್ತಿಯೆಂಬ ಲಾಂಛನಮಂ ಕೊಟ್ಟುದು ಕೋಪದ ಕಾರಣವಲ್ಲದೆ ಕೃಪೆಯಲ್ಲವಯ್ಯ". (ವ–೫) ಈತನ ವಚನಗಳಲ್ಲಿ ಆತ್ಮ ನಿವೇದನೆಯೂ ಇದೆ. ಸಮಾಜ ವಿಮರ್ಷೆಯೂ ಇದೆ. ಇಲ್ಲಿ ಕಂಡು ಬರುವ ಸಾಮಾಜಿಕ ಕಳಕಳಿ ಶಿಷ್ಟ ಮಠಾಧೀಶನೊಬ್ಬನ ಔಪಚಾರಿಕ ಮಟ್ಟದಲ್ಲಿ ನಿಂತುಕೊಳ್ಳದೆ, ಮಹತ್ವಾಕಾಂಕ್ಷಿಯೊಬ್ಬನ ಪ್ರಜ್ಞಾಪಾತಾಳಿಯಿಂದ ಪ್ರಾದುರ್ಭವಿಸಿ ನಿಲ್ಲುವಂತಹುದು. ಆತ್ಮಶೋಧನೆ ಮತ್ತು ಸ್ವವಿಮರ್ಶೆ ಘನಲಿಂಗಿಯ ಹಲವು ವಚನಗಳಲ್ಲಿ ಕಾಣಿಸಿಕೊಂಡಿದೆ.

---

೬೭. ಎಸ್.ಶಿವಣ್ಣ ,(ಸಂ) 'ಸಂಕೀರ್ಣ ವಚನ. ಸಂಪುಟ–೬.' ವ–೭೩೬

೬೮. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು (ಸಂ) – 'ಘನಲಿಂಗಿದೇವರ ವಚನಗಳು.' ವ–೨೩

೬೯. ಡಾ॥ ಗುರುಪಾದ ಮರಿಗುದ್ದಿ(ಸಂ), 'ಬಸವೋತ್ತರ ಯುಗದ ವಚನ ಸಾಹಿತ್ಯ.' ಪುಟ–೯೨.

"ತಂದೆ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ ಇಂತಪ್ಪ ಶಿವಶರಣರ ಮನೆಯ ಬಾಗಿಲ ಕಾವ ಶುನಕನ ಮಾಡಿ ಎನ್ನ ನೀ ನಿಲಿಸಯ್ಯ" ಎಂದು ಪ್ರಾರ್ಥಿಸಿದರೆ,

"ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ
ಹಂದಿಯ ತಂದು ಅಂದಣವನೇರಿಸಿದಂತೆ
ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ"

ಎಂದು ತನ್ನ ಅಲ್ಪತನವನ್ನು ವಿಮರ್ಶಿಸಿಕೊಂಡಿದ್ದಾರೆ.

ಘನಲಿಂಗಿ ದೇವನು ಮಾಯೆಯ ವರ್ಣನೆಯನ್ನು ಮಾಡುವ ರೀತಿ ನೂತನವಾಗಿದೆ.

"ಮಾಯೆ ಕರಣ ಹಸುಗೆಯನೋದುವಣ್ಣಗಳ ಕಾಲಹಿಡಿದೆಳೆಯಿತು ಮಾಯೆ,
ಮಿಶ್ರಾರ್ಪಣಗಳನೋದುವಣ್ಣಗಳ ಮೀಸೆಯ ಹಿಡಿದುಯ್ಯಲೆಯನಾಡಿತು ಮಾಯೆ,
ಮಂತ್ರಗೊಪ್ಯವನೋದುವಣ್ಣಗಳ ಕುಟಿಲವೆಣ್ಣಿನ ಕುಮಂತಕ್ಕೆ ಸಿಕ್ಕಿಸಿ ಕಾಡಿತ್ತು ಮಾಯೆ,
ಬೆಡಗಿನ ವಚನವನೋದುವಣ್ಣಗಳ ಸಖಿಯರ ತೊಡೆಯಲಿ ಹಾಕಿತ್ತು ಮಾಯೆ,
ವಚನವನೋದುವಣ್ಣಗಳ ರಚನೆಗೆ ನಿಲಿಸಿತುಮಾಯೆ,
ಶುನಕ ಸೂಕರಾದಿಗಳ ಬಸಿರಲ್ಲಿ ಬರುವಂತೆ ಮಾಡಿತಯ್ಯ ಎನ್ನಮಾಯೆ".

ಎಂದು ಹೇಳುವಲ್ಲಿ ಮಾಯೆಯ ಹಾವಳಿಗೆ ಒಳಗಾದವರ ಪತನದ ವಿವರಗಳು ವಾಸ್ತವವೆನ್ನಿಸುತ್ತವೆ.

ಘನಲಿಂಗಿದೇವನ ವಚನಗಳ ಮುಖ್ಯಸೆಲೆ ವಿರಕ್ತಿಯಲ್ಲಿದೆ. ಅವನೆ ವಿರಕ್ತಪರಂಪರೆಯ ಆದ್ಯನಾಗಿದ್ದರಿಂದ ಇದು ಸಹಜ. ಶರಣರು ಸಾಮಾನ್ಯವಾಗಿ ಶರಣಸತಿ – ಲಿಂಗಪತಿ ಎಂದು ಪರಿಭಾವಿಸಿ ಅನುಸಂಧಾನ ಮಾಡಿಕೊಂಡಿರುವಂತೆ ಘನಲಿಂಗಿಯಲ್ಲಿ ಅದೇ ಶರಣಸತಿ – ಲಿಂಗಪತಿ ಭಾವ ಬೆಸೆದು ಕೊಂಡಿದೆ. ತನ್ನ ಹೆಸರನ್ನೆ 'ಘನಲಿಂಗ' ಎಂಬುದನ್ನು 'ಘನಲಿಂಗಿ' ಎಂಬ ಸ್ತ್ರೀವಾಚಿ ಹೆಸರನ್ನು ಉಳಿಸಿಕೊಂಡಿದ್ದಾನೆ. ಸಿದ್ಧರಾಮ, ಗಜೇಶ ಮಸಣಯ್ಯರಂತೆ ಇವನಲ್ಲಿಯೂ ಸತಿಪತಿ ಭಾವದ ವಚನಗಳು ಸೊಗಸಾಗಿ ಮೂಡಿಬಂದಿವೆ.

"ಇನ್ನೇವಿನಿನ್ನೇವೆನೆಲೆ ತಂದೆ ಹೆಣ್ಣು ಬಾಲೆಯ ಮೊರೆಯ ಕೇಳಯ್ಯ"

"ಕಬ್ಬುವಿಲ್ಲನಂ ಖಂಡಿಸಿ ಕಾಸೆಯಳಿದು ಸೀರೆಯನುಟ್ಟು ಗಂಡು ಹೆಣ್ಣಾಗಿ ನಿನಗೆ ವಧುವಾದೆನಯ್ಯಾ" (ವ–೬೨)

"ಅಕ್ಕರಿಂದಾಲಂಗಿಸಿ ದಿಟ್ಟಿಸಿ ಬೊಟ್ಟಾಡಿ ಲಲ್ಲೆವಾತಿಂ ಗಲ್ಲವಪಿಡಿದು ಪುಷ್ಪ ಪರಿಮಳದಂತೆ ನಾನು ನೀನುಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೆ"

"ನಿನಗೊಲಿದವರ ನಿನ್ನಂತೆ ಮಾಡು ಕೃಪಾಕರನೆ, ನಿನಗೆ ಮೆಚ್ಚಿದೆನಯ್ಯ, ನಿನ್ನ ಮೆಚ್ಚಿಸಿ ಕೊಳ್ಳಲರಿಯದೆ ಮುಗ್ಧವೆಣ್ಣಿನ ಪತಿಭಕ್ತಿಯಂ ಸಾದಿಸು, ಎನ್ನವಸ್ಥೆಂ ಲಾಲಿಸು"

"ಶರಣಸತಿ – ಲಿಂಗಪತಿಯೆಂದು ಬಣ್ಣಿಸಿ ಒಪ್ಪವಿಟ್ಟು ನುಡಿದುಕೊಂಬ ಕುಟಿಲವೆಣ್ಣಲ್ಲವಯ್ಯ ನಾನು, ನಿನಗೆ ಮೆಚ್ಚಿ ಮರುಳಾದ ಪತಿವ್ರತೆಯೆಂಬುದಕ್ಕೆ ದೃಷ್ಟವ ಕೊಟ್ಟು ನುಡಿವುತಿಪ್ಪೆ ಕೇಳಯ್ಯ ಗಂಡನೆ"

ಈ ಸಂದರ್ಭದಲ್ಲಿ ಬಳಸುವ ಭಾಷೆ, ಭಾವಗಳು ಶೃಂಗಾರ ಭರಿತವಾಗಿವೆ. ಇವುಗಳಲ್ಲಿ ಭಾವಗೀತ ಗುಣಗರ್ಭಿತವಾಗಿ ತೋರುತ್ತವೆ. ಭಾಷಾ ತೀವ್ರತೆಯಿಂದ ಕೂಡಿದ ಭಾಷೆಯ ಲಾಲಿತ್ಯ ಕಾವ್ಯದ ಸೊಬಗನ್ನು ತಂದಿವೆ.

ಸಾಂಸಾರಿಕ ಜಂಜಡದಲ್ಲಿ ಸಿಲುಕಿ ನರಳುವ ಜೀವಿಯ ಆರ್ತನಾದ, ನಾನಾವಿಕಾರಗಳಿಂದ ಬಿಡುಗಡೆ ಬಯಸುವ ಭಕ್ತನ ಮೊರೆ, ಶರಣರ ಸನ್ನಿದಿಯ ಸುಖಕ್ಕಾಗಿ ಬಯಸುವ ಸಾಧಕನ ಪ್ರಾರ್ಥನೆಗಳು ಭಾವಪೂರ್ಣ ಹಾಗೂ ರಮ್ಯವಾಗಿವೆ.

"ಕಪಿ ಕಳ್ಳ ಕುಡಿದು ಕಡಲದಾಂಟುವೆನೆಂದು
ಲಂಘಿಸಿ ನಡು ನೀರಿನಲ್ಲಿ ಬಿದ್ದು
ಮೀನು ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನ ಬಾಳು"
"ಇನ್ನೇವೆನಿನ್ನೇವೆನಯ್ಯ ಎನ್ನ ಕೇಡಿಂಗೆ ಕಡೆಯಿಲ್ಲ
ಕಾಯ ವಿಕಾರವೆಂಬ ಕತ್ತಲೆ ಕವಿಯಿತು.
ಮನೋವಿಕಾರವೆಂಬ ಮಾಯೆ ಸೆರೆವಿಡಿದಳು
ಇಂದ್ರಿಯ ವಿಕಾರವೆಂಬ ಹುಚ್ಚು ನಾಯಿಗಳು ಕಚ್ಚಿ ಕಚ್ಚಿ ಬರುತ್ತವೆ
ಕಾಮವಿಕಾರವೆಂಬ ಕಾಳರಕ್ಕಸಿ ಅಗಿದಗಿದು ನುಂಗುತಿಹಳು
ಕಾಯಲಾಗದೆ ದೇವಾ "?

ಎಂದು ಮೊರೆಯಿಡುತ್ತಾರೆ. ವೇಷಧಾರಿ ಡಾಂಭಿಕ ಕಳ್ಳ ವಿರಕ್ತರನ್ನು ಘನ ಲಿಂಗಿದೇವ ತೀಕ್ಷ್ಣವಾಗಿ ಟೀಕಿಸುತ್ತಾನೆ.

" ಹಗಲಾದರೆ ಹಸಿವು ತೃಷೆಗೆ ಬಾಯಿಬಿಟ್ಟು
ಇರುಳಾದರೆ ವಿಷಯಾತುರಾಗಿ ಕಳವಳಿಸಿ
ಕನಸ ಕಂಡು ಬೆದರಿ ಶಿವಶಿವ ಎಂದು ಕುಳಿತು
ಸುಷುಪ್ತಿಯಲ್ಲಿ ಮೈಮರೆದು ಮಟ್ಟಿ ತಟ್ಟಿದ
ಸಂಜ್ಞೆಯನರಿಯದಿಪ್ಪವರೆಲ್ಲ ವಿರಕ್ತರೆ?"
" ಗಂಡು ತೊತ್ತಿನಂತೆ ಮಂಡೆಯ ಬೋಳಿಸಿಕೊಂಡು
ಮುಂಡೆ ಹಾರುವಿತಿಯಂತೆ ಬಳವಲ್ಲ ಮಾಡಿಕೊಂಡು
ತೆಂಗ ಪೋಟಾಡುವಂತೆ ಕರಸ್ಥಲದಲಿ ಲಿಂಗವ ಹಿಡಿದುಕೊಂಡು
--ಮನೆ ಮನೆಗೆ ಹೋಗಿ ಹೊಟ್ಟೆಯ ಕಿಚ್ಚಿಗೆ
ಶಾಸ್ತ್ರವ ಹೇಳುವ ಡೊಂಬರಂತೆ "

ಎಂದು ವಿರಕ್ತರನ್ನು, ಪಂಡಿತ ಜಂಗಮರನ್ನು ತರಾಟೆಗೆ ತೆಗೆದು ಕೊಳ್ಳುವ ಆತನ ಬಂಡಾಯ ಮನೋಭಾವ ಧಾರ್ಮಿಕ ವಲಯದಲ್ಲಿ ಅಚ್ಚರಿ ಹುಟ್ಟಿಸುವಂತಹುದು. ಲೌಕಿಕ ಬದುಕಿನಲ್ಲಿರುವ ಯಾವುದೇ ವರ್ಗದವರಿರಲಿ, ವಿರಕ್ತರಾಗಿರಲಿ, ಮಠಾಧಿಪತಿಗಳೇ ಆಗಿರಲಿ, ಅವರಲ್ಲಿ ಕಂಡ ಡಾಂಭಿಕತನವನ್ನು,

ಸಣ್ಣತನವನ್ನು ನಿರ್ದಾಕ್ಷಿಣ್ಯವಾಗಿ ಕಂಡಿಸುವಲ್ಲಿ, ಬಯಲಿಗಳೆಯುವಲ್ಲಿ ಈ ವಚನಕಾರನ ಪುರೋಗಾಮಿ ಧೋರಣೆ ಮೆಚ್ಚುವಂತಹದಾಗಿದೆ.

"– ನಿನ್ನ ಚಮ್ಮಾವುಗೆಯ ಹೊತ್ತು ಬರುವ ಬೋವರ ಲೆಂಕನಯ್ಯ

ನಿನ್ನ ಪಡುಗವ ಹಿಡಿವ ಪಡುಡಿಂಡಿಯಯ್ಯ
ನೀನುಗುಳ್ದ ತಂಬುಲವ ಮೆಲುವ ನಿನ್ನಾದಿಯ ಹಳೆಯನಯ್ಯ
ನಿನ್ನಂಗಳದಲ್ಲಿ ಬೊಗಳುವ ಶ್ವಾನವಯ್ಯ"

ಎಂಬ ಆದೇಶದಲ್ಲಿ ತನ್ನನ್ನು ತಾನು ಮರೆಯುವ ಘನಲಿಂಗಿಗೆ ಅಭಿವ್ಯಕ್ತಿಯಲ್ಲಿ ಸಂಯಮ ಸಾಲದೆ ಬೇಕಾದಕ್ಕಿಂತ ಹೆಚ್ಚಿನ ಮಾತುಗಳನ್ನು ಬಳಸುವ ವಚನಗಳು ಕಂಡುಬರುತ್ತವೆ.

ಇಲ್ಲೆಲ್ಲ ತಾನು ಪ್ರಸಿದ್ಧ ಪೀಠ ಪರಂಪರೆಯ ಪೀಠದ ಅಧ್ಯಕ್ಷ ಹಾಗೂ ವಿರಕ್ತನೆಂಬುದೆ ಆತನಿಗೆ ಮರೆತು ಹೋಗಿದೆ. ಇಂತಹ ಕಡೆ ಮಾತಿನ ಮೇಲೆ ಎಚ್ಚರವಿರಬೇಕಾಗಿತ್ತು ಎನಿಸುತ್ತದೆ. ಉದಾಹರಣೆಗೆ ೬೩ ನೇ ವಚನ ನೋಡಬಹುದು.

"ಓಡು ಒಡಕು, ಹುರುಳಿ ಪೋಟೆ
ಹುರಿವಾಕೆಯ ಕೈಸೊಟ್ಟು, ಕಣ್ಣುಕುರುಡು
ಮೆಲುವಾತ ಬೋಡ, ಮೂಕೊರೆಗ
ಇಂತಿವರು ತಮ್ಮ ಭೋಗಕ್ಕೆ ಸುರಪತಿಯ ಭೋಗವ ಜರಿವ
ನರಕುರಿಗಳ ನಾನೇಂಬನಯ್ಯ
ಘನಲಿಂಗಿಯ ಮೋಹನ ಮಲ್ಲಿಕಾರ್ಜುನ"

ತಮ್ಮ ಭೋಗದ ಭ್ರಮೆಯಲ್ಲಿ ಬದುಕುವ ಬಡ ಅಂಕವಿಕಲರ ಬದುಕನ್ನು ಘನಲಿಂಗಿದೇವ ವ್ಯಂಗ್ಯವಾಡಿದ್ದಾನೆ. ಹನ್ನೆರಡನೆಯ ಶತಮಾನದ ವಚನಕಾರರಾಗಿದ್ದರೆ ಅವರ ಬಡತನವನ್ನು ,ಅವರ ಸಂತೋಷವನ್ನು ಬೇರೊಂದು ರೀತಿ ಅರ್ಥೈಸಿ ಗೌರವದಿಂದ ಕಾಣುತ್ತಿದ್ದರು. ಇದು ಹನ್ನೆರಡನೆ ಮತ್ತು ಹದಿನಾರನೆ ಶತಮಾನದ ವಚನಕಾರರ ನಡುವೆ ಇರುವ ವ್ಯತ್ಯಾಸ.

ಘನಲಿಂಗಿದೇವರ ವಚನಗಳ ವೈಶಿಷ್ಟ್ಯವಿರುವುದು ಆತ ಬಳಸುವ ಸೂತ್ರಬದ್ಧವಾದ ಮಾತುಗಳು ಗಾದೆಗಳು, ಸುಂದರ ಉಪಮೆಗಳು ಒಮ್ಮೊಮ್ಮೆ ಪ್ರತಿಮೆಗಳಾಗುತ್ತವೆ. ಹೊಟ್ಟೆಯ ಕಿಚ್ಚಿನ ಬಾಯಿ ಬಡುಕರನ್ನು ಕುರಿತು ಹೇಳುವಾಗ "ಆನೆ ಮದವೆದ್ದು ಸೋಮವೀಥಿಯ ಸೂರೆಮಾಡಿತೆಂದು ಆಡುಮದವೆದ್ದು ಬೇಡಗೇರಿಗೆ ಹೋಗಿ ಕೊರಳಮುರಿಸಿಕೊಂಬಂತೆ", "ಅಂದಿನ ಕಾಲದ ಹನುಮ ಲಂಕೆಯ ದಾಟಿದನೆಂದು ಇಂದಿನ ಕಾಲದ ಕಪಿ ಹಳ್ಳವ ದಾಟಿದಂತೆ," "ಅರ್ತಿಯಿಂದ ಅರಸುವೆಣ್ಣು ಉಪ್ಪರಿಗೆಯ ನೇರಿದಳೆಂದು ತೊತ್ತು ತಿಪ್ಪೆಯ ಸೇರಿದಂತೆ", "ರಾಜಕುವರ ತೇಜಿಯನೇರಿಹನೆಂದು ರಜಕನ ಕುವರ ಕುನ್ನಿಯ ನೇರಿದಂತೆ", ಎಂಬಲ್ಲಿ ಬಳಸುವ ಹೀನೋಪಮೆಗಳು ಅರ್ಥವತ್ತಾಗಿ ಬಂದಿವೆ. ಯೋಗ್ಯನಲ್ಲದವನಿಗೆ ಶಿವ ಲಾಂಛನವ ಕೊಟ್ಟಿರುವುದು "ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ, ಹಂದಿಯ ತಂದು ಅಂದಣವನೇರಿಸಿದಂತೆ",

[illegible]

"ಎನ್ನ ಪಟದೊಳಗಣ ಚಿತ್ರದಂತೆ ಮಾಡಯ್ಯ, ಕಪಿಯ ಕೈಯ ಕನ್ನಡಿಯಂತೆ, ಹಾವಕಂಡ ಮರ್ಕಟನಂತೆ". ಹೀಗೆ ಉಪಮೆಗಳು ತಮ್ಮಷ್ಟಕ್ಕೆ ತಾವೆ ಅರ್ಥವನ್ನು ಅಭಿವ್ಯಕ್ತಿಸುತ್ತವೆ. ಮಾತಿಗೆ ಜೀವ ತುಂಬಿಸುತ್ತವೆ. "ಇಕ್ಕುವಾಕೆ ಮೂಗು ಮುಚ್ಚಿಕೊಂಡು ಇಕ್ಕಿದ ಬಳಿಕ, ಉಂಬಾತ ಹೇಗುಂಬನಯ್ಯ?" ಎಂಬಂತಹ ಸೊಗಸಾದ ಮಾತಿನ ಉಕ್ತಿಗಳು ಈತನ ವಚನಗಳಲ್ಲಿ ಕಂಡುಬರುತ್ತವೆ.

ಈತನಿಗೆ ಭಾಷೆಯ ಮೇಲೆ ಹಿಡಿತವಿದೆ. ಅಪಾರ ಅನುಭವವಿದೆ. ಈತನ ವಚನಾಭಿವ್ಯಕ್ತಿ ಬಸವಾದಿ ಶರಣರಂತೆ ಸಮಾಜ ಮುಖಿಯಾಗಿದ್ದಿದ್ದರೆ, ಅವರನ್ನು ಆದರ್ಶವಾಗಿಟ್ಟುಕೊಂಡಿದ್ದಿದ್ದರೆ ಬಹಳ ಒಳ್ಳೆಯ ವಚನಕಾರನಾಗುತ್ತಿದ್ದ ಅನ್ನಿಸುತ್ತದೆ. "ಘನಲಿಂಗಿದೇವ ಒಳ್ಳೆಯ ಅನುಭಾವಿ, ಮಾತುಗಾರ, ಅವನಿಗೆ ವಚನವೆಂಬುದು ಬರಿಯ ರಚನೆಯಲ್ಲ. ಭಾವದ ಅನಾವರಣ, ವಚನವೆಂಬುದು ಅಂತರಂಗದ ಅಭಿವ್ಯಕ್ತಿ, ರಚನೆಯೆಂಬುದು ಬಹಿರಂಗದ ಮಾತಿನ ಅನಾವರಣ. ವಚನ ಶಿವಶರಣರ ಕೂಡಾಡಿ ಕಲಿತು ಮುಂದಣ ಮುಕ್ತಿ ಪದವ ಕಾಣಿಸುವಂತಹದಾಗಿದೆ.[೨೦] ಘನಲಿಂಗಿದೇವ ಒಳ್ಳೆಯ ವಚನಕಾರ. ಅವನಲ್ಲಿ ಅನುಭಾವ ಮೈದೋರಿದೆ. ಅದು ವಚನಗಳಲ್ಲೂ ಕಾಣಿಸಿಕೊಂಡಿದೆ. ಇವನ ವಚನಗಳಲ್ಲಿ ಮುಗ್ಧತೆ ಇದೆ. ಮೋಹಕತೆ ಇದೆ. ಆವೇಶ ಇದೆ.

ಈತ ಪೂರ್ವ ವಚನಕಾರರ ಭಾವ, ಭಾಷೆ, ಶೈಲಿ, ಅಭಿವ್ಯಕ್ತಿಯ ಸ್ವರೂಪವನ್ನು ಅನುಸರಿಸಿದ್ದರೂ ಸ್ವಂತಿಕೆ, ಪ್ರತಿಭೆಯ ಮಿಂಚು, ಅನುಭವದ ಕಾವು ಎದ್ದು ಕಾಣುತ್ತದೆ.

೫. ಇಮ್ಮಡಿ ಮುರಿಗಾ ಗುರುಸಿದ್ಧ – (೧೭ ನೇ.ಶ)

ವಚನ ಸಾಹಿತ್ಯದ ಎರಡನೆ ಘಟ್ಟದಲ್ಲಿ ಬರುವ ವಚನಕಾರರಲ್ಲಿ ಮುರಿಗಾಗುರು ಸಿದ್ಧರು ಪ್ರಮುಖರಾಗಿದ್ದಾರೆ. ಇವರು ಸ್ವತಂತ್ರ ವಚನಗಳನ್ನು ಬರೆದಿದ್ದು ಈ ಘಟ್ಟದ ಮುಖ್ಯ ಸಂಗತಿ. ಚಿನ್ಮೂಲಾದ್ರಿಯ ಪ್ರಭುಪೀಠ ಪರಂಪರೆಯಲ್ಲಿ ಮುರಿಗೆ ಶಾಂತವೀರರ[೨೧] ಶಿಷ್ಯರಾಗಿ, ಇವರ ಉತ್ತರಾಧಿಕಾರಿಯಾಗಿ ಬಂದ ಗುರುಸಿದ್ಧರು ಸಿದ್ಧದೇಶಿಕೇಂದ್ರ, ಲೀಲಾಖ್ಯದ ಮುರಿಗಾಖ್ಯ, ಶಿವಯೋಗಿ ಮುಂತಾದ ಹೆಸರುಗಳಿಂದ ಪ್ರಸಿದ್ಧರಾಗಿದ್ದಾರೆ. ಇವರ ಜೀವನೇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಸಂಗತಿಗಳು ಸ್ವರಚಿತ ಕೃತಿಗಳಿಂದಲೂ, ಇತರರು ರಚಿಸಿದ ಕೆಲವು ಕೃತಿಗಳಿಂದಲೂ ತಿಳಿದುಬರುತ್ತದೆ.

ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಈತ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಧನಗೂರಿನಲ್ಲಿ ಉದ್ಧಾನ ಶಿವಯೋಗಿಯ ವಂಶದಲ್ಲಿ ಜನಿಸಿದರು. ಇವರು ಧನಗೂರಿನ ಶ್ರೀನಿರಂಜನ ಮಹಾಪೀಠಾಧೀಶರಾದ ಸೋಮಶೇಖರ ದೇಶಿಕರ ಕರಕಮಲ ಸಂಜಾತರಾಗಿ ಅವರ ಉಪದೇಶದಿಂದ ಗುರುರೂಪತಾಳಿದರು. ಚಿದ್ಬಸವೇಶ (ಬಸವಲಿಂಗಸ್ವಾಮಿ) ನಿಂದ ವಿದ್ಯೆಯನ್ನು ಕಲಿತು ಪಂಡಿತನಾದೆನೆಂದೂ, ಮುರಿಗೆಯ ಶಾಂತವೀರ ದೇಶಿಕನಿಂದ ಷಟ್‌ಸ್ಥಲ ಮಾರ್ಗಜ್ಞನಾಗಿ ಗುರು ರೂಪವಾದೆನೆಂದೂ ಸ್ವತಃ ಗುರುಸಿದ್ಧರೆ ಹೇಳಿಕೊಂಡಿದ್ದಾರೆ.[೨೨]

---

೨೦. ಡಾ .ಎಸ್. ವಿದ್ಯಾಶಂಕರ್, (ಸಂ)'ವಚನ ಸಾಹಿತ್ಯದ–ದ್ವಿತಿಯ ಘಟ್ಟ,' ಪುಟ–೧೨೬

೨೧. ಲಿಂಗೈಕ್ಯ ಕ್ರಿ.ಶ. ೧೭೦೩ ಮುರಿಗೆ ತಾರಾವಳಿ.

೨೨. ಶಿವರಹಸ್ಯ ಪುರಾಣದ ಪ್ರತಿಯೊಂದು ಕಾಂಡದ ಅಂತ್ಯಪದ್ಯ, ಹಾಲಸ್ಯ ಪುರಾಣದ ನಾಲ್ಕನೇ ಕಾಂಡ, ೧೧ನೇ ಆಶ್ವಾಸ, ಪದ್ಯ ೧೪೯ ರಿಂದ ೧೫೧ರಲ್ಲಿ, ಪ್ರಭುಲೀಲಾ ಕಾವ್ಯದ ಸರ್ಗ೧ ಪದ್ಯ ೨೯–೩೯ ರಲ್ಲಿ

ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಸ್ವಾಮಿಗಳ ಶಿಷ್ಯರಾದ ಮುರಿಗಾ ಶಾಂತವೀರ ಸ್ವಾಮಿಗಳು ತಮ್ಮ ಶಿಷ್ಯರಾದ ಹುಲ್ಲಹಳ್ಳಿ(ತೃಣಪುರಿ) ಯ ಮಠಾಧಿಪತಿಗಳಾಗಿದ್ದ ಇಮ್ಮಡಿ ಮುರಿಗಾ ಗುರುಸಿದ್ಧರ ಪ್ರತಿಭೆ ಪಾಂಡಿತ್ಯಗಳನ್ನು ಮೆಚ್ಚಿಕೊಂಡು ಚಿತ್ರದುರ್ಗಕ್ಕೆ ಕರೆದುಕೊಂಡು ಬಂದು ತಮ್ಮ ನಂತರದ ಉತ್ತರಾಧಿಕಾರಿಗಳನ್ನಾಗಿ ಮಾಡಿದರು.

ಗುರುಸಿದ್ಧ ಸ್ವಾಮಿಗಳ ಕಾಲವನ್ನು ಕವಿಚರಿತೆಕಾರರು ಕ್ರಿ.ಶ. ೧೬೬೦ ಎಂದಿದ್ದಾರೆ. ಗುರುಸಿದ್ಧಸ್ವಾಮಿಗಳು 'ಪಂಚಾಶಿಕೆ'ಯನ್ನು ರಚಿಸಿದ್ದು ೧೭೦೮ ರಲ್ಲಿ. ಹಾಲಸ್ಯ ಪುರಾಣವನ್ನು ರಚಿಸಿದ್ದು ಕ್ರಿ.ಶ. ೧೭೩೦ ರಲ್ಲಿ. ಬಿಜ್ಜಮಹಾದೇವಿ ಚಾರಿತ್ರ್ಯವು ಕ್ರಿ.ಶ. ೧೭೧೨ ರಲ್ಲಿ. 'ಲಿಂಗಾಚಾರ ರಚನಾಗಮಟೀಕೆ' ಬರೆದಿದ್ದು ಕ್ರಿ.ಶ. ೧೭೧೪ ರಲ್ಲಿ. ಈ ಹಿನ್ನೆಲೆಯಲ್ಲಿ ಇವರ ಜನನ ಕಾಲ ಸು.ಕ್ರಿ.ಶ. ೧೬೮೮ ಆಗಬಹುದು ಎಂದು ಡಾ॥ ಎಸ್.ವಿದ್ಯಾಶಂಕರ್ ಅಭಿಪ್ರಾಯ ಪಡುತ್ತಾರೆ.[೨೩]

ಜಿ. ಮರುಳುಸಿದ್ಧಯ್ಯನವರು ಕ್ರಿ.ಶ. ೧೬೮೭–೧೮೩೪ ಎಂದು ನಿರ್ಧರಿಸಿದ್ದಾರೆ.[೨೪] ವಿದ್ವಾನ್ ಎಂ.ಎಸ್. ಬಸವರಾಜಯ್ಯ ನವರು "ಪ್ರಭುಲೀಲೆ"ಯಲ್ಲಿನ ಕಾಲೋಲ್ಲೇಖವನ್ನು ಪುನರ್ ಪರಿಶೀಲಿಸಿ ತಾರೀಖು ೨೩–೦೨–೧೭೩೩ ಎಂದು ಅಭಿಪ್ರಾಯ ಪಡುತ್ತಾರೆ.[೨೫] ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಕ್ರಿ.ಶ. ೧೭೪೯ ರಲ್ಲಿ ಗುರುಸಿದ್ದರು ಲಿಂಗೈಕ್ಯರಾದರೆಂದು ತಿಳಿಸುತ್ತಾರೆ[೨೬]. ಈ ಎಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಎಸ್. ಶಿವಣ್ಣ ಅವರು ಈತನ ಕಾಲವನ್ನು ೧೭ ನೇ ಶತಮಾನದ ಉತ್ತರಾರ್ಧ ಹಾಗೂ ೧೮ ನೇ ಶತಮಾನದ ಪೂರ್ವಾರ್ಧ ಎಂದು ನಿರ್ಣಯಿಸಿದ್ದಾರೆ.[೨೭]

ಕ್ರಿ.ಶ. ೧೭೩೩ ರಲ್ಲಿ ನೀಲಕಂಠ ನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರ ಸಂಗ್ರಹ'ವನ್ನು ಗುರುಸಿದ್ಧ ಸ್ವಾಮಿಗಳು ಪ್ರತಿ ಮಾಡಿರುವರು. ಈತನ ಶಿಷ್ಯ ಸೋಮಶೇಖರ ಶಿವಯೋಗಿ(೧೭೦೦) ತನ್ನ 'ಬಸವನ ಷಟ್ ಸ್ಥಲದ ಬೆಡಗಿನ ವಚನದ ಟೀಕೆ' ಮತ್ತು 'ತೋಂಟದ ಸಿದ್ಧಲಿಂಗನ ಷಟ್ ಸ್ಥಲ ಜ್ಞಾನ ಸಾರಾಮೃತದ ವಚನದ ಟೀಕೆ' ಗ್ರಂಥಗಳಲ್ಲಿ ಗುರುಸಿದ್ಧರನ್ನು ನೆನೆದಿದ್ದಾನೆ. ಕೆಳದಿ ಬಸವಪ್ಪ ನಾಯಕ ಆಂಗೀರಸ ಸಂವತ್ಸರದಲ್ಲಿ (೧೭೫೨) ಈತನ ಸಮಾಧಿಗೆ ದತ್ತಿ ಬಿಟ್ಟಿದ್ದಾನೆ.[೨೮] ಈತ ಆನಂದಪುರದ ಮುರಿಗೆ ದೇವರಿಗೆ ಪ್ರತಿವರ್ಷ ರಥೋತ್ಸವ ನೆರವೇರುವಂತೆ ವ್ಯವಸ್ಥೆ ಮಾಡಿರುವುದನ್ನು (೧೭೬೦) 'ಕೆಳದಿ ನೃಪವಿಜಯ' ದಾಖಲಿಸಿದೆ.[೨೯]

---

೨೩. ಎಸ್.ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ–ದ್ವಿತೀಯ ಘಟ್ಟ,' ಪುಟ–೨೧೩

೨೪. ಪ್ರಭುಲೀಲೆ, ಪ್ರಸ್ತಾವನೆ ಪುಟ xi (೧೯೬೬)

೨೫,೨೬,೨೭. 'ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸ್ವರವಚನಗಳು.' ಮೊದಲ ಮಾತು. ಪು. Viii

೨೮. ಎ.ಕೆ. Viii ಹೊನ್ನಾಳಿ. ಪುಟ–೪೦೬

೨೯. ಎಸ್.ಶಿವಣ್ಣ (ಸಂ) 'ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸ್ವರ ವಚನಗಳು,' ಮೊದಲ ಮಾತು. ಪು. Viii

ಆನಂದಪುರದ ಮುರಗಾ ಮಠದ ತಾಮ್ರ ಶಾಸನದ ಪ್ರಕಾರ ಕೆಳದಿಯ ಶಿವಪ್ಪ ನಾಯಕರ ಪುತ್ರ ಸೋಮಶೇಖರ ನಾಯಕನು ಗುರುಸಿದ್ಧರನ್ನು ಚಿತ್ರದುರ್ಗದಿಂದ ಬರಮಾಡಿಕೊಂಡು ಆನಂದ ಪುರದ ಮುರಿಗಾ ಮಠದಲ್ಲಿ ಪಟ್ಟವನ್ನು ಕ್ರಿ.ಶ. ೧೬೭೧ ರಲ್ಲಿ ಕಟ್ಟಿದನೆಂದು ಹೇಳುತ್ತದೆ.[೮೦] ಆನಂದ ಪುರದಲ್ಲಿ ಗುರುಸಿದ್ಧರು ತಮ್ಮ ಜೀವಿತದ ಕೊನೆಯ ಭಾಗವನ್ನು ಕಳೆದರೆಂದು ಮಹಾದೇವ ಕವಿಯ 'ಮಹಾಲಿಂಗೇಂದ್ರ ವಿಜಯ'ವು ತಿಳಿಸುತ್ತದೆ.[೮೧] ಈ ಎಲ್ಲಾ ಹಿನ್ನೆಲೆಗಳನ್ನು ಮನದಲ್ಲಿಟ್ಟುಕೊಂಡು ಈತನ ಕಾಲಾವಧಿ ೧೭ ನೇ ಶತಮಾನದ ಉತ್ತರಾರ್ಧ ಹಾಗು ಹದಿನೆಂಟನೆಯ ಶತಮಾನದ ಪೂರ್ವಾರ್ಧವಾಗಿದೆ ಎಂದು ನಿರ್ಧರಿಸಬಹುದು.

ಇಮ್ಮಡಿ ಗುರುಸಿದ್ಧರು ಉತ್ತಮಗುರುಗಳ ಸಂಸ್ಕಾರ ಬಲ, ಪ್ರತಿಭೆ ಪಾಂಡಿತ್ಯವನ್ನು ಪಡೆದಿದ್ದಾರೆ. ಇವರು ಕ್ರಿ.ಶ.೧೭೦೩ ರಿಂದ ೧೭೨೯ ರ ವರೆಗೆ ಪೀಠಾಧೀಶರಾಗಿದ್ದರು. ಚಿತ್ರದುರ್ಗದ ದೊರೆಗಳಾಗಿದ್ದ ಭರಮಣ್ಣ ನಾಯಕ, ಅವನ ಮಗ ಹಿರೇಮದಕರಿ ನಾಯಕ ಇವರ ರಾಜಗುರುಗಳಾಗಿದ್ದರು. ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಅಸಮಾನ್ಯ ವಿದ್ವತ್ತನ್ನು, ಕವಿತಾಶಕ್ತಿಯನ್ನು ಹೊಂದಿದ್ದ ಇವರು ಕನ್ನಡದ ಖ್ಯಾತ ಕವಿಯೂ, ಮಠಾಧಿಪತಿಯೂ ಆಗಿದ್ದ ಷಡಕ್ಷರ ದೇವನ ಸಮಕಾಲೀನರಾಗಿ ಅವರಂತೆಯೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ೨೩ ಕೃತಿಗಳನ್ನು ,ಸಂಸ್ಕೃತದಲ್ಲಿ ೩ ಕೃತಿಗಳನ್ನು ಬರೆದಿದ್ದಾರೆ.

ಕನ್ನಡದಲ್ಲಿ :ಶೂನ್ಯ ಮಂತ್ರಗೋಪ್ಯ - (ವಚನ-೨೦೯), ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ- (ಸ್ವರವಚನ-ಹಾಡು), ಇತ್ಯಾದಿ-

ಸಂಸ್ಕೃತದಲ್ಲಿ : ಚಾಮರವೃತ್ತ, ನಂದೀಶ್ವರದಂಡಕ, ಪ್ರಭುಲೀಲಾ.

ಗುರುಸಿದ್ಧರು 'ಶೂನ್ಯಮಂತ್ರಗೋಪ್ಯ' ವೆಂಬ ವಚನ ಗ್ರಂಥವನ್ನು ಬರೆದಿದ್ದು, ಇದರಲ್ಲಿ ಪರಮ ಶಿವಲಿಂಗೇಶ್ವರ, ಪರಮಶಿವಲಿಂಗಯ್ಯ, ಪರಮಶಿವಲಿಂಗ, ಪರಶಿವಲಿಂಗಯ್ಯ ಎಂಬ ಅಂಕಿತಗಳಲ್ಲಿ ೨೦೯ ವಚನಗಳಿವೆ. ವೀರಶೈವ ಧರ್ಮದ-ತತ್ವ ಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ವಚನಗಳ ಮೂಲಕ ಸರಳವಾಗಿ ಹೇಳುತ್ತಾರೆ. ಇಲ್ಲಿ ಕಾವ್ಯಾಂಶಕ್ಕೆ ಅವಕಾಶವಿಲ್ಲವಾಗಿದೆ.

ವೀರಶೈವ ಸಾಹಿತ್ಯದಲ್ಲಿ 'ಮಂತ್ರಗೋಪ್ಯ' ಎಂಬುದು ಒಂದು ಸಾಹಿತ್ಯ ಪ್ರಕಾರವಾಗಿಯೇ ಬೆಳೆದು ಬಂದಿದೆ. ಪ್ರಭುದೇವ, ಚೆನ್ನಬಸವಣ್ಣ, ಹಡಪದ ಅಪ್ಪಣ್ಣ ಅವರ ಮಂತ್ರಗೋಪ್ಯಗಳು ಪ್ರಸಿದ್ಧವಾಗಿವೆ. ಜಕ್ಕಣ್ಣಯ್ಯನ (೧೮ ಶ.) 'ನಿರಳ ಮಂತ್ರಗೋಪ್ಯ' ಎಂಬ ಕೃತಿಯು ಗುರುಸಿದ್ಧನ ಕೃತಿಯಂತೆ ವಚನಗಳಿಂದ ಕೂಡಿದೆ.

ವೀರಶೈವ ವ್ಯಕ್ತಿಯ ಲಕ್ಷಣವನ್ನು ಹೇಳುವ ಗುರುಸಿದ್ಧನ ವಚನ ಈ ರೀತಿ ಇದೆ. ಇದು ಇವನ ವಚನ ರಚನೆಗೆ ಮಾದರಿಯೂ ಹೌದು.

---

೮೦. ಜಿ.ಎ.ಶಿವಲಿಂಗಯ್ಯ (ಸಂ) 'ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ,' ಸಂಪಾದಕರ ಅರಿಕೆ. ಪುಟ- ix

೮೧. ಡಾ॥ ಎಲ್. ಬಸವರಾಜು (ಸಂ)'ಮಹಾಲಿಂಗೇಂದ್ರ ವಿಜಯ,' ಅಧ್ಯಾಯ ೧೮, ಪದ್ಯ - ೩೫.

"ಭವಿಗಳ ಪ್ರಾಕೃತ ದೃಷ್ಟಿ ಪತಿತವಾದ ಶುದ್ಧ ಪದಾರ್ಥಂಗಳಂ ಕಳೆದು,
ನಿವೃತ್ತಿಯಂ ಮಾಡಿ, ವಿಶುದ್ಧಾದ್ವೈತ ದೃಗ್ವಿಲೀನ ಶುದ್ಧ ಪ್ರಸಾದಮಯ
ವಸ್ತುವಂ ಸ್ವೀಕರಿಪನಾವನವನೆ ವಿಶೇಷ ವೀರಶೈವನೆಂದು
ನಿರವಿಸಿದೆನಯ್ಯಾ ಪರಶಿವಲಿಂಗಯ್ಯ". (ವ.೨೦೯)

ಗುರುಸಿದ್ಧರು ವಚನಗಳನ್ನಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ಸ್ವರವಚನಗಳನ್ನು (ಹಾಡು) ಬರೆದಿದ್ದಾರೆ. ಗುರುಸಿದ್ಧರ ಸ್ವರ ವಚನಗಳನ್ನು ಎಸ್. ಶಿವಣ್ಣನವರು ಸಂಪಾದಿಸಿದ್ದಾರೆ.[೮೨] ಇದರಲ್ಲಿ ೨೧೨ ಸ್ವರವಚನಗಳಿವೆ.

ಪ್ರತಿಯೊಂದು ಪಲ್ಲವಿಯನ್ನು ಒಳಗೊಂಡಿವೆ. ಬಹಳಷ್ಟು ಸ್ವರ ವಚನಗಳಿಗೆ ರಾಗಗಳ ಉಲ್ಲೇಖವಿದೆ. ಇದು ಗುರುಸಿದ್ಧರಿಗಿದ್ದ ಸಂಗೀತಜ್ಞಾನದ ತಿಳುವಳಿಕೆಯನ್ನು ಹೇಳುತ್ತದೆ. "ಇಲ್ಲಿನ ಹಾಡುಗಳಲ್ಲಿ ಒಂದು ಸುಸಂಬದ್ಧತೆಯಿಲ್ಲ. ಇವು ಮನಸ್ಸಿನ ಸುಪ್ರಸನ್ನ ಸ್ಥಿತಿಯಲ್ಲಿ ಭಕ್ತಿ ಬೋಧಿತವಾಗಿ ಹುಟ್ಟಿಕೊಂಡ ರಚನೆಗಳು.[೮೩] ೧೪೭ ನೇ ಸ್ವರ ವಚನ ಶಿವ–ಪಾರ್ವತಿಯರ ಸರಸ ಸಂಭಾಷಣ ರೂಪದ ಮನೋಜ್ಞ ಕಲ್ಪನೆಯಾಗಿದೆ.

"ನನ್ನ ಮುಟ್ಟಬೇಡ, ನಿನ್ನ ಮಸ್ತಕದಲ್ಲಿರುವ ಭಾಮಿನಿ ಯಾರು ಹೇಳು?" ಎಂದು ಪಾರ್ವತಿ ಕೇಳುವಳು. ಅದಕ್ಕೆ ಶಿವ ಹೇಳುವನು "ನಾ ಮುನ್ನ ಫಣಿಗಣ್ಣುಷ್ಣಕೆ ತಾಳ ದೇವ ನದಿಯಲ್ಲವೆ?" ಹೀಗೆ ಪ್ರಶ್ನೋತ್ತರಗಳ ಸರಮಾಲೆ ಕುತೂಹಲವನ್ನು ಕೆರಳಿಸುತ್ತದೆ ಮತ್ತು ಅವರ ಸರಸಲೀಲೆ ಅಪ್ಯಾಯ ಮಾನವಾಗುತ್ತದೆ.

ಸತಿ ಪತಿ ಭಾವದ ಹಾಡುಗಳು ಗುರುಸಿದ್ಧರಲ್ಲಿ ಚನ್ನಾಗಿ ಮೂಡಿ ಬಂದಿವೆ. ಕೆಲವು ಕಡೆ ಸ್ವರ ವಚನಗಳಲ್ಲಿ ದೇಸಿಯ ಸೊಗಸು ಅಚ್ಚರಿಯನ್ನುಂಟು ಮಾಡುತ್ತದೆ. ಕೆಲವು ದೇಸಿಯ ಸೊಬಗನ್ನು ಒಳಗೊಂಡು ಜನಪದ ಗೀತೆಯನ್ನು ಹೋಲುತ್ತವೆ.

ಕೆಲವು ಕಡೆ ವಚನಗಳು ಕವಿತೆಯ ಚಲುವನ್ನು ಮೈಗೂಡಿಸಿಕೊಂಡಿವೆ. ಗುರುಸಿದ್ಧರು ಪ್ರಕಾಂಡ ಪಂಡಿತರಾಗಿದ್ದರೂ ತಮ್ಮ ಪಾಂಡಿತ್ಯದ ಬಗೆಗೆ ಗರ್ವವಿಲ್ಲ. ಇವರು ಕವಿಯಾಗಿ, ಮಠಪತಿಯಾಗಿ, ಧಾರ್ಮಿಕ ಗುರುವಾಗಿ ಕಂಡುಬರುತ್ತಾರೆ.

---

೮೨. ಎಸ್.ಶಿವಣ್ಣ , (ಸಂ)'ಇಮ್ಮಡಿ ಮುರಿಗಾ ಗುರುಸಿದ್ಧರ ವಚನಗಳು.' ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶ್ರೀ.ಜಗದ್ಗುರು ಮುರುಗಾ ರಾಜೇಂದ್ರ ಮಠ, ಆನಂದಪುರ.

೮೩. ಕೆ.ಬಿ. ಮಲ್ಲೇಶಯ್ಯ, (ಸಂ)'ಸಾಹಿತ್ಯ ಸೌರಭ,' ಪುಟ–೧೭೩.

೬. ದೇಶಿಕೇಂದ್ರ ಸಂಗನ ಬಸವಯ್ಯ –೧೭(ನೇ.ಶ)

ಇವರ ವೈಯಕ್ತಿಕ ವಿಚಾರಗಳೇನೂ ದೊರೆಯುವುದಿಲ್ಲ. ಕವಿ ಚರಿತೆಕಾರರು ಈತನನ್ನು ಗಮನಿಸದೆ ಹೋದರು. ಈತನು ಅಜ್ಞಾತವಾಗಿಯೆ ಉಳಿದಿದ್ದನು. ಈತನನ್ನು ಮೊದಲು ಗುರುತಿಸಿದವರು ಡಾ॥. ವೀರಣ್ಣ ರಾಜೂರ. ಅವರು ಸಂಪಾದಿಸಿದ 'ಸಂಕೀರ್ಣ ವಚನ ಸಂಪುಟ–೭' ರಲ್ಲಿ ಈತನ ೧೨೪೨ ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈತನ ವಚನಗಳ ಅಂಕಿತ "ಗುರುನಿರಂಜನ ಚೆನ್ನ ಬಸವಲಿಂಗ" ಎಂದಾಗಿದೆ. ಈತನ ವಚನಗಳ ಹಸ್ತಪ್ರತಿ ಸೊಲ್ಲಾಪುರ ತಾಲೂಕಿನ ಕರಜಗಿಯ ಒಂದು ವಿರಕ್ತ ಮಠದಲ್ಲಿ ದೊರೆತಿದೆ.[೮೪] ಈತ ಆ ಮಠದ ಸ್ವಾಮಿಯಾಗಿರಬಹುದೆ? ಎಂಬ ಪ್ರಶ್ನೆ ಇದೆ. ಈತನ ಕಾಲದ ಬಗೆಗೆ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಡಾ॥ ವೀರಣ್ಣ ರಾಜೂರ ಅವರು ಇವನ ವಚನಗಳಲ್ಲಿ ಬರುವ ಬಜಾರ, ಹಪ್ತೆ, ಮುಂತಾದ ಶಬ್ದಗಳ ಆಧಾರದ ಮೇಲೆ ಈತನ ಕಾಲ ೧೭ನೇ ಶತಮಾನ ಎಂದಿದ್ದಾರೆ.[೮೫]

ಸಂಗನ ಬಸವಯ್ಯ ಹೆಸರಿನ ಹಿಂದೆ ಸೇರಿರುವ 'ದೇಶಿಕೇಂದ್ರ' ಎಂಬುದು ದೇಶ ಪರ್ಯಟನ ಮಾಡುವ 'ಚರ ಜಂಗಮ' ಸೂಚಿಯಾಗಿದೆ. ದೇಶದ ಉದ್ದಗಲಕ್ಕೂ ಸಂಚರಿಸುತ್ತಾ ಧರ್ಮ ಪ್ರಚಾರಮಾಡುವುದು ಇವರ ಕರ್ತವ್ಯವಾಗಿರುವಂತೆ ತೋರುತ್ತದೆ. ಎಲ್ಲಿಯೂ ನೆಲೆನಿಂತವರಲ್ಲ. ತಮ್ಮ ಹೆಸರಿನ ಹಿಂದೆ 'ದೇಶಿಕೇಂದ್ರ' ಎಂಬ ವಿಶೇಷಣ ಹಚ್ಚಿಕೊಂಡವರು ತೋಂಟದ ಸಿದ್ಧಲಿಂಗರ ನಂತರ ಕಂಡುಬರುತ್ತಾರೆ. ತೋಂಟದಾರ್ಯ ಪರಂಪರೆ ಮುಂದೆ ಕವಲೊಡೆದು ಐದು ಸಮಯಗಳಾದವು. ಅವುಗಳಲ್ಲಿ ಮುರಿಗಾ ಸಮಯ ಮತ್ತು ಕುಮಾರ ಸಮಯಗಳಲ್ಲಿ 'ದೇಶಿಕೇಂದ್ರ' ಎಂಬ ವಿಶೇಷಣ ಹಂಚಿಕೊಂಡವರು ಕಂಡುಬರುತ್ತಾರೆ. ಕುಮಾರ 'ದೇಶಿಕೇಂದ್ರ' ಶಾಂತವೀರ ದೇಶಿಕ, ಬಸವಲಿಂಗದೇಶಿಕ, ಇಮ್ಮಡಿ ಬಸವಲಿಂಗದೇಶಿಕ, ಸಿದ್ಧಬಸವಲಿಂಗದೇಶಿಕ, ಇತ್ಯಾದಿ. ಹಾಗೆಯೇ ಈತನ ಅಂಕಿತದಲ್ಲಿ ಸೇರಿದ ನಿರಂಜನ ಎಂಬ ಪದವೂ ತೋಂಟದ ಸಿದ್ಧಲಿಂಗರ ನಂತರವೇ ಹೆಚ್ಚು ಪ್ರಚಾರಕ್ಕೆ ಬಂದುದಾಗಿದೆ.[೮೬] ಹಾಗಾಗಿ ದೇಶಿಕೇಂದ್ರ ಸಂಗನ ಬಸವಯ್ಯ ತೋಂಟದ ಸಿದ್ಧಲಿಂಗರ ತರುವಾಯ ಜೀವಿಸಿದವನಾಗಿರಬೇಕು. ಈತ ತೋಂಟದ ಸಿದ್ಧಲಿಂಗರ ಪರಂಪರೆಗೆ ಸೇರಿದ ವಿರಕ್ತನಾಗಿದ್ದಾನೆ. ಸಂಗನ ಬಸವಯ್ಯನ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ವಿಚಾರಗಳು ದೊರೆಯುವುದಿಲ್ಲ. ಆದರೆ ಈತನು ಬರೆದ ಅಮುಲ್ಯವಾದ ಕೃತಿ ದೊರೆತುದು ಈ ಕಾಲದ ವಚನ ಸಾಹಿತ್ಯದ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುತ್ತದೆ.

ಈತ ತನ್ನ ವಚನಗಳ ಕೃತಿಗೆ 'ಷಟ್‌ಸ್ಥಲ ವಚನಗಳು' ಎಂದು ಹೆಸರಿಸಿದ್ದಾನೆ. ಈ ಕಾಲಘಟ್ಟದಲ್ಲಿ ವಚನ ಸಂಕಲನ ಕಾರ್ಯ ಸ್ಥಲಕಟ್ಟಿನ ನೆಲೆಗಟ್ಟಿನೊಳಗೆ ನಡೆದಿರುವುದರಿಂದ ಈತನು ಅದರಿಂದ ಪ್ರಭಾವಿತನಾಗಿ ಸ್ಥಲಾನುಗುಣವಾಗಿ ವಚನಗಳನ್ನು ರಚಿಸಿ ಸಂಯೋಜಿಸಿದ್ದಾನೆ.

---

೮೪. ಇದು ಗಣೇಶ ಮಸಣಯ್ಯನೆಂಬ ವಚನಕಾರನ ಸ್ಥಳ.
೮೫. ಡಾ॥. ವೀರಣ್ಣ ರಾಜೂರ– 'ಬಸವೋತ್ತರ ಯುಗ ವಚನಕಾರರು.' ಪುಟ–೧೧೧
೮೬. ಡಾ॥. ವೀರಣ್ಣ ರಾಜೂರು– 'ಬಸವೋತ್ತರ ಯುಗ ವಚನಕಾರರು.' ಪುಟ–೧೧೧

ಈ ಕೃತಿಯಲ್ಲಿ ೫೩ ಸ್ಥಲಗಳು, ಹಾಗೂ ೧೨೪೨ ವಚನಗಳಿವೆ. ಷಟ್‌ಸ್ಥಲಗಳ ಒಂದೊಂದು ಸ್ಥಲದಲ್ಲಿ ಮತ್ತೆ ಆರಾರು ಅವಾಂತರ ಸ್ಥಲಗಳನ್ನು ಕಲ್ಪಿಸಿದ್ದಾನೆ. ಹಾಗಾಗಿ ಈ ಕೃತಿಯನ್ನು ಮಿಶ್ರ ಷಟ್ ಸ್ಥಲ ಎಂದು ಕರೆಯಬಹುದು. ಈ ಸ್ಥಲಗಳಲ್ಲಿ ಎಂಟು ಸ್ಥಲಗಳು ವಿನೂತವನಾಗಿವೆ. ಅವು

೧. ಗುರು ಭಕ್ತಿ ಸಂಸಾರಿ	೨. ಲಿಂಗಾಂಗ ಲೀಲಾ ಷಟ್‌ಸ್ಥಲ
೩. ಆಚಾರಾಂಗ ಸ್ಥಲ	೪. ಗೌರವಾಂಗ ಸ್ಥಲ
೫. ಶಿವಾಂಗ ಸ್ಥಲ	೬. ಚರಾಂಗ ಸ್ಥಲ
೭. ಶೇಷಾಂಗ ಸ್ಥಲ	೮. ಮಹದಂಗಸ್ಥಲ.

ಈ ಎಂಟು ಸ್ಥಲಗಳು ವೀರಶೈವ ಸಾಹಿತ್ಯದ ಯಾವುದೇ ಸ್ಥಲಕಟ್ಟಿನ ಕೃತಿಗಳಲ್ಲಿ ಕಾಣದ ನೂತನ ಕಲ್ಪನೆಗಳಾಗಿವೆ. ಈ ನೂತನ ಸ್ಥಲಗಳ ಪರಿಕಲ್ಪನೆ ಸಂಗನ ಬಸವಯ್ಯನದಾಗಿದೆ.[೮೭]

ವೀರಶೈವ ಧಾರ್ಮಿಕ ಸಾಹಿತ್ಯವನ್ನು ಅವಲೋಕಿಸಿದಾಗ ಸ್ಥಲದ ಪರಿಕಲ್ಪನೆಗೆ ಮಿತಿ ಇಲ್ಲ. ಅದು ಒಂದರಿಂದ ಆರಂಭವಾಗಿ ನೂರಾಗಿ ನೂರಾ ಒಂದಾಗಿ ಅವು ೨೧೬ ವರೆಗೂ ಹಬ್ಬಿರುವುದು ಕಂಡು ಬರುತ್ತದೆ. ಇದರಲ್ಲಿ ಎಲ್ಲರದೂ ಒಂದೇ ಅಭಿಪ್ರಾಯವಿಲ್ಲ. ಹೀಗೆಯೆ ಇರಬೇಕೆಂಬ ನಿಯಮವೂ ಇಲ್ಲ. ಇದು ಅವರ ಭಾವನಾತ್ಮಕ ಪ್ರಕ್ರಿಯೆ. ಹಾಗೂ ಮಾನಸಿಕ ವಿಕಾಸದ ಹಂತಗಳನ್ನು ಸೂಚಿಸುತ್ತದೆ. ಏಕೋತ್ತರ ಶತಸ್ಥಲ ತುಂಬಾ ಪ್ರಸಿದ್ದವಾದುದ್ದು ಹಾಗೆಯೆ ೨೧೬ರ ಸ್ಥಲದ ಪರಿಕಲ್ಪನೆಯನ್ನು ವಚನಕಾರರಲ್ಲಿ ಕಾಣುತ್ತೇವೆ. ಇದನ್ನು ಕುರಿತು ಸಂಗನ ಬಸವಯ್ಯನೆ ತನ್ನದೊಂದು ವಚನದಲ್ಲಿ ಹೀಗೆ ಹೇಳಿದ್ದಾನೆ

"ತಾನೇ ತನ್ನ ಶೂಲಾಹಾರಿಯಿಂದ ನಿಂದು ಎರಡಾಗಿ
ಮೂರು ಮೂರಾಗಿ ಆರು ಆರಾಗಿ
ಮುವತ್ತಾರು ಮುವತ್ತಾರಾಗಿ
ಇನ್ನೂರ ಹದಿನಾರು ಇನ್ನೂರ ಹದಿನಾರಾಗಿ
ವಿಶ್ವಪರಿಪೂರ್ಣವಾಗಿ
ತನ್ನ ತಾನೇ ಇನ್ನೂರ ಹದಿನಾರು ಇನ್ನೂರ ಹದಿನಾರಾಗಿ
ಮತ್ತೆ ಮುವತ್ತಾರು ಮುವತ್ತಾರಾಗಿ
ಮತ್ತೆ ಆರಾಗಿ ಮತ್ತೆ ಮೂರು ಮೂರಾಗಿ
ಮತ್ತೆ ಒಂದೊಂದಾಗಿ ಮತ್ತೆ ಗುರುನಿರಂಜನ ಚನ್ನಬಸವ
ಲಿಂಗವಾಗಿ ನಿರ್ವಯಲಾದುದು ಇದೆ ಒಂದಾಶ್ಚರ್ಯ ಇದನುಳಿದು
ಆಶ್ಚರ್ಯವೆಂಬುದು ಅಶುದ್ಧವಾಕ್ಕು ಕಾಣಾ" (ವ.೯೩೫)

೮೭. ಡಾ॥ ಎಸ್. ವಿದ್ಯಾಶಂಕರ- (ಸಂ)'ವಚನ ಸಾಹಿತ್ಯ - ದ್ವಿತೀಯ ಘಟ್ಟ,' ಪು-೨೬೩

ಈ ಮೇಲಿನ ವಚನದಲ್ಲಿ ಒಂದರಿಂದ ಪ್ರಾರಂಭವಾಗಿ ಆರೋಹಣ ಕ್ರಮದಲ್ಲಿ ಬೆಳೆದು ಇನ್ನೂರ ಹದಿನಾರರವರೆಗೆ ಈ ಸಂಖ್ಯೆ ಬೆಳದಿದೆ ಹಾಗೆಯೆ ಅವರೋಹಣ ಕ್ರಮದಲ್ಲಿ ಇನ್ನೂರ ಹದಿನಾರು ಕ್ರಮವಾಗಿ ಒಂದಾಗಿ ನಿಲ್ಲುತ್ತದೆ. ವೀರಶೈವ ಸಿದ್ಧಾಂತದ ಸಮಗ್ರ ಸ್ಥಲ ನೋಟವನ್ನು ವಚನಕಾರ ಇಲ್ಲಿ ಚಿತ್ರಿಸಿದ್ದಾನೆ.[೮೮]

ಈತನ ಕೃತಿಯು ಹೆಸರಿಗೆ ತಕ್ಕ ಹಾಗೆ 'ಷಟ್‌ಸ್ಥಲ ನಿರೂಪಣೆ' ಈ ಕೃತಿಯ ಉದೇಶ. ಇಲ್ಲಿಯ ಪ್ರತಿಯೊಂದು ಸ್ಥಲದ ಆದಿಯಲ್ಲಿ ಒಂದು ಸೂತ್ರವಿದೆ. ಆಯಾಸ್ಥಲದ ವಿಷಯ ಮತ್ತು ಆಶಯವನ್ನು ಗದ್ಯದಲ್ಲಿ ವಿವರಿಸುತ್ತಾನೆ. ಇಲ್ಲಿಯ ವಚನಗಳಲ್ಲಿ ವೀರಶೈವ ತತ್ವ-ಸಿದ್ಧಾಂತಗಳ ವಿವೇಚನೆ ಪ್ರಮುಖವಾಗಿ ಕಂಡು ಬಂದರೂ ಸಮಕಾಲೀನ ಸಮಾಜವನ್ನು ಈತ ಕಡೆಗಣಿಸಿಲ್ಲ. ಸಮಾಜ ಜೀವನವನ್ನು ತಿಳಿಸುವ ಹಲವಾರು ಸಂಗತಿಗಳನ್ನು ಇಲ್ಲಿ ನಿರೂಪಿತವಾಗಿವೆ. ಧರ್ಮಾಚರಣೆಯ ಅಸಂಗತ ವಿಚಾರಗಳ ಬಗ್ಗೆ ವಿಡಂಬನೆ ಇದೆ. ಜೊತೆಗೆ ಈತ ಬೆಡಗಿನ ವಚನಗಳನ್ನೂ ರಚಿಸಿದ್ದಾನೆ.

ಈತನ ವಚನಗಳು ಕೆಲವು ದೀರ್ಘವಾಗಿವೆ. ಕೆಲವು ಸಂಕ್ಷಿಪ್ತವಾಗಿವೆ. ವಚನಗಳ ನಿರೂಪಣೆ ನೇರವಾಗಿದೆ. ಭಾಷೆ ಹರಿತವಾಗಿದೆ. ವಚನಗಳು ಕಾವ್ಯಾಂಶದಿಂದ ಕಂಗೊಳಿಸುತ್ತವೆ. ಈ ವಚನಗಳಲ್ಲಿ ಬಸವಾದಿ ಶರಣರ ವಚನಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಆದರೂ ಈ ವಚನಕಾರ ಇತರರಿಂದ ಭಿನ್ನವಾದ ಕೆಲವು ವೈಶಿಷ್ಟ್ಯಗಳನ್ನು ತೋರುತ್ತಾನೆ. ವಚನಗಳಲ್ಲಿ ವೇದ, ಶಾಸ್ತ್ರ, ಆಗಮ, ಉಪನಿಷತ್ತು, ಪುರಾಣ ಗ್ರಂಥಗಳಿಂದ ಸಂಸ್ಕೃತ ಪ್ರಮಾಣಗಳನ್ನು ಎತ್ತಿ ಕೊಡುವುದು ವಚನ ಸಾಹಿತ್ಯದ ಒಂದು ಪರಂಪರೆಯಾಗಿ ನಡೆದುಕೊಂಡು ಬಂದಿದೆ.[೮೯] ಇದು ದ್ವಿತೀಯ ಘಟ್ಟದ ವಚನಕಾರರಲ್ಲಿ ಹೆಚ್ಚಾಗಿ ಬಳಕೆಯಾಗಿದೆ. ಇದನ್ನು ಪ್ರಥಮವಾಗಿ ಟೀಕಿಸಿ, ಪುರಾತನರ ವಚನಗಳಿಗಿಂತ ಮಿಗಿಲಾಗಿ ಸಾಕ್ಷಿ ಇನ್ನೊಂದಿಲ್ಲವೆಂದು ಸಂಗನ ಬಸವಯ್ಯ ಘೋಷಿಸುತ್ತಾನೆ. ಅಲ್ಲದೆ ಸಂಸ್ಕೃತ ಉದ್ಧರಣೆಗಳನ್ನು ಬಳಸದೆ ಅಚ್ಚಗನ್ನಡದಲ್ಲಿ ವಚನ ರಚಿಸಿದ ಕೀರ್ತಿ ಈತನದಾಗಿದೆ.

ಈತನ ಕನ್ನಡ ಪರಧೋರಣೆ ಹೀಗಿದೆ.
" ಅಯ್ಯ ನಿಮ್ಮ ಶರಣರನುಭಾವಕ್ಕೆ
ಪ್ರತಿ ಸಾಕ್ಷಿಯೆಂದು ಬೆರೆಸಿ ಹೇಳುವುದು
ಹಾದಿ ಹತ್ತಿಕೆಯ ನುಡಿಗಳು ಎನಗೆಂದೂ
ಸೊಗಸದು ಕಾಣಾ, ಎನ್ನ ನಿಜ ರತ್ನ ಪ್ರಕಾಶ
ನಿಮ್ಮ ಶರಣರ ವಚನ" (ವ. ೭೬೦)

---

೮೮. ಡಾ॥. ಎಸ್. ವಿದ್ಯಾಶಂಕರ್. (ಸಂ)'ವಚನ ಸಾಹಿತ್ಯ-ದ್ವಿತೀಯಘಟ್ಟ.' ಪು-೨೬೪
೮೯. ಬಸವಾದಿ ಶರಣರು ಈ ಪರಂಪರೆಯನ್ನು ತಿರಸ್ಕರಿಸಿದ್ದರು.

ಶರಣರ ಅನುಭಾವದ ವಿಚಾರಗಳಿಗೆ ಸಂಸ್ಕೃತದ ವೇದಾಗಮಗಳ ಸಾಕ್ಷಿ ನುಡಿಗಳು ಹಾದಿ ಹತ್ತಿಕೆಯ ನುಡಿಗಳು ಇವು ನನಗೆ ಯಾವಾಗಲೂ ಸೊಗಸಾಗಿ ಕಾಣುವುದಿಲ್ಲ ಎಂದು ಹೇಳುತ್ತಾನೆ

" ಶರದಿಗೆ ತೊರಗಾವಲಿ, ಮೇರುವಿಗೆ ಮೊರಡಿ
ಗಗನಕ್ಕೆ ಕೊಪ್ಪರಿಗೆ ತೋರಿಸಿದರೆ ಸರಿಯಪ್ಪುದೆ
ಆ ಕುರಿಗಳ ನುಡಿ ಅತ್ತಿರಲಿ ಗುರುನಿರಂಜನ
ಚನ್ನಬಸವ ಲಿಂಗಾ ನಿಮ್ಮ ಶರಣರ ನುಡಿ ಬೆಳಗನಗಲದಿರ್ದೆನು ನಿಮ್ಮೊಳಗೆ
"(ವ.–೭೬೦)

ಈತನಿಗೆ ವಚನ ಸಾಹಿತ್ಯವು ವಾರಿಧಿಯಂತೆ, ಮೇರು ಪರ್ವತದಂತೆ, ಆಕಾಶದಂತೆ ಕಂಡರೆ, ಸಂಸ್ಕೃತ ಸಾಕ್ಷಿಗಳು ಕಿರುಗಾಲುವೆ, ಕಿರುಗುಡ್ಡ, ಕೊಪ್ಪರಿಗೆಯಂತೆ ಕಂಡಿದ್ದಲ್ಲದೆ ಅವು ಕುರಿಗಳ ನುಡಿಯಾಗಿ ಕಂಡು ಬರುತ್ತವೆ. ಹಾಗಾಗಿ ಅವುಗಳನ್ನು ಎಂದಿಗೂ ಬಳಸುವುದಿಲ್ಲ. ಪುರಾತನರ ವಚನಗಳೆ ಸಾಕು. ಆ ವಚನಗಳ ಮತ್ತು ಶರಣರ ಅನುಭಾವದ ಬೆಳಕಿನಲ್ಲಿಯೆ ಬದುಕುತ್ತೇನೆ ಎಂದು ಹೇಳುತ್ತಾನೆ. ಆಗಿ ಹೋದ ಶರಣ ಶರಣೆಯರನ್ನು ಭಕ್ತಿ ಭಾವದಿಂದ ಸ್ಮರಿಸುತ್ತಾನೆ.
ಮನದ ಚಂಚಲತೆಯನ್ನು

"ಹೊನ್ನಿರ್ದು ಪರಧನಕಿಚ್ಛೆಯ ಮಾಡಿಸುವುದು
ಹೆಣ್ಣಿರ್ದು ಪರಸ್ತ್ರೀಯರ ಇಚ್ಛೆಯ ಮಾಡಿಸುವುದು
ಮಣ್ಣಿರ್ದು ಪರಭೂಮಿಗೆ ಇಚ್ಛೆಯ ಮಾಡಿಸುವುದು
ಸುರನರಾದಿ ಸಕಲರಲಿ ಇವುಗಳಿಚ್ಛೆಯ ಕಳೆವ
ಧೀರರನಾರನು ಕಾಣೆನಯ್ಯಾ–" (ವ–೧೭)

ಎಂದು ತಿಳಿಸುತ್ತಾ ಮನಸನ್ನು ಸಂಸಾರಕ್ಕೆ ಹೋಲಿಸುತ್ತಾನೆ. "ಮನಸ್ಸಿನ ವ್ಯಾಮೋಹವೇ ಸಂಸಾರ, ಹೆಣ್ಣು ಸಂಸಾರವಲ್ಲ, ಹೊನ್ನು ಸಂಸಾರವಲ್ಲ, ಮಣ್ಣು ಸಂಸಾರವಲ್ಲ. ಅವುಗಳ ಮೇಲಿನ ಮೋಹವೇ ಸಂಸಾರ" ವೆನ್ನುತ್ತಾನೆ. ಮನಸ್ಸೆ ಎಲ್ಲದಕ್ಕೂ ಕಾರಣ. ಈ ಮನಸ್ಸನ್ನು ಸಂಸಾರದಿಂದ ಬೇರ್ಪಡಿಸಿ ಭಗವಂತನ ಚಿಂತನೆಯಲ್ಲಿ ತೊಡಗಿಸಬೇಕು ಎಂದು ತಿಳಿಸುತ್ತಾನೆ.(ವ–೧೬) ಅಲ್ಲಮ ಪ್ರಭುಗಳ "ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ" ಎನ್ನುವ ವಚನ ನೆನಪಿಗೆ ಬರುತ್ತದೆ. ಅಲ್ಲಮ ಪ್ರಭುವಿನ ವಿಚಾರದ ಪ್ರಭಾವ ಈ ವಚನದ ಮೇಲಾಗಿರುವುದು ಕಂಡುಬರುತ್ತದೆ.

ಸಂಗನ ಬಸವಯ್ಯನವರು ಭಕ್ತಿಯನ್ನು ಪ್ರಕಟಿಸುವ ವಚನಗಳನ್ನು ಆಧ್ಯಾತ್ಮಿಕ ನೆಲೆಗಟ್ಟಿನ, ಸಾಮಾಜಿಕ ಚಿಂತನೆಯುಳ್ಳ ಹಾಗೂ ವಿಡಂಬನಾತ್ಮಕ ವಚನಗಳನ್ನು ಬರೆದಿದ್ದಾನೆ. ಮನೋನಿಗ್ರಹ ಮಾಡಿಕೊಳ್ಳುವುದು ಸಾಮಾನ್ಯನಿರಲಿ ಸಾಧಕರಿಗೂ ಕಷ್ಟವಾಗುತ್ತದೆ. ಪರಿಪೂರ್ಣವಾಗಿ ಮನಸ್ಸನ್ನು ನಿಗ್ರಹಿಸಿದವರನ್ನು ನಾನು ಕಾಣೆನು ಎನ್ನುತ್ತಾನೆ. ಲಿಂಗದ ಅಂಗವಾದರೆ ಮಾತ್ರ ಮನಸ್ಸನ್ನು ನಿಗ್ರಹಿಸಲು ಸಾಧ್ಯವೆನ್ನುತ್ತಾನೆ. (ವ–೨೩)

"ಹರಮುನಿದರೆ ಗುರುಕಾಯ್ವ, ಗುರು ಮುನಿದರೆ ಹರ ಕಾಯನೆಂಬ ವಾಕ್ಯ ದಿಟ"(ವ-೪೭) ಹಳೆಯ ನುಡಿಗಟ್ಟಿನ ಜೊತೆ "ಮಡಕೆ ಮಣ್ಣಾಗುವುದಿಲ್ಲ ಮುತ್ತು ನೀರಾಗುವುದಿಲ್ಲ"ಎನ್ನುವ ಸಾಂದರ್ಭಿಕ ದೃಷ್ಟಾಂತಗಳ ಮೂಲಕ "ಗುರುವಿನಿಂದ ಉಪದೇಶ ಪಡೆದ ಶರಣನ ನಾಲಿಗೆ ಮಂತ್ರವಾಗುತ್ತದೆ. ಉಚ್ಚಿಷ್ಟ(ಎಂಜಲು)ವಾಗುವುದಿಲ್ಲ" ಎಂದು ಗುರುವಿನ ಮಹಿಮೆ ಮತ್ತು ಗೌರವವನ್ನು ಎತ್ತಿ ಹಿಡಿಯುತ್ತಾನೆ.(ವ-೯೩)

ಭವಿ-ಭಕ್ತರ ನಡುವಿನ ವೈರುದ್ಯವನ್ನು ಹೇಳುವ ವಿಚಾರ ವೈಶಿಷ್ಟ್ಯ ಪೂರ್ಣವಾಗಿದೆ. ಭಕ್ತಿ ತನ್ನಷ್ಟಕ್ಕೆ ತಾನು ಹುಟ್ಟಬೇಕು. ಸಂಸ್ಕಾರ ಪಡೆಯಬೇಕು. ಮಾವು ತನ್ನಷ್ಟಕ್ಕೆ ತಾನೆ ಫಲಿತು ಹಣ್ಣಾದರೆ ಸೊಗಸು. ಬಲವಂತದಿಂದ ಹಿಚುಕಿ ಹಣ್ಣು ಮಾಡಿದರೆ ಅದರ ಸ್ವಾದ ಹಾಳಾದಂತೆ. ಒತ್ತಾಯದಿಂದ ಯಾರನ್ನು ಭಕ್ತನನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬುದನ್ನು

"ಕತ್ತಲು ಸುತ್ತಿನಲ್ಲಿ ಸುಳಿದಾಡುವ ಕತ್ತೆಯ ತಂದು
ಜೀನವನಿಟ್ಟರೆ ಹೊತ್ತೋರೆ ಕುದುರೆಯಾಗಲರಿಯದು
ಹುಸಿಯನುಂಬ ಹಸಿ ಮಾನವನು ತಾಮಸವಿರ್ದಂತೆ
ತಂದು ಭಕ್ತನ ಮಾಡಿದರೆ ಗತಿ ಬೆಳಕಿನಲ್ಲಿ ಕಂಡರೆ ಭಕ್ತನಾದನೆ"? (ವ-೧೪೪)

ಎಂದು ಪ್ರಶ್ನಿಸುತ್ತಾನೆ. ಭವಿ-ಭಕ್ತನ ಕುರಿತು ವಚನಕಾರರ ಅಭಿಪ್ರಾಯ ನೇರ ಹಾಗು ನಿಖರವಾಗಿದೆ. ಭಕ್ತನಲ್ಲಿ ಸದ್ಗುಣ ಕಂಡರೆ ಭವಿಯಲ್ಲಿ ದುರ್ಗುಣ ಕಾಣುತ್ತಾನೆ. ಭಕ್ತ ಭವಿಯಾಗಲರಿಯನು, ಭವಿ ಭಕ್ತನಾಗಲರಿಯನು. ಹಾಗೆಯೆ ಬೇವು ಎಂದಾದರು ಸಿಹಿಯಾಗಲುಂಟೆ? ಎಂಬ ನಿರ್ದಿಷ್ಟ ನಿಲುವಿಗೆ ಸಂಗನ ಬಸವಯ್ಯ ಅಂಟಿಕೊಂಡಿದ್ದಾನೆ.(ವ-೧೯೮) ಶರಣ ಜನರ ಒಡನಾಟದಿಂದ, ಸತ್ಸಂಗದಿಂದ ಭವಿಗಳು ಭಕ್ತರಾಗಿದ್ದಾರೆ. ಭವಿಗಳನ್ನು ಭಕ್ತರನ್ನಾಗಿ ಮಾಡುವುದೇ ಧರ್ಮಗಳ ಮೂಲ ಉದ್ದೇಶ. ದುರ್ಮಾರ್ಗದಲ್ಲಿ ನಡೆಯುವವರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದೇ ಶರಣ ತತ್ವದ ಆದರ್ಶ. ಹೀಗಿದ್ದೂ ಸಂಗನ ಬಸವಯ್ಯನ ಹೇಳಿಕೆ ನೋಡಿದರೆ "ಕಡುಮೂರ್ಖಂ ಹಿತಕೇಳ್ವನೆ' ಎಂಬ ಶತಕದ ಮಾತಿನಂತೆ ಅತ್ಯಂತ ಕಡುಮೂರ್ಖರನ್ನು ಉದ್ದೇಶಿಸಿ ಹೇಳಿದಂತಿದೆ ಈತನ ಮಾತು.

ಷಟ್ ಸ್ಥಲ ನಿರೂಪಣ ಕೃತಿಯ ಉದ್ದೇಶವಾಗಿದ್ದರೂ ತನ್ನ ಕಾಲದ ಸಮಾಜವನ್ನು , ಸಮಾಜದಲ್ಲಿ ಕಂಡು ಬರುವ ಮೂಢನಂಬಿಕೆಗಳನ್ನು, ಮೋಸ ವಂಚನೆಗಳನ್ನು, ಧರ್ಮಾಚರಣೆಯಲ್ಲಿ ಕಂಡುಬರುವ ಅಸಂಗತಗಳನ್ನು, ಇಂತಹ ಆಚರಣೆಗೆ ಕಾರಣವಾಗುವ ಗುರುಗಳನ್ನು, ಮಠಾಧೀಶರನ್ನು ಈತ ಕಟುವಾಗಿ ಟೀಕಿಸಿದ್ದಾನೆ.

"ಮಠ ಮಾನ್ಯ ದೈತನದ ಹಿರಿಯರೆನಿಸುವ ಅಟಮಟದಯ್ಯಗಳ
ಹಟದ ಕುಟಿಲಗಳ ಪರಿಯ ನೋಡಾ!
ತಾವು ದೇವರೆಂದು ಸಕಲ ಭಕ್ತಜನರಿಂದೆ ಪೂಜೆಯ ಕೈಕೊಂಡು
ಮೆರೆಯುತಲಿರ್ದು ತಮಗೊಂದು ದೇವರುಂಟೆಂದು
ಈರಣ್ಣ, ಬಸವಣ್ಣ, ಕಲ್ಲಣ್ಣ, ಮಲ್ಲೇಶ
ಜಗುಲಿಯ ಮೇಲೆ ಭುಗಿ ಭುಗಿಲೆನಿಸುತ್ತ
ಅಪ್ಪ ಅಜ್ಜ ಮುತ್ತಯ್ಯ ಮುಚ್ಚಿದ ಗರ್ದುಗೆಯೆಂದು
ಹಾವುಗೆ ಬೆತ್ತ ಪುರಾಣ ಧೂಳತಾದಿಗಳಿಂಗೆ ನೇಮಿಸಿದ

[illegible]

[illegible]

[illegible]

[illegible]

[illegible]

[illegible]

[illegible]

ಹಾವುಗೆ ಬೆತ್ತ ಪುರಾಣ ಧೂಳತಾದಿಗಳಿಂಗೆ ನೇಮಿಸಿದ
ವಾರ ತಿಥಿವಿಡಿದರ್ಚಿಸಿ,
ಕಾಯಿ ಫಲ ಕೂಳ ತೋರಿ ತೋರಿ ತಿಂಬುವ
ನಾಯಿ ಭವಿಗಳನೆಂತು ದೇವರೆಂದು ಪೂಜಿಸಬಹುದು.
ಕಾಲ ತೊಳೆದ ನೀರು, ತಿಂದ ಕೂಳು ಇವನೆಂತು ಘನವೆನ್ನಬಹುದು?
ಮತ್ತೆ ಮನೆಯೊಳಗೆ ಸತ್ತವರಿಗೆಂದು ಹಚ್ಚಡ ಸೀರೆ ಕುಪ್ಪಸಾದಿಗಳ ತಂದು
ಹುಣ್ಣಿಮೆ ಅಮವಾಸೆಗೆ ವಸ್ತ್ರವವಿಡಿದು ಮಾಡಿ, ಕರ್ಮಕಾಟವ ಕಳೆದು
ಗೆದ್ದವೆಂಬ ಮೂಲಹೊಲೆಯರು ತಾವು ದೇವರೆನ್ನಬಹುದೆ?
ಇಂಥ ಕಾಳಮೂಳರಿಗೆ ಮಾಡಿದ ದುರ್ಗತಿ
ಗುರು ನಿರಂಜನ ಚನ್ನ ಬಸವಲಿಂಗ ಸಾಕ್ಷಿಯಾಗಿ" (ವ-೨೨೫)

ಎಂದು ವೀರಶೈವಾಚರಣೆಯ ಅರಿವಿಲ್ಲದ ಅಯ್ಯನವರನ್ನು, 'ಆಶೆಗೆ ಹುಟ್ಟಿದ ಭಾಷೆಹೀನ ವೇಶಧಾರಿಗಳನ್ನು'(ವ-೨೨೦), 'ದಾಸೋಹಿಗಳೆಂದು ದೇಶವ ತಿರುಗುವ ಡಂಭಕರನ್ನು '(ವ-೩೬೫), 'ರಾಜಯೋಗಿ, ಶಿವಯೋಗಿಯೆಂದು ಹೆಸರಿಟ್ಟುಕೊಂಡು ತಿರುಗುವ ಕಪಟಜಂಗಮರನ್ನು (ವ-೧೧೧೬,೧೧೧೭), ಅನಾಚಾರಿ ಗುರುಶಿಷ್ಯರನ್ನು (ವ-೨೨೧), ಇಷ್ಟ ಲಿಂಗದ ಪೂಜೆಯನ್ನು ಬಿಟ್ಟು ಅರ್ಥವಿಲ್ಲದ ಆಚರಣೆಗಳನ್ನು ಆಚರಿಸುವವರನ್ನು ತೀವ್ರವಾಗಿ ಪ್ರತಿಭಟಿಸಿದ್ದಾನೆ. ಈ ರೀತಿಯ ಸಾತ್ವಿಕ ರೋಷದ ಇವನಲ್ಲಿಯೂ ಸಾಮಾಜಿಕ ಕಳಕಳಿಯಿತ್ತು ಎಂಬುದನ್ನು ತೋರಿಸುತ್ತದೆ.

ಜ್ಯೋತಿಷ್ಯದ ಬಗೆಗೆ ಈತನ ನಿಲುವು ದ್ವಂದ್ವವಾಗಿದೆ. ಜ್ಯೋತಿಷ್ಯವನ್ನು ಜಂಗಮದಿಂದ ಕೇಳಿರಿ. ಬ್ರಾಹ್ಮಣರಿಂದ ಕೇಳಬೇಡಿ ಎನ್ನುತ್ತಾನೆ. ಜ್ಯೋತಿಷ್ಯದ ಫಲಭಾಗವನ್ನು ಶರಣರು ಸ್ಪಷ್ಟವಾಗಿ ಅಲ್ಲಗಳೆದಿರುವಾಗ ಈತನ ಹೇಳಿಕೆ ಅವನ ಮನದ ಹೊಯ್ದಾಟವನ್ನು, ಸ್ಪಷ್ಟತೆ ಇಲ್ಲದಿರುವುದನ್ನು ತೋರಿಸುತ್ತದೆ.

ಈತನ ವಚನಗಳನ್ನು ಗಮನಿಸಿದಾಗ ಇಲ್ಲಿಯ ಬಹುಪಾಲು ವಚನಗಳು ಮುಕ್ತಕ ರೂಪದಲ್ಲಿವೆ. ಸಂಕ್ಷಿಪ್ತತೆ, ಸರಳತೆ , ಲಯ, ಪ್ರಾಸಗಳಿಂದ, ಕಾವ್ಯ ಲಕ್ಷಣಗಳನ್ನು ಒಳಗೊಂಡಿವೆ. ತಾತ್ವಿಕ ವಿಷಯಗಳನ್ನು ತಿಳಿಸುವ ವಚನಗಳು ಸ್ವಲ್ಪ ದೀರ್ಘವಾಗಿವೆ. ಭಾಷೆಯಲ್ಲಿ ಸಾಮಾಜಿಕ ಬದುಕಿನ ಸೊಗಡು, ಜೋಡುನುಡಿ, ಗಾದೆಮಾತು, ಪಡೆಮಾತುಗಳ ಬಳಕೆಯನ್ನು ಕಾಣಬಹುದು. ಭಾಷೆಯಲ್ಲಿನ ದೇಶಿಯತೆ ವಚನಗಳಿಗೆ ಕಸುವನ್ನು ತಂದುಕೊಟ್ಟಿವೆ. 'ಸಿಂಹನ ಹಾಲ ಆನೆಯ ಮರಿ ಉಣಬಲ್ಲುದೆ?' ಹುಲಿಯ ಹಾಲ ಹುಲ್ಲೆಮರಿ ಉಣಬಲ್ಲುದೆ? ಗರುಡನಿಂದ ಗುಟುಕ ಹಂದಿ ಮರಿಕೊಳಬಲ್ಲುದೆ ? ಸಿಂಹನ ಹಾಲ ತಂದು ಶುನಕಂಗಿತ್ತು ಸಲಹಿದರೆ ನಡೆ ನುಡಿಯಲ್ಲಿ ಶುನಕನಲ್ಲದೆ ಸಿಂಹನಾಗಿತ್ತೆ ? ಹೀಗೆ ಈತನ ಶಬ್ದ ಸಂಪತ್ತು ಹಾಗು ಲೋಕಾನುಭವದ ಮಾತುಗಳು ಸಮೃದ್ಧವಾಗಿವೆ.

ಸಂಗನ ಬಸವಯ್ಯನ ಮೇಲೆ ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭು, ಉರಿಲಿಂಗದೇವ, ಅಕ್ಕಮಹಾದೇವಿ, ಗಜೇಶ ಮಸಣಯ್ಯ ಮುಂತಾದ ವಚನಕಾರರ ಪ್ರಭಾವವಾಗಿರುವುದನ್ನು ಗುರುತಿಸಬಹುದು. ದ್ವಿತೀಯ ಘಟ್ಟದ ವಚನಕಾರರಲ್ಲಿ ಸಂಗನ ಬಸವಯ್ಯ ಪ್ರಮುಖ ವಚನಕಾರನಾಗಿದ್ದಾನೆ. ಅವನ ವಚನಗಳು ವೈಶಿಷ್ಟ ಪೂರ್ಣವಾಗಿವೆ.

೭. ಗುರುಸಿದ್ಧದೇವ (೧೭ ನೇ.ಶ)

ಗುರುಸಿದ್ಧ ಶರಣ, ಗುರುಸಿದ್ಧೇಶ, ಗುರುಸಿದ್ದೇಶ್ವರ ಸ್ವಾಮಿ, ಗುರುಸಿದ್ಧಲಿಂಗ ಎಂದು ಪ್ರಸಿದ್ಧವಾಗಿರುವ ಗುರುಸಿದ್ಧದೇವರು ಬಹಳ ಕಾಲ ವಿದ್ವಾಂಸರ ದೃಷ್ಟಿಯಿಂದ ದೂರ ಉಳಿದಿದ್ದರು. 'ಚಿದೈಶ್ವರ್ಯ ಚಿದಾಭರಣ' ಕೃತಿಯ ಪ್ರಕಟಣೆಯ ಮೂಲಕ ಪ್ರಕಾಶಕ್ಕೆ ಬಂದರು. ಇದೊಂದು ವಚನ ಸಂಕಲನ ಕೃತಿ. ಹಾಗಾಗಿ ಈತನು ಸಂಕಲನಕಾರ, ವಚನಕಾರ ಹಾಗು ಅನುಭಾವಿಯೂ ಆಗಿದ್ದಾನೆ. 'ಸಂಗನ ಬಸವೇಶ್ವರ,[೯೦] ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ.

ಈತನ ಶಿಷ್ಯ ಬಸವಲಿಂಗದೇವನು 'ಶ್ರೀ ಗುರುಸಿದ್ಧಲಿಂಗೇಶ್ವರ' ಎಂದು ಗುರುಗಳ ಹೆಸರನ್ನು ತನ್ನ ವಚನಗಳಿಗೆ ಅಂಕಿತವನ್ನಾಗಿ ಮಾಡಿಕೊಂಡಿದ್ದಾನೆ. ಈತ ಶ್ರೀಶೈಲ ಪರ್ವತದ ನೈಋತ್ಯಕ್ಕಿರುವ ಕುಮಾರ ಪರ್ವತದ ಉತ್ತರ ದಿಕ್ಕಿನಲ್ಲಿರುವ ನಾಗರಗವಿಯ 'ನಾಗರಗವಿ ಸಿಂಹಾಸನ'ದ ಪೀಠಾಧಿಪತಿಯಾಗಿ 'ಚಿದೈಶ್ವರ್ಯ ಚಿದಾಭರಣ' ಎಂಬ ವಚನ ಸಂಕಲನವನ್ನು ಸಂಯೋಜಿಸಿದ್ದಾನೆ. ಈ ವಚನ ಸಂಕಲನದಲ್ಲಿ ತನ್ನ ವಚನಗಳನ್ನು ಸೇರಿಸಿದ್ದಾನೆ. ತನ್ನ ವಚನದಲ್ಲಿ ತೋಂಟದ ಸಿದ್ಧಲಿಂಗ ಪರಂಪರೆಯವನೆಂದು ಒಂದು ವಚನದಲ್ಲಿ ಹೇಳಿಕೊಂಡಿದ್ದಾನೆ. (ವ.೩೯೨) ಆಗುರು ಪರಂಪರೆ ಹೀಗಿದೆ.

ಅನಾದಿಗಣೇಶ್ವರ , ಆದಿಗಣೇಶ್ವರ, ನಿರ್ಮಾಯ ಗಣೇಶ್ವರ, ನಿರಂಜನ ಗಣೇಶ್ವರ, ಜ್ಞಾನಾನಂದ ಗಣೇಶ್ವರ, ಆತ್ಮಗಣೇಶ್ವರ, ಆಧ್ಯಾತ್ಮ ಗಣೇಶ್ವರ, ರುದ್ರಗಣೇಶ್ವರ , ಬಸವಪ್ರಭುದೇವರು, ಆದಿಲಿಂಗದೇವರು, ಚೆನ್ನವೀರೇಶ್ವರ ದೇವರು, ಹರದನ ಹಳ್ಳಿ ಗೋಸಲದೇವರು, ಶಂಕರದೇವರು, ದಿವ್ಯ ಲಿಂಗದೇವರು, ಚೆನ್ನಬಸವೇಶ್ವರ ದೇವರು, ತೋಂಟದ ಸಿದ್ಧೇಶ್ವರ ಸ್ವಾಮಿಗಳು, ಮರುಳ ಸಿದ್ಧೇಶ್ವರ ಸ್ವಾಮಿ, ರೇವಣ ಸಿದ್ಧೇಶ್ವರ ಸ್ವಾಮಿ, ಶಿವಲಿಂಗೇಶ್ವರ ಸ್ವಾಮಿ, ನಿರಂಜನೇಶ್ವರ ಸ್ವಾಮಿ, ಮರಿಬಸವಲಿಂಗೇಶ್ವರ ಸ್ವಾಮಿ, ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿ, ಚೆನ್ನಮಲ್ಲೇಶ್ವರ ಸ್ವಾಮಿ, ಚನ್ನಂಜೇಶ್ವರ ಸ್ವಾಮಿ, ಗುರುಶಾಂತೇಶ್ವರ ಸ್ವಾಮಿ, ಶಾಂತಮಲ್ಲಸ್ವಾಮಿ, ಗುರುಸಿದ್ಧಸ್ವಾಮಿ[೯೧]. ಇದರ ಪ್ರಕಾರ ಗುರುಸಿದ್ಧದೇವ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವನೆಂದು ತಿಳಿಯುತ್ತದೆ. ಇವನಿಗೆ ನೇರವಾದ ಗುರು ಶಾಂತಮಲ್ಲ ಸ್ವಾಮಿ[೯೨]. ಶಾಂತಮಲ್ಲನು ೧೭ ನೇ ಶತಮಾನದ ಉತ್ತರಾರ್ಧದಲ್ಲಿದ್ದರೆಂದು ತಿಳಿದು ಬರುವುದರಿಂದ ಇವರ ಶಿಷ್ಯನಾದ ಗುರುಸಿದ್ಧದೇವನು ಅದೇ ಕಾಲದವನೆಂದು ತಿಳಿದು ಬರುತ್ತದೆ. 'ಚಿದೈಶ್ವರ್ಯ ಚಿದಾಭರಣ' ಒಂದು ವಚನ ಸಂಕಲನ. ಇದನ್ನು ಸಂಯೋಜಿಸಿ ಉಪದೇಶಿಸಿದವನು ಗುರುಸಿದ್ಧದೇವನಾದರೆ, ಬರೆದು ಕೊಂಡವನು

---

೯೦. ವಚನ ಸಾಹಿತ್ಯದ ಇತಿಹಾಸದಲ್ಲಿಯೆ ಶಿಷ್ಯನ ಹೆಸರನ್ನು ಅಂಕಿತವಾಗಿ ಇಟ್ಟುಕೊಂಡ ಅಪರೂಪದ ಗುರು ಗುರುಸಿದ್ಧದೇವರು.

೯೧. ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ–೧೦೨, (ವಚನ – ೩೯೨)

೯೨. 'ಸಂಕೀರ್ಣ ವಚನ ಸಂಪುಟ –೫,' ಗುರುಸಿದ್ಧದೇವರ ವಚನಗಳು, ವಚನ–೧೦೧.

ಇವನ ಶಿಷ್ಯನಾದ ಬಸವಲಿಂಗದೇವ, ಇದಕ್ಕೆ ನಾಮಕರಣ ಮಾಡಿದವರು ಶಾಂತಮಲ್ಲ ಸ್ವಾಮಿಗಳು, ಉಪದೇಶ ಕೇಳಿ, ಕೃತಿ ಹೆಸರಿಗೆ ವಿವರಣೆ ಬರೆದವನು ಸಂಗನ ಬಸವೇಶ್ವರ. ಹೀಗಾಗಿ ಇದು ನಾಲ್ಕು ಜನ ಶರಣ ಅನುಭಾವಿಗಳಿಂದ ರಚಿತವಾದ ಒಂದು ಸಂಯುಕ್ತ ಪ್ರಯತ್ನದ ಫಲವೆನಿಸಿದ್ದರೂ ಇದರ ಮೂಲ ಸಂಯೋಜಕ ಗುರುಸಿದ್ಧದೇವನಾಗಿದ್ದಾನೆ. ಆದ್ದರಿಂದ ಈ ಕೃತಿ ಗುರುಸಿದ್ಧದೇವನ ಹೆಸರಿನಲ್ಲಿರುವುದು ಸೂಕ್ತವೆನಿಸುತ್ತದೆ.

ಈ ಸಂಕಲನ ಕೃತಿಯಲ್ಲಿ ಇತರ ಶರಣರ ವಚನಗಳ ಜೊತೆ ತಾನು ಬರೆದ ೧೦೧ ವಚನಗಳನ್ನು ಅಳವಡಿಸಿದ್ದಾನೆ. ಆದರೆ ಪಿ.ಎಂ.ಗಿರಿರಾಜು ಅವರು ಸಗರ್ಭ ವಚನ (೧೪೦) ಒಂದನ್ನು ಸೇರಿಸಿ ಗುರುಸಿದ್ಧದೇವನ ವಚನಗಳ ಸಂಖ್ಯೆ ೧೦೨ ಎಂದಿದ್ದಾರೆ.[೯೩] ಆದರೆ ಇವನ ನಿಜವಚನಗಳ ಸಂಖ್ಯೆ ೧೦೧ ಎಂದು ವೀರಣ್ಣ ರಾಜೂರ ಅವರು ಹೇಳಿದ್ದಾರೆ.[೯೪]

'ಸಂಗನ ಬಸವೇಶ್ವರ' ಎಂಬ ಅಂಕಿತವನ್ನು ಹೊಂದಿದ್ದ ಇವುಗಳ ಕರ್ತೃ ಸಂಗನ ಬಸವೇಶ್ವರನೆಂಬುವನಿರಬೇಕೆಂದು ಇಲ್ಲಿಯವರೆಗೂ ಭಾವಿಸಲಾಗಿತ್ತು. ಆದರೆ ಈಗ ಇವುಗಳ ನಿಜ ಕರ್ತೃ ಗುರುಸಿದ್ಧದೇವ ಎಂಬುದು ಸ್ಪಷ್ಟವಾಗಿದೆ. 'ಸಂಗನ ಬಸವೇಶ್ವರ' ಎಂಬುದು ಗುರುಸಿದ್ಧದೇವನ ಶಿಷ್ಯನ ಹೆಸರು ಎಂಬುದು ದೃಢಪಟ್ಟಿದೆ.

ಚಿದೈಶ್ವರ್ಯ ಚಿದಾಭರಣ ಕೃತಿಯ ಆದಿಯಲ್ಲಿ "– ಗುರುಸಿದ್ಧ ಸ್ವಾಮಿಯವರು ನಿರೂಪಿಸಿದಂಥ ಅನಾದಿ ಷಟ್‌ಸ್ಥಲ ನಿರಾಬಾರೀ ವೀರಶೈವ ಶರಣನ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯಚಿದಾಭರಣವಂ ಲಿಖಿಸುವುದಕ್ಕೆ ಪ್ರಾರಂಭವು––" ಎಂದಿದೆ. ಅಂತ್ಯದಲ್ಲಿ "–ಅನಾದಿ ಷಟ್ ಸ್ಥಲ ನಿರಾಬಾರಿ ಶ್ರೀಮದ್ವೀರಶೈವ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣವೆಂಬ ಏಕಾದಶ ಸ್ಥಲ ಪೂರಿತವಾದ ವಚನ ಶಾಸ್ತ್ರವು ಸಮಾಪ್ತವಾದುದು –" ಎಂದಿದೆ.

ಈ ಕೃತಿ 'ಶ್ರೀಮದ್ವೀರಶೈವ ನಿಜಾಚರಣೆ' ಎಂಬ ತಲೆ ಬರಹದಿಂದ ೧೯೩೩ ರಲ್ಲಿ ಬನಹಟ್ಟಿಯ ವೀರಸಂಗಯ್ಯ ಶಿವಲಿಂಗಯ್ಯ ಹಿರೇಮಠದಿಂದ ಪ್ರಕಟವಾಯಿತು[೯೫]. ಪ್ರಸ್ತುತ ಗುರುಸಿದ್ಧದೇವನು ಸಂಕಲಿಸಿದ ಈ ಗ್ರಂಥವು ೧೧ ಸ್ಥಲಗಳಲ್ಲಿದ್ದು, ಮಹಾಜ್ಞಾನಿಯ ಸರ್ವಸಂಗ ಪರಿತ್ಯಾಗಸ್ಥಲದಿಂದ ಆರಂಭವಾಗಿ, ಶಿವಸಮಾದಿ ಕ್ರಿಯಾಸ್ಥಲದವರೆಗೆ ವ್ಯಾಪಿಸಿದೆ.

ಇಲ್ಲಿ ಸಂಕಲಿಸಿದ ವಚನಗಳ ಮೂಲೋದ್ದೇಶ ವೀರಶೈವ ತತ್ವ ನಿರೂಪಣೆ. ಈ ತತ್ವ ನಿರೂಪಣೆ ಗುರುವು ಶಿಷ್ಯನಿಗೆ ಬೋಧಿಸಿದ ರೀತಿಯಲ್ಲಿ ರಚಿತವಾಗಿದೆ. ಸಂಕಲನಕಾರ ತನ್ನ ವಚನಗಳನ್ನು ಬಳಸಿ, ಇತರ ವಚನಕಾರರ ವಚನಗಳನ್ನು ಉಲ್ಲೇಖಿಸುತ್ತ, ಸ್ಥಲಸಂಬೋಧನ – ಸ್ಥಲಸೂತ್ರ– ಸ್ಥಲವಚನಗಳಾಗಿ ವಿಭಜಿಸಿ (ನಡುನಡುವೆ ಶ್ಲೋಕ ಉದ್ಧರಿಸಿ) ಸಂಕಲಿಸಿದುದು

---

೯೩. ೯೪. ಡಾ॥ ವೀರಣ್ಣ ರಾಜೂರ–'ಬಸವೋತ್ತರ ಯುಗದ ವಚನಕಾರರು.'ಪುಟ–೧೦೩

೯೫. ಇದೇ ಕೃತಿಯನ್ನು 'ನಿಜಾಚರಣೆ ಸಂಬಂಧ ವಚನಗಳು' ಅಥವಾ 'ಅನಾದಿ ಷಟ್‌ಸ್ಥಲ ನಿರಾಬಾರಿ ವೀರಶೈವ ಶರಣನ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ'ವೆಂಬ ಹೆಸರಿನಲ್ಲಿ ೧೦ ಸ್ಥಲಗಳ ಅಡಿಯಲ್ಲಿ ಮೈಸೂರಿನ ಪಿ.ಎಂ. ಗಿರಿರಾಜು ಅವರು ೧೯೮೫ ರಲ್ಲಿ ಪ್ರಕಟಿಸಿದ್ದಾರೆ.

ಈ ಕೃತಿಯ ವಿಶೇಷತೆ[೫]. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಸದ್ಭಕ್ತಿ, ಸದ್ಭಕ್ತನ ಲಕ್ಷಣ, ಕಿಂಕರತ್ವ, ಅರ್ಚನ-ಅರ್ಪಣ, ದೀಕ್ಷೆ, ಪ್ರವೃತ್ತಿ-ನಿವೃತ್ತಿ, ಶಿವಯೋಗ, ಅಂಗ-ಲಿಂಗ, ಸ್ಥಲ, ಚಕ್ರ ಮುಂತಾದವುಗಳು ಇಲ್ಲಿನ ವಚನಗಳಲ್ಲಿ ನಿರೂಪಿತವಾಗಿವೆ.

ವೀರಶೈವಾಚಾರ ಸಂಪನ್ನನಾದವನು ಪಂಚಸೂತಕ ಪಾತಕಗಳನ್ನು ಮಾಡಲಾಗದು, ವ್ರತಹೀನರ ಜೊತೆ ಸೇರಲಾಗದು, ಕ್ಷುದ್ರ ದೈವಾರಾಧನೆ ಮಾಡಲಾಗದು, ಭವಿಯ ಸಂಗ ಮಾಡಬಾರದು ಮುಂತಾಗಿ ಬರುವ ನೀತಿ ನಿರೂಪಣೆಗಳೇ ವಚನಗಳಲ್ಲಿರುವುದು ಗಮನಾರ್ಹ. ಕಾವ್ಯಗುಣವನ್ನು ಇಲ್ಲಿಯ ವಚನಗಳಲ್ಲಿ ನಿರೀಕ್ಷಿಸಲಾಗದು. ವಾಚ್ಯವಾದ ಗದ್ಯದ ಬಳಕೆಯಿಂದ ವಚನಗಳು ದೀರ್ಘವಾಗಿವೆ. ತಾತ್ವಿಕ ದೃಷ್ಟಿಯಿಂದ ವಚನಗಳಿಗೆ ಮಹತ್ವವಿದೆ.

– – –

೮. ಬಸವಲಿಂಗ ದೇವ – (೧೭ ನೇ ಶ.)

ಗುರುಸಿದ್ಧದೇವ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನಾಗಿದ್ದಾನೆ. ಈತನ 'ಚಿದೈಶ್ವರ್ಯ ಚಿದಾಭರಣ' ಕೃತಿಯ ೩೯೩ ನೇ ವಚನದಲ್ಲಿ ಬಸವಲಿಂಗ ದೇವನ ಕುರಿತು ಸ್ವಲ್ಪ ಮಾಹಿತಿ ಸಿಗುತ್ತದೆ. ಉಳಿದಂತೆ ಈತನ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಬಸವಲಿಂಗದೇವ ಗುರುಸಿದ್ಧ ದೇವರ ಶಿಷ್ಯ. ಈತನ ಊರು ಹರದನಹಳ್ಳಿ. ಗುರು ಕರುಣೆಗಾಗಿ ಕಾಯ್ದು ಕುಳಿತಿದ್ದ ಸಂಗನ ಬಸವೇಶ್ವರರನ್ನು ಬಸವಲಿಂಗದೇವರು ಶ್ರೀಶೈಲದಲ್ಲಿ ನೆಲೆಸಿದ್ದ ಗುರುಸಿದ್ಧದೇವರ ಬಳಿಗೆ ಕರೆತರುತ್ತಾನೆ. ಅಲ್ಲಿ ಅವರು ಬೋಧಿಸಿದ ಚಿದೈಶ್ವರ್ಯ ಚಿದಾಭರಣವನ್ನು ಬಸವಲಿಂಗ ದೇವ ಬರೆದುಕೊಂಡರೆಂಬ ಸಂಗತಿಗಳು ತಿಳಿದು ಬರುತ್ತವೆ. ಈ ಗುರುಸಿದ್ಧದೇವರು ೧೭ ನೇ ಶತಮಾನದಲ್ಲಿ ಜೀವಿಸಿದ್ದರೆಂದು ತಿಳಿದು ಬರುವುದರಿಂದ ಬಸವ ಲಿಂಗದೇವನೂ ಅದೇ ಕಾಲದಲ್ಲಿ ಜೀವಿಸಿದ್ದನೆಂದು ತಿಳಿದುಬರುತ್ತದೆ[೬].

ಬಸವಲಿಂಗ ದೇವನ ೩೬ ವಚನಗಳು ದೊರೆತಿವೆ. ಇವು ಪ್ರತ್ಯೇಕವಾಗಿಲ್ಲ. ಚಿದೈಶ್ವರ್ಯ ಚಿದಾಭರಣ ಕೃತಿಯ 'ಮಹಾಜ್ಞಾನಿಯ ಸರ್ವಸಂಗ ಪರಿತ್ಯಾಗ'ದಲ್ಲಿ ಸಂಗ್ರಹವಾಗಿವೆ. ಇಡಿ ಸ್ಥಲವನ್ನು ಈತನ ವಚನಗಳಿಂದಲೆ ನಿರ್ಮಿಸಲಾಗಿದೆ. ಈ ವಚನಗಳ ಅಂಕಿತ 'ಮತ್ಪ್ರಾಣನಾಥ ಮಹಾಶ್ರೀ ಗುರು ಸಿದ್ಧಲಿಂಗೇಶ್ವರ' ಎಂಬುದಾಗಿದೆ. ಎಲ್ಲಾ ವಚನಗಳು ಭಿನ್ನಹ ರೂಪದಲ್ಲಿವೆ[೭].

"ಇರುವೆ ಮೊದಲು ಆನೆ ಕಡೆಯಾದ ೮೪ ಜೀವ ಜಂತುವಿನಲ್ಲಿ
ತಿನ್ನಬಾರದ ಆಹಾರಂಗಳ ತಿಂದು, ಮಾಡಬಾರದಪರಾಧಕೃತ್ಯವ ಮಾಡಿ
ಪರಮ ಪಾತಕತನದಿಂದ ಬಾಳಿ ಬದುಕಿ ಜೀವಿಸಿದ ಅಜ್ಞಾನ ಜಡತ್ವವ ನೋಡದೆ
ನಿಮ್ಮ ದಯಾಂಬುಧಿಯಲ್ಲಿರಿಸಿ ರಕ್ಷಿಸಯ್ಯ! ಪರಮಪಾವನ ಮೂರ್ತಿ
ಗುರುಲಿಂಗಜಂಗಮವೇ ಹರಹರ। ಶಿವಶಿವ ಜಯ ಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀ ಗುರುಸಿದ್ದೇಶ್ವರ"   (ವ-೫)

---

೯೬. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ – ೧೨೫-೧೨೬
೯೭. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ – ೧೨೬

ಎಂದು ಗುರುವಿನಲ್ಲಿ ಮೊರೆಹೋಗುವುದನ್ನು ಕಾಣಬಹುದು. ಈತನ ವಚನಗಳಲ್ಲಿ ಆತ್ಮ ನಿರೀಕ್ಷೆ, ಆತ್ಮ ವಿಮರ್ಶೆ, ಡಾಂಭಿಕ ಭಕ್ತಿಯ ವಿಡಂಭನೆ, ಭವಬಂಧನದಿಂದ ಬಿಡುಗಡೆಯ ಕೋರಿಕೆ ಕಂಡು ಬರುತ್ತದೆ. ಬಸವಯುಗದ ವಚನಕಾರರ ಪ್ರಭಾವ ಮತ್ತು ಅವರ ಸ್ಮರಣೆಯ ಕಂಡುಬರುತ್ತದೆ[೯೮].

೯. ಸಂಗನ ಬಸವೇಶ್ವರ ದೇವರು (೧೭ ನೇ.ಶ)

ಗುರುಸಿದ್ಧದೇವನ ಶಿಷ್ಯ ಸಂಗನ ಬಸವೇಶ್ವರ ದೇವರು. ಗುರುಸಿದ್ಧದೇವರು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವರೆಂಬ ವಿಷಯ ಅವರೇ ಹೇಳುವ ಗುರು ಶಿಷ್ಯ ಪರಂಪರೆಯಿಂದ ತಿಳಿದುಬರುತ್ತದೆ[೯೯]. (ವ-೩೨೪) ಇವರ ಚಿದೈಶ್ವರ್ಯ ಚಿದಾಭರಣದ ೩೯೩ ನೇ ವಚನದಲ್ಲಿ ಸಂಗನ ಬಸವೇಶ್ವರ ದೇವರ ಬಗ್ಗೆ ಸ್ವಲ್ಪ ಮಾಹಿತಿ ದೊರೆಯುತ್ತದೆ. ಈತ ಗುರುಪುರದ ಮೇಲುಮಠದ ಮಹಾಮಂದಿರದ ರಂಗ ಮಂಟಪ ಸಿಂಹಾಸನದ ಮೂಲಮೂರ್ತಿ ಮರಿ ಮಹಾಂತೇಶ್ವರ, ಅವರ ಕರಪುತ್ರ ಶಿವಪುರದ ಬಸವ ಪ್ರಭುಶೆಟ್ಟಿ, ಈತ ಭೋಗಂಗಳನ್ನು ತ್ಯಜಿಸಿ ವಿರಕ್ತನಾಗಿ ಸಂಗನ ಬಸವೇಶ್ವರ ಎಂಬ ಹೆಸರಿನಿಂದ ಜೀವಿಸುತ್ತಾ ಗುರು ಕರುಣೆಗಾಗಿ ಕಾಯುತ್ತಿದ್ದ. ಬಸವಲಿಂಗ ದೇವರ ಸಹಾಯದಿಂದ ಗುರುಸಿದ್ಧದೇವರ ಕೃಪೆಗೆ ಪಾತ್ರರಾಗಿ ಅವರಿಂದ ಆಗಮ ಜ್ಞಾನವನ್ನು ಸಂಪಾದಿಸಿ ಸಾಧನೆ ಮಾಡಿ, ಸಿದ್ಧಪಥದತ್ತ ಸಾಗಿದರೆಂಬ ಸಂಗತಿ ವ್ಯಕ್ತವಾಗುತ್ತದೆ.

ಗುರುಸಿದ್ಧದೇವರು ಸಂಗನ ಬಸವೇಶ್ವರ ದೇವರಿಗೆ ಬೋಧಿಸಿದ ಬೋಧನೆಯನ್ನು ಬಸವಲಿಂಗದೇವರು ಬರೆದುಕೊಂಡು ಗುರುಗಳಿಗೆ ಕೊಡುತ್ತಾರೆ. ಗುರುಗಳ ಬೋಧನಾ ಕೃತಿಯನ್ನು[೧೦೦] ಸಂಗನ ಬಸವೇಶ್ವರರು ಸ್ವೀಕರಿಸಿ ಆ ಕೃತಿಯ ಹೆಸರಿಗೆ ಅರ್ಥ ವಿವರಣೆಯನ್ನು ನೀಡುತ್ತಾರೆ[೧೦೧].

ಗುರುಸಿದ್ಧದೇವರು ೧೭ ನೇ ಶತಮಾನದ ಸುಮಾರಿನಲ್ಲಿದ್ದವರಾದುದರಿಂದ ಇವರ ಶಿಷ್ಯನೆನಿಸಿದ ಸಂಗನ ಬಸವೇಶ್ವರ ದೇವರೂ ಇದೇ ಅವಧಿಯಲ್ಲಿದ್ದು ವೀರಶೈವ ತತ್ವ ಸಿದ್ಧಾಂತಗಳನ್ನು ಬೋಧಿಸಿದ್ದಾರೆ. ಈತನ ಒಂದು ವಚನ[೧೦೨] (೬೨೦) ಮಾತ್ರ ಚಿದೈಶ್ವರ್ಯ ಚಿದಾಭರಣದಲ್ಲಿ ದೊರಕುತ್ತದೆ. ಇವನ ಇತರೆ ವಚನಗಳ ಬಗೆಗೆ ಯಾವುದೇ ಉಲ್ಲೇಖಗಳಿಲ್ಲ. ಈತನ ಅಂಕಿತ "ಬಸವಲಿಂಗೇಶ್ವರ" ಎಂದು ಡಾ॥ ವೀರಣ್ಣ ರಾಜೂರ ಮತ್ತು ಸಿ.ಯು. ಉಮಾದೇವಿಯವರು ಅಭಿಪ್ರಾಯ ಪಡುತ್ತಾರೆ.[೧೦೩] ತನಗೆ ಗುರು ಕರುಣೆಯನ್ನು ತೋರಿಸಿದ ಗುರು ಬಸವಲಿಂಗೇಶ್ವರ

---

೯೮. ಡಾ॥ ವಿ.ಎಸ್.ಕಟಗಿಹಳ್ಳಿ ಮಠ. 'ಬಸವೋತ್ತರ ಯುಗದ ವಚನ ಸಾಹಿತ್ಯ ಒಂದು ಅಧ್ಯಯನ.' ಪುಟ-೯೯

೯೯. ಡಾ॥. ವೀರಣ್ಣರಾಜೂರ (ಸಂ)'ಸಂಕೀರ್ಣ ವಚನ. ಸಂಪುಟ-೯.' ಪುಟ-೪೧೫

೧೦೦. ಅನಾದಿ ಷಟ್‌ಸ್ಥಲ ನಿರಾಬಾರಿ ವೀರಶೈವ ಶರಣನ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ.

೧೦೧. ಪಿ.ಎಂ.ಗಿರಿರಾಜು (ಸಂ) 'ಚಿದೈಶ್ವರ್ಯ ಚಿದಾಭರಣ'-ಅರಿಕೆ ಪುಟ-ಋ

೧೦೨. ಈ ವಚನ ೪೮ ಸಾಲಿನಷ್ಟು ಧೀರ್ಘವಾಗಿದೆ. ೧೧೮ ಸಾಲುಗಳ ಟೀಕಾರ್ಥವನ್ನು ಒಳಗೊಂಡಿದೆ. (ಡಾ॥ ವೀರಣ್ಣರಾಜೂರ (ಸಂ).'ಸಂಕೀರ್ಣ ವಚನ ಸಂಪುಟ-೯' ಪುಟ-೪೧೫)

೧೦೩. ಡಾ॥ ಎಸ್.ವಿದ್ಯಾಶಂಕರ್, (ಸಂ) 'ವಚನ ಸಾಹಿತ್ಯ-ದ್ವಿತೀಯ ಘಟ್ಟ.' ಪುಟ-೩೬೮

ದೇವರ ಹೆಸರನ್ನೇ ಅಂಕಿತವನ್ನಾಗಿ ಮಾಡಿಕೊಂಡಿದ್ದಾನೆ. ಈ ವಚನದಲ್ಲಿ ಮೇಲೆ ತಿಳಿಸಿದ ಈತನ ವೃತ್ತಾಂತ ದೊರೆಯುತ್ತದೆ. ಆದಿಯ ಅರ್ಧವಚನ ಸ್ವಸಂಗತಿಯಿಂದ ಕೂಡಿದ್ದರೆ, ಇನ್ನರ್ಧ ಟೀಕೆಯನ್ನೊಳಗೊಂಡಿದೆ. ಹೀಗೆ ಧೀರ್ಘ ನಿರೂಪಣೆ, ಅರ್ಥ ವಿವರಣೆಯಿಂದ ಕೂಡಿದ ಈ ವಚನ ಕಲಾತ್ಮಕ ವಚನವಾಗದೆ ವಿವರಣಾತ್ಮಕ ಗದ್ಯದಂತಿದೆ[೧೦೪].

೧೦. ಸಿದ್ಧವೀರ ದೇಶಿಕೇಂದ್ರ (೧೭ ನೇ. ಶ)

ತೋಂಟದ ಸಿದ್ಧಲಿಂಗ ಪರಂಪರೆಗೆ ಸೇರಿದ ಸಿದ್ಧವೀರ ದೇಶಿಕೇಂದ್ರರು 'ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರ' ಎಂಬ ಅಂಕಿತದಲ್ಲಿ ವಚನ ರಚನೆ ಮಾಡಿದ್ದಾನೆ. ಆದರೆ ಈತನ ಒಂದೇ ಒಂದು ವಚನ 'ಮುಕ್ತಿ ಕಂಠಾಭರಣ' ಕೃತಿಯಲ್ಲಿ ದೊರೆತಿದೆ.[೧೦೫] ಇದರಲ್ಲಿ ಯೋಗದ ಮಹತಿಯನ್ನು ತಿಳಿಸಲಾಗಿದೆ. ಗೋರಕ್ಷ, ಮತ್ಸೇಂದ್ರನಾಥ, ಗುರುಶಾಂತದೇವರು ಯೋಗಸಾಧನೆಯಲ್ಲಿ ಸಿದ್ಧಿಪಡೆದವರೆಂದು ಹೇಳುತ್ತಾ, "ಯೋಗದ ಭೇದ ಯೋಗಿಗಳಂತರಂಗದಿಂದರಿತಡೆ ಯೋಗಸಿದ್ಧಿ ಸತ್ಯ ಸತ್ಯ" ಎಂದು ಸಾರುತ್ತಾನೆ.

ಮುಕ್ತಿ ಕಂಠಾಭರಣದ ಸಂಯೋಜಕ ಈತನೆ ಆಗಿದ್ದಾನೆ.[೧೦೬] ಈ ಕೃತಿಯ ೪೬೨ ನೇ ವಚನ ಟೀಕೆಯಲ್ಲಿ ಈತನಿಗೆ 'ಸಿದ್ಧವೀರಸ್ವಾಮಿ' ಎಂದು ಕರೆಯಲಾಗಿದೆ. "ಈತನೆ ರಚಿಸಿದ ವಚನದಲ್ಲಿ 'ಗುರುಶಾಂತದೇವರು' ಎಂಬ ಹೆಸರು ಉಲ್ಲೇಖವಾಗಿದೆ. ಈ ಗುರು ಶಾಂತದೇವ ಎಳಮಲೆಯ ಗುರುಶಾಂತ ದೇವನಾಗಿದ್ದರೆ, ಆತನ ಶಿಷ್ಯ ಸಂಪಾದನೆಯ ಸಿದ್ಧವೀರರೆ ಪ್ರಸ್ತುತ ಸಿದ್ಧವೀರ ದೇಶಿಕೇಂದ್ರನೆನಿಸುತ್ತಾನೆ. ಇದು ನಿಜವೇ ಆಗಿದ್ದಲ್ಲಿ ಈತನು ೧೭ ನೇ ಶತಮಾನದವನಾಗುತ್ತಾನೆ. ಅನಾದಿ ವೀರಶೈವ ಸಂಗ್ರಹ, ಶಿವನ ಬಿರುದಾವಳಿ ಸ್ತೋತ್ರದ ವಚನಗಳು, ಚನ್ನಬಸವೇಶ್ವರ ಸ್ತೋತ್ರದ ವಚನಗಳು, ಪ್ರಭುದೇವರ ಸ್ತೋತ್ರದ ವಚನಗಳು, ಮಿಶ್ರಸ್ತೋತ್ರ ಮೊದಲಾದ ಸಂಕಲನಗಳ ಕರ್ತೃ ಈತನೆ ಆಗುತ್ತಾನೆ.[೧೦೭]

---

೧೦೪. ಡಾ॥ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ-೧೩೪

೧೦೫. "ವ್ಯಾಸನುಸುರ್ದ ಸ್ಕಂದ ಪುರಾಣದಲ್ಲಿಯ
ಶ್ರೀಶೈಲ ಕಲ್ಪನೋಳ್ಪುದಯ್ಯಾ
ಅಲ್ಲಿ ಸಿದ್ಧ ಸಾಧಕರ ಸನ್ನಿಧಿಯಿಂದರಿಯಬಹುದಯ್ಯಾ
ಮಾಡಿದನೊಬ್ಬ ಪೂರ್ವದಲ್ಲಿ ಗೋರಕ್ಷ
ಮಾಡಿದನೊಬ್ಬ ಮತ್ಸೇಂದ್ರನಾಥ
ಮಾಡಿದರೆಮ್ಮ ವಂಶದ ಶ್ರೀಗುರುಶಾಂತದೇವರು
ಇದು ಕಾರಣ
ಯೋಗದ ಭೇದ ಯೋಗಿಗಳಂತರಂಗದಿಂದರಿತಡೆ
ಯೋಗಸಿದ್ಧಿ ಸತ್ಯ ಸತ್ಯ
ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರ"
(ಸಂ. ಡಾ॥ ವೀ.ರಾ. ಸಂಕೀರ್ಣ ವಚನ ಸಂಪುಟ-೯ ಪುಟ-೫೯೧)

೧೦೬. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ-೧೩೬

೧೦೭. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ-೧೩೬

೧೧. ಎಳಂದೂರ ಪರ್ವತ ಶಿವಯೋಗಿ (ಸು.ಕ್ರಿಶ. ೧೭೩೦)

ಎಳಂದೂರ ಪರ್ವತ ಶಿವಯೋಗಿಯ ಜನ್ಮ ಸ್ಥಳ 'ಎಳಂದೂರು' ಆಗಿದೆ. ಈತನ ಕಾಲವನ್ನು ಮುರಿಗೆ ಶಾಂತವೀರೇಶ (೧೫೩೦) ಗ್ರಂಥಕ್ಕೆ ಟೀಕೆ ಬರೆದಿರುವುದರಿಂದ ಆತನ ನಂತರ ಸು.೧೬೫೦ ರಲ್ಲಿ ಇದ್ದಿರಬೇಕೆಂದು ಆರ್. ನರಸಿಂಹಾಚಾರ್ಯರು ನಿರ್ಧರಿಸುತ್ತಾರೆ.[೧೦೮]

ಮುರಿಗೆ ಶಾಂತವೀರೇಶ್ವರರು ಐಕ್ಯವಾದ ಕಾಲವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ 'ಮುರಿಗೆ ತಾರಾವಳಿ' ಯಲ್ಲಿ ೦೫–೦೫–೧೭೦೩ಎಂದು ಹೇಳುತ್ತಾರೆ. ಇದರಿಂದ ಪರ್ವತ ಶಿವಯೋಗಿಯ ಕಾಲ ಇದಕ್ಕೂ ಮುಂದೆ ಹೋಗುತ್ತದೆ. ಇವನ ಕಾಲವನ್ನು ಸು.೧೭೩೦ ಎಂದು ಇಟ್ಟುಕೊಳ್ಳಬಹುದೆನ್ನುತ್ತಾರೆ ಡಾ॥ ವೀರಣ್ಣ ರಾಜೂರ ಅವರು.[೧೦೯]

"ಶಾಂತ ವೀರೇಶ್ವರ" ಅಂಕಿತದಲ್ಲಿ ಎಳಂದೂರ ಪರ್ವತ ಶಿವಯೋಗಿ[೧೧೦] ವಚನ ರಚಿಸಿದ್ದಾನೆ. ಈತನು ತೋಂಟದ ಸಿದ್ಧಲಿಂಗರ ಶಿಷ್ಯ ಸಿದ್ಧಲಿಂಗಾಖ್ಯ ಸ್ವಾಮಿ. ಈತನ ಶಿಷ್ಯ ಹರೀಶ್ವರ (ಎಳಂದೂರ ಹರೀಶ್ವರ) ಅಥವಾ ಶಾಂತವೀರೇಶ್ವರ. ಈ ಶಾಂತವೀರನ ಶಿಷ್ಯನೇ ಪರ್ವತ ಶಿವಯೋಗಿ[೧೧೧] ಎಂದು ತನ್ನ "ಮುರಿಗೆಯ ಶಾಂತವೀರೇಶನ ಪ್ರಭುಲಿಂಗ ಕಂದದ ಟೀಕೆ"ಯ ಅಂತ್ಯದಲ್ಲಿ ಹೇಳಿಕೊಂಡಿದ್ದಾನೆ. ಇದರಿಂದ ಪರ್ವತ ಶಿವಯೋಗಿ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವನೆಂದು ಸ್ಪಷ್ಟವಾಗುತ್ತದೆ.

'ಶಾಂತವೀರೇಶ್ವರ' ಅಂಕಿತದ ವಚನಕಾರ ಅಜ್ಞಾತನೆಂದು ತಿಳಿಯಲಾಗಿತ್ತು. ಆದರೆ ಅಂಕಿತವಾಗಿ ಬಳಸಿದ 'ಶಾಂತವೀರೇಶ್ವರ' ಎಂಬುದು ಆತನ ಗುರು ಎಳಂದೂರ ಹರೀಶ್ವರ ಅಥವಾ ಶಾಂತವೀರೇಶ್ವರನೆ ಆಗಿದ್ದಾನೆ. ಈತನ ವಚನಗಳನ್ನು[೧೧೨] ಡಾ॥ಬಿ.ಆರ್. ಹಿರೇಮಠ ಅವರು 'ಶಾಂತವೀರೇಶ್ವರ' ಅಂಕಿತದ ತಲೆಬರಹದಡಿಯಲ್ಲಿ ಸಂಪಾದಿಸಿದ್ದಾರೆ.[೧೧೩]

ವೇದಾಗಮಗಳ ಹಿನ್ನೆಲೆಯಲ್ಲಿ ವೀರಶೈವ ತತ್ವ ನಿರೂಪಣೆ ಇವನ ವಚನಗಳ ಮುಖ್ಯ ಗುರಿ. ತಾತ್ವಿಕ ವಚನಗಳು ಹೆಚ್ಚು ಧೀರ್ಘವಾಗಿದ್ದು ಗದ್ಯದ ಲಯವನ್ನು ಪಡೆದುಕೊಂಡಿವೆ. ಈ ಕಾಲದಲ್ಲಿ ವೀರಶೈವ ಸಿದ್ಧಾಂತದ ತರ್ಕ ಬದ್ಧ ನಿರೂಪಣೆಗೆ ಅನಿವಾರ್ಯವಾಗಿದ್ದಂತೆ

---

೧೦೮. ಕರ್ನಾಟಕ ಕವಿ ಚರಿತೆ,(ಸಂ) –೨ ಪುಟ ೩೫೩

೧೦೯. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದವಚನಕಾರರು.' ಪುಟ– ೧೬೧

೧೧೦. "ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ 'ಪರ್ವತ' ಹೆಸರಿನ ನಾಲ್ಕು ಜನ ಕವಿಗಳು ದೊರಕುತ್ತಾರೆ. ಒಬ್ಬ ಸಂಪಾದನೆಯ ಪರ್ವತೇಶ, ಮತ್ತೊಬ್ಬ ವಿರಕ್ತ ತೋಂಟದಾರ್ಯನ ಗುರು ಪರ್ವತೇಂದ್ರ, ಮೂರನೆಯವನು ನನ್ನಯ್ಯಗಳ ಚಾರಿತ್ರ್ಯದ ಕರ್ತೃ ಪರ್ವತದೇವ, ನಾಲ್ಕನೆಯವನು ಎಳಂದೂರ ಪರ್ವತ ಶಿವಯೋಗಿ" (ಡಾ॥ ವೀ.ರಾ.ಬ.ಯು.ವ. ಪು–(೬೦–೧೬೧)

೧೧೧. ಡಾ॥ ವೀರಣ್ಣರಾಜೂರ.'ಬಸವೋತ್ತರ ಯುಗದ ವಚನಕಾರರು.' ಪುಟ–೧೬೦

೧೧೨. ಈತನ ವಚನಗಳಿರುವ ಅಪೂರ್ಣ ಹಸ್ತ ಪ್ರತಿಯೊಂದು ಹೈದರಾಬಾದ್ ಉಸ್ಮಾನೀಯ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿದ್ದು ಅದರಲ್ಲಿ ೯೧ ವಚನಗಳಿವೆ.

೧೧೩. ಇನ್ನೊಂದು ಸಮಗ್ರ ಪ್ರತಿ ಮೈಸೂರಿನ ಪಿ.ಎಂ. ಗಿರಿರಾಜು ಅವರ ಬಳಿ ಇದೆ. ಅದರಲ್ಲಿ ೧೦೦೩ ವಚನಗಳಿವೆಯೆಂದು ತಿಳಿದು ಬಂದಿದೆ. (ಡಾ. ವೀ.ರಾ.ಬ.ಯು.ವ. ಪು–೧೬೧–೧೬೨)

ತೋರುವ ಸಂಸ್ಕೃತ ಪ್ರಮಾಣಗಳ ಬಳಕೆ ಇವರ ವಚನಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ವಚನಗಳ ಕೊನೆಯಲ್ಲಿರುವ ಅಂಕಿತದಿಂದಾಗಿ ಇವು ಬಿಡಿ ಬಿಡಿ ವಚನಗಳಂತೆ ಕಂಡು ಬರುತ್ತವೆ. ಆದರೆ ವಚನಗಳ ವಸ್ತು ವೀರಶೈವ ತತ್ವ ನಿರೂಪಣೆಯಾದ್ದರಿಂದ ಅದರ ವಿವೇಚನೆಯಲ್ಲಿ ಸಕ್ರಮತೆ ಮತ್ತು ಏಕಸೂತ್ರತೆ ಇರುವುದರಿಂದ ಇದೊಂದು ಸಮಗ್ರವಾದ, ಇಡಿಯಾದ ಕೃತಿಯಂತೆ ತೋರುತ್ತದೆ.

ಆರಂಭದ ವಚನಗಳಲ್ಲಿ ತನ್ನ ಹಿಂದಿನ ಭಾರತೀಯ ಧರ್ಮ ದರ್ಶನಗಳಾದ ಜೈನ, ಬೌದ್ಧ, ಚಾರ್ವಾಕ, ವೈದಿಕ, ಪೂರ್ವ ಮೀಮಾಂಸೆ, ನ್ಯಾಯ, ವೈಶೇಷಿಕ, ಶೈವ ಮೊದಲಾದವುಗಳ ಸ್ವರೂಪ ವಿಧಾನಗಳನ್ನು ತಿಳಿಸಿ ಅವುಗಳಿಂದ ವೀರಶೈವ ದರ್ಶನ ಸರಳವೂ, ಸುಲಭವು, ಶ್ರೇಷ್ಠವೂ ಆಗಿದೆ ಎಂದು ಹೇಳುತ್ತಾನೆ. "ಇಂತೀ ಮತಾಂತರಗಳ ಭಿನ್ನಾಚರಣೆವಿಡಿವನಲ್ಲಯ್ಯ ಶರಣ ದ್ವೈತಿಯಾಗಿ" ಎಂದು ಶಿವಶರಣನ ನಿಲವನ್ನು ತಿಳಿಸುತ್ತಾನೆ.[೧೧೪] ಮುಂದೆ ಗುರು –ಶಿಷ್ಯ ಸಂಬಂಧ, ಶೈವ ಪ್ರಭೇದಗಳು, ವೀರಶೈವದ ಪ್ರಕಾರಗಳು, ಅದರ ಮಹತ್ವ, ಅದರ ಬಗೆಗಳು, ವಿವಿಧ ಯೋಗಾಸನಗಳು ಅವುಗಳ ಪ್ರಯೋಜನ, ಜಪ, ಧ್ಯಾನ, ಪೂಜಾ ವಿಧಾನ ಮುಂತಾದವುಗಳ ಬಗೆಗೆ ತಿಳಿಸಲಾಗಿದೆ.

ಇವನ ವಚನಗಳಲ್ಲಿ ವ್ಯವಸ್ಥಿತವಾದ ತತ್ವ ವಿವೇಚನೆ ಇದ್ದು, ಇವುಗಳಲ್ಲಿ ಪರ್ವತ ಶಿವಯೋಗಿಯ ವ್ಯಾಪಕವಾದ ಅಧ್ಯಯನ, ಪಾಂಡಿತ್ಯ, ವೀರಶೈವ ತತ್ವ ನಿಷ್ಠೆ, ವಿವೇಚನಾ ಸಾಮರ್ಥ್ಯ ಎದ್ದು ಕಾಣುತ್ತದೆ. ತತ್ವನಿರೂಪಣೆ ಮುಖ್ಯ ಉದ್ದೇಶವಾಗಿರುವುದರಿಂದ ಈ ವಚನಗಳಲ್ಲಿ ಕಾವ್ಯಾಂಶದ ಕೊರತೆಯಿದೆ. ಪರ್ವತ ಶಿವಯೋಗಿಯ ವಿಶೇಷತೆ ಏನೆಂದರೆ ವೀರಶೈವ ತತ್ವಶಾಸ್ತ್ರವನ್ನು ಹೇಳಲು ಕಾವ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳದೆ, ವಚನ ಮಾಧ್ಯಮವನ್ನು ಬಳಸಿಕೊಂಡಿರುವುದು. ಇವನೊಬ್ಬ ಶಿವಯೋಗಿಯಾಗಿ, ಸಾಧಕನಾಗಿ ಕಂಡುಬರುತ್ತಾನೆ.

೧೨. ಮುದ್ವೀರ ಸ್ವಾಮಿ (ಕ್ರಿ.ಶ.ಸು.೧೭೩೦)

ಈತನು ಬರೆದಿರುವ ಒಂದೇ ಒಂದು ವಚನದಲ್ಲಿ ಬಳಸಿರುವ ಅಂಕಿತ 'ಮುದ್ವೀರ ಪ್ರಿಯ ಸಂಗಮೇಶ್ವರ' ಎಂದಿದೆ. ಈತನಿಗೆ ಬೆಂಗಳೂರ ಮುದ್ವೀರಸ್ವಾಮಿ, ಮುದ್ವೀರಯೋಗಿ, ಮುದ್ವೀರಾಖ್ಯಂಯೋಗಿ, ಮುದ್ವೀರೇಶ, ಮುದ್ವೀರದೇಶಿಕೋತ್ತಮ[೧೧೫] ಎಂಬ ನಾಮಾಂತರಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಇತ್ತೀಚಿಗೆ ಚಿತ್ರದುರ್ಗ ಮಠ ಹಸ್ತ ಪ್ರತಿಯಲ್ಲಿ ದೊರೆತಿರುವ ತಾರಾವಳಿಯೊಂದು[೧೧೬] ಈತನ ಬಗ್ಗೆ ಸ್ವಲ್ಪ ಮಾಹಿತಿ ನೀಡುತ್ತದೆ. ಅದರಂತೆ ಈತ ಮೊದಲು ಬೆಂಗಳೂರಿನವನಾಗಿದ್ದು, ಮುಂದೆ ಹಾಗಲವಾಡಿಗೆ ಹೋಗಿ ಇಮ್ಮಡಿ ಮುದಿಯಪ್ಪ ನಾಯಕನ ಗುರುವಾಗಿ ಆತನಿಗೆ

---

೧೧೪. ಡಾ॥ ವೀರಣ್ಣರಾಜೂರ. 'ಬಸವೋತ್ತರ ಯುಗದ ವಚನಕಾರರು.' ಪುಟ–೧೬೨

೧೧೫. ೧. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು,' ಪುಟ–೧೬೬
೨. ಕನ್ನಡ ಅಧ್ಯಯನ ಪೀಠದ ತಾ.ಪ್ರತಿ ೩೧೮೪ ರಲ್ಲಿ ಈತನಿಗೆ "ಶ್ರೀಮತ ಶಾಂಭಯೋಗಿ ಪರಮ ಸನ್ಮುದ್ವೀರ ಗುರುವರೇಶ್ವರ" ಎಂದು ಕರೆಯಲಾಗಿದೆ.

೧೧೬. ಈ ಕೃತಿಯನ್ನು ಎಸ್.ಶಿವಣ್ಣ ಅವರು ಪ್ರಕಟಿಸಿದ್ದಾರೆ.

ತತ್ವಜ್ಞಾನೋಪದೇಶ ಮಾಡಿದಂತೆ ತಿಳಿಸಲಾಗಿದೆ. ಮುದ್ವೀರ ಸ್ವಾಮಿ ತನ್ನ ಗುರುವಾದ ಮುರಿಗೆ ಸ್ವಾಮಿಗಳ ಆಜ್ಞಾನುಸಾರ 'ಶಿವತತ್ವ ಸುಜ್ಞಾನ ಪ್ರದೀಪಿಕೆ' ಎಂಬ ಕೃತಿಯನ್ನು ಬರೆದುದಾಗಿಯೂ, ಅದನ್ನು ಹಾಗಲವಾಡಿ ಇಮ್ಮಡಿ ಮುದಿಯಪ್ಪ ನಾಯಕನಿಗೆ ಹೇಳಿದುದಾಗಿಯೂ, ಅದು ಸೋಸಲೆ ರೇವಣಾರಾಧ್ಯರ ಸಂಸ್ಕೃತ 'ಷಟ್‌ಸ್ಥಲ ಬ್ರಹ್ಮ ಪ್ರದೀಪಿಕೆ' ಎಂಬ ಕೃತಿಯನ್ನು ಆಧರಿಸಿ ಕನ್ನಡದಲ್ಲಿ ರಚಿಸಿದುದಾಗಿದೆಯೆಂದು ತಿಳಿಸುತ್ತಾನೆ. ಇದರಿಂದ ಈತನು ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನಾಗುತ್ತಾನೆ. ಇಮ್ಮಡಿ ಮುದಿಯಪ್ಪ ನಾಯಕ, ಮುರಿಗೆ ಶಾಂತವಿರ, ಸೋಸಲೆ ರೇವಣಾರಾಧ್ಯ ಇವರ ಸಂಬಂಧದ ಹಿನ್ನೆಲೆಯಲ್ಲಿ ಈತನ ಕಾಲ ಸು.ಕ್ರಿ.ಶ. ೧೭೦೦ ರಿಂದ ೧೭೭೦ ಎಂದು ನಿರ್ಧರಿಸಲಾಗಿದೆ[೧೧೭].

ಮುದ್ವೀರ ಸ್ವಾಮಿಯು 'ಶಿವತತ್ವ ಸುಜ್ಞಾನ ಪ್ರದೀಪಿಕೆ' ಎಂಬ ಷಟ್ಪದಿ ಕೃತಿಯನ್ನು ಬರೆದಿದ್ದಾನೆ. ಈತನ ಒಂದೇ ಒಂದು ವಚನ ದೊರೆತಿದ್ದು, ಅದು ೨೯ ಸಾಲಿನಷ್ಟು ದೀರ್ಘವಾಗಿದೆ. ಗದ್ಯದ ಗತಿಯನ್ನು ಅನುಸರಿಸಿರುವ ಈ ವಚನಕ್ಕೆ "ಶಾಂಭವೀ ನಿರ್ಣಯದ ವಚನ" ಎಂದು ಹೆಸರಿಡಲಾಗಿದೆ. ಶಾಂಭವಿ ಯೋಗದ ಸ್ವರೂಪವನ್ನು ತಿಳಿಸುವುದು ಇದರ ಉದ್ದೇಶವಾಗಿದೆ. ಪರಬ್ರಹ್ಮದ ನೆಲೆಯನ್ನು ತಿಳಿಯುವುದೇ ನಿಜಯೋಗ. ಅದೇ ಶಾಂಭವಯೋಗ. ಹೀಗೆ ಒಂದು ಕ್ರಮದಲ್ಲಿ ತತ್ವ ನಿರೂಪಣೆ ಮಾಡಲಾಗಿರುವುದು ಇಲ್ಲಿನ ವಿಶೇಷವಾಗಿದೆ. ಇದಲ್ಲದೆ ಮುದ್ವೀರ ಸ್ವಾಮಿ 'ಗುರುಸಂಗ' ಎಂಬ ಅಂಕಿತದಲ್ಲಿ ಸುಮಾರು ೧೦೮ ಸ್ವರ ವಚನಗಳನ್ನು ಬರೆದಿದ್ದಾರೆ.

೧೩. ಮೂರು ಸಾವಿರ ಮುಕ್ತಿ ಮುನಿ (೧೯ ನೇ.ಶ.)

ವೀರಶೈವ ಸಾಹಿತ್ಯದಲ್ಲಿ ನಾಲ್ಕು ಜನ ಮುಕ್ತಿ ಮುನಿಗಳಾಗಿ ಹೋಗಿದ್ದಾರೆ. ಇವರಲ್ಲಿ ಇಬ್ಬರು ರಂಬಾಪುರಿ ವೀರಸಿಂಹಾಸನ ಪರಂಪರೆಯಲ್ಲಿ ಆಗಿ ಹೋಗಿದ್ದಾರೆ. ಶ್ರೀರುದ್ರ ಮುನಿಗಳ ಕರಸಂಜಾತರಾದ ಮುಕ್ತಿ ಮುನಿ, ದಿಗಂಬರ ಮುಕ್ತಿ ಮುನಿ ಇವರೀರ್ವರು ಬಸವಾದಿ ಶಿವಶರಣರ ಸಮಕಾಲೀನರು[೧೧೮]. ಮತ್ತೊಬ್ಬ ಮುಕ್ತಿ ಮುನಿ ಸ್ವಾಮಿಗಳ ಉಲ್ಲೇಖ 'ಚನ್ನ ಬಸವಪುರಾಣ'[೧೧೯]ದಿಂದ ತಿಳಿದುಬರುತ್ತದೆ. ಹಾಗೆಯೆ ಕೆಳದಿ ಪ್ರದೇಶದ ಭುವನ ಗಿರಿದುರ್ಗದ ಮಹಂತರ ಮಠದ ಗುರುಪರಂಪರೆಯಲ್ಲಿಯೂ ಒಬ್ಬ 'ಮುಕ್ತಿಮುನಿ ಸ್ವಾಮಿ' ಆಗಿ ಹೋಗಿದ್ದಾರೆ. ಆದರೆ ಈತನಿಗು ಉಳಿದವರಿಗೂ ಯಾವ ವಿಧವಾದ ಸಂಬಂಧವಿದೆ ಎಂಬುದು ಸ್ಪಷ್ಟವಾಗಿರುವುದಿಲ್ಲ[೧೨೦].

ಮೂರು ಸಾವಿರ ಮುಕ್ತಿ ಮುನಿಯ ಹೆಸರೊಂದನ್ನು ಬಿಟ್ಟರೆ ಇವನ ಜೀವನ ಚರಿತ್ರೆಗೆ ಸಂಬಂಧಿಸಿದ ಸಂಗತಿಗಳಾವುವು ದೊರೆಯುವುದಿಲ್ಲ. ಈತನ ಕಾಲ ಸುಮಾರು ೧೮ನೇ ಶತಮಾನವೆಂದು ವಿದ್ವಾಂಸರ ಅಭಿಪ್ರಾಯ[೧೨೧]. ಈತನು ೧೧೧ ವಚನಗಳ ಕೃತಿಯನ್ನು

೧೧೭. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು.' ಪುಟ-೧೬೭

೧೧೮. ಡಾ॥ಎಸ್. ವಿದ್ಯಾಶಂಕರ್, (ಸಂ). 'ವಚನ ಸಾಹಿತ್ಯ-ದ್ವಿತೀಯ ಘಟ್ಟ' ಪು-೩೩೧

೧೧೯. ಚೆನ್ನ ಬಸವ ಪುರಾಣ , ಸಂ. ೬೨, ಪದ್ಯ-೩೭ ರಿಂದ ೪೨

೧೨೦. ಡಾ॥ ವೀರಣ್ಣ ರಾಜೂರ, ಬಸವೋತ್ತರ ಯುಗದ ವಚನಕಾರರು. ಪುಟ-೧೭೧

೧೨೧. ಈತನ ಕೆಲವು ವಚನಗಳಲ್ಲಿ ಪೀಠ, ಗೋರಿ, ಭಂಗಿ, ಗಾಂಜಿ, ಗಡಾಕು, ತಂಬಾಕದ ಚಿಲುಮೆ, ನಾಸಿಬು ಕಣಿ, ಜರೂರು, ಬಾಜಾರ, ಜಾಮೀನು ರೊಕ್ಕ ಮೊದಲಾದ ಪದಗಳ ಬಳಕೆಯ ಆಧಾರದ ಮೇಲೆ ಕಾಲ ನಿರ್ಣಯಿಸಿದ್ದಾರೆ.

ಬರೆದಿದ್ದಾನೆ. ಈ ವಚನ ಗ್ರಂಥದ ಹೆಸರು 'ಸರ್ವಾಚಾರ ಸಾರಾಮೃತಯ ಸುಧೆ'[೧೨೨] "ನಿರವಯ ಪ್ರಭುಮಹಾಂತ ಸಿದ್ಧಮಲ್ಲಿಕಾರ್ಜುನ ಲಿಂಗೇಶ್ವರ' ಎಂಬುದು ಈತನ ವಚನಗಳ ಅಂಕಿತ. ನೂರೊಂದು ವಚನಗಳನ್ನು, ನೂರೊಂದು ವಿರಕ್ತರನ್ನು, ಇಲ್ಲವೇ ನೂರೊಂದು ಸ್ಥಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದುದಾಗಿರಬೇಕು. ಈತನು ಕನ್ನಡ-ಸಂಸ್ಕೃತ, ಆಗಮ ಮತ್ತು ಶಾಸ್ತ್ರ ಗ್ರಂಥಗಳನ್ನು ಆಳವಾಗಿ ಅಭ್ಯಾಸಮಾಡಿದವನು. ಉಭಯಭಾಷಾ ಪಂಡಿತನಾಗಿದ್ದನೆಂದು ತಿಳಿದು ಬರುತ್ತದೆ.

ಈತನು 'ಸರ್ವಾಚಾರ ಸಾರಾಮೃತ ಸುಧೆ' ಯನ್ನು 'ರೇವಣ ಸಿದ್ಧ ಲಿಂಗದೇಶಿಕ' ಎಂಬ ಶಿಷ್ಯನಿಗೆ ಬೋಧಿಸಿರುವುದಾಗಿ ಕೃತಿಯ ಆದಿ ಮತ್ತು ಅಂತ್ಯದ ಗದ್ಯದಿಂದ ತಿಳಿದುಬರುತ್ತದೆ. ಇಲ್ಲಿಯ ಒಂದು ವಚನದಲ್ಲಿ (೯೨) ಘನಲಿಂಗ ದೇವರ ಉಲ್ಲೇಖವಿದೆ. ಇದರಿಂದ ಈ ವಚನಕಾರ ಘನಲಿಂಗದೇವರಿಗಿಂತ ಈಚಿನವನೆಂಬುದು ಸ್ಪಷ್ಟ. ಘನಲಿಂಗದೇವ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಒಬ್ಬ ವಚನಕಾರ. ಮುಕ್ತಿ ಮುನಿಯ ಶಿಷ್ಯನಲ್ಲಿ ಸೇರಿದ ದೇಶಿಕ' ಎಂಬುದು ತೋಂಟದ ಸಿದ್ಧಲಿಂಗರ ನಂತರ ಹೆಚ್ಚು ಪ್ರಚಲಿತವಾದ ಪದವಾಗಿದೆ. ಮುರುಘಸಮಯ, ಕುಮಾರ ಸಮಯದಲ್ಲಿ ಈ ಹೆಸರಿನ ಶರಣರಿರುವುದು ಕಂಡುಬರುತ್ತದೆ. ಹೀಗಾಗಿ 'ರೇವಣ ಸಿದ್ಧಲಿಂಗದೇಶಿಕ' ಹಾಗೂ ಅವನ ಗುರು ಮೂರು ಸಾವಿರ ಮುಕ್ತಿ ಮುನಿಗಳು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವರಾಗಿರಬೇಕೆಂದು ಊಹಿಸಲು ಅವಕಾಶವಿದೆ. ಆದರೆ ಖಚಿತವಾಗಿ ಹೇಳಲಾಗುವುದಿಲ್ಲ.

ಈ ಕೃತಿ ವೀರಶೈವ ಆಚರಣೆಗಳನ್ನು ಸಂಗ್ರಹವಾಗಿ ಹೇಳುವ ಕೃತಿಯಾಗಿದೆ. ವೀರಶೈವ ಭಕ್ತನಾದವನಿಗೆ ಉಪಯುಕ್ತತೆಗಾಗಿ ಆಗಮ, ಶಾಸ್ತ್ರ, ಪುರಾಣಗಳಲ್ಲಿ ಪ್ರತಿಪಾದ್ಯವಾಗಿರುವ ಮತ್ತು ಬಸವಾದಿ ಶರಣರು ನಿರೂಪಿಸಿದ ವಚನ ಸಾರಾಮೃತದ ಆಚರಣೆ ಸಂಬಂಧ ಸ್ವರೂಪಗಳ ಸಾರವನ್ನು ಸಂಗ್ರಹಿಸಿ ಪ್ರತಿಪಾದಿಸುವುದೇ ೧೦೧ ವಚನಗಳ ಸಾರವಾಗಿದೆ. ಭಕ್ತನು ಶಿವಯೋಗಾಚರಣೆಯ ಮೂಲಕ ಮುಕ್ತಿಯನ್ನು ಪಡೆಯಲು ಅದಕ್ಕೆ ಬೇಕಾದ ಆಚರಣೆಗಳನ್ನು ಪರಿಶುದ್ಧ ಭಾವನೆಯಿಂದ ಆಚರಿಸಬೇಕು. ಈ ಆಚರಣೆಗಳ[೧೨೩] ವಿವರಣೆಗಳ ಜೊತೆಗೆ ಅವುಗಳನ್ನು ವಿವರಿಸುವ ವಿಧಾನಗಳನ್ನು ಒಟ್ಟಿಗೆ ವಿವರಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ತಾನು ಹೇಳುವ ವಿಚಾರಗಳಿಗೆ ಸಂಸ್ಕೃತ, ಆಗಮಶಾಸ್ತ್ರ, ಪುರಾಣಗಳ ಮತ್ತು ವಚನಗಳ ಉದಾಹರಣೆಗಳನ್ನು ಹೇರಳವಾಗಿ ಬಳಸಿಕೊಂಡಿದ್ದಾನೆ. ಇಲ್ಲಿಯ ವಚನಗಳಲ್ಲಿ ಭಾವಕ್ಕೆ, ಕಾವ್ಯಾಂಶಕ್ಕೆ, ವಿಶೇಷ ಕಲ್ಪನೆಗೆ ಅವಕಾಶವಿಲ್ಲ. ಎಲ್ಲಾ ವಚನಗಳು ಗದ್ಯರೂಪಿ ನಿರೂಪಣೆಗಳಾಗಿವೆ.ವಚನಗಳ ಬಂಧ ತುಂಬ ಶಿಥಿಲವಾಗಿವೆ. ವಿವರಣಾತ್ಮಕ ದೀರ್ಘವಚನಗಳೆ ಅಧಿಕವಾಗಿವೆ. ಒಂದೊಂದು ವಚನ ಎರಡು ಮೂರು ಪುಟಗಳಷ್ಟು ದೀರ್ಘವಾಗಿವೆ. ವಚನಗಳನ್ನು ಓದುತ್ತಾ ಹೋದರೆ ಶಾಸ್ತ್ರದ ಗೊಂಡಾರಣ್ಯವನ್ನು ಪ್ರವೇಶಿದಂತಾಗುತ್ತದೆ. ವಿವರಣೆಗೆ ಮತ್ತೊಂದು ವಿರಣೆ, ಈ ವಿವರಣೆಗಳನ್ನು ತನ್ನ ವಚನಗಳಲ್ಲಿ ವಿಪುಲವಾಗಿ ಬಳಸಿರುವುದು ಅವನ ಅನುಭವಕ್ಕೆ ಸಾಕ್ಷಿಯಾಗಿ.[೧೨೪]

---

೧೨೨. ಡಾ॥ ಬಿ.ವಿ.ಶಿರೂರ-'ಸರ್ವಾಚಾರ ಸಾರಾಮೃತ ಸುಧೆ,' (ಜ.ತೋ.ಮಠ, ಗದಗ).

೧೨೩. ಈತನ ವಚನಗಳಲ್ಲಿ ವೀರಶೈವಾಚಾರಗಳು, ಪ್ರಾತಃಕರ್ಮಗಳು, ಷಟ್‌ವಿಧ ಆಚರಣೆ, ಬಹಿರಂಗ ಆಚರಣೆ, ಶುಚಿಮಾಡುವ ವಿಧಾನ, ಮುಖ ಮಜ್ಜನ, ಭಸ್ಮಧಾರಣೆ, ಆಹಾರಶುದ್ಧಿಕರಣ , ಪ್ರಸಾದ ಸಿದ್ಧಪಡಿಸುವ ವಿಧಾನ, ಶಿವಾರ್ಚನೆ, ಪಾದ ಪೂಜಾವಿಧಾನ, ಪಾದೋದಕ ಮಹತ್ವ, ಪ್ರಸಾದ-ಹೀಗೆ ವೀರಶೈವ ತತ್ವಾಚರಣೆಗಳ ನಿರೂಪಣೆ ಇದೆ.

೧೨೪. ಡಾ॥. ಎಸ್. ವಿದ್ಯಾಶಂಕರ್.(ಸಂ) 'ವಚನ ಸಾಹಿತ್ಯ- ದ್ವಿತೀಯಘಟ್ಟ' ಪುಟ-೩೩೪

ವೀರಶೈವ ತತ್ವಾಚರಣೆಗಳಿಂದಾಗಿ ಈತನ ವಚನಗಳಿಗೆ ತನ್ನದೇ ಆದ ಒಂದು ಮೌಲ್ಯವಿದೆ. ಧರ್ಮಗಳು ಸ್ಥಾವರವಾಗಿ ಉಳಿಯದೆ, ಜಂಗಮವಾಗಿ ಸಮಾಜದಲ್ಲಿ ಪ್ರವೇಶಿಸುವುದು ಆಚರಣೆಗಳ ಮೂಲಕ. ಹೀಗಾಗಿ ಸಮಾಜದಲ್ಲಿ ವ್ಯಕ್ತಿಯ ಆಚಾರ – ಆಚರಣೆಗಳಿಗೆ ಹೆಚ್ಚು ಪ್ರಾಶಸ್ತ್ಯವಿರುತ್ತದೆ. ಆದುದರಿಂದ ಈ ವಚನಕೃತಿ ವ್ಯಕ್ತಿ ಮತ್ತು ಸಮಾಜಗಳ ದೃಷ್ಟಿಯಿಂದ ಹೆಚ್ಚು ಮಹತ್ವವುಳ್ಳದಾಗಿ ಕಂಡು ಬರುತ್ತದೆ. ಮೂರುಸಾವಿರ ಮುಕ್ತಿ ಮುನಿಯ ವಚನವೊಂದನ್ನು ಮಾದರಿಗಾಗಿ ಇಲ್ಲಿ ಉದಾಹರಿಸಬಹುದು.

> " ಅಯ್ಯಾ, ನಿಜವೀರಶೈವೋದ್ಧಾರಕ ವಿಶೇಷ ಭಕ್ತ ಮಹೇಶ್ವರರು
> ಮಹಾಲಿಂಗೋದಯವಾದಿಯಾಗಿ ನಿರವಯ ಲಿಂಗವಂತ್ಯವಾದ ಪರಿಯಂತರವು
> ಸತ್ತು ಚಿದಾನಂದ ರೂಪಧರಿಸಿ, ನಿತ್ಯ ಗುರುಲಿಂಗ ಜಂಗಮ ಕಲ್ಯಾಣೋತ್ಸಹರಾಗಿ
> ಮಾರ್ಗಾಚಾರಂಗಳಲ್ಲಿ ಸತ್ಕ್ರಿಯಾವಧಾನ, ಮಿರಿದಾಚಾರಂಗಳಲ್ಲಿ ಸಮ್ಯಜ್ಞಾನಾವಧಾನ
> ಸಂಪೂರ್ಣಾನಂದ ಭರಿತಾಚಾರಂಗಳಲ್ಲಿ
> ಸ್ವಾನುಭಾವದ ಸದ್ಧರ್ಮ ನಡೆ ನುಡಿಯೊಳಕೊಂಡು ಬೆಳಗುವ
> ಪರತತ್ವ ಶಿವಯೋಗಾನುಸಂಧಾನದ ನಿಜಾವಧಾನದಲ್ಲಿ ಸಂತೃಪ್ತರಾಗಿ
> ಬೆಳಗಿಂಗೆ ಮಹಾಬೆಳಗಾಗಿ, ತನ್ನ ತಾನೇಮುಕ್ತಿ ಸ್ವರೂಪ ನಿರವಯ
> ಪ್ರಭುಮಹಾಂತ ತಾನೇ ನೋಡಾ ಸಿದ್ಧಮಲ್ಲಿಕಾರ್ಜುನ ಲಿಂಗೇಶ್ವರಾ"

ವ್ಯಕ್ತಿ ಹಾಗೂ ಸಮಾಜಗಳ ದೃಷ್ಟಿಯಲ್ಲಿ ಈ ಕೃತಿ ಮಹತ್ವ ಪಡೆದಿದ್ದರೂ ಈತನ ವಚನಗಳ ಅರ್ಥ ಸ್ಪಷ್ಟತೆಗಾಗಿ ಇನ್ನೊಬ್ಬರನ್ನು ಆಶ್ರಯಿಸಬೇಕಾಗಿರುತ್ತದೆ.

– – –

೧೪. ಗೋಣಿಯ ಮಾರಯ್ಯ :– (೧೨ನೇ.ಶ)

ಗೋಣಿಯ ಮಾರಯ್ಯನು 'ಕೇಟೇಶ್ವರ ಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಈತನ ಒಂಬತ್ತು ವಚನಗಳು ಮಾತ್ರ ಉಪಲಬ್ದವಿವೆ. ಆದರೆ ಈತನ ವೈಯಕ್ತಿಕ ವಿಚಾರಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಈತನ ಹೆಸರಿನ ಹಿಂದೆ ಇರುವ ವಿಶೇಷಣ 'ಗೋಣಿ' ಪದ ವಿಶೇಷವಾಗಿದೆ. ಜೊತೆಗೆ 'ಭಿಕ್ಷ' ಮತ್ತು 'ಗೋವಳ' ಎಂಬ ಪದಗಳು ಈತನ ವಚನಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಹಾಗಾಗಿ ಈತನ ಕಾಯಕ ಗೋಣಿ ಹೊದ್ದು, ಗೋವುಗಳನ್ನು ಕಾಯುವುದು. ಮನೆ ಮನೆಗೆ ಭಿಕ್ಷೆಯನ್ನು ತೆಗೆದು ಜೀವನ ನಡೆಸುವುದಾಗಿದೆ. "ಗೋಣಿಯ ಮರೆಯಲ್ಲಿ ಇಪ್ಪವರೆಲ್ಲರೂ ಎನ್ನ ಗೋವರಾದುದ ನೀ ಮರೆದೆಯಾ ಕೇಟೇಶ್ವರ ಲಿಂಗವೇ?," "ಎಲ್ಲಕ್ಕೆ ಶರಣೆಂದು ಎಲ್ಲರಾಲಯದಲ್ಲಿ ಭಿಕ್ಷವ ತೆಗೆದುಕೊಂಡು ಸಲ್ಲಲಿತ ಭಾವದಲ್ಲಿದ್ದ ಶರಣಂಗೆ ಗೋಣಿಯ ಮರೆಯ ಸಿಕ್ಕುದೊಡಕಿಲ್ಲ." "ಕಾಯದ ಕಂಥೆಯ ಹಿಡಿದು ಅಕಾಯ ಚರಿತ್ರ ಪರಮನೆಂಬ ಜಂಗಮ ಬಂದು ಕರ ಖರ್ಪರವನಳವಡಿಸಿಕೊಂಡು ಭಿಕ್ಷಕ್ಕೆ ನಡೆಯಲು ಕೇಳಿದ" ಎಂಬ ವಾಕ್ಯಗಳಲ್ಲಿ ಉಕ್ತವಾದ ಸಂಗತಿಗಳು ಈತ ಗೋಣಿ ತಟ್ಟು (ಕಂಬಳಿಯಿಂದ ಮಾಡಿದ ಕುಂಚಿಗೆ) ನ್ನು ಹೊದ್ದು ಕೊಂಡು ಊರದನ ಕಾಯುವ ಕಾಯಕ

ಮಾಡುತ್ತಿದ್ದ. ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ ಜೀವಿಸುತ್ತಿದ್ದ ಎಂದು ತಿಳಿಯುತ್ತದೆ. ತನ್ನ ಈ ವೃತ್ತಿ ಮತ್ತು ವೇಷ ವಿಶೇಷಗಳನ್ನು ದೃಷ್ಟಾಂತವಾಗಿ ವಚನಗಳಲ್ಲಿ ಬಳಸಿಕೊಂಡು ವೃತ್ತಿ ಗೌರವವನ್ನು ಎತ್ತಿ ಹಿಡಿದಿದ್ದಾನೆ. "ಗುರುವಾಜ್ಞೆಯಿಂದ ಬಂದ ಭಿಕ್ಷ ಅಮೃತಾನ್ನವೆಂದು ಕೈಕೊಂಡು ಭೋಜ್ಯ ಭೋಜ್ಯಂಗೆ ಓಂ ನಂಃಶಿವಾಯ ಎಂಬ ನುಡಿಯಿಂದ ಸೇವಿಸಿ ನಿತ್ಯತೃಪ್ತರಾಗಿ ಸುಳುಹು ಪಾವನರಾಗಿ ಚರಿಸುವ ಮಹಾಮಹಿಮ ಶರಣನ ನಡೆ ಪರುಷ, ನುಡಿ ಪರುಷ, ಮುಟ್ಟಿದ್ದು, ನೋಡಿ ಸೋಂಕಿದ್ದೆಲ್ಲ ಪಾವನ" ಇದು ಲೌಕಿಕ ಭಿಕ್ಷೆಯನ್ನು ಮಾರಯ್ಯ ಆಧ್ಯಾತ್ಮಕದ ಹಿನ್ನೆಲೆಗೆ ಬಳಸಿಕೊಂಡ ರೀತಿ ಹೊಸದು.

"ಸಂಗಕ್ಕೆ ಶರಣರ ಸಂಗವೇ ಲೇಸು[೧೨೫]", "ಕಿಚ್ಚು ಹತ್ತಿದಲ್ಲಿ ಊರಡವಿ ಕಾಡಡವಿಯೆಂದುಂಟೆ?" "ಆವನಾದರಾಗಲಿ ಶ್ರೀ ಮಹಾದೇವನ ನೆನೆವವನೆ ದೇವ"[೧೨೬], ಅರಿವು ಅವಗ್ರಹಿಸಿದ ಚಿತ್ತಕ್ಕೆ ಮರೆವೆಗೆ ತೆರನುಂಟೆ ?"[೧೨೭] ಎಂಬಂತಹ ಸೂತ್ರಬದ್ಧವಾದ ಮಾತುಗಳು ಗಮನ ಸೆಳೆಯುತ್ತವೆ. ಗೋಣಿಮಾರಯ್ಯನ ವಚನಗಳು ಸಣ್ಣ ಬರಹದ ಗುರುಬಸವರಾಜ ದೇವರ (ಸು.೧೭ ನೇ ಶ) 'ಶರಣ ಚಾರಿತ್ರದ ವಚನಗಳು', ಗುರುಶಂಕರ ಸ್ವಾಮಿಗಳ (ಸು. ೧೭ ನೇ ಶ.) 'ಜ್ಞಾನ ಷಟ್‌ಸ್ಥಲ ಸಾರ' ಎಂಬ ವಚನ ಸಂಕಲನಗಳಲ್ಲಿ ಸ್ಥಾನ ಪಡೆದಿರುವುದರಿಂದ ಈತ ೧೭ ನೇ ಶತಮಾನದ ಆರಂಭದಲ್ಲಿದ್ದಿರಬೇಕು ಎಂದು ಊಹಿಸಬಹುದು. ಕುಮಾರ ಚೆನ್ನಬಸವನ 'ಪುರಾತನರ ಚರಿತೆ' ಯಲ್ಲಿ ಬರುವ ಗೋಣಿಯ ಮಲ್ಲಯ್ಯ ಇವನಿಂದ ಭಿನ್ನನೊ, ಅವನೇ ಇವನೋ ತಿಳಿಯದು.[೧೨೮] ಎಂದು ಡಾ॥ವೀರಣ್ಣ ರಾಜೂರ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ.

೧೫. ನಿರಾಲಂಬ ಪ್ರಭುದೇವ (ಸು.೧೭ನೇ ಶ)

ಕ್ರಿ.ಶ. ಸು.೧೭೦೦ ರಲ್ಲಿದ್ದ ಈ ವಚನಕಾರನ ೧೪ ವಚನಗಳು ದೊರೆತಿವೆ. "ನಿಸ್ಸಂಗ ನಿರಾಳ ನಿಜಲಿಂಗ ಪ್ರಭುವೆ" ಈತನ ವಚನಾಂಕಿತವಾಗಿವೆ. ಅಂಕಿತದಲ್ಲಿರುವ 'ನಿಜಲಿಂಗ ಪ್ರಭು' ಈತನ ಗುರುವಿನ ಹೆಸರಾಗಿದೆ. ಇದಲ್ಲದೆ ಈತನ ಬಗ್ಗೆ ಮತ್ತಾವ ವಿಚಾರಗಳು ದೊರೆಯುವುದಿಲ್ಲ. ಈತನ ವಚನಗಳನ್ನು 'ಶಿವಭಕ್ತಿ ಪಂಚಾಂಗ ವಚನ' ವೆಂದು ಕರೆಯಲಾಗಿದೆ. ಶಿವಾಚಾರ ಪಥವನರಿಯದೆ ಪಂಚಾಂಗ ಕೇಳುವವರನ್ನು ಕಟುವಾಗಿ ಟೀಕಿಸುವುದೇ ಈ ವಚನಗಳ ಮುಖ್ಯ ಉದ್ದೇಶವಾಗಿದೆ.

ವೀರಶೈವನಾದವನು ಪಂಚಾಂಗ ಕೇಳಬಾರದು. ಆತನಿಗೆ ಶುಭ ಅಶುಭ ಸೂತಕ ಇರುವುದಿಲ್ಲ. ವೀರಶೈವನು ಸೂತಕನಾದರೆ ಆತನ ಗುರುಲಿಂಗ-ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಶಿವಮಂತ್ರಗಳೂ ಹೊಲೆಯಾಗುತ್ತವೆ ಎಂಬುದನ್ನು

---

೧೨೫. ವೈ.ಸಿ.ಭಾನುಮತಿ (ಸಂ) 'ವಚನ ಸಂಕಲನ ಸಂಪುಟ-೫' ಪುಟ-೫ ವಚನ-೧೪
೧೨೬. ವೈ.ಸಿ.ಭಾನುಮತಿ (ಸಂ) 'ವಚನ ಸಂಕಲನ ಸಂಪುಟ-೫' ಪುಟ-೧ ವಚನ-೧
೧೨೭. ವೈ.ಸಿ.ಭಾನುಮತಿ (ಸಂ) 'ವಚನ ಸಂಕಲನ ಸಂಪುಟ-೫' ಪುಟ-೧೨ ವಚನ-೩೬
೧೨೮. ಡಾ॥ ವೀರಣ್ಣ ರಾಜೂರ 'ಬಸವೋತ್ತರ ಯುಗದ ವಚನಕಾರರು' ಪುಟ-೮೪

"–ಹಡೆದರೆ ಹೊಲೆ, ಮುಟ್ಟಾದರೆ ಹೊಲೆ
ಎಂದು ಸಂಕಲ್ಪಿಸಿ ಕೊಂಬುವಿರಿ
ನಿಮ್ಮ ಮನೆ ಹೊಲೆಯಾದರೆ , ನಿಮ್ಮ ಗುರು ಕೊಟ್ಟ ಲಿಂಗವೇನಾಯಿತು?
ವಿಭೂತಿ ಏನಾಯಿತು ? ರುದ್ರಾಕ್ಷಿ ಏನಾಯಿತು ?
ಮಂತ್ರವೇನಾಯಿತು ? ಪಾದೋದಕ ಪ್ರಸಾದವೇನಾಯಿತು ?
ನಿಮ್ಮ ಶಿವಾಚಾರವೇನಾಯಿತು ?
ನೀವೇನಾದಿರಿ ಹೇಳಿರಣ್ಣ– ?"೧೨೯

ಎಂದು ಅರ್ಥಗರ್ಭಿತವಾಗಿ ಪ್ರಶ್ನಿಸಿದ ವಚನಕಾರ ಪಂಚಾಂಗದ ಹಾಗೂ ಪಂಚಾಂಗ ಹೇಳುವವರು ಶೋಷಣೆಯ ಪ್ರತೀಕವಾಗಿರುತ್ತಾರೆ. ಎನ್ನುತ್ತಾನೆ. ಪಂಚಾಂಗದ ಬಗ್ಗೆ ಈತನಿಗಿರುವ ಅಭಿಪ್ರಾಯವೇ ಬೇರೆ. ವಿಪ್ರರು ಹೇಳುವ ಪಂಚಾಂಗವನ್ನು ತಿರಸ್ಕರಿಸುವ ಈತ ನಿಜವಾದ ಪಂಚಾಂಗ ಯಾವುದು ಎಂಬುದನ್ನು ತಿಳಿಸುತ್ತಾನೆ.

"ಪಂಚ ಅಂದರೆ ಐದು. ಅಂಗವೆಂದರೆ ದೇಹ
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ
ಈ ಐದು ಕೂಡಿ ದೇಹವಾಯಿತ್ತು
ಆ ದೇಹದೊಳಗೆ ಕಾಮ, ಕ್ರೋಧ, ಲೋಭ, ಮೋಹ, ಮದ
ಮತ್ಸರದಚ್ಚು ಮುರಿಯುವುದೆ ಪಂಚಾಂಗ
ಸತ್ವ ರಜ ತಮವೆಂಬ ಅಹಂಕಾರವ ತುಳಿಯುವುದೇ ಪಂಚಾಂಗ
ಅಣವಮಲ ಮಾಯಾಮಲ ಕಾರ್ಮಿಕಮಲವ
ಮುಟ್ಟದಿರುವುದೇ ಪಂಚಾಂಗ.
ತನ್ನ ಸತಿಯ ಸಂಗವಲ್ಲದೆ ಪರಸತಿಯರ
ಮುಟ್ಟದಿರುವುದೇ ಪಂಚಾಂಗ
ತನ್ನ ಇಷ್ಟಲಿಂಗವಲ್ಲದೆ ಭೂಮಿಯ ಮೇಲೆ ಇಟ್ಟು
ಪೂಜೆಯ ಮಾಡುವ ದೇವರಿಗೆ
ಕೈಮುಗಿಯದಿರುವುದೇ ಪಂಚಾಂಗ
ಜಾತಿ ಸೂಚಕ ಜನನ ಸೂತಕ ಉಚ್ಚಿಷ್ಟಸೂತಕ
ಮೃತ್ಯುಸೂತಕ ರಜಸ್ಸೂತಕ
ಈ ಪಂಚಸೂತಕವ ಶರಣರು ಕಳೆವರಾಗಿ
ನಮ್ಮ ಶಿವಭಕ್ತರಿಗೆ ಸಲ್ಲದೆಂಬುದೇ ಪಂಚಾಂಗ
ಲಿಂಗಾಚಾರ, ಸದಾಚಾರ ಭೃತ್ಯಾಚಾರ
ಶಿವಾಚಾರ ಗಣಾಚಾರವೇ ಪಂಚಾಂಗ
ಗುರುಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದ, ಗಣಪ್ರಸಾದ
ಮಹಾಪ್ರಸಾದವ ಕೊಂಬುವುದೇ ಪಂಚಾಂಗ

---

೧೨೯. ಬಿ.ಆರ್.ಹಿರೇಮಠ್ (ಸಂ) 'ವಚನ ಸಂಕಲನ ಸಂಪುಟ–೧.' ವಚನ–೧. ಪುಟ–೫೦

ಇಂತೀ ಪಂಚಾಂಗದ ನಿಲವನರಿಯದೆ
ಪಂಚ ಸೂತಕದೊಳಗೆ ಹೊಡೆದಾಡುವ ಪಂಚಮಹಾ ಪಾತಕರ
ಎನಗೊಮ್ಮೆ ತೋರದಿರಯ್ಯ
ನಿಸ್ಸಂಗ ನಿರಾಳ ನಿಜಲಿಂಗ ಪ್ರಭುವೆ"[೧೩೦]

ಎಂದು ಇನ್ನು ಮುಂದುವರೆದು 'ಎಚ್ಚರವನರಿವುದೇ ಪಂಚಾಂಗ, ಇಚ್ಚೆಯೊಳಗಿರುವುದೇ ಪಂಚಾಂಗ,' 'ಸದ್ಭಾವ ದುರ್ಭಾವದ ನಿರಾಳ ಹಸ್ತವನರಿವುದೇ ಪಂಚಾಂಗ,' 'ಸಜ್ಜನ ಶುದ್ಧ ಶಿವಾಚಾರದಲ್ಲಿ ಆಚರಿಸುವುದೆ ಪಂಚಾಂಗ,' 'ಸಕಲ ಪದಾರ್ಥವ ಇಷ್ಟ ಲಿಂಗಕ್ಕೆ ಕೊಟ್ಟು, ಆಲಿಂಗ ಪ್ರಸಾದ ಶೇಷವ ಸಾವದಾನದಿಂದ ಸರ್ವಾಂಗದಲ್ಲಿ ಸಂಬಂಧಿಸುವುದೇ ಪಂಚಾಂಗ', 'ಪಂಚಾಚಾರದಲ್ಲಿ ಇರಬಲ್ಲಡೆ ಪಂಚಾಂಗ', 'ಪಂಚಾಕ್ಷರದೊಳಗೆ ಪಂಚಾಂಗವಡಗಿತ್ತಾಗಿ, ಪಂಚಾಕ್ಷರವ ತಿಳಿದೆನಾಗಿ, ಎನಗೆ ಪಂಚಾಂಗ ನಾಸ್ತಿ' ಎನ್ನುತ್ತಾನೆ. ಇದನರಿಯದೆ 'ಹಗಲಿರುಳು ಅನಂತ ಸೂತಕ ಪಾತಕಂಗಳಲ್ಲಿ ಮುಳುಗಿ ಮತಿಗೆಟ್ಟು ಪಂಚಾಂಗ ಬೊಗಳುವವರು ಭ್ರಷ್ಟಮತಿಗಳು' ಎನ್ನುತ್ತಾನೆ.

ಇಷ್ಟಲಿಂಗ ಬಿಟ್ಟು ಇತರ ದೇವರುಗಳನ್ನು ಪೂಜಿಸುವವರನ್ನು ನಿಂದಿಸುತ್ತಾನೆ. ಈತನ ದೃಷ್ಟಿಯಲ್ಲಿ ಶಿವಭಕ್ತಿಯೇ ನಿಜವಾದ ಪಂಚಾಂಗ. ಹೀಗೆ ನಿರಾಲಂಭ ಪ್ರಭುದೇವನು ಪಂಚಾಂಗಕ್ಕೆ ಹೊಸ ವ್ಯಾಖ್ಯಾನ ನೀಡಿದ್ದಾನೆ. ಈತನ ವಚನಗಳು ತಾತ್ವಿಕವಾಗಿದ್ದರೂ ಸರಳವಾಗಿ ಗಮನ ಸೆಳೆಯುತ್ತವೆ. ತನ್ನ ಕಾಲದ ಜನರ ಮೂಢನಂಬಿಕೆಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದ ಈತ ಅವುಗಳನ್ನು ಕಠೋರವಾಗಿ ಟೀಕಿಸುವ ಮೂಲಕ ದೂರ ಮಾಡಲು ಪ್ರಯತ್ನಿಸಿದ್ದಾನೆ.

೧೬. ಪರಂಜ್ಯೋತಿ (ಸು.೧೬೦೦)

'ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ' ಎಂಬ ಅಂಕಿತದ ವಚನಗಳ ಹಸ್ತಪ್ರತಿಯಲ್ಲಿ 'ಪರಂಜೋತಿಯವರ ವಚನ' ವೆಂದು ಕರೆದಿರುವುದರಿಂದ, ಈ ವಚನಕಾರನ ಹೆಸರು 'ಪರಂಜ್ಯೋತಿ' ಎಂಬುದು ಸ್ಪಷ್ಟವಾಗುತ್ತದೆ. ಈ ವಚನಕಾರನ ಜೀವನ ಚರಿತ್ರೆಯ ಯಾವ ಸಂಗತಿಗಳು ಗೊತ್ತಾಗುವುದಿಲ್ಲ. ಕ್ರಿ.ಶ. ಸು.೧೭೦೦ ಕಾಲಾವಧಿಯ[೧೩೧] ಪರಂಜ್ಯೋತಿಯ ೧೩ ವಚನಗಳು ಮಾತ್ರ ಲಭಿಸಿವೆ.

ಪ್ರೌಢದೇವರಾಯನ ಕಾಲದಲ್ಲಿ 'ಪರಂಜ್ಯೋತಿಯತಿ' ಎಂಬ ಒಬ್ಬ ಕವಿ ಇದ್ದನೆಂಬ ವಿಷಯ ತಿಳಿಯುತ್ತದೆ. ಆದರೆ ಆತ ಬ್ರಾಹ್ಮಣ ಕವಿ. ಹೀಗಾಗಿ ಹೆಸರಿನ ಸಾಮ್ಯತೆಯನ್ನು ಬಿಟ್ಟರೆ ಇಬ್ಬರಿಗೂ ಯಾವುದೇ ಸಂಬಂಧವಿಲ್ಲವೆಂದೇ ಹೇಳಬೇಕಾಗುತ್ತದೆ.[೧೩೨] ವಚನಗಳು ಅಂಕಿತವನ್ನು

೧೩೦. ಬಿ.ಆರ್. ಹಿರೇಮಠ,(ಸಂ) 'ವಚನ ಸಂಕಲನ ಸಂಪುಟ-೧.' ವಚನ-೨ ಪುಟ-೫೧
೧೩೧. ಈತನ ವಚನಗಳ ವಸ್ತು, ಶೈಲಿಗಳ ಹಿನ್ನೆಲೆಯಲ್ಲಿ.
೧೩೨. ಡಾ॥ ವೀರಣ್ಣ ರಾಜೂರ, 'ಬಸವೋತ್ತರ ಯುಗದ ವಚನಕಾರರು,' ಪುಟ- ೧೨೨

ಪರಂಜ್ಯೋತಿ ಎಂಬುದು ವಿಶೇಷಣವೇ ಹೊರತು ಹೆಸರಲ್ಲ. ಉದಾಹರಣೆಗೆ ೫ನೇ ವಚನದಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಈತನ ಹೆಸರು ಪರಂಜ್ಯೋತಿಯಲ್ಲ, 'ವೀರ' 'ವೀರೇಶ' ಆಗಿದೆ ಅನ್ನಿಸುತ್ತದೆ. ಈ ವೀರೇಶನಾಗ ಎಂಬುವವನಿಗೆ ಗುರುವಾಗಿದ್ದಂತೆ, ಆಗುರುವೇ (ವೀರೇಶ) ಪರಂಜ್ಯೋತಿ ಸ್ವರೂಪನಾಗಿದ್ದಂತೆ, ಮಹಾವಿರಕ್ತಿ ಸಂಪನ್ನನಾಗಿದ್ದಂತೆ ವ್ಯಕ್ತವಾಗುತ್ತದೆ.[೧೩೩] 'ವರನಾಗನ ಗುರು ವೀರೇಶ ಪರಂಜ್ಯೋತಿ ಮಹಾವಿರಕ್ತಿ' ಎಂದಿದ್ದಾರೆ. ೧೩ನೇ ವಚನದಲ್ಲಿ 'ನಮ್ಮ ವೀರ ಸದ್ಗುರು ಪರಂಜ್ಯೋತಿ ಮಹಾವಿರಕ್ತಿ' ಎಂದಿದೆ. ಈ ವೀರ, ವೀರೇಶ ಸದ್ಗುರೂ ಹೌದು. ಪರಂಜ್ಯೋತಿಯ ಸ್ವರೂಪನೂ ಹೌದು ಎಂಬುದಾಗಿ ವಚನಕಾರ ತನ್ನನ್ನು ತಾನು ಚಿತ್ರಿಸಿಕೊಂಡಿದ್ದಂತೆ ಕಾಣಬರುತ್ತದೆ[೧೩೪]. ಈತನ ವಚನಗಳಿಗೆ 'ಪರಂಜ್ಯೋತಿಯರ ವಚನ'ಗಳು ಎಂಬ ಹೆಸರು ಲಿಪಿಕಾರನ ತಪ್ಪು ಕಲ್ಪನೆಯಿಂದ ಆಗಿದೆ. ಅಂಕಿತವನ್ನೇ ಹೆಸರೆಂದು ಕಲ್ಪಿಸಿಕೊಂಡಾಗ ಇಂತಹ ಸಣ್ಣ ಪುಟ್ಟ ತಪ್ಪುಗಳಾಗುತ್ತವೆ. ಪ್ರಭುದೇವರ ವಚನಗಳನ್ನು 'ಗುಹೇಶ್ವರಯ್ಯನ ವಚನಗಳೆಂದು, ಷಣ್ಮುಖ ಸ್ವಾಮಿಯ ವಚನಗಳನ್ನು 'ಅಖಂಡೇಶ್ವರನ ವಚನಗಳೆಂದು' ಕರೆದ ಉದಾಹರಣೆಗಳು ಈಗಾಗಲೇ ಇವೆ.

ಈತನ ವಚನಗಳ ಉದ್ದೇಶ ತನ್ನನ್ನು ತಾನು ತಿಳಿಯದೆ, ತನ್ನೊಳಗಿರುವ ಪರಮಾತ್ಮನ ಸ್ವರೂಪವನ್ನು ಅರಿಯದೆ, ಇತರರನ್ನು ದಾರಿ ತಪ್ಪಿಸುತ್ತ, ಅಂಧಕಾರದಲ್ಲಿ ಮುಳುಗಿರುವ, ಬದುಕಿಗಾಗಿ ವೇಷಧರಿಸಿರುವ ಢಾಂಭಿಕ ಭಕ್ತರನ್ನು ವಿಡಂಭಿಸುವುದಾಗಿದೆ. "ತನ್ನ ತಾನರಿಯದೆ, ತಾನಾರೆಂದು ತಿಳಿಯದೆ, ಉಪಾದಿಬೋಧಕ್ಕೆ ಶಿಲ್ಕಿ, ಅಜ್ಞಾನದೊಳು ಬಿದ್ದು ಸಾವ ಬ್ರಾಂತರಿಗೆ ಸ್ವಯಂಭು ದೊರಕಲಾರ", ಆತ "ದೇಹವಿಡಿದು ವಿದೇಹಿಯಾದ ಮಹಾತ್ಮಂಗೆ ದೇಹವಿಲ್ಲ, ಮಾಯೆಯಿಲ್ಲ. ನಿರಾಭಾರಿ ನಿರ್ಗುಣನಾದ ಮಹಾತ್ಮನಿಗೆ ನೋಟವಿಲ್ಲ, ಕೂಟವಿಲ್ಲ. ಆಟವಿಲ್ಲ, ಪಾಠವಿಲ್ಲ, ಸಂಜ್ಞೆಯನ್ನು ಕೊಡುತ್ತಾನೆ. ಶಿವನ ಕಂಡೆವೆಂದು ನುಡಿವವರು ವೇಷ ಡಂಭಕರು ಇಂಥವರಿಗೆ ಶಿವ ದರ್ಶನ ಸಾಧ್ಯವಿಲ್ಲ" ಎನ್ನುತ್ತಾನೆ. 'ಅರಿವಿನಿಂದಲೆ ಪರಮಾತ್ಮನನ್ನು ಅರಿಯಲು ಸಾಧ್ಯ. ಅರಿವೆ –ನಿಜವಾದ ಗುರು' ಎಂಬ ತನ್ನ ನಿಲುವನ್ನು ತಿಳಿಸುತ್ತಾನೆ.

ಮಾಯೆಯ ಬಗ್ಗೆ ವಚನಕಾರನ ಅಭಿಪ್ರಾಯ
"ಮುಟ್ಟಿ ಮುಟ್ಟಿ ನೋಡುವುದು ಮಾಯೆ
ಕರುಣದಿಂದ ಕಂಡದ್ದು ಮಾಯೆ
ಮನದಿಚ್ಛೆ ಅರಿಯುವುದು ಮಾಯೆಯಲ್ಲವೆ?
ತನುಮನ ಹಿಡಿದು ನೋಡಿದುದೆಲ್ಲ ಮಾಯೆಯಲ್ಲವೆ ?
ದೇಹವಿಡಿದು ವಿದೇಹಿಯಾದ ಮಹಾತ್ಮಂಗೆ
ದೇಹವಿಲ್ಲ , ಮಾಯೆಯಿಲ್ಲ"ವೆಂದು ಹೇಳುತ್ತಾನೆ (ವ–೨)

---

೧೩೩. ಈತನ ಅಂಕಿತದಲ್ಲಿ ಗುರುವೀರನೆ ಪರಂಜ್ಯೋತಿ ಎಂಬ ಪದಗಳಲ್ಲಿ 'ಗುರುವೀರನೆ' ಎಂಬಲ್ಲಿ ನಿಶ್ಚಿತಾರ್ಥವನ್ನು ಹೇಳುವ ಖಚಿತತೆಯನ್ನು ಹೇಳುವ ಅವಧಾರಣೆಯ 'ಎ' ಕಾರ ಬಂದಿದೆ. ಆದ್ದರಿಂದವರನಾಗನ ಗುರುವಾದ 'ವೀರ'ನೇ ಪರಂಜ್ಯೋತಿ, ಮಹಾವಿರಕ್ತಿ ಸಂಪನ್ನ ಹಾಗಾಗಿ ಈತನ ಹೆಸರು

೧೩೪. ವೀರಣ್ಣ ರಾಜೂರ ಅವರು ಈ ಅಂಕಿತದಲ್ಲಿ ನಾಗ–ವೀರ–ಪರಂಜ್ಯೋತಿ ಎಂಬ ಮೂರು ಹೆಸರುಗಳು ಅಡಕವಾಗಿದ್ದಂತೆ ತೋರುತ್ತದೆ. ಹಾಗಿದ್ದರೆ ನಾಗನ ಗುರು–ವೀರ. ವೀರನ–ಗುರು–ಪರಂಜ್ಯೋತಿ ಅಥವಾ ಪರಂಜ್ಯೋತಿಯ ಶಿಷ್ಯ ವೀರ. ವೀರನ ಶಿಷ್ಯ –ನಾಗ ಎಂದು ಹೇಳಬೇಕಾಗುತ್ತದೆ. ಮೂರಲ್ಲ ಎರಡೇ ಹೆಸರು ಇವೆ ಎಂದು ಕಲ್ಪಿಸಿಕೊಂಡರೆ ನಾಗನ ಗುರು– ವೀರ, ಅವನು ಪರಂಜ್ಯೋತಿ ಸ್ವರೂಪ ಮಹಾವಿರಕ್ತಿ ಸಂಪನ್ನ ಎಂದು ಅರ್ಥೈಸಿದರೆ ವಚನಗಳ ಕರ್ತೃ 'ನಾಗ' ಅವನ ಗುರು 'ವೀರ' ಎಂದಾಗುತ್ತದೆ ಪರಂಜ್ಯೋತಿ ಎಂಬುದು ಹೆಸರಲ್ಲ. ಗುರುವಿಗೆ ಹಚ್ಚಿದ ವಿಶೇಷಣ ಎಂದು ಹೇಳಬೇಕಾಗುತ್ತದೆ.(ಬ.ಯು.ವ ಪುಟ–೧೨೩)

ತಮ್ಮ ಉದರ ಪೋಷಣೆಗಾಗಿ ಶಿಷ್ಯರನ್ನು ಹಾದಿ ತಪ್ಪಿಸುವ ಗುರುಗಳ ವಿಡಂಭನೆ ಹೀಗಿದೆ.

"ಆ ಶಿಷ್ಯಂಗೆ ಮನ ಮುಖ್ಯವಾದ ಬೋಧೆಯ ಬೋಧಿಸಿ
ಆತಂಗೆ ಕಟ್ಟಳೆಯ ಮಾಡಿ
ಹೆಣ್ಣು ಹೊನ್ನು ಮಣ್ಣು ಮೂರು
ಗುರುವಿಗೆ ಅರ್ಪಿತ ಮಾಡಬೇಕೆಂದು ನುಡಿಯಲಾಗಿ
ಅವನು ವಿಕಾರಿಯಾಗಿ
'ಸ್ವಾಮಿ– ಹೆಣ್ಣು, ಹೊನ್ನು–ಮಣ್ಣು ಸರ್ವವೂ ನಿಮಗೆ
ಸಮರ್ಪಣವೆಂದು' ನುಡಿಯಲಾಗಿ
ಬೋಧಿಸುವ ಆ ಗುರುವಿಂಗೆ
ಒಂದು ವಿಕಾರ ಹೋಗಿ, ಐದು ವಿಕಾರಗಳಾಗಿ
ಪಂಚಭೂತ ಮದಂಗಳೇರಿ ತನು ವಿಕಾರಿಯಾಗಿ
ಮನ ವಿಕಾರಿಯಾಗಿ ಆಚಾರ ವಿಚಾರ ಬಿಟ್ಟು
ಅನಾಚಾರಿಯಾಗಿ ಕಚ್ಚಡಕನಾಗಿ
ಕೊಳ್ಳದ ಆಹಾರಂಗಳ ಕೊಂಡು ಕೆಟ್ಟ
ವೇಷ ಡಂಭಕರ ತೋರದಿರಯ್ಯ" (ವ–೧೧)

ಈತನ ಕೆಲವು ಹೇಳಿಕೆಗಳು ಸೂತ್ರಬದ್ಧವಾದ ಅನುಭವೋಕ್ತಿಗಳೆನಿಸಿವೆ. 'ತಾನಳಿದ ಮೇಲೆ ಮುಕ್ತಿ ಯಾರಿಗೆ ಹೇಳಾ?,' 'ಲಿಂಗಕ್ಕೆ ಅಳಿವು ಬೆಳವುಂಟೆ ಕಾಣಾ?', 'ಕಾಯವಿಡಿದು ಮಾಯಾ ಬಿಡಬೇಕೆಂದು ಹೆಡ್ಡಂಗೆ ಮಾಯಾ ಬಿಡುವುದು ಹೆಂಗಯ್ಯಾ?', 'ಮುಳುಗಿದವರು ಮುಳುಗಿಸುವವರ ಎಬ್ಬಿಸುವರಾ ಏನು ಬಲ್ಲರು ಹೇಳಾ?', 'ನದಿಯ ಸುಳಿಯಲ್ಲಿ ಬಿದ್ದ ಹುಳದಂತೆ' ಇಂತಹ ಮಾತುಗಳಲ್ಲಿ ವಚನಕಾರನ ಪ್ರತಿಭೆ ಪ್ರಕಾಶಮಾನಕ್ಕೆ ಬಂದಿದೆ.

ಈವರೆಗೆ ಉಪಲಬ್ದವಾದ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪರಂಪರೆಯವರೆಂದು ಗುರುತಿಸಲಾದ ವಚನಕಾರರು ಮತ್ತು ಅವರ ವಚನಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿರುತ್ತೇನೆ ವಚನಗಳು ಮಾತ್ರ ದೊರಕಿದ್ದು, ಕರ್ತೃವಿನ ಹೆಸರು ಲಭ್ಯವಾಗಿಲ್ಲದ, ತೋಂಟದಾರ್ಯ ಪರಂಪರೆಯವರೆಂದು ಹಿರಿಯರು ಭಾವಿಸಿದ ಕೆಲವು ಅಜ್ಞಾತ ವಚನಕಾರರ ಮತ್ತು ಅವರ ವಚನಗಳ ಪರಿಚಯವನ್ನು ಈ ಕೆಳಗೆ ಮಾಡಲಾಗಿದೆ.

೧೭. ಅಜ್ಞಾತ ವಚನಕಾರ–೧

ಈತನ ವಚನಗಳ ಅಂಕಿತ 'ಜಂಗಮ ಲಿಂಗಪ್ರಭುವೆ'. ಈ ಅಂಕಿತಗಳಿರುವ ೧೦ವಚನಗಳ ಕೃತಿಗೆ 'ಕುಸ್ತಿ ಆಗಮದ ವಚನ'ಗಳೆಂದು ಕರೆಯಲಾಗಿದೆ. 'ಕುಸ್ತಿ ಆಗಮ' ಹೆಸರಿನಲ್ಲಿ ಷಟ್ಪದಿ ಕಾವ್ಯದಲ್ಲಿ ಈ ವಚನಗಳು ದೊರೆಯುತ್ತವೆ. ಇವು ಸ್ವತಂತ್ರವಾಗಿಯೂ ದೊರೆಯುತ್ತವೆ 'ಕುಸ್ತಿ ಆಗಮ' ಷಟ್ಪದಿ ಕಾವ್ಯದ ಕರ್ತೃವೇ ಈ ವಚನಗಳನ್ನು ಬರೆದಿರಬೇಕೆನಿಸುತ್ತದೆ. ಆದರೆ ಇದೇ ವಚನಗಳು 'ಜಂಗಮ ಚಾರಿತ್ರ್ಯ'ದಲ್ಲಿಯೂ ಕಂಡು ಬರುವುದರಿಂದ ಈ ಅಂಕಿತದ ವಚನಗಳ ವಚನಕಾರ ನಿಜವಾಗಿಯೂ ಯಾರು ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಅಖಂಡ ಲಿಂಗದಿಂದ ಚಿದ್ರೂಪ ಆಗಿದೆ. ಲಿಂಗದಿಂದ ನಾದಬಿಂದು ಕಳೆ ಉಧ್ಭವವಾಗಿವೆ. ಇವುಗಳಿಂದಲೆ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಸದಾಶಿವರ ಉತ್ಪತ್ತಿ ಆಗಿದೆ. ಹರಿಹರ ಎಂದು ನೆನೆದರೆ ಜನನ ಮರಣ ತಪ್ಪುವುದೆ? ಶಿವಾಗಮ ಶಾಸ್ತ್ರಗಳನ್ನು ನೋಡಿದ, ಕೇಳಿದ ಮಾತ್ರಕ್ಕೆ ಶಿವನನ್ನು ಕಂಡಂತಾಯಿತೆಂದು ಶಿವಭಕ್ತರು ಹೇಳುವುದು ಸಂತೆಯ ಮಾತೆನಿಸುತ್ತದೆ.

ಇಷ್ಟಲಿಂಗದಲ್ಲಿಯೇ ಷಟ್ ಸ್ಥಲಗಳಿರುವುದರಿಂದ ಅಂಗ ಲಿಂಗವೆಂಬ ಉಭಯ ಭೇದವಿರುವುದಿಲ್ಲ. ಪಂಚ ಬ್ರಹ್ಮ ಸಂತತಿಯ ಜಂಗಮರಿದ್ದರೂ ಮುಕ್ತಿ ಕುಸ್ತಿಯ ಮಾಡುವ ಜಂಗಮವೆಲ್ಲ ಮಾಹಾಲಿಂಗವೆನಿಸುವುದು. ಜಂಗಮ ಹಾಗೂ ಲಿಂಗಗಳೆರಡೂ ಬೇರೆಯಲ್ಲ. ಜಂಗಮವೇ ಲಿಂಗ, ಲಿಂಗವೇ ಜಂಗಮ. ಇಂಥವನೆ ಜಂಗಮಲಿಂಗ, ಇಂಥ ಜಂಗಮ ಲಿಂಗೈಕ್ಯನಲ್ಲಿ ಸಚರಾಚರವೆಲ್ಲವೂ ಅಡಗಿರುತ್ತದೆಯೆಂಬ ವಿಷಯಗಳು ವಚನಗಳಲ್ಲಿರುತ್ತವೆ. ಕೃತಿಯ ಅಂತ್ಯದಲಿ 'ಆಗಮ ವಚನ' ಎಂದಿರುವುದರಿಂದ, ಇಲ್ಲಿ ತಾತ್ವಿಕ ವಿವೇಚನೆ ಪ್ರಮುಖವಾಗಿ ಕಂಡುಬರುತ್ತದೆ[೧೩೫]

೧೮. ಅಜ್ಞಾತ ವಚನಕಾರ–೨
"ನಿಜಗುರು ನಿರಾಲಂಬ ಪ್ರಭುವೆ" ಅಂಕಿತದ ವಚನಗಳು:–

ಈತನ ವಚನಗಳ ಅಂಕಿತ 'ನಿಜಗುರು ನಿರಾಲಂಬ ಪ್ರಭುವೆ' 'ನಿರಾಲಂಬ ಪ್ರಭು' ಎಂಬುದು ಈತನ ಗುರುವಿನ ಹೆಸರಾಗಿರಬಹುದು. ಈತ ತನ್ನ ವೈಯಕ್ತಿಕ ವಿಚಾರಗಳಾವುವನ್ನು ಹೇಳಿಕೊಂಡಿಲ್ಲ. ಈ ಕೃತಿಯಲ್ಲಿ ೪೧ ವಚನಗಳಿವೆ. ಅವು ದೀರ್ಘವಾಗಿವೆ.

ಈ ಕೃತಿಯಲ್ಲಿ ಗುರುಸ್ಥಲದ ಅಭಿಪ್ರಾಯ, ಗುರುಕೃಪಾವಸ್ಥೆ ಸೂಚನಾರ್ಥಂ, ಸಾಧನ ಗುಪ್ತಭಾವ ಧರ್ಮನ್ಯಾಯ, ಗುರುಶಿಷ್ಯ ನಿರೂಪ– ಎಂಬ ನಾಲ್ಕು ವಿಭಾಗಗಳಿರುತ್ತವೆ. ಪ್ರತಿಯೊಂದು ವಿಭಾಗ ಹಾಗು ಮಧ್ಯದಲ್ಲಿ ಸೂತ್ರರೂಪದ ಗದ್ಯವಿದೆ. ಗುರುಸ್ಥಲದ ಅಭಿಪ್ರಾಯ ಭಾಗದಲ್ಲಿ ಗುರುಕಾರುಣ್ಯದ ಮಹತ್ವವನ್ನು 'ಗುರು ಕರುಣದಿಂದ ನಾದಬಿಂದು ಕಳಾ ಚೈತನ್ಯಗೊಂಡಿತು', 'ಕತ್ತಲಿಲ್ಲದ ಬೆಳಗು ನೀನಲ್ಲವೆ ಗುರುವೆ?' 'ಗುರು ಕರುಣದಿಂದ ಹೆಣ್ಣು ಹೊನ್ನು ಮಣ್ಣು ಎಂಬ ತ್ರಿವಿಧ ವಸ್ತುಗಳು ಬಣ್ಣಗೆಟ್ಟು ತಾಪತ್ರಯಾಗ್ನಿಯಲ್ಲಿ ನೊಂದು ಬೆಂದುವು'. ಎಂದು ಹೇಳುತ್ತಾನೆ.

ಎರಡನೆ ಭಾಗದಲ್ಲಿ
"ಗುರು ಕೃಪಾವಸ್ಥೆಯನು ಪಡೆದನುಭವಿಸುವಂಥ
ಮಹಾನುಭವಿಗಳ ಸಯಸಂದ ಆಚರಣೆಯ ವಿವರಮಂ
ಆದಿ ಬೀಜಾಕ್ಷರಮಂ ಗುರುದೈವವೆಂದು
ಆಧಾರವೆಂಬ ಅನಾದಿ ಪರಶಿವನೆಂದು
ಮೂಲ ಮಹಾ ವಾಕ್ಯಮಂತದಿಂದ ಅನುಸ್ಮರಣೆಯ ಮಾಡಿ
ಸಾನುರಾಗದಿಂ ಭಜನೆಯಂ ಮಾಡಿ––
ಕಡುದುಃಖದಿಂದ ಸುಡುಗಾಡ ಮಾರ್ಗದಲ್ಲಿ
ಹೊಂದಿಕೊಂಡು ಇರುತಿಹನು[೧೩೬]

ಗುರುವೆ ಪರಶಿವನಾಗಿ, ಪರಶಿವನೆ ಗುರುವಾಗಿ ವಚನಕಾರನಿಗೆ ಕಂಡುಬರುತ್ತಾನೆ. ಕೃತಿಯ ಆರಂಭದಲ್ಲಿ "ಹರಸುರ ಬ್ರಹ್ಮಾದಿಗಳಿಗೆ ಒಡೆಯ ನೀನೆ, ಹರಹರಶಂಕರಾ ಗುರುವೇ ನಮೋ ನಮೋ, ಗೌರಿವಲ್ಲಭ ಮೃತ್ಯುಂಜಯ ಗುರುವೇ ನಮೋ ನಮೋ , ಪರಮೇಶ್ವರಾಯ ಪುಣ್ಯಾಯ ಗುರುವೆ ನಮೋ ನಮೋ" ಎಂದು ಗುರುವಿನ ಸ್ತುತಿ ಮಾಡುತ್ತಾನೆ.

---

೧೩೫. ಮಾಹಿತಿ : ಡಾ॥ ಬಿ.ಆರ್. ಹಿರೇಮಠ,(ಸಂ) 'ವಚನ ಸಂಕಲನ ಸಂಪುಟ–೧' ಪ್ರಸ್ತಾವನೆ, ಪುಟ– xii

೧೩೬. ಸಂ. ಡಾ॥ ಬಿ.ಆರ್. ಹಿರೇಮಠ,(ಸಂ) 'ವಚನ ಸಂಕಲನ ಸಂಪುಟ–೧,' ವಚನ–೯ ಪುಟ–೧೩೨–೧೩೩.

[illegible]

"-- ಎಲೆ ಮಗನೆ ಬಾ ಎಂದು ಕರೆಯಲು
ಎನ್ನ ಬಾಳುವೆ ನೋಡಿದೆಯಾ
ಕರೆದ ಮಾತ್ರಕೆ ಸಮಾನವಾಗದಾಯ್ತು
ಆದರಾಗಲಿ ಆ ಅಧಮ ಚಾಂಡಾಲರು
ಏನೆಂಬುವರೆನಗೆ ಕೇಳಿದೆಯಾ ? ಕೂಳಗುದಗನೆಂಬುವರು"
ಮಾದಾರ ಚೆನ್ನಯ್ಯನೆಂಬ ಶಿವಶರಣನ
ಅಂಬಲಿ ಸವಿದು ಕೂಳಗುದಗನಲ್ಲದೆ
ಇಂಥ ಹಲವು ಮಾದಿಗರ ಭಕ್ತರ ಮನೆಯಲ್ಲಿ
ತಿರಿದುಂಡು ಕೂಳಗುದಗನಲ್ಲವು
ಬೋಳಶಂಕರ ನಾನಲ್ಲವು, ಎನ್ನನು ಬಹಳದರಿದ್ರನೆಂದು ಹೇಳುವರು
ವಾದ ವಾಕ್ಯಗಳಲ್ಲಿ ನಾನು ದರಿದ್ರ-" (ವ-೨೨)

ಹೀಗೆ ಶ್ರೀಗುರು ತನ್ನ ಹಾಗು ತನ್ನ ಭಕ್ತರ ನಡುವಿನ ಕಥೆಯನ್ನು ಶಿಷ್ಯನಿಗೆ (ಭಗವಂತ-ಭಕ್ತನಿಗೆ) ಬೋಧೆ ಮಾಡುವುದನ್ನು ಈ ವಚನ ಚಿತ್ರಿಸುತ್ತದೆ. ಗುರು ಶಿಷ್ಯ ನಿರೂಪ ಭಾಗದಲ್ಲಿ ಪರಶಿವನು ತನ್ನ ಶಕ್ತಿ, ಭಕ್ತಿ, ಭಕ್ತರ ಕಥೆಯ ಜೊತೆ ಅನ್ಯರ, ವಿಡಂಭಕರ, ಕುಭಕ್ತರ, ಅನ್ಯಮತಿಯರ ಬಗ್ಗೆ ಹೇಳುತ್ತಾ ಹೋಗುತ್ತಾನೆ.

" ಅಪ್ಪಯ್ಯ ಗುರುರಾಯನೆ ಕೇಳು
ಈ ಅಳಿಯ ಅಭಿಮಾನವನು ಹರಿಸೆ
ನಿನಗಲ್ಲದೆ ಇಂಥಮೂಳ ಪರಮ ಚಾಂಡಾಲ
ಅಜ್ಞಾನ ಮೂಢಾತ್ಮರು ಬಲ್ಲರೆ? ಅರಿಯರು
ಪಂಥವ ಮಾಡುವರಯ್ಯ, ಸಂತೆಯ ಸೂಳೆ ಮಕ್ಕಳಿವರು
ಮತ್ತಿನ ಭಕ್ತರಲ್ಲದೆ ಚಿಂತೆ ಮಾಡುತಿರ್ಪರಯ್ಯ
ಇಂತಿವರೊಳಗೆ ನಾನೆಂದು ಜೀವಿಸುವೆನಯ್ಯಾ ?--
-- ಮತ್ಸರವೆಂಬ ಛಲವನು ಗಟ್ಟಿಗೊಂಡು ಎಚ್ಚರಿಲ್ಲದೆ
ಹುಚ್ಚು ಹುಚ್ಚಾಗಿ ಬೋಗಳುವರಯ್ಯ ನಿಮ್ಮನರಿಯದಧಮರು " (ವ-೨೪)

ಶಿವಭಕ್ತರಲ್ಲದವರ ಮಧ್ಯೆ ಬದುಕುವ ಕಷ್ಟವನ್ನು ನಿವೇಧಿಸಿಕೊಳ್ಳುವ ಪರಿ ವಿಶಿಷ್ಟವಾಗಿದೆ. ಹಾಗೆಯೆ ನಿಷ್ಠುರವಾಗಿಯೂ ಇದೆ. ಈ ರೀತಿಯ ವಚನಗಳು ಕೃತಿಯ ಉದ್ದಕ್ಕೂ ಇವೆ. ವಚನಕಾರನ ಮನೋಭಾವ ಇಲ್ಲಿ ವ್ಯಕ್ತವಾಗುತ್ತದೆ. ಗುರುಕಾರುಣ್ಯ, ಗುರುಕೃಪೆ, ಗುರುಬೋಧೆ ಮೊದಲಾದ ವಿಷಯಗಳೆ ಇಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ವಚನಗಳು ಗದ್ಯ ಶೈಲಿಯಿಂದ ಕೂಡಿವೆ. ಸಮಕಾಲೀನ ಭಾಷೆಯ ಬಳಕೆಯಿಂದ, ಕ್ಲೀಷ್ಟತೆಯಿಲ್ಲದೆ ಸರಳವಾಗಿವೆ. ಸುಲಭವಾಗಿ ಅರ್ಥವಾಗುವಂತಿವೆ.

- - -

೧೯. ಅಜ್ಞಾತ ವಚನಕಾರ –೩

ಈತನ ಕೃತಿ "ನಂಜುಂಡ ಶಿವ ಅಂಕಿತದ ವಚನಗಳು". ಈ ಕೃತಿಯ ಕರ್ತೃಯಾರೆಂಬುದು ತಿಳಿದು ಬರುವುದಿಲ್ಲ. ೫ ಕಂದ ಪದ್ಯಗಳು, ೫ ಸ್ವರವಚನಗಳು, ೨೨ ಬೊಲ್ಲೆಯ ವಚನಗಳಿಂದ ಕೂಡಿದ ವಿಶಿಷ್ಟ ಕೃತಿ ಇದಾಗಿದೆ. ಕಂದ ಪದ್ಯಗಳಲ್ಲಿ 'ನಂಜುಂಡಶಿವ', ಸ್ವರವಚನಗಳಲ್ಲಿ 'ನಂಜುಗೊರಳ ಶಿವ', ಬೊಲ್ಲೆಯ ವಚನಗಳಲ್ಲಿ 'ಪರಮಗುರುವೆ ನಂಜುಂಡಶಿವ' ಅಂಕಿತಗಳಿರುತ್ತವೆ. ವೀರಶೈವ ತತ್ವಗಳಾದ ಷಟ್ ಸ್ಥಲ, ಅಷ್ಟಾವರಣ, ಪಂಚಾಚಾರ ಮೊದಲಾದ ವಿಷಯಗಳನ್ನು ವಿವರಿಸುವಾಗ ವಚನಗಳ ಮಧ್ಯದಲ್ಲಿ ವಿಪುಲ ಸಂಸ್ಕೃತ ಶ್ಲೋಕಗಳನ್ನು ಪ್ರಮಾಣ ಬದ್ಧವಾಗಿ ಬಳಸಲಾಗಿದೆ. ಇದೊಂದು ವೀರಶೈವ ತತ್ವ ಪ್ರಧಾನ ಕೃತಿಯಾಗಿದೆ. ಕಂದ, ಸ್ವರವಚನ, ಹಾಗೂ ವಚನಗಳಲ್ಲಿ ವೀರಶೈವ ತತ್ವ ನಿರೂಪಣೆಯೆ ವಸ್ತುವಾಗಿದೆ.

"ಅದೆಕೋ ನೀ ನಿನ್ನನರಿಯೆ
ಚಿದಾಕಾಶವಾನೆಂದು ತಿಳಿಯಲೊಲ್ಲದೆ ಮತ್ತ
ಅಂಗದ ಮೇಲೆ ಘನಲಿಂಗವ ಪ್ರತಿಷ್ಠೆ ಮಾಡಿ
ಹಿಂಗದಿರು ನಿನಗನ್ಯೋನ್ಯವಿಲ್ಲೆಂದು
ಮಂಗಳಮಯನು ನಿಜಗುರುವರುಹಿದ ಬಳಿಕ
ಲಿಂಗ ವಂಗವೆಂಬುಭಯದರಿವರಿವಾನೆಂದು" –(ವ–೨)
" ನನೆಯೊಳಗಣ ಪರಿಮಳದಂತೆ
ಶಿಲೆಯೊಳಗಣ ಪಾವಕನಂತೆ
ಬೀಜದೊಳಗಣ ವೃಕ್ಷದಂತೆ
ಕ್ಷೀರದೊಳಗಣ ಘೃತದಂತೆ
ತಿಲದೊಳಗಣ ತೈಲದಂತೆ
ಸುಪ್ತಿಯೊಳಗಣ ಎಚ್ಚರಿನಂತೆ
ನೀನಿದ್ದುದನಾರು ಬಲ್ಲರುಹೇಳಾ
ಪರಮಗುರು ನಂಜುಂಡ ಶಿವಾ" (ವ–೬)

ಈ ವಚನ ಅಕ್ಕಮಹಾದೇವಿಯ ವಚನದ[೧೩೭] ಪಡಿಯಚ್ಚಿನಂತಿದೆ. ಈ ಅಜ್ಞಾತವಚನಕಾರನ ವಚನಗಳಲ್ಲಿ ಬಸವಾದಿ ಶರಣರ ವಚನಗಳ ಪ್ರಭಾವವಿದ್ದರೂ ಅಲ್ಲಿಯ ಶಿಲ್ಪ, ಬಂಧ, ಸಾಹಿತ್ಯಿಕ ಮೌಲ್ಯಗಳು ಇಲ್ಲಿ ಕಂಡುಬರುವುದಿಲ್ಲ. ಈತನಿಗೆ ಅಪಾರವಾದ ಸಂಸ್ಕೃತ ಪಾಂಡಿತ್ಯವಿರುವುದರಿಂದ ಕನ್ನಡದಲ್ಲಿ ವೀರಶೈವ ತತ್ವವನ್ನು ಹೇಳಿ ಮಧ್ಯೆ ಮಧ್ಯೆ ಸಂಸ್ಕೃತದಲ್ಲಿ ವಿವರ ನೀಡುತ್ತಾನೆ.

ಉದಾ : " ಆತ್ಮಂಗೆ ಬಂಧ ಮೋಕ್ಷಂಗಳಾವ ತೆರದಿಂದಲಾಹವೆಂದಡೆ
ಆಕಾಶಾದಿ ಭೂತಗಳೈದು, ಪ್ರಾಣಾದಿ ವಾಯುಗಳೈದು
ಶ್ರೋತ್ರಾದಿ ಇಂದ್ರಿಯಂಗಳೈದು , ಶಬ್ದಾದಿ ವಿಷಯಂಗಳೈದು,
ಮನಸಾದಿ ಕರಣ ನಾಲ್ಕು
ಇಂತಿವೆಲ್ಲವೂ ಕೂಡಿ ಸ್ಥೂಲತನುವಾಯಿತ್ತು.

---

೧೩೭. ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ ತಿಲದ ಮರೆಯ ತೈಲದಂತೆ, ಮರದ ಮರೆಯ ತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚನ್ನಮಲ್ಲಿಕಾರ್ಜುನನ ನಿಲವನಾರು ಅರಿಯಬಾರದು"– ಅಕ್ಕಾಮಹಾದೇವಿ

ಅದೆಂತೆಂದಡೆ :

ಭೌತಿಶ್ಚ ಪಂಚಭಿಃ ಪ್ರಾಣೈಚತುರ್ದಶಭಿರಿಂದ್ರಿಯೈ
ಚತುರ್ವಿಂಶತಿ ದೇಹಾನಿ ಸಾಂಖ್ಯ ಶಾಸ್ತ್ರೋವಿದೋವಿಧುಃ"
ಎಂಬುದಾಗಿ, ಇಂತೀ ಇಪ್ಪತ್ತು ನಾಲ್ಕು ತತ್ವದಿಂದಾದ ದೇಹವು
ತಾನೆಂಬುದೇ ಅವಿದ್ಯೆ, ಅವಿದ್ಯೆಯೆ ಅಹಂಕಾರ
ಅಹಂಕಾರವೇ ಬಂಧ,
ಅದು ಕಾರಣ, ದೇಹವು ಆತ್ಮನಲ್ಲ
ದೇಹವ ವ್ಯತಿರಿಕ್ತವಾಗಿ ಅರಿವುತಿಪ್ಪನಾಸ್ತಿಕನೇ ಆತ್ಮ" -(ವ-೧೪)
ಅದೆಂತೆಂದಡೆಃ --" ಎಂದು

ಹೀಗೆಯೇ ವಚನಗಳು ಮುಂದುವರಿಯುತ್ತಿವೆ. ಸಂಸ್ಕೃತದಲ್ಲಿ ವಿವರ ನೀಡಿ ಮತ್ತೆ ಅದನ್ನು ಕನ್ನಡದಲ್ಲಿ ಹೇಳುವ ಕಸರತ್ತು ಯಾಕೋ ತಿಳಿಯದಾಗಿದೆ. ಬಹುಶಃ ಕನ್ನಡಿಗರನ್ನು, ಸಂಸ್ಕೃತ ಪಂಡಿತರನ್ನು ಏಕ ಕಾಲದಲ್ಲಿ ಮೆಚ್ಚಿಸ ಹೊರಟಂತೆ ಕಾಣುತ್ತದೆ.

ಈ ವಚನಕಾರನು ರಚಿಸಿದ ವಚನಗಳ ಸಂಖ್ಯೆ ನಿರ್ದಿಷ್ಟವಾಗಿ ತಿಳಿಯುವುದಿಲ್ಲ. ಸದ್ಯಕ್ಕೆ ವಚನ ಸಂಕಲನ ಸಂಪುಟ-೧[೩೮] ರಲ್ಲಿ ವಚನ ಮತ್ತು ಸ್ವರವಚನ ಸೇರಿ ಒಟ್ಟು ೨೮ ವಚನಗಳು ಪ್ರಕಟವಾಗಿವೆ. ಈ ಕೃತಿಯನ್ನು ಡಾ॥ ವೀರಣ್ಣ ರಾಜೂರ ಅವರು ಸಂಪಾದಿಸಿ ಬಸವಜರ್ನಲ್ (೩-೭) ರಲ್ಲಿ ಪ್ರಕಟಿಸಿದ್ದಾರೆ.

೨೦. ಗುಹೇಶ್ವರಯ್ಯ : (ಕ್ರಿ.ಶ.ಸು.೧೭ನೇ.ಶ)

ವಚನಗಳ ಶಿಲ್ಪ, ಭಾಷೆ, ಬಂಧಗಳ ಹಿನ್ನೆಲೆಯಲ್ಲಿ ಈತನ ಕಾಲವನ್ನು ೧೭ ನೆ ಶತಮಾನವೆಂದು ಗುರುತಿಸಲಾಗಿದೆ. ಈತನ ೪೪ ವಚನಗಳು ದೊರೆತಿವೆ.[೩೯] ಈತನ ವಚನಗಳ ಅಂಕಿತ 'ಗುಹೇಶ್ವರ ಪ್ರಿಯ ನಿರಾಳಲಿಂಗ' ಎಂಬುದಾಗಿದೆ. ಹಸ್ತಪ್ರತಿಯಲ್ಲಿ 'ಗುಹೇಶ್ವರಯ್ಯನ ವಚನ ಬರವುದಕ್ಕೆ ಶುಭಮಸ್ತು' ಎಂಬ ಮಾತು ಬಂದಿರುವುದರಿಂದ ಈ ವಚನಕಾರನ ಹೆಸರು ಗುಹೇಶ್ವರ ಎಂದು ಗುರುತಿಸಬಹುದು.

ಈತನ ವಚನಗಳ ಮೇಲೆ ಬಸವಾದಿ ಶರಣರ ಮತ್ತು ಅವರ ವಚನಗಳ ಪ್ರಭಾವ ದಟ್ಟವಾಗಿದೆ. ಆದರೂ ವಚನಗಳಲ್ಲಿ ಅರ್ಥ ಸ್ಪಷ್ಟತೆಯಿಲ್ಲ, ಶಿಲ್ಪ, ಬಂಧದಲ್ಲಿ ಗಂಭೀರತೆಯಿಲ್ಲ. ಇವನ ವಚನಗಳನ್ನು ಮಕರತರ್ಕದ ವಚನ, ಯೋಗಿತರ್ಕದ ಪ್ರಸ್ತಾವದ ವಚನ, ಗುರುಸ್ಥಲದ ವಚನ, ಭಕ್ತ ಸ್ಥಲದ ವಚನ, ಕವಿಗಳ ತರ್ಕದ ಪ್ರಸ್ಥಾವದ ವಚನವೆಂದು ವರ್ಗಿಕರಿಸಲಾಗಿದೆ. ಇಲ್ಲಿ ವೀರಶೈವ ತತ್ವಗಳಾದ ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣ, ಯೋಗಗಳ ವಿವರಣೆಯೆ ಪ್ರಮುಖವಾಗಿರುತ್ತದೆ.

---

೧೩೮. ಬಿ.ಆರ್. ಹಿರೇಮಠ,(ಸಂ) 'ವಚನ ಸಂಕಲನ, ಸಂ-೧' ರಲ್ಲಿ ಪ್ರಕಟವಾಗಿವೆ.
೧೩೯. ಬಿ.ಆರ್. ಹಿರೇಮಠ,(ಸಂ) 'ವಚನ ಸಂಕಲನ, ಸಂ-೧' ರಲ್ಲಿ ಪ್ರಕಟವಾಗಿವೆ.

ಇಲ್ಲಿಯ ಎಲ್ಲಾ ವಚನಗಳಲ್ಲಿ ಸಾಹಿತ್ಯ ಮೌಲ್ಯವನ್ನು ಹುಡುಕುವುದು ಕಷ್ಟವಾದರೂ ಕೆಲವೊಂದು ಸೂತ್ರ ರೂಪದ ವಾಕ್ಯಗಳು ಹಾಗೂ ಕೆಲವೊಂದು ವಚನಗಳು ಸಾಹಿತ್ಯ, ಮೌಲ್ಯವನ್ನು ಸಾದರ ಪಡಿಸುತ್ತವೆ. "ಬೊಬ್ಬುಲಿಯ ಕೊರಡು ಕೊಯಿದರೆ ಶ್ರೀಗಂಧವಾಗ ಬಲ್ಲುದೆ?" (ವ-೪), "ಆಕಾಶದಲ್ಲಿ ಹಾರಿಹೋದ ಪಕ್ಷಿಯ ಮಾರ್ಗವನು ಹಿಂದೆ ಬಪ್ಪ ಪಕ್ಷಿ ಬಲ್ಲುದಲ್ಲದೆ, ಕೆಳಗಾಡುವ ಕುಕ್ಕುಟ ಬಲ್ಲುದೆ?" (ವ-೫)

"ಮನಹೀನ ಬಂಟನ ಕೈಯಲ್ಲಿ ಬತ್ತೀಸಾಯುಧವಿದ್ದರೇನಯ್ಯ?
ಜಾರಸ್ತ್ರೀ ಸರ್ವಾಭರಣವನಿಟ್ಟಿದ್ದರೇನಯ್ಯ?
ಕುರುಡನ ಕೈಯಲ್ಲಿ ದರ್ಪಣವಿದ್ದರೇನಯ್ಯ?
ಧರ್ಮವನರಿಯದವನ ಕೈಯಲ್ಲಿ ಹಣವಿದ್ದರೇನಯ್ಯ?
ಜ್ಞಾನಹೀನ ರೂಪಧರಿಸಿದ್ದರೇನಯ್ಯ?
ಪ್ರಾಣಲಿಂಗವನರಿಯದ ನರಗುರಿಗಳು ಅಂಗದ ಮೇಲೆ
ಲಿಂಗವ ಕಟ್ಟಿದರೇನಯ್ಯ"(ವ-೧೧)
"ಬೆಂಕಿಯೊಳಗಣ ಗುಣ ಬಿಸಿನೀರಿನೊಳಗುಂಟೆ"? (ವ-೩೯)
"ದಾನಿಯಾದಡೇನು ಅವನ ಬೇಡಿದಲ್ಲದೆ ಅರಿಯಬಾರದು
ರಣರಂಗಭೀರನಾದಡೇನು ಅಲಗು ಅಲಗು ಹಳಚಿದಲ್ಲದೆ ಅರಿಯಬಾರದು
ಗೆಳೆಯನಾದಡೇನು ಅಗಲಿದಲ್ಲದೆ ಅರಿಯಬಾರದು
ಹೇಮವಾದಡೇನು ಒರೆಗಲ್ಲುಯಿಲ್ಲದೆ ಅರಿಯಬಾರದು
ನಿನ್ನನರಿದೆಹೆನೆಂದಡೆ ಸಂಸಾರ ಸಾಗರವ ದಾಟಿದಲ್ಲದೆ
ಅರಿಯಬಾರದು ಕಾಣ ಗುಹೇಶ್ವರ ಪ್ರಿಯ ನಿರಾಳಲಿಂಗಾ" (ವ-೪೨)
"ಕತ್ತಲ ಮನೆಯುಲ್ಲಿ ಜ್ಯೋತಿಯ ನೆನೆದರೆ
ಪ್ರಕಾಶವಾಗಬಲ್ಲುದೆ ?
ಕಾಮ ಜ್ವರದವರು ರಂಭೆಯ ನೆನೆದರೆ
ಕಾಮ ಜ್ವರ ತಂಬಿಸಬಲ್ಲುದೆ ?
ಇಂತೀ ನರಗುರಿಗಳಾಡಿದುದ ಕಂಡು
ನಗುತಿರ್ದ ನಮ್ಮ ಗುಹೇಶ್ವರ ಪ್ರಿಯ ನಿರಾಳಲಿಂಗ" (ವ-೪೩)

ತಾತ್ವಿಕ ವಿಚಾರಗಳನ್ನು ಹೇಳುವಲ್ಲಿ, ನೀತಿ ನಿರೂಪಣೆ ಮಾಡುವಲ್ಲಿ ಸೂತ್ರಬದ್ಧವಾದ ಮಾತುಗಳನ್ನು ಬಳಸುತ್ತಾನೆ. ಅವುಗಳಲ್ಲಿ ವಚನಕಾರನ ಸಂಗ್ರಹಶಕ್ತಿ ಸೂಕ್ಷ್ಮ ದೃಷ್ಟಿಗಳು ಗೋಚರವಾಗುತ್ತವೆ. ವಚನಗಳು ಸರಳವಾಗಿ, ನೇರವಾಗಿ ನಿರೂಪಣಾ ವಿಧಾನವನ್ನು ಹೊಂದಿವೆ.

– – –

೨೧. ಕಂಡಿತದ ವಚನಗಳು–ಚನ್ನಯ್ಯ : (ಕ್ರಿ.ಶ. ಸು.೧೭೦೦)

ಈ ವಚನಕಾರನ ಜೀವನ ಚರಿತ್ರೆಗೆ ಸಂಬಂಧಿಸಿದ ಯಾವ ವಿಷಯಗಳು ತಿಳಿದು ಬರುವುದಿಲ್ಲ. ಈತನ ವಚನಗಳನ್ನು 'ಕಂಡಿತದ ವಚನ'ಗಳೆಂದು ಕರೆಯಲಾಗಿದೆ. ಈವರೆಗೆ ಈತನ ೪೩ ವಚನಗಳು ದೊರಕಿವೆ. ಚೆನ್ನಯ್ಯನ ವಚನಾಂಕಿತ 'ಚೆನ್ನಯ್ಯ ಪ್ರಿಯ ನಿರ್ಮಾಯ ಪ್ರಭುವೆ'. ವಚನಾಂಕಿತವನ್ನು ಆಧರಿಸಿ ಗುರುವಿನ ಹೆಸರು 'ನಿರ್ಮಾಯ ಪ್ರಭುವೆ'. ವಚನಾಂಕಿತವನ್ನು ಆಧರಿಸಿ ಗುರುವಿನ ಹೆಸರು ನಿರ್ಮಾಯ ಪ್ರಭು ವೆಂದು ಗುರುತಿಸಬಹುದಾಗಿದೆ. ವಚನಗಳ ಶಿಲ್ಪ ಮತ್ತು ಭಾಷೆಗಳನ್ನು ಗಮನಿಸಿ ಈತನ ಕಾಲ ಕ್ರಿ.ಶ.ಸು.೧೭೦೦ ಎಂದು ಹೇಳಬಹುದಾಗಿದೆ. ಚೆನ್ನಯ್ಯನ ಕೆಲವು ವಚನಗಳು ಬುದ್ಧಯ್ಯ ಪುರಾಣಿಕರ 'ಶ್ರೀಮದನಾದಿ ಅಲ್ಲಮ ಪ್ರಭು' ಹಾಗು ಪಿ.ಎಂ.ಗಿರಿರಾಜು ಅವರ 'ನಿಜಾಚರಣೆಯ ವಚನ'ಗಳು ಕೃತಿಗಳಲ್ಲಿಯೂ ದಾಖಲಾಗಿರುತ್ತವೆ.

ಈ ವಚನಕಾರನು ತನ್ನ ವಚನಗಳಲ್ಲಿ ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದಗಳ ಮೌಲ್ಯಗಳನ್ನು ಕುರಿತು ಪ್ರತಿಪಾದಿಸಿದ್ದಾನೆ. ನಿತ್ಯ ನಿತ್ಯ ಹಸಿವು– ತೃಷೆಗೆ ಈಡೇರಿಸಿಕೊಳ್ಳಲು ಪಡೆಯುವುದು ಪಾದೋದಕ– ಪ್ರಸಾದಗಳಲ್ಲ. ಪಾದೋದಕ–ಪ್ರಸಾದ ಸೋಕಿದ ಭಕ್ತನ ಕಾಯ ಪ್ರಸಾದ ಕಾಯವೆನಿಸುತ್ತದೆ. ಈ ಪ್ರಸಾದದಿಂದಲೆ ಷಡ್ವಿದಲಿಂಗ ಉದ್ಭವಿಸುತ್ತವೆ. ಸಚರಾಚರವೆಲ್ಲ ಪ್ರಸಾಸರೂಪವಾಗಿದೆ. ಲಿಂಗ ಬೇರೆ–ಶರಣ ಬೇರೆ ಎನ್ನುವ ಭಂಗಿತರಿಗೆ – ಭ್ರಷ್ಟರಿಗೆ ಶಿವಲಿಂಗ ಸಾಧ್ಯವಿಲ್ಲ. ಅಂಗದಲ್ಲಿಯೆ ಶಿವಲಿಂಗವಿದೆಯೆಂಬುದನ್ನು ಅರಿಯಬೇಕು. ಅಂಗಲಿಂಗ ಭಿನ್ನವಿಲ್ಲ. ಅಂಗದ ಅಶುದ್ಧವನ್ನು ಕಳೆಯಲಾರದೆಯೇ ಲಿಂಗಾಂಗಿ , ಲಿಂಗ ಪ್ರಾಣಿಗಳೆಂದೆನಿಸಿಕೊಳ್ಳುವವರು ಕಪಟವೇಷದಾರಿಗಳೆನಿಸುತ್ತಾರೆ. ವೀರಶೈವ ಮೌಲ್ಯಗಳಾದ ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದಗಳು ಕೇವಲ ಶುಷ್ಕ ಆಚರಣೆಗಳಾಗಿ ನಿಲ್ಲುವಂತಾಗಬಾರದು ಎಂಬುದು ಚೆನ್ನಯ್ಯನ ಅಭಿಪ್ರಾಯ.

ಚೆನ್ನಯ್ಯನ ವಚನಗಳಲ್ಲಿ 'ಉರಿಕಂಡ ಕರ್ಪೂರ ಮರಳಿ ಸುಡುವರೆ?", 'ಜ್ಯೋತಿ ಮುಟ್ಟಿದ ಮನೆಗೆ ಕತ್ತಲುಂಟೆ?,' 'ಕಂಡವರ ಕಂಡು ಕೌದಿಯ ಹೊಲಿಯ ಹೋದರೆ ಕುಂಟಳೆಬಿದ್ದಂತೆ', 'ಸಿಂಹ ಲೆಂಘಣಿಸಿತ್ತೆಂದು ಸೀಳುನಾಯಿ ಲೆಂಘಣಿಸಿ ಸೊಂಟವ ಕಳಕೊಂಡಂತೆ,' 'ಬಟ್ಟೆ ಗುರುಡನ ಕೈಯ ಬಟ್ಟೆ ಗುರುಡ ಹಿಡಿದು ಹಳ್ಳವ ಬಿದ್ದಂತೆ' ಎಂಬಂತಹ ಸೂತ್ರ ರೂಪದ ವಾಕ್ಯಗಳು ವಚನಗಳ ಸಾಹಿತ್ಯಿಕ ಬೆಲೆಯನ್ನು ಹೆಚ್ಚಿಸಿವೆ.[೧೪೦]

ಈ ವಚನಕಾರರಲ್ಲದೆ ಕೇವಲ ಅಂಕಿತವಿರುವ ಅಧಿಕೃತ 'ಅಜ್ಞಾತ ಶರಣರು' ಹೆಚ್ಚಾಗಿ ಈ ಯುಗದಲ್ಲಿರುತ್ತಾರೆ. ಈ ಅಜ್ಞಾತ ವಚನಕಾರರಲ್ಲಿ ಅನೇಕರು ತೋಂಟದಾರ್ಯ ಶಿಷ್ಯಪರಂಪರೆಗೆ ಸೇರಿದವರಾಗಿರಬೇಕು. ಇವರ ಮೇಲೆ ತೋಂಟದ ಶ್ರೀಗಳ ಪ್ರಭಾವವಾಗಿರುವುದು ನಿಸ್ಸಂಶಯ. ಆದರೆ ಇವರ ಹೆಸರು ಮತ್ತು ಇತರೆ ಯಾವುದೇ ಮಾಹಿತಿ ದೊರೆಯದಿರುವುದರಿಂದ ಇವರಲ್ಲಿ ತೋಂಟದ ಪರಂಪರೆಯವರು ಯಾರು? ಹೊರಗಿನವರಾರು? ಎಂಬ ವಿಂಗಡಣೆ ಅಸಾಧ್ಯವಾಗಿದೆ.

---

೧೪೦. ಡಾ॥ ಬಿ.ಆರ್. ಹಿರೇಮಠ, 'ವಚನ ಸಂಕಲನ ಸಂ.–೧' ಪ್ರಪು. XV (ಇದೇ ಸಂಕಲನದಲ್ಲಿ ಈತನ ವಚನಗಳು ಪ್ರಕಟವಾಗಿವೆ)

ಬಸವೋತ್ತರ ಯುಗದ ವಚನಕಾರರ (೧೫ ನೇ ಶತಮಾನದಿಂದ ೧೯ ನೇ ಶ) ಸಂಖ್ಯೆ ೬೦ ಆಗಿದೆ. ಇದರಲ್ಲಿ ೪೦ ಜನರ ವಚನ ಮತ್ತು ಹೆಸರು ಎರಡೂ ದೊರೆತಿದ್ದರೆ, ೫೦ ಜನರ ವಚನಗಳು ಮಾತ್ರ ದೊರೆತು ಕರ್ತೃವಿನ ಹೆಸರು ಲಭ್ಯವಾಗಿಲ್ಲ. ಈವರೆಗೆ ದೊರೆತ ಬಸವೋತ್ತರ ಯುಗದ ವಚನಕಾರರ ವಚನಗಳು ೮೪೬೩. ಇವುಗಳಲ್ಲಿ ೮೨೬೭ ಜ್ಞಾತ ವಚನಕಾರರ ರಚನೆಗಳಾದರೆ, ೧೯೬ ವಚನಗಳು ಅಜ್ಞಾತ ವಚನಕಾರರ ವಚನಗಳಾಗಿವೆ. ಈಚೆಗೆ ಕರಜಗಿಯಲ್ಲಿ ದೊರೆತ ಪ್ರಭುವಿರಕ್ತ ಅಂಕಿತದ ಸುಮಾರು ೫೦೦ ವಚನಗಳು ದೊರೆತಿವೆಯೆಂದು ತಿಳಿದು ಬಂದಿದೆ. ಈ ವಚನಗಳನ್ನು ಸೇರಿಸಿಕೊಂಡರೆ ಅಜ್ಞಾತ ವಚನಕಾರರ ವಚನಗಳ ಸಂಖ್ಯೆ ೬೯೬ ಆಗುತ್ತದೆ.

ಇವರಲ್ಲಿ ಇತ್ತೀಚೆಗೆ ಗುರುತಿಸಿದಂತೆ ತೋಂಟದಾರ್ಯ ಪರಂಪರೆಯ ೨೧ ವಚನಕಾರರ ಸಂಕ್ಷಿಪ್ತ ಪರಿಚಯವನ್ನಷ್ಟೆ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

– – – –

ತೋಂಟದಾರ್ಯ ಪರಂಪರೆಯ

ವಚನಸಂಕಲನಕಾರರು

ಕರ್ನಾಟಕದ ಇತಿಹಾಸದ ೧೨ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ವೀರಶೈವ ಕ್ರಾಂತಿ ಮತ್ತು ಅದರ ಸಂಬಂಧಿಯಾಗಿ ರಚನೆಗೊಂಡ ವಚನ ರಚನೆ ಅತ್ಯಂತ ವಿಶಿಷ್ಟವಾದುದು. ಧಾರ್ಮಿಕ ಕ್ರಾಂತಿಯೊಂದಿಗೆ ಅದು ಸಾಮಾಜಿಕ ಆಯಾಮವನ್ನು ಒಳಗೊಂಡಿತ್ತು. ವೈಚಾರಿಕ ನೆಲೆಗಟ್ಟಿನಲ್ಲಿ ಹೊಸ ಮಾದರಿಯ ವಚನಗಳನ್ನು ತಮ್ಮ ಮಾಧ್ಯಮವನ್ನಾಗಿ ಮಾಡಿಕೊಂಡರು. ಸಮಾಜದ ಬೇರೆ ಬೇರೆ ಸ್ಥಳಗಳಿಂದ ಬಂದಿದ್ದ ಅನೇಕ ವಿಚಾರವಂತರು, ಪ್ರತಿಭಾವಂತರು ತಮ್ಮ ಅನುಭವಗಳನ್ನು, ಭಾವನೆಗಳನ್ನು, ವಿಚಾರಗಳನ್ನು, ಭಕ್ತಿ ಹಾಗೂ ಅನುಭಾವಗಳನ್ನು ವಚನಗಳ ಮೂಲಕ ಅಭಿವ್ಯಕ್ತಿಸಿದರು. ಆದರೆ ಈ ಸಂಭ್ರಮ ಬಹಳ ಕಾಲ ಉಳಿಯಲಿಲ್ಲ. ಹನ್ನೆರಡನೆಯ ಶತಮಾನದ ಕೊನೆ ಮತ್ತು ಹದಿಮೂರನೆ ಶತಮಾನದ ಆರಂಭದಲ್ಲಿ ಕರ್ನಾಟಕದಲ್ಲಿ ಅರಾಜಕತೆ ತುಂಬಿ ಅಶಾಂತಿಯ ಬೀಡು ನೆಲೆಸಿತ್ತು. ೧೨ನೇ ಶತಮಾನದ ಉತ್ತಾರಾರ್ಧದಲ್ಲಿ ನಡೆದ ಕಲ್ಯಾಣದ ಕ್ಷಿಪ್ರ ರಾಜಕೀಯ ಬೆಳವಣಿಗೆಗಳ ಹಿನ್ನಲೆಯಲ್ಲಿ ಬಸವಣ್ಣನವರ ಮರಣದ ಜೊತೆ ಶರಣರ ಸಂಘಟನೆ ನಾಶವಾಯಿತು. ವಚನಕಾರರು, ಶರಣರು ದೇಶದ ನಾನಾ ಭಾಗಗಳಿಗೆ ಚದುರಿಹೋದರು. ಜೊತೆಯಲ್ಲಿಯೆ ಆಗಿನ ಕಾಲದಲ್ಲಿ ಸಮಾಜಿಕ, ಧಾರ್ಮಿಕ ಬದಲಾವಣೆಯ ಹಿನ್ನಲೆಯಲ್ಲಿ ಸೃಜನಗೊಂಡಿದ್ದ, ಶರಣರ ಮಂತ್ರಗಳಂತೆ ಇದ್ದ ಅಪಾರವಾದ ವಚನರಾಶಿಯಲ್ಲಿ ಬಹಳಷ್ಟು ನಾಶವಾಯಿತು. ಅಳಿದುಳಿದ ವಚನಗಳನ್ನು ಶರಣರು ತೆಗೆದುಕೊಂಡು ಹೋದರು.

ಹದಿಮೂರನೆ ಶತಮಾನದ ಉತ್ತಾರಾರ್ಧದಲ್ಲಿ ಭಾರತೀಯ ಸಂಸ್ಕೃತಿಗೆ ಅದರಲ್ಲೂ ದಕ್ಷಿಣ ಭಾರತಕ್ಕೆ ಮಹಾವಿಪತ್ತು ಒದಗಿದ ಕಾಲ. ಅಲ್ಲಾವುದ್ದೀನ್ ಖಿಲ್ಜಿಯ ದಾಳಿಯಿಂದಾಗಿ ಹಿಂದೂ ದೇವಾಲಯಗಳು ನಾಶಹೊಂದಿದವು. ಮತ ಪ್ರಸಾರದ ಹಿನ್ನಲೆಯಲ್ಲಿ ಮತಾಂತರಗಳು ನಡೆದವು. ಇವುಗಳ ನಡುವೆ ಸಾಹಿತ್ಯ–ಸಂಸ್ಕೃತಿಗೆ ಅಪಾರ ದಕ್ಕೆಯೊದಗಿತು. ಈ ಸಮಯದಲ್ಲಿ ಅನೇಕ ಧಾರ್ಮಿಕ ಗ್ರಂಥಗಳು ನಾಶವಾದವು.

ಈ ಎರಡು ರೀತಿಯ ಅಘಾತದಿಂದ ಹೊರಬರಲು ವೀರಶೈವ ಧರ್ಮಕ್ಕೆ ಇನ್ನೂರು ವರ್ಷಗಳೇ ಬೇಕಾದವು. ಹದಿನಾಲ್ಕನೇ ಶತಮಾನದ ಆರಂಭದಲ್ಲಿ (೧೩೩೬) ವಿಜಯನಗರ ಸಾಮ್ರಾಜ್ಯ ಉದಯಿಸಿತು. ಇದರ ಮೂಲ ಉದ್ದೇಶ ಹಿಂದೂ ಅಥವಾ ಸನಾತನ ಧರ್ಮದ ಸಂರಕ್ಷಣೆ. ಆ ನಿಟ್ಟನಲ್ಲಿ ದೊರೆಗಳು ಒಂದಾದರು. ಐಕ್ಯತೆಯನ್ನು ಸಾರುವ ಜೊತೆಗೆ ಧಾರ್ಮಿಕ ಗ್ರಂಥಗಳ ರಕ್ಷಣೆ, ಧರ್ಮಗಳ ಉಳಿವಿಗೆ ಆಧ್ಯತೆ ನೀಡಿದರು. ವೈದಿಕ ವಾಂಙ್ಮಯ ಸಂಬಂಧಿಯಾದ ಚಟುವಟಿಕೆಗಳು ಬಿರುಸಿನಿಂದ ಸಾಗಿಸಿದವು. ಇದಕ್ಕೆ ವಿಜಯ ನಗರ ದೊರೆಗಳ ಆಶ್ರಯವೂ ದೊರೆಯಿತು. ೧೫ನೇ ಶತಮಾನದಲ್ಲಿ ವೀರಶೈವ ವಿದ್ವಾಂಸರು ಇದರಿಂದ ಉತ್ತೇಜಿತರಾದರು.

ವೈದಿಕ ವಿದ್ವಾಂಸರಂತೆ ತಾವೂ ಕನ್ನಡದ ವಚನಗಳಿಗೆ ಸಂಬಂಧಿಸಿದಂತೆ ಮರೆಯಾಗಿದ್ದ ವಚನರಾಶಿಯನ್ನು ಸಂಗ್ರಹಿಸುವ, ಸಂಕಲಿಸುವ ಮೂಲಕ ಕಲೆ ಹಾಕುವ ಪ್ರಯತ್ನ ನಡೆಯಿತು. ಇದು ವಚನ ಸಾಹಿತ್ಯದ ಇತಿಹಾಸದಲ್ಲಿಯೇ ಸ್ಮರಣೀಯ ಕಾಲ. ಇದಕ್ಕಾಗಿ ನಾಡಿನಾದ್ಯಂತ ಸಂಚರಿಸಿ ಸಾವಿರಾರು ಹಸ್ತ ಪ್ರತಿಗಳನ್ನು ಸಂಗ್ರಹಿಸಿದರು. ಬಿಡಿ ಬಿಡಿಯಾಗಿ ಸ್ವತಂತ್ರವಾಗಿದ್ದ ವಚನಗಳನ್ನು ವೀರಶೈವ ಧರ್ಮದ ಮುಖ್ಯತತ್ವವಾದ ಷಟ್‌ಸ್ಥಲದ ಆಧಾರದ ಮೇಲೆ ವರ್ಗೀಕರಿಸುವ ಪ್ರಯತ್ನ ಮಾಡಿದರು. ಈ ವರ್ಗೀಕರಣಕ್ಕೆ ಮೂಲ ಪ್ರೇರಣೆ, ಮೂಲಸೆಲೆ ವೀರಶೈವ ಧರ್ಮದ ಅಪೇಕ್ಷೆಗಳು.

ಹೀಗೆ ಸಂಗ್ರಹ, ಸಂಕಲನಗೊಂಡ ವಚನಗಳಲ್ಲಿ ಧಾರ್ಮಿಕ ದೃಷ್ಟಿಯೇ ಪ್ರಧಾನವಾಗಿದ್ದರಿಂದ ಸಾಮಾಜಿಕ ಕಳಕಳಿಯ ವಚನಗಳು ಹೊರಗೆ ಉಳಿದವು. ಇದೇ ಸಂದರ್ಭದಲ್ಲಿ ವಿರಕ್ತರ ಧಾರ್ಮಿಕ ಅವಶ್ಯಕತೆಗಳಿಗನುಗುಣವಾಗಿ ಅನೇಕ ವೀರಶೈವ ಧಾರ್ಮಿಕ ಕೃತಿಗಳು ರಚನೆಯಾದವು. ಶಿವಗಣ ಪ್ರಸಾದಿಯ ಶೂನ್ಯ ಸಂಪಾದನೆ ಹುಟ್ಟಿಕೊಂಡಿದ್ದು ಇದೇ ಅವಧಿಯಲ್ಲಿಯೇ.[೧೪೧] ಇಂತಹ ಕೃತಿ ರಚನೆಯ ಹಿಂದೆ ವೀರಶೈವ ಧರ್ಮಕ್ಕೆ ಅಧಿಕೃತವಾದ ಧರ್ಮಗ್ರಂಥವೊಂದನ್ನು ರೂಪಿಸಬೇಕೆನ್ನುವ ಉದ್ದೇಶ ಸ್ಪಷ್ಟವಾಗಿಯೇ ಇದೆ.

ಇಮ್ಮಡಿ ದೇವರಾಯನ ಆಶ್ರಯದಲ್ಲಿ ಲಕ್ಕಣ್ಣ ದಂಡೇಶ, ಜಕ್ಕಣ್ಣಾರ್ಯರಂತಹ ರಾಜ ಅಧಿಕಾರಿಗಳ ಪ್ರೋತ್ಸಾಹ ಬೆಂಬಲಗಳಿಂದ ವಚನ ಸಂಕಲನ ಕಾರ್ಯಗಳು ಬಹು ಜೋರಾಗಿಯೆ ನಡೆದವು. ವಿಜಯ ನಗರವು ವಚನ ಸಂಗ್ರಹ, ಸಂಪಾದನೆ, ಸಂಕಲನ ಮತ್ತು ವಚನ ರಚನೆಗಳ ಕೇಂದ್ರವಾಯಿತು.

ಅನೇಕ ಶರಣರು, ವಿರಕ್ತರು ಈ ಕಾರ್ಯವನ್ನು ಬಹಳ ಆಸ್ಥೆಯಿಂದ ಮಾಡಿದರು. ಈ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳದೆ ಇದಿದ್ದರೆ ವಚನ ಸಾಹಿತ್ಯ ಸಂಪತ್ತು ಈ ಪ್ರಮಾಣದಲ್ಲಿ ನಮಗೆ ದೊರಕುತ್ತಿರಲಿಲ್ಲ. ಆದ್ದರಿಂದ ವಚನ ಸಾಹಿತ್ಯವನ್ನು ನಿರ್ಮಿಸಿದ ವಚನಕಾರರಿಗೆ ಸಲ್ಲುವ ಗೌರವ ಈ ವಚನ ಸಂಪಾದಕರಿಗೂ, ಸಂಕಲನಕಾರರಿಗೂ ಸಲ್ಲುತ್ತದೆ.

---

೧೪೧. ಈ ಕಾಲವನ್ನು ಡಾ॥ ಎಂ. ಚಿದಾನಂದ ಮೂರ್ತಿಯವರು 'ಸಂಗೋಪನ ಯುಗ'ವೆಂದು ಕರೆದಿದ್ದಾರೆ. ವಚನ ಸಾಹಿತ್ಯ. ಪುಟ-೧೯೬

ಆರಂಭದಲ್ಲಿ ಆಯಾ ವಚನಕಾರರ ಹೆಸರಿನ ಕೆಳಗೆ ಸೇರಿಸಿರುವ 'ಸರ್ವ ಪುರಾತನರ ವಚನಗಳು'[೧೪೨] ಎಂಬ ಸಂಕಲನಗಳಿವೆ. ಈ ಸಂಕಲನಗಳಿಗೆ 'ವಚನ ಕಟ್ಟುಗಳು' ಎಂದು ಕರೆಯುತ್ತಾರೆ. ಈ ವಚನ ಕಟ್ಟುಗಳು ಮೂರು ವಿಧದಲ್ಲಿ ದೊರೆಯುತ್ತವೆ.

೧. ಕೋಲ ಶಾಂತಯ್ಯನ ವಚನಗಳಿಂದ ಆರಂಭವಾಗಿ ಆದಯ್ಯನ ವಚನಗಳವರೆಗೆ ಬೆಳೆದ ಕಟ್ಟು. ಇದರಲ್ಲಿ ಸುಮಾರು ೨೭ ವಚನಕಾರರ ಸುಮಾರು ೩೦೦೦ ವಚನಗಳಿವೆ.

೨. ಬಸವಣ್ಣನ ವಚನಗಳಿಂದ ಆರಂಭವಾಗಿ ಆದಯ್ಯನ ವಚನಗಳವರೆಗೆ ಬೆಳೆದ ವಚನ ಕಟ್ಟು. ಇದರಲ್ಲಿ ೮೫ ಜನ ವಚನಕಾರರ ೧೦೦೦ ವಚನಗಳು ಸೇರಿವೆ. ಇದನ್ನು ಸಾವಿರದ ಕಟ್ಟೆಂದು ಕರೆಯುತ್ತಾರೆ.

೩. ಗೊಗ್ಗವ್ವೆಯ ವಚನಗಳಿಂದ ಆರಂಭವಾಗಿ ನೀಲಮ್ಮನವರೆಗೆ ಬೆಳೆದ ವಚನಕಟ್ಟು . ಇದರಲ್ಲಿ ೧೨೧ ಶಿವಶರಣ ೧ ಶರಣೆಯರ ೧೫೦೦ ವಚನಗಳಿವೆ.[೧೪೩]

ಈ ವಚನ ಕಟ್ಟುಗಳಲ್ಲಿ ವಚನಕಾರರ ಸಂಖ್ಯೆ ಮತ್ತು ವಚನಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡು ಬರುವುದುಂಟು. ಇವುಗಳಿಂದ ಬೆಡಗಿನ ವಚನಗಳನ್ನೆ ಆಯ್ದು ಬೇರೆ ಸಂಕಲನವನ್ನು ಮಾಡಿದ್ದಾರೆ. ಬೇರೆ ಬೇರೆ ವಚನಕಾರರ ಎಲ್ಲಾ ವಚನಗಳನ್ನು ಸಂಕಲಿಸಿ ಷಟ್ ಸ್ಥಲಾನುಗುಣವಾಗಿ, ವ್ಯವಸ್ಥಾಪನಗೊಳಸಿರುವ ಗ್ರಂಥಗಳೂ ಇವೆ. ಈ ಸ್ಥಲಗಳನ್ನು ಒಳಗೊಂಡಂತೆ ಏಕೋತ್ತರ ಶತಸ್ಥಲಗಳ ಸಂಕಲನ, ಸಾಧಕನ ಒಂದೊಂದು ಅವಸ್ಥೆಯನ್ನು ಮಾತ್ರ ಗಮದಲ್ಲಿಟ್ಟುಕೊಂಡು ಮಾಡಿದ ಲಿಂಗ ವಿಕಳಾವಸ್ಥೆಯ ವಚನಗಳಂತ ಸಂಕಲನ, ಆಚರಣೆಗೆ ಸಂಬಂಧಿಸಿದಂತೆ ಆಚರಣೆಯ ಸಂಬಂಧದ ವಚನ ಸಂಕಲನ ಮುಂತಾದವು ಕಂಡು ಬರುತ್ತವೆ.

ಈ ಎಲ್ಲಾ ರೀತಿಯ ಸಂಕಲನಗಳನ್ನು ಜವಬ್ದಾರಿಯಿಂದ ಹೊರತಂದ ಸಂಕಲನಕಾರರಲ್ಲಿ ನಮಗೆ ತಿಳಿದಂತೆ ಯಾರು ತಮ್ಮ ಕಾಲದ ಬಗೆಗಾಗಲಿ, ವೈಯಕ್ತಿಕ ವಿಚಾರಗಳನ್ನಾಗಲಿ ತಿಳಿಸಿಲ್ಲ. ಅವರು ಯಾರು ? ಯಾವ ಊರಿನವರು ? ಅವರ ತಂದೆ, ತಾಯಿ, ಗುರು-ಶಿಷ್ಯರ ಬಳಗ ಯಾರೆಂಬುದು ತಿಳಿದು ಬರುವುದಿಲ್ಲ. ಕೆಲವು ವಚನ ಸಂಕಲನಕಾರರ ಹೆಸರು ದೊರೆತಿದ್ದರೂ ಅನೇಕ ಸಂಕಲನಕಾರರ ಹೆಸರುಗಳು ಅವರ ಸಂಕಲನಗಳಲ್ಲಿ ಕಾಣಬರುವುದಿಲ್ಲ. ಹೀಗಾಗಿ ವಚನ ಸಂಕಲನಕಾರರ ಕಾಲವನ್ನು ನಿರ್ಣಯಿಸುವುದು ಬಹಳ ಕಷ್ಟದ ಸಂಗತಿ. ಆಯಾ ವಚನ ಸಂಕಲನಗಳಲ್ಲಿ ಉಲ್ಲೇಖವಾಗಿರುವ ವಚನಗಳ ಅಂಕಿತಗಳ ಆಂತರಿಕ ಪ್ರಮಾಣಗಳ ಆಧಾರದಿಂದ ನಿರ್ಧರಿಸಬೇಕಾಗುತ್ತದೆ. ಪ್ರಸಿದ್ಧವಾದ ಗುರು ಪರಂಪರೆಗೆ ಸಂಬಂಧಿಸಿದ ವಚನ ಸಂಕಲನಕಾರರನ್ನು ಆ ಪರಂಪರೆಯ ಆಧಾರದಿಂದ ಅವನ ಕಾಲವನ್ನು ನಿರ್ಣಯಿಸಬೇಕಾಗುತ್ತದೆ. ಬಹಳಷ್ಟು ವಚನ ಸಂಕಲನಕಾರರು ತೋಂಟದ ಸಿದ್ಧಲಿಂಗಯತಿಗಳ ಆನಂತರ ಬಂದಂತಹ ಸಂಪಾದನ ಸಮಯದವರಾಗಿದ್ದಾರೆ. ಹಾಗಾಗಿ ಇವರ ಕಾಲ ನಿರ್ಣಯ ತೋಂಟದ ಸಿದ್ಧಲಿಂಗ ಕಾಲವನ್ನು ಅವಲಂಭಿಸಿದೆ.

---

೧೪೨. ಸಕಲ ಪುರಾತನರ ವಚನಗಳು, ಎಲ್ಲಾ ಪುರಾತನರ ವಚನಗಳು ಎಂಬ ಶೀರ್ಷಿಕೆಗಳ ಕಟ್ಟುಗಳು ಇವೆ. ಇವಲ್ಲದೆ ಅಖಿಲ ಪುರಾತನರ ವಚನ, ಕದಂಬ ವಚನ, ಶಿವ ಶರಣರ ವಚನಾಮೃತ, ಸ್ಥಲ ಚಿಂತಾಮಣಿ, ಸಕಲಗಣಂಗಳ ವಚನ, (ಡಾ. ವಿದ್ಯಾಶಂಕರ, (ಸಂ)ವ.ಸ.-ದ್ವಿ.ಫ,ಪುಟ-೩೮)

೧೪೩. ಡಾ॥ ಬಿ.ವಿ.ಶಿರೂರ (ಸಂ) 'ಗೌರವ.' (ಪ್ರೋ .ಎಸ್.ಎಸ್. ಭೂಸನೂರ ಮಠ ಅಭಿನಂದನ ಗ್ರಂಥ ಪುಟ-೫೭೯

ವಚನ ಸಂಕಲನಕಾರರು

ತೋಂಟದ ಸಿದ್ಧಲಿಂಗರಿಗಿಂತ ಮೊದಲ ಸಂಕಲನಕಾರರು

೧. ಗುಬ್ಬಿ ಮಲ್ಲಣ
೨. ಮಹಾಲಿಂಗದೇವ
೩. ಜಕ್ಕಣಾರ್ಯ
೪. ಕಲ್ಲುಮಠದ ಪ್ರಭುದೇವ
೫. ಕರಸ್ಥಲದ ವೀರಣ್ಣೊಡೆಯ –
೬. ಕರಸ್ಥಲದ ಮಲ್ಲಿಕಾರ್ಜುನ ಒಡೆಯ

ತೋಂಟದಾರ್ಯ ಪರಂಪರೆಯ ವಚನ ಸಂಕಲನಕಾರರು

೧. ಜಿಗುನಿ ಮರಳಾರ್ಯ
೨. ಚೆನ್ನ ದೇವ
೩. ಸಿದ್ಧವೀರದೇವ
೪. ಸಂಪಾದನೆಯ ಚೆನ್ನಂಜೇದೇವ
೫. ಶಂಕರದೇವ
೬. ಚೆನ್ನವೀರಾಚಾರ್ಯ
೭. ಎಳಮಲೆಯ ಗುರುಶಾಂತದೇವ
೮. ಸಂಪಾದನೆಯ ಸಿದ್ಧವೀರಣ್ಣಾಚಾರ್ಯ
೯. ಸಂಪಾದನೆಯ ಬೋಳ ಬಸವ
೧೦. ಸಂಪಾದನೆಯ ಪರ್ವತೇಶ್ವರ
೧೧. ಗುರುಸಿದ್ಧಸ್ವಾಮಿ
೧೨. ವೀರಸಂಗಯ್ಯ
೧೩. ಮಹದ್ದೇವಯೋಗಿ
೧೪. ಸಂಪಾದನೆಯ ಸಣ್ಣಬರಹದ ಗುರು ಬಸವರಾಜ ದೇವು
೧೫. ಕುಂತೂರು ಮಹತ್ತದೇವರು
೧೬. ಪ್ರಣವ ಸ್ವರೂಪ ಜಟಾ ಶಂಕರದೇವ
೧೭. ಚನ್ನವೀರಣ್ಣೊಡೆಯ
೧೮. ಚನ್ನದಣ್ಣಾಯಕ (ಅಜ್ಞಾತವಚನ ಸಂಕಲನಕಾರ)
೧೯. ಸೋಮನಳ್ಳಿ ಚಿಕ್ಕವೀರಣ್ಣೊಡೆಯ
೨೦. ಅಜ್ಞಾತ ವಚನ ಸಂಕಲಕಾರರು

ತೋಂಟದ ಸಿದ್ಧಲಿಂಗ ಯತಿಗಳಿಗಿಂತ ಮೊದಲೆ ಅಂದರೆ ೧೫ ನೇ ಶ.ದ. ಆರಂಭದಲ್ಲಿಯೆ ಅನೇಕ ಶರಣರು ತಮಗೆ ಸಿಕ್ಕಷ್ಟು ವಚನಗಳನ್ನು ಸಿಕ್ಕರೂಪದಲ್ಲಿಯೆ ಸಂಗ್ರಹಿಸಿದರು. ಕೆಲವು ಸಂಗ್ರಹಕಾರ್ಯದೊಂದಿಗೆ ವ್ಯಾಖ್ಯಾನವನ್ನು ಬರೆದರು. ಅನೇಕ ಶರಣರು ಶರಣರ ವಚನಗಳನ್ನು ಒಂದೆಡೆ ಸಂಕಲನ ಮಾಡಿದ್ದಾರೆ.

೧. ಗುಬ್ಬಿ ಮಲ್ಲಣ್ಣ – (ಕ್ರಿ.ಶ.೧೪೩೦)

ತುಮಕೂರಿನ ಸಮೀಪವಿರುವ ಗುಬ್ಬಿಯ ನಿವಾಸಿ ಈತ. ವೀರಶೈವ ಮಹಿಮಾನ್ವಿತ ವ್ಯಕ್ತಿಯಾದ ಅಮರಗುಂಡ ಮಲ್ಲಿಕಾರ್ಜುನ ಪಂಡಿತರ ಶಿಷ್ಯನಾದ ಗುರುಭಕ್ತನ ವಂಶೋದ್ಭವ ಈತನನ್ನು ಮಲ್ಲಣಾರ್ಯ, ಮಲ್ಲಣಾಚಾರ್ಯ, ಮಲ್ಲಣ್ಣ ಎಂದು ರೂಡಿಯಲ್ಲಿ ಕರೆಯುತ್ತಾರೆ.[೧೪೪] ಈತನ ಕಾಲವನ್ನು ಎಸ್.ಶಿವಣ್ಣ ಅವರು ಸು.೧೪೩೦ ಎಂದಿದ್ದಾರೆ.[೧೪೫] ಹರಶರಣರಣುಗ, ಹರಶರಣರ ಕಾರುಣ್ಯದ ಶಿಶು ತಾನು ಎಂದು ಹೇಳಿಕೊಂಡಿದ್ದಾನೆ. ಇವನು ವಚನಕಾರನಲ್ಲ. ಚದುರಿ ಹೋದ ವಚನಗಳನ್ನು ಆಯ್ದು ಸಂಕಲಿಸಿದ ಪ್ರಪ್ರಥಮ ಸಂಕಲನಕಾರ, ವಚನ ಸಾಹಿತ್ಯಕ್ಕೆ ಇವನ ಸಂಕಲನ ಒಂದು ಅಮೂಲ್ಯವಾದ ಕಾಣಿಕೆ.

ಕವಿಚರಿತೆಗಾರರು ಗುಬ್ಬಿ ಮಲ್ಲಣ್ಣನ 'ಗಣಭಾಷ್ಯರತ್ನ ಮಾಲೆ' ಮತ್ತು 'ವಾತುಲ ತಂತ್ರ ಟೀಕೆ'ಗಳನ್ನು ಹೆಸರಿಸಿದ್ದಾರೆ. ರೆ॥ ಎಫ್. ಕಿಟೆಲ್ ನಾಗವರ್ಮನ ಛಂದಸ್ಸಿಗೆ ಬರೆದ ಪ್ರಸ್ಥಾವನೆಯಲ್ಲಿ 'ರಾಮಸ್ತವರಾಜ' ವೆಂಬ ತೆಲುಗು ಕೃತಿಯನ್ನು ಉಲ್ಲೇಖಿಸಿದ್ದಾರೆ. ಎಸ್. ಶಿವಣ್ಣನವರು ಚಿತ್ರದುರ್ಗದ ಬೃಹನ್ಮಠದಲ್ಲಿ 'ಯೋಗ ಷಟ್ ಸ್ಥಲ ಟೀಕೆ' ಹಸ್ತ ಪ್ರತಿಯನ್ನು ಸಂಶೋಧಿಸಿದ್ದಾರೆ. ಬೆಂಗಳೂರು ವಿಶ್ವ ವಿದ್ಯಾನಿಲಯಲದಲ್ಲಿ 'ವರರುಚಿ ಕೃತ' 'ಏಕಾಕ್ಷರ ನಿಘಂಟು ಟೀಕೆ' ಇದರಲ್ಲಿನ ೩೯ ಶ್ಲೋಕಗಳಿಗೆ ಗುಬ್ಬಿ ಮಲ್ಲಣ್ಣ ಬರೆದ ಟೀಕೆ ಉಪಲಬ್ದವಿದೆ. ಗುಬ್ಬಿ ಮಲ್ಲಣ್ಣ ರಚಿಸಿದ 'ದಿವ್ಯಾಗಮಸಾರ ಪಂಚಮ ಪಟಲದ ಟೀಕೆ'ಯ ಹಸ್ತಪ್ರತಿ ಬೆಂಗಳೂರು ವಿಶ್ವ ವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ಮತ್ತು ಚಿತ್ರದುರ್ಗ ಮಠದ ಹಸ್ತ ಪ್ರತಿಭಂಡಾರದಲ್ಲಿ ಇದೆ. ಈ ಟೀಕೆಗೆ "ವೀರ ಮಾಹೇಶ್ವರಾಚಾರ ನಿರೂಪಣಾ" ಎಂದು ಗುಬ್ಬಿ ಮಲ್ಲಣ್ಣ ಕರೆದಿದ್ದಾನೆ. ಇವನದೆ ಇನ್ನೊಂದು ಕೃತಿ "ಕಾಲಜ್ಞಾನ ತಂತ್ರಟೀಕೆ" ಎಂಬ ಕೃತಿಯು ಲಭ್ಯವಾಗಿಲ್ಲ.

ಉಭಯ ಭಾಷಾ ವಿದ್ವಾಂಸನಾದುದರಿಂದ ತನ್ನ ಕಣ್ಣ ಮುಂದೆ ಇದ್ದ ನೂರಾರು ವಚನ ಸಾಹಿತ್ಯದ ಕಟ್ಟುಗಳು, ಪ್ರಾಚೀನ ವೇದ ಉಪನಿಷತ್ತು, ಪುರಾಣ, ಆಗಮ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದುದರಿಂದ 'ಗಣಭಾಷ್ಯರತ್ನಾಮಾಲೆ' ಯಂತಹ ಗ್ರಂಥವನ್ನು ಸಂಕಲನ ಮಾಡಲು ಸಾಧ್ಯವಾಯಿತು.

---

೧೪೪. "ಜಯಮಂಗಲಿ' ೭೯ ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ತಂದ ಸ್ಮರಣ ಸಂಚಿಕೆ. ಪುಟ–೧೦೧.

೧೪೫. ೧. ಕವಿಚರಿತೆಕಾರರು ಈತ ತೋಂಟದ ಸಿದ್ಧಲಿಂಗನ ಶಿಷ್ಯನೆಂದು ಭಾವಿಸಿ ಈತನ ಕಾಲ ಸು.ಕ್ರಿ.ಶ. ೧೪೭೫ ಎಂದಿದ್ದಾರೆ.
೨. ಎಂ.ಆರ್. ಶ್ರೀನಿವಾಸ್ ಮೂರ್ತಿಯವರು ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ' ಯಲ್ಲಿ ಗುಬ್ಬಿ ಮಲ್ಲಣ್ಣನ ಹೆಸರು ಉಕ್ತವಾಗಿರುವುದನ್ನು ಉಲ್ಲೇಖಿಸಿ ಈತನ ಕಾಲ ಕ್ರಿ.ಶ. ೧೪೨೮ ಅಥವಾ ೧೪೩೦ ಎಂದು ನಿರ್ಧರಿಸಿದ್ದಾರೆ.
೩. ಡಾ॥ ಎಂ.ಚಿದಾನಂದಮೂರ್ತಿ ಅವರು ಕ್ರಿ.ಶ. ೧೪೦೦ ರಿಂದ ೧೪೨೦ ಎಂದು ಹೇಳಿದ್ದಾರೆ. 'ವಚನ ಸಾಹಿತ್ಯ'. ಪು–೯೭

ಇದರಲ್ಲಿ ೪೦ ಜನ ವಚನಕಾರ ವಚನ ಕಾರ್ತಿಯರ ೪೮೯ ವಚನಗಳು[೧೪೬] ಮತ್ತು ೪೮೦ ಸಂಸ್ಕೃತ ಶ್ಲೋಕಗಳಿವೆ. ಈ ಎಲ್ಲಾ ವಚನಗಳನ್ನು ಸ್ಥಲಾನುಸಾರಿಯಾಗಿ ಜೋಡಿಸಿದ್ದಾನೆ. "ಭಾಷ್ಯ ರತ್ನ ಮಾಲೆಯಂ ವರವೇದಶಾಸ್ತ್ರ, ಪುರಾಣಾಗಮೇತಿಹಾಸಾದಿನಾನಾಧರ್ಮ ಶಾಸ್ತ್ರೋಕ್ತಂ ಗ್ರಂಥಗಳಿಂ, ಆಧ್ಯರ ವಚನಂಗಳಿಂ ನೂರೊಂದು ಸ್ಥಲಮಾಗೆ ಸೇರಿಸಿದಂ ಹರಶರಣರಣುಗಂ ಗುಬ್ಬಿಯ ಮಲ್ಲಣ್ಣಂಗಳ್" ಎಂದು ಹೇಳಿಕೊಂಡಿದ್ದಾನೆ. ಈ ಕೃತಿಯಲ್ಲಿ ಅನುಭವಸ್ಥಲಾಧಿಯಾಗಿ, ಸದ್ಭಕ್ತ ಮಹಾತ್ಮ್ಯ ಸ್ಥಲಾಂತ್ಯವಾದ ೧೦೧ ಸ್ಥಲಗಳಿವೆ. ಈ ನೂರೊಂದು ಸ್ಥಲಗಳಲ್ಲಿ ಅಡಕವಾಗಿರುವ ಇಲ್ಲಿಯ ವಚನಗಳ ಮೂಲಕ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವುದು ಆತನ ಉದ್ದೇಶವಾಗಿದೆ.[೧೪೭] ಈ ನೂರೊಂದು ಸ್ಥಲಗಳಲ್ಲಿ ೪೪ ಅಂಗಸ್ಥಲ , ೪೫ ಲಿಂಗಸ್ಥಲ ಮತ್ತು ೧೨ ನಿರಂಗ ಸ್ಥಲಗಳಿವೆ[೧೪೮]. ಪ್ರತಿಯೊಂದು ಸ್ಥಲದ ಆರಂಭದಲ್ಲಿ ಅಯಾ ಸ್ಥಲದ ಪರಿಚಯ ಮಾಡಿಕೊಟ್ಟು, ವಿಷಯ ಸಮರ್ಥನೆಗೆ ಪುರಾಣ ಮುಂತಾದ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳನ್ನು ಉದ್ಧರಿಸಿ ಅವುಗಳಿಗೆ ಕನ್ನಡದಲ್ಲಿ ವಿವರಣೆ ಕೊಡುತ್ತಾನೆ. ಕೊನೆಯಲ್ಲಿ ಅದೇ ವಿಷಯವನ್ನು ವಚನಕಾರರು ಹೇಳಿದ್ದಾರೆ ಎಂಬುದನ್ನು ದೃಢೀಕರಿಸಲು ಸಂಬಂಧಪಟ್ಟ ವಚನಗಳನ್ನು ಉದಾಹರಿಸುತ್ತಾರೆ.[೧೪೯]

೨. ಮಹಾಲಿಂಗದೇವ (ಕ್ರಿ.ಶ.ಸು.೧೪೩೦)

ಪುಲಿಗೆರೆಯ ಪಾದಾರಾಧಕನಾದ ಈತನಿಗೆ ವೀರಶೈವಾಗಮಾಚಾರ್ಯನೆಂಬ ಹೆಗ್ಗಳಿಕೆಯುಂಟು. ಈತನಿಗೆ ವಾರಣಾಸೀಂದ್ರ ನೆಂಬ ಇನ್ನೊಂದು ಹೆಸರಿದೆ.[೧೫೦] ಈತ ವೇದ, ಸ್ಮೃತಿ, ಪುರಾಣ, ಆಗಮ, ಇತಿಹಾಸ ಮೊದಲಾದ ಶಾಸ್ತ್ರಗಳಲ್ಲಿ ನಿಷ್ಣಾತನಾಗಿದ್ದನೆಂದು ತಿಳಿಯುತ್ತದೆ.[೧೫೧]

ಜಕ್ಕಣ್ಣನ ಪ್ರಾರ್ಥನೆಯಂತೆ ಆತನಿಗೆ ಬೋಧನೆ ಮಾಡುವ ರೀತಿಯಲ್ಲಿ ತನ್ನ ಕೃತಿಗಳನ್ನು ಸಂಯೋಜಿಸಿದ್ದಾನೆ. ಈತನ 'ಏಕೋತ್ತರ ಶತಸ್ಥಲ'ದಲ್ಲಿ ೧೦೧ ಸ್ಥಲಗಳಿದ್ದು, ಪ್ರತಿಸ್ಥಲದಲ್ಲಿಯೂ ಆಯಾಸ್ಥಲದ ಹೆಸರು, ಸೂತ್ರ, ವಚನ ಹಾಗೂ ನಿರ್ದೇಶನ ಪದಗಳಿವೆ. ಇದರಲ್ಲಿ ೩೪ ವಚನಕಾರರ ೯೩೧ವಚನಗಳಿವೆ. ಈ ಕೃತಿಯಲ್ಲದೆ "ಷಟ್‌ಸ್ಥಲ ಜ್ಞಾನ ಚಾರಿತ್ರ್ಯ[೧೫೨] ವಚನದ ಟೀಕೆ ರಚಿಸಿದ್ದಾನೆ. ಇದರಲ್ಲಿ ಅಲ್ಲಮನ ೯೪ ವಚನಗಳಿಗೆ ಟೀಕೆ ಬರೆದಿದ್ದಾನೆ. ಪ್ರೋ. ಸಿ. ಮಹಾದೇವಪ್ಪನವರು 'ಏಕೋತ್ತರ ಶತಸ್ಥಲ ಸಾರಾಮೃತ' ದ ಕರ್ತೃ ಮಹಾಲಿಂಗದೇವನಾಗಿರಬಹುದೆಂದು ಹೇಳಿದ್ದಾರೆ.[೧೫೩]

---

೧೪೬. ಡಾ॥ ಎಂ.ಚಿದಾನಂಮೂರ್ತಿ ಅವರು ೩೯ವಚನಕಾರರ ೪೮೫ ವಚನಗಳಿವೆ ಎಂದಿದ್ದಾರೆ.(ವಚನಸಾಹಿತ್ಯ.ಪುಟ–೧೯೭)

೧೪೭. ಡಾ॥ ಎಂ.ಚಿದಾನಂಮೂರ್ತಿ, 'ವಚನ ಸಾಹಿತ್ಯ'.ಪುಟ–೧೯೭

೧೪೮. ಡಾ॥. ಎಸ್. ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ– ದ್ವಿತೀಯಘಟ್ಟ.' ಪುಟ–೧೨ (ಲೇಖನ, ಎಸ್ ಶಿವಣ್ಣ: 'ವಚನ ಸಂಕಲನಗಳು ದ್ವಿತೀಯ ಘಟ್ಟ')

೧೪೯. ಡಾ॥ ಎಂ, ಚಿದಾನಂದ ಮೂರ್ತಿ, 'ವಚನ ಸಾಹಿತ್ಯ' ಪುಟ–೧೯೭

೧೫೦. ಡಾ॥ ಎಸ್ ವಿದ್ಯಾಶಂಕರ್, 'ವಚನ ಸಾಹಿತ್ಯ– ದ್ವಿತೀಯ ಘಟ್ಟ.' ಪುಟ–೧೩

೧೫೧. ಡಾ॥ ಎಂ, ಚಿದಾನಂದ ಮೂರ್ತಿ, 'ವಚನ ಸಾಹಿತ್ಯ.; ಪುಟ–೧೯೮

೧೫೨. ಈ ಕೃತಿಗೆ "ಷಟ್‌ಸ್ಥಲ 'ವಿವೇಕಾ' ಎಂಬ ಹೆಸರೂ ಇದೆ.

೧೫೩. ಡಾ॥ ಎಸ್ ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ– ದ್ವಿತೀಯಘಟ್ಟ.' ಪುಟ–೧೪

೩. ಜಕ್ಕಣ್ಣಾರ್ಯ (ಕ್ರಿ.ಶ.ಸು.೧೪೩೦)

ಕುಮಾರ ಬಂಕನಾಥನ ಕರಜಾತನಾದ ಜಕ್ಕಣ್ಣಾರ್ಯ. ವಿಜಯನಗರದ ಪ್ರೌಢದೇವರಾಯನಲ್ಲಿ ದಂಡನಾಯಕನಾಗಿದ್ದನು. ಈತನಿಗೆ ಭಕ್ತಿ ಭಂಡಾರಿ ಎಂಬ ಬಿರುದಿತ್ತೆಂದು ತಿಳಿದು ಬರುತ್ತದೆ. ಗುಬ್ಬಿ ಮಲ್ಲಣ್ಣಾರ್ಯನ "ವೀರಶೈವಾಮೃತ ಮಹಾಪುರಾಣ" ದಲ್ಲಿ ಈತನ ಉಲ್ಲೇಖ ಬರುತ್ತದೆ. ನೂರೊಂದು ವಿರಕ್ತರಲ್ಲಿ ಹಲವರು ಈತನ ಸಮಕಾಲೀನರು. ಈತನ ಕೃತಿಗಳು ೧. ವಚನಗಳು ೨. ಏಕೋತ್ತರ ಶತಸ್ಥಲ. ಈ ಏಕೋತ್ತರ ಶತಸ್ಥಲ ಸ್ಥಲನಾಮ, ಸ್ವರ ವಚನ ಸೂತ್ರಗಳ ರೀತಿಯಲ್ಲಿ ಸಂಕಲಿತವಾಗಿದ್ದು ಅಂಗಸ್ಥಲ, ಲಿಂಗಸ್ಥಲಗಳಲ್ಲಿ ೫೫೦ ಪದಗಳಿವೆ. ಇವನು ಮಹಾಲಿಂಗನ ಏಕೋತ್ತರ ಶತಸ್ಥಲದ ೫೫೦ ವಚನಗಳಿಗೆ ಟೀಕೆ ಬರೆದಿರುವುದನ್ನು ಸಿ. ಮಹಾದೇವಪ್ಪ ನವರು ಬೆಳಕಿಗೆ ತಂದಿರುತ್ತಾರೆ[೧೫೪]. ಜಕ್ಕಣ್ಣಾರ್ಯನು ಸಂಸ್ಕೃತದಲ್ಲಿ "ಏಕೋತ್ತರ ಶತಸ್ಥಲ" ಎಂಬ ಕೃತಿಯನ್ನು ಬರೆದಿದ್ದು ಶ್ರೀ ಗಿರೀಂದ್ರ ಅವರು ಕನ್ನಡ ಟೀಕೆ ಬರೆದಿದ್ದಾರೆ.[೧೫೫]

೪. ಕಲ್ಲುಮಠದ ಪ್ರಭುದೇವ:- (ಕ್ರಿ.ಶ.ಸು. ೧೪೩೦)

ಈತ ವಿಜಯನಗರದಲ್ಲಿನ ಕಲ್ಲುಮಠದ ನಿವಾಸಿ. ೧೫ನೇ ಶತಮಾನದಲ್ಲಿ ವಚನ ಸಾಹಿತ್ಯ ಪ್ರಸಾರಕ್ಕಾಗಿ ಶ್ರಮಿಸಿದ ನೂರೊಂದು ವಿರಕ್ತರಲ್ಲಿ ಇವನೂ ಒಬ್ಬನೆಂದು ಕವಿ ಚರಿತೆಕಾರರು ಹೇಳಿದ್ದಾರೆ. ಪ್ರೌಢರಾಯನ ಕಾವ್ಯದಲ್ಲಿ ನೂರೊಂದು ವಿರಕ್ತರೊಳಗೆ ಕಲ್ಲುಮಠದ ಪ್ರಭುದೇವರ ಹೆಸರು ಉಲ್ಲೇಖವಾಗಿದೆ. ಆದರೆ ಮೋದಿಯ ರುದ್ರನು ತನ್ನ "ನೂರೊಂದು ವಿರಕ್ತರ ಕಾವ್ಯ" ದಲ್ಲಿ ಕಲ್ಲುಮಠದ ಪ್ರಭುದೇವರ ಹೆಸರನ್ನು ಪರಿಗಣಿಸಿಲ್ಲ. ಈ ಕಾರಣದಿಂದ ಕಲ್ಲುಮಠದ ಪ್ರಭುದೇವರನ್ನು ನೂರೊಂದು ವಿರಕ್ತರ ಮಾಲಿಕೆಯಲ್ಲಿ ಪರಿಗಣಿಸುವುದು ಕಷ್ಟ ಎಂದು ಆರ್ ಸಿ. ಹಿರೇಮಠರು ಅಭಿಪ್ರಾಯ ಪಡುತ್ತಾರೆ.[೧೫೬] ಈತನನ್ನು ಅದೃಶ್ಯ (೧೫೮೦), ಸಿದ್ಧನಂಜೇಶ (೧೬೩೦) ಮತ್ತು ಶಾಂತಲಿಂಗ ದೇಶಿಕ (೧೬೭೨) ರು ಹೆಸರಿಸಿದ್ದಾರೆ. ಈತನ "ಲಿಂಗಲೀಲಾ ವಿಲಾಸ ಚಾರಿತ್ರ"ದಲ್ಲಿ ಹದಿನಾರು ಸ್ಥಲಗಳಿದ್ದು ೩೭ ಶಿವಶರಣ/ ಶರಣೆಯರ ೭೮೯ ವಚನಗಳಿಗೆ. ಈ ವಚನಗಳ ಮಧ್ಯೆ ಸಂಸ್ಕೃತ ಶ್ಲೋಕಗಳಿವೆ. ವಚನ ಹಾಗೂ ಶ್ಲೋಕಗಳಿಗೆ ಟೀಕೆ ಬರೆದಿದ್ದಾನೆ. ಈ ಲಿಂಗಲೀಲಾ ವಿಲಾಸ ಚಾರಿತ್ರ್ಯವೇ ಶರಣರ ಚರಿತ್ರೆಯೆಂದು ಪುರಾತನರ ವಚನಗಳಿಂದ ಕಾಣಬರುವುದರಿಂದ ಮಿಕ್ಕಿನ ವೇದಾಗಮಂಗಳು ಜಡ್ಡುಗೊಜಡೆಂದು ಅವ ಬಿಟ್ಟು ಪುರಾತನರ ವಚನ ಏಳುನೂರ ಎಪ್ಪತ್ತು ತೆಗೆದು ಕೊಂಡು ಷೋಡಶ ಪರಿಶ್ರಮದಿಂದ ಸೇರಿಸಿ ವ್ಯಾಖ್ಯಾನವ ಮಾಡಿದ ವಿದ್ಯಾನಗರದ (ವಿಜಯನಗರ) ಕಲ್ಲುಮಠದ ಪ್ರಭುದೇವಾರ್ಯನು[೧೫೭] "ಆ ಷಟ್ ಸ್ಥಲ ಮಾರ್ಗವೇ ಲಿಂಗಲೀಲಾ ವಿಲಾಸ ಚಾರಿತ್ರ್ಯ ವೆಂದು ನಿರೂಪಿಸಿದ ಗುರು ವಚನವಿಡಿದು, ಗುರುಪ್ರಸಾದ ಜ್ಞಾನದಿಂದ ವಿದ್ಯಾನಗರದ ಕಲ್ಲಮಠದ ಪ್ರಭುದೇವಾರ್ಯನು ಪುರಾತನರ ವಚನಂಗಳಲ್ಲಿಯ ಸಾರವಾದ ವಚನಂಗಳ ತೆಕ್ಕೊಂಡು ಷೋಡಶ ಸ್ಥಲ ಪರಿಶ್ರಮದಿಂದ ಸೇರಿಸಿ ಅರ್ಥೈಸಿದ ವಚನಾಗಮ"[೧೫೮] ವೆಂದು ಹೇಳಿಕೊಂಡಿದ್ದಾನೆ. ಇಲ್ಲಿ ಪ್ರಭುದೇವನು ತಾನು ಆಯ್ದುಕೊಂಡ ವಚನಗಳನ್ನು 'ವಚನಾಗಮ'ವೆಂದು ಕರೆದಿರುತ್ತಾನೆ.

---

೧೫೪. Research corner series No.2.೧೯೬೦–ಪುಟ–೪

೧೫೫. ಡಾ॥ ಎಸ್. ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ–ದ್ವಿತೀಯ ಘಟ್ಟ.' ಪುಟ–೧೪

೧೫೬. ಡಾ॥. ಸಿ. ಹಿರೇಮಠ. 'ಷಟ್‌ಸ್ಥಲಪ್ರಭೆ.' ಪುಟ–೨೭೮

೧೫೭. ಎಸ್.ಎಸ್.ಭೂಸನೂರಮಠ,(ಸಂ) 'ಲಿಂಗಲೀಲಾ ವಿಲಾಸ ಚಾರಿತ್ರ,' ಪು–೪೮೯

೧೫೮. ಎಸ್.ಎಸ್. ಭೂಸನೂರಮಠ(ಸಂ) 'ಲಿಂಗಲೀಲಾ ವಿಲಾಸ ಚಾರಿತ್ರ,' ಪು–೩

ಈ ಸಂಕಲನದಲ್ಲಿ ನಿಷ್ಕಲಲಿಂಗ ಸ್ಥಲದಿಂದ ಸ್ವಲೀಲಾನಂದ ಭಕ್ತಸ್ಥಲದ ವರೆಗಿನ ೧೬ ಸ್ಥಲಗಳಿವೆ. ಈ ವಿಭಜನೆ ಈ ಹಿಂದಿನ ಸಿದ್ಧಾಂತ ಶಿಖಾಮಣಿ, ಏಕೋತ್ತರಶತಸ್ಥಲಗಳಲ್ಲದೆ, ಪ್ರಭುದೇವ, ಬಸವಣ್ಣ, ಚನ್ನಬಸವಣ್ಣನವರ ವಚನಗಳ ಸ್ಥಲವಿಭಜನೆಯಿಂದ ಭಿನ್ನವಾಗಿದೆ. ಅವೆಲ್ಲ ಪಿಂಡಸ್ಥಲದಿಂದ ಪ್ರಾರಂಭವಾದರೆ,ಇದು ಪಿಂಡಸ್ಥಲ ಪೂರ್ವದ ನಿಷ್ಕಲಲಿಂಗಸ್ಥಲ, ಮಹಾಲಿಂಗಸ್ಥಲ, ಸಂಸಾರ ಸಂಬಂಧ ಸ್ಥಲಗಳನ್ನು ಕಲ್ಪಿಸಿದೆ. ಏಕೋತ್ತರ ಸ್ಥಲಗಾರರು ಲಿಂಗಾಂಗ ಸಾಮರಸ್ಯದ ಸಾಧನಮಾರ್ಗಕ್ಕೆ ಅನುಕೂಲವಾಗುವಂತೆ ವಚನಗಳನ್ನು ವಿಂಗಡಿಸಿದ್ದಾರೆ. ಕಲ್ಲುಮಠದ ಪ್ರಭುದೇವನು ವೀರಶೈವ ಸಿದ್ಧಾಂತದ ದೃಷ್ಟಿಯಿಂದ ಅದನ್ನು ತಾಂತ್ರಿಕ ವಿಭಾಗಗಳನ್ನಾಗಿ ಮಾಡಿದ್ದಾನೆ. ಲಿಂಗಲೀಲಾ ವಿಲಾಸ ಚಾರಿತ್ರದ ವಿಶೇಷತೆ ಏನೆಂದರೆ ಹಿಂದಿನ ಸ್ಥಲದ ವಿವರಣೆಯಿಂದ ಆರಂಭಗೊಂಡು ಪ್ರಕೃತ ಸ್ಥಲವನ್ನು ನಿರ್ದಿಷ್ಟಪಡಿಸುವುದಾಗಿದೆ.[೧೫೯] ಈತನ ಇನ್ನೊಂದು ಕೃತಿಯಾದ 'ಮಂತ್ರಗೋಪ್ಯಟೀಕೆ'ಯಲ್ಲಿ ಪ್ರಭುದೇವರ ೨೭ಪದಗಳಿಗೆ ಟೀಕೆ ಬರೆದಿದ್ದಾನೆ. ಮಂತ್ರಗೋಪ್ಯದ ಟೀಕೆಯನ್ನು ಗುಮ್ಮಳಾಪುರದ ಸಿದ್ಧಲಿಂಗ ತನ್ನ 'ಶೂನ್ಯ ಸಂಪಾದನೆಯ' ಆರಂಭದಲ್ಲಿ ಉಲ್ಲೇಖಿಸಿದ್ದಾನೆ.

೫. ಕರಸ್ಥಲದ ವೀರಣ್ಣೊಡೆಯ (ಕ್ರಿ.ಶ.ಸು.೧೪೩೦)

ಇಮ್ಮಡಿ ಪ್ರೌಢದೇವರಾಯ (೧೪೧೯–೧೪೪೬) ನ ಸಮಕಾಲೀನನಾದ ಈತ ಕರಸ್ಥಲದ ವೀರಣ್ಣೊಡೆಯನೆಂದು ಪ್ರಸಿದ್ಧಿಯಾಗಿದ್ದಾನೆ. ಈತನಿಗೆ ವೀರಯ್ಯ, ವೀರಣಯ್ಯ, ವೀರಣ್ಣದೇವರು, ವೀರಣ್ಣೊಡೆಯ, ಗುರು ವೀರಣ್ಣಯ್ಯ, ಕರಸ್ಥಲದ ವೀರಣ್ಣ, ಕರಸ್ಥಲದ ಗುರುಶಾಂತ ವೀರಯ್ಯ ಎಂದು ನಾಮಾಂತರಗಳಿವೆ[೧೬೦].

ನೂರೊಂದು ವಿರಕ್ತರಲ್ಲಿ ಪ್ರಸಿದ್ಧನಾದ ಕರಸ್ಥಲದ ನಾಗಿದೇವನ ಗುರುವಾದ ಈತ ಎಲ್ಲಾ ನೂರೊಂದು ವಿರಕ್ತರಿಗೆ ಆಧ್ಯನಾಗಿ, ವಿರಕ್ತ ಸಮೂಹದ ನಾಯಕನಾಗಿ, ಅರಸನಿಗೆ ಆಪ್ತಮಂತ್ರಿಯಾಗಿ, ಅಳಿಯನಾಗಿ , ರಾಜಯೋಗಿಯಾಗಿ ವೀರಶೈವ ಧರ್ಮ– ತತ್ವ–ಸಿದ್ಧಾಂತ, ಸಾಹಿತ್ಯ, ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಕಾರಣ ಪುರುಷನಾಗಿದ್ದಾನೆ.

ಅರಸನ ಮಂತ್ರಿಯಾಗಿದ್ದುಕೊಂಡು ಲೌಕಿಕ ಬದುಕನ್ನು ಬಾಳಿ, ಅಲೌಕಿಕ ಸಿದ್ಧಿಯನ್ನು ಸಂಪಾಧಿಸಿದ ವೀರಣ್ಣನು ಲೋಕಾನುಭವ, ಶಿವಾನುಭವಗಳೆಡರನ್ನು ಗಳಿಸಿಕೊಂಡಿದ್ದಾನೆ. ಈತ ವೀರಶೈವ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಈಗ ಉಪಲಬ್ದವಾದ ಈತನ ಕೃತಿಗಳು.

೧. ಕರಸ್ಥಲದ ವೀರಣ್ಣಗಳ ವಚನ : ಇವು ಸ್ವರ ವಚನಗಳಿರಬಹುದು.ಕೃತಿ ಅಲಭ್ಯ.

೨. ನಿಷ್ಕಲ ಶತಕ: ನಿಜಶಾಂತ ನಿಷ್ಕಳಾ ಅಂಕಿತದ ೧೦೧ ವೃತ್ತಗಳಿವೆ. ಕೃತಿ ಸ್ಥಲಾನುಗುಣವಾಗಿ ವಿಭಾಗಿತವಾಗಿದ್ದು, ವೀರಶೈವ ಧರ್ಮ ನಿರೂಪಣೆ ಶತಕದ ವಸ್ತು.

---

೧೫೯. ಡಾ॥ವಿ.ಶಿವಾನಂದ. 'ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ,' ಪು–೨೬

೧೬೦. ಡಾ॥ ವೀರಣ್ಣರಾಜೂರ. 'ಬಸವೋತ್ತರ ಯುಗದ ವಚನಕಾರರು.' ಪುಟ–೧೧

೩. ನಿತ್ಯ ನಿಜ ಗುರುಶಾಂತ ಅಂಕಿತದ ೧೦೮ ಕಂದಗಳ ಕೃತಿಯೊಂದು ಕರಸ್ಥಲದ ವೀರಣ್ಣೊಡೆಯ ಮತ್ತು ಕರಸ್ಥಲದ ನಾಗಿದೇವರ ಹೆಸರಿನಲ್ಲಿದೆ. ಈ ಕೃತಿಯ ಕರ್ತೃತ್ವದ ಬಗೆಗೆ ಸಂಶೋಧನೆ ಮುಂದುವರಿಯಬೇಕಾಗಿದೆ.

೪. ಕರಸ್ಥಲದ ವೀರಣ್ಣೊಡೆಯ ಕಂದ : ಗುರುಶಾಂತ ಅಂಕಿತದ ೨೫ಕಂದ ಕಂದಗಳಿವೆ. ಇಷ್ಟಲಿಂಗ ಸ್ತುತಿ ಕೃತಿಯ ವಸ್ತು.[೧೬೧]

೫. ಲಿಂಗಸ್ತೋತ್ರದ ವಚನ : ಇದು ಪ್ರಭುದೇವರ ವಚನಗಳ ಸಂಗ್ರಹ[೧೬೨]

ಈಗ ದೊರೆತಿರುವ ಈತನ ಕೃತಿಗಳ ಅಂಕಿತಗಳಲ್ಲಿ ವೈವಿಧ್ಯತೆ ಇದೆ. ಹೀಗಾಗಿ ಈತನ ನಿಜವಾದ ಅಂಕಿತ ಯಾವುದು ಎಂಬ ವಿಷಯದಲ್ಲಿ ಗೊಂದಲ ಉಂಟಾಗಿದೆ ಎಂದು ವೀರಣ್ಣರಾಜೂರ ಅವರು ಅಭಿಪ್ರಾಯ ಪಡುತ್ತಾರೆ. ಈತ ವಚನಗಳನ್ನು ಸಂಕಲನ ಮಾಡಿದ್ದರೂ ವೀರಶೈವ ತಳಹದಿಯ ಮೇಲೆ ವೃತ್ತಗಳನ್ನು ಕಂದಗಳನ್ನು ಸಂಕಲಿಸಿದ್ದಾನೆ.

೬. ಕರಸ್ಥಲದ ಮಲ್ಲಿಕಾರ್ಜುನ ಒಡೆಯ.(ಕ್ರಿ.ಶ.ಸು.೧೪೩೦)

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಕರಸ್ಥಲದ ಶಾಂತೇಶ, ಕರಸ್ಥಲದ ವೀರಣ್ಣೊಡೆಯ ಮತ್ತು ಕರಸ್ಥಲದ ನಾಗಿದೇವ ಎಂಬ ಹೆಸರುಗಳು ಪ್ರಸಿದ್ಧವಾಗಿವೆ. ಇವರು ಒಂದೇ ಪರಂಪರೆಗೆ ಸೇರಿದ ಗುರುಶಿಷ್ಯರು.[೧೬೩] ಕರಸ್ಥಲದ ಶಾಂತೇಶನ ಶಿಷ್ಯ ವೀರಣ್ಣೊಡೆಯ, ವೀರಣ್ಣೊಡೆಯನ ಶಿಷ್ಯ ನಾಗಿದೇವ. ಇವರ ಸಾಲಿಗೆ ಸೇರುವ ಮತ್ತೊಬ್ಬ ವ್ಯಕ್ತಿ ಕರಸ್ಥಲದ ಮಲ್ಲಿಕಾರ್ಜುನ ಒಡೆಯ. ಈತ ತನ್ನ ಹೆಸರು ಹಾಗೂ ಗುರುವಿನ ಹೆಸರನ್ನಲ್ಲದೆ ಮತ್ತಾವ ಸಂಗತಿಯನ್ನು ಕೃತಿಯಲ್ಲಿ ತಿಳಿಸಿಲ್ಲ "ಬ್ರಹ್ಮಾದ್ವೈತ ಸಿದ್ಧಾಂತ ಷಟ್ ಸ್ಥಲಾಭರಣ"[೧೬೪] ಎಂಬ ವಚನ ಸಂಕಲನದ ಪ್ರತಿಸ್ಥಲದ ಅಂತ್ಯದ ಗದ್ಯದಲ್ಲಿ "ಶ್ರೀ ಕರಸ್ಥಲದ ಮಲ್ಲಿಕಾರ್ಜುನ ಒಡೆಯರು ಸೇರಿಸಿದ ಮಹಾನುಭವ ಬೋಧೆಯಪ್ಪ ಮದ್ಬ್ರಹ್ಮಾದ್ವೈತ ಸಿದ್ಧಾಂತದ ಷಟ್‌ಸ್ಥಲಾಭರಣ" ಎಂದು ಹೇಳಲಾಗಿದ್ದು, ಈ ಕೃತಿಯ ಸಂಕಲನಕಾರ ಕರಸ್ಥಲದ ಮಲ್ಲಿಕಾರ್ಜುನ ಒಡೆಯ ಎಂಬುದು ಸ್ಪಷ್ಟವಾಗುತ್ತದೆ. ಈತ ಕೃತಿಯ ಆದಿ ಅಂತ್ಯದಲ್ಲಿರುವ ಕಂದ ಪದ್ಯಗಳಲ್ಲಿ 'ಪರಮಗುರು ಶಾಂತೇಶ' ಎಂದು ಉಲ್ಲೇಖಿಸಿದ್ದಾನೆ. ಈ ಶಾಂತೇಶ ಇವನ ಗುರುವಾಗಿರಬೇಕು ಈ ಹಿನ್ನಲೆಯಲ್ಲಿ ಮಲ್ಲಿಕಾರ್ಜುನ ಒಡೆಯನು ಮೇಲಿನವರ ಪರಂಪರೆಗೆ ಸೇರಿದವನಾಗಿರುತ್ತಾನೆ.

ಬ್ರಹ್ಮಾದ್ವೈತದಲ್ಲಿ ಮಹಾಶೂನ್ಯ ಸ್ಥಲಾದಿಯಾಗಿ ಸರ್ವಶೂನ್ಯ ಸ್ಥಲಾಂತವಾದ ೬೧ ಸ್ಥಲಗಳಿವೆ. ಇಲ್ಲಿ ೪೫ ಶಿವಶರಣರ, ಶರಣೆಯರ ೬೮೩ ವಚನಗಳಿವೆ. ಅಲ್ಲದೆ ೨೪ವೃತ್ತ, ೧೧ಕಂದಗಳಿವೆ. ಈ ಸಂಗ್ರಹದಲ್ಲಿ 'ಬಸವೇಶ್ವರ' (ಪು೧೦೧) ಮತ್ತು 'ಸಂಗಮನಾಥ' (ಪು-೧೩೬) ಎಂಬ ಎರಡು ಹೊಸ ವಚನಾಂಕಿತಗಳಿವೆ.[೧೬೫]

---

೧೬೧. ಡಾ॥ ಎಸ್.ವಿದ್ಯಾಶಂಕರ(ಸಂ) 'ವಚನ ಸಾಹಿತ್ಯ ದ್ವಿತೀಯ ಘಟ್ಟ.' ಪುಟ-೧೫

೧೬೨. ಡಾ॥ ವೀರಣ್ಣರಾಜೂರ. 'ಬಸವೋತ್ತರ ಯುಗದ ವಚನಕಾರರು.' ಪುಟ-೧೨

೧೬೩. ಡಾ॥ ವೀರಣ್ಣರಾಜೂರ. 'ಬಸವೋತ್ತರ ಯುಗದ ವಚನಕಾರರು.' ಪುಟ-೧೫

೧೬೪. ಡಾ॥. ಆರ್.ಸಿ.ಹಿರೇಮಠ. (ಸಂ) 'ಬ್ರಹ್ಮಾದ್ವೈತ ಷಟ್‌ಸ್ಥಲಾಭರಣ.' (ಕ.ವಿ.ವಿ ಧಾರವಾಡ ೧೯೭೩)

೧೬೫. ಡಾ॥ ಎಸ್. ವಿದ್ಯಾಶಂಕರ. (ಸಂ) 'ವಚನ ಸಾಹಿತ್ಯ- ದ್ವಿತೀಯ ಘಟ್ಟ' ಪುಟ-೧೬.

ತೋಂಟದ ಸಿದ್ಧಲಿಂಗರ ನಂತರದ ವಚನ ಸಂಕಲನಕಾರರು

ಹನ್ನೆರಡನೇಯ ಶತಮಾನದಲ್ಲಿ ಬಸವಣ್ಣ ಹೇಗೆ ಶರಣಾಂದೋಲನ ಮತ್ತು ವಚನಾಂದೋಲನದ ಕೇಂದ್ರ ಬಿಂದುವಾಗಿದ್ದರೊ ಹಾಗೆ ಬಸವೋತ್ತರ ಯುಗದಲ್ಲಿ ತೋಂಟದ ಸಿದ್ಧಲಿಂಗಯತಿಗಳು ಕೇಂದ್ರ ವ್ಯಕ್ತಿಯಾಗಿ ಕಂಡುಬರುತ್ತಾರೆ. ಆದ್ದರಿಂದ ಇವರನ್ನು ಈ ಕಾಲವಧಿಯ ಯುಗ ಪುರುಷರೆಂದು, ಈ ಕಾಲಘಟ್ಟವನ್ನು ತೋಂಟದ ಸಿದ್ಧಲಿಂಗರ ಯುಗವೆಂದು ಕರೆಯಬಹುದು.

ವಚನ ಸಂಕಲನ ಕಾರ್ಯ ಮತ್ತು ಸಂಪಾದನ ಕಾರ್ಯ ಸಿದ್ಧಲಿಂಗ ಯತಿಗಳ ಪೂರ್ವದಲ್ಲಿ ಸಾಕಷ್ಟು ನಡೆದರೂ ಅದು ಮತ್ತಷ್ಟು ವಿಸ್ತೃತವಾಗಿ ಬದುಕಿನ ಧ್ಯೇಯವೆಂಬಂತೆ ಸಾಗಿದುದು ತೋಂಟದ ಸಿದ್ಧಲಿಂಗ ಯತಿಗಳ ಕಾಲ ಮತ್ತು ಆನಂತರದ ಕಾಲಾವಧಿಯಲ್ಲಿ ಎನ್ನಬಹುದು. ತೋಂಟದ ಸಿದ್ಧಲಿಂಗರ ಶಿಷ್ಯರು ಮತ್ತು ಪ್ರಶಿಷ್ಯರು ಈ ಕಾರ್ಯದಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

೧. ಜಿಗುನಿ ಮರುಳಾರ್ಯ : (ಕ್ರಿ.ಶ.ಸು.೧೫೭೫)

ಜಿಗುನಿ ಮರುಳದೇವನು ಜಿಗುನಿ ಮರುಳಾಚಾರ್ಯ,[೧೬೬] ಜಿಗುನಿ ಮರುಳೇಶ[೧೬೭] ಎಂದೆಲ್ಲಾ ಪ್ರಸಿದ್ಧನಾಗಿದ್ದಾನೆ. ಕವಿ ಚರಿತೆಕಾರರು ಈತನಿಗೆ ಮರುಳ ಶಂಕರ ದೇವ, ಉಜ್ಜಯನಿಯ ಮರುಳದೇವ ಎಂಬ ಹೆಸರುಗಳಿವೆ ಎಂದಿದ್ದಾರೆ.[೧೬೮] ಆದರೆ ಕವಿ ಚರಿತೆಕಾರರ ಈ ಹೇಳಿಕೆ ತಪ್ಪು ಎಂದು ಇತ್ತೀಚಿನ ಹಲವು ವಿದ್ವಾಂಸರು ಹೇಳಿದ್ದಾರೆ.[೧೬೯] ವಿರೂಪಾಕ್ಷ ಪಂಡಿತನು ತನ್ನ ಚನ್ನಬಸವ ಪುರಾಣದಲ್ಲಿ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಸುತ್ತಲಿದ್ದ ಏಳುನೂರು ಮಂದಿ ವಿರತರಲ್ಲಿ ಜಿಗುನಿ ಮರುಳದೇವನು ಒಬ್ಬನೆಂದು ಹೇಳಿದ್ದಾರೆ.[೧೭೦] ಇದರಿಂದ ಜಿಗುನಿ ಮರುಳದೇವನು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಲ್ಲಿ ಒಬ್ಬನೆಂದು ಗುರುತಿಸಬಹುದು. ಜಿಗುನಿ ಮರುಳದೇವನು ತನ್ನ ಗುರುವಾದ ತೋಂಟದ ಸಿದ್ಧಲಿಂಗ ಯತಿಗಳನ್ನು ಕುರಿತು ಒಂದು ಹಾಡನ್ನು ರಚಿಸಿದ್ದಾನೆ.

---

೧೬೬. ಚಿತ್ರಿಯ ಸಂಗ್ರಹದ ಒಂದು ಓಲೆ ಪ್ರತಿಯ ಆರಂಭದಲ್ಲಿ ಜಿಗುನಿ ಮರುಳಾಚಾರ್ಯರು ಸೇರಿಸಿದ 'ಚಿತ್ರಿಯ ಸಂಗ್ರಹ' ಎಂದಿದೆ. ಪ್ರೋ.ಸಿ.ಮಹಾದೇವಪ್ಪ : ಸಿದ್ಧಲಿಂಗ ಶಿವಯೋಗಿ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು. ಪುಟ-೧೧೩

೧೬೭. ಸೆಜ್ಜೆ ಸಿದ್ಧಲಿಂಗಾರ್ಯನ, ಮರುಳಾರ್ಯಾನ ಚರಿತ್ರೆಯ ತಾಡವೋಲೆ ಪ್ರತಿಯಲ್ಲಿ 'ಮರುಳೇಶಾಯ ನಮ: ಎಂದು ಗುರುಸ್ಮರಣೆ ಮಾಡಿರುವುದನ್ನು ಗಮನಿಸಿದರೆ ಈತನನ್ನು ಮರುಳೇಶ ಎಂದು ಕರೆಯುತ್ತಿದ್ದುದು ಸ್ಪಷ್ಟ.' ಪೂರ್ವೋಕ್ತ, ಪುಟ- ೧೧೩

೧೬೮. 'ಕನ್ನಡ ಕವಿ ಚರಿತೆ,' ಸಂ-೧, ಪುಟ-೨೧೪

೧೬೯. ಡಾ॥. ಎಸ್. ವಿದ್ಯಾಶಂಕರ (ಸಂ) 'ಜಿಗುನಿ ಮರುಳದೇವರ ಕೃತಿಗಳು.' ಪ್ರ.ಪು-೦೫

೧೭೦. 'ಚೆನ್ನ ಬಸವ ಪುರಾಣ,' ಸಂ-೬೩, ಪದ್ಯ-೪೬

"ಯೋಗಿ ಬಂದ ಕಾಣೆಯಮ್ಮ ರಾಗ ವಿ
ರಾಗ ವಿದೂರ ಜಂಗಮ ಲಿಂಗ ಬಂದ ಕಾ
– – – – – – – – –
ಮಿಸುಪ ರೋಮಾಳಿಗಳೆ ವನಸ್ಪತಿ ಭಕ್ತ
ಬಸವಾದಿಗಳ ಹೃದಯಂಗಣದಿ
ಒಸೆದು ಚರಿಸಿ ಭಕ್ತಿ ವಿಸರ ಭಿಕ್ಷದ ಬೇಡು
ತ ಸಮಾನಂದ ವಿರಕ್ತ ಸಿದ್ಧಲಿಂಗ ಯೋಗಿ ಬಂದ ಕಾಣೆ"

ಹೀಗೆ ಜಂಗಮ ಯೋಗಿಯಾದ ತನ್ನ ಗುರುವಿನ ಭವ್ಯವಾದ, ಅಸಮಾನವಾದ ನುಡಿ ಚಿತ್ರವನ್ನು ಈ ಹಾಡಿನಲ್ಲಿ ಚಿತ್ರಿಸಿ, ತನ್ನ ಅನುಪಮ ಭಕ್ತಿಯನ್ನು ಮೆರೆದಿದ್ದಾನೆ.

ಮರುಳದೇವನ ಮತ್ತೊಬ್ಬ ಗುರು ಚಂದ್ರಶೇಖರ ಮೂರ್ತಿ ಎಂಬುದು 'ಚಿತ್ಕ್ರಿಯ ಸಂಗ್ರಹದ ಆರಂಭ ಶ್ಲೋಕದಿಂದ ತಿಳಿದು ಬರುತ್ತದೆ. ಈ ಚಂದ್ರಶೇಖರ ಮೂರ್ತಿ ಅಮೂರ್ತ ವ್ಯಕ್ತಿಯಾಗಿರದೆ ತೋಂಟದ ಸಿದ್ಧಲಿಂಗನ ಶಿಷ್ಯನು, ಶಾಂತೇಶನ ಗುರುವು ಆದ ಚಂದ್ರಶೇಖರನೆಂದು ಕಾಣುತ್ತದೆ'.[೧೭೧] ಎಂದು ಎಸ್.ಶಿವಣ್ಣನವರು ಅಭಿಪ್ರಾಯ ಪಡುತ್ತಾರೆ. ವಿರೂಪಾಕ್ಷ ಪಂಡಿತನು ಜಿಗುನಿ ಮರುಳದೇವ ತೋಂಟದ ಸಿದ್ಧಲಿಂಗರ ಪ್ರಮುಖ ಶಿಷ್ಯರಲ್ಲಿ ಒಬ್ಬನೆಂದು ಹೇಳಿರುವುದರಿಂದ, ಮರುಳಾರ್ಯನ ಹಾಡಿನಲ್ಲಿ ವಿರಕ್ತ ಸಿದ್ಧಲಿಂಗರು ಉಲ್ಲೇಖಗೊಂಡಿರುವುದರಿಂದ ಮರುಳದೇವನ ಕಾಲ ಸು.ಕ್ರಿ.ಶ.೧೫೫೦ ಎಂದು ಗುರುತಿಸಬಹುದು. ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯರಲ್ಲಿ ನಿಜಗುಣ ಶಿವಯೋಗಿಗಳು ಒಬ್ಬರು. ನಿಜಗುಣ ಶಿವಯೋಗಿಗಳ ಗುರುಗಳು ಜಿಗುನಿ ಮರುಳದೇವರು ಎಂದು ಧಾರವಾಡದ ಮಲ್ಲಬಾದಿ ವೀರಭದ್ರಪ್ಪನವರು ಸಂಪಾದಿಸಿ ಪ್ರಕಟಿಸಿರುವ 'ಕೈವಲ್ಯ ಪದ್ಧತಿ'ಯ ಕೊನೆಯ ಪೀಠಿಕಾ ಸೂತ್ರ ಗದ್ಯದಿಂದ ತಿಳಿದು ಬರುತ್ತದೆ. ಇದು ನಿಜವೇ ಆದಲ್ಲಿ ಜಿಗುನಿ ಮರುಳದೇವನ ಕಾಲ ಕ್ರಿ.ಶ.೧೬ನೇ ಶತಮಾನದ ಉತ್ತಾರಾರ್ಧ ಎಂದಾಗುತ್ತದೆ.

ತೋಂಟದ ಸಿದ್ಧಲಿಂಗಯತಿಗಳ ಶಿಷ್ಯನಾದ ಈತ "ಚಿತ್ಕ್ರಿಯ ಸಂಗ್ರಹ" ಎಂಬ ತನ್ನ ಸಂಕಲನದಲ್ಲಿ ಗುರುತ್ವವನ್ನು ನಿರೂಪಿಸಲು ಅಲ್ಲಮ, ಬಸವ, ದಾಸಿಮಯ್ಯ, ಉರಿಲಿಂಗ ಪೆದ್ದಿ, ಸಿದ್ಧರಾಮ ಮುಂತಾದವರ ವಚನಗಳನ್ನು ಬಳಸಿಕೊಂಡಿದ್ದಾನೆ. ವಿರೂಪಾಕ್ಷ ಪಂಡಿತ(೧೫೮೪)ನ ಚನ್ನಬಸವ ಪುರಾಣ ಮತ್ತು ಸಿದ್ಧನಂಜೇಶನ (ಸು.೧೬೫೦) ರಾಘವಾಂಕ ಚಾರಿತ್ರದಲ್ಲಿ ಈತನ ಹೆಸರು ಉಲ್ಲೇಖಗೊಂಡಿದೆ.

'ಮರುಳ ದೇವರ ಕಂದ' ಈತನ ಇನ್ನೊಂದು ಕೃತಿ. ವೀರಶೈವ ಧರ್ಮ ನಿರೂಪಣೆಯ ಇದರ ವಸ್ತು. ೧೫೪ ಕಂದ ಪದ್ಯಗಳಿದ್ದು ಪ್ರತಿ ಕಂದ ಪದ್ಯವು 'ಪರಮ ಪ್ರಭುವೆ' ಎಂಬುದರಿಂದ ಮುಗಿಯುತ್ತದೆ. ಈ ಕೃತಿಗೆ ಲಿಂಗಸ್ತೋತ್ರ ಕಂದ ಮತ್ತು 'ಲಿಂಗಾಂಗ ಸಮರಸದ ಕಂದ' ಎಂಬ ಹೆಸರುಗಳಿವೆ. ಇಲ್ಲಿನ ೨೪ ಕಂದಗಳು 'ಮಹಾಲಿಂಗೋದ್ಧರಣಿ' ಯಲ್ಲಿ ಹಾಗೂ ೩೬ ಕಂದಗಳು 'ಚಿತ್ಕಲಾ ಲಿಂಗ ಚಿಪ್ರಕಾಮ ಸಂಯೋಗ ಚಿದಮೃತಸಾರ' ಎಂಬ ಸಂಕಲನದಲ್ಲಿವೆ[೧೭೨].

---

೧೭೧. ಎಸ್.ಶಿವಣ್ಣ: ತೋಂಟದ ಸಿದ್ಧಲಿಂಗರ ಕಾಲವನ್ನು ಕುರಿತ ಕೆಲವು ಟಿಪ್ಪಣಿಗಳು, ಪ್ರಬುದ್ಧ ಕರ್ನಾಟಕ ಸಂ–೫೭, ಪುಟ–೧೯

೧೭೨. ಸದಾನಂದ ಕನವಳ್ಳಿ ಮತ್ತು ಚನ್ನಪ್ಪ ಕೆರಿಮನಿ, (ಸಂ) 'ವೀರಶೈವ ಸಾಹಿತ್ಯ ಸಮೀಕ್ಷೆ' ಪು.೨೮೫

ರಾಗ ನಿರ್ದೇಶನ ಸಹಿತವಾದ ೧೫೬ ಸ್ವರ ವಚನಗಳಿರುವ “ಮರುಳ ದೇವರ ವಚನ” ಈತನ ಇನ್ನೊಂದು ಕೃತಿ. ಇದು “ನಿಜಗುರುಶಾಂತ’ ಅಂಕಿತದಲ್ಲಿದೆ. ಕಂಬಾಳ ಶಾಂತಮಲ್ಲೇಶ (೧೬೦೦) ತನ್ನ ‘ಗುಣವಚನರತ್ನಾವಳಿ’ಯಲ್ಲಿ ಈತನ ಎರಡು ಸ್ವರ ವಚನಗಳನ್ನು ಉದಾಹರಿಸಿದ್ದಾನೆ.[೧೭೩]

೨. ಚೆನ್ನದೇವ (ಕ್ರಿ.ಶ.ಸು.೧೫೭೫)

ಸ್ವತಂತ್ರ ಸಿದ್ಧಲಿಂಗೇಶ್ವರರ ೨೧ ವಚನಗಳನ್ನು “ಮುಕ್ತ್ಯಾಂಗನಾ ಕಂಠ ಮಾಲೆ” ಎಂಬ ಹೆಸರಿನಲ್ಲಿ ಸಂಕಲಿಸಿ ಅದಕ್ಕೆ ಟೀಕೆ ಬರೆದಿದ್ದಾನೆ. ಈತ ಬೋಳ ಬಸವನ ಶಿಷ್ಯ ಸಂಪಾದನೆಯ ಚನ್ನಂಜೇದೇವನಿರಹುದೆಂದು ಪ್ರೋ.ಸಿ. ಮಹಾದೇವಪ್ಪನವರು ಊಹಿಸಿದ್ದಾರೆ.[೧೭೪] ಉಳಿದಂತೆ ಈತನ ಬಗ್ಗೆ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ.

೩. ಸಿದ್ಧವೀರದೇವ (ಕ್ರಿ.ಶ.ಸು.೧೫೭೫)

ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯನಾದ ಈತ ೫೫ ಜನ ಶಿವಶರಣ, ಶರಣೆಯರ ೪೬೧ ವಚನಗಳನ್ನು “ಕ್ರಿಯಾಸಮರಸ ವಚನ” ಎಂಬ ಹೆಸರಿನಲ್ಲಿ ಸಂಕಲಿಸಿದ್ದಾನೆ. ಇದಲ್ಲದೆ ಇತರೆ ೧೮ ಗ್ರಂಥಗಳೂ, ಒಂದು ಸ್ವರ ವಚನವೂ ಇವನ ಹೆಸರಿನಲ್ಲಿದೆ.[೧೭೫]

೪. ಸಂಪಾದನೆಯ ಚೆನ್ನಂಜೇದೇವ (ಕ್ರಿ.ಶ.ಸು. ೧೬೦೦)

ಈತ ಬೋಳ ಬಸವನ ಶಿಷ್ಯ, ತೋಂಟದ ಸಿದ್ಧ ಲಿಂಗಯತಿಗಳ ಪ್ರಶಿಷ್ಯ. ಸ್ವತಂತ್ರ ಸಿದ್ಧಲಿಂಗೇಶ್ವರನ ವಚಗಳನ್ನು ತನ್ನ ಸಂಪಾದನೆಗಳಲ್ಲಿ ಬಳಸಿಕೊಂಡಿರುವುದರಿಂದ ಈತನ ಕಾಲವನ್ನು ಕ್ರಿ.ಶ. ೧೫೩೦ ಎಂದು ಕವಿಚರಿತೆಕಾರರು ಹೇಳುತ್ತಾರೆ. ಆದರೆ ಎಸ್.ಶಿವಣ್ಣ ಅವರು ಬರೆದ ‘ತೋಂಟದ ಸಿದ್ಧಲಿಂಗೇಶ್ವರರ ಕಾಲವಿಚಾರ, ಒಂದು ಮರು ಪರಿಶೀಲನೆ’ ಎಂಬ ಲೇಖನದಲ್ಲಿ ತೋಂಟದ ಸಿದ್ಧಲಿಂಗ ಯತಿಯ ಕಾಲ ಕ್ರಿ.ಶ. ೧೫೬೦ ಆಗಿರಲು ಸಾಧ್ಯವಿದೆ.[೧೭೬] ಎಂದಿದ್ದಾರೆ. ಇತ್ತೀಚಿನ ಸಂಶೋಧನೆಗಳಿಂದ ಎಸ್.ಶಿವಣ್ಣ , ಎಲ್. ಬಸವರಾಜು, ಡಾ॥ ಎಂ. ಎಂ.ಕಲಬುರ್ಗಿ, ಬಿ.ಆರ್. ಹಿರೇಮಠ ಇವರೆಲ್ಲರ ಅಭಿಪ್ರಾಯದ ಪ್ರಕಾರ ತೋಂಟದ ಸಿದ್ಧಲಿಂಗಯತಿಯ ಕಾಲವು ಕವಿಚರಿತೆಕಾರರು ಹೇಳುವ ಕಾಲಕ್ಕಿಂತ ಒಂದು ನೂರು ವರ್ಷ ಮುಂದೆ ಹೋಗುತ್ತದೆ. ಹೀಗಾಗಿ ತೋಂಟದ ಸಿದ್ಧಲಿಂಗಯತಿಯ ತರುವಾಯ ಬದುಕಿದ್ದನೆಂದು ಭಾವಿಸಿರುವ ಚನ್ನಂಜೇದೇವನ ಕಾಲ.ಕ್ರಿ.ಶ. ೧೬೩೦ ಎಂದು ಗುರುತಿಸಿದ್ದಾರೆ. ಈತನ ಊರು ‘ಹರತಾಳ’ ಎಂಬುದು ಸ್ಪಷ್ಟವಿದೆ. ಆದರೂ ‘ಶ್ರೀಸಿದ್ಧೇಶ್ವರ ಪುರಾಣ’ ದಲ್ಲಿ ವಿರಕ್ತ ತೋಂಟದಾರ್ಯನು

---

೧೭೩. ಡಾ॥ ಎಸ್. ವಿದ್ಯಾಶಂಕರ್ (ಸಂ) ‘ವಚನ ಸಾಹಿತ್ಯದ–ದ್ವಿತೀಯ ಘಟ್ಟ’. ಪುಟ –೧೯

೧೭೪. ಸಂಪಾದನೆಯ ಚನ್ನಂಜೇದೇವರು ಸೇರಿಸಿದ ‘ಶಂಕರದೇವರ ಕಂದ’, ಪೀಠಿಕೆ, ಪು.xi-xii ೧೯೫೫

೧೭೫. ೧. ಡಾ॥ ಎಸ್.ವಿದ್ಯಾಶಂಕರ್ (ಸಂ)’ವಚನಸಾಹಿತ್ಯ– ದ್ವಿತೀಯಘಟ್ಟ.’ ಪುಟ–೧೯
೨. ವಚನ ಸಾಹಿತ್ಯದ ಸಂಕಲನಕಾರರು..ಪ್ರಕಟಣೆ ಇತಿಹಾಸ ಬಸವ ಜರ್ನಲ್ ೨–೩ ನ.೧೯೭೭.

೧೭೬. ತೋಂಟದ ಸಿದ್ಧಲಿಂಗೇಶ್ವರರ ಕಾಲ ವಿಚಾರ, ಒಂದು ಅಧ್ಯಯನ. ಪುಟ –೩೦೮

[illegible]

"   ಕಾವೇರಿ ಹೇಮಾವತಿಗಳ ಬಂ
ಧುರ ಮಧ್ಯ ದೇಶದೊಳಗಿರ್ಪ ನಂದಿಯ ಪುರದ ಸಿಂಹಾಸನಾದಿಪನಹ
ಗುರು ಚೆನ್ನಂಜೇಶನಮಲ ಕರ ಕಮಲದೊ
ಳ್ಪರಿ ರಂಜಿಸುತ್ತೊಗೆದ ಪರ್ವತೇಂದ್ರನ್ ಹಸ್ತ
ಸರಸಿಜೋದ್ಭವ ತೋಂಟದಾರ್ಯನ್- " (೧-೨೫)

ಈ ಪದ್ಯದಲ್ಲಿ ಉಲ್ಲೇಖಿಸಿದಂತೆ ಈತನು ನಂದಿಯ ಪುರದ ಸಿಂಹಾಸನಾಧೀಶನೂ ಆಗಿದ್ದನೆಂದು ತಿಳಿದುಬರುತ್ತದೆ. ಆದರೆ ಶ್ರೀ.ಎಸ್.ಆರ್.ಕರಿಬಸವಶಾಸ್ತ್ರಿಗಳು ಈತನ ಪ್ರಶಿಷ್ಯ ವಿರಕ್ತ ತೋಂಟದಾರ್ಯನದು ನಂದಿಯ ಪುರವಾಗಿದೆ ಎನ್ನುತ್ತಾರೆ. ಇದು ಬಿಜವಾಡದ ನೆರೆಯ ಬಸವಾಪಟ್ಟಣವಾಗಿದೆ ಎಂಬುದು ಇವರ ಅಭಿಪ್ರಾಯವಾಗಿದೆ. ಎಂ.ವಿ.ನಾರಾಯಣ ಶಾಸ್ತ್ರಿಗಳು ನಂದಿಯ ಪುರವೆಂದರೆ ಕೋಲಾರದ ಬಳಿಯ ನಂದಿಯ ಹಳ್ಳಿ ಎಂಬ ಅಭಿಪ್ರಾಯಕ್ಕೆ ಬಂದಿರುತ್ತಾರೆ. ಈತನ ಹೆಸರಿನ ಹಿಂದಿರುವ ವಿಶೇಷಣದಿಂದ ಮೂಗೂರಿನಲ್ಲಿಯೂ ಕೆಲವು ಕಾಲ ಕಳೆದಿರಬಹುದೆಂದು ತಿಳಿಯಬಹುದಾಗಿದೆ.

ಸಂಪಾದನೆಯ ಚೆನ್ನಂಜೇದೇವನಿಗೆ ಹರತಾಳ ಚೆನ್ನಂಜೇದೇವ, ಮೂಗೂರು ಚೆನ್ನಂಜೇದೇವ[೧೭೭], ಎಂಬ ಪರ್ಯಾಯ ಹೆಸರುಗಳಿವೆ. ಈತನ ಹೆಸರಿನ ಹಿಂದಿರುವ ವಿಶೇಷಣಗಳಲ್ಲಿ 'ಹರತಾಳ' ಮತ್ತು 'ಮೂಗೂರು'ಗಳು ಈತನು ವಾಸಿಸಿರುವ ಗ್ರಾಮ ಸೂಚಿಯಾಗಿದ್ದರೆ, 'ಸಂಪಾದನೆ' ಎಂಬುದು ಈತನ ಕಾಯಕ ಸೂಚಿಯಾಗಿದೆ. ಇದಲ್ಲದೆ ಚೆನ್ನಂಜಾಚಾರ್ಯ, ಚೆನ್ನಾರ್ಯ, ಆಚಾರ್ಯ ವರದ ಹರತಾಳ ನಂಜೇಶ ಎಂಬ ನಾಮಾಂತರಗಳು ಇರುವುದು ಕಂಡುಬರುತ್ತದೆ. ಹಸ್ತ ಪ್ರತಿಗಳಲ್ಲಿ ಈತನನ್ನು 'ಷಡಸ್ಥಲ ಚಕ್ರವರ್ತಿ', 'ಷಟ್ಸ್ಥಲ ಬ್ರಹ್ಮಿ', 'ವಿರಕ್ತ ಶಿಖಾಮಣಿ' ಎಂದು ವಿಶೇಷಿಸಿದೆ[೧೭೮]. ಈ ವಿಶೇಷಣಗಳು ಈತನ ಷಟ್‌ಸ್ಥಲ ಸಿದ್ಧಿಯ ದ್ಯೋತಕವಾಗಿವೆ. ಈತನನ್ನು ಮುಂದಿನ ವಚನ ಸಂಪಾದನಾ ಕಾರರೆಲ್ಲ ಹೆಸರಿಸಿದ್ದಾರೆ.

ಈತನ ಕೃತಿಗಳು.

೧. ಆಚರಣೆಯ ವಚನಗಳು	:	ಇದರಲ್ಲಿ ೨೮ ಸ್ಥಲಗಳಿದ್ದು, ೧೪೦ ವಚನಗಳಿವೆ.
೨. ಸಂಬಂಧದ ವಚನಗಳು	:	ಇದರಲ್ಲಿ ೨೮ ಸ್ಥಲಗಳಿದ್ದು, ೧೨೧ ವಚನಗಳಿವೆ. ಕೆಲವು ಓಲೆ ಕಟ್ಟುಗಳಲ್ಲಿ ಮೇಲಿನ ಎರಡು ವಚನ ಸಂಕಲನಗಳು ಕೂಡಿ ದೊರೆಯುತ್ತಿದ್ದು, ಅವನ್ನು 'ಎಲ್ಲಾ ಪುರಾತನರ ವಚನಾಮೃತ ಸಾರ' ಅಥವಾ 'ಆಚರಣೆಯ ಅಮೃತ ವಚನಗಳು' ಎಂದು ಕರೆಯಲಾಗಿದೆ.
೩. ಬಸವ ಸ್ತೋತ್ರದ ವಚನಗಳು:		೧೫೩,೧೫೦,೧೪೨,೧೨೩ ಹೀಗೆ ವಚನ ಸಂಖ್ಯೆಯಲ್ಲಿ ವ್ಯತ್ಯಾಸವಿರುವ ಕಟ್ಟುಗಳು ದೊರೆಯುತ್ತವೆ.

೧೭೭. ಓಲೆ ಪ್ರತಿ ೪೪೪೪ (ವ. ವಾ.ಭಾಂ) ಕನ್ನಡ ಅಧ್ಯಯನ ಪೀಠ ಧಾರವಾಡ.
೧೭೮. ಡಾ॥ ಎಸ್.ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ-ದ್ವಿತೀಯ ಘಟ್ಟ,' ಪುಟ-೨೦

೪. ಮಿಶ್ರಸ್ತೋತ್ರದ ವಚನಗಳು : ೪೦ ವಚನಕಾರರ ೧೦೮ ವಚನಗಳಿವೆ.
೫. ಶಂಕರದೇವರ ಕಂದ : ಪ್ರಸನ್ನ ಶಂಕರಲಿಂಗ ಅಂಕಿತದ ೧೧೭ ಕಂದಗಳ ಸಂಕಲನ ಕೃತಿ.
೬. ಬಸವಸ್ತೋತ್ರದ ಷಟ್ಪದಿ : ಬಸವಸ್ತೋತ್ರ ರೂಪದ ೧೯೯ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳ ಸಂಗ್ರಹ.
೭. ಸ್ವತಂತ್ರ ಸಿದ್ಧಲಿಂಗನ 'ಮುಕ್ತಾಂಗನೆ ಕಂಠಮಾಲೆ' ಇದು ವೀರಶೈವ ಸಿದ್ಧಾಂತನುಸಾರಿಯಾದ, ಸೃಷ್ಟಿಗೆ ಸಂಬಂಧಿಸಿದ ೩೪ ವಚನಗಳ ಸಂಕಲನ ಈ ಕೃತಿಗೆ ಚೆನ್ನಂಜೇದೇವ ವಿರಚಿತ ಟೀಕೆಯೊಂದಿದೆ.[೧೭೮ಎ]

೫. ಶಂಕರದೇವ : (ಕ್ರಿ.ಶ.ಸು. ೧೬೦೦)

ಶಂಕರದೇವನ ಕಾಲ ದೇಶಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಈತ 'ವಿರತಾಚರಣೆಯ ವಚನ' ಮತ್ತು 'ಶರಣ ಸಂಬಂಧದ ವಚನ'ಗಳು ಎಂಬ ಎರಡು ವಚನ ಕೃತಿಗಳನ್ನು ಸಂಕಲಿಸಿದ್ದಾನೆ.[೧೭೯] ಇವುಗಳಲ್ಲಿ ಮಾತ್ರ ಈತನ ಹೆಸರು ದೊರಕುತ್ತದೆ. ವಿರತಾಚರಣೆಯ ವಚನ ಸಂಕಲನದಲ್ಲಿ ತೋಂಟದಸಿದ್ಧಲಿಂಗನ ವಚನಗಳನ್ನು ಉಲ್ಲೇಖಿಸಿರುವುದರಿಂದ ತೋಂಟದ ಸಿದ್ಧಲಿಂಗನ ನಂತರದಲ್ಲಿ ಬದುಕಿದ್ದಾನೆಂದು ತಿಳಿಯಬಹುದು. ಹಾಗಾಗಿ ಈತನ ಕಾಲ ಕ್ರಿ.ಶ. ಸು. ೧೬೦೦ ಎನ್ನಬಹುದು.

ವಿರತಾಚರಣೆಯ ವಚನ ಸಂಕಲನದಲ್ಲಿ ಗುರುಮಹಾತ್ಮೆ ಸ್ಥಲಾದಿಯಾಗಿ ನಿಸ್ಸಂಗೈಕ್ಯ ಸ್ಥಲಾಂತ್ಯವಾದ ೨೭ ಸ್ಥಲಗಳಿವೆ. ಇಲ್ಲಿ ೩೬ ಶರಣ-ಶರಣೆಯರ ೧೭೫ ವಚನಗಳಿವೆ. ಈ ಸಂಕಲನದ ಆದಿಯಲ್ಲಿ ಒಂದು ಕಂದ ಪದ್ಯವಿದೆ. "ಶರಣ ಸಂಬಂಧದ ವಚನ" ಸಂಕಲನದಲ್ಲಿ ಅನಾದಿಶರಣ ಗುರುಮಹಾತ್ಮೆ ಸ್ಥಲಾದಿಯಾಗಿ ಲಿಂಗಾಂಗ ಶ್ರೇಷ್ಠ ನಿಜ ಐಕ್ಯಸ್ಥಲಾಂತ್ಯವಾದ ೨೩ ಸ್ಥಲಗಳಿವೆ. ಇಲ್ಲಿ ೨೫ ಶಿವಶರಣ- ಶರಣೆಯರ ೧೨೬ ವಚನಗಳಿವೆ. ಈತ "ಪ್ರಸನ್ನ ಶಂಕರ ಲಿಂಗಾಂಕಿತ" ರಗಳೆ, ಕಂದ, ಷಟ್ಪದಿ ಇವುಗಳ ಕರ್ತೃ ಶಂಕರದೇವನಾಗಿರಬಹುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೮೦]

೬. ಚೆನ್ನ ವೀರಾಚಾರ್ಯ (ಕ್ರಿ.ಶ.ಸು.೧೬೬೦)

' ವಿಶೇಷಾನುಭವ ಷಟ್‌ಸ್ಥಲ' ಹಾಗೂ 'ಶಿವಯೋಗ ಪ್ರದೀಪಿಕೆ' ಗಳ ಸಂಕಲನಕಾರ. ಈ ಎರಡು ಕೃತಿಗಳನ್ನು ಶಿವಲಿಂಗದೇವನೆಂಬ ಶಿಷ್ಯನಿಗೆ ಬೋಧಿಸಲಿಕ್ಕಾಗಿ ರಚಿಸಿದ್ದಾನೆ. ವ್ಯಾಖ್ಯಾನಕಾರ ಚನ್ನಬಸವನ ಸಂಪ್ರದಾಯಕ್ಕೆ ಮತ್ತು ತೋಂಟದ ಸಿದ್ಧಲಿಂಗ ಶಿಷ್ಯ ಪರಂಪರೆಗೆ ಸೇರಿದವನಾಗಿದ್ದಾನೆ.[೧೮೧] ತನ್ನ ಬಗೆಗೆ 'ತೋಂಟದ ಸಿದ್ಧಲಿಂಗೇಶ್ವರ ದೇವರು ಮುಖ್ಯವಾದ ಮಹಾನುಭವರ ಬೋಧಾಮೃತ ಸಂತುಷ್ಟಕರಣ ನಿರ್ಮುಕ್ತ ವಿಷಯ ವಿರಕ್ತ, ವೀರ ಮಹೇಶ್ವರಾಚಾರ ಸಂಪನ್ನನಪ್ಪ ಚೆನ್ನವೀರಾಚಾರ್ಯ'ನೆಂದು ಹೇಳಿಕೊಂಡಿದ್ದಾನೆ.

೧೭೮.ಎ.ಡಾ॥ ಎಸ್.ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ-ದ್ವಿತೀಯ ಘಟ್ಟ.' ಪುಟ-೨೦
೧೭೯. ಎಸ್. ಶಿವಣ್ಣ, ವಚನ ಸಾಹಿತ್ಯ ಸಂಕಲನಕಾರರು, ಸಂಗ್ರಹಕಾರರು, ಪ್ರಕಟಣೆಯ ಇತಿಹಾಸ: ಬಸವ ಜರ್ನಲ್ -೨-೩ ನವಂಬರ್ ೧೯೭೭
೧೮೦. ಕರ್ನಾಟಕ ಕವಿ ಚರಿತೆ-ಸಂ-೧೧, ಪು-೩೬೧-೩೬೪
೧೮೧. ಡಾ॥ ಎಂ.ಚಿದಾನಂದ ಮೂರ್ತಿ. 'ವಚನ ಸಾಹಿತ್ಯ.' ಪು-೨೦೦

ವಿಶೇಷಾನುಭವ ಷಟ್‌ಸ್ಥಲದಲ್ಲಿ ೧೬ಸ್ಥಲಗಳಿದ್ದು ೪೯ ವಚನಕಾರ– ವಚನ ಕಾರ್ತಿಯರ ೭೪೨ವಚನಗಳಿವೆ ಈ ಎಲ್ಲಾ ವಚನಗಳಿಗೆ ಈತ ವ್ಯಾಖ್ಯಾನ ಬರೆದಿದ್ದಾನೆ. ಈ ಸಂಕಲನದಿಂದ ಆನಂದ ಸಿಂಧುರಾಮೇಶ್ವರ,ಹಾಟಕೇಶ್ವರ ಲಿಂಗ, ಕಲ್ಲಯ್ಯದೇವರು ಮುಂತಾದ ಹೊಸ ವಚನಾಂಕಿತಗಳು ಬೆಳಕಿಗೆ ಬಂದಿವೆ.ಇನ್ನು'ಶಿವಯೋಗ ಪ್ರದೀಪಿಕೆ'ಯಲ್ಲಿ ೨೧ ಸ್ಥಲಗಳಿದ್ದು ಶರಣ ಶರಣೆಯರ ೭೩ ಸ್ವರ ವಚನಗಳಿವೆ. ಈಸಂಕಲನದಲ್ಲಿ ಕೆಲವು ಕಠಿಣ ಪದಗಳಿಗೆ ಅಲ್ಲಲ್ಲಿ ಟೀಕೆ ಇದೆ.[೧೮೨]

೭. ಎಳಮಲೆಯ ಗುರುಶಾಂತದೇವ : (ಸು.೧೬೨೫)

ತೋಂಟದ ಸಿದ್ಧಲಿಂಗೇಶ್ವರನ ಶಿಷ್ಯ ಪರಂಪರೆಯ, ಸಂಪಾದನೆಯ ಚೆನ್ನಂಜೇದೇವನ ಶಿಷ್ಯ. ಈತನನ್ನು ಗುರುಶಾಂತೇಶ್ವರ, ಎಳಮಲೆಯ ಗುರು ಶಾಂತೇಶ್ವರ,ಎಳಮಲೆಯ ಗುರುಶಾಂತಾಚಾರ್ಯ, ಎಳಮಲೆಯ ಗುರುಶಾಂತಾಹ್ವಯಾಚಾರ್ಯ, ಸಂಪಾದನೆಯ ಗುರುಶಾಂತದೇವ ಎಂದು ಮುಂತಾಗಿ ಕರೆದಿದ್ದಾರೆ. ಈತನ ಹೆಸರಿನಲ್ಲಿ ಬರುವ ಎರಡು ವಿಶೇಷಣಗಳಲ್ಲಿ 'ಎಳಮಲೆಯ' ಎಂಬುದು ಗ್ರಾಮಸೂಚಿಯಾದರೆ[೧೮೩], 'ಸಂಪಾದನೆ' ಎನ್ನುವುದು ಅವನ ಕಾಯಕ ಸೂಚಿಯಾಗಿದೆ. ಉತ್ತರಾರ್ಧದ ಗುರುಶಾಂತದೇವ, ಗುರು ಶಾಂತೇಶ್ವರ ಮುಂತಾದವುಗಳು ಅವನ ಹೆಸರನ್ನು ತಿಳಿಸುತ್ತವೆ.[೧೮೪] ಎಳಮಲೆಯ ಗುರುಶಾಂತದೇವನ ಬಗೆಗೆ ಸಂಪಾದನೆಯ ಗುರುಲಿಂಗ ದೇವನು "– ಹರತಾಳ ಚೆನ್ನಂಜೇದೇವರು ಅವರನುಭವದ ಅಖಂಡ ತೇಜೋ ವಿಗ್ರಹವೇ ಎಳಮಲೆಯ ಗುರುಶಾಂತ"ನೆಂದಿದ್ದಾನೆ.[೧೮೫]

ಗುರುಶಾಂತದೇವನ ಕಾಲವನ್ನು ತೋಂಟದ ಸಿದ್ಧಲಿಂಗೇಶ್ವರರ ಕಾಲದ ಆಧಾರದ ಮೇಲೆ ಸು.೧೬೨೫ ಎಂದು ನಿರ್ಧರಿಸಬೇಕಾಗುತ್ತದೆ. ಎಳಮಲೆಯ ಗುರುಶಾಂತದೇವನು ತನ್ನ ಗುರು ಸಂಪಾದನೆಯ ಚೆನ್ನಂಜೇದೇವನಂತೆ ವೀರಶೈವ ತತ್ವವನ್ನು ಚನ್ನಾಗಿ ತಿಳಿದುಕೊಂಡ ಪ್ರತಿಭಾವಂತನಾಗಿದ್ದಾನೆ. ಇವನು ಸಂಕಲಿಸಿದ ಏಳು ಕೃತಿಗಳಲ್ಲಿ ೫ ವಚನ ಕೃತಿಗಳು, ಒಂದು ಕಂದ ಪದ್ಯದ ಸಂಕಲನ, ಒಂದು ಭಾಮಿನಿ ಷಟ್ಪದಿಯ ಸಂಕಲನ ಕೃತಿಗಳು ದೊರೆತಿವೆ.

೧. ಅಷ್ಟಾವರಣ ಸ್ತೋತ್ರದ ವಚನಗಳು: ೩೦ ಶರಣ– ಶರಣೆಯರ ೧೬೦ ವಚನಗಳಿವೆ.
೨. ಲಿಂಗವಿಕಳಾವಸ್ಥೆಯ ವಚನಗಳು : ೧೦ ಶರಣ–ಶರಣೆಯರ ೧೧೦ ವಚನಗಳಿವೆ.
೩. ಶರನ ಸ್ತೋತ್ರದ ವಚನಗಳು : ೨೪ ಶರಣ –ಶರಣೆಯರ ೧೧೦ ವಚನಗಳಿವೆ.
೪. ಬಸವಸ್ತೋತ್ರದ ವಚನಗಳು : ಆರು ಜನ ಶರಣ–ಶರಣೆಯರ೧೧೧ ವಚನಗಳಿವೆ.
೫. ಷಟ್‌ಸ್ಥಲ ಸ್ತೋತ್ರದ ವಚನಗಳು : ೨೪ ಶರಣ–ಶರಣೆಯರ ೧೩೦ ವಚನಗಳಿವೆ.

---

೧೮೨. ಎಸ್ ಶಿವಣ್ಣ ವಚನ ಸಾಹಿತ್ಯ ಸಂಕಲನಕಾರರು, ಸಂಗ್ರಹಕಾರರು, ಪ್ರಕಟಣೆಯ ಇತಿಹಾಸ. ಬಸವ ಜರ್ನಲ್–೨–೩

೧೮೩. ವಿವರವಾದ ವಿಷಯಕ್ಕೆ ನೋಡಿ ಡಾ॥ ಎಂ.ಎಂ. ಕಲಬುರ್ಗಿ. 'ಮಾರ್ಗ–೪,' ಪುಟ–೧೪

೧೮೪. ಡಾ॥ ವೀರಣ್ಣ ರಾಜೂರ (ಸಂ) 'ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು.' ಪ್ರಸ್ಥಾವನೆಪುಟ – xiv.

೧೮೫. ಎಸ್.ಶಿವಣ್ಣ: 'ವಚನ ಸಾಹಿತ್ಯದ ಸಂಕಲನಕಾರರು, ಸಂಗ್ರಹಕಾರರು, ಪ್ರಕಟಣೆಯ ಇತಿಹಾಸ.' ಬಸವ ಜರ್ನಲ್ ೨–೩. ನವೆಂಬರ್ ೧೯೭೭.

[illegible]

[illegible]

[illegible]

[illegible]

೬. ಮಿಶ್ರ ಸ್ತೋತ್ರದ ವಚನಗಳು : ೫೬ ಶರಣ -ಶರಣೆಯರ ೧೧೮ ವಚನಗಳಿವೆ.
೭. ಮಂತ್ರ ಮಹತ್ವದ ಕಂದ : (ಕೊಂಡ ಗುಳಿ ಕೇಶಿರಾಜಕೃತ)' ೧೧೦ ಕಂದಗಳಿವೆ
೮. ಸಿದ್ಧೇಶ್ವರ ಪುರಾಣದ ನಾಂದ್ಯ (ಶಾಂತೇಶ ವಿರಚಿತ) ೩೫ ಭಾಮಿನಿ ಷಟ್ಪದಿಗಳಿವೆ

ಈ ಮೇಲ್ಕಂಡ ಏಳು ಕೃತಿಗಳು ಬಸವಾದಿ ಶಿವಶರಣರ ವಚನಗಳಿಂದ ಹಾಗೂ ಕೇಶಿರಾಜ ಮತ್ತು ಶಾಂತೇಶ್ವರ ಕವಿಗಳಿಂದ ಆಯ್ದು ಸಂಪಾದಿಸಿದ ಕೃತಿಗಳಾಗಿವೆ.

೮. ಸಂಪಾದನೆಯ ಸಿದ್ಧವೀರಣಾಚಾರ್ಯ (ಕ್ರಿ.ಶ.ಸು. ೧೬೫೦)

ಎಳಮಲೆಯ ಗುರುಶಾಂತದೇವ ಶಿಷ್ಯನಾಗಿರುವ ಸಂಪಾದನೆಯ ಸಿದ್ಧವೀರನು ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ಸಂಪಾದನ ಸಾಹಿತ್ಯದಲ್ಲಿ ಅಗ್ರಗಣ್ಯನಾಗಿದ್ದಾನೆ. ಸಂಪಾದನ ಸಮಯದ ಪರಂಪರೆಯಲ್ಲಿಯೆ ಸಂಪಾದನೆಯ ಸಿದ್ಧವೀರನಿಗೆ ವಿಶಿಷ್ಟಸ್ಥಾನವಿದೆ. ಅತಿ ಹೆಚ್ಚು ಕೃತಿಗಳನ್ನು ಸಂಪಾಧಿಸಿದ ಮೊದಲ ಸಂಪಾದನಕಾರ ಈತನೆ ಆಗಿದ್ದಾನೆ. ಈತನಿಗೆ ಅನೇಕ ಹೆಸರುಗಳಿರುವುದು ಹಲವಾರು ಆಕರಗಳಿಂದ ತಿಳಿಯಬಹುದಾಗಿದೆ. ಈತನ ಶಿಷ್ಯ ವೀರಸಂಗಯ್ಯ 'ಸಂಪಾದನೆಯ ಸಿದ್ಧವೀರೇಶ್ವರ ದೇವರು' ಎಂದು ಕರೆದಿದ್ದಾನೆ. ಸಿದ್ಧವೀರೇಶ್ವರನ ಕಿರಿಯ ಸಮಕಾಲೀನನಾದ ಹುಲಿಯ ಚಿಕ್ಕ ನಂಜೇಶನು (ಸು.೧೬೦೦) ತನ್ನ 'ರಾಘವಾಂಕ ಚರಿತೆ' ಯಲ್ಲಿ 'ಸಂಪಾದನೆಯ ಸಿದ್ಧ ವೀರೇಶ್ವರಾಚಾರ್ಯ' ಎಂದಿದ್ದಾನೆ. ಇವನ ಪರಂಪರೆಗೆ ಸೇರಿದ ಸಂಪಾದನೆಯ ಗುರುಲಿಂಗದೇವನು (ಸು.೧೬೭೦) 'ಶೀಲವಂತಯ್ಯ ತ್ರಿವಿಧಿ ವ್ಯಾಖ್ಯಾನ' ದಲ್ಲಿ 'ಸಂಪಾದನೆಯ ಸಿದ್ಧ ವೀರಣಾಚಾರ್ಯ' ಎಂದು ಕರೆದಿದ್ದಾನೆ. ಇದೇ ಗುರು ಸಂಪ್ರದಾಯಕ್ಕೆ ಸೇರಿದ ಸಂಪಾದನೆಯ ಪರ್ವತೇಶ (ಕ್ರಿ.ಶ.೧೯೬೮) 'ಚತುರಾಚಾರ್ಯ ಚಾರಿತ್ರ್ಯ' ದಲ್ಲಿ 'ಸಂಪಾದನಾ ದೇಶಿಕ' (೧-೧-೧೯), 'ಸಂಪಾದನಾ ಸಿದ್ಧವೀರ' (೧-೧-೨೧), 'ಸಂಪಾದನಾ ಸಿದ್ಧವೀರೇಶ' (೧-೧-೨೦), (೧-೧-೨೪),'ಸಂಪಾದನಾ ಸಿದ್ಧವೀರೇಶ್ವರ' (೬-೮-೪೬) ನೆಂದು ಕರೆದಿದ್ದಾನೆ.

ಸಂಪಾದನೆಯ ಸಿದ್ಧವೀರನ 'ಆಚರಣೆ ಸಂಬಂಧದ ವಚನಗಳು' ಕೃತಿಯಿಂದ ಇವನಿಗೆ ಮುದ್ದಯ್ಯ, ಮುಪ್ಪಿನಯ್ಯ ಎಂಬ ಹೆಸರುಗಳು ಇದ್ದಂತೆ ತಿಳಿದುಬರುತ್ತದೆ. ಅಲ್ಲದೆ 'ಲಿಂಗ ಸ್ತೋತ್ರ ಷಟ್ಪದಿ ಟೀಕೆ' ಯ ಕೃತಿಯ ಆದಿಯಲ್ಲಿನ ಉಲ್ಲೇಖದಿಂದ ಈತನಿಗೆ 'ಗಡ್ಡದ ಸಿದ್ಧವೀರಣ್ಣೊಡೆಯ' ನೆಂದು ಜನ ಸಂಬೋಧಿಸುತ್ತಿದ್ದರೆಂದು ತಿಳಿದು ಬರುತ್ತದೆ.[೧೮೬]

ತೋಂಟದ ಸಿದ್ಧಲಿಂಗನ ಶಿಷ್ಯ ಪರಂಪರೆಯುವನಾದ ಈತ ಸಂಪಾದನಾ ಪರಂಪರೆಯವರಲ್ಲಿ ಅತ್ಯಂತ ಪ್ರಭಾವಿತನು, ಪ್ರಖ್ಯಾತನು ಆಗಿದ್ದನೆಂಬುದಕ್ಕೆ ಆತನ ಕೃತಿಗಳೇ ಸಾಕ್ಷಿ. ಹಾಗೂ ಅವನ ಹಿರಿಯ ಕಿರಿಯ ಸಮಕಾಲೀನರು ಆತನ ಬಗ್ಗೆ ಇದ್ದ ಗೌರವವನ್ನು ತಮ್ಮ ಕೃತಿಗಳಲ್ಲಿ ಅಭಿಮಾನದಿಂದ ಸ್ಮರಿಸಿದ್ದಾರೆ. ಇವರ ಶಿಷ್ಯ ವೀರ ಸಂಗಯ್ಯ "ಶಿವನ ಮಹಿಮಾಸ್ತೋತ್ರದ ವಚನ"ಗಳ ಆದಿಯಲ್ಲಿ "ಶ್ರೀ ವೀರಶೈವ ಷಟ್ ಸ್ಥಲಾಚಾರ ಸಾರೋದ್ಧಾರ" ರೆಂದು ಉಲ್ಲೇಖಿಸಿದ್ದಾನೆ. ಗುರುಲಿಂಗ ದೇವನು "......ಎಳಮಲೆಯ ಗುರುಶಾಂತದೇವರು, ಅವರ ಭಕ್ತಿ ಜ್ಞಾನ ವೈರಾಗ್ಯದ ಸಮರಸಾನಂದಾನುಭವಿ" ಗಳೆಂದು ಕರೆದಿದ್ದಾನೆ. ಸಂಪಾದನೆಯ

---

೧೮೬. ಎಸ್.ಶಿವಣ್ಣ (ಸಂ) 'ವಚನ ಸಂಕಲನ ಸಂಪುಟ-೩,' ವೀರ ಶೈವ ಲಿಂಗಾಯತ ಅಧ್ಯಯನ ಸಂಸ್ಥೆ ತೋಂಟದಾರ್ಯ ಸಂಸ್ಥಾನ ಮಠ. ಗದಗ.

ಪರ್ವತೇಶನು ಇವರನ್ನು 'ಎಳಮಲೆಯ ಗುರುಶಾಂತರನುಭವಾಂಭುಧಿ ಷಟ್‌ಸ್ಥಲ ಬ್ರಹ್ಮ' (೧-೧-೧೯)ಹಾಗು 'ಜರೆದು ಶೈವವ ವೀರಶೈವಮಂ ಸ್ಥಾಪಿಸಿದಂ' ಎಂದಿದ್ದಾನೆ. ಲಿಂಗಸ್ತೋತ್ರದ ಷಟ್ಪದಿಯು ಇವನನ್ನು 'ಷಡ್‌ಸ್ಥಲ ಚಕ್ರವರ್ತಿ, ವಿರಕ್ತ ಶಿರೋಮಣಿ' ಎಂದು ಕೀರ್ತಿಸಿದೆ.

ಸಂಪಾದನೆಯ ಸಿದ್ಧವೀರಣ್ಣೊಡೆಯರು ತಮ್ಮ ವೈಯಕ್ತಿಕ ಸಂಗತಿಗಳ ಬಗೆಗೆ " ಅನಾದಿ ವೀರಶೈವ ಸಾರಸಂಗ್ರಹ" ವೆಂಬ ಸಂಸ್ಕೃತ ಕೃತಿಯು ಅಂತ್ಯದಲ್ಲಿ "ಶ್ರೀಮದ್ವೀರ ಮಾಹೇಶ್ವರಾಚಾರ್ಯವರ್ಯ, ವೀರಶೈವ ಷಟ್‌ಸ್ಥಲಮಾರ್ಗ ಸ್ಥಾಪನಾಗ್ರಗಣ್ಯ ಶ್ರೀಸಂಪಾದನಾ ಸಿದ್ಧವೀರಣಾಖ್ಯ ಶಿವಯೋಗೀಂದ್ರ" ಎಂದು ತಿಳಿಸಿದ್ದಾರೆ.

ಅಲ್ಲದೆ ಅದೇ ಕೃತಿಯಲ್ಲಿ

ಜಯತಿ ವಿಮಲಭಾವ : ಸ್ಫಾರಕೀರ್ತಿ ಪ್ರಭಾವ :
ಪ್ರಶಮಿತ ಭವದಾವ : ಪಾಲಿತಾಶೇಷ ಜೀವ:
ಸಮುದಿತ ಬಹುಶೈವ : ಷಟ್ ಸ್ಥಲ ಸ್ವಾನುಭಾವ :
ಪ್ರಣವಜ ನಿಜರಾವ : ಸಿದ್ಧವೀರಾಖ್ಯದೇವ :

ಎಂದು ಹೇಳಿಕೊಂಡಿದ್ದಾನೆ.

ಸಂಪಾದನೆಯ ಸಿದ್ಧವೀರನು ಬಾಳಿದ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆರ್.ನರಸಿಂಹಾಚಾರ್ ಅವರು ಕರ್ನಾಟಕದ ಕವಿ ಚರಿತೆ[೧೮೭] ಯಲ್ಲಿ ಸಿದ್ಧವೀರಣ್ಣನು ಎಳಮಲೆಯ ಗುರುಶಾಂತದೇವ (ಸು.೧೫೬೫)ನ ಶಿಷ್ಯನೆಂದು ತಿಳಿಸಿ, ಸಿದ್ಧವೀರಣ್ಣನ ಕಾಲವು ಸು.ಕ್ರಿ.ಶ. ೧೬೦೦ ಎಂದಿದ್ದಾರೆ. ಈತನ ಆಚರಣೆ ಸಂಬಂಧದ ವಚನಗಳನ್ನು ಸಂಪಾದಿಸಿ ಪ್ರಕಟಿಸಿದ ಶ್ರೀ ಪಿ.ಎಂ. ಗಿರಿರಾಜು ಅವರು 'ಇವರ ಶಿಷ್ಯರ ಶಿಷ್ಯ ಸಂಪಾದನೆಯ ಪರ್ವತೇಶ್ವರದೇವರು ೧೬೯೮ರಲ್ಲಿ ಕೃತಿ ರಚನೆ ಮಾಡಿದ್ದಾರೆ. ಮುಪ್ಪಿನಯ್ಯರೆಂಬ, ಮುದ್ದಯ್ಯರೆಂಬ ಅನ್ವರ್ಥ ನಾಮಗಳನ್ನು ಗಮನಿಸಿದಲ್ಲಿ ಇವರು ೧೬೫೦ ರ ಸುಮಾರಿನಲ್ಲಿ ಪ್ರಸಿದ್ಧರಾಗಿರಬಹುದೆಂದು ತೋರುತ್ತದೆ ಎಂದಿದ್ದಾರೆ.

ಡಾ॥ ವೀರಣ್ಣ ರಾಜೂರ ಅವರು "ಶಿವಮಹಿಮಾ ಸ್ತೋತ್ರದ ವಚನ"ಗಳ ಪ್ರಸ್ತಾವನೆಯಲ್ಲಿ ಇತ್ತೀಚಿನ ಸಂಶೋಧನೆಗಳಿಂದ ಬದಲಾವಣೆಗೆ ಗುರಿಯಾದ ತೋಂಟದ ಸಿದ್ಧಲಿಂಗರ ಕಾಲದ ಹಿನ್ನೆಲೆಯಲ್ಲಿ ಇವರ ಕಾಲ ೧೭೦೦ ಆಗುತ್ತದೆ ಎಂದಿದ್ದಾರೆ.[೧೮೮]

ಸಂಪಾದನೆಯ ಸಿದ್ಧವೀರಣ್ಣನವರ ಕೃತಿಗಳು

೧. ಆಚರಣೆಯ ಸಂಬಂಧದ ವಚನಗಳು
೨. ಚೆನ್ನಬಸವೇಶ್ವರ ದೇವರ ವಚನಗಳು
೩. ಪ್ರಭುದೇವರ ಸ್ತೋತ್ರದ ವಚನಗಳು
೪. ಲಿಂಗಸ್ತೋತ್ರದ ವಚನಗಳು
೫. ಶಿವನ ಬಿರುದಾವಳಿ ಸ್ತೋತ್ರದ ವಚನ

---

೧೮೭. 'ಕರ್ನಾಟಕ ಕವಿಚರಿತೆ,' ಸಂಪುಟ-೨ ಪುಟ-೩೨೫
೧೮೮. ಎಸ್.ಶಿವಣ್ಣ (ಸಂ) 'ವಚನ ಸಂಕಲನ ಸಂಪುಟ-೩.' ವೀರಶೈವ ಲಿಂಗಾಯಿತ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ, ಗದಗ.

೬. ಅಷ್ಟಾವರಣ ಸ್ತೋತ್ರದ ತ್ರಿವಿಧಿ
೭. ಮಿಶ್ರ ಸ್ತೋತ್ರ
೮. ಮಿಶ್ರ ಸ್ತೋತ್ರದ ತ್ರಿವಿಧಿ
೯. ಮಿಶ್ರ ಸ್ತೋತ್ರದ ಷಟ್ಪದಿ
೧೦. ಲಿಂಗ ಸ್ತೋತ್ರದ ಕಂದ
೧೧. ಲಿಂಗ ಸ್ತೋತ್ರದ ಷಟ್ಪದಿ
೧೨. ಶಂಕರ ದೇವರ ಕಂದ
೧೩. ಸರ್ವಜ್ಞ ಮೂರ್ತಿಯ ಆಚರಣೆಯ ಸಂಬಂಧದ ತ್ರಿವಿಧಿ
೧೪. ಏಕೋತ್ತರ ಸಾರಟೀಕೆ
೧೫. ಬಸವಸ್ತೋತ್ರದ ತ್ರಿವಿಧಿ
೧೬. ಲಿಂಗಸ್ತೋತ್ರದ ಷಟ್ಪದಿ ಟೀಕೆ
೧೭. ಪಾದಸ್ತೋತ್ರ
೧೮. ಅನಾದಿ ವೀರಶೈವ ಸಾರ ಸಂಗ್ರಹ (ಸಂಸ್ಕೃತ ಕೃತಿ)

ಎಸ್ ಶಿವಣ್ಣ ಅವರು ವಚನ ಸಂಕಲನ ಸಂಪುಟ-೩ರಲ್ಲಿ ೧೭ ಕೃತಿಗಳ ಉಲ್ಲೇಖ ಮಾಡಿದ್ದಾರೆ. ಅವುಗಳಲ್ಲಿ ೧೬ ಕನ್ನಡ ಕೃತಿಗಳು ೧. ಸಂಸ್ಕೃತಿ ಕೃತಿ ಎಂದು ಹೇಳಿದ್ದಾರೆ.

ಆದರೆ ಜಿ.ಎಂ.ಉಮಾಪತಿ ಶಾಸ್ತ್ರಿಯವರು ಸಂಪಾದಿಸಿದ 'ಸರ್ವಜ್ಞ ಮೂರ್ತಿಯ ವಚನಗಳು' ಅಥವಾ 'ಆಚರಣೆಯ ಸಂಬಂಧದ ತ್ರಿವಿಧಿ' ಎಂಬ ಶೀರ್ಷಿಕೆಯ ಕೃತಿಯೂ ಸಂಪಾದನೆಯ ಸಿದ್ಧವೀರಣ್ಣನದೆಂದೇ ಹೇಳಿದ್ದಾರೆ.[೯೯] ಹಾಗಾಗಿ ಸಂಪಾದನೆಯ ಸಿದ್ಧವೀರಣ್ಣನ ಕೃತಿಗಳು ಹದಿನೆಂಟು ಎಂದಾಯಿತು. ಇವುಗಳಲ್ಲಿ ೧೬ ಕೃತಿಗಳು ಉಪಲಬ್ದವಿದೆ.

೯. ಸಂಪಾದನೆಯ ಬೋಳಬಸವ.(ಕ್ರಿ.ಶ.ಸು.೧೬೭೫)

ಸಂಪಾದನೆಯ ಬೋಳಬಸವನು ತೋಂಟದ ಸಿದ್ಧಲಿಂಗನ ಪರಂಪರೆಯವನು. ಈ ಪರಂಪರೆಯಲ್ಲಿ ಬೋಳಬಸವ ಎಂಬ ಹೆಸರಿನ ಇಬ್ಬರು ವ್ಯಕ್ತಿಗಳಿದ್ದಾರೆ.ಮೊದಲಿನವನು ನಿರಕ್ಷರಿ ಬೋಳಬಸವ. ಇವನು ತೋಂಟದ ಸಿದ್ಧಲಿಂಗರ ನೇರ ಶಿಷ್ಯ.ಇನ್ನೊಬ್ಬ ಸಂಪಾದನೆಯ ಬೋಳಬಸವನು ಸಂಪಾದನೆಯ ಸಿದ್ಧವೀರಣ್ಣನ ಶಿಷ್ಯನಾಗಿದ್ದಾನೆ.[೯೦]

ಸಂಪಾದನೆಯ ಬೋಳಬಸವನು ಸಹ ಗುರುಸಿದ್ಧವೀರಣಾಚಾರ್ಯನಂತೆ ಘನವಾದ ವ್ಯಕ್ತಿತ್ವವನ್ನು ಹೊಂದಿದವನಾಗಿದ್ದಾನೆ. ಇವನ ಶಿಷ್ಯನಾದ ಸಂಪಾದನೆಯ ಗುರುಲಿಂಗದೇವನು" ಅವರಂಗ (ಸಿದ್ಧವೀರಣಾಚಾರ್ಯರ) ಲಿಂಗವನುಭಾವದಾಚರಣೆಯ ನಿಜದ ನಿರಿಗೆವಿಡಿದು ಸ್ವಲೀಲಾನಂದದಲ್ಲಾಚರಿಸಿದವರೇ ಸಂಪಾದನೆಯ ಬೋಳ ಬಸವದೇವರು" ಎಂದಿದ್ದಾನೆ.[೯೧] ಈತನ ಯಾವುದೇ ವೈಯಕ್ತಿಕ ವಿಚಾರಗಳು ತಿಳಿದು ಬಂದಿರುವುದಿಲ್ಲ. ಆದರೆ ವಿದ್ವಾಂಸರು ಈತನ ಕಾಲವನ್ನು ಇತ್ತೀಚಿನ ಸಂಶೋಧನೆಗಳಿಂದ ಕ್ರಿ.ಶ. ೧೭೭೦ ಎಂದು ಗುರುತಿಸಿದ್ದಾರೆ.[೯೨]

---

೮೯. ಶ್ರೀಮತಿ ವಿಜಯಶ್ರೀ ಎಂ. ಹಿರೇಮಠ. 'ಸಂಪಾದನ ಸಮಯ.' ಪುಟ-೩೮

೯೦. ಡಾ॥. ಆರ್.ಸಿ. ಹಿರೇಮಠ, 'ಶಿವದೀಪ್ತಿ.' ಪುಟ-೫೦೮

೯೧. 'ಕರ್ನಾಟಕ ಕವಿ ಚರಿತೆ.' ಸಂ.-೨ ಪುಟ-೪೫೪.

೯೨. ತೋಂಟದ ಸಿದ್ಧಲಿಂಗರ ಕಾಲ ಕವಿಚರಿತೆಕಾರರು ಹೇಳಿದ ಕಾಲಕ್ಕಿಂತ ೧೦೦ ವರ್ಷ ಮುಂದೆ ಹೋಗಿರುವುದರಿಂದ ಬೋಳಬಸವನ ಕಾಲ ಕ್ರಿ.ಶ. ೧೬೭೦ರಿಂದ ೧೭೭೦ಕ್ಕೆ ಹೋಗುತ್ತದೆ.

ಸಂಪಾದನೆಯ ಬೋಳಬಸವನ ಮೂರು ಸಂಕಲನಗಳು ದೊರೆತಿವೆ.

೧. ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು : ಇದರಲ್ಲಿ ೬೧ ಶಿವಶರಣ-ಶರಣೆಯರ ೨೩೧ವಚನಗಳಿವೆ

೨. ಬಸವ ಸ್ತೋತ್ರದ ವಚನ-೧ : ಇದರಲ್ಲಿ ೧೭ ಶಿವಶರಣ-ಶರಣೆಯರ ೧೨೪ ವಚನಗಳಿವೆ

೩. ಬಸವಸ್ತೋತ್ರ ವಚನ-೨: ಇದರಲ್ಲಿ ಚೆನ್ನಬಸವ, ಅಕ್ಕಮಹಾದೇವಿ ಮುಂತಾದವರ ೪೬ ವಚನಗಳಿವೆ.[೧೯೩]

೧೦. ಸಂಪಾದನೆಯ ಪರ್ವತೇಶ್ವರ : (ಸು.೧೬೯೮)

ತೋಂಟದ ಸಿದ್ಧಲಿಂಗನ ಶಿಷ್ಯ ಪರಂಪರೆಗೆ ಸೇರಿದ ಸಂಪಾದನಾ ಸಮಯದವನಾಗಿದ್ದಾನೆ. ಆದರೆ ಈ ಪರಂಪರೆಯಲ್ಲಿ ಪರ್ವತೇಶ್ವರ ಮತ್ತು ಪರ್ವತೇಂದ್ರ ಎಂಬ ಹೆಸರಿನ ವ್ಯಕ್ತಿಗಳಿಬ್ಬರಿದ್ದಾರೆ. ಪರ್ವತೇಂದ್ರನು ಹರತಾಳ ಚೆನ್ನಂಜೇದೇವನ ಶಿಷ್ಯ ಎಳಮಲೆಗುರುಶಾಂತದೇವನ ಸಮಕಾಲೀನ. ವಿರಕ್ತ ತೋಂಟದಾರ್ಯನ ಗುರುವಾಗಿದ್ದಾನೆ. ಆದರೆ ಸಂಪಾದನೆಯ ಪರ್ವತೇಶನು ಎಳಮಲೆಯ ಗುರುಶಾಂತದೇವನ ಶಿಷ್ಯ ಪರಂಪರೆಯ ಸಂಪಾದನೆಯ ಚೆನ್ನಮಲ್ಲಿಕಾರ್ಜುನನ ಶಿಷ್ಯನಾಗಿದ್ದಾನೆ. ಈತ ವೀರಶೈವ ಕವಿಯೂ, ಸಂಪಾದನಾಕಾರನೂ ಆಗಿದ್ದಾನೆ. ಈತನನ್ನು ಪರ್ವತಾಚಾರ್ಯ, ಪರ್ವತಾಹ್ವಯಚಾರ್ಯ, ಸಂಪಾದನೆಯ ಪರ್ವತೇಶ, ಎಂಬ ಹೆಸರುಗಳಿಂದ ಕರೆಯುತ್ತಾರೆ. ಇವನ ವೈಯಕ್ತಿಕ ವಿಷಯಗಳಾವುವು ದೊರೆಯುವುದಿಲ್ಲ. ತನ್ನ "ಚಾತುರಾಚಾರ್ಯ ಪುರಾಣವನ್ನು" ೧೬೯೮ರಲ್ಲಿ ಬರೆದಂತೆ (ಶಕ ವರ್ಷ ೧೬೧೯ನೇ ಈಶ್ವರ ವರ್ಷ) ಹೇಳಿಕೊಂಡಿದ್ದಾನೆ.

೧. ಅನುಭಾವಜ್ಞಾನಸಾರಾಮೃತ ಸಂಪಾದನಾ ಸ್ತೋತ್ರ: ಈ ಉಪಲಬ್ದ ಪ್ರತಿಯಲ್ಲಿ ೩೯ ಶರಣ-ಶರಣೆಯರ ೧೭೨ವಚನಗಳಿವೆ. ಈ ಕೃತಿ ಅಪೂರ್ಣವಾಗಿದೆ.[೧೯೪]

ಈ ಗ್ರಂಥದ ಆರಂಭದಲ್ಲಿ ಸ್ವತ: ಪರ್ವತಾಚಾರ್ಯನೇ "ಸಂಪಾದನೆಯ ಪರ್ವತಾಹ್ವಯಾಚಾರ್ಯರು ಸಂಗ್ರಹಿಸಿದ ಅನುಭವ ಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರ" ಎಂದು ಹೇಳಿರುವುದರಿಂದ ಇದರ ಕರ್ತೃ ಸಂಪಾದನೆಯ ಪರ್ವತೇಶ ಎಂಬುದು ಸ್ಪಷ್ಟ

೨. ಚತುರಾಚಾರ್ಯ ಪುರಾಣ : ವಾರ್ಧಕ ಷಟ್ಪದಿಯಲ್ಲಿದ್ದು ಆರು ಕಾಂಡ, ಐದು ಸಂಧಿ, ಪದ ೩೧೮೭ ಇವೆ. ಇದರಲ್ಲಿ ರೇಣುಕ, ಮರುಳುಸಿದ್ಧ, ಏಕೋರಾಮ ಮತ್ತು ಪಂಡಿತಾರಾಧ್ಯರ ಚರಿತೆ ಇದೆ.[೧೯೫]

---

೧೯೩. ಎಸ್. ಶಿವಣ್ಣ. 'ವಚನ ಸಾಹಿತ್ಯದ ಸಂಕಲನಕಾರರು, ಪ್ರಕಟಣೆಯ ಇತಿಹಾಸ.' ಬಸವ ಜನರಲ್ ೨-೩ ನವೆಂಬರ್ ೧೯೭೭

೧೯೪. ಶ್ರೀ.ಎನ್. ಬಸವಾರಾಧ್ಯರ ಸಂಗ್ರಹ

೧೯೫. ಎಸ್.ಶಿವಣ್ಣ : 'ವಚನಸಾಹಿತ್ಯ ಸಂಕಲನಕಾರರು- ಪ್ರಕಟಣೆಯ ಇತಿಹಾಸ.' ಬಸವಜರ್ನಲ್ ೨-೩ ನವಂಬರ್ ೧೯೭೭.

೧೧. ಗುರುಸಿದ್ಧ ಸ್ವಾಮಿ.(ಕ್ರಿ.ಶ.ಸು.೧೭೦೦)

'ಶ್ರೀಮದ್ವೀರಶೈವ ನಿಜಾಚರಣೆ' ಅಥವಾ 'ಚಿದೈಶ್ವರ್ಯ ಚಿದಾಭರಣ' ಸಂಕಲನ ಕೃತಿಯ ಪ್ರಕಟಣೆಯ ಮೂಲಕ ಪ್ರಕಾಶಕ್ಕೆ ಬಂದ ಗುರುಸಿದ್ಧದೇವ ಒಬ್ಬ ಸಂಕಲನಕಾರ, ವಚನಕಾರ ಹಾಗೂ ಅನುಭಾವಿ. ಚಿದೈಶ್ವರ್ಯ ಚಿದಾಭರಣದಲ್ಲಿ ಆತನೆ ಹೇಳಿಕೊಂಡಂತೆ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವನಾಗಿದ್ದಾನೆ.[೧೯೬] ಇವನ ನೇರವಾದ ಗುರು ಶಾಂತಮಲ್ಲಸ್ವಾಮಿ.[೧೯೭] ಗುರುಸಿದ್ಧಸ್ವಾಮಿ ಈ ಪರಂಪರೆಯ ೨೭ ನೇ ಪೀಠಾಧಿಪತಿಯಾಗಿದ್ದಾನೆ. ಇವರು ೧೭ ನೇ ಶ.ದ. ಉತ್ತರಾರ್ಧದಲ್ಲಿದ್ದರೆಂದು ತಿಳಿದು ಬರುವುದರಿಂದ ಗುರು ಸಿದ್ಧಸ್ವಾಮಿಯು ಅದೇ ಕಾಲದವನೆನಿಸುತ್ತಾನೆ. ಈತನಿಗೆ ಗುರುಸಿದ್ಧ ಶರಣ, ಗುರುಸಿದ್ಧೇಶ, ಗುರುಸಿದ್ಧೇಶ್ವರಸ್ವಾಮಿ, ಗುರುಸಿದ್ಧಲಿಂಗ ಎಂಬ ಹೆಸರುಗಳಿವೆ. ಶಿಷ್ಯ ಬಸವಲಿಂಗದೇವನ ವಚನಗಳಲ್ಲಿ "ಶ್ರೀಗುರು ಸಿದ್ಧಲಿಂಗೇಶ್ವರ ಎಂಬ ಅಂಕಿತರೂಪದಲ್ಲಿಯೂ ಗೌರವಕ್ಕೆ ಪಾತ್ರನಾಗಿದ್ದಾನೆ. " ಸಂಗನ ಬಸವೇಶ್ವರ " ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ.[೧೯೮]

'ಚಿದೈಶ್ವರ್ಯ ಚಿದಾಭರಣ' ಒಂದು ವಚನ ಸಂಕಲನ. ಇದನ್ನು ಸಂಯೋಜಿಸಿದವನು ಗುರುಸಿದ್ಧದೇವ ಬರೆದುಕೊಂಡವನು ಇವನ ಶಿಷ್ಯನಾದ ಬಸವಲಿಂಗದೇವ. ಚಿದೈಶ್ವರ್ಯ ಚಿದಾಭರಣ ಎಂದು ನಾಮಕರಣ ಮಾಡಿದವರು ಶಾಂತಮಲ್ಲ ಸ್ವಾಮಿಗಳು. ಉಪದೇಶಕೇಳಿ , ಕೃತಿ ಹೆಸರಿಗೆ ವಿವರಣೆ ಬರೆದವನು ಸಂಗನ ಬಸವೇಶ್ವರ: ನಾಲ್ಕು ಜನ ಅನುಭಾವಿಗಳಿಂದ ರೂಪಿತವಾದ ಕೃತಿಯಾದರೂ ಮೂಲ ಸಂಯೋಜಕ ಗುರುಸಿದ್ಧದೇವನೆ ಆಗಿದ್ದಾನೆ. ಅವನ ಹೆಸರಿನಲ್ಲೆ ಈ ಕೃತಿ ಇದೆ.[೧೯೯]

ಈ ಕೃತಿಯಲ್ಲಿ ಇತರ ಶರಣರ ವಚನಗಳ ಜೊತೆಗೆ ತಾನು ಬರೆದ ೧೦೧ ವಚನಗಳನ್ನು ಗುರುಸಿದ್ಧದೇವ ಅಳವಡಿಸಿದ್ದಾನೆ. 'ಸರ್ವಸಂಗ ಪರಿತ್ಯಾಗ ಸ್ಥಲಾದಿಯಾಗಿ-ಶಿವಸಮಾಧಿ ಕ್ರಿಯಾ ಸ್ಥಲಾಂತ್ಯವಾದ ೧೧ ಸ್ಥಲಗಳಿವೆ'. ಇದರಲ್ಲಿ ೧೯ ಶಿವಶರಣ-ಶರಣೆಯರ ೨೪೪ ವಚನಗಳಿವೆ. ಜೊತೆಗೆ ಪ್ರಭುದೇವರ ಮಂತ್ರಗೋಪ್ಯದ ಆರು ಪದಗಳು ಇದರಲ್ಲಿವೆ. ಶ್ರೀ. ಪಿ.ಎಂ. ಗಿರಿರಾಜು ಅವರು ಸಂಪಾದಿಸಿದ ಪ್ರತಿಯಲ್ಲಿ ೨೩ ವಚನಕಾರರ ೧೯೧ ವಚನಗಳಿವೆ. ಇವಲ್ಲದೆ ೫೭ ಪದ ಹಾಗೂ ೧೯೮ ಗ್ರಂಥಗಳಿವೆ. ಹೀಗಾಗಿ ಈ ಕೃತಿಯಲ್ಲಿರುವ ವಚನ ಪದ. ಗ್ರಂಥಗಳ ಸಂಖ್ಯೆ ೬೩೯ ಆಗುತ್ತದೆ.

೧೨. ವೀರಸಂಗಯ್ಯ (ಕ್ರಿ.ಶ.ಸು.೧೬೭೦)

ವೀರ ಸಂಗಯ್ಯ ತೋಂಟದ ಸಿದ್ಧಲಿಂಗನ ಶಿಷ್ಯಪರಂಪರೆಯವನೂ, ಸಂಪಾದನ ಸಮಯದ ಸಂಪಾದನೆಯ ಸಿದ್ಧವೀರೇಶ್ವರನ ಶಿಷ್ಯನೂ ಆಗಿದ್ದಾನೆ. ಈತ ವಚನ ಸಂಕಲನಕಾರ. "ಶಿವಮಹಿಮಾ ಸ್ತೋತ್ರದ ವಚನ" ಎಂಬ ವಚನ ಸಂಕಲನದ ಆದಿಯಲ್ಲಿ "ಶ್ರೀವೀರಶೈವ ಷಟ್ ಸ್ಥಲಚಾರ ಸಾರೋದ್ಧಾರ ಸಂಪಾದನೆಯ ಸಿದ್ಧವೀರೇಶ್ವರ ದೇವರು ಸೇರಿಸಿದ ಅನುಕ್ರಮದಿಂ ವೀರಸಂಗಯ್ಯನವರು

---

೧೯೬. ಡಾ॥ ವೀರಣ್ಣ ರಾಜೂರ- 'ಬಸವೋತ್ತರಯುಗದ ವಚನಕಾರರು.' ಪುಟ-೧೦೨

೧೯೭. ಗುರುಶಾಂತಮಲ್ಲಸ್ವಾಮಿ ೨೬ ನೇ ಪೀಠಾಧಿಪತಿಯಾಗಿದ್ದಾನೆ.

೧೯೮. ವಚನ ಸಾಹಿತ್ಯದ ಇತಿಹಾಸದಲ್ಲಿ ಶಿಷ್ಯನ ಹೆಸರನ್ನೇ ಅಂಕಿತವಾಗಿಟ್ಟುಕೊಂಡ ಅಪರೂಪದ ಗುರು, ಗುರುಸಿದ್ಧದೇವರು. ಈತನ ಶಿಷ್ಯನ ಹೆಸರು 'ಸಂಗನ ಬಸವೇಶ್ವರ'.

೧೯೯. ಶರಣ ಸಂತಾನ ೧-೧ ಪುಟ-೧೧ (೧೯೭೭)

ಸಂಗ್ರಹಿಸಿದ ಶಿವಮಹಿಮಾ ಸ್ತೋತ್ರದ ವಚನ" ಎಂದು ಹೇಳಿಕೊಂಡಿರುವುದರಿಂದ ಈಕೃತಿಯ ಸಂಕಲನಕಾರ ವೀರಸಂಗಯ್ಯನೆಂಬುದು ಸ್ಪಷ್ಟವಾಗುತ್ತದೆ. ವೀರಸಂಗಯ್ಯ ಸಂಪಾದನೆಯ ಸಿದ್ಧವೀರೇಶ್ವರನ ಶಿಷ್ಯನಾಗಿರುವುದರಿಂದ ಈತನ ಕಾಲವೂ ೧೭ ನೇ ಶ.ವಾಗಿದೆ ಎನ್ನಬಹುದು. ಈತನ ವೈಯಕ್ತಿಕ ವಿಚಾರಗಳಾವುವು ದೊರೆಯುವುದಿಲ್ಲ.

ತನ್ನ ಗುರು ಸಿದ್ಧವೀರೇಶ್ವರನು ಸಂಗ್ರಹಿಸಿದ "ಶಿವನ ಬಿರುದಾವಳಿ ಸ್ತೋತ್ರದ ವಚನ" ಎಂಬ ಕೃತಿಯನ್ನು ಆಧರಿಸಿ ವೀರಸಂಗಯ್ಯ 'ಶಿವ ಮಹಿಮಾ ಸ್ತೋತ್ರದ ವಚನ' ಎಂಬ ಕೃತಿಯನ್ನು ಸಂಕಲಿಸಿದ್ದಾನೆ. ಈ ಕೃತಿಯ ಆದಿಯಲ್ಲಿಯೆ ಇದಕ್ಕೆ ಸ್ಪಷ್ಟ ಆಧಾರವಿದೆ. ಈತನ ಸಂಕಲನದಲ್ಲಿ ಪರವಸ್ತು ಭೇದ, ಪರತತ್ವ ಲಕ್ಷಣ, ಶಿವಮೂರ್ತಿ ನಿರ್ಣಯ, ಶಿವಲೀಲಾ ಜಗದ್ವೈಭವ ಆಜ್ಞಾ ಕರ್ತೃತ್ವ ಮುಂತಾದ ೨೦ ಸ್ಥಲಗಳಿವೆ. ಇದರಲ್ಲಿ ೨೨ ಶರಣ ಶರಣೆಯರ ೧೧೧ ವಚನಗಳಿವೆ.[೨೦೦] ಈ ಎಲ್ಲಾ ವಚನಗಳು ಶಿವನ ಮಹಾಮಹಿಮೆಯನ್ನು ಸಾರುವಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿದೆ. ಶಿವ ಜಗತ್ತಿನಿಂದ ಹೇಗೆ ಭಿನ್ನವಾಗಿದ್ದಾನೆ. ಅವನ ಲಕ್ಷಣಗಳು ಯಾವುವು. ಅವನ ವೈಶಿಷ್ಟ್ಯ ಎಂತಹದು. ಶಿವನಿಂದ ಜಗತ್ತು ಯಾವ ರೀತಿ ಹುಟ್ಟಿತು. ಜಗತ್ತಿಗೆ ಅವನೊಬ್ಬನೆ ದೈವ. ಅವನೇ ಶ್ರೇಷ್ಠ. ಅವನಿಂದಲೆ ಈ ಜೀವ ಜಗತ್ತು ಎಂಬಂತಹ ವಿಚಾರಗಳನ್ನು ಸ್ತುತಿ ರೂಪದ ಈ ವಚನಗಳು ಸಾರುತ್ತವೆ.

ಗುರುಶಿಷ್ಯರಿಬ್ಬರ ಎರಡೂ ಕೃತಿಗಳನ್ನು ಹೋಲಿಸಿ ನೋಡಿದಾಗ ವಿವಿಧ ವಚನಕಾರರ ೧೧೧ ವಚನಗಳನ್ನೊಳಗೊಂಡ ಈ ಕೃತಿಗಳಲ್ಲಿ ೯೩ ವಚನಗಳು ಒಂದೇ ಆಗಿವೆ. ಅಲ್ಲದೆ ಸುಮಾರು ೪೦ ವಚನಗಳು ಅಲ್ಲಲ್ಲಿ ಒಂದೇ ಕ್ರಮದಲ್ಲಿವೆ. ಆದ್ದರಿಂದ ವೀರ ಸಂಗಯ್ಯನ ಈ ಕೃತಿಗೆ ಸಿದ್ಧವೀರೇಶ್ವರನ 'ಶಿವನ ಬಿರುದಾವಳಿ ಸ್ತೋತ್ರ'ವೇ ಆಧಾರವೆಂಬುದು ಸ್ಪಷ್ಟ[೨೦೧]. ಈ ಮಾತಿಗೆ 'ಶಿವ ಮಹಿಮಾ ಸ್ತೋತ್ರದ ವಚನ' ಸಂಕಲನದ ಆರಂಭದ "ಶ್ರೀವೀರಶೈವ ಷಟ್ ಸ್ಥಲಾಚಾರ ಸಾರೋದ್ಧಾರ ಸಂಪಾದನೆಯ ಸಿದ್ಧವೀರೇಶ್ವರ ದೇವರು ಸೇರಿಸಿದ ಅನುಕ್ರಮದಿಂದ ವೀರಸಂಗಯ್ಯನವರು ಸಂಗ್ರಹಿಸಿದ 'ಶಿವ ಮಹಿಮಾ ಸ್ತೋತ್ರದ ವಚನ' ಎಂಬ ಗದ್ಯದಿಂದ ಸ್ಪಷ್ಟವಾಗುತ್ತದೆ. ಸಂಪಾದನೆಯ ಸಿದ್ಧವೀರೇಶ್ವರ ದೇವರು ಸಂಗ್ರಹಿಸಿದ 'ಶಿವನ ಬಿರುದಾವಳಿ ಸ್ತೋತ್ರದ ವಚನ' ಕೃತಿಯಲ್ಲಿ ಶಿವಮಹಿಮೆಯನ್ನು ಸಾರುವ ಸ್ತೋತ್ರದ ವಚನಗಳಿವೆ. ವೀರಸಂಗಯ್ಯ ಅದೇ ವಚನಗಳನ್ನು ಇಟ್ಟುಕೊಂಡು ಅವನ್ನು ಸ್ಥಲಾನುಸಾರಿಯಾಗಿ ಜೋಡಿಸಿರುವುದು ಈತನ ವೈಶಿಷ್ಟ್ಯ.

---

೨೦೦. ಎಸ್. ಶಿವಣ್ಣ 'ವಚನ ಸಾಹಿತ್ಯದ ಸಂಕಲನಕಾರರು. ಸಂಗ್ರಹಕಾರರು, ಪ್ರಕಟಣೆಯ ಇತಿಹಾಸ,' ಬಸವ ಜರ್ನಲ್-೨-೩ ನವಂಬರ್ ೧೯೭೭.

೨೦೧. ವಿಜಯಶ್ರೀ. ಎಂ.ಹಿರೇಮಠ, 'ಸಂಪಾದನಾ ಸಮಯ.' ಪುಟ -೩೫.

೧೩. ಮಹದ್ದೇವ ಯೋಗಿ (ಕ್ರಿ.ಶ.ಸು. ೧೭ ನೇ.ಶ)

'ತ್ರೈಲೋಕ್ಯ ಚಿಂತಾಮಣಿ' ವಚನ ಸಂಕಲನಕಾರ. ಈ ಕೃತಿ "ವೀರಶೈವ ಚಿಂತಾಮಣಿ" ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ತೋಂಟದ ಸಿದ್ಧಲಿಂಗ ಮುಂತಾದವರ ವಚನಗಳಿವೆ. ಈತನ ಕಾಲ ೧೬ ಅಥವಾ ೧೭ ನೇ ಶತಮಾನವಾಗಿರಬೇಕೆಂದು ಸಂಪಾದಕರು ಅಭಿಪ್ರಾಯ ಪಡುತ್ತಾರೆ.[೨೦೨] ಈತನ ಸಂಕಲನದಲ್ಲಿ ತೋಂಟದ ಸಿದ್ಧಲಿಂಗ ಮುಂತಾದವರ ವಚನಗಳು ಸಿಗುವುದರಿಂದ ಈತ ತೋಂಟದ ಸಿದ್ಧಲಿಂಗನ ಅನಂತರದವನು ಎಂಬುದು ವಿಧಿತವಾಗುತ್ತದೆ. ಹಾಗಾಗಿ ಈತನ ಕಾಲ ೧೬-೧೭ ನೇ ಶತಮಾನಗಳ ನಡುವೆ ಎಂದು ಗುರುತಿಸಬಹುದು.

ವೀರಶೈವ ಧರ್ಮಕ್ಕೆ ಸಂಬಂಧಿಸಿದ ಅಷ್ಟಾವರಣಗಳಾದ ಗುರುಲಿಂಗ ಜಂಗಮ ಮೊದಲಾದವುಗಳ ಮಹತ್ವವನ್ನು ವೇದ, ಆಗಮ ಮುಂತಾದ ಸಂಸ್ಕೃತ ಕೃತಿಗಳಿಂದ ಮತ್ತು ವಚನಗಳಿಂದ ಸ್ಥಾಪಿಸಲು ಪ್ರಯತ್ನಿಸಿದ್ದಾನೆ. ಈ ಕೃತಿ ಉಮಾಮಹೇಶ್ವರರ ಸಂವಾದ ರೂಪದಲ್ಲಿದೆ. ಇದರಲ್ಲಿ ೨೯ ವಚನಕಾರ, ವಚನಕಾರ್ತಿಯರ ೨೪೩ ವಚನಗಳು ಹಾಗೂ ೮ ಸ್ವರ ವಚನಗಳು ಇವೆ.

ಇಲ್ಲಿನ ಸ್ವರ ವಚನಗಳೆಲ್ಲ ಮಹಾಲಿಂಗದೇವ, ಜಕ್ಕಣರ 'ಏಕೋತ್ತರ ಶತಸ್ಥಲ' ಗಳಲ್ಲಿನವೆ ಆಗಿವೆ.[೨೦೩] ಈ ಸ್ವರ ವಚನ ಸಾಹಿತ್ಯ ಒಂದು ಕಡೆ ಶಿಷ್ಟ ಪದವೂ ಅಲ್ಲದ, ಇನ್ನೊಂದು ಕಡೆ ಜನಪದವು ಅಲ್ಲದ ಸ್ವರೂಪವನ್ನು ಹೊಂದಿದೆ. ವೀರಶೈವ ತತ್ವಗಳನ್ನು ಒಳಗೊಂಡ ಈ ಸ್ವರ ವಚನಗಳನ್ನು ರಚಿಸುವ ಮತ್ತು ಹಾಡುವ ಪರಂಪರೆಯನ್ನು ಹಳ್ಳಿಗಳಲ್ಲಿ ಈಗಲೂ ವೀರಶೈವರೂ, ವೀರಶೈವೇತರರು ಮುಂದುವರಿಸಿಕೊಂಡು ಬಂದಿದ್ದಾರೆ. ಹೀಗಾಗಿ ಜಾತಿ ಭೇದವಿಲ್ಲದೆ ಜನಸಾಮಾನ್ಯರನ್ನು ವ್ಯಾಪಿಸಿದ ವೀರಶೈವ ಏಕೈಕ ಸಾಹಿತ್ಯ ಪ್ರಕಾರವಾಗಿ ಇದು ಕಂಗೊಳಿಸುತ್ತದೆ.

೧೪. ಸಂಪಾದನೆಯ ಸಣ್ಣ ಬರಹದ ಗುರು ಬಸವರಾಜ ದೇವರು :

ಈತನ ಕಾಲ ದೇಶಾದಿ ವಿಚಾರಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಈತನ ಹೆಸರಿನ ಹಿಂದೆ ಇರುವ ಸಂಪಾದನೆ ಎಂಬ ವಿಶೇಷಣ ಸಂಪಾದನ ಸಮಯ ಪರಂಪರೆಯ ಸಂಪಾದನಕಾರನಾಗಿದ್ದಾನೆ ಎಂಬುದು ತಿಳಿಯುತ್ತದೆ. 'ಸಣ್ಣ ಬರಹದ' ಎಂಬ ಇನ್ನೊಂದು ವಿಶೇಷಣ ಈತ ಅತಿ ಸಣ್ಣದಾಗಿ ಅಕ್ಷರಗಳನ್ನು ಬರೆಯುತ್ತಿರಬೇಕು ಎಂಬುದನ್ನು ಸೂಚಿಸುತ್ತದೆ. ಈತ ಕನ್ನಡ – ಸಂಸ್ಕೃತಗಳಲ್ಲಿ ಕೃತಿಗಳನ್ನು ಸಂಕಲಿಸಿದ್ದಾನೆ.

* ಕನ್ನಡ ಕೃತಿಗಳು
  ೧. ಶರಣ ಚಾರಿತ್ರದ ವಚನಗಳು
  ೨. ಲಿಂಗ ಸಾವಧಾನದ ವಚನಗಳು

---

೨೦೨. ಡಾ॥. ಆರ್.ಸಿ. ಹಿರೇಮಠ (ಸಂ) 'ವೀರಶೈವ ಚಿಂತಾಮಣಿ', ಪ್ರಸ್ತಾವನೆ ಪು-xi

೨೦೩. ಎಸ್.ಶಿವಣ್ಣ 'ವಚನ ಸಾಹಿತ್ಯದ ಸಂಕಲನಕಾರರು....ಪ್ರಕಟಣೆಯ ಇತಿಹಾಸ.' ಬಸವ ಜರ್ನಲ್ ೨-೩ ನವಂಬರ್ ೧೯೭೭.

* ಸಂಸ್ಕೃತ ಕೃತಿಗಳು ೧. ಅಷ್ಟಾವರಣದ ಸ್ತೋತ್ರ[೨೦೪]
೨. ಶರಣ ಚಾರಿತ್ರ[೨೦೫]

೧. **ಶರಣ ಚಾರಿತ್ರದ ವಚನಗಳು** : ಈ ಕೃತಿಯನ್ನು ಡಾ॥ ಬಿ.ವಿ. ಶಿರೂರ ಅವರು ಸಂಪಾದಿಸಿದ್ದಾರೆ. ಹಾಗೂ ಈತ ೧೬-೧೭ ನೇ ಶ.ಕ್ಕೆ ಸೇರಿದವನಾಗಿದ್ದಾನೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೨೦೬] ಈ ಕೃತಿಯಲ್ಲಿ ೫ ಸಂಪಾದನೆಗಳನ್ನೊಳಗೊಂಡ ೨೭೯ ವಚನಗಳಿದ್ದು, ಅವುಗಳಲ್ಲಿ ಸುಮಾರು ೧೭೦ ಹೊಸ ವಚನಗಳಿವೆ.[೨೦೭] ಇದರಲ್ಲಿ ೨೨ ಹೊಸ ವಚನಾಂಕಿತಗಳಿವೆ.[೨೦೮]

೨. **ಲಿಂಗಸಾವಧಾನದ ವಚನಗಳು** : ಇದು ಅತ್ಯಂತ ಸಣ್ಣ ವಚನ ಸಂಕಲನ ಈ ಕೃತಿಯಲ್ಲಿ ಮೆರೆಮಿಂಡದೇವ, ಪುರದ ನಾಗಣ್ಣ, ಅಮುಗೆರಾಯಮ್ಮ, ಚೆನ್ನ ಬಸವಣ್ಣ, ಉರಿಲಿಂಗ ಪೆದ್ದಿಯ ಒಟ್ಟು ೧೪ ವಚನಗಳಿವೆ.

ಈ ಕೃತಿಯಲ್ಲಿ ಲಿಂಗವನ್ನು ಕುರಿತಾದ ವಿಷಯ ಹೊಂದಿರುವ ವಚನಗಳಿವೆ. ಶರಣನ ದೇಹದ ಮೇಲಿರುವ ಲಿಂಗ ಭಿನ್ನವಾದರೆ ಮತ್ತೊಂದು ಧರಿಸಬಹುದೆಂದು ಕೆಲವು ವಚನಗಳು ಪ್ರತಿಪಾದಿಸಿದರೆ, ಕಳೆದ ಲಿಂಗದೊಡನೆ ಪ್ರಾಣವನ್ನು ತ್ಯಜಿಸಬೇಕು ಎಂದು ಕೆಲವು ವಚನಗಳು ಹೇಳುತ್ತವೆ. ಇದರಿಂದ ಉಭಯ ಆಚರಣೆಗಳು ಅಂದಿನ ವೀರಶೈವ ಶರಣರಲ್ಲಿದ್ದುವೆಂದು ತಿಳಿದು ಬರುತ್ತದೆ.[೨೦೯] ತಾನು ಧರಿಸಿರುವ ಇಷ್ಟಲಿಂಗವು ನೆಲಕ್ಕೆ ಬಿದ್ದರೆ ಅಥವಾ ಲಿಂಗ ಭಿನ್ನವಾದರೆ ತಕ್ಷಣವೆ ಸಾಯಬೇಕೆನ್ನುವ ಆ ಕಾಲದ ಕೆಲವರ ಅಭಿಪ್ರಾಯಗಳನ್ನು ಚೆನ್ನಬಸವಣ್ಣ ಮುಂತಾದವರು ತೀವ್ರವಾಗಿ ಖಂಡಿಸುತ್ತಾರೆ. "ಭೂಮಿಯಲ್ಲಿ ಹುಟ್ಟಿ, ಕಲ್ಕುಟಿಗನಿಂದ ರೂಪಗೊಂಡು, ಗುರು ಹಸ್ತದಿಂದ ಲಿಂಗವಾಗಿರುವ ಒಂದು ಕಲ್ಲು ಬಿದ್ದರೆ, ಆತ್ಮ ಹತ್ಯೆ ಮಾಡಿಕೊಳ್ಳಬಾರದು.[೨೧೦] ಏಕೆಂದರೆ ಲಿಂಗವೆಂಬುದು ಶಿಲಾ ಮಾತ್ರವಲ್ಲ ಅದೊಂದು ಭಾವನೆ. ಈ ಲಿಂಗವು ಶಿವನನ್ನು ಅರಿತಾಗ ಇರುತ್ತದೆ. ಮರೆತರೆ ಬಿದ್ದುಹೋಗುತ್ತದೆ. ಅಂದರೆ ಮರೆಯಾಗುತ್ತದೆ. ಲಿಂಗವು ಯಾವತ್ತೂ ಬೀಳಲು ಸಾಧ್ಯವಿಲ್ಲ. ಅದೊಂದು ಸೃಷ್ಟಿ ಶಕ್ತಿ. ಅಂತಹ ಸೃಷ್ಟಿ ಶಕ್ತಿಯೆ ಕೆಳಗಡೆ ಬಿದ್ದರೆ ಈ ಭೂಮಿ ತಡೆಯಬಲ್ಲುದೆ? ಎಂಬಂತಹ ಪ್ರಶ್ನೆ ಇಟ್ಟುಕೊಂಡು ಮೌಢ್ಯತೆಗೆ ಶರಣಾದವರನ್ನು ಕಂಡು ವಚನಕಾರರು ಮರುಗುತ್ತಾರೆ.

---

೨೦೪. ತೋಂಟದಾರ್ಯ ಮಠ (ಗದಗ) ದಲ್ಲಿದೆ.
೨೦೫. ಕನ್ನಡ ಟೀಕಾ ಸಹಿತ - ಮಾಗಡಿ ವೀರಪ್ಪ ಶಾಸ್ತ್ರಿ, ಸಂಪಾದಿಸಿದ್ದಾರೆ. ೧೯೨೪-೨೫
೨೦೬. ಡಾ॥ ಎಸ್.ವಿದ್ಯಾಶಂಕರ್ (ಸಂ) 'ವಚನ ಸಾಹಿತ್ಯ ದ್ವಿತೀಯ ಘಟ್ಟ.' ಪುಟ-೩೧
೨೦೭. ವಿಜಯಶ್ರೀ ಎಂ.ಹಿರೇಮಠ, 'ಸಂಪಾದನ ಸಮಯ.' -ಪುಟ ೪೭.
೨೦೮. ಡಾ॥ ಎಸ್.ವಿದ್ಯಾಶಂಕರ (ಸಂ)) 'ವಚನ ಸಾಹಿತ್ಯ ದ್ವಿತೀಯ ಘಟ್ಟ.' ಪುಟ-೩೨
೨೦೯. ವಿಜಯ ಶ್ರೀ.ಎಂ. ಹಿರೇಮಠ, 'ಸಂಪಾದನ ಸಮಯ.' ಪುಟ ೪೮.
೨೧೦. 'ಚೆನ್ನಬಸವಣ್ಣನವರ ವಚನಗಳು.'-ವ-೪೮೨ ಪುಟ ೨೧೬

೧೫. ಕುಂತೂರು ಮಹತ್ತದೇವ

ಈತ "ಎಲ್ಲಾ ಪುರಾತನರ ಸ್ತೋತ್ರದ ವಚನ"ಗಳು ಎಂಬ ಕೃತಿಯನ್ನು ಸಂಕಲಿಸಿದ್ದಾನೆ. ಈ ವಚನ ಸಂಕಲನ "ಆಚರಣೆಯ ವಚನಗಳು ಸಮಾಪ್ತಂ" ಎಂದು ಮುಕ್ತಾಯಗೊಂಡಿದೆ. ಈತನ ಹೆಸರಿನ ಹಿಂದೆ ಇರುವ ಕುಂತೂರು ಎಂಬ ವಿಶೇಷಣ ಗ್ರಾಮಸೂಚಿಯಾಗಿದೆ. ಇದು ಮೈಸೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿದೆ. ಈ ಊರು ವೀರಶೈವ ಧರ್ಮಕ್ಕೆ ಹಿಂದಿನಿಂದಲೂ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇಲ್ಲಿ ಒಂದು ವೀರಶೈವ ಮಠವಿದೆ. ಈ ಮಠದ ಸ್ವಾಮಿಯಾಗಿ ಕುಂತೂರು ಮಹತ್ತ ದೇವರು ಇದ್ದು, ಈ ಪ್ರಾಂತ್ಯದ ಜನರ ಆಧ್ಯಾತ್ಮಿಕ ವಿಕಾಸಕ್ಕಾಗಿ ಹಾಗೂ ಧರ್ಮದ ಏಳ್ಗೆಗಾಗಿ ದುಡಿದ ಮಹನೀಯರಾಗಿದ್ದಾರೆ. ಇವರ ಹೆಸರೊಂದನ್ನು ಬಿಟ್ಟು ಇತರೆ ವೈಯಕ್ತಿಕ ವಿಚಾರಗಳಾವುವು ದೊರೆಯುವುದಿಲ್ಲ.

ಈತನ ವಚನ ಸಂಕಲನದಲ್ಲಿ ತೋಂಟದ ಸಿದ್ಧಲಿಂಗೇಶ್ವರರ ವಚನಗಳೂ ಸೇರಿರುವುದರಿಂದ ತೋಂಟದ ಸಿದ್ಧಲಿಂಗರ ಕಾಲದ ನಂತರದವನಾಗಿದ್ದಾನೆ ಎಂದು ಹೇಳಬಹುದು.[೨೧೧] ಇವನ ಈ ಸಂಕಲನದಲ್ಲಿ ೬೪ ವಚನಕಾರರ ೪೮೦ ವಚನಗಳಿವೆ.[೨೧೨] ಎಂದು ಎಸ್.ಶಿವಣ್ಣ ಅವರು ಅಭಿಪ್ರಾಯ ಪಡುತ್ತಾರೆ. ಆದರೆ ಪ್ರೋ.ಜಿ.ಎ.ಶಿವಲಿಂಗಯ್ಯನವರು ಸಂಪಾದಿಸಿ ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಸಂಸ್ಥಾನ ಮಠ ಗದಗ ಇವರು ಪ್ರಕಟಿಸಿದ ವಚನ ಸಂಕಲನ ಸಂಪುಟ-೨ ರಲ್ಲಿ ೪೪ ವಚನಕಾರ,ಕಾರ್ತಿಯರ ೧೪೪೮ ವಚನಗಳಿವೆ.

೧೬. ಪ್ರಣವ ಸ್ವರೂಪ ಜಟಾಶಂಕರ ದೇವ (ಕ್ರಿ.ಶ.ಸು.೧೬೦೦)

"ಚಿದ್ಭಸ್ಮಮಣಿ ಮಂತ್ರ ಮಹಾತ್ಮೆಯ ಸ್ಥಲದ ವಚನಗಳು" ಈ ಕೃತಿಯ ಸಂಕಲನಕಾರ ಜಟಾಶಂಕರದೇವರು. ಈ ವಚನ ಸಂಕಲನದಲ್ಲಿ ವೀರಶೈವ ಆಚರಣೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಸ್ಥಲಕಟ್ಟಿನ ವಚನಗಳ ವೈವಿಧ್ಯತೆಯನ್ನು ಹೇಳುವ ಈ ಕೃತಿ ೧೬ ನೇ ಶತಮಾನದ ತರುವಾಯದ್ದೆಂದು ಹೇಳಬಹುದು. ಏಕೆಂದರೆ ತೋಂಟದ ಸಿದ್ಧಲಿಂಗರ ವಚನಗಳು ಇಲ್ಲಿ ಸೇರ್ಪಡೆಗೊಂಡಿವೆ. ಹಾಗಾಗಿ ಈತನ ಕಾಲವನ್ನು ೧೬೫೦ ಎಂದು ಎಸ್.ಶಿವಣ್ಣ ಅವರು ಅಭಿಪ್ರಾಯಪಡುತ್ತಾರೆ.[೨೧೩]

'ಚಿದ್ಭಸ್ಮಮಣಿ ಮಂತ್ರ ಮಹಾತ್ಮೆಯ ಸ್ಥಲದ ವಚನಗಳು' ಎಂಬ ಸಂಕಲನ ೪೪ ವಚನಗಳಿಂದ ಕೂಡಿದ ಅತ್ಯಂತ ಚಿಕ್ಕ ಸಂಕಲನವಾಗಿದೆ. ಈ ಕೃತಿಯ ಅಂತ್ಯಗದ್ಯದಲ್ಲಿ "ಇಂತು ಪ್ರಥಮದಲ್ಲಿ ವಿಭೂತಿಸ್ಥಲಕ್ಕೆ ೫ ವಚನ, ರುದ್ರಾಕ್ಷಿಯ ಸ್ಥಲಕ್ಕೆ ೪ ವಚನ, ಪಂಚಾಕ್ಷರಿಯ ಸ್ಥಲಕ್ಕೆ ೩೫ ವಚನ, ಇಂತು ತ್ರಿವಿಧ ಸ್ಥಲಕ್ಕೆ ಸೇರಿದ ವಚನ ನಾಲ್ವತ್ತನಾಲ್ಕಕ್ಕಂ" ಎಂದಿದ್ದರೂ ವಚನಗಳ

---

೨೧೧. ಜಿ.ಎ. ಶಿವಲಿಂಗಯ್ಯ (ಸಂ.) 'ವಚನ ಸಂಕಲನ ಸಂಪುಟ-೨.' ಪ್ರ.ಪು.vi

೨೧೨. ಎಸ್.ಶಿವಣ್ಣ: 'ವಚನಸಾಹಿತ್ಯದ ಸಂಕಲನಕಾರರು, ಸಂಗ್ರಹಕಾರರು, ಪ್ರಕಣೆಯ ಇತಿಹಾಸ.' ಬಸವಜರ್ನಲ್ ೨-೩ ನವೆಂಬರ್ ೧೯೭೭

೨೧೩. .....ಅದೇ.... ಬಸವ ಜರ್ನಲ್ ೨-೩ ನವೆಂಬರ್ ೧೯೭೭

ಮಧ್ಯದಲ್ಲಿ ಸ್ಥಲ ನಿರ್ದೇಶನವಿರುವುದಿಲ್ಲ. ಇದರಲ್ಲಿ ಬಸವಣ್ಣನಿಂದ ತೋಂಟದ ಸಿದ್ಧಲಿಂಗೇಶ್ವರನವರೆಗಿನ ವಚನಕಾರರ ವಚನಗಳು ಸೇರ್ಪಡೆಯಾಗಿವೆ. ಅಷ್ಟಾವರಣಗಳಲ್ಲಿ ಪ್ರಮುಖವೆನಿಸಿದ ವಿಭೂತಿ, ರುದ್ರಾಕ್ಷಿ, ಮಂತ್ರಗಳ ಮಹತ್ವವನ್ನು ವಿವರಿಸುತ್ತದೆ. ಹೀಗೆ ಈ ವಚನ ಸಂಕಲನದಲ್ಲಿ ವೀರಶೈವ ಆಚರಣೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ.

೧೭. ಚೆನ್ನವೀರಣ್ಣೊಡೆಯ (ಸು.೧೬೫೦)

ಶ್ರೀ.ಆರ್.ನರಸಿಂಹಾಚಾರ್ಯರು ಈತನ ಬಗೆಗೆ "ಈತನು ಚೆನ್ನಬಸವನ ಮಿಶ್ರ ಷಟ್ ಸ್ಥಲದ ವಚನಗಳನ್ನು ಸೇರಿಸಿದ್ದಾನೆ. ಇವನು ವೀರಶೈವ ಕವಿ. ಕ್ರಿ.ಶ.ಸು.೧೬೫೦ ರಲ್ಲಿ ಇದ್ದಿರಬಹುದೆಂದು ತೋರುತ್ತದೆ."[೨೧೪] ಎಂದಿದ್ದಾರೆ. ಈತನ ಸಂಕಲನದಲ್ಲಿ ೨೫೦ ವಚನಗಳಿವೆ. ಈ ಪ್ರತಿ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯ ಸರಸ್ವತಿ ಭಂಡಾರದಲ್ಲಿ ಲಭ್ಯವಾಗಿದೆ. ಇದು ಪಿಂಡಸ್ಥಲ, ಪಿಂಡಜ್ಞಾನ ಸ್ಥಲ ಹೀಗೆ ಒಂದೊಂದು ಸ್ಥಲದಲ್ಲಿ ೬ ರಂತೆ ಒಟ್ಟು ೩೬ ಸ್ಥಲಗಳಲ್ಲಿ ಬೆಳೆದು ನಿಂತಿದೆ.

ಈ ಕಾರಣಕ್ಕಾಗಿ ಇದನ್ನು 'ಮಿಶ್ರ ಷಟ್‌ಸ್ಥಲ' ಕೃತಿ ಎಂದು ಕರೆಯಲಾಗಿದೆ. ಇದು ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯವರು ಪ್ರಕಟಿಸಿರುವ 'ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾಸಂಪುಟ'ದ ಮೊದಲನೆ ಕೃತಿಯಾಗಿರುವ 'ಚೆನ್ನಬಸವರಾಜದೇವ ಷಟ್‌ಸ್ಥಲ ವಚನ'ದ ಸಂಗ್ರಹ ರೂಪವಾಗಿದೆ. ಇಲ್ಲಿಯ ಪ್ರತಿಯೊಂದು ವಚನದ ಕ್ರಮಾಂಕದ ಮುಂದೆ ಚೌಕ ಕಂಸದಲ್ಲಿರುವ ಅಂಕಿ 'ಚೆನ್ನಬಸವರಾಜದೇವರ ಷಟ್‌ಸ್ಥಲ ವಚನ' ಕೃತಿಯಲ್ಲಿನ ವಚನ ಸಂಖ್ಯೆಯನ್ನು ಸೂಚಿಸುತ್ತದೆ. ವಚನ ಸಂಕಲನ ಸಂಪುಟ-೬ ರಲ್ಲಿ ಪ್ರಕಟವಾಗಿರುವ ಈಕೃತಿಯ ಸಂಪಾದಕರು ಶ್ರೀ. ಜಿ.ಎ. ಶಿವಲಿಂಗಯ್ಯನವರು.

೧೮. ಚೆನ್ನದಣ್ಣಾಯಕ

ಈತನು ಸಂಕಲಿಸಿದ[೨೧೫] "ಚೆನ್ನದಣ್ಣಾಯಕರ ವಚನ" ಎಂಬ ಹೆಸರಿನ ತಾಳೆ ಪ್ರತಿಯೊಂದು (ನಂ ೨೧೫೫) ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸಿಗುತ್ತದೆ. ಇದು ಮದ್ರಾಸ್ ಓರಿಯಂಟಲ್ ರಿಸರ್ಚ ಲೈಬ್ರರಿಯಿಂದ ಬಂದ ಪ್ರತಿ. (ಮದ್ರಾಸ್ ಓ.ಆರ್. ಅಯ್. ಸೂಚಿತ-೫೬೦) ಇದರ ಆರು ಸ್ಥಲಗಳಲ್ಲಿ ಒಟ್ಟು ೧೮೦ ವಚನಗಳಿವೆಯೆಂದು ಮದ್ರಾಸ್ ಓ.ಆರ್.ಅಯ್ ಸೂಚಿಯಿಂದ ತಿಳಿಯುತ್ತದೆ. ಆದರೆ ಇದು ತುಂಬ ಖಿಲವಾಗಿರುವುದರಿಂದ ಪೂರ್ಣವಾಗಿರುವುದು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ಆದರೂ ಇದರಲ್ಲಿ ೨೧ ಹೊಸ ವಚನಗಳಿರುವುದು ಕಂಡುಬಂದಿದೆ. ಈ ಪ್ರತಿಯನ್ನು ತೋಂಟದಾರ್ಯ ಸಂಸ್ಥಾನ ಮಠ ಗದಗ ಇವರು ಹೊರತಂದಿರುವ ಎಂ.ಎಂ. ಕಲಬುರ್ಗಿಯವರು ಸಂಪಾದಿಸಿರುವ ವಚನ ಸಂಕಲನ ಸಂಪುಟ-೬ ರಲ್ಲಿ ಪ್ರಕಟವಾಗಿದೆ.[೨೧೬]

---

೨೧೪ ಆರ್. ನರಸಿಂಹಾಚಾರ್: 'ಕರ್ನಾಟಕ ಕವಿ ಚರಿತೆ.' ಸಂ.೧೧, ಪುಟ-೪೨೯

೨೧೫. ಚೆನ್ನ ಬಸವಣ್ಣನವರ ವಚನಗಳು

೨೧೬. ಡಾ॥ ಎಂ.ಎಂ. ಕಲಬುರ್ಗಿ ಪ್ರೋ.ಜಿ.ಎ. 'ಶಿವಲಿಂಗಯ್ಯ (ಸಂ) ವಚನಸಂಕಲನ ಸಂಪುಟ-೬.' ಪ್ರಸ್ಥಾವನೆ ಪುಟ -vi

೧೯. ಸೋಮನಹಳ್ಳಿ ಚಿಕ್ಕ ವೀರಣ್ಣೊಡೆಯ : (ಸು. ೧೬೦೦)

ಈತ 'ಪರಮಮೂಲ ಷಟ್‌ಸ್ಥಲಜ್ಞಾನ' ವನ್ನು ಸಂಗ್ರಹಿಸಿದ್ದಾನೆ. ಈತನ ಕೃತಿಗೆ 'ಚಿದ್ಬ್ರಹ್ಮಾಂಡದ ವಚನ' ವೆಂಬ ಹೆಸರು ಸಹ ಇದೆ. "ಬಸವಾದಿ ಪ್ರಮಥರ ಬಹು ವಚನಂಗಳ ರಸಮಂ ತೆಗೆದು ವಾಚ್ಯ ರೂಪವೆಂದು ಕಲ್ಪಿಸಿ, ವೇದಾಂತ ಸಿದ್ಧಾಂತಗಳ ಬೆರಸದ ಪರಮ ಮೂಲ ಜ್ಞಾನವೆಂಬ ಒಂದು ಷಟ್‌ಸ್ಥಲವಂ ಮಾಳ್ಪೆ" ಎಂದು ಉದ್ಯೋಗಿಸಿದ್ದಾರೆ.

ಈತನ ಕೃತಿಯಲ್ಲಿ ೭ ಸ್ಥಲಗಳಿವೆ. ೩೦ ವಚನಕಾರರ ಹಾಗೂ ವಚನ ಕಾರ್ತಿಯರ ೫೬೮ ವಚನಗಳೂ ಹಾಗು ೧೫ ಜನ ಶರಣ–ಶರಣೆಯರ ೪೬ ಸ್ವರ ವಚನಗಳೂ ಇವೆ. ಇಲ್ಲಿನ ಸ್ವರ ವಚನಗಳಲ್ಲಿ ೩೫ ಮಹಾಲಿಂಗ ಜಕ್ಕಣರ ಏಕೋತ್ತರ ಶತಸ್ಥಲಗಳಲ್ಲಿನವೇ ಆಗಿವೆ. ಸ್ವರ ವಚನಗಳಲ್ಲಿ 'ನಿಜಗುರು ಮುಗ್ಧಶಾಂತಮಲ್ಲ' ಎಂಬ ಅಂಕಿತದ ಹೊಸ ಸ್ವರ ವಚನವೊಂದು ಬೆಳಕಿಗೆ ಬಂದಿದೆ.

ಅಜ್ಞಾತ ಸಂಕಲನಕಾರರು :

ಸಂಕಲನಕಾರರ ನಾಮ ನಿರ್ದೇಶನವಿಲ್ಲದಿರುವ, ಕೆಲವು ವಚನ ಸಂಕಲನಗಳು ದೊರೆತಿವೆ.

೧. ಜಂಗಮ ಸ್ಥಲದ ಆಚರಣೆಯ ನಿರ್ಣಯದ ವಚನಗಳು[೨೧೭]

ಈ ವಚನ ಸಂಕಲನದ ಸಂಕಲನಕಾರ ಯಾರು ಎಂಬುದು ತಿಳಿದಿಲ್ಲ. ಅವನ ವೈಯಕ್ತಿಕ ವಿವರಗಳು, ಅವನ ಅಂಕಿತಗಳ ಉಲ್ಲೇಖ ಎಲ್ಲಿಯೂ ದೊರೆಯುವುದಿಲ್ಲ. ಈ ಸಂಕಲನದಲ್ಲಿ ಬಸವಣ್ಣ, ಅಲ್ಲಮ ಪ್ರಭು, ಚೆನ್ನಬಸವಣ್ಣ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ತೋಂಟದ ಸಿದ್ಧಲಿಂಗ ಶಿವಯೋಗಿಗಳ ೩೪ ವಚನಗಳಿವೆ. ತೋಂಟದ ಸಿದ್ಧಲಿಂಗರ ವಚನಗಳು ಇಲ್ಲಿ ಸಂಕಲನಗೊಂಡಿರುವುದರಿಂದ ಈ ಸಂಕಲನದ ಕಾಲ ೧೬ ನೇ ಶ.ದ ತರುವಾಯದ್ದೆಂದು ನಿರ್ಧರಿಸಬಹುದು. ಈ ಸಂಕಲನ ಜಂಗಮ ತತ್ವಗಳ ಲಕ್ಷಣ, ಆಚರಣೆ ಮತ್ತು ಮಹತ್ವಗಳನ್ನು ವಿವರಿಸುತ್ತದೆ. ಜೊತೆಗೆ ಅಜ್ಞಾನಿ, ಅನಾಮಿಕ , ಸಂದೇಹಿ, ಮಂದಮತಿಗಳ ವಿಷಯಗಳು ಇದರಲ್ಲಿ ಪ್ರಾಪ್ತವಾಗಿವೆ

೨. ಮಿಶ್ರ ಷಟ್ ಸ್ಥಲದ ವಚನ

ಚೆನ್ನಬಸವಣ್ಣನವರ ೪೭ ವಚನಗಳನ್ನೆತ್ತಿಕೊಂಡು ಈ ಸಂಕಲನವನ್ನು ಸೃಜಿಸಲಾಗಿದೆ. ಈ ಸಂಕಲನಕಾರ ತನ್ನ ಹೆಸರನ್ನಾಗಲಿ, ಇತರ ವಿಷಯಗಳನ್ನಾಗಲಿ ಎಲ್ಲಿಯೂ ನಮೂದಿಸಿಲ್ಲ. ಈ ಸಂಕಲನ ಕಟ್ಟು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ಈ ಭಂಡಾರದ ಸೂಚಿ vii–೯೯೪ ರ ಕೆಳಗೆ ನಮೂದಿಸಲ್ಪಟ್ಟ ಕೆ.ಬಿ. ೬೯೭:೮ನೇ ನಂಬರಿನ ಕಾಗದ ಪ್ರತಿಯಿದು.[೨೧೮] ಇದು ೧೫ನೇ ಶತಮಾನದ ನಂತರದ ಕೃತಿಯೆಂದು ಹೇಳಬಹುದು. ೩೬ ಸ್ಥಲಗಳ ವ್ಯವಸ್ಥೆಯನ್ನು ಹೊಂದಿರುವ ಮಿಶ್ರ ಷಟ್‌ಸ್ಥಲ ಕೃತಿ ಇದು. ೧೮ ಸಾಕಾರ ಸ್ಥಲವಾದರೆ, ೧೮ ನಿರಾಕಾರ ಸ್ಥಲವೆನಿಸಿವೆ. ಇದಕ್ಕೆ ನಿದರ್ಶನ ಕೃತಿಯ ಒಂದು ವಚನದಲ್ಲಿ ದೊರೆಯುತ್ತದೆ.

---

೨೧೭. ಈ ಸಂಕಲನ, 'ವಚನ ಸಂಕಲನ ಸಂಪುಟ –೧.' ರಲ್ಲಿ ಪ್ರಕಟವಾಗಿದೆ. (ಜ.ತೋ.ಸಂ.ಮಠ.ಗದಗ)

೨೧೮. ಡಾ॥ ಎಂ.ಎಂ.ಕಲಬುರ್ಗಿ, ಡಾ॥ ಬಿ.ಆರ್. ಹಿರೇಮಠ, ಎಸ್.ಶಿವಣ್ಣ, (ಸಂ)– 'ವಚನ ಸಂಕಲನ ಸಂಪುಟ ೪.' ಪ್ರಸ್ತಾವನೆ ಪುಟ– viii

"ಸಾಕಾರ ಹದಿನೆಂಟು ಕುಳವನಂಗದಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಹೇಶ್ವರ, ಅಲ್ಲಲ್ಲಿಗೆ ಪ್ರಸಾದಿಯಪ್ಪ
ಆ ಸಾಕಾರವನೇನೆಂದುಪಮಿಸುವೆ.
ನಿರಾಕಾರ ಹದಿನೆಂಟು ಕುಳವನಾತ್ಮದಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿಪ್ಪ
ಆ ನಿರಾಕಾರವನೇನೆಂದು ಪಮಿಸುವೆ
ಇಂತು ಉಭಯ ಸ್ಥಲ ಕುಳ ಒಂದಾಗಿ ನಿಂದನಿಜ ಘನದಲ್ಲಿ
ಕುಳವಡಗಿತ್ತು ಕೂಡಲಾ ಚೆನ್ನಸಂಗಾ"

ಎಂದು ವಚನ ಸ್ಪಷ್ಟಪಡಿಸುತ್ತದೆ. ಈ ವಚನಕ್ಕೆ ಬರೆದ ವಿವರಣೆಯೆಂಬಂತೆ ಪ್ರಸ್ತುತ ಕೃತಿಯಲ್ಲಿ ಸಾಕಾರ ೧೮ ಸ್ಥಲಕ್ಕೆ ೧೮ ವಚನ, ನಿರಾಕಾರ ೧೮ ಸ್ಥಲಕ್ಕೆ ೧೮ ವಚನಗಳನ್ನು ಚೆನ್ನಬಸವಣ್ಣನವರ ವಚನಗಳಿಂದ ಆಯ್ದು ಸಂಯೋಜಿಸಲಾಗಿದೆ.[೨೧೯]

೩. ಟೀಕಿನ ಏಕೋತ್ತರ ಶತಸ್ಥಲ[೨೨೦]

ವೀರಶೈವ ಧರ್ಮತತ್ವಗಳನ್ನು ಜನರಿಗೆ ಸಂಕ್ಷಿಪ್ತ ರೂಪದಲ್ಲಿ ತಿಳಿಸಿ ಹೇಳುವ ಉದ್ದೇಶದಿಂದ ಶೂನ್ಯ ಸಂಪಾದನೆಯ ಸಂಗ್ರಹ ರೂಪಗಳು ರಚನೆಗೊಂಡವು. ಇಂತವುಗಳಲ್ಲಿ 'ಸಂಪಾದನೆಯ ಸಾರಾಮೃತ' ಕೃತಿ ಮಹತ್ವವಾದುದು. ಇದು ಗೂಳೂರು ಸಿದ್ಧವೀರಣ್ಣನವರ ಶೂನ್ಯ ಸಂಪಾದನೆಯ ಸಂಗ್ರಹ ಕೃತಿ. ಇದು ಶೂನ್ಯ ಸಂಪಾದನೆಯ ಮೊದಲ ಸಂಗ್ರಹ ಕೃತಿಯೆನಿಸಿದೆ.

ಹೀಗೆ ಶೂನ್ಯ ಸಂಪಾದನೆಗಳಂತೆ 'ಏಕೋತ್ತರ ಶತಸ್ಥಲ' ಕೃತಿಗಳಿಗೂ ಸಂಗ್ರಹ ಕೃತಿಗಳು ಹುಟ್ಟಿಕೊಂಡಿವೆ. ಈಗ ದೊರೆತಿರುವ 'ಟೀಕಿನ ಏಕೋತ್ತರ ಶತಸ್ಥಲ' ವನ್ನು ಆಧರಿಸಿದ ಕೃತಿ. ಇದು" ಬೊಲ್ಲಿ ಏಕೋತ್ತರ ವಚನ" ಎಂಬ ಇನ್ನೊಂದು ಹೆಸರನ್ನು ಹೊಂದಿದೆ. ಇಲ್ಲಿ ಮಹಾಲಿಂಗ ದೇವನ "ಏಕೋತ್ತರ ಶತಸ್ಥಲ', 'ನೂರೊಂದು ಸ್ಥಲ' ನಾಮಗಳೂ ಸೂತ್ರ, ಗದ್ಯವೂ ಸ್ವೀಕರಿಸಲ್ಪಟ್ಟಿದೆ. ಆಮೇಲೆ ಅಲ್ಲಿಂದ ಒಂದೊಂದು ವಚನವನ್ನು ಸೇರಿಸಲಾಗಿದೆ. ಇಲ್ಲಿಯ ಪ್ರತಿಯೊಂದು ವಚನಕ್ಕೂ ವ್ಯಾಖ್ಯಾನವಿದೆ. ಅವನ್ನು ಕಲ್ಲುಮಠದ ಪ್ರಭುದೇವರ ಟೀಕಿನ ವಚನಗಳಿಂದ ಆಯ್ದುಕೊಳ್ಳಲಾಗಿದೆ.

ಮಹಾಲಿಂಗನ ಏಕೋತ್ತರ ಶತಸ್ಥಲದಲ್ಲಿ ಇರಲಾರದ ಹೊಸ ವಚನಗಳನ್ನು ಅನ್ಯ ಮೂಲಗಳಿಂದ ಪಡೆದು ಜೋಡಿಸಲಾಗಿದೆ. ಅವುಗಳ ವ್ಯಾಖ್ಯಾನದ ಮೂಲ ಆಕರವು ತಿಳಿದು ಬರುವುದಿಲ್ಲ. ಈ ವ್ಯಾಖ್ಯಾನಗಳನ್ನು ಈ ಸಂಗ್ರಹಕಾರನೆ ರಚಿಸಿರಬಹುದು. ಈ ಸಂಗ್ರಹಕಾರ ತನ್ನ ಹೆಸರನ್ನಾಗಲಿ, ಇತರೆ ವೈಯಕ್ತಿಕ ವಿಚಾರಗಳನ್ನು ಎಲ್ಲಿಯೂ ಹೇಳಿಕೊಂಡಿಲ್ಲ.

---

೨೧೯. ಡಾ॥ ಎಂ. ಎಂ.ಕಲಬುರ್ಗಿ ಡಾ॥ ಬಿ.ಆರ್. ಹಿರೇಮಠ, ಎಸ್.ಶಿವಣ್ಣ, (ಸಂ) – 'ವಚನ ಸಂಕಲನ ಸಂಪುಟ–೪.' ಪ್ರಸ್ತಾವನೆ ಪುಟ- vii

೨೨೦. ಡಾ.ಎಂ. ಎಂ.ಕಲಬುರ್ಗಿ ಡಾ॥ ಬಿ.ಆರ್. ಹಿರೇಮಠ, ಎಸ್.ಶಿವಣ್ಣ, (ಸಂ) – 'ವಚನ ಸಂಕಲನ ಸಂಪುಟ–೪.' ರಲ್ಲಿ ಅಚ್ಚಾಗಿದೆ.

ಶೂನ್ಯ ಸಂಪಾದನೆ ಹಾಗೂ ಏಕೋತ್ತರ ಶತಸ್ಥಲ ಕೃತಿಗಳಿಗೆ ೧೫ ನೇ ಶ.ದ ನಂತರವೇ ಸಂಗ್ರಹ ಕೃತಿಗಳು ಹುಟ್ಟಿಕೊಂಡಿರುತ್ತವೆ. ಹಾಗಾಗಿ ಈ ಕೃತಿ ೧೫ ನೇ ಶತಮಾನದ ತರುವಾಯದ್ದೆಂದು ತಿಳಿದು ಬರುತ್ತದೆ. ಪ್ರಸ್ತುತ 'ಟೀಕಿನ ಏಕೋತ್ತರ ಶತಸ್ಥಲ' ಕೃತಿ ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದ ಏಕೈಕ ಕಾಗದ ಪ್ರತಿ (ನಂ.೨೦೬೮, ಪುಟ,೧೦೪–೧೩೮) ಯಿಂದ ಪರಿಷ್ಕರಿಸಲಾಗಿದೆ.[೨೨೧]

೪. ಸಕಲ ಪುರಾತನರ ವಚನ[೨೨೨]

'ಸಕಲ ಪುರಾತನರ ವಚನ' ಹೆಸರಿನ ಈ ಕೃತಿ ವಚನ ಸಂಕಲನ ಪ್ರಕಾರಕ್ಕೆ ಸೇರಿದೆ. ಇದರಲ್ಲಿ ೨೯ ವಚನಕಾರ –ವಚನಕಾರ್ತಿಯರ ೧೫೯ ವಚನಗಳು ಮತ್ತು ಒಂದು ಸ್ವರ ವಚನವಿದೆ. ಈ ಸಂಕಲನದಲ್ಲಿ ಜೇಡರ ದಾಸಿಮಯ್ಯನಿಂದ, ಇತ್ತೀಚಿನ ತೋಂಟದ ಸಿದ್ಧಲಿಂಗನ ವಚನಗಳ ವರೆಗಿನ ವಚನಗಳಿವೆ. ಈ ಸಂಕಲನಕಾರ ತನ್ನ ಹೆಸರನ್ನು ಹಾಗೂ ಇತರೆ ವಿಚಾರಗಳನ್ನು ಹೇಳಿಕೊಂಡಿಲ್ಲ.

ಈ ಹಸ್ತಪ್ರತಿಯ ೧೩ರಿಂದ ೨೬ಎ.ವರೆಗಿನ ಗರಿಗಳಲ್ಲಿಯ ವಚನ ಹಾಗೂ ಸ್ವರ ವಚನಗಳನ್ನು ಮಹಾಲಿಂಗದೇವನ 'ಏಕೋತ್ತರ ಶತಸ್ಥಲ' ದಿಂದ ಆರಿಸಲಾಗಿದೆ. ಪ್ರಸ್ತುತ ಓಲೆ ಪ್ರತಿ ಚಿತ್ರದುರ್ಗದ 'ಮುರುಘಾಮಠದ' ಹಸ್ತಪ್ರತಿ ಸಂಗ್ರಹದಲ್ಲಿದೆ. ಇದರ ಕ್ರಮಾಂಕ ೭೦೧:೩. ಇದರಲ್ಲಿ ೫೮ ಗರಿಗಳಿವೆ. ಕೃತಿಯ ಆದಿಯಲ್ಲಿ 'ಶ್ರೀ ವೀರೂಪಾಕ್ಷನೆ ಗತಿ ಶುಭಮಸ್ತು' ಎಂದಿದೆ. ಅಕ್ಷರಗಳು ದುಂಡಗೆ, ದಪ್ಪಗೆ, ಶುದ್ಧವಾಗಿವೆ,[೨೨೩] ಹಾಗಾಗಿ ಇದರ ಕಾಲವನ್ನು ೧೭ನೇ ಶತಮಾನದ ನಂತರವೆಂದು ಊಹಿಸಬಹುದಾಗಿದೆ.

೫. ಅವಿದಿತ ಸಂಕಲನಕಾರನ ವಚನಗಳು:[೨೨೪]

ಈ ಸಂಕಲನ ವಿವಿಧ ವಚನಕಾರರ ವಚನಗಳಿಂದ ಕೂಡಿದೆ. ಹಸ್ತ ಪ್ರತಿಯ ಆದಿ – ಅಂತ್ಯಗಳಿಲ್ಲದ ಕಾರಣ ಕೃತಿಯ ಕಾಲ, ಸಂಕಲನಕಾರನ ಹೆಸರು ಮತ್ತು ಇತರೆ ವೈಯಕ್ತಿಕ ವಿಚಾರಗಳು ತಿಳಿದು ಬರುವುದಿಲ್ಲ. ಈ ಸಂಕಲನದಲ್ಲಿ ೧೨ನೇ ಶತಮಾನದ ಬಸವಣ್ಣನವರ ವಚನಗಳಿಂದ ೧೫ ನೇ ಶತಮಾನದ ತೋಂಟದ ಸಿದ್ಧಲಿಂಗಯತಿ, ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು ಕಾಣಿಸಿಕೊಂಡಿವೆ. ಹಾಗಾಗಿ ಇದು ೧೬ ನೇ ಶತಮಾನದ ನಂತರ ಸಂಕಲನಗೊಂಡ ಕೃತಿಯಾಗಿದೆ. ಇದರಲ್ಲಿ ಒಂದು ನೂರು ವಚನಗಳಿವೆ. ಒಂದು ಸ್ತುತಿ ಹಾಗೂ ಕೆಲವು ಶ್ಲೋಕಗಳಿವೆ. ಈ ಸಂಕಲನದಲ್ಲಿ ಇದುವರೆಗೂ ಪ್ರಕಟವಾಗದ ಅನೇಕ ಹೊಸ ವಚನಗಳಿರುವುದು ವಿಶೇಷವಾಗಿದೆ.

ಇಲ್ಲಿಯ ವಚನಗಳನ್ನು ಗುರುಲಿಂಗ– ಜಂಗಮಾದಿ ಲಕ್ಷಣಗಳ ಸೂತ್ರದಲ್ಲಿ ಜೋಡಿಸಲಾಗಿದೆ. ವೀರಶೈವ ಧರ್ಮದ ತತ್ವ ಸಿದ್ಧಾಂತಗಳ ಆಚರಣೆಗಳನ್ನು , ಶರಣನ ನಡೆ ನುಡಿಗಳನ್ನು ಕ್ರಮ ಬದ್ಧವಾಗಿ ಹೇಳುವ ವಚನಗಳನ್ನು ಸಂಕಲಿಸಲಾಗಿದೆ. ಜನನ ಸೂತಕ, ಜಾತಿ ಸೂತಕಗಳನ್ನು ಗಮನಿಸಬಾರದು ಎಂಬುದಕ್ಕೆ "ಒಮ್ಮೆ ಗುರು ಕೃಪೆ ದೊರೆತ ಬಳಿಕ ಆತ ಹೀನ ಕುಲದಲ್ಲಿ ಜನಿಸಿದವನಾದರೂ ಜನನ ಸೂತಕ, ಜಾತಿಸೂತಕಗಳಿಗೆ ಆಸ್ಪದವಿರುವುದಿಲ್ಲ"

---

೨೨೧. 'ವಚನ ಸಂಕಲನ ಸಂಪುಟ–೪' ಪ್ರಸ್ಥಾವನೆ ಪುಟ– x

೨೨೨. ಡಾ॥.ಎಂ. ಎಂ.ಕಲಬುರ್ಗಿ ಡಾ॥ ಬಿ.ಆರ್. ಹಿರೇಮಠ, ಎಸ್.ಶಿವಣ್ಣ, (ಸಂ) – 'ವಚನ ಸಂಕಲನ ಸಂಪುಟ–೪.' ರಲ್ಲಿ ಪ್ರಕಟವಾಗಿದೆ.

೨೨೩. 'ವಚನ ಸಂಕಲನ ಸಂಪುಟ–೪,' ಪ್ರಸ್ಥಾವನೆ, ಪುಟ– .xi

೨೨೪. 'ವಚನ ಸಂಕಲನ ಸಂಪುಟ–೫'ರಲ್ಲಿ ಈ ಕೃತಿ ಪ್ರಕಟವಾಗಿದೆ. (ಜ.ತೋ.ಸಂ.ಮಠ.ಗದಗ)

'ಹೆಣ್ಣನ್ನು ನೋಡಿ ಉತ್ಸಾಹ ಪಡುವಂತೆ ಶಿವನನ್ನು ನೋಡಬೇಕು, ಮನಸ್ಸನ್ನು ಶಿವನ ಮೇಲೆ ನೆಲೆಗೊಳಿಸಬೇಕು. ಇಂದ್ರಿಯಗಳ ಅಪೇಕ್ಷೆಗೆ ಮಣಿಯಬಾರದು. ಗುರುವಾದವನು ನುಡಿದಂತೆ ನಡೆಯಬೇಕು. ಶರಣನಾದವನಿಗೆ ಡಾಂಭಿಕತೆ ಸಲ್ಲದು'. ಹೀಗೆ ಅನೇಕ ವಿಚಾರಗಳನ್ನು ಒಳಗೊಂಡ ಸಂಕಲನವಾಗಿದೆ. ಸಾಮಾನ್ಯ ಜನಜೀವನದ ಸಂಕೀರ್ಣತೆಯನ್ನು ಇಲ್ಲಿಯ ವಚನಗಳು ಬಿಂಬಿಸುವುದಿಲ್ಲ. ತಾತ್ವಿಕ ವಿಷಯವನ್ನು ಹೇಳುವಲ್ಲಿಯೂ ದೇಸಿಯ ಸೊಗಡಿನ ಹಿನ್ನೆಲೆಯಲ್ಲಿ ಹೇಳಿರುವುದು ಇಲ್ಲಿನ ವೈಶಿಷ್ಟ್ಯ.

ಈ ಕೃತಿಯನ್ನು ವೈ.ಸಿ.ಭಾನುಮತಿ, ಮೈಸೂರು ಇವರು ಸಂಪಾದಿಸಿದ್ದಾರೆ. ಈ ಕೃತಿಯನ್ನು ವೀರಶೈವ ಲಿಂಗಾಯತ ಅಧ್ಯಯನ ಸಂಸ್ಥೆ ಗದಗ ಇವರು ಸಮಗ್ರ ವೀರಶೈವ ಅಪ್ರಕಟಿತ ಸಾಹಿತ್ಯ ಪ್ರಕಟಣಾ ಮಾಲಿಕೆಯಲ್ಲಿ ೪೨ನೇ ಕೃತಿಯಾಗಿ ಪ್ರಕಟಿಸಿದ್ದಾರೆ.

೬. ಸಿದ್ಧಲಿಂಗ ಸೂತ್ರ

ವೈ.ಸಿ.ಭಾನುಮತಿಯವರು ಸಂಪಾದಿಸಿದ ವಚನ ಸಂಕಲನ ಸಂಪುಟ-೫ ರಲ್ಲಿ ಎರಡನೇ ಕೃತಿಯಾಗಿದೆ. ಈ ಕೃತಿಗೆ "ಲಿಂಗಾಂಗ ಸಮರಸದ ಲಿಂಗಸ್ತೋತ್ರ" ಎಂಬ ಪರ್ಯಾಯ ಹೆಸರೂ ಇದೆ.[೨೨೫] ಈ ಸಂಕಲನದಲ್ಲಿ ಒಂಬತ್ತು ವಚನಗಳಿವೆ. ಈ ಕೃತಿಯ ವಸ್ತು 'ಶಾಂಭವಿ ಯೋಗಕ್ಕೆ' ಸಂಬಂಧಿಸಿದ್ದಾಗಿದೆ. ಯೋಗದ ಮೂಲಕ ಇಷ್ಟಲಿಂಗವನ್ನು ವೀಕ್ಷಿಸುವ ಕ್ರಮವನ್ನು ಹೇಳಲಾಗಿದೆ. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಸಮರಸದ ಶಿವಯೋಗವನ್ನು ಬಲ್ಲವರಿಗೆ ಶಾಂಭವಯೋಗ ಲಭಿಸುವುದು ಮುಂತಾದ ವಿಚಾರಗಳಿವೆ. ಈ ಕೃತಿಯ ಹಸ್ತ ಪ್ರತಿಯ ಲಿಂಗಸ್ತೋತ್ರದ ಕಡೆಯಲ್ಲಿ "ಚಿತ್ಕಲಾಸ್ವರೂಪವಾದ ಶ್ರೀಗುರುಮೂರ್ತಿ ಅಲ್ಲಮ ಪ್ರಭುದೇವರು ಸುಜ್ಞಾನ ನೆಂಬ ಶಿಷ್ಯಂಗೆ ನಿರೂಪಿಸಿದ ಶಿವಲಿಂಗ ಸ್ತೋತ್ರದ ಒಂಬತ್ತು ವಚನ" ಎಂಬ ಬರಹವಿದೆ. ಇದನ್ನು ಗಮನಿಸಿದರೆ ಅಲ್ಲಮ ಪ್ರಭು ತನ್ನ ಶಿಷ್ಯ ಸುಜ್ಞಾನ ಎಂಬುವನಿಗೆ ಹೇಳಿದ ವಚನಗಳಾಗಿವೆ ಎನ್ನಿಸುತ್ತದೆ.
ಕೃತಿಯ ಆರಂಭದಲ್ಲಿ

"ಬ್ರಹ್ಮೋಪದೇಶವಾಯಿತ್ತೆಂದು ಕರ್ಮವ ಅಳಿಯಬೇಡ
ಶಿವಜ್ಞಾನವಾಯಿತೆಂದು ಶಿವಶರಣರೊಡನೆ ದಿಕ್ಕಾರ ಬೇಡ

ಇಂತೀ ತ್ರಿವಿಧೋಕ್ತಸ್ಥಲದ ಕೂಡಲ ಸಂಗಯ್ಯ ಇವರು ವೇಸಿಯಮಕ್ಕಳು".

ಇಲ್ಲಿ 'ಕೂಡಲ ಸಂಗಯ್ಯ' ಎಂದು ಬಸವಣ್ಣನವರ ಅಂಕಿತವಿರುವುದು. ಈ ಕೃತಿಯ ಕರ್ತೃವಿನ ಬಗ್ಗೆ ಸಂದೇಹ ಉಂಟಾಗುತ್ತದೆ. ಆದರೆ ವಚನಗಳ ಅಂತ್ಯದಲ್ಲಿ 'ಗುಹೇಶ್ವರ' ಎಂಬ ಅಂಕಿತವಿರುವುದಿರಂದ ಇವು ಅಲ್ಲಮಪ್ರಭುವಿನ ವಚನಗಳೆಂದು ಭಾವಿಸಲಾಗಿದೆ. ಆದರೆ ಅಲ್ಲಮ ಪ್ರಭುವಿನ ವಚನಗಳಲ್ಲಿ ಕಂಡುಬರುವ ವಿಶಿಷ್ಟತೆಯಾಗಲಿ, ಗಂಭೀರತೆಯಾಗಲಿ, ಕಿರಿದರಲ್ಲಿ ಹಿರಿದನ್ನು ನಿರೂಪಿಸುವ ಶಕ್ತಿಯಾಗಲಿ ಇಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ವಚನಗಳು ಅಲ್ಲಮನ ವಚನಗಳಿಗೆ

---

೨೨೫. ಕನ್ನಡ ಅಧ್ಯಯನ ಸಂಸ್ಥೆಯ ಕೆ.ಬಿ.೯೭ ಹಸ್ತ ಪ್ರತಿಯಿಂದ ತಿಳಿದುಬರುತ್ತದೆ.

ವಿರುದ್ಧವಾಗಿ ಬಹು ದೀರ್ಘವಾಗಿವೆ. ಬಂಧ ಸಡಿಲವಾಗಿದೆ. ಕೃತಿಯ ಅಂತ್ಯದಲ್ಲಿ ಗುಹೇಶ್ವರನ "ಎರಡೆಂಬತ್ತು ಕೋಟಿ ವಚನವನ್ನು ಅಡಗಿಸಿದೆ" ಎಂದು ಹೇಳಿರುವುದರಿಂದ ಅಲ್ಲಮನ ವಚನಗಳಲ್ಲಿ ವ್ಯಕ್ತವಾಗಿರುವ ವೀರಶೈವ ಪ್ರಕ್ರಿಯೆಗಳನ್ನು ಸುಗಮವಾಗಿ ಸಂವಹನಗೊಳಿಸುವ ಆಶಯದಿಂದ ಸಂಕಲನಕಾರ ಇಲ್ಲಿಯ ವಚನಗಳ ಮೇಲೆ ಕೈಯಾಡಿಸಿರುವ ಸಾಧ್ಯತೆ ಇದೆ.[೨೨೬]

೭. ಶೀಲ ಸಂಪಾದನೆ (ಕ್ರಿ.ಶ.ಸು೧೭ ನೇ.ಶ)

ಇದರ ಕರ್ತೃವಿನ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಒಬ್ಬ ಸಂಪಾದಕನಿಂದ ೧೭ ನೇ ಶತಮಾನದ ಸುಮಾರಿಗೆ ಇದು ಸಂಯೋಜನೆಗೊಂಡಿರಬೇಕು. ೫೧ ವಿವಿಧ ಶರಣ -ಶರಣೆಯರ ವಚನಗಳಿಂದ ಕೂಡಿದ ಒಂದು ನೂತನ ಸ್ಥಲ ಕಟ್ಟಿನ ಕೃತಿ. ಇದರಲ್ಲಿ ೪೪೩ ವಚನಗಳು ಸಂಗ್ರಹಗೊಂಡಿವೆ. ಒಟ್ಟು ೪೦ ಸ್ಥಲಗಳಿಂದ ಕೂಡಿದ ಈ ಕೃತಿಯಲ್ಲಿ ೧೫ ಪ್ರಮುಖ ಸ್ಥಲಗಳಿವೆ. ಉಳಿದಂತೆ ಅವುಗಳ ವಿಭಾಗಗಳಿವೆ. ಶರಣರು ಆಚರಿಸಿದ, ತಾವು ಆಚರಿಸಿ, ಇತರರಿಗೆ ಆಚರಿಸಲು ತಿಳಿಸಿದ ಶೀಲ, ವ್ರತ, ನೇಮಗಳ ವಿವರಣೆ ಈ ವಚನಗಳ ಕೇಂದ್ರ ವಸ್ತು. ಕೃತಿ ಬಸವಣ್ಣನವರ ವ್ಯಕ್ತಿ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಸ್ತುತಿರೂಪದ ವಚನಗಳಿಂದ ಆರಂಭವಾಗಿ, ವ್ರತಾಚರಣೆಗಳ ಮಹತ್ವವನ್ನು ಮರೆಯುವ ಎಲ್ಲಾ ಪುರಾತನ ಶರಣೆಯರ ವಚನಗಳಿಂದ ಮುಕ್ತಾಯವಾಗುತ್ತದೆ.

ಎಲ್ಲ ಮಿಶ್ರ ಸ್ಥಲಕಟ್ಟಿನ ಕೃತಿಗಳಂತೆ ಶೀಲ ಸಂಪಾದನೆಯೂ ಕೂಡಾ ಪರ್ಯಾಯವಾಗಿ ಲಿಂಗಾಂಗ ಸಾಮರಸ್ಯತತ್ವವನ್ನೆ ಬೋಧಿಸುತ್ತದೆ. ಲಿಂಗಾಂಗ ಸಾಮರಸ್ಯವನ್ನು ಹೊಂದಲು ಆಸಕ್ತನಾದ ಭಕ್ತನಿಗೆ ಶೀಲ ಬಹುಮುಖ್ಯ ಸಾಧನವಾಗಿದೆ. ಈ ಶೀಲ ವ್ರತಾಚಾರ ನಿಷ್ಠೆಗಳು ಷಟ್‌ಸ್ಥಲ ಮಾರ್ಗದ ಭಕ್ತಸ್ಥಲದಲ್ಲಿ ಗಟ್ಟಿಗೊಂಡು, ಮುಂದಿನ ಸ್ಥಲಗಳಲ್ಲಿ ಪಕ್ವವಾಗುತ್ತ, ಐಕ್ಯಸ್ಥಲದಲ್ಲಿ ಪರ್ಯಾವಸಾನಗೊಳ್ಳುತ್ತವೆ. ಶೂನ್ಯ ಸಂಪಾದನೆಗೆ (ಲಿಂಗಾಂಗ ಸಾಮರಸ್ಯೆಕಕ್ಕೆ) ಶೀಲ ಸಂಪಾದನೆ ಅತ್ಯವಶ್ಯ ಎಂಬುದನ್ನು ಈ ಕೃತಿ ಸ್ಪಷ್ಟಪಡಿಸುತ್ತದೆ. ಶೀಲ ಸಂಪಾದನೆಯ ಜೊತೆ ಷಟ್‌ಸ್ಥಲ ತತ್ವವು ಈ ಕೃತಿಯಲ್ಲಿ ಜೀವವಾಹಿನಿಯಾಗಿ ಹರಿದು ಬಂದಿದೆ. ಈ ಕೃತಿಯ ವೈಶಿಷ್ಟ್ಯವೆಂದರೆ ಸುಮಾರು ೫೦ ಹೊಸ ವಚನಗಳನ್ನು ಅಳವಡಿಸಿಕೊಂಡಿರುವುದು. ಇದು ಕನ್ನಡ ಅಧ್ಯಯನ ಪೀಠದ ೨೭೭೩/೧ ನೇಯ ಕ್ರಮಾಂಕದ ಕಾಗದದ ಪ್ರತಿ ಮೂಲವಾಗಿದೆ ಎಂದು ಸಂಪಾದಕರು[೨೨೭] ಕೃತಿಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇದರಂತೆ ಶರಣನ ಶೀಲ- ವ್ರತಾಚಾರಗಳನ್ನು ಆಮೂಲಕ ಲಿಂಗಾಂಗ ಸಾಮರಸ್ಯ ತತ್ವವನ್ನು ವಿವರಿಸುವ ಕೆಲವು ವಚನ ಗ್ರಂಥಗಳಿವೆ.[೨೨೮] ಇನ್ನು ಕೆಲವು ಕೃತಿಗಳು ಶರಣನು ಅನುಸರಿಸಬೇಕಾದ ಶೀಲವನ್ನು ಕುರಿತು ಹೇಳುವ ಕೆಲವು ಕೃತಿಗಳೂ ರಚನೆಗೊಂಡಿವೆ.[೨೨೯]

---

೨೨೬. ವೈ.ಸಿ. ಭಾನುಮತಿ, (ಸಂ) 'ವಚನ ಸಂಕಲನ', ಸಂ-೫, ಪ್ರಸ್ತಾವನೆ ಪುಟ-x

೨೨೭. ಡಾ॥ ವೀರಣ್ಣರಾಜೂರ.

೨೨೮.೨೨೯ .ಡಾ॥ ವೀರಣ್ಣ ರಾಜೂರ, (ಸಂ) 'ಶೀಲಸಂಪಾದನೆ.' ಪ್ರಸ್ತಾವನೆ ಪುಟ- xxx- xxxi

ಹೀಗೆ ಈ ಕಾಲದ ವಚನಕಾರರು ಹಾಗೂ ಸಂಕಲನಕಾರರ ಆಸಕ್ತಿಯಿಂದಾಗಿ ಧರ್ಮ ಮತ್ತು ಸಮಾಜ ಮುಖಿಯಾಗಿದ್ದ ವಚನ ಸಾಹಿತ್ಯವು ದಾಸ ಸಾಹಿತ್ಯ ಮತ್ತು ಭಾಗವತ ಸಾಹಿತ್ಯದ ಪ್ರಭಾವದಿಂದಾಗಿ, ೧೫-೧೬ ನೇ ಶತಮಾನದ ಹೊತ್ತಿಗೆ ಧರ್ಮಮುಖಿಯಾಗಿ ಪರಿವರ್ತನೆಯಾಯಿತು. ಆ ಹಿನ್ನೆಲೆಯಲ್ಲಿ ರೂಪಗೊಂಡ ವಚನ ಸಂಯೋಜನ ಕಾರ್ಯ ಬಹು ಜೋರಾಗಿಯೆ ನಡೆಯಿತು. ಇದಕ್ಕೆ ಆಳರಸರ, ಅಧಿಕಾರಿಗಳ, ಮಠಮಾನ್ಯಗಳ ಬೆಂಬಲ ದೊರೆಯಿತು. 'ಶೂನ್ಯ ಸಂಪಾದನೆಯಂಥಹ ಕೃತಿಗಳ ರಚನೆ ಮುಂದಿನ ವಚನಕಾರರಿಗೆ, ಸಂಯೋಜಕರಿಗೆ ಮಾರ್ಗದರ್ಶಿಯಾದವು. ಆ ಹಿನ್ನೆಲೆಯಲ್ಲಿ ಈ ಕಾಲದ ವಚನ ಸಾಹಿತ್ಯ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡಿದೆ. ತೋಂಟದ ಸಿದ್ಧಲಿಂಗೇಶ್ವರರ ನಂತರ ಅವರ ಶಿಷ್ಯ ಪರಂಪರೆಯಲ್ಲಿ ಈ ಕಾರ್ಯ ಬಹಳ ವ್ಯಾಪಕವಾಗಿ ನಡೆಯಿತು. ಈ ಗುರು ಶಿಷ್ಯಪರಂಪರೆ ಬರಿ ವಚನ ಸಾಹಿತ್ಯ ರಚನೆ ಮತ್ತು ಸಂಯೋಜನೆಗೆ ಸೀಮಿತವಾಗಲಿಲ್ಲ. ಮಿಕ್ಕ ಕೃತಿಗಳ ಸಂಪಾದನ ಕೆಲಸವನ್ನು ಜೊತೆ ಜೊತೆಯಲ್ಲಿ ಮಾಡಿತು. ಇವರು ಸಾಹಿತ್ಯ ಪ್ರಸಾರವನ್ನು ಧರ್ಮದ ಮುಖ್ಯ ಹೊಣೆಯೆಂದು ಭಾವಿಸಿದ ವಿಷಯವೇ ಆಶ್ಚರ್ಯ ಹುಟ್ಟಿಸುವುದಾಗಿದೆ.

ಹೀಗೆ ಸಂಕಲನ, ಸಂಗ್ರಹ, ಸಂಪಾದನ ಕಾರ್ಯವನ್ನು ಮಾಡುವುದರ ಮೂಲಕ ಅಳಿದು ಹೋಗಲಿದ್ದ ವಚನ ಸಾಹಿತ್ಯದ ನಿಧಿಯನ್ನು ಉಳಿಸಿಕೊಂಡರು. ಈ ರೀತಿ ಸಂಯೋಜನೆಗೊಂಡ ವಚನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷವಾದ, ವಿಶಿಷ್ಟವಾದ ಸ್ಥಾನಮಾನಗಳಿವೆ. ಆದರೆ ಅದರ ಮಹತ್ವವನ್ನು ಪರಿಚಯಿಸುವ ಕೆಲಸ ಮಾತ್ರ ಸಮರ್ಪಕವಾಗಿ ನಡೆದಿಲ್ಲ ಎನ್ನಬಹುದು.

ಅಪಾರವಾದ ವಚನ ಸಾಹಿತ್ಯರಾಶಿ ನಾಶವಾಗದಂತೆ ತಡೆದು ಉಳಿಸಿದ ಕೀರ್ತಿ ನೂರೊಂದು ವಿರಕ್ತರು, ಏಳುನೂರೊಂದು ವಿರಕ್ತ ಹಾಗೂ ಆ ಕಾಲದ ಇತರ ಶರಣರಿಗೆ ಸಲ್ಲುತ್ತದೆ. ಅವರು ಈ ಮಹತ್ಕಾರ್ಯ ಮಾಡದೆ ಹೋಗಿದ್ದರೆ ವಚನ ಸಾಹಿತ್ಯ ಸಂಪತ್ತು ಎಷ್ಟು ಉಳಿಯುತಿತ್ತೋ. ಆದ್ದರಿಂದ ವಚನ ಸಾಹಿತ್ಯವನ್ನು ರಚಿಸಿದ ವಚನಕಾರರಿಗೆ ಸಲ್ಲುವ ಕೀರ್ತಿ ಅವುಗಳನ್ನು ಸಂರಕ್ಷಿಸಿ ಪ್ರಸಾರ ಮಾಡಿದ ವಚನ ಸಂಕಲನಕಾರರಿಗೂ, ಸಂಗ್ರಹಕಾರರಿಗೂ ಸಲ್ಲಬೇಕು. ಈ ನಿಟ್ಟಿನಲ್ಲಿ ಇವರ ಪ್ರಯತ್ನ ವಿನೂತನವಾದುದು ಹಾಗೂ ವಿಶಿಷ್ಟವಾದುದು.

ತೋಂಟದಾರ್ಯ ಪರಂಪರೆಯ ಸಂಕಲನಕಾರರನ್ನು ಮಾತ್ರ ನಾನು ಗಮನಿಸಿದ್ದೇನೆ. ಆದರೆ ಈ ಪರಂಪರೆಗೆ ಸೇರದ ಅನೇಕ ಸಂಕಲನಕಾರರು ಬಸವಾದಿ ಶರಣರ ವಚನಗಳನ್ನು ಸಂಕಲಿಸಿದ್ದಾರೆ. ಅವುಗಳ ಕುರಿತ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಇದೆ. ಹಾಗೆಯೆ ಈ ಕಾಲ ಘಟ್ಟದಲ್ಲಿ ಬಂದ ಇತರ ಸಾಹಿತ್ಯ ಕೃತಿಗಳ ಅಧ್ಯಯನವು ಪ್ರತ್ಯೇಕವಾಗಿ ಆಗಬೇಕಿದೆ.

– – –

ಅಧ್ಯಾಯ–೫.

ವಚನ ಸಾಹಿತ್ಯ ಸಂಯೋಜನೆಯ ವರ್ಗೀಕರಣ

ಅಧ್ಯಾಯ–೫.

ವಚನ ಸಾಹಿತ್ಯ ಸಂಯೋಜನೆಯ ವರ್ಗೀಕರಣ

ಒಂದು ಯುಗದ ಸಾಹಿತ್ಯವನ್ನು ನಾವು ವಿವೇಚನೆ ಮಾಡುವಾಗ ಆ ಕಾಲದ ಯುಗ ಧರ್ಮವನ್ನು ಅಧ್ಯಯನ ಮಾಡುವುದು ಅತ್ಯಂತ ಅವಶ್ಯ. ಸಾಹಿತ್ಯ ಯಾವಾಗಲೂ ಯುಗ ಧರ್ಮಕ್ಕೆ ಸ್ಪಂದಿಸಿರುವುದನ್ನು ಕಾಣುತ್ತೇವೆ. ೧೫ನೇ ಶತಮಾನದ ಸಾಹಿತ್ಯವೂ ಇದಕ್ಕೆ ಹೊರತಾಗಿಲ್ಲ. ಈ ಕಾಲದ ಸಾಹಿತ್ಯ ವೀರಶೈವಧರ್ಮದ ಪ್ರಭಾವ, ವೈದಿಕ ಧರ್ಮದ ಪ್ರಭಾವ ಹಾಗೂ ರಾಜಾಶ್ರಯ ಇವುಗಳ ಮಧ್ಯದಲ್ಲಿ ತಲೆ ಎತ್ತಿ ನಿಂತಿರುವುದನ್ನು ಕಾಣುತ್ತೇವೆ.

ಈ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದಂತೆ ವಚನ ಸಾಹಿತ್ಯದ ಎರಡನೆ ಘಟ್ಟವು ಜೀವನ ಮುಖಿಯಾಗದೆ ಧರ್ಮಮುಖಿಯಾದುದು ಅದು ತನಗೆ ತಾನೇ ಹಾಕಿಕೊಂಡ ಚೌಕಟ್ಟಾಗಿದೆ. ಆದರೆ ಮೊದಲನೇ ಘಟ್ಟವು ಸಮಾಜಮುಖಿ ಹಾಗು ಧರ್ಮಮುಖಿ ಚಳಿವಳಿಯ ಒಂದು ಭಾಗವಾಗಿ ಉಸಿರಾಡಿತು. ಈ ಕಾಲದ ಶರಣರ ಸಂಘಟನೆ ಬೌದ್ಧಿಕ ಚರ್ಚೆಗೆ ನೆಲೆಯನ್ನು ಒದಗಿಸಿತು. ಎರಡನೆ ಘಟ್ಟದ ತುರ್ತು ಹಾಗೂ ಒತ್ತಡಗಳು, ಸಾಮಾಜಿಕ , ಧಾರ್ಮಿಕ ಪ್ರೇರಣೆಗಳು ಈ ಕಾಲದ ಶರಣರ ಚಟುವಟಿಕೆಗಳನ್ನು ನಿರ್ದೇಶಿಸಿದವು. ಮತೀಯ ವಾತಾವರಣದಲ್ಲಿ ವಿರಕ್ತ ಪರಂಪರೆಯ ಶರಣರು ಸೃಷ್ಟಿಸಿದ ಸೃಜನ ಹಾಗೂ ಸೃಜನೇತರ ಸಾಹಿತ್ಯದಲ್ಲಿ ವೀರಶೈವದ ತಾತ್ವಿಕ ನೆಲೆಯು ಪ್ರಧಾನವಾಗಿತ್ತು. ಇಂತಹ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಮುಖ್ಯವಾಗಿ ಮಠಾಧಿಪತಿಗಳು ಹಾಗೂ ವಿರಕ್ತ ಪರಂಪರೆಗೆ ಸೇರಿದವರು ಪಾಲ್ಗೊಂಡಿರುವುದು ವಿಶೇಷ. ಅವರ ಆಸಕ್ತಿಯ ಕೇಂದ್ರ ವೀರಶೈವ ಧರ್ಮದ ಪುನರುಜ್ಜೀವನವೇ ಹೊರತು, ಸಮಾಜವಲ್ಲ, ಜನಸಾಮಾನ್ಯರಲ್ಲ, ಜಾತಿ ವಿನಾಶವಲ್ಲ, ಸಮಾನತೆಯಲ್ಲ. ಇವರ ಮುಂದೆ ಇದ್ದುದು ೧೨ನೇ ಶತಮಾನದ ವಚನಕಾರರ ವಚನ ಸಂರಕ್ಷಣೆ, ವೀರಶೈವ ಧರ್ಮ ಸ್ಥಾಪನೆ. ಹಾಗಾಗಿ ಜನ ಸಾಮಾನ್ಯರು ಹಾಗೂ ಹೆಣ್ಣು ಮಕ್ಕಳು ಈ ಎಲ್ಲಾ ಸಾಹಿತ್ಯಿಕ ಚಟುವಟಿಕೆಗಳಿಂದ ದೂರವೇ ಉಳಿಯ ಬೇಕಾಯಿತು.

ಧಾರ್ಮಿಕ ಮೌಲ್ಯಗಳನ್ನು ಮಾತ್ರ ಆಯ್ದುಕೊಂಡು ಹೊಸತನಕ್ಕೆ ಅಳವಡಿಸದೇ ಕೇವಲ ಅನುಕರಿಸಿರುವುದು ೧೫ನೇ ಶತಮಾನದ ವೀರಶೈವ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಸಾಹಿತ್ಯಿಕ ದೃಷ್ಟಿಯಿಂದ ಗಮನಿಸಿದರೂ ಬಸವಾದಿ ವಚನಕಾರರ ವಚನಗಳ ಗುಣಮಟ್ಟ ಕಂಡು ಬರುವುದಿಲ್ಲ. ಪ್ರಗತಿ, ಸಾಮಾಜಿಕ ಬದಲಾವಣೆಗಿಂತ ಸಂಪ್ರದಾಯವನ್ನು ಮತ್ತಷ್ಟು ಕಟ್ಟು ಪಾಡುಗಳೊಂದಿಗೆ ಬಂಧಿಸಿರುವುದು ಇಲ್ಲಿನ ಪ್ರಧಾನ ಲಕ್ಷಣವಾಗಿದೆ. ಈ ಕಾಲದ ಶರಣರ ಸಂಘಟನೆಗಳು, ಅವರ ಸಾಹಿತ್ಯಿಕ ಚಟುವಟಿಕೆಗಳು ಪರಂಪರಾಗತ ಮೌಲ್ಯಗಳ ಉಳಿವಿಗಾಗಿ ಪ್ರಯತ್ನಿಸಿದವು.

ಈ ಹಿನ್ನಲೆಯಲ್ಲಿ ವ್ಯಾಖ್ಯಾನಕ್ಕೆ, ಸಂಕಲನಕ್ಕೆ, ಸಂಪಾದನೆಗೆ ಆರಿಸಿಕೊಂಡ ವಚನಗಳು ವಿಶೇಷವಾಗಿ ತಾತ್ವಿಕ ವಸ್ತುವನ್ನುಳ್ಳವು. ಸಂಘರ್ಷ–ದೌರ್ಬಲ್ಯಗಳ ನಿವೇಧನೆಯ ವಚನಗಳನ್ನು ಇವರು ತಮ್ಮ ವ್ಯಾಪ್ತಿಗೆ ತಂದುಕೊಳ್ಳುವುದಿಲ್ಲ. ಈ ಕಾಲಘಟ್ಟವನ್ನು ಅಥವಾ ಈ ಯುಗವನ್ನು 'ಸಂಗೋಪನ ಯುಗ', 'ಸಂಯೋಜನ ಯುಗ' ಅಥವಾ 'ಪುನರುತ್ಥಾನದ ಯುಗ'ವೆಂದು ಕರೆಯಲಾಗುತ್ತದೆ. ವಚನಗಳ ರಚನೆಯಾಗಲಿ, ಅವುಗಳ ಸಂಗ್ರಹ, ಸಂಕಲನ ಕಾರ್ಯವಾಗಲಿ ಒಂದು ತಾತ್ವಿಕ ಹಿನ್ನಲೆಯೊಳಗೆ ನಡೆದಿರುವುದು ಕಂಡು ಬರುತ್ತದೆ.

ಪುನರುತ್ಥಾನ ಅಥವಾ ಸಂಯೋಜನಾ ಯುಗದಲ್ಲಿ ಕಾಣಿಸಿಕೊಂಡ ೧೦೧ ವಿರಕ್ತರು ಆನಂತರದ ೭೦೧ ವಿರಕ್ತರು, ಶರಣರು ಹಾಗು ಇತರರು ವಿನಾಶದಂಚಿನಲ್ಲಿದ್ದ, ಸಮಾಜದೊಳಗೆ ಅಂತಸ್ಥಾಯಿಯಾಗಿದ್ದ ವೀರಶೈವ ಸಾಹಿತ್ಯ ಮತ್ತು ಧರ್ಮವನ್ನು ತಾತ್ವಿಕ ತಳಹದಿಯ ಮೇಲೆ ಪುನರ್ ಸ್ಥಾಪಿಸುವಲ್ಲಿ ಪ್ರೇರಕ ಶಕ್ತಿಯಾಗಿದ್ದಾರೆ. ಇವರೆಲ್ಲರು ತಮ್ಮ ತಮ್ಮ ಪಾಂಡಿತ್ಯ, ಅನುಭಾವ ಹಾಗೂ ವಿವೇಚನ ಕ್ರಮಗಳಿಂದ ವಚನ ಸಾಹಿತ್ಯಕ್ಕೆ ಶಾಸ್ತ್ರೀಯವಾದ, ಸುವ್ಯವಸ್ಥಿತವಾದ ಒಂದು ಚೌಕಟ್ಟನ್ನು ನಿರ್ಮಿಸಿದ್ದಾರೆ. ವಚನ ಸಾಹಿತ್ಯ ಹೊಸ ಚೈತನ್ಯದೊಂದಿಗೆ ಮತ್ತೆ ತಲೆ ಎತ್ತಿ ನಗುವಂತಾದುದು ಈ ಕಾಲದ ವಿರಕ್ತರಿಂದ.

ಈ ಎರಡೂ ಕಾಲ ಘಟ್ಟದಲ್ಲಿ (೧೦೧ ವಿರಕ್ತರು,೭೦೧ ವಿರಕ್ತರು) ಮೂಡಿ ಬಂದ ವಚನ ಸಾಹಿತ್ಯದ ಸಂಯೋಜನಾ ಕ್ರಿಯೆಯನ್ನು ಸಂಗ್ರಹ, ಸಂಕಲನ, ಮತ್ತು ಸಂಪಾದನ ಸಾಹಿತ್ಯವೆಂದು ಸ್ಥೂಲವಾಗಿ ವರ್ಗೀಕರಿಸಬಹುದು.

ವಚನ ಸಂಗ್ರಹ

ವೀರಶೈವ ಧರ್ಮ ಮತ್ತು ವಚನಗಳನ್ನು ಕುರಿತ ಅಭಿಮಾನ, ಆಸಕ್ತಿ ಗೌರವ ಹಾಗೂ ಶ್ರದ್ದೆಗಳು ಸಂಗ್ರಹಣ ಕಾರ್ಯದ ಪ್ರಮುಖ ಪ್ರೇರಣೆಗಳಾಗಿದ್ದವು. ಅಳಿದು ಹೋಗುತ್ತಿದ್ದ ವಚನಗಳನ್ನು ಉಳಿಸಿಕೊಡುವ ಹಾಗೂ ಅವುಗಳನ್ನು ಜನತೆಯಲ್ಲಿ ಪ್ರಚಾರಗೊಳಿಸುವುದು ಅದರ ಆಶಯವಾಗಿತ್ತು ಈ ವಚನಗಳನ್ನು ಸಂಗ್ರಹಿಸುವ ಕಾರ್ಯಾ ಅನೇಕ ರೀತಿಯಲ್ಲಿ ನಡೆದಿದೆ. ಮೊದಮೊದಲು ಅಂಕಿತಗಳ ಆಧಾರದ ಮೇಲೆ ಇವು ಇಂತಿಂತಹ ವಚನಕಾರನದಿರಬೇಕು ಎಂದು ಇದ್ದಕಿದ್ದಂತೆ ಸಂಗ್ರಹಿಸಿರುವುದು ಉಂಟು. ಆನಂತರ ಇಂತಹ ಅನೇಕ ಶರಣರ ವಚನಗಳನ್ನು ಒಂದೆಡೆ ಸಂಕಲನಮಾಡಿರುವುದೂ ಉಂಟು. ಬೆಡಗಿನ ವಚನಗಳ ಸಂಗ್ರಹಗಳು ಉಂಟು. ಅವುಗಳಿಗೆ ಟೀಕೆಗಳೂ ಉಂಟು. ಷಟ್‌ಸ್ಥಲಕ್ಕನುಗುಣವಾಗಿ ವಚನ ಸಂಗ್ರಹಗಳನ್ನು ಸಂಗ್ರಹಿಸಿರುವುದೂ ಉಂಟು. ಸ್ತೋತ್ರದ ವಚನಗಳು, ಆಚರಣೆಯ ವಚನಗಳು, ಸ್ವರ ವಚನಗಳು,ಕಾಲಜ್ಞಾನದ ವಚನಗಳು, ಸಂಪಾದನೆಗಳು (ಶೂನ್ಯ ಸಂಪಾದನೆ) ಇತ್ಯಾದಿ ವಚನ ಸಂಗ್ರಹಗಳನ್ನು ಕಾಣಬಹುದು.

ವಚನಗಳ ಸಂಗ್ರಹ ಕಾರ್ಯ ೧೦೧ ಹಾಗೂ ೭೦೧ವಿರಕ್ತರ ಕಾಲದಲ್ಲಿಯೆ ಆರಂಭವಾಯಿತೆಂದು ಹೇಳಲು ಬರುವಂತಿಲ್ಲ. ಸಂಗ್ರಹ ಕಾರ್ಯದ ಇತಿಹಾಸ ೧೨ನೇ ಶತಮಾನದ ಕಾಲಕ್ಕೆ ಹೋಗುತ್ತದೆ. ಬಸವಾದಿ ಶರಣರ ಕಾಲದಲ್ಲಿಯೆ ಅವರವರ ವಚನಗಳನ್ನು ಸಂಗ್ರಹಿಸಿ ಒಂದೆಡೆ ವ್ಯವಸ್ಥಿತವಾಗಿ ಜೋಡಿಸುವ ಕ್ರಿಯೆ ನಡೆಯುತ್ತಿತ್ತು ಎಂಬುದು ತಿಳಿಯುತ್ತದೆ. ವಚನ ಭಂಡಾರಿ ಶಾಂತರಸ ಬಸವಾದಿ ಶರಣರ ಕಾಲದಲ್ಲಿದ್ದ ಶರಣ. ಅವನ ಹೆಸರೇ ಸೂಚಿಸುವಂತೆ ವಚನ ಭಂಡಾರ (ವಚನಗಳ ಸಂಗ್ರಹ ಕೋಠಿ)ವನ್ನು ನೋಡಿಕೊಳ್ಳುತ್ತಿದ್ದ ಒಬ್ಬ ಅಧಿಕಾರಿಯಾಗಿದ್ದಂತೆ ತೋರುತ್ತದೆ.

ವಚನ ಭಂಡಾರಿ ಶಾಂತರಸನಂತಹ ಶರಣರು ಮತ್ತು ಅಜ್ಞಾತ ಸಂಗ್ರಹಕಾರರು ೧೨ ಮತ್ತು ೧೫ನೇ ಶತಮಾನದಲ್ಲಿ ವಚನಗಳನ್ನೆಲ್ಲಾ ಸಂಗ್ರಹಿಸಿ ಕಟ್ಟುಗಳನ್ನು ಮಾಡಿರಬೇಕು. ಅಂತಹ ವಚನ ಕಟ್ಟುಗಳನ್ನು ಇಟ್ಟುಕೊಂಡು ೧೫ನೇ ಶತಮಾನದ ಮಹಾಲಿಂಗ ಮುಂತಾದವರು ವ್ಯವಸ್ಥಿತವಾಗಿ, ತಾತ್ವಿಕ ಹಿನ್ನೆಲೆಯಲ್ಲಿ ಸ್ಥಲಾನುಗುಣ ವಿಂಗಡಣೆ, ಸಂಪಾದನ ರೂಪದ ವಿಂಗಡಣೆಯನ್ನು ಅಷ್ಟು ಬೇಗ ಮಾಡಲು ಸಾಧ್ಯವಾಯಿತು. ವಚನ ಕಟ್ಟುಗಳೇ ಇಲ್ಲದಿದ್ದರೆ

ಇವರೆಲ್ಲ ೧೨ ನೇ ಶತಮಾನದ ವಚನಕಾರರ ವಚನಗಳು ಎಲ್ಲೆಲ್ಲಿವೆ ಎಂದು ಊರು, ಕೇರಿ, ಮನೆ, ಮನೆ ತಿರುಗಿ ಸಂಗ್ರಹಿಸಿ ಅಧ್ಯಯನ ಮಾಡಿ ವಿಂಗಡಣೆ ಮಾಡಲು ಇಷ್ಟು ಬೇಗ ಸಾಧ್ಯವಾಗುತ್ತಿರಲಿಲ್ಲವೇನೊ ಅನ್ನಿಸುತ್ತದೆ. ಸಂಗ್ರಹ ರೂಪದ ವಚನಕಟ್ಟುಗಳು ಈಗಾಗಲೆ ಇದ್ದುವೆಂಬುದನ್ನು ಮಹಾಲಿಂಗ ಮುಂತಾದವರ ಈ ಕೆಳಕಂಡ ಹೇಳಿಕೆಗಳಿಂದ ತಿಳಿದು ಬರುತ್ತದೆ.

ಮಹಾಲಿಂಗದೇವನು ತನ್ನ "ಪ್ರಭುದೇವರ ಷಟ್‌ಸ್ಥಲ ಜ್ಞಾನ ಚಾರಿತ್ರ ವಚನದ ಟೀಕೆ" ಗ್ರಂಥದ ಆರಂಭದಲ್ಲಿ "ತಮ್ಮ ಪರಮ ಜ್ಞಾನಾನುಭವ ಪ್ರಸನ್ನ ಪ್ರಕಾಶದಿಂ ಷಟ್‌ಸ್ಥಲವನು ಪ್ರಭುದೇವರ ವಚನಗಳಿಂದ ಸಂಕಲ್ಪಿಸಿ ಸುಲಲಿತ ವಾಕ್ಯಾಮೃತವಾಗಿ ಆ ವಚನಗಳನ್ನು ಟೀಕಿಸಿ, ಪರಮಾರ್ಥ ತತ್ವ ಬೋಧೆಯನು ನಿರೂಪಿಸಿದ ಕ್ರಮವೆಂತೆದಡೆ " ಎಂದು ಹೇಳುತ್ತಾನೆ. ಇದರಿಂದ ಪ್ರಭುದೇವರ ವಚನಗಳು ಒಂದೆಡೆ ಸಂಗ್ರಹವಾಗಿದ್ದವೆಂಬುದು ತಿಳಿದು ಬರುತ್ತದೆ. ಇವನದೇ ಆದ 'ಏಕೋತ್ತರ ಶತಸ್ಥಲ' ಕೃತಿಯಲ್ಲಿ "–ಷಟ್‌ಸ್ಥಲವನು ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಪರಮ ವಾಕ್ಯಾಮೃತವಪ್ಪ ವಚನಗಳಿಂದ ಭಕ್ತಿ ಭಂಡಾರಿ ಜಕ್ಕಣಾರ್ಯಂಗೆ ಹೇಳಿದುದಾಗಿ ಬರುತ್ತದೆ. ಮಹಾಲಿಂಗದೇವನೆದುರು ಅಸಂಖ್ಯಾತ ಮಹಾಗಣಂಗಳ ಪರಮ ವಾಕ್ಯಾಮೃತದಂತಹ ವಚನಗಳ ಕಟ್ಟಿದ್ದುದು ಸ್ಪಷ್ಟವಾಗಿದೆ.

ಜಕ್ಕಣಾರ್ಯನು 'ನೂರೊಂದುಸ್ಥಲ'ದಲ್ಲಿ 'ಪುರಾತನರ ಮಹಾವಚನಂಗಳೊಳಗೆ ಜಕ್ಕಣಾರ್ಯರು ಸಾರಾಯವಾದ ನೂರೊಂದು ಸ್ಥಲದ ವಚನಂಗಳಂ ತೆಗೆದುಕೊಂಡು ಸೂತ್ರವಿಟ್ಟು ಸಂಗ್ರಹಿಸಿದರು' ಎಂದು ಬಂದಿದೆ. ಹಾಗೂ 'ತಮ್ಮ ಗುರು ನಿರೂಪದಿಂದ ಸಕಲ ಪುರಾತನರ ವಚನಗಳಿಂದ ಏಕೋತ್ತರ ಶತಸ್ಥಲವಂ ಸೂತ್ರವ ಕಲ್ಪಿಸಿ ಸ್ಥಲವಿಟ್ಟು ವಸ್ತುಕ, ವರ್ಣಕದಿಂ ಸಂಗ್ರಹಿಸಿ' ಎಂದಿರುವುದು ಜಕ್ಕಣಾರ್ಯನ ಮುಂದೆ ಪುರಾತನರ ವಚನಗಳ ಸಂಗ್ರಹಗಳ ಕಟ್ಟುಗಳು ಇದ್ದುವೆಂಬುದು ಮನದಟ್ಟಾಗುತ್ತದೆ.

ಕಲ್ಲುಮಠದ ಪ್ರಭುದೇವಾರ್ಯನು ಲಿಂಗಲೀಲಾವಿಲಾಸ ಚಾರಿತ್ರದಲ್ಲಿ "ಪುರಾತನರ ವಚನಂಗಳಲ್ಲಿ ಸಾರವಾದ ವಚನಂಗಳಂ ಷೋಡಶಸ್ಥಲ ಪರಿಕ್ರಮದಿಂ ಸೇರಿಸಿ ಅರ್ಥೈಸಿದ ವಚನಾಗಮವಿದು", " ಪ್ರಭುದೇವ ಬಸವ ಚೆನ್ನಬಸವ ಮಹಾದೇವಿಯಕ್ಕ ಮುಂತಾದ ಪುರಾತನರ ವಚನಂಗಳಲ್ಲಿ ೭೨೦ ನ್ನು ತೆಗೆದುಕೊಂಡು ಷೋಡಶಸ್ಥಲ ಪರಿಕ್ರಮದಿಂ ಸೇರಿಸಿ ವ್ಯಾಖ್ಯಾನವಂ ಮಾಡಿದನು" ಎಂದಿದೆ.

ಗುಬ್ಬಿಯ ಮಲ್ಲಣ್ಣ ತನ್ನ 'ಗುಣಭಾಷಿತ ರತ್ನಮಾಲೆ'ಯಲ್ಲಿ "– –ಬಸವರಾಜ ದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ನೂರೊಂದರಲ್ಲಿ ನಡೆದು ನುಡಿದ ವಚನಂಗಳು ಸ್ಥಲ ಭಿನ್ನವಾಗಿರ್ದಡೆ ಚಂದವಲ್ಲವೆಂದು ಕಂಠ ಮಾಲೆಯ ಕೋದು ಹಣಿಗೆಯರಿದು ಸೇರಿಸಿದನು" ಎಂದು ಹೇಳಿರುವುದನ್ನು ಗಮನಿಸಿದರೆ ಬಸವಾದಿಶರಣರ ವಚನ ಸಂಗ್ರಹಗಳು ಇದ್ದುದು ಸ್ಪಷ್ಟ. ಅವು ಸ್ಥಲಾನುಗುಣವಾಗಿಯಾಗಲಿ, ಯಾವುದೇ ತಾತ್ವಿಕ ಹಿನ್ನೆಲೆಯಲ್ಲಿ ಸಂಗ್ರಹಿಸಿದ ವಚನಗಳಾಗಿರಲಿಲ್ಲ ಎಂಬುದು ತಿಳಿದುಬರುತ್ತದೆ.[೧]

---

೧. ಇಲ್ಲಿ ಬಂದಿರುವ ಉದ್ಧರಣೆಗಳನ್ನು 'ಕರ್ನಾಟಕ ಕವಿ ಚರಿತೆ ದ್ವಿತೀಯ ಸಂಪುಟದಿಂದ ಆರಿಸಿಕೊಳ್ಳಲಾಗಿದೆ.

೧೫ ನೇ ಶತಮಾನದ ಶರಣರ ಮುಂದೆ ಅಸಂಖ್ಯಾತ ಮಹಾಗಣಂಗಳ, ಪುರಾತನರ, ಅಖಿಳ ಪುರಾತನರ ಮುಕ್ತಕ ರೂಪದ ವಚನ ಕಟ್ಟುಗಳು ಇದ್ದುವೆಂದು ಭಾವಿಸಬೇಕಾಗುತ್ತದೆ. ಈ ರೀತಿ ಸಾಮೂಹಿಕ ವಚನಕಾರರ ಕಟ್ಟುಗಳ ಜೊತೆಗೆ ಒಬ್ಬೊಬ್ಬ ವಚನಕಾರನ ವಚನಗಳನ್ನು ಒಂದೆಡೆ ಸೇರಿಸಿದ ಕಟ್ಟುಗಳು ಇದ್ದವೆಂಬುದು ಮಹಾಲಿಂಗದೇವನ 'ಷಟ್‌ಸ್ಥಲವನು ಪ್ರಭುದೇವರ ವಚನಗಳಿಂದ ಸಂಕಲ್ಪಿಸಿ' ಎಂಬ ಮಾತಿನಿಂದ ಇದು ಸ್ಪಷ್ಟವಾಗುತ್ತದೆ.

ವಚನ ಸಂಗ್ರಹಗಳಲ್ಲಿ ಸರ್ವ ಪುರಾತನರ ವಚನಕಟ್ಟು, ಬೆಡಗಿನ ವಚನಗಳ ಸಂಗ್ರಹ, ಕಾಲಜ್ಞಾನ ವಚನಗಳ ಸಂಗ್ರಹ, ಸ್ವರವಚನಗಳ ಸಂಗ್ರಹ, ಸ್ತೋತ್ರದ ವಚನಗಳ ಸಂಗ್ರಹಗಳು ಕಂಡು ಬರುತ್ತವೆ. ವಚನಗಳ ಸಂಗ್ರಹಕ್ಕೆ ಸಂಬಂಧ ಪಟ್ಟಂತೆ ಬಹುದೊಡ್ಡ ಪ್ರಯತ್ನವೆಂದರೆ 'ಸಕಲಪುರಾತನರ ವಚನ ಕಟ್ಟುಗಳು' ರಚನೆಯಾಗಿರುವುದು. ಈ ಕಟ್ಟುಗಳಲ್ಲಿ ಮೂರು ತೆರನಾಗಿವೆ. ೧. ಕೋಲಶಾಂತಯ್ಯ ವಚನಗಳಿಂದ ಆರಂಭವಾಗುವ ವಚನ ಕಟ್ಟುಗಳು, ೨. ಬಸವಣ್ಣನವರ ವಚನಗಳಿಂದ ಆರಂಭವಾಗುವ ವಚನ ಕಟ್ಟುಗಳು. ೩. ಗೊಗ್ಗವ್ವೆಯರ ವಚನಗಳಿಂದ ಆರಂಭವಾಗುವ ಕಟ್ಟುಗಳು.

ಈ ಕಟ್ಟುಗಳಲ್ಲಿ ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಸಕಲ ಪುರಾತನರ ವಚನಗಳ ಕಟ್ಟುಗಳ ಸಂಖ್ಯೆಯೆ ಅಧಿಕವಾಗಿವೆ. ಈ ಕಟ್ಟುಗಳಲ್ಲಿ ಆದಯ್ಯನ ವಚನಗಳಿಂದ ಅಂತ್ಯವಾಗುವ, ಜೇಡರ ದಾಸಿಮಯ್ಯನ ವಚನಗಳಿಂದ ಅಂತ್ಯವಾಗುವ, ಸತ್ಯಕ್ಕನ ವಚನಗಳಿಂದ ಅಂತ್ಯವಾಗುವ ಮತ್ತು ಏಲೇಶ್ವರದ ಕೇತಯ್ಯನ ವಚನಗಳಿಂದ ಅಂತ್ಯವಾಗುವ ಕಟ್ಟುಗಳು ದೊರೆಯುತ್ತವೆ. ಒಂದೊಂದು ವಚನಗಳ ಕಟ್ಟಿನಲ್ಲಿ ಬರುವ ಒಟ್ಟು ವಚನಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ. ಮೇಲಣ ಕಟ್ಟುಗಳಲ್ಲಿ[೨] ಬರುವ ಒಟ್ಟು ವಚನಗಳ ಸಂಖ್ಯೆ ಮೂರು ಸಾವಿರಕ್ಕಿಂತ ಹೆಚ್ಚಾಗಿವೆ. ಹಾಗಾಗಿ ಈ ಕಟ್ಟುಗಳನ್ನು ಮೂರು ಸಾವಿರದ ಕಟ್ಟುಗಳೆಂದೆ ಕೆರೆಯುತ್ತಿದ್ದುದು ಕಂಡು ಬರುತ್ತದೆ.[೩] ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಆದಯ್ಯನ ವಚನಗಳಿಂದ ಅಂತ್ಯವಾಗುವ ವಚನ ಕಟ್ಟುಗಳಲ್ಲಿ ೨೭ ವಚನಕಾರರ ೩೨೮೯,[೪] ೩೨೮೫,[೫] ೩೦೧೬[೬] ವಚನಗಳಿವೆ.

ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಜೇಡರ ದಾಸಿಮಯ್ಯನ ವಚನಗಳಿಂದ ಅಂತ್ಯವಾಗುವ ವಚನ ಕಟ್ಟುಗಳಲ್ಲಿ ೩೩೮೫,[೭] ೧೨೦೭,[೮] ೩೨೦೯[೯] ೨೦೧೨[೧೦] ವಚನಗಳಿವೆ.

---

೨. ಆದಯ್ಯ ಮತ್ತು ಜೇಡರ ದಾಸಿಮಯ್ಯನ ವಚನಗಳಿಂದ ಅಂತ್ಯವಾಗುವ ಎರಡು ಕಟ್ಟುಗಳಲ್ಲಿ

೩. ಕನ್ನಡ ಅಧ್ಯಯನ ಪೀಠದ ವಚನ ಭಂಡಾರದ ೧೫೧, ೩೮ನೇಯ ಕ್ರಮ ಸಂಖ್ಯೆಯ ಕಟ್ಟುಗಳ ಕೊನೆಯಲ್ಲಿ ಮೂರುಸಾವಿರ ವಚನ ಮುಗಿಯಿತು ಎಂದು ಬಂದಿರುವುದು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತವೆ.

೪. ಕನ್ನಡ ಅಧ್ಯಯನ ಪೀಠ ಧಾರವಾಡ, ಓಲೆ ಪ್ರತಿ ೧೫೧/ ಕ್ರಮಸಂಖ್ಯೆ

೫. – – ಅದೇ – – ೩೦೦/೧

೬. – – ಅದೇ – – ೮೨/೧

೭. – – ಅದೇ – – ೫೩೨

೮. – – ಅದೇ – – ೩೪

೯. – – ಅದೇ – – ೪೩೮,೪೪೮,೪೯೭,೬೧೯/೨

೧೦. – – ಅದೇ – – ೧೫೦/೨

ಸತ್ಯಕ್ಕನ ವಚನಗಳಿಂದ ಅಂತ್ಯವಾಗುವ ವಚನ ಕಟ್ಟಿಗೆ ೩೫ನೇ ಕ್ರಮ ಸಂಖ್ಯೆಯ ಕಟ್ಟು ಸೇರುತ್ತದೆ. ೮೨ನೇಯ ಕ್ರಮ ಸಂಖ್ಯೆಯ ಕಟ್ಟನ್ನು ಕೂಡಾ ಇದೇ ಗುಂಪಿಗೆ ಸೇರಿಸಬಹುದು. ವ್ಯತ್ಯಾಸವೆಂದರೆ ಇದರಲ್ಲಿ ಸತ್ಯಕ್ಕನ ವಚನಗಳ ಆನಂತರ ಬೇರೆ ಕೆಲವರ ವಚನಗಳು ಬರುತ್ತವೆ. ೩೫ನೇ ಕ್ರಮ ಸಂಖ್ಯೆಯ ಕಟ್ಟಿನಲ್ಲಿ ೮೯ ವಚನಕಾರರ ೪೦೧೫ ವಚನಗಳು ಸಂಗ್ರಹಗೊಂಡಿವೆ.[೧೧]

ಗೊಗ್ಗೆವೆಯ ವಚನಗಳಿಂದ ಕೊನೆಗೊಳ್ಳುವ ಕಟ್ಟು, ಕೊತಾರದ ಸೋಮಣ್ಣನ ವಚನಗಳಿಂದ ಅಂತ್ಯವಾಗುವ ಕಟ್ಟುಗಳು, ಅಗ್ಘವಣಿಯ ಹಂಪಯ್ಯನ ವಚನಗಳಿಂದ ಕೊನೆಗೊಳ್ಳುವ ಕಟ್ಟುಗಳೆಂದು ವಿಂಗಡಿಸಬಹುದು.

ನೀಲಮ್ಮನ ವಚನಗಳಿಂದ ಅಂತ್ಯವಾಗುವ ಕಟ್ಟಿನಲ್ಲಿ ೧೨೦/೧೨೧ ವಚನಕಾರರ ಸುಮಾರು ೧೫೦೦ ವಚನಗಳಿವೆ.[೧೨] ಕೊತಾರದ ಸೋಮಣ್ಣನ ವಚನಗಳಿಂದ ಅಂತ್ಯವಾಗುವ ಎರಡು ಕಟ್ಟುಗಳಲ್ಲಿ ತಲಾ ೯೪ ವಚನಕಾರರ ಸುಮಾರು ಹೆಚ್ಚು ಕಡಿಮೆ ೯೪೫ ವಚನಗಳಿವೆ.[೧೩] ಅಗ್ಘವಣಿ ಹಂಪಯ್ಯನ ವಚನಗಳಿಂದ ಅಂತ್ಯವಾಗುವ ಕಟ್ಟಿನಲ್ಲಿ ೮೭ ಜನ ವಚನಕಾರರ ೯೪೭ ವಚನಗಳು ಸಮಾವೇಶಗೊಂಡಿವೆ.[೧೪]

ಬಸವಣ್ಣನವರ ವಚನಗಳಿಂದ ಆರಂಭವಾಗುವ ಕಟ್ಟುಗಳು, ಕೋಲ ಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟುಗಳಿಗಿಂತ ಇವುಗಳ ಸಂಖ್ಯೆ ಕಡಿಮೆ ಇವೆ. ಕನ್ನಡ ಅಧ್ಯಯನ ಪೀಠ ಧಾರವಾಡದ ವಚನ ಭಂಡಾರದ ೧೫೦,೬೯,೧೮೯೪,೧೮೯೮ ಈ ಕ್ರಮ ಸಂಖ್ಯೆಯ ಕಟ್ಟುಗಳು ಬಸವಣ್ಣನವರ ವಚನಗಳಿಂದ ಆರಂಭವಾಗುತ್ತವೆ. ೧೫೦ ಮತ್ತು ೬೯ ಕ್ರಮ ಸಂಖ್ಯೆಯ ಕಟ್ಟುಗಳಲ್ಲಿ ಬಸವಣ್ಣನವರ ವಚನಗಳಿಂದ ಆರಂಭಗೊಳ್ಳುವ ಸಕಲ ಪುರಾತನರ ವಚನದ ಕಟ್ಟು ಮುಗಿದ ಮೇಲೆ ಕೋಲ ಶಾಂತಯ್ಯನ ವಚನಗಳಿಂದ ಆರಂಭವಾಗುವ ಸಕಲ ಪುರಾತನರ ವಚನದ ಕಟ್ಟನ್ನು ಸೇರಿಸಲಾಗಿದೆ. ಆದುದರಿಂದ ಇವು ಎರಡು ಬಗೆಯ ಕಟ್ಟಗಳನ್ನೊಳಗೊಂಡ ಕಟ್ಟುಗಳಾಗಿವೆ. ಆದರೆ ೧೮೯೪ ಮತ್ತು ೧೮೯೮ ಸಂಖ್ಯೆಯ ಕಟ್ಟುಗಳಲ್ಲಿ ಬೇರಾವ ಕಟ್ಟುಗಳು ಸೇರ್ಪಡೆಗೊಳ್ಳದೆ ಕೇವಲ ಬಸವಣ್ಣನವರಿಂದ ಆರಂಭವಾಗುವ ಕಟ್ಟುಗಳಾಗಿವೆ. ೮೦ ವಚನಕಾರರ ೧೦೩೧ ವಚನಗಳಿವೆ.[೧೫]

ಈ ಮೇಲ್ಕಂಡ ವಿವಿಧ ಬಗೆಯ ಕಟ್ಟುಗಳಲ್ಲಿ ಬಸವಣ್ಣನವರಿಂದ ಆರಂಭಗೊಳ್ಳುವ ಸಾವಿರ ವಚನಗಳ ಕಟ್ಟುಗಳೇ ಉಳಿದೆಲ್ಲ ಸಕಲ ಪುರಾತನರ ವಚನಗಳ ಕಟ್ಟುಗಳಿಗಿಂತ ಮೊದಲು ಸಂಗ್ರಹಗೊಂಡಿವೆ. ಇವುಗಳನ್ನು ಆಧರಿಸಿ ಉಳಿದ ಸಕಲ ಪುರಾತನರ ವಚನಗಳ ಕಟ್ಟುಗಳು ಹುಟ್ಟಿಕೊಂಡಿರಬೇಕು. ಏಕೆಂದರೆ ಬಸವಣ್ಣನವರ ವಚನಗಳಿಂದ ಆರಂಭವಾಗುವ ಕಟ್ಟುಗಳಲ್ಲಿ

---

೧೧. ಕನ್ನಡ ಅಧ್ಯಯನ ಪೀಠ ಧಾರವಾಡ. ಓಲೆ ಪ್ರತಿ, ಕ್ರಮ ಸಂಖ್ಯೆ ೩೫

೧೨. – – ಅದೇ – – ೩೭,೪೦

೧೩. – – ಅದೇ – – ೭೬,೬೧೩

೧೪ – – ಅದೇ – – ೬೯೩

೧೫. ಕನ್ನಡ ಅಧ್ಯಯನ ಪೀಠ ಧಾರವಾಡ. ಓಲೆ ಪ್ರತಿ, ಕ್ರಮ ಸಂಖ್ಯೆ ೧೫೧/೧

ಬರುವ ಬಹುತೇಕ ವಚನಕಾರರು ಮತ್ತು ಅವರ ವಚನಗಳು ಕೋಲಶಾಂತಯ್ಯ ಮತ್ತು ಗೊಗ್ಗವ್ವೆಯರ ವಚನಗಳಿಂದ ಆರಂಭವಾಗುವ ಎರಡು ಬಗೆಯ ಕಟ್ಟುಗಳಲ್ಲಿ ಸಮಾವೇಶವಾಗಿರುವುದು ಕಂಡುಬರುತ್ತದೆ. ಮೇಲಾಗಿ ಬಸವಣ್ಣನು ೧೨ ನೇ.ಶ.ದ. ಆದರ್ಶ ಪುರುಷನಾಗಿದ್ದ . ಆದ್ದರಿಂದ ಅವನ ವಚನಗಳಿಂದಲೇ ಇಂತಹ ವಚನಗಳ ಸಂಗ್ರಹ ಕಾರ್ಯ ನಡೆದಿರಬಹುದಾದ ಸಾಧ್ಯತೆ ಇದೆ.

ಸಕಲ ಪುರಾತನರ ವಚನಗಳ ಕಟ್ಟುಗಳಲ್ಲಿಯ ಒಂದು ದೊಡ್ಡ ಕೊರತೆಯೆಂದರೆ ಅವುಗಳನ್ನು ಸಂಗ್ರಹಿಸಿದವರ ಹೆಸರು. ಕಾಲ, ದೇಶಗಳಾವುವು ಪರಿಚಯವಾಗುವುದಿಲ್ಲ. ಸಕಲಪುರಾತನರ ವಚನಗಳ ಕಟ್ಟುಗಳಲ್ಲದೆ, ಎಲ್ಲ ಪುರಾತನರ ಸ್ತೋತ್ರದ ವಚನಗಳು, ಕಾಲಜ್ಞಾನದ ವಚನಗಳು, ಸಕಲ ಗಣಂಗಳ ವಚನಗಳ ಕಟ್ಟುಗಳು ದೊರಕುತ್ತವೆ.[೧೬]

ಇದುವರೆಗೂ ಬಸವಾದಿಶರಣರ ವಚನಗಳಿಂದ ಕಟ್ಟಿದ ಸಂಗ್ರಹ ಕೃತಿಗಳನ್ನು ಪರಿಶೀಲಿಸಲಾಯಿತು. ಇಂತಹ ಸಂಗ್ರಹಗಳಲ್ಲಿ ಯಾವುದೇ ಒಂದು ಕ್ರಮ, ನಿಯಮ ಕಂಡುಬರುವುದಿಲ್ಲ. ಒಬ್ಬನೇ ವಚನಕಾರನ ವಚನಗಳನ್ನು ಒಂದೇ ಕೃತಿಯಲ್ಲಿ ಸಂಗ್ರಹಿಸಿದ ಕೃತಿಗಳು ದೊರೆಯುತ್ತವೆ. ಒಂದೇ ಕೃತಿಯಲ್ಲಿ ಬೇರೆ ಬೇರೆ ವಚನಕಾರರ ವಚನಗಳನ್ನು ಅವರವರ ಹೆಸರಿನ ಕೆಳಗೆ ಸಂಗ್ರಹಿಸಿದ ಕೃತಿಗಳು ದೊಎಕುತ್ತವೆ. ಒಟ್ಟಿನಲ್ಲಿ ಇಂತಹ ಸಂಗ್ರಹ ಕೃತಿಗಳು ಮುಂದಿನ ಸಂಕಲನ, ಸಂಪಾದನೆಗೆ ದಾರಿ ಮಾಡಿಕೊಟ್ಟಿರುವುದು ಕಂಡುಬರುತ್ತದೆ.

ವಚನ ಸಂಕಲನ

ಹನ್ನೆರಡನೆ ಶತಮಾನದ ಚೆನ್ನಬಸವಣ್ಣನವರ ವಚನ ಸಾಹಿತ್ಯದಲ್ಲಿಯೆ ಒಂದು ಚೌಕಟ್ಟು ಕಂಡುಬರುತ್ತದೆ. ಕಿರಿಯ ವಯಸ್ಸಿನ ಹಿರಿಯ ಅನುಭಾವದ ಮಹಾಜ್ಞಾನಿ ಎನಿಸಿದ ಚೆನ್ನಬಸವಣ್ಣನವರು ಶರಣರ ವಿಚಾರಗಳಿಗೆ, ವಚನ ಸಾಹಿತ್ಯಕ್ಕೆ ತಾತ್ವಿಕ ಪರಿಕಲ್ಪನೆಯನ್ನು ಒದಗಿಸಿಕೊಟ್ಟವರು. ಶಾಸ್ತ್ರೀಯ ಅಥವಾ ತಾತ್ವಿಕ ಚೌಕಟ್ಟು ಎಂದರೆ ಸ್ಥಲಗಳು, ಅಷ್ಟಾವರಣಗಳು, ಪಂಚಾಚಾರ ಮುಂತಾದುವುಗಳನ್ನು ವೀರಶೈವ ಧರ್ಮ ಮತ್ತು ಅದರ ಆಧ್ಯಾತ್ಮಿಕ ಮನೋಸ್ಥಿತಿಯನ್ನೆಲ್ಲ ಶಾಸ್ತ್ರ ರೂಪದಲ್ಲಿ ತಮ್ಮ ವಚನಗಳ ಮೂಲಕ ಚೆನ್ನಬಸವಣ್ಣನವರು ನಿರೂಪಿಸಿದ್ದಾರೆ. ಚೆನ್ನಬಸವಣ್ಣನವರ ಈ ಶಾಸ್ತ್ರೀಯ ಬರವಣಿಗೆ ತೋಂಟದ ಸಿದ್ಧಲಿಂಗರ ಮೇಲೆ[೧೭] ಆನಂತರ ಅವರ ಶಿಷ್ಯ-ಪ್ರಶಿಷ್ಯ ಪರಂಪರೆಯ ಮೇಲಾಗಿದೆ.

ಬಸವಾದಿ ಶರಣರ ಸಾವಿರಾರು ವಚನಗಳನ್ನು ಒಂದು ಕಡೆ ಸೇರುವೆಗೊಳಿಸುವ, ಹೀಗೆ ಸೇರುವೆಗೊಂಡ ಸಂಗ್ರಹಗಳನ್ನು ಒಂದು ಕಡೆ ವ್ಯವಸ್ಥಿತವಾಗಿ ರಕ್ಷಿಸುವ (ಓಲೆಭಂಡಾರದಲ್ಲಿ) ಕಾರ್ಯ ೧೨ ನೇ ಶತಮಾನದಲ್ಲಿ ನಡೆದಿರಬಹುದು. ಆದರೆ ಆ ವಚನಗಳನ್ನೆಲ್ಲ ತಾತ್ವಿಕ

---

೧೬. ಈ ಮೇಲಿನ ಎಲ್ಲಾ ಅಂಕಿ ಅಂಶ, ಉದ್ಧರಣೆಗಳು, ಓಲೆ ಪ್ರತಿಗಳ ವಿವರಗಳನ್ನು
೧. ಡಾ॥ ಎಸ್. ವಿದ್ಯಾಶಂಕರ್ (ಸಂ) ವಚನ ಸಾಹಿತ್ಯ- ದ್ವಿತೀಯ ಘಟ್ಟ ಪುಟ-೩೯.
೨. ಡಾ॥ ಆರ್.ಸಿ. ಹಿರೇಮಠ(ಸಂ)- ಶಿವದೀಪ್ತಿ, ಪುಟ-೨೨೩.

೧೭. "ಚೆನ್ನ ಬಸವಣ್ಣನ ಪ್ರಸಾದದಿಂದೆ ಷಟ್‌ಸ್ಥಲ ಪ್ರಸನ್ನನಾದೆನಯ್ಯ" ಶ್ರೀ ತೋಂಟದ ಸಿದ್ಧಲಿಂಗ, ಷಟ್‌ಸ್ಥಲ ಜ್ಞಾನಸಾರಾಮೃತ.ವ-೫೩೭

ನೆಲೆಗಟ್ಟಿನಲ್ಲಿ ಯೋಚಿಸಿ, ಸ್ಥಲಕಟ್ಟುಗಳನ್ನು ನಿರ್ಮಿಸಿ, ಅಂತಹ ಸ್ಥಲಾನುಕ್ರಮಣಿಕೆಯಲ್ಲಿ, ವಚನ ಸಂಕಲನ ಕಾರ್ಯದಲ್ಲಿ ಆ ಕಾಲದ ವಚನಕಾರರೆಲ್ಲ ನಿರತರಾಗಿದ್ದರು ಎಂದು ಹೇಳಲು ಬರುವುದಿಲ್ಲ. ಈ ರೀತಿಯ ತಾತ್ವಿಕ ನೆಲೆಗಟ್ಟಿನಲ್ಲಿ, ಸ್ಥಲಕಟ್ಟುಗಳ ಸಂಕಲನ ವ್ಯವಸ್ಥೆ ಸ್ಪಷ್ಟವಾಗಿ ಕಂಡು ಬಂದದ್ದು ವಿಜಯನಗರ ಅರಸರ ಕಾಲದಲ್ಲಿ.

ಸಂಸ್ಕೃತದ ವೇದಾಗಮಗಳು ಮಾತ್ರ ಟೀಕೆ–ವ್ಯಾಖ್ಯಾನಕ್ಕೆ ಅರ್ಹವಾದುವೆಂಬ ದೇವ ಭಾಷಾ ಪರವಾದ ಪ್ರತಿಷ್ಠೆ ಗೌರವಗಳನ್ನು ದೇಶಭಾಷೆಯಾದ ಕನ್ನಡಕ್ಕೆ ತಂದು ಕೊಟ್ಟವರು ವಚನ ಸಂಕಲನಕಾರರು. ವೀರಶೈವ ತಾತ್ವಿಕ ಸಿದ್ಧಾಂತಗಳನ್ನೊಳಗೊಂಡ ವಚನಗಳೂ ಸಹ ಶಾಸ್ತ್ರ, ಸಿದ್ಧಾಂತಾದಿ ಗಹನ ಗಂಭೀರ ವಿಚಾರಗಳನ್ನು ಒಳಗೊಂಡಿದ್ದರಿಂದ ಇವುಗಳಿಗೂ ಟೀಕೆ ವ್ಯಾಖ್ಯಾನ ಅವಶ್ಯವೆಂಬುದನ್ನು ಇವರು ಕಂಡು ಕೊಂಡರು. ಕುಮಾರ ಬಂಕನಾಥನು 'ಷಟ್‌ಸ್ಥಲೋಪದೇಶ' ಎಂಬ ಶೀರ್ಷಿಕೆಯಲ್ಲಿ ಅಲ್ಲಮನ ೬೭೮ ವಚನಗಳಿಗೆ ಪ್ರತಿ ಪದಾರ್ಥ ಟೀಕೆಯನ್ನು ಒದಗಿಸಿದ್ದಾನೆ. ಕಲ್ಲುಮಠದ ಪ್ರಭುದೇವನು ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಸಂಕಲನದ ವಚನಗಳಿಗೆ 'ತಾತ್ಪರ್ಯ' ಸಹಿತವಾದ ಅರ್ಥವನ್ನು ಕೊಟ್ಟಿದ್ದಾನೆ. ಜಕ್ಕಣಾರ್ಯನು 'ಏಕೋತ್ತರ ಶತಸ್ಥಲ' ಕೃತಿಯನ್ನು ವ್ಯಾಖ್ಯಾನ ಟೀಕೆಯೊಡನೆ ಸಂಕಲಿಸಿದ್ದಾನೆ.

ಸಂಕಲನಗಳಿಗೆ ಪ್ರೇರಣೆ

೧೨ ನೇ ಶತಮಾನದ ಶರಣರ ಆಂದೋಲನ ಹಾಗೂ ಸಮಾಜಮುಖಿ ವಚನಗಳ ನಿರ್ಮಾಣ ಕೇಂದ್ರ ಪ್ರಜ್ಞೆಯಾಗಿದ್ದರೆ, ಹಲವಾರು ಆಂತರಿಕ ಬಾಹ್ಯಕಾರಣಗಳಿಂದ ಆ ಎಲ್ಲಾ ಸಂಕಲನಗಳ ಕೇಂದ್ರ ಪ್ರಜ್ಞೆ ಆಧ್ಯಾತ್ಮಿಕವಾದುದು. ವಚನಗಳ ಮೂಲಭೂತ ಪ್ರೇರಣೆ ಲೌಕಿಕವೆನಿಸಿದರೆ, ಸಂಕಲನಗಳ ಮೂಲಭೂತ ಪ್ರೇರಣೆ ಆಧ್ಯಾತ್ಮಿಕವೆನಿಸಿತು. ಇದಕ್ಕೆ ಮೂಲಭೂತವಾದ ಕಾರಣ ಪ್ರೌಢದೇವರಾಯನ ಮತ್ತು ತೋಂಟದ ಸಿದ್ಧಲಿಂಗ ಯತಿಗಳ ಕಾಲದಲ್ಲಿ ವೀರಶೈವರು ಎದುರಿಸಿದ ಆತಂಕ ಮತ್ತು ಧಾರ್ಮಿಕ ಜವಬ್ದಾರಿಯಾಗಿತ್ತು. ಧಾರ್ಮಿಕ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಪ್ರತಿಸ್ಪರ್ಧಿಯಾಗಿ ನಿಂತ ವೈಷ್ಣವ ಮತ ಪಂಥ, ಅನ್ಯಮತಗಳೊಂದಿಗೆ ವೀರಶೈವ ಧರ್ಮವು ತನ್ನ ಸತ್ವ ಹಾಗೂ ಅಸ್ತಿತ್ವವನ್ನು ಸಪ್ರಮಾಣವಾಗಿ ಉಳಿಸಿಕೊಳ್ಳಬೇಕಾದ ಜರೂರತೆ ಇತ್ತು. ಇಂತಹ ಜವಬ್ದಾರಿಯ ಸಂದರ್ಭದಲ್ಲಿ ಆಧಾರ ಮತ್ತು ಪ್ರಮಾಣಗಳಿಗೆ ಸಹಜವಾಗಿ ವಚನಗಳ ಮೊರೆ ಹೋಗಬೇಕಾಯಿತು. ಆದ್ದರಿಂದ ಶರಣರು ವೀರಶೈವ ತತ್ವಜ್ಞಾನದ ಹಿನ್ನೆಲೆಯಲ್ಲಿ ವಚನಗಳನ್ನು ಸಂಕಲನ ಮಾಡುವ, ವಿಶ್ಲೇಷಿಸುವ, ಶಾಸ್ತ್ರೀಯ ಚೌಕಟ್ಟಿಗೆ ಒಳಪಡಿಸುವ ಕಾರ್ಯದಲ್ಲಿ ನಿರತರಾಗಬೇಕಾಯಿತು.

ಈ ರೀತಿಯಲ್ಲಿ ಹುಟ್ಟಿಕೊಂಡ ವಚನಸಂಕಲನಗಳ ಕೆಲಸ ವಚನ ಸಂಗ್ರಹಗಳಿಗಿಂತ ಹೆಚ್ಚು ಜವಬ್ದಾರಿಯ ಮತ್ತು ಪಾಂಡಿತ್ಯ ಪ್ರತಿಭೆಯ ಕೆಲಸವಾಗಿದೆ. ಇಂತಹ ಸಂಕಲನಗಳು ಒಂದು ಉದ್ದೇಶ ಪೂರ್ವಕವಾಗಿ ಸಿದ್ಧವಾದವುಗಳಾಗಿವೆ. ಸಂಕಲನಕಾರರ ಮನಸ್ಸಿನಲ್ಲಿ ವೀರಶೈವ ಧರ್ಮದ ತಾತ್ವಿಕತೆಯ ಮಹತ್ವವನ್ನು ಹೇಳುವುದರ ಜೊತೆ, ಧರ್ಮವನ್ನು ಉಳಿಸುವ ಮತ್ತು ಪ್ರಚಾರಗೊಳಿಸುವ ತುರ್ತು ಎದುರಾಗಿತ್ತು. ಬಸವಾದಿ ಪ್ರಮಥರ ವಚನಗಳಲ್ಲಿ ಇರುವ ತಾತ್ವಿಕ ವಿಚಾರಗಳು ಇವರ ಗಮನಕ್ಕೆ ಬಂದವು. ಅಂತಹ ವಚನಗಳನ್ನು ಮಾತ್ರ ಆರಿಸಿ ಸ್ಥಲಕಟ್ಟಿನ ಹಿನ್ನೆಲೆಯಲ್ಲಿ ಸಂಕಲಿಸುವ ಜವಬ್ದಾರಿಯನ್ನು ಹೊತ್ತುಕೊಂಡರು. ಈ ಕೆಲಸಕ್ಕೆ ಬೇಕಾದ

ವಚನಗಳು ಈಗಾಗಲೆ ಸಂಗ್ರಹವಾಗಿದ್ದ ಪುರಾತನರ ವಚನ ಕಟ್ಟುಗಳು ಮತ್ತು ಸಮಕಾಲೀನ ವಚನಕಾರರ ವಚನಗಳು ಆಕರ ಸಾಮಗ್ರಿಗಳಾದವು. ಈ ನೆಲೆಯಲ್ಲಿ ನೂರಾರು ತೆರನಾದ 'ಸಂಕಲನ'ಗಳು ರೂಪತಾಳಿದವು. ಇಂತಹ ಸಂಕಲನಗಳನ್ನು ಸ್ಥಲಕಟ್ಟಿನ ಕೃತಿಗಳು, ಇತರ ಕೃತಿಗಳೆಂದು ವರ್ಗೀಕರಿಸಬಹುದು.

ಈಗ ದೊರೆತಿರುವ ಷಟ್‌ಸ್ಥಲ ಕಟ್ಟುಗಳು ಬಸವಣ್ಣ, ಚೆನ್ನಬಸವಣ್ಣ ಮತ್ತು ಪ್ರಭುದೇವರ ವಚನಗಳಿಂದ ರೂಪಿಸಲ್ಪಟ್ಟಿವೆ.[೧೮] ಈ ಷಟ್‌ಸ್ಥಲ ವಿನ್ಯಾಸವು ಹಲವು ಬಗೆಯದಾಗಿದೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲ ಎಂದು ಆರು ಸ್ಥಲಗಳಿಂದ ರಚನೆಯಾಗಿದೆ ಆಚರಣೆಯ ಸ್ಥಲ ವಿನ್ಯಾಸವು ಭಕ್ತನ ಭಕ್ತಸ್ಥಲ, ಭಕ್ತನ ಮಹೇಶಸ್ಥಲ, ಭಕ್ತನ ಪ್ರಸಾದಿಸ್ಥಲ- ಎಂದು ಮುಂತಾಗಿ ೩೬ ಸ್ಥಲಗಳಿಂದ ರಚನೆಯಾಗಿದೆ. ಅನುಭಾವಸ್ಥಲ ವಿನ್ಯಾಸವು ಭಕ್ತನ ಆಚಾರಲಿಂಗ, ಭಕ್ತನ ಗುರುಲಿಂಗ- ಎಂದು ಮುಂತಾಗಿ ೩೬ ಸ್ಥಲಗಳಿಂದ ರಚನೆಯಾಗಿದೆ.

'ಏಕೋತ್ತರಶತಸ್ಥಲ' ವಚನ ಕಟ್ಟು ಷಟ್‌ಸ್ಥಲದ ಇನ್ನೊಂದು ಬಗೆಯ ಮಾದರಿಯಾಗಿದೆ. ಚೆನ್ನಬಸವಣ್ಣನವರು ಸಂಕಲಿಸಿದ ಇಂತಹ ವಚನ ಸಂಕಲನವೊಂದು ಇತ್ತೀಚೆಗೆ ದೊರೆತಿದ್ದರೂ ನೂರೊಂದು ಸ್ಥಲದ ಸಂಕಲನಗಳ ಸಮೃದ್ಧ ನಿರ್ಮಾಣ ಕಾಲ ೧೫ ನೇ ಶತಮಾನವೆಂದು ಹೇಳಬಹುದು. ಇಂತಹ ಸಂಕಲನಗಳಿಗೆ ಮುನ್ನುಡಿ ಬರೆದವನು ಮಹಾಲಿಂಗದೇವ. ಇದೇ ಮಾದರಿಯಲ್ಲಿ ಜಕ್ಕಣಾರ್ಯನು 'ಸ್ವರ ಏಕೋತ್ತರ ಶತಸ್ಥಲ' ಸಿದ್ಧಲಿಂಗನ 'ಏಕೋತ್ತರಶತಸ್ಥಲ', ಅನಾಮಧೇಯರ 'ಏಕೋತ್ತರಶತಸ್ಥಲ ಸಾರ' ಮತ್ತು 'ಏಕೋತ್ತರ ಶತಸ್ಥಲ ಸಾರಾಮೃತ'ಗಳು ಹುಟ್ಟಿಕೊಂಡಿವೆ.

ಷಟ್‌ಸ್ಥಲ ಕಟ್ಟು, ಏಕೋತ್ತರಶತಸ್ಥಲ ಕಟ್ಟುಗಳನ್ನು ಬಿಟ್ಟರೆ ಇತರ ಸ್ಥಲಕಟ್ಟು ಸಂಕಲನಗಳು ವೈವಿಧ್ಯಪೂರ್ಣ ವಿನ್ಯಾಸದಿಂದ ವಿಪುಲ ಸಂಖ್ಯೆಯಲ್ಲಿ ಬೆಳೆದಿವೆ. ಲಿಂಗಲೀಲಾ ವಿಲಾಸ ಚಾರಿತ್ರವು ೧೬ ಸ್ಥಲ, ವಿಶೇಷಾನುಭವ ಷಟ್‌ಸ್ಥಲ ೧೫ ಸ್ಥಲ, ಆಚರಣೆಯ ವಚನ ೨೮ ಸ್ಥಲ, ಸಂಬಂಧದ ವಚನಗಳು ೨೪ ಸ್ಥಲ,ಲಿಂಗ ಚಿದಮೃತ ಬೋಧೆ ೩೧ ಸ್ಥಲ, ಅದ್ವೈತಾನಂದದ ವಚನ ೧೭ ಸ್ಥಲ- ಹೀಗೆ ಸ್ಥಲ ಸಂಖ್ಯೆ ಅನೇಕ ಬಗೆಯಾಗಿದೆ[೧೯]. ಈ ಸ್ಥಲ ಸಂಖ್ಯೆಯ ವೈವಿಧ್ಯತೆಯ ಹಿನ್ನೆಲೆಯಲ್ಲಿ ಅನೇಕ ಸಂಕಲನಗಳು ಬೆಳಕಿಗೆ ಬಂದಿವೆ. ಈ ಸಂಕಲನಗಳು ವಚನಗಳನ್ನು, ವಚನಗಳ ಮಧ್ಯದಲ್ಲಿ ಕೊಂಡಿ ರೂಪದ ವಿವರಣಾತ್ಮಕ ಗದ್ಯವನ್ನು ಹೊಂದಿವೆ. ಕೆಲವು ಸಂಕಲನಗಳು ಸಂಸ್ಕೃತ ಶ್ಲೋಕ, ಕಂದ ಮತ್ತು ವೃತ್ತ ಪದ್ಯಗಳಿಂದ ಸಮರ್ಥಿಸಲ್ಪಟ್ಟಿವೆ. ಕೆಲವು ಸಂಕಲನಗಳು ಟೀಕೆಗಳನ್ನು ಒಳಗೊಂಡಿವೆ.

ಬಸವಸ್ತೋತ್ರದ ವಚನ, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು, ಚೆನ್ನಬಸವೇಶ್ವರ ದೇವರ ಸ್ತೋತ್ರದ ವಚನ, ಮಿಶ್ರ ಸ್ತೋತ್ರದ ವಚನ, ಶರಣ ಸ್ತೋತ್ರದ ವಚನ, ಲಿಂಗವಿಕಳಾವಸ್ಥೆಯ ವಚನ, ಲಿಂಗ ಸ್ತೋತ್ರದ ವಚನ, ಚಿತ್ಕ್ರಿಯ ಸಂಗ್ರಹ, ಸಂಬಂಧಾಚರಣೆಯ

---

೧೮. ಡಾ॥ ಎಂ.ಎಂ.ಕಲಬುರ್ಗಿ , ಮಾರ್ಗ-೧ , ಪುಟ ೩೪೭

೧೯. ಡಾ॥ ಎಂ.ಎಂ. ಕಲಬುರ್ಗಿ, ಮಾರ್ಗ-೧ ಪುಟ-೩೪೮

ವಚನ, ಆಚರಣೆಯ ವಚನಗಳು, ವಚನಸಾರ, ಜಂಗಮಾಚರಣೆಯ ಸ್ಥಲದ ವಚನಗಳು, ಲಿಂಗಸಾವಧಾನದ ವಚನಗಳು ಮುಂತಾದ ಸಂಕಲನಗಳು ಯಾವುದೇ ರೀತಿಯ ಸ್ಥಲ ವಿಭಜನೆಯಿಲ್ಲದೆ ಕೇವಲ ಒಂದು ತತ್ವ ಅಥವಾ ಯಾವುದೋ ಒಂದು ಧೋರಣೆಯ ಹಿನ್ನೆಲೆಯಲ್ಲಿ ಸಂಕಲಿಸಿದ ಸಂಕಲನಗಳಾಗಿವೆ. ಸ್ಥಲ ಸಹಿತ ಸಂಕಲನಗಳಾಗಲಿ, ಸ್ಥಲ ರಹಿತ ಸಂಕಲನಗಳಾಗಲಿ ೧೫-೧೬ ನೇ ಶತಮಾನದಲ್ಲಿ ವೀರಶೈವ ಧರ್ಮ ಸಿದ್ಧಾಂತದ ಪುನರುತ್ಥಾನ ಕಾಲದಲ್ಲಿ ಗಣನೀಯ ಕೊಡುಗೆಯನ್ನು ಸಲ್ಲಿಸಿವೆ. ಈ ಎಲ್ಲಾ ಸಂಕಲನಗಳು ತಮ್ಮ ಉದ್ದೇಶ ಈಡೇರಿಕೆಗಾಗಿ ಪುರಾತನರ ವಚನಗಳನ್ನೆ ಆಯ್ದು ನಿರ್ಮಾಣವಾದವುಗಳಲ್ಲ. ಏಕೆಂದರೆ ಸಂಕಲನಕಾರ ತನ್ನ ಛಾಪನ್ನು, ತನ್ನದೇ ಆದ ಆಶಯಗಳನ್ನು ಇದರಲ್ಲಿ ಸೇರಿಸಿದ್ದಾನೆ. ಕೆಲವೊಮ್ಮೆ ತಾನೇ ಕೆಲವೊಂದು ವಚನಗಳನ್ನು ಸಂದರ್ಭಕ್ಕೆ ಸರಿಯಾಗಿ ಕಟ್ಟಿ ಸೇರಿಸಿರಬಹುದಾದ ಪ್ರಸಂಗಗಳು ಇರಬಹುದು. ಮೂಲ ವಚನಗಳನ್ನು ಅಲ್ಪ ಸ್ವಲ್ಪ ವ್ಯತ್ಯಾಸ ಮಾಡಿರಬಹುದು. ಸಂಕಲನಕರ ಏನೇ ಪ್ರಯೋಗ ಮಾಡಿದರೂ ಅದರ ಉದ್ದೇಶ ವೀರಶೈವ ಧರ್ಮದ ಪುನರುಜ್ಜೀವನ ಮತ್ತು ಪ್ರಚಾರವೇ ಆಗಿದೆ.

ವಚನಗಳ ಸಂಪಾದನೆ

ವೀರಶೈವ ಧರ್ಮದ ತಾತ್ವಿಕ ಹಿನ್ನೆಲೆಯಲ್ಲಿ ಕೆಲವು ನಿಶ್ಚಿತ ಸ್ಥಲಗಳನ್ನು ಯೋಜಿಸಿ ಅವುಗಳ ಅಡಿಯಲ್ಲಿ ಒಬ್ಬನೇ ವಚನಕಾರನ ವಚನಗಳನ್ನು, ಇಲ್ಲವೇ ವಿವಿಧ ವಚನಕಾರರ ವಚನಗಳನ್ನು ಸಂಪಾದನ ಕೃತಿಗಳಲ್ಲಿ ಜೋಡಿಸಲಾಗಿರುತ್ತದೆ. ಇಂತಹ ಕೃತಿಗಳು ಸಂಗ್ರಹಗಳಲ್ಲ, ಸಂಪಾದನೆಗಳು. ಇಂತಹ ಸಂಪಾದನ ಕೃತಿಗಳಲ್ಲಿ ವಚನಗಳನ್ನು ಕಲೆಹಾಕುವ ಕೆಲಸ ಮಾತ್ರ ನಡೆದಿರದೆ, ಆ ವಚನಗಳ ಅಂತರಂಗ ಅರಿತು ಒಂದು ತಾತ್ವಿಕ ಹಿನ್ನೆಲೆಯಲ್ಲಿ ಜೋಡಿಸುವ, ಒಂದು ವ್ಯವಸ್ಥೆಗೆ ಒಳಪಡಿಸುವ ಕಾರ್ಯ ನಡೆದಿರುತ್ತದೆ.

ಇಂತಹ ಸಂಪಾದನ ಕೃತಿಗಳು ವಚನ ಸಂಗ್ರಹ, ಸಂಕಲನಗಳಿಗಿಂತ ಪೂರಾ ಭಿನ್ನ ಸ್ವರೂಪವನ್ನು ಪಡೆದು ಕೊಂಡಿರುತ್ತವೆ. ಬಸವಾದಿ ಶರಣರ ವಚನಗಳನ್ನೇ ಆಯ್ದುಕೊಂಡರೂ ಇಲ್ಲಿ ಪಾತ್ರಗಳು ಸೃಷ್ಟಿಯಾಗಿ ವಚನಗಳ ಮೂಲಕ ಮಾತಾಡುವುದು ವಿಶಿಷ್ಟವಾಗಿವೆ. ಘಟನೆಗಳು, ಸಂಘಟನೆಗಳು, ಸನ್ನಿವೇಶ ಸೃಷ್ಟಿಯಿಂದಾಗಿ ವಚನಗಳು ಜೀವ ತುಂಬಿಕೊಳ್ಳುತ್ತವೆ.

ಎಲ್ಲಾ ಸಂಪಾದನೆಗಳು ಅಲ್ಲಮ ಪ್ರಭುದೇವನನ್ನು ಕೇಂದ್ರ ವ್ಯಕ್ತಿಯನ್ನಾಗಿ ಮಾಡಿಕೊಂಡು ಅವನ ಸುತ್ತ ಒಂದು ನಾಟಕೀಯ ಕಥಾ ಹಂದರವನ್ನು ಹೆಣೆಯುತ್ತವೆ. ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೃತಿಗಳೇ ಸಂಪಾದನೆಗಳು. ಇವು ಪುರಾತನರ ವಚನಗಳಿಂದಲೇ ಉದ್ಭವವಾಗಿದ್ದರೂ ಪರಿಪೂರ್ಣತೆ ಪಡೆದ ಸ್ವತಂತ್ರ ಕೃತಿಗಳಂತೆ ಮಹತ್ವವನ್ನು ಪಡೆದುಕೊಂಡಿರುವುದು ಗಮನಿಸತಕ್ಕೆ ಅಂಶವಾಗಿದೆ.

'ಸಂಪಾದನೆ' ಎಂದರೆ 'ಗಳಿಕೆ' ಎಂಬ ಅರ್ಥದ ಜೊತೆ ಕರ್ತೃವಿನ ಮನಸ್ಸಿನಲ್ಲಿ 'ಸಂವಾದ'ಎಂಬ ಅರ್ಥವೂ ಇರಬಹುದೆನಿಸುತ್ತದೆ. ಹೀಗಾಗಿ ಇದಕ್ಕೆ 'ಶೂನ್ಯದ ಗಳಿಕೆ', 'ಶೂನ್ಯವನ್ನು ಕುರಿತ ಸಂವಾದ' ವೆಂದು ಎರಡು ಅರ್ಥಗಳನ್ನು ಹೇಳಬಹುದಾಗಿದೆ. ತಮಿಳಿನಲ್ಲಿ 'ಶೂನ್ಯ ಸಂಭಾಷಣ'ಹೆಸರಿನ ವೀರಶೈವ ಪರಿಭಾಷಾ ಪದವಿರುವುದನ್ನು ಇಲ್ಲಿ ನೆನೆಯಬಹುದು ಎನ್ನುತ್ತಾರೆ. ಡಾ॥ ಎಂ.ಎಂ. ಕಲಬುರ್ಗಿಯವರು. (ಮಾರ್ಗ ೧ ಪುಟ ೩೪೯)

ಶೂನ್ಯ ಸಂಪಾದನೆಗಳು ವೀರಶೈವ ತಾತ್ವಿಕ ಸಿದ್ಧಾಂತಗಳ ಕುರಿತ ಸಂಭಾಷಣ ಪ್ರಧಾನ ಕೃತಿಗಳಾದ್ದರಿಂದ ಸಂಪಾದನೆ ಎಂದರೆ 'ಸಂವಾದ' ಎಂದು ಅರ್ಥ ಸಂವಾದದ ಮೂಲಕ ಆತ್ಮಾನುಭೂತಿಯ ಸಾಕ್ಷಾತ್ಕಾರ ಮಾಡಿಕೊಳ್ಳುವುದಾಗಿದೆ. ಈ ರೀತಿಯ ಮೊದಲ ವಚನಗಳ ಸಂಪಾದನೆಯನ್ನು ಮೊದಲ ಬಾರಿಗೆ ಮಾಡಿದವರು ಶಿವಗಣ ಪ್ರಸಾದಿ ಮಹಾದೇವಯ್ಯ. ಈತನಲ್ಲಿರುವ ಸಂಯೋಜಕ ಪ್ರತಿಭೆ ಅಗಾಧವಾದುದು ಮತ್ತು ಆಶ್ಚರ್ಯಕರವಾದುದು.

ಇವನ ನಂತರ ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣ ಇವರ ಶೂನ್ಯ ಸಂಪಾದನೆಗಳು ಹುಟ್ಟಿಕೊಂಡಿವೆ. ಈ ಎಲ್ಲಾ ಶೂನ್ಯ ಸಂಪಾದನೆಗಳು ಮೂಲತಃ ಸ್ವತಂತ್ರ ಕೃತಿಗಳಂತೆ ಕಂಡುಬರುತ್ತವೆ. ಆದರೆ ಇವು ಪರಿಪೂರ್ಣವಾಗಿ ಸ್ವತಂತ್ರ ಕೃತಿಗಳಲ್ಲ. ಒಂದು ಕೃತಿಯ ಪರಿಷ್ಕರಣವೆಂಬಂತೆ ಮತ್ತೊಂದು ಕೃತಿ ನಿರ್ಮಾಣವಾಗಿರುವುದು ಅವುಗಳ ಅಧ್ಯಯನದಿಂದ ತಿಳಿದು ಬರುತ್ತವೆ. ಇವುಗಳ ಮುಕ್ತಕ ಸಾಹಿತ್ಯವನ್ನು ಸಂಯೋಜಕ ಸಾಹಿತ್ಯವನ್ನಾಗಿ ಪರಿವರ್ತಿಸಿದ ಕೀರ್ತಿ ಇವುಗಳಿಗೆ ಸಲ್ಲುತ್ತದೆ. ಇಲ್ಲಿ ಗುರು–ಲಿಂಗ–ಜಂಗಮ ಮುಂತಾದ ಧಾರ್ಮಿಕ ಸಿದ್ಧಾಂತಗಳ ಪ್ರತಿಪಾದನೆಯ ಜೊತೆಗೆ ಕಾಯಕ, ದಾಸೋಹ, ಮುಂತಾದ ಸಿದ್ಧಾಂತಗಳ ಪ್ರತಿಪಾದನೆಯಿಂದ ಧರ್ಮದ ಜೊತೆಯಲ್ಲಿ ಮಾನವ ಧರ್ಮದ ಗ್ರಂಥಗಳಾಗಿ ಬೆಳೆದವು. ಪ್ರಭುದೇವನ ಪಾತ್ರವನ್ನು ಉದಾತ್ತೀಕರಿಸುವ ಪ್ರಯತ್ನ ಈ ಸಂಪಾದನೆಗಳಲ್ಲಿ ಕಂಡು ಬರುತ್ತದೆ.

೧೫ ನೇ ಶತಮಾನದ ನಂತರದ ಎಲ್ಲಾ ಸಂಪಾದನ ಕೃತಿಗಳು ಮತ್ತು ಕೆಲವು ವೀರಶೈವ ಕಾವ್ಯ ಕೃತಿಗಳು ಜನ್ಮತಾಳಿರುವುದು ಈ ಧೋರಣೆಯನ್ನು ಪ್ರತಿಪಾದಿಸುವುದಕ್ಕಾಗಿ. ಜೊತೆಗೆ ವೀರಶೈವ ಧರ್ಮದ ಪುನರುಜ್ಜೀವನಕ್ಕಾಗಿ.

ಅಲ್ಲಮ ಪ್ರಭುದೇವರನ್ನು ಕೇಂದ್ರವಾಗಿಟ್ಟುಕೊಂಡು ವಿವಿಧ ವಚನಕಾರರ ವಚನಗಳನ್ನು ಪ್ರಶ್ನೋತ್ತರ ರೂಪದಲ್ಲಿ ಅಳವಡಿಸಿರುವುದು 'ಸಂಪಾದನ ಸಾಹಿತ್ಯ'ದ ಪ್ರಧಾನ ಲಕ್ಷಣವಾಗಿದೆ. ಹೀಗೆ ಸಂಪಾದನೆ ಎನ್ನುವುದು ಆರಂಭದಲ್ಲಿ ಕೇವಲ 'ಶೂನ್ಯಸಂಪಾದನೆ'ಗಳಿಗೆ ಮಾತ್ರ ಅನ್ವಯವಾಗಿದ್ದಿತು. ತೋಂಟದ ಸಿದ್ಧಲಿಂಗರ ಕಾಲ ಮತ್ತು ಆತನ ತರುವಾಯದಲ್ಲಿ ಸಂಗ್ರಹಕಾರರು, ಸಂಕಲನಕಾರರು ಮಾಡಿರುವ ವಚನ ಸಂಗ್ರಹ, ವಚನ ಸಂಕಲನ ಕೃತಿಗಳಿಗೂ ಈ ಸಂಪಾದನ ಪದವನ್ನು ಬಳಸಲು ಪ್ರಾರಂಭಿಸಿದರು. 'ಸಂಪಾದನೆ' ಹೆಸರಿನಲ್ಲಿ ಶೀಲಸಂಪಾದನೆ, ಪ್ರಸಾದ ಸಂಪಾದನೆ, ಷಟ್ ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ್ಯ ಸಂಪಾದನೆಯ ವಚನಗಳು, ಅನುಭವ ಜ್ಞಾನ ಸಾರಾಮೃತ ಸಂಪಾದನ ಸ್ತೋತ್ರದ ವಚನಗಳು, ಸಕಲ ಪುರಾತನರ ವಚನ ಕಟ್ಟುಗಳಲ್ಲಿರುವ ಸಂಪಾದನೆಯ ವಚನಗಳು[೨೦]. ಮುಂತಾದ ಕೃತಿಗಳು ದೊರೆತಿದ್ದರೂ ಇವು

---

೨೦. ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಸಕಲ ಪುರಾತನರ ವಚನಗಳ ಕಟ್ಟಿನಲ್ಲಿ ವಚನ ಭಂಡಾರಿ ಶಾಂತರಸನ ವಚನಗಳ ನಂತರ ಬರುವ ' ಸಂಪಾದನೆಯ ವಚನಗಳು' ಈ ಕೃತಿ ಹಾಗು 'ಸುಖ ಸಂಪಾದನೆಯ ವಚನಗಳು' ಎಂಬ ಕೃತಿಯಲ್ಲಿ ಬರುವ ವಚನಗಳು ಅನುಕ್ರಮದಲ್ಲಿ ಒಂದೇ ಆಗಿವೆ. ಸುಖ ಸಂಪಾದನೆಯ ವಚನಗಳು ಕೃತಿಯಲ್ಲಿ ಅಂಬಿಗರ ಚೌಡಯ್ಯ ಸಂಪಾದನೆಗೆ ಸೇರಿದ ವಚನಗಳು ಮಾತ್ರ ಅಧಿಕವಾಗಿವೆ. ಡಾ॥ ಎಂ.ಎಂ. ಕಲಬುರ್ಗಿಯವರು 'ಸಂಪಾದನೆಯ ವಚನಗಳು' ಮತ್ತು 'ಸುಖ ಸಂಪಾದನೆಯ ವಚನಗಳು' ಈ ಕೃತಿಗಳನ್ನು 'ಸಂಕ್ಷಿಪ್ತ ಶೂನ್ಯ ಸಂಪಾದನೆ'ಗಳೆಂದು ಕರೆಯುತ್ತಾರೆ. ಆದರೆ ಬಿ.ಆರ್. ಹಿರೇಮಠ ಅವರು 'ಉಪಶೂನ್ಯ ಸಂಪಾದನೆಗಳೆಂದು ಕರೆಯುತ್ತಾರೆ. (ಆರ್.ಸಿ. ಹಿರೇಮಠ (ಸಂ) ಶಿವದೀಪ್ತಿ ಪುಟ–೩೬೨) ಈ ಎರಡು ಕೃತಿಗಳಲ್ಲಿ ಬರುವ ಯಾವ ವಚನವೂ 'ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯಲ್ಲಿ ಕಂಡುಬರುವುದಿಲ್ಲ. ನುಲಿಯ ಚಂದಯ್ಯ, ಘಟ್ಟಿವಾಳಯ್ಯ, ಆಯ್ದಕ್ಕಿ ಮಾರಯ್ಯ ಸಂಪಾದನೆಗೆ ಸೇರಿದ ವಚನಗಳು ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧಲಿಂಗರ ಶೂನ್ಯ ಸಂಪಾದನೆಗಳಲ್ಲಿ ಕಂಡು ಬರುತ್ತವೆ. ಹಾಗಾಗಿ ಈ ಕೃತಿಗಳು ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯ ನಂತರ ರಚಿತವಾಗಿರಬೇಕು ಎಂದು ತಿಳಿಯಲಾಗಿದೆ.

ಸಹ ಅನ್ಯರ ವಚನ ಸಂಗ್ರಹಗಳಾಗಿವೆ. ಇಲ್ಲಿ ಸಂವಾದ ಶೈಲಿಯಾಗಲಿ, ಪ್ರಭುದೇವರ ನಾಯಕತ್ವವಾಗಲಿ ಇಲ್ಲವಾದ ಕಾರಣ 'ಸಂಪಾದನ ಸಾಹಿತ್ಯ' ದಿಂದ ಹೊರಗುಳಿಯುತ್ತವೆ.

ಶೂನ್ಯ ಸಂಪಾದನ ಕೃತಿಗಳು ಆರಂಭವಾಗುವ ಬಹಳ ಮೊದಲೆ ಬಿಡಿ ಬಿಡಿಯಾದ ಸಂಪಾದನೆಗಳು ದೊರಕುತ್ತವೆ. 'ಪ್ರಭು ಸಂಪಾದನೆ', ಕ್ರಿಯಾ ಸಂಪಾದನೆ'ಗಳು(ಸಿಂಗಿರಾಜ ಪುರಾಣ), 'ಪ್ರಭುದೇವರ ಹಾಗೂ ಅಕ್ಕಮಹಾದೇವಿ'ಯರ ಸಂಪಾದನೆಗಳು (ಅಖಿಲ ಪುರಾತನರ ೨೦೦೦ ವಚನಗಳ ಕಟ್ಟು ವಿಶೇಷಕ್ಕೆ, ಚನ್ನಪ್ಪ ಉತ್ತಂಗಿ ರಾಮ ಸಾಹಿತ್ಯ ಸಂಗ್ರಹ)ಇದಲ್ಲದೆ ಕಲ್ಲು ಮಠದ ಪ್ರಭುದೇವನ ಲಿಂಗಲೀಲಾ ವಿಲಾಸ ಚಾರಿತ್ರದಲ್ಲಿ ಪ್ರಥಮವಾಗಿ ದೊರಕುವ 'ಸಿದ್ಧರಾಮಯ್ಯಗಳ ಗುರು ಕಾರುಣ್ಯ ಸಂಪಾದನೆ' ಸಂಬಂಧವಾದ ಸಂವಾದದ ವಚನಗಳು. ಆದರೆ ಸಂಪಾದನ ಸಾಹಿತ್ಯಕ್ಕೊಂದು ಸಮಗ್ರ ಚೌಕಟ್ಟನ್ನು ಕೊಟ್ಟವರು. ಶಿವಗಣ ಪ್ರಸಾದಿ ಮಹಾದೇವಯ್ಯ, ನಂತರ ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧಲಿಂಗರು ಪರಸ್ಪರ ಪರಿಷ್ಕರಿಸಿ ಶೂನ್ಯ ಸಂಪಾದನೆಗಳನ್ನು ಹೇಳಿದ್ದಾರೆ.[೨೧] ಈ ಶೂನ್ಯ ಸಂಪಾದನ ಕೃತಿಗಳಲ್ಲಿ ವೀರಶೈವ ಧರ್ಮದ ತತ್ವ- ಸಿದ್ಧಾಂತಗಳ ಚರ್ಚೆ ಇದೆ. ಇವು ೧೨ನೇ ಶತಮಾನದ ಶರಣರು ಅಂದು ಅನುಭವ ಮಂಟಪದಲ್ಲಿ ನಡೆಸಿದ ಚರ್ಚೆ–ಸಂವಾದಗಳ ಭದ್ರ ತಳಹದಿಯ ಮೇಲೆ ರೂಪಗೊಂಡಿವೆ.

ವೀರಶೈವ ಸಾಹಿತ್ಯದಲ್ಲಿ ಸಂಪಾದನ ಸಾಹಿತ್ಯವೆಂದರೆ ಶೂನ್ಯ ಸಂಪಾದನೆಗಳ ಪರಿಷ್ಕರಣ ,ಪ್ರತೀಕರಣ, ಪ್ರಸಾರ, ವ್ಯಾಖ್ಯಾನಗಳ ಚಟುವಟಿಕೆಗಳಗೆ ಮಾತ್ರ ಸೀಮಿತವಾಗಿದ್ದೀತು. ೧೫ನೇ ಶತಮಾನದ ತರುವಾಯ ಶೂನ್ಯ ಸಂಪಾದನೆಯ ಮಾದರಿಯಲ್ಲಿಯೆ ಹುಟ್ಟಿಕೊಂಡ 'ಸಂವಾದ ರೂಪ'ದ ಬೇರೆ ಬೇರೆವಚನ ಸಂಪುಟಗಳಿಗೂ,ನಂತರ ಸಂಗ್ರಹ ರೂಪದ,ಸಂಕಲನ ರೂಪದ ವಚನ ಸಂಪುಟಗಳಿಗೂ, 'ಸಂಪಾದನ ಸಾಹಿತ್ಯ'ವೆಂಬ ಹೆಸರು ಬಳಕೆಯಾಗುತ್ತಾ ಬಂದಿದೆ. ಚೆನ್ನಂಜೇದೇವ ಯಾವುದೇ ಸಂಪಾದನ ರೂಪದ ವಚನ ಸಂಪುಟ ರಚಿಸದಿದ್ದರೂ ಅವರು ತಮ್ಮನ್ನು ಸಂಪಾದನೆಯ ಚೆನ್ನಂಜೇದೇವ ಎಂದು ಕರೆದು ಕೊಂಡಿರುವುದನ್ನು ಗುರುತಿಸಬಹುದು.


ಸಂಕಲನ ರೂಪದ ವಚನ ಸಂಪುಟಗಳನ್ನು ಪುನರಚಿಸುವ ವೀರಶೈವ ವಿರಕ್ತ ಸ್ವಾಮಿಗಳ ಒಂದು ಸಂಪ್ರದಾಯವೇ ನಿರ್ಮಾಣವಾಗಿ ಮುರುಘ ಸಮಯ, ಚೀಲಾಳ ಸಮಯ, ಕುಮಾರ ಸಮಯ, ಕೆಂಪಿನ ಸಮಯ ಇವುಗಳ ಜೊತೆಯಲ್ಲಿ 'ಸಂಪಾದನ ಸಮಯ' ಎಂಬ ಹೆಸರಿನ ಒಂದು ಸಂಪ್ರದಾಯವೆ[೨೨] ಜನ್ಮ ಪಡೆದಿರುವುದು ವಿಶೇಷಸಂಗತಿ. ಅವರವರ ದೃಷ್ಟಿಕೋನ, ಆಧ್ಯಾತ್ಮಿಕ ನಿಲುವು, ತಾತ್ವಿಕ ನಿಷ್ಠೆಗೆ ಅನುಗುಣವಾಗಿ ಷಟ್ ಸ್ಥಲ,ಏಕೋತ್ತರ ಶತಸ್ಥಲ,ಜೊತೆಗೆ ವಿಧ ವಿಧವಾದ ಮಿಶ್ರಸ್ಥಲದ ಸಂಕಲನ ಕೃತಿಗಳು, ಸಂಪಾದನೆಗಳು ಅಪಾರವಾಗಿ ರಚನೆಗೊಂಡವು.

---

೨೧. ಡಾ॥ ಆರ್.ಸಿ. ಹಿರೇಮಠ(ಸಂ) 'ಶಿವದೀಪ್ತಿ'– ಪುಟ–೧೩೨

೨೨. ಸಂಪಾದನೆಯ ಬೋಳ ಬಸವ, ಸಂಪಾದನೆಯ ಚೆನ್ನಂಜೇದೇವ, ಸಂಪಾದನೆಯ ಪರ್ವತೇಂದ್ರ, ಸಂಪಾದನೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯ, ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ಮರಿಸಂಗಯ್ಯ – ಇತ್ಯಾದಿ.

ಹಿಂದೆಂದೂ ಕಾಣದ ರೀತಿಯಲ್ಲಿ ಸಂಪಾದನ ಕಾರ್ಯ ಈ ಕಾಲದಲ್ಲಿ ನಡೆದಿರುವುದರಿಂದ ಈ ಕಾಲವನ್ನು ಸಂಪಾದನ ಸಾಹಿತ್ಯದ ಸುವರ್ಣ ಯುಗವೆಂದು ಕರೆಯುತ್ತಾರೆ. ಹೀಗೆ ಸಾಗಿ ಬಂದ ವೀರಶೈವ ಸಂಪಾದನ ಸಾಹಿತ್ಯವನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಭಜಿಸಬಹುದು.[೨೩]



೨೩. ಡಾ॥ ವೀರಣ್ಣ ರಾಜೂರ (ಸಂ) ಎಳಮಲೆ ಗುರುಶಾಂತದೇವ, ವಚನ ಸಂಕಲನಗಳು, ಪ್ರಸ್ತಾವನೆ ಪುಟ–೧೦ * ಶೂ.ಸಂ= ಶೂನ್ಯ ಸಂಪಾದನೆಗಳು • ನೂ.ಸ್ಥ= ನೂರೊಂದು ಸ್ಥಲಗಳು..

ಅಧ್ಯಾಯ –೬

ವಚನ ಸಂಕಲನ ಸಾಹಿತ್ಯದ ವಸ್ತು ವೈವಿಧ್ಯತೆ

ಅಧ್ಯಾಯ –೬

ವಚನ ಸಂಕಲನ ಸಾಹಿತ್ಯದ ವಸ್ತು ವೈವಿಧ್ಯತೆ

ಸಾಹಿತ್ಯವೆಂಬುದು ಜನರಿಗಾಗಿ ಮೂಡಿದ ವಾಙ್ಮಯ. ಅದು ಜನ ಜೀವನದಲ್ಲಿ ಆನಂದವನ್ನು ತುಂಬಿ, ಜೀವನದಲ್ಲಿ ಊರ್ದ್ವ ಪ್ರವೃತ್ತಿಗೆ ಸಹಾಯಕವಾಗಿ ನಿಲ್ಲುವುದು. ಅಂತಹ ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯ ತನ್ನದೇ ಆದ ಹಿರಿಮೆ–ಗರಿಮೆಗಳನ್ನು ಪಡೆದುಕೊಂಡು ವಿಶ್ವಹಿತಕಾರಿಯಾಗಿ ಕಂಗೊಳಿಸುತ್ತಿದೆ. ವಚನಗಳನ್ನು ಸಾಹಿತ್ಯವೆಂದು ಹೇಳುವಂತೆ, ಶಾಸ್ತ್ರವೆಂದೂ ಹೇಳಬಹುದು. ವಚನಗಳಲ್ಲಿ ಸಾಹಿತ್ಯ ಮತ್ತು ಶಾಸ್ತ್ರದ ಉಭಯ ಲಕ್ಷಣಗಳು ಅಡಕವಾಗಿವೆ.

ಅನುಭಾವ ಸಾಹಿತ್ಯವೆಂದೆ ಪ್ರಸಿದ್ಧವಾಗಿರುವ ವಚನ ಸಾಹಿತ್ಯ ಹನ್ನೆರಡನೆ ಶತಮಾನದಲ್ಲಿ ಸಮೃದ್ಧವಾಗಿ ಬೆಳೆದು ನಿಂತಿತು. ಶರಣ–ಶರಣೆಯರು ತಮ್ಮ ಸಾಧನೆಯ ಕುಲುಮೆಯಲ್ಲಿ ಪರಿಶುದ್ಧಗೊಳಿಸಿದ ಅಮೃತವಾಣಿಯನ್ನು ನಿತ್ಯ ಅನುಭವ ಮಂಟಪದಲ್ಲಿ ಮಂಡಿಸಿ, ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಇಂತಹ ವಚನಗಳಿಗೆ ಮೂಲಸೆಲೆಯಾಗಿದ್ದುದು ಮಾನವ ಲೋಕದ ಸಾರ್ವಕಾಲಿನ ಸಮಷ್ಟಿ ಬದುಕಿನ ವಿಕಾಸಕ್ಕೆ, ಪರಿಪೂರ್ಣತೆಗೆ ಬೇಕಾದ ಅನಿವಾರ್ಯ ಮೌಲ್ಯಗಳು. ಮಹತ್ವಾಕಾಂಕ್ಷೆಯ ಹೋರಾಟಕ್ಕೆ ಇಳಿದ ಶರಣರ ಜೀವನ ಹಾಗು ದರ್ಶನಗಳ ಹರಳು ಗಟ್ಟಿದ ಜೀವಧಾತುವಾಗಿ, ಜೀವಧ್ವನಿಯಾಗಿ, ವೀರಶೈವ ಧರ್ಮದ ಪ್ರಮಾಣಗಳಾಗಿ, ಅವರ ಸೃಜನ ಶೀಲತೆಗೆ ಸಾಕ್ಷಿಯಾಗಿ ರೂಪಗೊಂಡದ್ದು ವಚನ ಸಾಹಿತ್ಯ. ಎರಡನೆ ಘಟ್ಟದ ಕಾಲದಲ್ಲಿ ವಚನ ಸಂಬಂಧಿ ಚಟುವಟಿಕೆಗಳು ರಚನೆಗಷ್ಟೆ ಸೀಮಿತವಾಗಲಿಲ್ಲ. ಸಂಗ್ರಹ, ಸಂಕಲನ, ಸಂಪಾದನ ಕಾರ್ಯ, ವ್ಯಾಖ್ಯಾನ, ಧರ್ಮ ಪ್ರಸಾರಗಳು ತ್ವರಿತ ಗತಿಯಲ್ಲಿ ನಡೆದವು.

ತೋಂಟದ ಸಿದ್ಧಲಿಂಗನು ತಾನೇ ವಿರಕ್ತನಾಗಿದ್ದುಕೊಂಡು, ತನ್ನ ಶಿಷ್ಯರ ಜೊತೆ ಸಂಚರಿಸಿ ಧರ್ಮ ಪ್ರಚಾರವನ್ನು ಕೈಗೊಂಡನು. ಮಠಮಂದಿರಗಳ ವಿರೋಧಿಯಾದ ವೀರ ಶೈವವು ತನ್ನ ಕ್ರಾಂತಿಕಾರಕ ಚೈತನ್ಯವನ್ನು ಕಳೆದುಕೊಂಡು ಇತರ ಧರ್ಮಗಳಂತೆಯೇ ವಿಧಿ ನಿಷೇಧ ಕರ್ಮಾಚರಣೆಗಳನ್ನು ಬೆಳಸಿಕೊಂಡು ಒಂದು ಜಡ ಧರ್ಮವಾಗುತ್ತ ಬಂದಿತು. ಸಮಾಜ ಮುಖಿಯಾಗಬೇಕಿದ್ದ ವಚನ ಸಾಹಿತ್ಯ, ಧರ್ಮಮುಖಿಯಾಯಿತು. ಮಠಾಧೀಶರ, ಧರ್ಮಗುರುಗಳ ಸುತ್ತಲೆ ಗಿರಕಿ ಹೊಡೆಯಲಾರಂಭಿಸಿತು. ಹಾಗಾಗಿ ವೀರಶೈವ ಧರ್ಮಕ್ಕೆ ಮತ್ತು ವಚನ ಸಾಹಿತ್ಯಕ್ಕೆ ಅಷ್ಟಾವರಣ, ಪಂಚಾಚಾರ, ಸ್ತೋತ್ರ, ಷಟ್‌ಸ್ಥಲಾಚರಣೆಯಂತಹ ವಿಚಾರಗಳು ಪ್ರಮುಖವಾದವು. ಈ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರತಿಯೊಂದು ಸಂಕಲನ ಕೃತಿಗಳು ವೀರಶೈವ ಧರ್ಮದ ಒಂದೊಂದು ಮುಖವನ್ನು ಪ್ರತಿಪಾದಿಸುವುದಲ್ಲದೆ, ಸಂಕಲನಕಾರನ ಮನೋಧರ್ಮ, ಹಾಗೂ ಆಧ್ಯಾತ್ಮಿಕ ನಿಲುವನ್ನು ವ್ಯಕ್ತಪಡಿಸುತ್ತವೆ. ಇಂತಹ ಸಂದರ್ಭದಲ್ಲಿ ಸಂಕಲನಗೊಂಡ ಸಂಕಲನ ಕೃತಿಗಳ ಕೇಂದ್ರ ಪ್ರಜ್ಞೆಯೂ ಆಧ್ಯಾತ್ಮಿಕವಾಯಿತು. ವೀರಶೈವ ಧರ್ಮದ ತತ್ವ ಸಿದ್ಧಾಂತಗಳನ್ನು ಜನ ಸಾಮಾನ್ಯರ ಅರಿವಿಗೆ ತಂದು ಕೊಡುವ ಅಗತ್ಯತೆ ಇತ್ತು. ಅದಕ್ಕಾಗಿ ಅವರು ಸಹಜವಾಗಿಯೆ ವಚನಗಳ ಮೊರೆ ಹೋಗಬೇಕಾಯಿತು. ಆದ್ದರಿಂದ ಶರಣರು ತತ್ವಜ್ಞಾನದ ಹಿನ್ನೆಲೆಯಲ್ಲಿ ವಚನಗಳನ್ನು ಗ್ರಹಿಸುವ, ವಿಶ್ಲೇಷಿಸುವ, ಶಾಸ್ತ್ರೀಯ ಚೌಕಟ್ಟಿಗೆ ಒಳಪಡಿಸುವ ಕಾರ್ಯದಲ್ಲಿ ನಿರತರಾದರು.

ಇವರು ಕೈಗೆತ್ತಿಕೊಂಡಿದ್ದ ಸಂಕಲನ ಕಾರ್ಯ ನಡೆದದ್ದೆ ಮುಖ್ಯವಾಗಿ ಧಾರ್ಮಿಕ ಪರಿಸರದಲ್ಲಿ. ಈ ಹಿನ್ನೆಲೆಯಲ್ಲಿ ಸಂಕಲನಕಾರರು ಆರಿಸಿಕೊಂಡ ವಚನಗಳ ವಸ್ತುವಿನ ತಾತ್ವಿಕ ನೆಲೆಯಲ್ಲಿಯೆ ವೈವಿಧ್ಯತೆ ಕಂಡುಬರುತ್ತದೆ. ಇದರ ಫಲವೇ ಬಸವಣ್ಣನವರ ಷಟ್‌ಸ್ಥಲ ವಚನಗಳು, ಚೆನ್ನಬಸವಣ್ಣನವರ ಷಟ್‌ಸ್ಥಲ ವಚನಗಳು, ಷಟ್‌ಸ್ಥಲ ಸ್ತೋತ್ರದ ವಚನಗಳು, ಮುಂತಾದ ಸಂಕಲನಗಳು ಹುಟ್ಟಿಕೊಂಡವು. ಹೀಗೆ ಬೇರೆ ಬೇರೆ ತಾತ್ವಿಕ ವಿಚಾರಗಳನ್ನು ಇಟ್ಟುಕೊಂಡು ಸಂಕಲನ ಕೃತಿಗಳು ನಿರ್ಮಾಣವಾಗಿವೆ. ಈ ಕಾಲ ಘಟ್ಟದಲ್ಲಿ ಬಂದ ವಚನ ಸಂಕಲನಗಳ ವಸ್ತುವಿನ ಹಿನ್ನೆಲೆಯಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಮಾಡಬಹುದು.

೧. ಸ್ತೋತ್ರ (ಸ್ತುತಿ) ರೂಪದ ಸಂಕಲನಗಳು

೨. ತತ್ವ ಪ್ರಧಾನ ಸಂಕಲನಗಳು

೧. ಸ್ತೋತ್ರ (ಸ್ತುತಿ) ರೂಪದ ಸಂಕಲನಗಳು

ಜಗತ್ತಿನ ಸೃಷ್ಟಿಯ ಹಿಂದೆ ಕಾಣದ ಶಕ್ತಿಯೊಂದಿದೆ. ಆ ಶಕ್ತಿಯನ್ನು ಭಗವಂತ ಎಂದು ಗುರುತಿಸಿದ್ದಾರೆ. ಅಂತಹ ಶಕ್ತಿರೂಪದ ಭಗವಂತನನ್ನು ಆರಾಧಿಸಿದರೆ ಒಳ್ಳೆಯದಾಗುತ್ತದೆ ಎಂಬ ಪರಿಕಲ್ಪನೆ ಈ ನಾಡಿನ ಜನರಲ್ಲಿ ಮನೆ ಮಾಡಿದೆ. ಭಾರತ ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ದಿನ ಬೆಳಗಾದರೆ ದೇವರ ನಾಮ ಹಾಡುವ, ಪೂಜೆ, ವ್ರತ, ನಿಯಮ, ಆರತಿ, ಅಕ್ಷತೆಗಳಿಂದ ಪೂಜಿಸುವ ಕ್ರಿಯೆ ಮತ್ತು ಜನರ ಅಂತರಾಳದಿಂದ ಹೊರಹೊಮ್ಮಿ ಬಾಯ್ತುಂಬಿ ಬರುವ ಭಕ್ತಿಗೀತೆಗಳ ನಡುವೆ ಸಮಾಜದಿಂದ ಬೇರ್ಪಡಿಸಲಾಗದ ಸಂಬಂಧ ಇದೆ.

ಭಕ್ತ, ಭಗವಂತನನ್ನು ಮನದುಂಬಿ ಹಾಡಿ ಹೊಗಳುವ ಈ ವಿಧಾನದಲ್ಲಿ ಭವಬಂಧನದಿಂದ ಬಿಡುಗಡೆ ಪಡೆಯುವ ಯೋಚನೆ-ಯಾತನೆಗಳು ಕಾಣಿಸಿಕೊಳ್ಳುತ್ತವೆ. ಇದು ದೈವಿಕ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಒಳಗೊಂಡಿದೆ. ಕನ್ನಡದಲ್ಲಿ ಪಾಡು, ಮೇಲ್ವಾಡು ಬಾಜನಗಬ್ಬಗಳಿದ್ದವು. ಆಮೇಲೆ ಶರಣರಲ್ಲಿ ಕೆಲವರು ಪದಗಳನ್ನು ಕಟ್ಟಿಹಾಡಿದರು. ಅದು ಹರಿದಾಸರ ಬಾಯಲ್ಲಿ ಹರಿಸ್ತುತಿಯ ಕೀರ್ತನೆಯಾಯಿತು. ಇಂಥ ಸ್ತುತಿ ಪದಗಳು ಸಂಸ್ಕೃತದಲ್ಲಿ ಹೇರಳವಾಗಿವೆ. ಶಿವಸ್ತುತಿ, ಹರಿಸ್ತುತಿ, ಬ್ರಹ್ಮಸ್ತುತಿ ಇತ್ಯಾದಿಗಳು ದೇವಾದಿದೇವತೆಗಳ ಕಾರ್ಯ ಸಾಮರ್ಥ್ಯವನ್ನು ಹೊಗಳುವ, ಗುಣ-ಗೌರವಗಳನ್ನು ಕಾಪಾಡುವ ಜೊತೆಗೆ ಭಕ್ತನಲ್ಲಿರುವ ದೈನ್ಯಗುಣವನ್ನು ಪ್ರಕಟಿಸುವ ಕೆಲಸ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಕನ್ನಡದಲ್ಲಿಯೂ ಇದು ಅನುಚಾನವಾಗಿ ನಡೆದು ಬಂದಿದೆ. ಕನ್ನಡ ಸಾಹಿತ್ಯವು ಧರ್ಮವನ್ನು ಆಶ್ರಯಿಸಿಕೊಂಡೆ ಬಂದಿರುವುದರಿಂದ ಇಲ್ಲಿಯೂ ಜಿನಸ್ತುತಿ, ಶಿವಸ್ತುತಿ ಮತ್ತು ಹರಿಸ್ತುತಿ ಪರಕೃತಿಗಳು ರಚನೆಯಾಗಿವೆ. ಹನ್ನೆರಡನೆಯ ಶತಮಾನದಲ್ಲಿ ಬಂದ ವಚನಗಳು ವಸ್ತು ವೈವಿದ್ಯ, ಭಾಷಾ ವೈಶಿಷ್ಯ ಮತ್ತು ಭಾವನಿರ್ಭರತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಗ್ರ ಮನುಕುಲದ ಭಾವ-ಭಾಷೆ ಮತ್ತು ಆಶೆ -ಆಕಾಂಕ್ಷೆಗಳನ್ನು ಅಭಿವ್ಯಕ್ತಪಡಿಸಿದವು. ಈ ಮೊದಲು 'ಸ್ತುತಿ ಪದ್ಯ' ವಾಗಿದ್ದವುಗಳು ವಚನ ಮತ್ತು ವಚನಗಳ ನಂತರ 'ಸ್ತೋತ್ರ ಪದ್ಯ'ವೆಂದು ಕರೆಸಿಕೊಂಡು ಸಾಹಿತ್ಯರೂಪ ಪಡೆದು ನಿಂತಿರುವುದು ಕಂಡುಬರುತ್ತದೆ.

ವೇದಾಗಮಗಳಿಗಿಂತಲೂ ಪ್ರಾಚೀನತೆಯನ್ನು ಹೊಂದಿರುವ 'ಸ್ತುತಿ'ಯು ಅಂದು ಕೇವಲ ದೇವ ಸಂಪ್ರೀತಿಗಾಗಿ ಮಾತ್ರವಿತ್ತು. ಜೈನ-ವೈಷ್ಣವ ಪಂಥಗಳಲ್ಲಿಯೂ ಸ್ತುತಿ, ಕೀರ್ತನ ಕಾರ್ಯದಲ್ಲಿ ಇದು ವ್ಯಾಪಕವಾಗಿ ಹರಡಿಕೊಂಡಿತ್ತು. ಭಕ್ತ-ಭಗವಂತನನ್ನು ಹೊಗಳುವ ಕಾರ್ಯದ ಅಡಿಯಲ್ಲಿ

ಉಳಿದುಕೊಂಡು ಬಂದಿತ್ತು. ಆದರೆ ವೀರಶೈವರಲ್ಲಿ ಈ ಸ್ತುತಿ ಕಾರ್ಯವು ವ್ಯಕ್ತಿಗಳನ್ನು, ಶರಣರನ್ನು, ಶಿವನನ್ನು ಸ್ತುತಿಸುತ್ತಲೆ ತನ್ನ ವ್ಯಾಪ್ತಿಯನ್ನು ಮೀರಿ ತತ್ವ ಸ್ತುತಿಯವರೆಗೂ ವ್ಯಾಪಿಸಿಕೊಂಡುದು ಕೇವಲ ವಿಶೇಷ ಮಾತ್ರವಾಗಿರದೆ, ವೀರಶೈವ ಪರಂಪರೆಯ ಹಿರಿಮೆಯನ್ನು, ಜನ ಹೃದಯದ ವಿಶಾಲತೆಯನ್ನು ಹೇಳುವುದಾಗಿದೆ.

ಸ್ತುತಿ ಪರವಾದ ವಚನಗಳಲ್ಲಿ ವ್ಯಕ್ತಿಸ್ತುತಿಯನ್ನೊಳಗೊಂಡ ವಚನಗಳು, ಶಿವಸ್ತುತಿಯನ್ನೊಳಗೊಂಡ ವಚನಗಳು ಮತ್ತು ತತ್ವ ಸ್ತುತಿ ಪರವಾದ ವಚನಗಳಿರುವುದು ಕಾಣಬರುತ್ತದೆ. ಸ್ತೋತ್ರದ ವಚನಗಳು ಭಕ್ತ-ಭಗವಂತನ ನಡುವಿನ ಆಧ್ಯಾತ್ಮಿಕ ಅನುಸಂಧಾನವನ್ನು ಪ್ರಕಟಿಸುತ್ತವೆ. ಇದರಿಂದ ಸ್ತೋತ್ರ ಪದಕ್ಕೆ ವಿಶಿಷ್ಟವೂ, ವಿಶಾಲವೂ ಆದ ಅರ್ಥವನ್ನು ವೀರಶೈವರು ಕೊಟ್ಟದ್ದು ಕಂಡುಬರುತ್ತದೆ.

ವಚನ ಸಾಹಿತ್ಯದಲ್ಲಿ 'ಸ್ತೋತ್ರದ ವಚನಗಳಿಗೆ'[೧] ವಿಶಿಷ್ಟ ಸ್ಥಾನವಿದೆ. ತಮ್ಮ ವ್ಯಕ್ತಿತ್ವ ಶ್ರೀಮಂತಿಕೆ, ಸಾಧನೆ, ಸಿದ್ಧಿ, ಅಸಾಮಾನ್ಯ ಕಾರ್ಯಗಳಿಂದ ಮಹಿಮಾನ್ವಿತರೆನಿಸಿದ ಶಿವಶರಣರನ್ನು, ಶಿವನನ್ನು ಹಾಗು ಶಿವತತ್ವವನ್ನು ಕುರಿತು ವಚನಕಾರರು ವ್ಯಕ್ತಪಡಿಸಿದ ಭಕ್ತಿ, ಗೌರವ-ಪ್ರೀತಿ-ವಿಶ್ವಾಸ ತುಂಬಿದ ನುಡಿಗಳೇ ಸ್ತೋತ್ರದ ವಚನಗಳೆಂದು ಪ್ರಸಿದ್ಧಿ ಪಡೆದಿವೆ. ಅವುಗಳನ್ನು ವಿಷಯಾನುಗುಣವಾಗಿ ಸಂಗ್ರಹಿಸುವ ಕೆಲಸವನ್ನು ವೀರಶೈವ ಶರಣರು ಮಾಡಿದ್ದಾರೆ.

೧.	ಬಸವಸ್ತೋತ್ರದ ವಚನಗಳು	– ಸಂ.ಚೆನ್ನಂಜೇದೇವ – ಸಂ. ಬೋಳಬಸವ – ಎಳಮಲೆ ಗುರುಶಾಂತದೇವ
೨.	ಪ್ರಭುದೇವರ ಸ್ತೋತ್ರದ ವಚನಗಳು	– ಸಂ.ಸಿದ್ಧವೀರಣ್ಣೊಡೆಯ
೩.	ಚೆನ್ನಬಸವೇಶ್ವರ ಸ್ತೋತ್ರದ ವಚನಗಳು	– ಸಂ.ಸಿದ್ಧವೀರಣ್ಣೊಡೆಯ
೪.	ಶರಣ ಸ್ತೋತ್ರದ ವಚನಗಳು	– ಎಳಮಲೆಯ ಗುರುಶಾಂತದೇವ
೫.	ಮಿಶ್ರ ಸ್ತೋತ್ರದ ವಚನಗಳು	– ಎಳಮಲೆಯ ಗುರುಶಾಂತದೇವ
೬.	ಶಿವಮಹಿಮಾಸ್ತೋತ್ರದ ವಚನಗಳು	– ವೀರಸಂಗಯ್ಯ
೭.	ಶಿವನ ಬಿರುದಾವಳಿ ಸ್ತೋತ್ರದ ವಚನಗಳು	– ಸಂಪಾದನೆಯ ಸಿದ್ಧವಿರಣ್ಣೊಡೆಯ
೮.	ಷಟ್‌ಸ್ಥಲ ಸ್ತೋತ್ರದ ವಚನಗಳು	– ಎಳಮಲೆಯ ಗುರುಶಾಂತದೇವ
೯.	ಲಿಂಗ ವಿಕಳಾವಸ್ಥೆಯ ವಚನಗಳು	– ಎಳಮಲೆಯ ಗುರುಶಾಂತದೇವ
೧೦.	ಎಲ್ಲಾ ಪುರಾತರ ಸ್ತೋತ್ರದ ವಚನಗಳು	– ಅಜ್ಞಾತ ಸಂಕಲನಕಾರ
೧೧.	ಲಿಂಗಸ್ತೋತ್ರದ ವಚನಗಳು	– ಸಂ. ಸಿದ್ಧವೀರಣ್ಣೊಡೆಯ
೧೨.	ಅನುಭವ ಜ್ಞಾನ ಸಾರಾಮೃತ ಸಂಪಾದನ ಸ್ತೋತ್ರ–ಪರ್ವತೇಶ	

ಇವು ಇಂದು ದೊರೆತಿರುವ ಸ್ತೋತ್ರದ ವಚನ ಕೃತಿಗಳು.

---

೧. ಸ್ತೋತ್ರ ಸಾಹಿತ್ಯ, ತ್ರಿಪದಿ, ಷಟ್ಪದಿ, ಕಂದ, ಚೌಪದಿ, ಸ್ವರವಚನ, ತಾರಾವಳಿ, ಅಷ್ಟಕ, ಶತಕ ಮೊದಲಾದ ರೂಪಗಳಲ್ಲಿಯೂ ದೊರೆಯುತ್ತದೆ.

೧. ಬಸವಸ್ತೋತ್ರದ ವಚನ ಸಂಕಲನಗಳು

ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಪ್ರಭಾವ ಸಾಮಾಜಿಕ ಜೀವನದ ಮೇಲಾದುದರಿಂದ ಆಯಾ ಮತಧರ್ಮದ ಒಳಗೆ ಹುಟ್ಟಿಕೊಂಡ ಸಾಹಿತ್ಯದ ಮೇಲೂ ಆಗಿದೆ. ವಚನ ಸಾಹಿತ್ಯ, ದಾಸ ಸಾಹಿತ್ಯ ಆಯಾ ಕಾಲದ ಅಂತಹ ಫಲಗಳೇ ಆಗಿವೆ. ಪುರಂದರ ದಾಸ, ಕನಕದಾಸ ಮುಂತಾದ ದಾಸ ಶ್ರೇಷ್ಠರು, ಕವಿಗಳು ಶ್ರೀ ಹರಿಯ ಮಹಿಮೆಯನ್ನು ಹಾಡಿ ಆನಂದಿಸಿದರು. ಶ್ರೀಪಾದರಾಜರ ಹಾಗೂ ವ್ಯಾಸರಾಜರ ಗುರು ಶಿಷ್ಯ ಸಂಬಂಧ ದಾಸ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿರುವುದನ್ನು ನೋಡಬಹುದು. ಈ ಸಂಬಂಧವೆ ಮುಂದೆ ಒಂದು ಪರಂಪರೆಯಾಗಿ ಗುರು ಮಹಿಮೆಯನ್ನು, ಗುರುಪರಂಪರೆಯನ್ನು ಶಿಷ್ಯನಾದವನು ಸ್ತುತಿ ಮಾಡುವುದು ದಾಸಸಾಹಿತ್ಯದ ಒಂದು ಭಾಗವಾಗಿಯೆ ಬೆಳೆಯಿತು. ಈ ಪರಂಪರೆಯ ಪ್ರಭಾವ ಈ ಕಾಲದ ಶರಣರ ಮೇಲಾಗಿದೆ. ಬಸವಾದಿ ಶರಣರ ಕಾಲದಲ್ಲಿ ಗುರುಮಹಿಮೆಯನ್ನು, ಗುರುಪರಂಪರೆಯನ್ನು ಕೊಂಡಾಡುವುದು ಹಾಗು ಮಠ ಮಂದಿರಗಳ ಪ್ರಭಾವದಿಂದ ದೂರವೇ ಉಳಿಯಿತು. ಆದರೂ ಉನ್ನತ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದ, ಮಹಾಮಹಿಮರನ್ನು ವಚನಗಳ ಮೂಲಕ ಸ್ತುತಿಸುವ ಪರಿಪಾಠವಿದ್ದೆ ಇತ್ತು. ಆದರೆ ಅದು ವ್ಯಕ್ತಿ ಪೂಜಿತವಾಗಿರಲಿಲ್ಲ. ಈ ಪರಂಪರೆ ತೋಂಟದಾರ್ಯರ ಕಾಲದಲ್ಲಿ ಆರಂಭವಾಯಿತು.

ತೋಂಟದ ಸಿದ್ಧಲಿಂಗರು ಮುಂದೆ ತಮ್ಮ ದೊಡ್ಡ ಶಿಷ್ಯ ಪರಂಪರೆ ಮತ್ತು ಮಠ ಪರಂಪರೆಯನ್ನು ಸೃಷ್ಟಿಸಿದ್ದಲ್ಲದೆ ಧರ್ಮಕೇಂದ್ರಿತ ವಚನ ಸಾಹಿತ್ಯಕ್ಕೆ ಅಪೂರ್ವವಾದ ವೇದಿಕೆಯನ್ನು ನಿರ್ಮಿಸಿಕೊಟ್ಟರು. ಈ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಕೊಂಡಾಡುವ ಸ್ತೋತ್ರದ ವಚನ ಸಂಕಲನಗಳು ಕಂಡು ಬಂದವು. ಇವುಗಳಲ್ಲಿ 'ಬಸವಸ್ತೋತ್ರದ ವಚನ' ಸಂಕಲನಗಳು ಪ್ರಮುಖವಾದವು. ಈ ಸಂಕಲನಗಳ ಮೂಲ ಉದ್ದೇಶ ಬಸವಣ್ಣನನ್ನು ಸ್ತುತಿಸುವುದಾಗಿದೆ. ಅವನ ಗುಣಗಾನ ಮಾಡುವುದು, ಅವನ ಮಹಿಮೆಯನ್ನು ಕೊಂಡಾಡುವುದೆ ಆಗಿದೆ. ಉಳಿದ ಶರಣರಿಗೆಲ್ಲ ಬಸವಣ್ಣ ಬಹುದೊಡ್ಡ ವ್ಯಕ್ತಿ. ಈತ ಹನ್ನೆರಡನೆ ಶತಮಾನದ ನಾಯಕ ಮತ್ತು ಕೇಂದ್ರ ವ್ಯಕ್ತಿ. ನ್ಯಾಯ ನಿಷ್ಠುರಿ. ಚಕ್ರವರ್ತಿಯ ಮೂಗಿನ ಕೆಳಗೆ ತನ್ನ ಕ್ರಾಂತಿಕಾರಿ ಚಟುವಟಿಕೆಗಳನ್ನು ಸಾಗಿಸಿದವನು. ಬಸವಣ್ಣ ತಾನು ನಾಯಕನಲ್ಲವೆಂಬುದನ್ನು ನಿರಾಕರಿಸುತ್ತಲೇ ಒಂದು ರೀತಿಯ ತನ್ನ ಜನರ ನಾಯಕನಾಗಿ ಮುನ್ನಡೆಸಿದವನು. ಅವನ ಬದುಕು ಮತ್ತು ಅವನ ವಚನಗಳ ಅನುಕರಣೆ ಅನೇಕ ಸಾಮಾನ್ಯ ವಚನಕಾರರಲ್ಲಿ ಯಥೇಷ್ಟವಾಗಿದೆ. ಈತ ಹಲವು ಮುಖಗಳುಳ್ಳ ಅಪೂರ್ವ ಮನುಷ್ಯ. ದೈವಭಕ್ತ. ಸಾಮಾಜಿಕ ಆಂಧೋಲನಕಾರ. ಮಾನವತಾವಾದಿ. ಇವುಗಳೆಲ್ಲ ಅವನಲ್ಲಿ ಮೇಳೈಸಿ ಅವನನ್ನು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಥಾಯಿಗೊಳಿಸಿವೆ.

ಬಸವಣ್ಣನ ಸಮಕಾಲೀನ ಹಾಗು ಮುಂದಿನ ವಚನಕಾರರು ಹಾಗು ಕವಿಗಳು ಈತನನ್ನು ಹಾಡಿ ತಣಿದಿದ್ದಾರೆ. 'ಶ್ರೀಗುರು ಬಸವಲಿಂಗಾಯ ನಮಃ' ಎಂಬುದು ಸಿದ್ಧೋಕ್ತಿಯಾಗಿ ಸಾವಿರಾರು ಹಸ್ತಪ್ರತಿಗಳ ಆರಂಭದಲ್ಲಿ ಕಾಣಿಸಿಕೊಂಡಿದೆ. ಬಸವಣ್ಣನನ್ನು ಅಂದಿನ ಶರಣರು ನಾಯಕನೆಂದು, ಆದರ್ಶ ಪುರುಷನೆಂದು ಗೌರವಿಸುತ್ತಾರೆ. ಆದರೆ ವ್ಯಕ್ತಿ ಪೂಜೆ, ಮಂದಿರ ಪೂಜೆಗಳನ್ನು ತಿರಸ್ಕರಿಸಿದ ಬಸವಣ್ಣ ಧರ್ಮವನ್ನು ಅತ್ಯಂತ ಸರಳಗೊಳಿಸಿದ. ಮಡಿಮೈಲಿಗೆ, ಜಾತಿ, ವರ್ಣ ಮುಂತಾದ ದುಷ್ಟ ನಡೆಗಳನ್ನು ಬಲವಾಗಿ ವಿರೋಧಿಸಿದವನು ಬಸವಣ್ಣ.

ವೀರಶೈವ ಪುನರುತ್ಥಾನದ ಕಾಲದಲ್ಲಿ ಶರಣರಿಗೆ, ವಚನಕಾರರಿಗೆ, ಸಂಕಲನಕಾರರಿಗೆ ಬಸವಣ್ಣ ಮಹಾನ್ ಧಾರ್ಮಿಕ ನಾಯಕನಾಗಿ, ಪರಶಿವನ ಅಪರಾವತಾರವಾಗಿ ಕಂಡುಬರುತ್ತಾನೆ. ಅವನ ಬಗ್ಗೆ ಅಪಾರ ಮಮತೆ, ಅಭಿಮಾನ, ಭಕ್ತಿ, ಪೂಜ್ಯಭಾವ ಇರುವುದರಿಂದ ಅವನ ವಚನಗಳು ಧರ್ಮ ಸೂಕ್ತಿಗಳಾಗಿ ಕಂಡುಬರುತ್ತವೆ. ಈಕಾಲದ ಶರಣರ ಮೇಲೆ ಬಸವಣ್ಣನವರ ಪ್ರಭಾವ ಅಪಾರ.ಅವರು ಬಸವಣ್ಣನವರ ವಚನಗಳ ಪ್ರಭಾವಕ್ಕೆ ಒಳಗಾಗಿ ವಚನ ರಚಿಸಿದರು. ಬಸವಣ್ಣನವರ ಕುರಿತಾಗಿಯೆ ಭಕ್ತಿ ತುಂಬಿದ ವಚನ ರಚಿಸಿದರು. ಬಸವಣ್ಣನವರ ಬಗ್ಗೆ ಈಗಾಗಲೇ ಬಂದಿದ್ಧ ಸ್ತುತಿ ರೂಪದ ವಚನಗಳನ್ನು ಸಂಕಲಿಸಿದರು. ಇಂತಹ 'ಬಸವಸ್ತೋತ್ರದ' ವಚನಗಳ ಮಹತ್ವದ ನಾಲ್ಕು ಸಂಕಲನಗಳು ರಚಿತವಾಗಿವೆ. ಈ ನಾಲ್ಕು ಸಂಕಲನಗಳು ತೋಂಟದಾರ್ಯ ಪರಂಪರೆಯವರಿಂದಲೇ ರೂಪತಾಳಿರುವುದು ವಿಶೇಷ.

* **ಸಂಪಾದನೆಯ ಚೆನ್ನಂಜೇದೇವ :**

೧. ಬಸವಸ್ತೋತ್ರದ ವಚನಗಳು – ವಚನಗಳ ಸಂಖ್ಯೆ –೧೨೩ (ಹ.ಪ್ರ. ೧೩೬)[೨]
೨. ಬಸವಸ್ತೋತ್ರದ ವಚನಗಳು – ವಚನಗಳ ಸಂಖ್ಯೆ–೧೪೨ (ಹ.ಪ್ರ. ೩೧೪)

* **ಸಂಪಾದನೆಯ ಬೋಳ ಬಸವರಾಜ ದೇವ :**

೧. ಬಸವಸ್ತೋತ್ರದ ವಚನಗಳು – ವಚನಗಳ ಸಂಖ್ಯೆ –೧೨೪ (ಹ.ಪ್ರ. ೩೭೩)
೨. ಬಸವಸ್ತೋತ್ರದ ವಚನಗಳು – ವಚನಗಳ ಸಂಖ್ಯೆ –೪೬೨ (ಹ.ಪ್ರ.೪೯)[೩]

* **ಎಳಮಲೆಯ ಗುರುಶಾಂತದೇವ:**

'ಬಸವಸ್ತೋತ್ರದ ವಚನಗಳು –ವಚನಗಳ ಸಂಖ್ಯೆ ೧೧೧[೪].

ಈ ಮೇಲಿನ ಸಂಕಲನಗಳಲ್ಲಿ ಚೆನ್ನಂಜೇದೇವನ ' ಬಸವ ಸ್ತೋತ್ರದ ವಚನಗಳು–೧' ಸಂಕಲನಕ್ಕೆ ಬಹುಶಃ ಸಹೃದಯರು ಮಧ್ಯೆ ಮಧ್ಯೆ ೧೮ ಹೊಸ ವಚನಗಳನ್ನು ಸೇರಿಸಿರುವುದರಿಂದ ಚೆನ್ನಂಜೇದೇವನ ಹೆಸರಿನಲ್ಲಿ ಎರಡನೆ 'ಬಸವಸ್ತೋತ್ರದ ವಚನಗಳು' ಎಂಬ ಸಂಕಲನ ನಿರ್ಮಾಣವಾಗಿರಬೇಕೆಂದು ವಿದ್ವಾಂಸರು ಗುರುತಿಸಿದ್ದಾರೆ.[೫] ಹಾಗಾಗಿ ಚೆನ್ನಂಜೇದೇವನ ಒಂದು ಮತ್ತು ಬೋಳ ಬಸವನ ಎರಡು 'ಬಸವಸ್ತೋತ್ರದ ವಚನ' ಸಂಕಲನಗಳು ಸ್ವತಂತ್ರ ಸಂಕಲನಗಳೇ ಆಗಿವೆ. ಬಸವ ಸ್ತೋತ್ರದ ವಚನ ಕೃತಿಗಳು ಮೇಲ್ನೋಟಕ್ಕೆ ನಾಲ್ಕಾಗಿ ಕಂಡುಬಂದರೂ ಇವು

---

೨. ಇಲ್ಲಿಯ ಹಸ್ತಪ್ರತಿಗಳು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರಕ್ಕೆ ಸಂಬಂಧಿಸಿದವುಗಳಾಗಿವೆ.
೩. ಡಾ॥ ಬಿ.ಆರ್. ಹಿರೇಮಠ (ಸಂ) ಕನ್ನಡ ಅದ್ಯಯನ ಪೀಠ, ಕ.ವಿ.ವಿ. ಧಾರವಾಡ.
೪. ಡಾ॥ ವೀರಣ್ಣ ರಾಜೂರು (ಸಂ) 'ವಚನ ಸಂಕಲನ ಸಂಪುಟ–೭'.
೫. ಈ ಹದಿನೆಂಟು ವಚನಗಳು ಬೋಳಬಸವನ 'ಬಸವ ಸ್ತೋತ್ರದ ವಚನಗಳು–೧' ರಲ್ಲಿಯೂ ಇವೆ. ಬಹುಶಃ ಈ ವಚನಗಳನ್ನು ಬೋಳ ಬಸವನ ಸಂಕಲನದಿಂದಲೆ ಎತ್ತಿ ಚೆನ್ನಂಜೇದೇವನ ಸಂಕಲನಕ್ಕೆ ಸಹೃದಯರು ಆಮೇಲೆ ಸೇರಿಸಿ ಸಂಕಲನವನ್ನು ಪೂರ್ಣಮಾಡಿರಬೇಕು ಎಂದು ಡಾ॥ ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ. ಡಾ॥ ಎಂ.ಎಂ. ಕಲಬುರ್ಗಿ(ಸಂ), ಬಸವಸ್ತೋತ್ರದ ವಚನ ಪ್ರ. ಪುಟ xviii)

ಮೂಲತಃ ಮೂರು ಕೃತಿಗಳೇ ಆಗಿವೆ.[೬] ಬೋಳಬಸವನ ಎರಡನೆ 'ಬಸವ ಸ್ತೋತ್ರದ ವಚನ' ಕೃತಿಯನ್ನು ಹೊರತು ಪಡಿಸಿ ಇಬ್ಬರಲ್ಲಿಯೂ ಸಮಾನವಾಗಿರುವ ಹದಿನೆಂಟು ವಚನಗಳನ್ನು ಕಳೆದು ಉಳಿಯುವ ೨೪೮ ವಚನಗಳು, ಬೋಳ ಬಸವನ ಎರಡನೆ ಸಂಕಲನದಲ್ಲಿಯ ೪೬ ವಚನಗಳು ಸೇರಿ ೨೯೪ ವಚನಗಳು ಬಸವಣ್ಣನನ್ನು ಸ್ತುತಿಸುವ ವಚನಗಳಾಗಿವೆ.

ಇವಲ್ಲದೆ ಬಸವಣ್ಣನನ್ನು ಸ್ತುತಿಸುವ ಮತ್ತೊಂದು ವಚನ ಸಂಕಲನ ಎಳಮಲೆಯ ಗುರುಶಾಂತದೇವರ 'ಬಸವ ಸ್ತೋತ್ರದ ವಚನಗಳು'. ಇದರಲ್ಲಿ ಆರು ಜನ ವಚನಕಾರರ ಒಟ್ಟು ೧೧೧ ವಚನಗಳು ಸಂಗ್ರಹವಾಗಿವೆ. ಇವುಗಳಲ್ಲಿ ಈ ಹಿಂದೆ ಪ್ರಕಟವಾದ ಬೋಳಬಸವನ ಕೃತಿಗಳಲ್ಲಿ ೬೧ (ಒಂದನೆಯದರಲ್ಲಿ ೧೮, ಎರಡನೆಯದರಲ್ಲಿ ೪೩) ವಚನಗಳು ಬಂದಿದ್ದರೆ ಉಳಿದ ೫೦ ವಚನಗಳು ಹೊಸ ವಚನಗಳಾಗಿವೆ. ಒಟ್ಟು ನಾಲ್ಕು ಕೃತಿಗಳು ಸೇರಿ ಇದುವರೆಗೆ ३೪३ 'ಬಸವಸ್ತೋತ್ರದ ವಚನಗಳು' ಸಂಗ್ರಹವಾಗಿ ಪ್ರಕಟವಾದಂತಾಗಿದೆ. ಇವಲ್ಲದೆ ಬಸವನನ್ನು ಸ್ತುತಿಸುವ ಇನ್ನೂ ನೂರಾರು ವಚನಗಳು ಹಾಗೆಯೆ ಇವೆ. ಈ ಮೂರು ಸಂಕಲನಕಾರರ ವಚನಗಳ ವಿವರ ಈ ಕೆಳಕಂಡಂತೆ ಇದೆ.

'ವೀರಶೈವ ನಿರ್ಣಯ ಪರಮಾವತಾರ' ಎನಿಸಿದ ಬಸವಣ್ಣನವರು ವೀರಶೈವ ಧರ್ಮದ ಜೀವಾಳ. ಮಾನವನಾಗಿ ಹುಟ್ಟಿ ಸಾಧನೆಯಿಂದ ದೇವ ಮಾನವನಾಗಿ ಬೆಳೆದ ಬಸವಣ್ಣನವರ ಹೆಸರೇ ವೀರಶೈವರಿಗೆ ಮಂತ್ರ ಸ್ವರೂಪ. ಶರಣರು ತಮ್ಮ ತಮ್ಮ ಭಾವಕ್ಕೆ, ದರ್ಶನಕ್ಕೆ ಕಂಡಂತಹ ಬಸವಣ್ಣನವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ.

ಅಲ್ಲಮನಿಂದ ಹಿಡಿದು ತೋಂಟದ ಸಿದ್ಧಲಿಂಗ ಮತ್ತು ಅವನ ಪರಂಪರೆಯ ಸ್ವತಂತ್ರ ಸಿದ್ಧಲಿಂಗೇಶ್ವರನವರೆಗೆ ಮತ್ತು ಇಂದಿಗೂ ಕೂಡ ಎಲ್ಲ ಶರಣರ ವಚನಗಳಲ್ಲಿ ಬಸವಣ್ಣನವರ 'ನಾಮಾಮೃತ' ತುಂಬಿ ಸೂಸಿದೆ. ಬಸವನನ್ನು ನೋಡುವುದು, ಬಸವನನ್ನು ನೆನೆಯುವುದು, ಬಸವನೊಂದಿಗೆ ನುಡಿಯುವುದು ಪುಣ್ಯಕರ, ಪಾಪನಾಶಕವೆಂದು ಎಲ್ಲರ ನಂಬುಗೆ. ಬಸವಣ್ಣನನ್ನು ವ್ಯಕ್ತಿಯೆಂದು, ಶಕ್ತಿಯೆಂದು, ಪರಮಾತ್ಮನೆಂದು, ವೀರಶೈವ ಮಂತ್ರವೆಂದು ಭಾವಿಸಿ ವಚನಗಳ ಮೂಲಕ ಸ್ತುತಿಸಿದ್ದಾರೆ.

"ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುದೇವನಾಗಿ ಏಕೆ ಹುಟ್ಟಿಸಿದೆ" (ವ–೪)

'ನಮ್ಮ ಗುಹೇಶ್ವರ ಲಿಂಗಕ್ಕೆ ಸಂಗನ ಬಸವಣ್ಣನೇ ಭಕ್ತನೆಂದರಿದು ನಾನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು' (ವ–೯)

'ಬಸವಣ್ಣ ನಿನ್ನ ಕಂಡು ಕಂಡು ಎನ್ನ ತನು ಬಯಲಾಯಿತ್ತು.
ಬಸವಣ್ಣ ನಿನ್ನ ಮುಟ್ಟಿಮುಟ್ಟಿ ಎನ್ನ ಶ್ರೀ ಬಯಲಾಯಿತ್ತು
ಬಸವಣ್ಣ ನಿನ್ನ ನೆನೆ ನೆನೆದು ಎನ್ನ ಮನ ಬಯಲಾಯಿತ್ತು
ಬಸವಣ್ಣ ನಿನ್ನ ಮಹಾನುಭಾವವ ಕೇಳಿ ಕೇಳಿ ಎನ್ನ ಭವಂ ನಾಸ್ತಿಯಾಯಿತು.
– – – – – – – – – – – – – –
ನಿನ್ನ ಸನ್ನಿಧಿಯಿಂದ ಆನು ಬದುಕಿದೆನು ಕಾಣಾ ಸಂಗನ ಬಸವಣ್ಣ." (ವ– ೨೦)[೭]

---

೬. ಚೆನ್ನಂಜೇದೇವನ ಇನ್ನೊಂದು 'ಬಸವ ಸ್ತೋತ್ರದ ವಚನ' ಕೃತಿಯ ಬಗೆಗೆ ಏಕಾಭಿಪ್ರಾಯವಿಲ್ಲ.
೭. ಡಾ॥ ಎಂ.ಎಂ. ಕಲಬುರ್ಗಿ (ಸಂ) 'ಬಸವಸ್ತೋತ್ರದ ವಚನಗಳು,' (ಸಂ. ಚೆನ್ನಂಜೇದೇವರು)

ಬಸವಣ್ಣನಿಂದಾಗಿ ನನಗೆ ಬದುಕು ಸಿಕ್ಕಿತು. ಗುಹೇಶ್ವರನ ಭಕ್ತನಾದ ಬಸವಣ್ಣನವರ ಶ್ರೀಪಾದಕ್ಕೆ ನಮಿಸುತ್ತೇನೆ ಎಂದು ಅಲ್ಲಮ ಪ್ರಭು ತನ್ನ ಮನದಾಳದ ಭಕ್ತಿಯನ್ನು ಸಮರ್ಪಿಸಿದ್ದಾರೆ.

"ದೇವ ಲೋಕದವರಿಗೂ ಬಸವಣ್ಣನೇ ದೇವರು
ಮರ್ತ್ಯ ಲೋಕದವರಿಗೂ ಬಸವಣ್ಣನೇ ದೇವರು
ನಾಗ ಲೋಕದವರಿಗೂ ಬಸವಣ್ಣನೇ ದೇವರು
ಮೇರುಗಿರಿ, ಮಂದರಗಿರಿ, ಮೊದಲಾದವೆಲ್ಲಕ್ಕೂ ಬಸವಣ್ಣ ದೇವರು
ನಿಮಗೂ, ಎನಗೂ, ನಿಮ್ಮ ಶರಣರಿಗೂ ಬಸವಣ್ಣನೇ ದೇವರು" (ವ–೧೧೬)

ಅಕ್ಕಮಹಾದೇವಿ ಈ ವಚನದಲ್ಲಿ ಸಕಲ ಮೂರು ಲೋಕಗಳಿಗೂ ಬಸವನೇ ದೇವರೆಂದು ಭಾವಿಸಿದ್ದಾಳೆ. ಬಸವನೆ ಸಕಲ ಪ್ರಪಂಚಕ್ಕೆ ದೇವರು. ಅವನ ಪ್ರಭಾವ ವಲಯದಿಂದ ಯಾವ ಚೇತನವು ಹೊರಗುಳಿಯಲಾರದೆಂಬ ದೃಷ್ಟಿಯನ್ನು ಬಿತ್ತರಿಸಿದ್ದಾಳೆ.

"ಎತ್ತೆತ್ತ ನೋಡಿದರೆ ಅತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ
– – – – – – – – – – – – – –
ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ
ಶೂನ್ಯ ಕಾಣಾ ಕಲಿದೇವರ ದೇವಾ". (ವ.೭೨)

ಮಾಚಿದೇವನ ಈ ವಚನ ಬಸವನ ಭಕ್ತಿಯ ಬಳ್ಳಿ ಈ ಮರ್ತ್ಯದಲ್ಲಿ ವರ್ಗ, ವರ್ಣ, ಲಿಂಗ ಭೇಧವಿಲ್ಲದೆ ಕುಡಿಚಾಚುತ್ತಾ ಹಬ್ಬಿ ಹೂವಾಗಿ, ಹೀಚಾಗಿ, ಕಾಯಾಗಿ, ಹಣ್ಣಾಗಿ ಭಕ್ತಿಯೆಂಬ ರಸಯುಕ್ತ ಫಲ ನೀಡಿ ಸರ್ವರನ್ನು ತೃಪ್ತಿ ಪಡಿಸುವ ನಿಲುವಿನ ದರ್ಶನ ಒದಗಿಸುತ್ತದೆ.

"ಬಸವನ ಹಾಡದವರ ಬಸವನ ಹೊಗಳದರ
ಬಸವಾಕ್ಷರ ತ್ರಯದ ಜಪವಿಲ್ಲದ ದೆಸೆಗೇಡಿ ಮನುಜರ
ಎನ್ನತ್ತ ತೋರದಿರಯ್ಯಾ ತಂದೆ –" (ವ–೯೩)

ಎಂಬ ಸಿದ್ಧರಾಮನ ಮಾತು ಬಸವನನ್ನು ಸ್ಮರಿಸಿದವರಿಲ್ಲವೆಂಬದಕ್ಕೆ ಸಮರ್ಥನೆ ನೀಡುತ್ತದೆ.

" – – – ಬಸವನೆ ಪತಿಯಾಗಿ , ನಾನು ಸತಿಯಾಗಿ ಶರಣಾದೆನು ನೋಡಾ

ಬಸವನೆ ಲಿಂಗವಾದ ಕಾರಣ ನಾನಂಗವಾದೆನು
ಕರ್ತೃವೆ ಬಸವಣ್ಣನು, ಭೃತ್ಯನೆ ನಾನು
ಒಡೆಯನೆ ಬಸವಣ್ಣ,ಬಂಟನೆ ನಾನಾದ ಕಾರಣ
ದೇಹವೇ ನಾನು, ದೇಹಿಯೆ ಬಸವಣ್ಣನಯ್ಯಾ
ಇದು ಕಾರಣ
ಇಂತಪ್ಪ ಬಸವಣ್ಣನ ಶ್ರೀಪಾದದಲ್ಲಿ ಅಡಗಿ ನಾನು ಶರಣಾದೆನು" (ವ–೧೧೪)

ಈ ವಚನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳು ಶರಣ ಸತಿ ಲಿಂಗಪತಿಭಾವದಲ್ಲಿ ಬಸವನೆ ಪತಿ–ತಾನು ಸತಿಯೆಂಬ ಪರಿಕಲ್ಪನೆಯಲ್ಲಿ ತಮ್ಮ ಭಕ್ತಿಯನ್ನು ಸಮರ್ಪಿಸಿದ್ದಾರೆ.

ಬಸವನೆಂದರೆ ದೇವರಸ್ವರೂಪ, ಶಿವಸ್ವರೂಪವೆಂದು ಭಾವಿಸಿದ ಶರಣರು ಬಸವಣ್ಣನನ್ನು ನೆನೆವುದೆ ಪರಮ ಕಲ್ಯಾಣವೆಂದರು. ಹೀಗಾಗಿ ಬಸವಣ್ಣನನ್ನು ಸ್ತುತಿಸದ ಶರಣರಿಲ್ಲವೆನ್ನಬೇಕು.

ಚನ್ನಬಸವಣ್ಣನವರು ೨೮ನೇ ವಚನದಲ್ಲಿ ಬಸವಣ್ಣನವರ ಜನ್ಮಾಂತರ ಸಂಬಂಧವನ್ನು ಕೃತ ಯುಗದವರೆಗೂ ಕೊಂಡೋಯ್ದಿದ್ದಾರೆ. ಮುಂದಿನ ವಚನದಲ್ಲಿ

"ಆದಿ ಬಸವಣ್ಣ, ಅನಾದಿಲಿಂಗವೆಂದೆಂಬರು
ಹುಸಿ ಹುಸಿ ಈ ನುಡಿಯ ಕೇಳಲಾಗದು
ಆದಿಲಿಂಗ, ಅನಾದಿ ಬಸವಣ್ಣ
ಲಿಂಗವು ಬಸವಣ್ಣನ ಉದರದಿಂದ ಪುಟ್ಟಿತ್ತು.
ಜಂಗಮವು ಬಸವಣ್ಣನ ಉದರದಿಂದ ಪುಟ್ಟಿತ್ತು.
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣವಯ್ಯಾ" (ವ–೨೮)[೮]

ಚೆನ್ನಬಸವಣ್ಣನವರ ಈ ವಚನದಲ್ಲಿ ಬಸವನ ನಂತರವೇ ಲಿಂಗ, ಜಂಗಮ, ಪ್ರಸಾದಗಳು ಜನ್ಮತಾಳಿದವು. ಬಸವನೆ ಪ್ರಥಮ. ಅವನೇ ಓಂಕಾರ ಸ್ವರೂಪ. ಅವನೇ ಶಿವಲಿಂಗಮಂತ್ರ ಎಂಬುದಾಗಿ ಭಾವಿಸಿದ್ದಾನೆ. ಕಳೆದ ೮೦೦ ವರ್ಷಗಳಿಂದಲೂ ಸುಖ ದುಃಖಗಳಲ್ಲಿ ನಿತ್ಯ ಸ್ಮರಣೀಯವಾಗಿ ವೀರಶೈವರ ಕೃತಿ ಮತ್ತು ನಾಲಗೆಯ ಮೇಲೆ ಬಸವನ ಹೆಸರು ಬಳಕೆಯಾಗುತ್ತಲೇ ಬಂದಿದೆ. ಹೀಗೆ ಅಂತರಂಗ–ಬಹಿರಂಗಗಳಲ್ಲಿ ತುಂಬಿ ತುಳುಕುತ್ತಿರುವ ಈ ವಿಭೂತಿ ಪುರುಷನನ್ನು ಕಂಡು ಮಂತ್ರ ಮುಗ್ಧರಾದ ಶಿವಶರಣರು, ಕವಿಗಳು ಮನದಣಿಯೆ ಹೊಗಳಿದ್ದಾರೆ. ಯಾವ ಶರಣನ ವಿಷಯವಾಗಿಯೂ ಇಲ್ಲದಷ್ಟು ಸ್ತುತಿರೂಪದ ಅನೇಕ ವಚನಗಳು ಚರಿತ್ರೆ, ಪುರಾಣಗಳು, ಕಾವ್ಯ ಕೃತಿಗಳು ಬಸವಣ್ಣನವರ ಹೆಸರಲ್ಲಿ ಬಂದಿದೆ.

'ಬಸವ ಸ್ತೋತ್ರದ ವಚನಗಳು, ಬಸವ ಸ್ತೋತ್ರದ ತ್ರಿವಿಧಿ, ಬಸವಲಿಂಗ ನಾಮಾಷ್ಟಕೋತ್ತರ, ಶರಣು ಬಸವರಗಳೆ, ಬಸವರಾಜ ದೇವರ ತಾರಾವಳಿ, ಬಸವ ಸ್ತೋತ್ರದ ಷಟ್ಪದಿ, ಬಸವೇಶ್ವರ ಸಹಸ್ರ ನಾಮಾವಳಿ,ಬಸವೇಶ್ವರ ನೂರೊಂದು ನಾಮ, ಬಸವ ಮಹಿಮಾ ತ್ರಿವಿಧಿ, ಬಸವಶತಕ, ಬಸವೇಶ್ವರಪರಿವರ್ಧಿನಿ, ಬಸವಸ್ತುತಿ, ಬಸವ ಪವಾಡ ರಗಳೆ, ಬಸವರಾಜ ದೇವರ ರಗಳೆ ಮುಂತಾದ ಕೃತಿಗಳು'[೧೦] ರಚನೆಗೊಂಡಿರುವುದು ಕಂಡುಬರುತ್ತದೆ. ಹೀಗೆ ಉಲ್ಲೇಖವಾದ ಬಸವ ಸ್ತುತಿ ಸಾಹಿತ್ಯದಲ್ಲಿ 'ಬಸವ ಸ್ತೋತ್ರದ ವಚನಗಳು' ಎಂಬ ಸಂಕಲನ ಕೃತಿಗಳು ಅತ್ಯಂತ ಮಹತ್ವವಾಗಿವೆ.

ಚೆನ್ನಂಜೇದೇವರು, ಬೋಳ ಬಸವರಾಜದೇವರು ಸಂಕಲಿಸಿದ ತಲಾ ಒಂದೊಂದು 'ಬಸವ ಸ್ತೋತ್ರದ ವಚನ' ಸಂಕಲನಗಳನ್ನು ಡಾ॥ ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ್ದಾರೆ. ಬೋಳಬಸವನ ೪೬ ವಚನಗಳಿರುವ 'ಬಸವ ಸ್ತೋತ್ರ ವಚನ' ಕೃತಿಯನ್ನು ಡಾ॥ ಬಿ.ಆರ್.

---

೮. ಎಂ.ಎಂ. ಕಲಬುರ್ಗಿ (ಸಂ) 'ಬಸವಸ್ತೋತ್ರದ ವಚನ' (ಸಂ. ಬೋಳ ಬಸವ)
೯. ಈ ವಚನಗಳು ಚೆನ್ನಂಜೇದೇವನ ಸಂಕಲದಿಂದ ಆರಿಸಲಾಗಿದೆ.
೧೦. ಡಾ॥ ಆರ್.ಸಿ. ಹಿರೇಮಠ (ಸಂ) 'ಬಸವದೀಪ್ತಿ.' ಪುಟ–೫೦೫

ಹಿರೇಮಠ ಅವರು ಸಂಪಾದಿಸಿದ್ದಾರೆ. ಎಳಮಲೆಯ ಗುರುಶಾಂತದೇವರು ಸಂಕಲಿಸಿದ 'ಬಸವ ಸ್ತೋತ್ರದ ವಚನ' ಕೃತಿಯನ್ನು ಡಾ॥ ವೀರಣ್ಣ ರಾಜೂರ ಅವರು ಸಂಪಾದಿಸಿದ್ದಾರೆ[೧೧].

ಎಳಮಲೆಯ ಗುರುಶಾಂತದೇವರು 'ಬಸವ ಸ್ತೋತ್ರದ ವಚನ'ಗಳನ್ನು ಸಂಕಲಿಸುವಲ್ಲಿ ಒಂದು ತಾತ್ವಿಕ ಹಿನ್ನೆಲೆಯನ್ನು ಇಟ್ಟುಕೊಂಡಿರುತ್ತಾರೆ. ಸಂಕಲನದ ಆರಂಭದ ವಚನ ಸೃಷ್ಟಿ ಪೂರ್ವದ ಪರ ವಸ್ತುವಿನ ಮೂಲಸ್ಥಿತಿಯನ್ನು ಕುರಿತು ಹೇಳಿದರೆ, ಸಂಕಲನದ ಕೊನೆಯ ವಚನ ಐಕ್ಯನ ಸಾಮರಸ್ಯದ ಸ್ವರೂಪವನ್ನು ತಿಳಿಸುತ್ತದೆ. ಅಂದರೆ ಇಲ್ಲಿ ಷಟ್‌ಸ್ಥಲ ಸಿದ್ಧಾಂತದ ಆಧಾರದ ಮೇಲೆ ವಚನಗಳನ್ನು ಜೋಡಿಸುವ ಪ್ರಯತ್ನ ಮಾಡಿದ್ದಾನೆ. ಹಾಗೆ ಬೇರೆ ಬೇರೆ ಶರಣರ ವಚನಗಳನ್ನು ಮಿಶ್ರ ಮಾಡದೆ ಒಬ್ಬರ ನಂತರ ಮತ್ತೊಬ್ಬರ ವಚನಗಳನ್ನು ಜೋಡಿಸಿದ್ದಾನೆ.

ವಚನಕಾರರು ಬರೆದಂತಹ ಸ್ತುತಿರೂಪದ ವಚನಗಳನ್ನು ನೂರಾರು ಕಡೆಯಿಂದ ಸಂಗ್ರಹಿಸಬೇಕಾಗಿತ್ತು. ಈ ಸಂದರ್ಭದಲ್ಲಿ ವಚನಗಳ ಮೂಲಪಾಠ ಶುದ್ಧಿಯನ್ನು ನಿರ್ಣಯಿಸುವ ಮತ್ತು ತಾವು ಕೈಗೊಂಡ ಕೃತಿಯ ಚೌಕಟ್ಟಿಗೆ ಹೊಂದಿಕೆಯಾಗುವಂತೆ ಅವುಗಳಿಗೆ ಆಕಾರ ಕೊಡುವ ಎರಡು ಕಾರ್ಯಗಳನ್ನು ನಿರ್ವಹಿಸುವ ಜವಬ್ದಾರಿ ಅವರ ಮೇಲಿತ್ತು. ಹಾಗಾಗಿ ಅವರು ಕೃತಿಯ ಚೌಕಟ್ಟಿಗೆ ಹೊಂದುವಂತೆ ಕೆಲವು ವಚನಗಳನ್ನಾದರೂ ಸಂಕೋಚ ವಿಸ್ತಾರ, ತಿದ್ದುಪಡಿಗೊಳಿಸುವ ಅವಶ್ಯವೆನಿಸಿದಲ್ಲಿ ಒಂದೆರಡು ಹೊಸ ವಚನಗಳನ್ನು ರಚಿಸಿ ಸೇರಿಸುವ ಕಾರ್ಯ ಇವರಿಂದ ನಡೆದಿರುವ ಸಾಧ್ಯತೆ ಇದೆ.

'ಬಸವ ಸ್ತೋತ್ರದ ವಚನಗಳು' ಹೆಸರಿನ ಈ ಸಂಕಲನಗಳಲ್ಲಿ ಇಂತಹ ಪಾಠಾಂತರ, ರೂಪಾಂತರಗಳು ಸ್ಥಾನ ಪಡೆದಿರುವುದು ಕಂಡುಬರುತ್ತದೆ.

ಉದಾ :- " ತನುವಕೊಟ್ಟು ತನು ಬಯಲಾಯಿತ್ತು
ಮನವಕೊಟ್ಟು ಮನ ಬಯಲಾಯಿತ್ತು
ಧನವಕೊಟ್ಟು ಧನಬಯಲಾಯಿತ್ತು
ಈ ತ್ರಿವಿಧವನು ಕೊಟ್ಟ ಕಾರಣ
ಕೂಡಲ ಚೆನ್ನ ಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ
ಸಮಾಧಿಯಾಯಿತ್ತಯ್ಯಾ"[೧೨]

ಮೂಲತಃ ಬಸವಣ್ಣನವರನ್ನು ಸ್ತುತಿಸುವ ಈ ವಚನಗಳನ್ನು 'ಬಸವ ಸ್ತೋತ್ರದ ವಚನ' ಸಂಕಲನ ಕೃತಿಯಲ್ಲಿ ಬೋಳಬಸವನು ಜೋಡಿಸುವಾಗ

---

೧೧. ಈಎಲ್ಲ ಸಂಕಲನಗಳ ಪ್ರಕಾಶಕರು ಲಿಂಗಾಯಿತ ಅಧ್ಯಯನ ಸಂಸ್ಥೆ. ತೋಂ. ಸಂಸ್ಥಾನ ಮಠ ಗದಗ,

೧೨. ಆರ್.ಸಿ. ಹಿರೇಮಠ (ಸಂ) 'ಚೆನ್ನಬಸವಣ್ಣನವರ ವಚನಗಳು.' – (ವ–೭೩೫)

[illegible]

"ತನುವಕೊಟ್ಟು ತನುಬಯಲಾಯಿತ್ತು ಬಸವಣ್ಣಂಗೆ
ಮನವಕೊಟ್ಟು ಮನ ಬಯಲಾಯಿತ್ತು ಬಸವಣ್ಣಂಗೆ
ಧನವಕೊಟ್ಟು ಧನ ಬಯಲಾಯಿತ್ತು ಬಸವಣ್ಣಂಗೆ
ಈ ತ್ರಿವಿಧವನು ಕೊಟ್ಟ ಕಾರಣ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣಂಗೆ
ಬಯಲ ಸಮಾಧಿಯಾಯಿತ್ತಯ್ಯ" (ವ.೩)[೧೩]

ಈ ವಚನದಲ್ಲಿ ಬಸವಣ್ಣಂಗೆ ಎಂಬ ಪದದ ಪುನರುಕ್ತಿಯಿಂದ ವಚನದ ಆಶಯಕ್ಕೆ ಒಂದು ಬಗೆಯ ಒತ್ತನ್ನು ಒದಗಿಸಿ ಕೊಟ್ಟಿರುವುದು ಕಂಡುಬರುತ್ತದೆ. ಇಂತಹ ಪಾಠಾಂತರದ ವಚನಗಳು ಕೃತಿಯ ಉದ್ದಕ್ಕೂ ಅಲ್ಲಲ್ಲಿ ಕಂಡು ಬರುತ್ತವೆ.

ಸ್ತೋತ್ರ ಸಂಕಲನ ಕೃತಿಗಳಲ್ಲಿ ಬಸವಣ್ಣನೊಬ್ಬನಲ್ಲದೆ ಚೆನ್ನಬಸವಣ್ಣ, ಅಲ್ಲಮ ಪ್ರಭುದೇವರನ್ನು ಸ್ತುತಿಸುವ ಸಂಕಲನಗಳಿವೆ. ಅವರನ್ನು ಗುರು-ಲಿಂಗ-ಜಂಗಮ ಸ್ಥಲದಲ್ಲಿ ನಿಲ್ಲಿಸಿ ನೋಡುವ ಕೆಲಸವು ನಡೆದಿದೆ. ಅರಿವು-ಆಚಾರ-ಅನುಭಾವ ಮುಪ್ಪುರಿಯ ಗರಿಯನ್ನು ಅವರಿಗೆ ಸಮರ್ಪಿಸಿದ್ದಾರೆ. ಹೀಗೆ ಬಸವ ಸ್ತೋತ್ರದ ವಚನ ಸಂಕಲನಗಳು ಹಾಗೂ ಇತರ ಕೃತಿಗಳ ತುಂಬ ಬಸವಣ್ಣನ ಕುರಿತು ಪ್ರತಿಯೊಬ್ಬ ಶರಣನು ವ್ಯಕ್ತಪಡಿಸಿದ ನೂರಾರು ಭಾವನೆಗಳು ಮೂಡಿಬಂದಿವೆ. ಹಿಂದಿನ ಮತ್ತು ಇಂದಿನ ಶರಣರನ್ನು ಏಕಪ್ರಕಾರವಾಗಿ ಮನಸೂರೆಗೊಂಡ ಬಸವಣ್ಣನವರ ವೈವಿಧ್ಯಮಯವಾದ ವ್ಯಕ್ತಿತ್ವ ನಮ್ಮ ಕಣ್ಣ ಮುಂದೆ ಚಿತ್ರಿತವಾಗುತ್ತದೆ.

೨. 'ಪ್ರಭುದೇವರ ಸ್ತೋತ್ರದ ವಚನಗಳು'

* ಸಂಪಾದನೆಯ ಸಿದ್ಧವೀರಣ್ಣೊಡೆಯ

ಸಿದ್ಧವೀರಣ್ಣೊಡೆಯರು ಸಂಕಲಿಸಿದ 'ಪ್ರಭುದೇವರ ಸ್ತೋತ್ರದ ವಚನಗಳು' ಎಂಬ ಸಂಕಲನದಲ್ಲಿ ಅಲ್ಲಮ ಪ್ರಭುದೇವರನ್ನು ಸ್ತುತಿಸುವ ೧೦೮ ವಚನಗಳಿವೆ. ಇದರ ಆರಂಭದಲ್ಲಿ 'ಸಂಪಾದನೆಯ ಸಿದ್ಧವೀರಣ್ಣೊಡೆಯರು ಸೇರಿಸಿದ ಪ್ರಭುದೇವರ ಸ್ತೋತ್ರದ ವಚನ'ವೆಂದಿದೆ. ಅಂತ್ಯದಲ್ಲಿ 'ಪ್ರಭುದೇವರ ಸ್ತೋತ್ರ ಸಮಾಪ್ತಂ' ಎಂದಿದೆ. ಈಸಂಕಲನವನ್ನು ಎಸ್.ಶಿವಣ್ಣ ಅವರು ಸಂಪಾದಿಸಿದ್ದಾರೆ.

ಈ ಸಂಕಲನದ ೧೦೮ ವಚನಗಳಲ್ಲಿ ೮೯ ವಚನಗಳು ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ(ಸಂ.ಶಿ.ಭೂಸನೂರ ಮಠ, ರಾವೂರ, ಅದವಾನಿ) ಯಲ್ಲಿವೆ. ಕ್ರಮಾಂಕ ೯೦ ಹಾಗೂ ೯೨ ನೆಯ ಅಕ್ಕಮಹಾದೇವಿಯ ವಚನಗಳು ಹಲಗೆದೇವ, ಕೆಂಚವೀರಣ್ಣೊಡೆಯರ "ಶೂನ್ಯಸಂಪಾದನೆ"ಯಲ್ಲಿವೆ. ಕ್ರಮಾಂಕ ೧೮ ಹಾಗೂ ೨೦ ನೇ ವಚನಗಳು ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯ ಸಂಪಾದನೆಯಲ್ಲಿವೆ.[೧೪] ಮುಕ್ತಾಯಕ್ಕ ವಚನದಿಂದ ಆರಂಭಗೊಂಡ ಈ ಸಂಕಲನ ಹಡಪದ ಅಪ್ಪಣ್ಣನ ವಚನದೊಂದಿಗೆ ಮುಕ್ತಾಯವಾಗುತ್ತದೆ.

---

೧೩. ಡಾ॥ ಎಂ.ಎ. ಕಲಬುರ್ಗಿ (ಸಂ) 'ಬಸವಸ್ತೋತ್ರದ ವಚನಗಳು.' (ವ-೪೦) (ಬೋಳಬಸವ)

೧೪. ಎಸ್.ಶಿವಣ್ಣ (ಸಂ) 'ವಚನ ಸಂಕಲನ ಸಂಪುಟ-೩.' ಪ್ರಸ್ತಾವನೆ. ಪುಟ-೮

ವೀರಶೈವ ವಿರಕ್ತ ಪರಂಪರೆ ಅಲ್ಲಮ ಪ್ರಭುವಿನಿಂದ ಆರಂಭವಾಗುತ್ತದೆ. ತೋಂಟದಾರ್ಯ ಪರಂಪರೆಗೆ ಅಲ್ಲಮನೆ ಆದಿ. ಅಂದು ಅಲ್ಲಮ ಏರಿದ ಶೂನ್ಯ ಪೀಠ ಇಂದು ಮುಂದುವರಿದುಕೊಂಡು ಬಂದಿದೆ. ವೀರಶೈವ ಪರಂಪರೆಯಲ್ಲಿ ಅಲ್ಲಮನಿಗೆ ಗಣ್ಯ ಗಣೇಶ್ವರನ ಸ್ಥಾನವಿದೆ. ಇಂತಹ ಅಲ್ಲಮ ಶರಣ ಚಳುವಳಿಯ ಸಂದರ್ಭದಲ್ಲಿ ಮಹಾಜ್ಞಾನಿಯಾಗಿ, ಶಿವಯೋಗಿಯಾಗಿ, ಮಹಾನ್ ಸಾಧಕನಾಗಿ ಎಲ್ಲರಿಗಿಂತ ಎತ್ತರದಲ್ಲಿ ನಿಲ್ಲುತ್ತಾನೆ. ವೀರಶೈವ ಧರ್ಮ ವ್ಯವಸ್ಥೆಯ ಬೆಳವಣಿಗೆಯಾದಂತೆ ಅಲ್ಲಮನ ಬದುಕು ಬೆಳೆದು ಬಂದಿದೆ. ಮಹಾಜ್ಞಾನಿಯಾದ ಅಲ್ಲಮನು ಅನುಭಾವದ ಅತ್ಯಂತಿಕ ಸ್ಥಿತಿಯನ್ನು ತಲುಪಿದವನಾಗಿದ್ದ. ತನ್ನ ಪ್ರಕರವಾದ ವೈಚಾರಕತೆಯಿಂದ ಎಲ್ಲಾ ಸಂದೇಹಗಳಿಗೂ ಸಮಾಧಾನ ನೀಡಬಲ್ಲವನಾಗಿದ್ದ. ಹಾಗಾಗಿ ಎಲ್ಲರೂ ಗೌರವದಿಂದ ಅವನ ಮಾತುಗಳನ್ನು ಒಪ್ಪಿಕೊಳ್ಳುತ್ತಾರೆ. ಇಂತಹ ಅಲ್ಲಮನನ್ನು ನಾಯಕನನ್ನಾಗಿ ಮಾಡಿಕೊಂಡಿದ್ದರಿಂದಲೇ 'ಶೂನ್ಯ ಸಂಪಾದನೆ' ಒಂದು ವಿಶಿಷ್ಟ ಅನುಭಾವ ಕೃತಿಯಾಯಿತು.

ಅಲ್ಲಮ ಪ್ರಭು ವೀರಶೈವರಿಗೆ ಗುರು, ಕನ್ನಡದ ಜನವಾಹಿನಿಗೆ ಒಂದು ವಿಸ್ಮಯ. ಬಸವಣ್ಣ ಮುಂತಾದ ಶರಣರಿಗೆ ಗುರುಸ್ಥಾನದಲ್ಲಿದ್ದು, ಆ ಕಾಲದ ಎಲ್ಲರ ಮೇಲೂ ಒಂದು ಬಗೆಯ ಗಂಭೀರ ಪ್ರಭಾವವನ್ನು ಬೀರಿದ್ದಾನೆ. ಶರಣ ಚಳುವಳಿಯ ನಾಯಕರಿಗೆ ತನ್ನ ನೈತಿಕ ಶಕ್ತಿಯನ್ನು ಧಾರೆಯೆರೆದ ಮಹಾಪುರುಷ.

ಅಲ್ಲಮ ಬದುಕಿನ ಆರಂಭದಲ್ಲಿ ಸಾಮಾನ್ಯರಂತೆ ಬದುಕಿದ. ಆದರೆ ಎರಡನೆ ಹಂತದಲ್ಲಿ ವಿಭಿನ್ನವಾಗಿದ್ದ. ಏನನ್ನೋ ಸಾಧಿಸಿದ ಮನೋಭಾವ ಅವನದು. ಮೂಢರನ್ನು ಎಚ್ಚರಿಸುವ, ಸಾಧಕರಿಗೆ ಸರಿಯಾದ ದಾರಿತೋರಿಸುವ ಉಪದೇಶಕನಾದ. ಸಣ್ಣತನಗಳನ್ನು ಟೀಕಿಸಿದ. ಒಳ್ಳೆಯದನ್ನು ಮೆಚ್ಚಿಗೌರವಿಸಿದ. ಅವನಿಂದ ಉಪಕೃತರಾದವರು ಮುಕ್ತಾಯಕ್ಕ. ಗೊಗ್ಗಯ್ಯ, ಗೋರಕ್ಷ, ಸಿದ್ಧರಾಮ ಮುಂತಾದವರು ಇವರೆಲ್ಲ ಅಲ್ಲಮನಿಂದ ಆಧ್ಯಾತ್ಮಿಕ ಅನುಭೂತಿಯನ್ನು ಪಡೆದರು. ಬದುಕಿನ ನಿಜವನ್ನು ಅರಿತರು. ಹೀಗಾಗಿ ಅಲ್ಲಮನು ಸರ್ವರಿಗೂ ಪೂಜ್ಯನಾದನು. ಆರಾಧ್ಯನಾದನು. ಗುರುವಾದನು.

ಕಲ್ಯಾಣದಲ್ಲಿ ಶಿವಾನುಭವಗೋಷ್ಠಿಯ ಕೇಂದ್ರ ವ್ಯಕ್ತಿಯಾಗಿದ್ದ ಈತ ಶಿವತತ್ವವನ್ನು ಉಪದೇಶಿಸಿದ. ಅಕ್ಕಮಹಾದೇವಿಯ ಸುಪ್ತ ಭಕ್ತಿಯನ್ನು ಜಗತ್ತಿಗೆ ತೋರಿಸಿದ. ಮಾತಿನಲ್ಲಿ ನಿರ್ಭಯಿಯಾಗಿದ್ದ ಅಲ್ಲಮ, ಹೃದಯದಲ್ಲಿ ಅನುಕಂಪವುಳ್ಳ ಸಂತ. ತನ್ನ ಸಮಕಾಲೀನರಿಂದ ಹೇಗೊ ಹಾಗೆ ಮುಂದಿನ ಶತಮಾನಗಳ ವೀರಶೈವರಿಂದ ಕೀರ್ತಿತನಾಗಿರುವ ಅಲ್ಲಮಪ್ರಭು ಕನ್ನಡದ ಅತಿ ಮಹತ್ವದ ಆಧ್ಯಾತ್ಮಿಕ ಗುರುವಾಗಿದ್ದಾನೆ.

ಜಂಗಮ ಸ್ವರೂಪಿಯಾದ ಅಲ್ಲಮನು ಷಟ್‌ಸ್ಥಲ ಸಿದ್ಧಿಯನ್ನು ಪಡೆದವಾಗಿದ್ದಾನೆ. ಇವನ ವಚನಗಳಲ್ಲಿ ದೇವ-ಭಕ್ತನ ಬೆಸುಗೆಯನ್ನು, ಷಟ್‌ಸ್ಥಲ ಸಿದ್ಧಾಂತದ ಸಾಧನೆಯ, ಸಂಪಾದನೆಯ ತಿರುಳನ್ನು, ಅನುಭಾವದ ಆಳವನ್ನು, ಕಾಯದ ಮಹತಿಯನ್ನು, ಸಮಾಜದ ಸುಸ್ತಿತರ- ಬಂಧುರತೆಗಳ ಗೂಢತೆಯನ್ನು, ಆತ್ಮ ವಿಕಾಸದ ಮಹೋನ್ನತ ನಿಲುವನ್ನು ಕಾಣಬಹುದಾಗಿದೆ. ಇಂತಹ ವಚನಗಳು ಆಧ್ಯಾತ್ಮದ ಪ್ರಪಂಚಕ್ಕೆ ಅಮೃತವಾಣಿಗಳಾಗಿವೆ. ಬೆಳಕಿನ ತೇಜಪುಂಜಗಳಾಗಿವೆ. ಅವು ಅಲ್ಲಮನ ಆಧ್ಯಾತ್ಮದ ನಿಲುವನ್ನು ಪ್ರಕಟಿಸುತ್ತವೆ. ಇಂತಹ ವಚನಾಮೃತ ವಾಣಿಗಳ ಸವಿ ಸವಿದ ಶರಣ-ಶರಣೆಯರು ಅಲ್ಲಮನ ಬಗ್ಗೆ ಅಪಾರವಾದ ಗೌರವಾದರಗಳನ್ನು ಇಟ್ಟುಕೊಂಡಿದ್ದಾರೆ.

ಆತನನ್ನು ಆಧ್ಯಾತ್ಮದ ಗುರುವಾಗಿ ಕಂಡಿದ್ದಾರೆ. ಸ್ಮರಿಸಿದ್ದಾರೆ. ಸ್ತುತಿಸಿದ್ದಾರೆ. ಅಂತಹ ಸ್ತುತಿರೂಪದ ವಚನಗಳನ್ನು ಸಂಗ್ರಹಿಸಿ ಸಿದ್ಧವೀರಣ್ಣೊಡೆಯನು 'ಪ್ರಭುದೇವರ ಸ್ತೋತ್ರದ ವಚನಗಳು' ಎಂಬ ಸಂಕಲನವನ್ನು ರಚಿಸಿದ್ದಾನೆ.

"ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ
ಎನ್ನಲ್ಲಿ ಗುಣದೋಷವನರಸುವರೆ ಪ್ರಭುವೆ?" (ವ-೧೦)
"ಪುಣ್ಯ ಪಾಪಂಗಳನರಿಯದ ಮುನ್ನ
ಅನೇಕ ಭವಂಗಳಲ್ಲಿ ಬಂದು
ನಿಮ್ಮ ನಿಲವನರಿಯದೆ ಕೆಟ್ಟೆನಯ್ಯಾ ಪ್ರಭುವೆ
ಇಂದು ನಿಮಗೆ ಶರಣುಗತಿ ಹೊಕ್ಕೆನು
ನಾ ನಿಮ್ಮನೆಂದು ಅಗಲದಂತೆ ಮಾಡಯ್ಯಾ ಪ್ರಭುವೆ" (ವ-೧೧)

ಎಂದು ಸಿದ್ಧರಾಮನು ಅಲ್ಲಮನ ಸಾನಿಧ್ಯ ಬಿಡಲೊಪ್ಪದೆ, ಅವನ ಪಾದ ಕಮಲಗಳಲ್ಲಿ ತನ್ನ ಶಿರವನೊಪ್ಪಿಸಿ ಬೇಡಿಕೊಳ್ಳುತ್ತಿದ್ದಾನೆ. ಅಲ್ಲಮನ ಪಾದ ಸೋಂಕಿನಿಂದ ನನ್ನಲ್ಲಿಯ ಎಲ್ಲಾ ಗುಣದೋಷಗಳು ನಾಶವಾಗುತ್ತವೆ ಎಂದು ಹರುಷದಿಂದ ಹೇಳಿಕೊಳ್ಳುತ್ತಾನೆ.

"ಭವರೋಗ ವೈಧ್ಯನೆಂದು ನಂಬಿದೆ ನಾನು
ಒಮ್ಮಿಗೆ ಕರುಣಿಸಯ್ಯಾ ಪ್ರಭುವೆ- - -" (ವ-೨೫)
" - - - ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತಯ್ಯಾ ಪ್ರಭುವೆ" (ವ-೨೭)
"ಕೂಡಲ ಸಂಗಮದೇವರಲ್ಲಿ ಪ್ರಭುವಿನ ಕೃಪೆಯಿಂದ
ನಾನು ಬದುಕಿದೆನು" (ವ-೩೦)

ಇಲ್ಲಿ ಬಸವಣ್ಣನಿಗೆ ಅಲ್ಲಮ ಪ್ರಭುವು ಭವರೋಗ ವೈಧ್ಯನಾಗಿ, ಅಂತರಂಗದ ತಮವ ಕಳೆವ ಬೆಳಕಾಗಿದ್ದಾನೆ. ಅವನ ಕೃಪೆಯಿಂದಲೆ ನಾನು ಬದುಕಿದ್ದೇನೆ ಎಂದು ಪ್ರೀತಿಯಿಂದ ನುಡಿದಿದ್ದಾನೆ.

" ಅಲ್ಲಮ ಪ್ರಭುವೆ ನಿಮ್ಮ ಮಹಾನುಭಾವಿಗಳ ಸಂಗದಿಂದ
ತನು ಶುದ್ಧವಾಯಿತು
ಮನ ಶುದ್ಧವಾಯಿತು
ಧನ ಶುದ್ಧವಾಯಿತು
ಎನ್ನ ಸರ್ವಾಂಗವು ಶುದ್ಧವಾಯಿತು"(ವ-೩೨)

ಎಂದು ಬಸವಣ್ಣನು ಮನಬಿಚ್ಚಿ ಸ್ತುತಿಸುತ್ತಾನೆ. ಅಲ್ಲಮನನ್ನು ಬಸವಣ್ಣ ಬಹಳ ಗೌರವದಿಂದ ಕಂಡಿದ್ದಾನೆ. ಅನುಭವ ಮಂಟಪದ ಅಧ್ಯಕ್ಷನಾದ ಅವನಿಗೆ ತೋರಬೇಕಾದ ವಿನಯವನ್ನು ಇಲ್ಲಿ ಪ್ರದರ್ಶಿಸಿದ್ದಾನೆ. ಹೀಗೆ ಇಡಿ ಸಂಕಲನದಲ್ಲಿ ೧೪ ಜನ ವಚನಕಾರ, ವಚನಕಾರ್ತಿಯರ ೧೦೮ ವಚನಗಳಿವೆ. ಎಲ್ಲಾ ವಚನಕಾರರು ಅಲ್ಲಮನ ವ್ಯಕ್ತಿತ್ವವನ್ನು ಅತ್ಯಂತ ಭಕ್ತಿಯಿಂದ ಕೊಂಡಾಡಿದ್ದಾರೆ. ತಮ್ಮ ಜೀವನದಲ್ಲಿ ಅವನಿಂದಾದ ಉಪಯೋಗ ಹಾಗೂ ಮಹತ್ವವನ್ನು ಎತ್ತಿ ತೋರಿಸಿದ್ದರೆ.

೩. ಚೆನ್ನಬಸವೇಶ್ವರ ದೇವರ ಸ್ತೋತ್ರದ ವಚನಗಳು

* ಸಂಪಾದನೆಯ ಸಿದ್ಧವೀರಣ್ಣೊಡೆಯ.

ಎಳಮಲೆಯ ಗುರುಶಾಂತದೇವರ ಶಿಷ್ಯನಾಗಿರುವ ಸಂಪಾದನೆಯ ಸಿದ್ಧವೀರನು ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ಸಂಪಾದನ ಸಾಹಿತ್ಯದಲ್ಲಿ ಅಗ್ರಗಣ್ಯನಾಗಿದ್ದಾನೆ. ಸಂಪಾದನ ಸಮಯದ ಪರಂಪರೆಯಲ್ಲಿಯೆ ಸಂಪಾದನೆಯ ಸಿದ್ಧವೀರನಿಗೆ ವಿಶಿಷ್ಟ ಸ್ಥಾನವಿದೆ. ಈತ ಅತಿ ಹೆಚ್ಚು ಕೃತಿಗಳನ್ನು ಸಂಕಲಿಸಿದ ಮೊದಲ ವಚನಕಾರನಾಗಿದ್ದಾನೆ. ಪ್ರಸ್ತುತ 'ಚೆನ್ನಬಸವೇಶ್ವರ ದೇವರ ಸ್ತೋತ್ರದ ವಚನಗಳು' ಎಂಬ ಈ ಕೃತಿಯ ಸಂಕಲನಕಾರ ಸಂಪಾದನೆಯ ಸಿದ್ಧವೀರಣ್ಣೊಡೆಯ. ಹೀಗೆ ಹೇಳಲು ಕಾರಣ "ಹುಬ್ಬಳ್ಳಿಯ ಮೂರು ಸಾವಿರ ಮಠದ ೮೩ ನೇ ನಂಬರಿನ ಪ್ರತಿಯ ೧೩೪ ನೇಯ ಗರಿಯ ಮೇಲೆ 'ಸಂಪಾದನೆಯ ಸಿದ್ಧವೀರಣ್ಣೊದ್ದೇವರು ಸೇರಿಸಿದ ಚೆನ್ನಬಸೇಶ್ವರನ ಸ್ತೋತ್ರದ ವಚನಗಳು'ಎಂಬ ಉಲ್ಲೇಖವಿದೆ."[೧೫] ಹಾಗಾಗಿ ಸಿದ್ಧವೀರಣ್ಣೊಡೆಯನೇ ಈ ಕೃತಿಯನ್ನು ಸಂಕಲಿಸಿದ್ದಾನೆ ಎಂದು ಹೇಳಬಹುದು.

ಈ ಸಂಕಲನ ಷಟ್‌ಸ್ಥಲ ಚಕ್ರವರ್ತಿ, ಮಹಾನುಭವಿ ತತ್ವ ಪ್ರತಿಪಾದಕ, ಮಹಾಪ್ರಸಾದಿ ಚೆನ್ನಬಸವಣ್ಣನು ಬಸವಣ್ಣ, ಅಲ್ಲಮ ಪ್ರಭುವಿನಂತೆ ಜ್ಞಾನಲೋಕದ ಅದ್ಭುತ ಎಂದು ಇವನ ಸಮಕಾಲೀನ ಶರಣರು ಗುರುತಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನ ಕಲ್ಯಾಣದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ನೇತೃತ್ವದಲ್ಲಿ ಸಮಾವೇಶಗೊಂಡ ಅಸಂಖ್ಯಾತ ಶಿವಶರಣ-ಶರಣೆಯ ಸಮೂಹದಲ್ಲಿ ವಯಸ್ಸಿನಲ್ಲಿ ಕಿರಿಯನಾದರೂ ಅರುವಿನಲ್ಲಿ ಹಿರಿಯನಾಗಿ ಮಹಾಜ್ಞಾನಿ ಎನಿಸಿ, ದಿವ್ಯ ಜ್ಯೋತಿಯಂತೆ ಬೆಳಗಿ ಶಿವಪ್ರಕಾಶವನ್ನು ಹರಡಿದ ಚೆನ್ನಬಸವಣ್ಣನವರ ಹಿರಿದಾದ ಗುಣ, ವ್ಯಕ್ತಿತ್ವ ಹಾಗೂ ಜ್ಞಾನ ಅನುಪಮವಾದುದು. ಅನುಭವ ಮಂಟಪದ ಅನುಭಾವ ಗೋಷ್ಠಿಯಲ್ಲಿ ಸೇರುತ್ತಿದ್ದ ಶರಣ-ಶರಣೆಯರು ಚೆನ್ನ ಬಸವಣ್ಣನವರ ಜ್ಞಾನ ಪ್ರಭೆ ಹಾಗು ಸ್ಥಾನ ಪ್ರಭಾವಗಳನ್ನು, ಅವನ ವ್ಯಕ್ತಿತ್ವವನ್ನು ಹೃದಯ ತುಂಬಿ ಹಾಡಿದ್ದಾರೆ. ಮನದುಂಬಿ ಸ್ತುತಿಸಿದ್ದಾರೆ. ಅಂತಹ ೧೬ ಜನ ಶರಣ-ಶರಣೆಯರ ೧೦೮ ಸ್ತುತಿರೂಪದ ವಚನಗಳು ಈ ಸಂಕಲನದಲ್ಲಿ ಸೇರಿವೆ. ಇವುಗಳಲ್ಲಿ ಅಲ್ಲಮ ಪ್ರಭುವಿನ ೩೩ ವಚನಗಳು, ಬಸವಣ್ಣನ ೨೫ ವಚನಗಳು, ಸಿದ್ಧರಾಮನ ೩೩ ವಚನಗಳು ಸೇರ್ಪಡೆಗೊಂಡಿವೆ.

ಚೆನ್ನಬಸವಣ್ಣನು ಈ ಎತ್ತರಕ್ಕೆ ಬೆಳೆಯಲು ಆತನು ಬದುಕಿದ ಪರಿಸರ, ಆತ ಕತ್ತೆತ್ತಿ ನೋಡಿದರೆ ಎಲ್ಲೆಲ್ಲೂ ಲಿಂಗಪೂಜೆಯನ್ನೇ, ಜಂಗಮಾರಾಧನೆಯನ್ನೇ ಕಾಣುತ್ತಿದ್ದ. ಅವನು ಕಿವಿಗೊಟ್ಟು ಆಲಿಸಿದರೆ ಶಿವಾನುಭವದ ಗೋಷ್ಠಿಯ ಮಾತುಗಳನ್ನೆ ಕೇಳುತ್ತಿದ್ದ. ಆತ ಸ್ಪರ್ಶಿಸಿದರೆ ಗುರುಗಳ, ಶರಣರ, ಬಸವ, ಅಲ್ಲಮಾದಿಗಳ ಶ್ರೀಪಾದಗಳ್ನು ಸ್ಪರ್ಷಿಸುತ್ತಿದ್ದ. ಆತ ಸೇವಿಸಿದರೆ ಶಿವಪ್ರಸಾದವನ್ನೇ ಸೇವಿಸುತ್ತಿದ್ದ. ಎಂದು ಶರಣ ಚರಿತಾಮೃತದಲ್ಲಿ ಸಿದ್ಧಯ್ಯ ಪುರಾಣಿಕರು

---

೧೫. ಜಿ.ಎ.ಶಿವಲಿಂಗಯ್ಯ (ಸಂ) 'ಚೆನ್ನಬಸವೇಶ್ವರ ದೇವರ ಸ್ತೋತ್ರದ ವಚನಗಳು'.- ಪ್ರಸ್ಥಾವನೆ ಪುಟ-೬

ಹೇಳಿದ ಮಾತು ನಿಜವೆನಿಸುತ್ತದೆ. ಇಂತಹ ಧಾರ್ಮಿಕ ಪರಿಸರದಲ್ಲಿ ಬೆಳೆದ ಚೆನ್ನಬಸವಣ್ಣ ಮಹಾಮೇದಾವಿ, ಮಹಾಜ್ಞಾನಿಯಾಗಿ, ವಯಸ್ಸಿನಲ್ಲಿ ಕಿರಿಯನಾದರು ಜ್ಞಾನದಲ್ಲಿ ಅವರೆಲ್ಲರಿಗಿಂತ ಎತ್ತರದಲ್ಲಿ ನಿಲ್ಲುತ್ತಾನೆ. ಅವನ ವ್ಯಕ್ತಿತ್ವವನ್ನು ಕಂಡು ಬಸವಣ್ಣನೆ ಬೆರಗಾಗಿ 'ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತು' ಎಂದು ಹೇಳುತ್ತಾನೆ.

ಬಸವ–ಅಲ್ಲಮರಿಗಿಂತ ವಯಸ್ಸಿನಲ್ಲಿ ಬಹಳ ಚಿಕ್ಕವನಾದ ಚೆನ್ನಬಸವಣ್ಣನಲ್ಲಿ ವಯಸ್ಸಿಗೆ ಮೀರಿದ ಬುದ್ಧಿಶಕ್ತಿ ಅವನಲ್ಲಿತ್ತು. ಪ್ರತಿಯೊಂದನ್ನು ವಿಮರ್ಶೆಯ ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸುವ ರೀತಿ, ತಾರ್ಕಿಕ ದೃಷ್ಟಿ, ಸ್ವಾಧ್ಯಾಯ–ಸ್ವಾನುಭವದಿಂದ ಪಡೆದ ಆಧ್ಯಾತ್ಮಿಕ ಚಿಂತನೆಗಳು ಪ್ರತಿಯೊಬ್ಬರನ್ನು ಅಚ್ಚರಿಗೊಳ್ಳುವಂತೆ ಮಾಡಿದವು. ಹಿರಿಯರಾದರೂ ಸಹ ಕಿರಿಯನಾದ ಚೆನ್ನಬಸವಣ್ಣನಿಗೆ ತಲೆಬಾಗುವ ಪ್ರಸಂಗಗಳು ಸಾಕಷ್ಟು ಜರುಗಿದವು. ಬಾಲ್ಯದಿಂದಲೇ ಚೆನ್ನಬಸವಣ್ಣನ ಈ ಸರ್ವಾಂಗೀಣ ಅದ್ಭುತ ಬೆಳವಣಿಗೆಯನ್ನು ಪ್ರತ್ಯಕ್ಷ ಕಾಣುತ್ತ ಬಂದಿದ್ದ ಬಸವಣ್ಣನೂ ಕೂಡಾ ಚೆನ್ನಬಸವಣ್ಣನವರ ಅಪೂರ್ವ ಸಾಧನೆಗೆ ಮಾರು ಹೋಗಿ ಕೊಂಡಾಡಿದ್ದಾನೆ.

"ಬಿತ್ತಿ ಬೆಳೆಯದೇ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ
ಸುಗಂಧ ಬಂಧುರದಂತೆ ಹುಟ್ಟುತ್ತವೆ ಪರಿಮಳ
ಆದಿ ಅನಾದಿ ಇಲ್ಲದ ಮುನ್ನ ತನ್ನಿಂದಲೇ ತಾನಾಗಿರ್ದ ಕಾರಣ
ಮುಟ್ಟದೆ ತಟ್ಟದೆ ಗುರು ಕಾರುಣ್ಯವ ಪಡೆದು ಲಿಂಗ ಸ್ವಯವಾಗಿ
ಎನಗೆ ಗತಿಪಥವ ತೋರಿಸಬೇಕೆಂದು ಆಗಾದನು
ಕೂಡಲ ಸಂಗಮ ದೇವರಲ್ಲಿ ಚೆನ್ನಬಸವಣ್ಣನು" (ವ–೩೬)

ಎಂಬಲ್ಲಿ ಬಸವಣ್ಣನವರು, ಚೆನ್ನಬಸವಣ್ಣನವರ ಜ್ಞಾನಪ್ರಭೆ ಹಾಗು ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಬಹು ನೈಜವಾಗಿ ಹೃದಯಂಗಮವಾಗಿ ಚಿತ್ರಿಸಿದ್ದಾನೆ.

ಅನುಭವ ಮಂಟಪ ಮಾನವ ಕಲ್ಯಾಣದ ಕೇಂದ್ರ ಬಿಂದುವಾಗಿತ್ತು. ವಚನ ದೀಪ್ತಿಯ ಅನಾವರಣಕ್ಕೆ ಆಸರೆಯಾಗಿತ್ತು. ಇಂಥ ಪರಿಸರದಲ್ಲಿ ಚೆನ್ನಬಸವಣ್ಣನ ಪಾತ್ರ ಅಗ್ರಗಣ್ಯವಾದುದು. ಅನುಭವ ಮಂಟಪದ ಕಾರ್ಯಶಕ್ತಿಯಲ್ಲಿ ಚೆನ್ನಬಸವಣ್ಣನದು ಪ್ರಮುಖ ಪಾತ್ರ. ಲಿಂಗವೇ ಮೆಚ್ಚಿ ಅಹುದಹುದೆನ್ನುವಂತಹ ಸಾಧನೆಯನ್ನು ಮೈಗೂಡಿಸಿಕೊಂಡಿದ್ದ ಚೆನ್ನಬಸವಣ್ಣನವರ ಅವಿರಳ ಜ್ಞಾನವನ್ನು ಕಂಡು ಅನುಭವ ಮಂಟಪದ ಪ್ರಥಮ ಅಧ್ಯಕ್ಷನಾದ ಅಲ್ಲಮ ಪ್ರಭು

"ಕಿರಿಯರಾದಡೇನು ಹಿರಿಯರಾದಡೇನು
ಅರಿವಿಂಗೆ ಹಿರಿದು ಕಿರುದುಂಟೆ ?
ಆದಿ ಅನಾದಿ ಇಲ್ಲದಂದು
ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು
ಗೊಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ
ಎಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ". (ವ–೧೭)

ಅಲ್ಲಮನೆ ಚೆನ್ನಬಸವಣ್ಣನನ್ನು 'ಮಹಾಜ್ಞಾನಿ' ಎಂದು ಕೊಂಡಾಡಿದ್ದಾನೆ. ವಯಸ್ಸಿನಲ್ಲಿ ಕಿರಿಯವನಾದರೇನು, ಅರಿವಿನಲ್ಲಿ ನಮಗೆಲ್ಲರಿಗಿಂತ ಹಿರಿಯನೆಂಬ ಅಲ್ಲಮನ ಅಂತರಾಳದ ಮಾತು ಚೆನ್ನಬಸವಣ್ಣನವರನ್ನು ಬಹು ಎತ್ತರಕ್ಕೆ ಬೆಳೆಸುತ್ತವೆ. ಮಹಾಮಾನವನಾದ, ನುಡಿದ

ನುಡಿಯನ್ನೆಲ್ಲ ಮುತ್ತಿನ ಹಾರವಾಗಿಸಿದ, ಕಾಯಕದೊಳಗೆ ಕೈಲಾಸ ಕಂಡ, ದೀನದಲಿತರಲ್ಲಿ ಪರಶಿವನನ್ನು ಕಂಡ ಬಸವಣ್ಣನು ಮಹಾಜ್ಞಾನಿಯಾದ ಅಳಿಯ ಚೆನ್ನಬಸವಣ್ಣನನ್ನು, ಆತನ ಮಹಾ ವ್ಯಕ್ತಿತ್ವವನ್ನು ಸಹಜವಾಗಿ ಗುರುತಿಸಿದ್ದಾನೆ. ಷಟ್‌ಸ್ಥಲ ಸಿದ್ಧಾಂತಿ, ಶಿವಯೋಗ ಸಾಧಕ, ದಾರ್ಶನಿಕ, ಮಹಾಪ್ರಸಾದಿ ಚೆನ್ನಬಸವಣ್ಣನನ್ನು

"ಬೆಳಗಿನೊಳಗಣ ಬೆಳಗು ಮಹಾಬೆಳೆಗೆಂಬ ಪ್ರಸಾದದಲ್ಲಿ
ಒದಗಿದ ಚೆನ್ನಬಸವಣ್ಣನೆಂಬ ಪ್ರಸಾದಿಯ ಪರಿಣಾಮದ
ಪರಮಾನಂದವನೇನೆಂದುಪಮಿಸುವೆನಯ್ಯಾ
ಪರಮಾಶ್ರಯವೆ ತಾನಾಗಿ, ಕೂಡಲ ಸಂಗಮದೇವಯ್ಯಾ
ಚೆನ್ನಬಸವಣ್ಣನೆಂಬ ಮಹಾಪ್ರಸಾದಿ
ಎನ್ನ ವಾಙ್ಮನಕ್ಕಗೋಚರವಾಗಿ ನಾನೇನೆಂಬೆನಯ್ಯಾ" (ವ-೫೬)

ಎಂದು ಮಹಾಜ್ಞಾನಿ, ಮಹಾಪ್ರಸಾದಿಯಾದ ಚೆನ್ನಬಸವಣ್ಣನು ಬಸವಣ್ಣನ ವಾಕ್ ಮನಗಳಿಗೆ ಅಗೋಚರವಾಗಿದ್ದಾನೆ. ಇಂತಹ ಸತ್ಯವಂತ, ಶರಣ, ಭಕ್ತ, ಐಕ್ಯಸ್ಥಲದ ಸಾಧಕ,ಸ್ವಾನುಭವಿ, ಪಂಚಾಚಾರ ಶೀಲ ಸಂಪನ್ನ, ಅಷ್ಟಾವರಣ ಸತ್ಯ-ತತ್ವಗಳ ಅನಾವರಣದ ಚೇತನವಾಗಿದ್ದಾನೆ. ಇಂಥ ಚೆನ್ನಬಸವಣ್ಣನ ಬಗ್ಗೆ ನಾನೇನು ಹೇಳಲಿ ಎಂಬುದು ಆತನ ವ್ಯಕ್ತಿತ್ವದ ಘನತೆಯನ್ನು ತೋರಿಸುತ್ತದೆ.

ಚೆನ್ನಬಸವಣ್ಣ
"ಗುರುವಿಲ್ಲದ ಶಿಷ್ಯ, ಶಿಷ್ಯನಿಲ್ಲದ ಗುರು
ಇಂತೀ ಒಂದಕ್ಕೊಂದು ಇಲ್ಲದೆ
ಗೊಹೇಶ್ವರ ಲಿಂಗದಲ್ಲಿ ಸಹಜದುದಯವಾದನು
ನಮ್ಮ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು" (ವ-೧೧)

ಎಂಬ ಅಲ್ಲಮನ ಮಾತುಗಳು ಅತಿಶಯೋಕ್ತಿ ಎನಿಸಲಾರವು ಎಂದು ಅನುಭವ ಮಂಟಪದಲ್ಲಿ ಸೇರಿದ ಶರಣರ ಸಮೂಹದ ಮಧ್ಯದಲ್ಲಿ ಚೆನ್ನ ಬಸವಣ್ಣನ ಸಾಧನೆಯನ್ನು ಶ್ಲಾಘಿಸುತ್ತ 'ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ, ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೆಂಬ ಪ್ರಸಾದಿಗೆ ನಮೋ ನಮೋ ಎಂಬೆ' ಎಂಬಂತಹ ಮಾತು ಚೆನ್ನಬಸವಣ್ಣನವರ ಆಧ್ಯಾತ್ಮಿಕ ಜೀವನಕ್ಕೆ, ಷಟ್‌ಸ್ಥಲ ಸಾಧನೆಗೆ ಹಿಡಿದ ಕನ್ನಡಿ. ಷಟ್‌ಸ್ಥಲ ನಿರ್ಣಯದ ಪರಮವತಾರಿಯಾಗಿ ಕಂಡುಬರುತ್ತಾನೆ.

"ಭಕ್ತಿ ಸ್ಥಲ ಬಸವಣ್ಣಂಗಾಯಿತು,
ಮಹೇಶ್ವರ ಸ್ಥಲ ಮಡಿವಾಳಂಗಾಯಿತು
ಪ್ರಸಾದಿ ಸ್ಥಲ ಚೆನ್ನಬಸವಣ್ಣಂಗಾಯಿತು"

ಎಂದು ಹೇಳುವಂತೆ, ಪ್ರತಿಯೊಬ್ಬ ಶರಣನು ಒಂದೊಂದು ಸ್ಥಲದಲ್ಲಿ ನಿಂತು ಐಕ್ಯವನ್ನು ಸಾಧಿಸುತ್ತಿದ್ದರು. ಷಟ್ ಸ್ಥಲಗಳಲ್ಲಿ ಪ್ರಸಾದಿಸ್ಥಲ ಚನ್ನಬಸವಣ್ಣನವರದಾಗಿತ್ತು. ಪ್ರಸಾದಿ ಸ್ಥಲದಲ್ಲಿ ಸಾಧಕನ ನಿಷ್ಠಾಭಕ್ತಿ ಅವಧಾನ ಭಕ್ತಿಯಾಗುತ್ತದೆ. ಇಚ್ಛಾಶಕ್ತಿ ಸಹಿತವಾದ ಶಿವಲಿಂಗದ ಆರಾಧನೆಯಿಂದ ಅಹಂಕಾರ ಅಳಿದು ನಿರಹಂಕಾರ ಭಾವ ಮೂಡುತ್ತದೆ. ಗುರುವಿನಲ್ಲಿ ಭಕ್ತ,

ಲಿಂಗದಲ್ಲಿ ನಿಷ್ಠೆ, ಜಂಗಮದಲ್ಲಿ ಸುಯಿದಾನ, ಅರ್ಪಿತದಲ್ಲಿ ಅವಧಾನ, ಪ್ರಸಾದದಲ್ಲಿ ಪರಿಣಾಮ– ಇವು ಪ್ರಸಾದಿಯ ಲಕ್ಷಣಗಳಾಗಿವೆ. ಈ ಎಲ್ಲಾ ಗುಣ–ಲಕ್ಷಣಗಳನ್ನು ಅಳವಡಿಸಿಕೊಂಡು ಪ್ರಸಾದಿ ಸ್ಥಲದಲ್ಲಿ ನಿಂತ ಚೆನ್ನಬಸವಣ್ಣನ ವ್ಯಕ್ತಿತ್ವವನ್ನು ಅಲ್ಲಮ ಪ್ರಭು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾನೆ.

"ಪ್ರಸಾದಿಗಳು ಪ್ರಸಾದಿಗಳೆಂಬಿರಿ
ಅಂದು, ಇಂದು, ಎಂದೂ ಚೆನ್ನಬಸವಣ್ಣನೊಬ್ಬನೆ ಪ್ರಸಾದಿ
ಆದಿ ಅನಾದಿಯಿಲ್ಲದಂದು ಚೆನ್ನಬಸವಣ್ಣನೊಬ್ಬನೆ ಪ್ರಸಾದಿ
ವೇದ ಶಾಸ್ತ್ರಗಳಿಲ್ಲದಂದು ಚೆನ್ನಬಸವಣ್ಣನೊಬ್ಬನೆ ಪ್ರಸಾದಿ
– – – – – – – – – – – – – – – – – –
ಗೊಹೇಶ್ವರಾ ನೀವೇ ಲಿಂಗವು, ಬಸವಣ್ಣನೆ ಗುರು,

ಚೆನ್ನಬಸವಣ್ಣನೊಬ್ಬನೆ ಪ್ರಸಾದಿ ಮತ್ತಾರನೂ ಕಾಣೆನಯ್ಯಾ" (ವ–೧೮)

ಎಂದು ಚೆನ್ನಬಸವಣ್ಣನವರ ಪ್ರಸಾದಿ ಸ್ಥಲದ ಮಹಿಮೆಯನ್ನು ಕೊಂಡಾಡಿದ್ದಾರೆ. ಅವನ ಹಿರಿಮೆಗೆ ಬೆರಗಾಗಿ, ಅವನಲ್ಲಿರುವ ಅವಿರಳ ಜ್ಞಾನಕ್ಕೆ ಮನಸೋತು ಅವನ ಪಾದಕ್ಕೆ ನಮೋ, ನಮೋ ಎಂಬೆನು ಎಂದು ಗೌರವಿಸಿದ್ದಾರೆ.

ಸ್ವಯಂ ಸಿದ್ಧನಾದ ಕರ್ಮಯೋಗಿ ಸಿದ್ಧರಾಮನಂಥ ಮಹಾಶಕ್ತಿಗೆ ಮುಕ್ತಿಯ ಅರಿವನ್ನು ನೀಡಿ, ಲಿಂಗಾಂಗಿಯನ್ನಾಗಿ ಮಾಡಿದವನು ಮಹಾಗುರು ಚೆನ್ನಬಸವಣ್ಣನವರು. ಅಂತಹ ಗುರುವಿನ ಮಹಿಮೆಯನ್ನು ಸಿದ್ಧರಾಮನು

"ಶುದ್ಧವನರಿದೆ ಚೆನ್ನಬಸವಣ್ಣ ನಿಮ್ಮಿಂದೆ
ಸಿದ್ಧವನರಿದೆ ಚೆನ್ನಬಸವಣ್ಣ ನಿಮ್ಮಿಂದೆ
ಪ್ರಸಿದ್ಧವನರಿದೆ ಚೆನ್ನಬಸವಣ್ಣ ನಿಮ್ಮಿಂದೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಚೆನ್ನಬಸವಣ್ಣ ಗುರುವಾಗಿ ಬಂದು
ಎನ್ನ ಜನ್ಮಕರ್ಮವ ನಿವೃತ್ತಿ ಮಾಡಿದನಯ್ಯಾ". (ವ–೭೨)

ಎಂದು ಚೆನ್ನಬಸವಣ್ಣನನ್ನು ಗುರುವಾಗಿ, ಪರಮಾತ್ಮನನ್ನಾಗಿಸಿ ಗೌರವದಿಂದ ಸ್ತುತಿಸಿದ್ದಾನೆ.

ವೈರಾಗ್ಯ ನಿಧಿ, ವೀರ ವಿರಾಗಿಣಿ ಅಕ್ಕಮಹಾದೇವಿ "ಶರಣ ಸಮ್ಯಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನ ಭವ ನಾಸ್ತಿಯಾಯಿತ್ತಯ್ಯಾ ಪ್ರಭುವೆ" (ವ–೯೬) ಎಂದು ಗೌರವದಿಂದ ಕಂಡಿದ್ದಾಳೆ. "ಜ್ಞಾನದ ಸೂತ್ರಧಾರಿ ಚೆನ್ನಬಸವಣ್ಣ"(ವ–೯೯) ಏಲೇಶ್ವರ ಕೇತಯ್ಯ ನುಡಿದರೆ, "ಚೆನ್ನಬಸವಣ್ಣನೇ ಎನ್ನ ಅಂತರಂಗದ ಸುಜ್ಞಾನ ಪ್ರಾಣಲಿಂಗವೆಂದರಿದು, ಮನೋಭಾವದಿಂದ ಆರಾಧಿಸಿ, ಪ್ರಾಣಲಿಂಗಿ ಸಂಬಂಧಿಯಾಗಿರ್ದೆನು" (ವ–೧೦೦) ಎಂದು ತೋಂಟದ ಸಿದ್ಧಲಿಂಗರು ಹೇಳುತ್ತಾರೆ. ಸಕಲೇಶ ಮಾದರಸನಂಥ ಶರಣನು "ನಾನು ಆವರನ್ನು ಒಲ್ಲೆನು, ಚೆನ್ನಬಸವರಾಜದೇವರ ಶ್ರೀಪಾದದ ಸನ್ನಿಧಿಯನಗಲದಂಥ ವರವನೇ ಕೊಡುದೇವಾ"(ವ–೧೦೮) ಎಂದು ಪರಮಾತ್ಮನನ್ನು ಬೇಡಿಕೊಳ್ಳುತ್ತಾನೆ.

[illegible]

ಚೆನ್ನಬಸವಣ್ಣನು ಆಗಮಗಳಲ್ಲಿ ಕಂಡುಬಂದಂತಹ ಷಟ್‌ಸ್ಥಲ ತತ್ವಗಳನ್ನು ಆಯ್ದುಕೊಂಡು ಅವುಗಳನ್ನು ಶಾಸ್ತ್ರೀಯವಾಗಿ ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಜೋಡಿಸಿ, ವೀರಶೈವ ಧರ್ಮಕ್ಕೊಂದು ಸಂವಿಧಾನವನ್ನು ರೂಪಿಸಿಕೊಟ್ಟವನಾಗಿದ್ದಾನೆ. ಹಾಗಾಗಿ ಅಂದಿನ ಹಾಗೂ ಮುಂದಿನ ಅನೇಕ ಶಿವಶರಣ-ಶರಣೆಯರು ಚೆನ್ನಬಸವಣ್ಣನವರ ವ್ಯಕ್ತಿತ್ವವನ್ನು ಹಾಗು ಹಿರಿಮೆ ಗರಿಮೆಗಳನ್ನು, ಮಹಿಮೆಗಳನ್ನು ಬಾಯಿ ತುಂಬಾ ಹೊಗಳಿದ್ದಾರೆ. ಚೆನ್ನಬಸವಣ್ಣನವರ ಪ್ರಭಾವವು ಅವನ ಸಮಕಾಲೀನ ಹಾಗೂ ನಂತರದ ಶಿವಶರಣರ ಮೇಲೆ ಗಾಢವಾದ ಪರಿಣಾಮ ಬೀರಿದೆ. ವೀರಶೈವ ಸಿದ್ಧಾಂತದ ಒಳಹೊರಗನ್ನು ಮೈಗೂಡಿಸಿಕೊಂಡಿದ್ದ ಚೆನ್ನಬಸವಣ್ಣ ವೀರಶೈವ ಧರ್ಮಕ್ಕೆ ವಿಶ್ವಧರ್ಮದ ಸ್ಥಾನವನ್ನು ಒದಗಿಸಿಕೊಟ್ಟ ಶ್ರೇಯಸ್ಸು ಇವನಿಗೆ ಸೇರುತ್ತದೆ. ಇದಲ್ಲದೆ ಚೆನ್ನಬಸವಣ್ಣನು ವಚನಕಾರನಾಗಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕಾಣಿಕೆಯನ್ನು ನೀಡಿದ್ದಾನೆ.

೪. ಶರಣ ಸ್ತೋತ್ರದ ವಚನಗಳು[೧೬]

*ಎಳಮಲೆಯ ಗುರು ಶಾಂತದೇವ

ತೋಂಟದಾರ್ಯ ಪರಂಪರೆಯವನಾದ ಎಳಮಲೆಯ ಗುರು ಶಾಂತದೇವನು ಈ ಸಂಕಲನದಲ್ಲಿ ೨೧ ವಚನಕಾರ, ವಚನಕಾರ್ತಿಯರ ೧೧೦ ಸ್ತುತಿರೂಪದ ವಚನಗಳನ್ನು ಸಂಕಲಿದ್ದಾನೆ. ಇದಲ್ಲದೆ ಈತ ಷಟ್‌ಸ್ಥಲ ಸ್ತೋತ್ರದ ವಚನಗಳು, ಲಿಂಗ ವಿಕಳಾವಸ್ಥೆಯ ವಚನಗಳು, ಅಷ್ಟಾವರಣದ ವಚನಗಳು, ಮಿಶ್ರ ಸ್ತೋತ್ರದ ವಚನಗಳು ಎಂಬ ಸಂಕಲನಗಳನ್ನು ರಚಿಸಿದ್ದಾನೆ.

ಮನುಕುಲವು ಹೊಂದಬಹುದಾದ ಅತ್ಯುನ್ನತ ನಿಲುವನ್ನು ಹೊಂದಿದ ಶರಣರು ಮತ, ಕುಲ, ವರ್ಣ, ಜಾತಿ, ವಯಸ್ಸು, ಅಂತಸ್ತುಗಳಲ್ಲಿ ಮೇಲು-ಕೀಳೆನ್ನದೆ ಸರ್ವರೂ ಸಮಾನರು ಎಂಬ ಧೋರಣೆಯಿಂದ ಬದುಕಿ, ಸ್ವಾತಂತ್ರ್ಯ, ಸಮಾನತೆ, ಬಂಧುತ್ವವನ್ನು ಎತ್ತಿ ಹಿಡಿದು, ಅದರಂತೆ ಮುಂದಿನವರು ಬದುಕಲೆಂಬ ಮಾರ್ಗವನ್ನು ನಿರ್ಮಿಸಿದವರು. ಅವರ ಮಾರ್ಗವೆ ಶರಣ ಮಾರ್ಗ, ಅನುಭಾವ ಮಾರ್ಗ, ಶಿವಮಾರ್ಗ. ಬಸವಾದಿ ಶರಣರಿಂದ ನಿರಂತರವಾಗಿ ನಡೆಯುತ್ತಿರುವ ಈ ಪರಂಪರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ-ಪ್ರಶಿಷ್ಯರಲ್ಲಿ ಹಾಗೂ ಆನಂತರದ ಅನುಭಾವಿಗಳಲ್ಲಿ ಪಸರಿಸಿ ಇಂದಿನವರೆಗೂ ಹೆಜ್ಜೆ ಹಾಕುತ್ತಲಿದೆ. ಇಂತಹ ಶರಣರನ್ನು, ಅನುಭಾವಿಗಳನ್ನು ಅನೇಕ ವಚನಕಾರರು ತಮ್ಮ ವಚನಗಳ ಮೂಲಕ ಸ್ತುತಿಸಿದ್ದಾರೆ. ಗೌರವಿಸಿದ್ದಾರೆ. ಅವನ ಮಹತ್ವವನ್ನು ಜಗತ್ತಿಗೆ ಬಿತ್ತರಿಸಿದ್ದಾರೆ.

ವೀರಶೈವರಲ್ಲಿ ಶರಣನಿಗೆ ಅತಿಮಹತ್ವದ ಸ್ಥಾನವಿದೆ. ಅಂತಹ ಶರಣನು ಈ ಜಗತ್ತಿನ ಸಾಮಾನ್ಯ ಜನರಿಗಿಂತ ತೀರ ಭಿನ್ನ. ಪರಶಿವನ ಸಾಕಾರ ರೂಪವೇ ಶರಣ. ವಿಚಾರ ನೆಲೆಗೊಂಡವ, ದೀಕ್ಷೆ ಪಡೆದವ, ಸಂಸ್ಕಾರವುಳ್ಳವ, ಶಿವಕಳಾತ್ಮ ಸದ್ಭಕ್ತನೆ ಶರಣ ಎಂದು ಗುರುತಿಸುತ್ತಾರೆ.

---

೧೬. ಡಾ॥ ವೀರಣ್ಣ ರಾಜೂರ.(ಸಂ) 'ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು.' ಪ್ರ. ವೀ.ಅ.ಸಂ.ಶ್ರೀ.ಜ.ತೋಂ.ಸಂ.ಮಠ.ಗದಗ

ಹಾಗೆ ನೋಡಿದಲ್ಲಿ 'ಸಚ್ಚಿದಾನಂದ ನಿತ್ಯ ಪರಿಪೂರ್ಣ ಸ್ವರೂಪಿ'ಯಾಗಿ ಕಂಡುಬರುತ್ತಾನೆ. ಶರಣನ ಔನ್ನತ್ಯವನ್ನು ಬಸವಣ್ಣ ತನ್ನದೊಂದು ವಚನದಲ್ಲಿ ಈ ರೀತಿ ಚಿತ್ರಿಸಿದ್ದಾನೆ.

" ಸಮುದ್ರ ಘನವೆಂಬೆನೆ ಧರೆಯ ಮೇಲಡಗಿತ್ತು
ಧರೆ ಘನವೆಂಬೆನೆ ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು
ನಾಗೇಂದ್ರ ಘನವೆಂಬೆನೆ, ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು
ಪಾರ್ವತಿ ಘನವೆಂಬಂತೆ, ಪರಮೇಶ್ವರನ ಅರ್ಧಾಂಗಿಯಾದಳು
ಅಂಥ ಪರಮೇಶ್ವರ ಘನವೆಂಬೆನೆ
ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೇಲಡಗಿಹನಾಗಿ
ನಮ್ಮ ಶರಣರೆ ಘನವೆಂಬೆನು"[೧೭] –(ವ.೧೧೦)

ಸಮುದ್ರ, ಧರೆ, ನಾಗೇಂದ್ರ , ಪಾರ್ವತಿ, ಶಿವನಿಗಿಂತ ದೊಡ್ಡವನು ನಮ್ಮ ಶರಣ, ಪರಶಿವನನ್ನೆ ತನ್ನ ಮನದ ಕೊನೆಯಲ್ಲಿರಿಸಿಕೊಂಡಿರುವ ಶರಣನ ಘನತೆಯನ್ನು ಎತ್ತಿಹಿಡಿದಿದ್ದಾನೆ. ಹೀಗೆ ಶರಣನ ಮಹಿಮೆಗಳ ವರ್ಣನೆ, ಹಿರಿಮೆ, ವಿಲಕ್ಷಣವಾದ ವ್ಯಕ್ತಿತ್ವ, ವ್ಯಾಖ್ಯಾನ, ನಡೆ-ನುಡಿ, ಗುಣಾತಿಶಯಗಳ ಕಥನವೇ ಈ ಸಂಕಲನದ ವಸ್ತು.

ಶರಣನು ಜ್ಞಾನಿ ಅವನ ಆಚರಣೆಯ ಹಿಂದಿನ ಅಂತರಾರ್ಥವೆಲ್ಲ ಅವನಿಗೆ ತಿಳಿದಿರುತ್ತದೆ. ಶರಣನು ತಿಳಿದು ತಿಳಿದು ಆಚರಿಸುವನು. ಮರೆದು ಆಚರಿಸನು. ಜ್ಞಾನದಿಂದ ಭೇದವಲ್ಲದೆ ಅವನಿಗೆ ದೇಹದಿಂದ ಭೇದವಿಲ್ಲ. ತನ್ನ ಕ್ರಿಯೆಯ ಸಂಪೂರ್ಣ ಅರಿವು ಆತನಿಗಿರುತ್ತದೆ. ಶರಣನು ತನ್ನ ಹಿಂದಿನ ಮಾರ್ಗ ಕ್ರಮದಲ್ಲಿ ಆಸೆಯನ್ನು ಗೆದ್ದು ಅಂಟಿದ್ದರೂ ಪ್ರಪಂಚಕ್ಕೆ ಅಂಟದಂತಿರುತ್ತಾನೆ. ಇವನ ಅಸ್ತಿತ್ವವು ಬಾಹ್ಯ ನೋಟಕ್ಕೆ ಮಿಕ್ಕೆಲ್ಲರಂತೆ ಇದ್ದರೂ ಮನೋದೃಷ್ಟಿ ಸಂಪೂರ್ಣವಾಗಿ ಭಿನ್ನವಾದುದರಿಂದ ಶರಣನ ಇರವು ವಿಶಿಷ್ಟವಾದುದು. ಶರಣನ ನಡೆಯು ಈ ಬಗೆಯಾಗಿ ಹೆಚ್ಚಿನ ಅರ್ಥವಂತಿಕೆಯಿಂದ ಕೂಡಿರುತ್ತದೆ. ಅವನ ಬಾಹ್ಯಕ್ರಿಯೆ, ಆಂತರ್ಯದಲ್ಲಿ ಬೇರೆಯೇ ಆಗಿರುತ್ತದೆ. ಅವನು ಶಿವನಿಗೆ ಸಂಪೂರ್ಣ ಶರಣು ಹೊಕ್ಕಿರುತ್ತಾನೆ. ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುತ್ತಾನೆ. "ಸ್ತುತಿಯಿಲ್ಲ, ನಿಂದೆಯಿಲ್ಲ, ನಂಟಿಲ್ಲ, ಹಗೆಯಿಲ್ಲ, ಅರುಹಿಲ್ಲ, ಮರಹಿಲ್ಲತಾನೆಂಬ ನೆನೆಹಿಲ್ಲವಾಗಿ"[೧೮] ಎಂಬ ಶರಣರ ಗುಣಗಳು ಭಗವದ್ಗೀತೆಯ ಸ್ಥಿತ ಪ್ರಜ್ಞನನ್ನು ಹೋಲುತ್ತಾನೆ.

ಬ್ರಹಾಂಡದ ಸೃಷ್ಟಿ-ಸ್ಥಿತಿ-ಲಯ ಕಾರಣರಾದ ಬ್ರಹ್ಮ-ವಿಷ್ಣು-ರುದ್ರರ ಈ ತತ್ವತ್ರಯಕ್ಕೆ ಶರಣನೆ ಜನ್ಮದಾತ. ಇಂತಹ ಶರಣನ ವಿದ್ಯೆ-ಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಈತನ ಶಾಂತಿ-ಸೈರಣೆಯಿಂದ ಹುಟ್ಟಿದಾತ ವಿಷ್ಣು. ಈತನ ಕೋಪ-ಕ್ರೋಧದಿಂದ ಹುಟ್ಟಿದಾತ ರುದ್ರ[೯]. ಇಂತಹ ತ್ರಿಮೂರ್ತಿಗಳ ಜನ್ಮದಾತನಾದ ಶರಣನಿಗೆ ಚೆನ್ನಬಸವಣ್ಣ ಶರಣೆಂದಿದ್ದಾನೆ. ಶರಣ ಕುಲವಿಲ್ಲದ

---

೧೭. ವೀರಣ್ಣ ರಾಜೂರ, (ಸಂ) 'ಶರಣ ಸ್ತೋತ್ರದ ವಚನಗಳು.' (ಸಂ. ಎಳಮಲೆಗುರುಶಾಂತದೇವ, ವ೧೧೦)

೧೮. ಆದಯ್ಯ, ವ.೨೮೫: ಪುಟ೧೬೧

೧೯. ಡಾ|| ವೀರಣ್ಣ ರಾಜೂರ (ಸಂ) 'ಶರಣಸ್ತೋತ್ರದ ವಚನಗಳು.' (ಸಂ. ಎ.ಗು.ಶಾಂತದೇವ-ವ೧)

ಅಕುಲನು, ಶರೀರವಿಲ್ಲದ ಸಂಬಂಧಿ, ಮತ್ಸರವಿಲ್ಲದ ಮಹಿಮನೀತ, ಈತನಿಗೆ ಕುಲಮದವೆಂಬುದಿಲ್ಲ. ಅಯೋನಿ ಸಂಭವನಾದುದರಿಂದ ಛಲಮದವೆಂಬುದಿಲ್ಲ. ಧನಮದವಿಲ್ಲ. ಈತ ತ್ರಿಕರಣ ಶುದ್ಧ. ಅಸಾಧ್ಯವನ್ನು ಸಾಧಿಸಿದ್ದರಿಂದ ವಿದ್ಯಾಮದವೂ ಇಲ್ಲ.

ಸೀಮೆ–ಭೂಮಿ, ಕಾಮ–ಕತ್ತಲೆ, ನೇಮ–ನಿತ್ಯ, ಸಾಲ–ಶೀಲ ಎಲ್ಲವನ್ನು ಮೀರಿನಿಂತವನು. ಮನದ ಹೊಲೆಯ ಕಳೆದವನಿಗೆ ಕುಲಛಲವೂ ಇಲ್ಲ. ಕಲಿಯುಗದ ಕತ್ತಲೆಯ ದಾಟಿ ನಿಂತವನು. ಹಸಿವಿನ ಭಯವಿಲ್ಲದ ನಿತ್ಯ ತೃಪ್ತ, ಸತ್ಯಜ್ಞಾನಿ, ತಾಪತ್ರಯಗಳ ಕಳೆದವ. ಸೂರ್ಯಚಂದ್ರರ ಬೆಳಗನಾಶ್ರಯಿಸದೆ ಸ್ವಯಂ ಪ್ರಕಾಶವುಳ್ಳವನು. ಹುಟ್ಟು ಸಾವುಗಳಿಲ್ಲದವನು. ಆಕಾರವು ಇಲ್ಲ. ನಿರಾಕಾರನೂ ಅಲ್ಲ. ಕಾಯ–ಜೀವ ವಂಚಕನಲ್ಲ. ಈತ ನಿತ್ಯ ನಿರಂತರ. ಅರಿವು–ಮರೆವು ಇಲ್ಲದ ಪರಿಪೂರ್ಣ ವಿಶ್ವಾಧಿಪತಿಯಾದ ಪರಬ್ರಹ್ಮನೀತ, ಮೂರ್ತನಲ್ಲ, ಅಮೂರ್ತನಲ್ಲ, ಲಿಂಗದಲ್ಲಿ ಪ್ರಾಣ, ಪ್ರಾಣದಲ್ಲಿ ಪ್ರಸಾದವುಳ್ಳವ. ದೇಹಿಯೂ ಅಲ್ಲ ನಿರ್ದೇಹಿಯೂ ಅಲ್ಲ. ಭೋದ–ನಿರ್ಭೋದನಲ್ಲ. ಕಾಮಿಯೂ ಅಲ್ಲ. ನಿಃಕಾಮಿಯೂ ಅಲ್ಲ. ಅಡಿಯಿಂದ ಮುಡಿವರೆಗೆ ಅಮೃತ ಮಯವಾಗಿರುವ ಶರಣನ ಸರ್ವಾಂಗವೂ ಲಿಂಗ.

ಶರಣ ನಡೆವ ಗತಿ ಲಿಂಗದ ಗತಿ. ಶರಣ ನುಡಿದ ನುಡಿ ಲಿಂಗದ ನುಡಿ. ಶರಣ ದೇಹ ಧರಿಸಿ ಬಂದರೂ ಪದ್ಮ ಪತ್ರದ ಜಲದಂತೆ, ಮೋಡದ ಮರೆಯ ಚಂದ್ರನಂತೆ, ಗಿಡದ ಮೇಲಿನ ಪಕ್ಷಿಯಂತೆ ದೇಹದ ಸಂಗದಲ್ಲಿದ್ದು ಇಲ್ಲದಿಹನು. ಭೋಗಿಯೂ ಅಲ್ಲ, ನಿರ್ಭೋಗಿಯೂ ಅಲ್ಲ. ದೇವನೂ ಅಲ್ಲ, ಭಕ್ತನೂ ಅಲ್ಲ. ಭಾವಿಯೂ ಅಲ್ಲ, ನಿರ್ಭಾವಿಯೂ ಅಲ್ಲದ ಶರಣನ ಪರಿಯೆ ಬೇರೆ. ಅಂಗವಿದ್ದರೂ ಅಂಗನೆಯ ಶೋಕನು. ಕರವಿರ್ದರೂ ಮತ್ತೊಂದನಪಹರಿಸನು. ಕರ್ಣವಿದ್ದರೂ ಅನ್ಯಶಬ್ದವ ಕೇಳನು. ಕಂಗಳಿದ್ದರೂ ಲಿಂಗವಲ್ಲದುದ ನೋಡನು. ಜಿಹ್ವೆಯಿದ್ದರೂ ಪ್ರಸಾದವನ್ನಲ್ಲದೆ ಬೇರೆ ಸ್ವೀಕರಿಸದ ಶುದ್ಧಾತ್ಮನು.

ಶರಣ ನಿದ್ರೈದರೆ ಜಪ, ಎಚ್ಚರವಿದ್ದರೆ ಶಿವರಾತ್ರಿ, ಶರಣ ನಡೆದುದೆ ಪಾವನ, ನುಡಿದರೆ ಶಿವತತ್ವ, ಶರಣನ ಕಾಯಕವೇ ಕೈಲಾಸ. ಶರಣ ಮೆಟ್ಟಿದ ಧರೆಯಲ್ಲ ಅವಿಮುಕ್ತ ಕ್ಷೇತ್ರ, ಸೋಂಕಿದ ಜಲವೆಲ್ಲ ಪಾವನ ತೀರ್ಥ. ತೊಗಟೆಯೊಳಗಿನ ಬೀಜ, ಬೀಜದೊಳಗಿನ ಮರನಂತೆ ಅರಿವಿನೊಳಗಣ ನಿಜದ ಬೆಳಗನ್ನು ಒಳಗೊಂಡ ಮಹಾಮಹಿಮ. ಇಂತಹ ಶರಣನ ಪರಿ ಆವಲೋಕದೊಳಗೂ ಇಲ್ಲ.

ಶರಣರ ಕೂಡಿದ ಸುಖವು ಉಪಮೆಗೆ ನಿಲುಕಲಾರದು. ಅಂತಹ ಮಹಾಂತರ ಕೂಡಿ ಅಗಲುವ ಧಾವತಿಗಿಂತ ಸಾಯುವುದೇ ಲೇಸು. ಶರಣರ ಅಗಲಿ ಬದುಕಲಾರೆನು ಎನ್ನುತ್ತಾಳೆ ಅಕ್ಕಮಹಾದೇವಿ. ಒಬ್ಬೊಬ್ಬರಿಗೆ ಒಂದೊಂದು ಚಿಂತೆ. ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕ್ಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳವ ಬಂಡುಂಬ ಚಿಂತೆ. ಎನಗೆ ನಮ್ಮ ಕೂಡಲ ಸಂಗನ ಶರಣನ ನೆನೆವುದೆ ಚಿಂತೆ ಎಂದು ಬಸವಣ್ಣ ಹೇಳುತ್ತಾನೆ. ಹಾಗೆ ಸೂರ್ಯನ ಉದಯ ತಾವರೆಗೆ ಜೀವಾಳ, ಚಂದ್ರಮನ ಉದಯ ಚಕೋರಕ್ಕೆ ಜೀವಾಳ. ಎನಗೆ ನಮ್ಮ ಶರಣನ ಬರವೆ ಜೀವಾಳ. ಅಂತಹ ಶರಣನನ್ನು ದಾರಿ ತಪ್ಪಿದ ಶಿಶು ತಾಯಿಯ ನರಸುವಂತೆ, ಹಿಂಡನಗಲಿದ ಪಶು ಹಿಂಡನರಸುವಂತೆ ಶರಣರ ಬರವನು ಹಂಬಲಿಸುತ್ತಿದ್ದಾನೆ. ಆ ಶರಣರ ಪಾದವ ತೋರಿ ಬದುಕಿಸು ಎಂದು ಪರಮಾತ್ಮನಲ್ಲಿ ಬಸವಣ್ಣ ಮೊರೆ ಇಟ್ಟಿದ್ದಾನೆ. ಶರಣನ ಉರವೇ ಕುರುಕ್ಷೇತ್ರ, ಶಿರವೆ ಶ್ರೀಪರ್ವತ, ಲಲಾಟವೇ ಕೇದಾರ, ಭ್ರೂನಾಸಿಕದ ನಡುವೆ

ವಾರಣಸಿ, ಹೃದಯವೇ ಪ್ರಯೋಗ, ಸರ್ವಾಂಗವೇ ಸರ್ವತೀರ್ಥಂಗಳು, ಅವನ ಸುಳಿವು ಜಗತ್ಪಾದನ, ಲಿಂಗ ಮಧ್ಯದಲ್ಲಿ ಜಗವಿದ್ದರೇನು, ಆ ಜಗವ ಹೊರಗಿಕ್ಕಿ ಲಿಂಗವನೊಳಗಿಟ್ಟುಕೊಂಡ ಶರಣನ ಘನಕ್ಕೆ ಶರಣೆಂಬೆನು ಎಂದು ಹೇಳುತ್ತಾರೆ.

ಹೀಗೆ ಉಪಮಾತೀತನಾದ ಈ ಶರಣನ ಮಹಿಮೆಗಳ ವರ್ಣನೆ ಹಿರಿಮೆ, ಗರಿಮೆ, ಅವನ ವ್ಯಕ್ತಿತ್ವ, ಗುಣಗಳ ಮಹಿಮೆಯ ಸ್ತುತಿ ಉದ್ದಕ್ಕೂ ನಡೆದೆ ಇದೆ. ಈ ಸಂಕಲನದಲ್ಲಿ ಅಂತಹ ೧೧೦ ವಚನಗಳು ಶರಣನ ಸ್ತುತಿಯಲ್ಲಿಯೆ ನಿರತವಾಗಿವೆ. ಈ ಸಂಕಲನವು ಚೆನ್ನಬಸವಣ್ಣನವರ ವಚನದಿಂದ ಆರಂಭವಾಗಿ ಬಸವಣ್ಣನವರ ವಚನದಿಂದ ಮುಕ್ತಾಯವಾಗುತ್ತದೆ.

೫. ಮಿಶ್ರ ಸ್ತೋತ್ರದ ವಚನಗಳು[೨೦]

*ಎಳಮಲೆಯ ಗುರುಶಾಂತದೇವ

ಸ್ತೋತ್ರದ ವಚನಗಳಲ್ಲಿ ಏಕವ್ಯಕ್ತಿ ಸ್ತೋತ್ರದ ವಚನಗಳು, ಶರಣ ಸ್ತೋತ್ರದ ವಚನಗಳು, ಹಾಗೂ ಮಿಶ್ರ ಸ್ತೋತ್ರದ ವಚನಗಳು ಎಂದಿವೆ. ಏಕವ್ಯಕ್ತಿ ಸ್ತೋತ್ರದ ವಚನಗಳಲ್ಲಿ ಒಬ್ಬ ವ್ಯಕ್ತಿಯ ಬಗ್ಗೆ ವಿವಿಧ ವಚನಕಾರರು ತಮ್ಮ ಭಾವನೆಗಳನ್ನು ವಚನಗಳ ಮೂಲಕ ಹಂಚಿಕೊಂಡಿರುತ್ತಾರೆ. ಶರಣ ಸ್ತೋತ್ರದ ವಚನಗಳಲ್ಲಿ ವ್ಯಕ್ತಿ, ಅನೇಕ ವ್ಯಕ್ತಿ ಎಂಬುದಿಲ್ಲ. ಆದರೆ ಇಲ್ಲಿ 'ಶರಣ'ನೇ ಮುಖ್ಯವಾಗುತ್ತಾನೆ. ಆ ಶರಣ ಯಾರು ಆಗಬಹುದು.

ಶರಣನನ್ನೇ ಕೇಂದ್ರವಾಗಿಟ್ಟುಕೊಂಡು ಅವನ ಮಹಿಮಾತಿಶಯಗಳನ್ನು ಸ್ತುತಿಸಿರುವುದು ಕಂಡುಬರುತ್ತದೆ. ಮಿಶ್ರ ಸ್ತೋತ್ರದ ವಚನಗಳೇ ಬೇರೆ. ಇಲ್ಲಿ ಒಂದೇ ವಚನದಲ್ಲಿ ತತ್ವಗಳನ್ನು ಅಳವಡಿಸಿಕೊಂಡಿರುವ ಅವುಗಳನ್ನು ಪ್ರತಿನಿಧಿಸುವ, ಘನವೆತ್ತ ಬೇರೆ ಬೇರೆ ಶರಣರ ವ್ಯಕ್ತಿ ವೈಶಿಷ್ಟ್ಯ ಗುಣಗಳನ್ನು ಸ್ತುತಿಸಿರುವುದು ಕಂಡುಬರುತ್ತದೆ. ಹಾಗಾಗಿ ಇಂತಹ ವಚನಗಳನ್ನೆ ಸಂಗ್ರಹಿಸಿ ಸಿದ್ಧಪಡಿಸಲಾದ ಕೃತಿಗಳಿಗೆ 'ಮಿಶ್ರ ಸ್ತೋತ್ರದ ವಚನಗಳನ್ನು'ಎಂದು ಕರೆಯುತ್ತಾರೆ.

ವೀರಶೈವ ಸಾಹಿತ್ಯ ಸಂಪಾದನಾ ಕಾರ್ಯದಲ್ಲಿ ತೋಂಟದ ಸಿದ್ಧಲಿಂಗರ ಶಿಷ್ಯರು ಅಪ್ರತಿಮ ಕೆಲಸ ಮಾಡಿದ್ದಾರೆ. ಅಂತಹ ಶಿಷ್ಯರಲ್ಲಿ ಒಬ್ಬನಾದ ಎಳಮಲೆಯ ಗುರುಶಾಂತದೇವನಿಂದ ಸಂಕಲನಗೊಂಡ ಈ ಕೃತಿಗೆ ತನ್ನ ಗುರುವಾದ ಚೆನ್ನಂಜೇದೇವನ 'ಮಿಶ್ರ ಸ್ತೋತ್ರದ ವಚನಗಳು' ಎಂಬ ಇದೆ ಹೆಸರಿನ ಕೃತಿ ಪ್ರೇರಣೆ ನೀಡಿದೆ. ಎರಡರಲ್ಲಿ ಸೇರಿದ ವಚನಗಳ ಸಂಖ್ಯೆ ಸಮಾನವಾಗಿವೆ. ಆದರೆ ವಚನಗಳು ಬೇರೆ ಬೇರೆ. ಗುರುವು ಆರಿಸಿ ಸಂಕಲಿಸಿದ ವಚನಗಳ ಮಾದರಿಯಲ್ಲಿಯೆ ಈ ಸಂಕಲನವನ್ನು ಎಳಮಲೆಯ ಗುರು ಶಾಂತದೇವ ಸಿದ್ಧಪಡಿಸಿದ್ದಾನೆ.

---

೨೦. ಡಾ॥ ವೀರಣ್ಣ ರಾಜೂರ, (ಸಂ) 'ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು'. ಪ್ರ: ವೀ.ಅ.ಸಂ.ಶ್ರೀ. ಜ.ತೋಂ.ಸಂ.ಮಠ.ಗದಗ

ಇಲ್ಲಿ ಅನೇಕ ವಚನಕಾರರು ಇತರ ವಚನಕಾರರಲ್ಲಿ ತಾವು ಕಂಡ ವಿಶೇಷ ಗುಣ, ಹಿರಿಯತನ, ತಾತ್ವಿಕ ನಡೆನುಡಿ, ಆಚಾರ–ವಿಚಾರ, ಆ ಶರಣರು ನಿಂತ ನಿಲುವು, ಅವರು ಏರಿದ ಎತ್ತರ, ಸಾಧಿಸಿದ ಸಿದ್ಧಿ ಮುಂತಾದವುಗಳನ್ನು ಎತ್ತಿ ಹೇಳುವುದರ ಜೊತೆಗೆ, ಅವರಿಂದ ತಾವು ಪಡೆದು ಕೊಂಡ ಪ್ರಯೋಜನ, ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾದ ಗುಣಾಂಶಗಳನ್ನು ವಿವರಿಸಿದ್ದಾರೆ.

ಹೀಗೆ ವಿವರಿಸುವುದರ ಮೂಲಕ ಅವರ ಬಗ್ಗೆ ತಮಗಿದ್ದ ಗೌರವಾದರಗಳನ್ನು ತೋರಿಸಿದ್ದಾರೆ. ಇಲ್ಲಿ ವಚನಕಾರರ ಪರಸ್ಪರ ಹೃದಯ ಶ್ರೀಮಂತಿಕೆ, ಅವರ ಮನೋವೈಶಾಲ್ಯ, ಅವರ ನಡುವೆ ಇರುವ ಅನ್ಯೋನ್ಯ ಸಂಬಂಧ, ಸಹಕಾರ, ಪ್ರೀತಿ, ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆಗಳು ವ್ಯಕ್ತವಾಗುತ್ತವೆ.

ಈ ಸಂಕಲನದಲ್ಲಿ ೫೮ ಜನ ವಚನಕಾರ, ವಚನಕಾರ್ತಿಯರ ೧೦೮ ವಚನಗಳು ಸಂಗ್ರಹಗೊಂಡಿವೆ. ಎಳಮಲೆಯ ಗುರುಶಾಂತದೇವನ ಆರು ವಚನ ಸಂಕಲನಗಳಲ್ಲಿ ಅತಿ ಹೆಚ್ಚು ವಚನಕಾರರ ವಚನಗಳನ್ನು ಈ ಕೃತಿ ಒಳಗೊಂಡಿದೆ. ಹೆಚ್ಚಿನ ಸಂಖ್ಯೆಯ ಶರಣರನ್ನು ಸ್ತುತಿಸಿರುವುದು, ವಚನಕಾರರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಹಲವಾರು ನೂತನ ಅಂಶಗಳು ಈ ಕೃತಿಯಿಂದ ತಿಳಿದು ಬರುತ್ತವೆ. ಅನುಭಾವ, ವಿಚಾರಶೀಲ ಸಂಹಿತೆ, ಆತ್ಮ ವಿಚಾರ, ಸಾಧಕರೊಡನೆ ಹಂಚಿಕೊಂಡ ವಿಶೇಷ ಅನುಭವ, ಆತ್ಮ ತತ್ವಾನುಭವ ಮುಂತಾದ ವಿಚಾರಗಳು ಈಸ್ತೋತ್ರ ವಚನಗಳಲ್ಲಿ ಮಡುಗಟ್ಟಿ ನಿಂತಿವೆ.

ಈ ಸಂಕಲನದಲ್ಲಿ ಹೆಚ್ಚಾಗಿ ಬಸವಣ್ಣ, ಚೆನ್ನಬಸವಣ್ಣ ಮತ್ತು ಅಲ್ಲಮ ಪ್ರಭುದೇವರನ್ನು ಸ್ತುತಿಸಿರುವುದು ಕಂಡುಬರುತ್ತದೆ. ವೀರಶೈವ ನಿರ್ಣಯದ ಪರಮಾವತಾರಿಗಳಾದ ಇವರು ಷಟ್‌ಸ್ಥಲ ಸಿದ್ಧಾಂತವನ್ನು ಭದ್ರವಾದ ನೀತಿಯ ನೆಲೆಗಟ್ಟಿನ ಮೇಲೆ ಸ್ಥಾಪಿಸಿದ ಹಿರಿಮೆಯುಳ್ಳವರು. ವ್ಯವಸ್ಥಿತ ವೈಚಾರಿಕತೆಯ ಆಧಾರದ ಮೇಲೆ, ಸೃಷ್ಟಿತತ್ವಗಳ ಹಿನ್ನೆಲೆಯಲ್ಲಿ ಜೀವ ಜಗತ್ತಿನ ವಿಚಾರಧಾರೆಗಳನ್ನು ಅಚ್ಚಗನ್ನಡದಲ್ಲಿ ತಿಳಿಸಿರುವುದು ಇವರ ಮಹತ್ವದ ಕೆಲಸ. ಬಹಳಷ್ಟು ವಚನಕಾರರು ತಮ್ಮ ವಚನಗಳಲ್ಲಿ ಬಸವಣ್ಣನನ್ನು ಭಕ್ತಿನಿಗೆ, ಆಚಾರಕ್ಕೆ, ಗುರುವಿಗೆ ಹೋಲಿಸಿದರೆ, ಚೆನ್ನಬಸವಣ್ಣನನ್ನು ಜ್ಞಾನಕ್ಕೆ, ಅರಿವಿಗೆ, ಲಿಂಗಕ್ಕೆ ಹೋಲಿಸಿದ್ದಾರೆ. ಪ್ರಭುದೇವನನ್ನು ಪ್ರಸಾದಿ ಸ್ಥಲಕ್ಕೆ, ಅನುಭಾವಕ್ಕೆ ಹಾಗೂ ಜಂಗಮ ಸ್ಥಲಗಳಿಗೆ ಹೋಲಿಸಿ ಸ್ತುತಿಸಿದ್ದಾರೆ.

"ಎನ್ನ ಭಕ್ತಿ ಬಸವಣ್ಣನಲ್ಲಿ ಬಯಲಾಯಿತ್ತು.
ಎನ್ನ ಜ್ಞಾನ ಚೆನ್ನಬಸವಣ್ಣನಲ್ಲಿ ಬಯಲಾಯಿತ್ತು
ಎನ್ನ ವೈರಾಗ್ಯ ಪ್ರಭುದೇವರಲ್ಲಿ ಬಯಲಾಯಿತ್ತು." (ವ–೩೪)

ಎನ್ನಲ್ಲಿ ಸುಪ್ತವಾಗಿದ್ದ ಭಕ್ತಿ, ಜ್ಞಾನ, ವೈರಾಗ್ಯಗಳು ಈ ಮೂವರ ಪ್ರಭಾವದಿಂದಾಗಿ ಒಂದೊಂದೆ ಬಯಲಾದವು. ಇದರಿಂದಾಗಿ ಎನ್ನ ಮನಸ್ಸು ಪರಮಾತ್ಮನಲ್ಲಿ ಕೇಂದ್ರಿಕೃತವಾಯಿತು ಎಂದು ಮೇದಾರ ಕೇತಯ್ಯ ನುಡಿಯುತ್ತಾನೆ.

ಇವರಲ್ಲದೆ ಬಿಬ್ಬಿಬಾಚಯ್ಯಾ, ಸಕಳೇಶ ಮುಂತಾದವರು ಸಹ ಬಸವ, ಚೆನ್ನಬಸವ ಮತ್ತು ಪ್ರಭುದೇವರನ್ನು ಭಕ್ತ, ಜ್ಞಾನ, ವೈರಾಗ್ಯಕ್ಕೆ ಹೋಲಿಸಿ ಸ್ತುತಿಸಿದ್ದಾರೆ.

"ಎನ್ನಭಾವಕ್ಕೆ ಗುರುವಾದನಯ್ಯಾ ಬಸವಣ್ಣನು
ಎನ್ನ ನೋಟಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು
ಎನ್ನ ಪರಿಣಾಮಕ್ಕೆ ಪ್ರಸಾದವಾದನಯ್ಯಾ ಮರುಳ ಶಂಕರದೇವರು
ಎನ್ನ ಹೃದಯಕ್ಕೆ ಮಂತ್ರವಾದನಯ್ಯಾ ಮಡಿವಾಳಯ್ಯನು" (ವ.೨೮)

ಇಂತಿವರ ಕಾರುಣ್ಯ ಪ್ರಸಾದವಕೊಂಡು ಬದುಕಿದೆನೆಂದು ಹೇಳಿಕೊಳ್ಳುವ ಮುಕ್ತಾಯಕ್ಕ ಈ ವಚನದಲ್ಲಿ ಬಸವ, ಚೆನ್ನಬಸವ ಮತ್ತು ಅಲ್ಲಮನನ್ನು ಗುರುಲಿಂಗ, ಜಂಗಮ ಸ್ಥಲದಲ್ಲಿ ನಿಲ್ಲಿಸಿ ಸ್ತುತಿಸಿದ್ದಾಳೆ. ದುಗ್ಗಳೆ, ಗಜೇಶಮಸಣಯ್ಯ, ಉಳಿಯುಮೇಶ್ವರ ಚಿಕ್ಕಣ್ಣ, ಬಾಲಬೊಮ್ಮಣ್ಣ, ನೀಲಮ್ಮ,ಅಕ್ಕಮಹಾದೇವಿ, ಸುಂಕದಬಂಕಣ್ಣ ಮುಂತಾದವರು ಬಸವ, ಚೆನ್ನಬಸವ ಮತ್ತು ಅಲ್ಲಮನನ್ನು ಗುರುಲಿಂಗ, ಜಂಗಮಗಳ ನೆಲೆಯಲ್ಲಿ ನಿಲ್ಲಿಸಿ ನೋಡಿದ್ದಾರೆ, ಹಾಡಿದ್ದಾರೆ.

ಮೋಳಿಗೆ ಮಾರಯ್ಯ, ಗಜೇಶ ಮಸಣಯ್ಯ, ಬಸವಣ್ಣಪ್ರಿಯ ಧರ್ಮೇಶ್ವರ ಅಂಕಿತ ಇಟ್ಟುಕೊಂಡ ವಚನಕಾರ, ಅಂಗ ಸೋಕಿನ ಲಿಂಗ ತಂದೆ, ವೀರಣ್ಣದೇವ, ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ, ಮಾದಾರ ದೂಳಯ್ಯ, ಸಿದ್ಧರಾಮ, ಮರುಳ ಶಂಕರದೇವ, ಗುಮ್ಮಳಾಪುರದ ಸಿದ್ಧಲಿಂಗ ಮುಂತಾದವರು ಇವರನ್ನು ಕ್ರಮವಾಗಿ ತನು, ಮನ ಪ್ರಾಣಗಳಿಗೆ ಹೋಲಿಸಿ ಸ್ತುತಿಸಿದ್ದಾರೆ.

ವೀರಣ್ಣದೇವ ಈ ವಚನದಲ್ಲಿ

"ಎನ್ನ ತನು ಬಸವಣ್ಣನಲ್ಲಿ ಅಡಗಿತ್ತು
ಎನ್ನ ಮನ ಚೆನ್ನಬಸವಣ್ಣನಲ್ಲಿ ಅಡಗಿತ್ತು
ಎನ್ನ ಪ್ರಾಣ ಪ್ರಭುದೇವರಲ್ಲಿ ಅಡಗಿತ್ತು
ಎನ್ನ ಸರ್ವಾಂಗದ ಸಕಲ ಕರಣಂಗಳೆಲ್ಲವು
ನಿಮ್ಮ ಶರಣರ ಶ್ರೀಪಾದದಲ್ಲಿ ಅಡಗಿದವು _ _ _" (ವ–೪೨)

ತನ್ನ ತನು, ಮನ ಪ್ರಾಣಗಳೆಲ್ಲ ಈ ಮೂರು ಜನ ಮಹಾನುಭಾವಿಗಳಲ್ಲಿ ಅಡಗಿರುವುದಾಗಿ ಚಿತ್ರಿಸಿದ್ದಾನೆ. ಅಷ್ಟಲ್ಲದೆ ಅವನ ಸರ್ವಾಂಗಗಳೆಲ್ಲವೂ ಸಹ ಶರಣರ ಪಾದ ಕಮಲಗಳಲ್ಲಿ ಅಡಗಿರುವುದಾಗಿ ಹೇಳಿಕೊಂಡಿದ್ದಾನೆ.

ಈ ಮೂವರನ್ನು ವೀರಶೈವ ತತ್ವ ಸಿದ್ಧಾಂತಗಳಾದ ಸಾಕಾರ, ನಿರಾಕಾರ, ಬಯಲಿಗೆ, ಅಂತರಂಗ ಜ್ಯೋತಿ, ಬಹಿರಂಗ ಜ್ಯೋತಿ, ಸರ್ವಾಂಗ ಜ್ಯೋತಿಗೆ, ಆಚಾರ, ಅರಿವು ಹಾಗೂ ಭಾವಕ್ಕೆ ಕ್ರಮವಾಗಿ ಹೋಲಿಸಿ ಅನೇಕ ವಚನಕಾರರು ಸ್ತುತಿಸಿದ್ದಾರೆ.

'ಚಂದಿಮರಸ' ಎಂಬ ವಚನಕಾರ

"ಸಾಕಾರ ಸ್ವರೂಪಿ ಸಂಗನ ಬಸವಣ್ಣಾ ನೋಡಾ
ನಿರಾಕಾರ ಸ್ವರೂಪಿ ಚೆನ್ನಬಸವಣ್ಣ ನೋಡಾ
ನಿರ್ವಯಲ ಪರ ವಸ್ತು ಸ್ವರೂಪಿ ಪ್ರಭುದೇವರು ನೋಡಾ
ಇಂತೀ ಮೂವರ ಕಾರುಣ್ಯ ಪ್ರಸಾದವ ಕೊಂಡು ಮೀರಿದ ಘನವಾದೆನು" (ವ–೨೬)

ಎಂದು ಸ್ತುತಿಸಿದರೆ, ವಚನ ಸಾಹಿತ್ಯದ ಇತಿಹಾಸದಲ್ಲಿಯೆ ಮೊದಲ ಬಾರಿಗೆ ಗೋಚರಿಸುವ ಬಹಳ ಅಪರಿಚಿತ ವಚನಕಾರ 'ಉಳಿಯುಮೇಶ್ವರ ಚಿಕ್ಕಣ್ಣ'. ಈತನ ಅಂಕಿತ

'ಉಳಿಯುಮೇಶ್ವರಾ'ವಾಗಿದೆ. ಈತ ಬಸವಣ್ಣ, ಚೆನ್ನಬಸವಣ್ಣ ಮತ್ತು ಅಲ್ಲಮ ಪ್ರಭುದೇವರನ್ನು ಮೂರು ಜ್ಯೋತಿಗೆ ಹೋಲಿಸಿದ್ದಾನೆ.

"ಎನ್ನಂತರಂಗದ ಜ್ಯೋತಿಯೆ ಬಸವಣ್ಣನಯ್ಯಾ
ಎನ್ನ ಬಹಿರಂಗದ ಜ್ಯೋತಿಯೆ ಚೆನ್ನಬಸವಣ್ಣನಯ್ಯಾ
ಎನ್ನ ಸರ್ವಾಂಗದ ಜ್ಯೋತಿಯೆ ಪ್ರಭುದೇವರಯ್ಯಾ
ಇಂತಿವರ ಶ್ರೀಪಾದದಲ್ಲಿ ಉರಿ ಕರ್ಪೂರ ಸಂಯೋಗದಂತೆಬೆರೆಸಿದೆನಯ್ಯಾ"(ವ-೪೩)

ಬಸವಾದಿ ಶರಣರ ಜೊತೆಗಿನ ತನ್ನ ಸಂಬಂಧವನ್ನು ಉರಿ, ಕರ್ಪೂರದ ಸಂಯೋಗದಂತೆ ಎಂದು ಹೇಳಿಕೊಂಡಿರುವುದು ತುಂಬಾ ಚೆನ್ನಾಗಿದೆ. ಜ್ಯೋತಿ ಪ್ರಕಾಶದ ದರ್ಶನ ಶರಣ ಸ್ಥಲದ ಪ್ರಾಣಲಿಂಗಿಗೆ ಪ್ರಾಪ್ತವಾಗುತ್ತದೆ.

ಮಡಿವಾಳ ಮಾಚಯ್ಯನವರು

" ಎನ್ನಂಗದಾಚಾರದಲ್ಲಿ ಸಂಗನ ಬಸವಣ್ಣನ ಕಂಡೆನು
ಎನ್ನಮನದ ಅರಿವಿನಲ್ಲಿ ಚೆನ್ನಬಸವಣ್ಣನ ಕಂಡೆನು
ಎನ್ನಭಾವದ ಕೊನೆಯ ಮೇಲೆ ಅಲ್ಲಮ ಪ್ರಭುದೇವರ ಕಂಡೆನು" (ವ-೧೪)

ಆಚಾರ, ಅರಿವು ಅನುಭಾವಗಳ ಮುಪ್ಪುರಿಯ ಗುರಿಯನ್ನು ಈ ವಚನದಲ್ಲಿ ಮಂಡಿಸಿದ್ದಾನೆ. ಆದಯ್ಯನು ಷಟ್‌ಸ್ಥಲಗಳಿಗೆ ಪ್ರತಿನಿಧಿಯಾಗಿ ಒಬ್ಬೊಬ್ಬ ವಚನಕಾರರನ್ನು ಸಮರ್ಪಿಸಿಕೊಂಡು ವಚನ ರಚಿಸಿದುದಲ್ಲದೆ, ಎಲ್ಲ ಶರಣರಲ್ಲಿ ಒಂದೊಂದು ಶಕ್ತಿಯನ್ನು ಕಂಡುಕೊಂಡು ಸ್ತುತಿಸಿದ್ದಾನೆ.

"ಬಸವಣ್ಣನ ಭಕ್ತಿ ಸ್ಥಲ, ಮಡಿವಾಳ ಮಾಚಯ್ಯನ ಮಹೇಶ್ವರ ಸ್ಥಲ, ಘಟ್ಟಿವಾಳ ಮದ್ದಯ್ಯನ ಪ್ರಸಾದಿಸ್ಥಲ, ಚೆನ್ನಬಸವಣ್ಣನ ಪ್ರಾಣಲಿಂಗಿ ಸ್ಥಲ, ಪ್ರಭುದೇವರ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ, ಅಜಗಣ್ಣನ ಅರೂಢ, ನಿಜಗುಣನ ಕ್ಷಮೆ, ಅನುಮಿಷನ ನಿಶ್ಚಲ, ಮಹಾದೇವಿಯಕ್ಕನ ಜ್ಞಾನ, ನಿಂಬಿಯಕ್ಕನ ನಿಶ್ಚಯ, ಮುಕ್ತಾಯಕ್ಕನಕ್ಕರು, ಸತ್ಯಕ್ಕನ ಯುಕ್ತಿ, ಅಲಾಳಕ್ಕನ ಸಮತೆ, ರೇವಣ ಸಿದ್ಧೇಶ್ವರನ ನಿಷ್ಠೆ, ಸಿದ್ಧರಾಮೇಶ್ವರನ ಮಹಿಮೆ, ಮರುಳಶಂಕರದೇವರ ದೃಷ್ಟ ಪ್ರಸಾದ ನಿಷ್ಠೆ, ಏಕೋರಾಮಿ ತಂದೆಗಳಾಚಾರ, ಪಂಡಿತಾರಾಧ್ಯರ ಸ್ವಯಂಪಾಕ, ಮುಗ್ಧಸಂಗಯ್ಯ, ಮೈದುನ ರಾಮಯ್ಯ, ಕಣ್ಣಪ್ಪ, ಅಮ್ಮವ್ವೆ, ಕೊಡಗೂಸು, ತಿರುನೀಲಕಂಠರು, ನಾಟ್ಯನಮಿತಾಂಡಿಯರು, ರುದ್ರ ಪಶುಪತಿಗಳ ಮುಗ್ಧ ಭಕ್ತಿ ನಿಮ್ಮೊಳೆಂದಪ್ಪುದಯ್ಯಾ ಸೌರಾಷ್ಟ್ರ ಸೋಮೇಶ್ವರಾ" (ವ-೧೦೦)

ಮುಂದಿನ ವಚನದಲ್ಲಿ 'ಸೊಡ್ಡಳ ಬಾಚರಸ' ಎಂಬ ವಚನಕಾರ ಎಲ್ಲರಿಗಿಂತ ಭಿನ್ನವಾಗಿ ಯೋಚಿಸಿದ್ದಾನೆ. ತನ್ನನ್ನು ಮಗುವಿಗೆ ಹೋಲಿಸಿಕೊಂಡು ಬಸವಾದಿ ಶರಣರು ಆ ಮಗುವನ್ನು ಲಾಲಿಸಿ, ಪಾಲಿಸಿ, ಮುದ್ದಿಸುವ ಪರಿಯನ್ನು ಚಿತ್ರಿಸಿದ್ದಾನೆ.

"ಎನ್ನನೆತ್ತಿಕೊಂಡನಯ್ಯಾ ಸಂಗನ ಬಸವಣ್ಣನು
ಎನ್ನ ಮುದ್ದಾಡಿಸಿದನಯ್ಯಾ ಚೆನ್ನಬಸವಣ್ಣನು
ಎನಗೆ ಪ್ರಸಾದವನುಣಕಲಿಸಿದನಯ್ಯಾ ಮರುಳಶಂಕರದೇವರು
ಎನ್ನ ಸಲಹಿದನಯ್ಯಾ ಪ್ರಭುದೇವರು
ಎನಗೆ ಅರುಹು ಕೊಟ್ಟನಯ್ಯಾ ಸಿದ್ಧರಾಮಯ್ಯನು
ಇಂತೀ ಐವರ ಕಾರುಣ್ಯ ಪ್ರಸಾದವ ಕಂಡು ಬದುಕಿದೆನಯ್ಯಾ- - -" (ವ-೩೬)

'ವೀರಣ್ಣದೇವ' ನೆಂಬ ವಚನಕಾರ ಬಸವಾದಿ ಶರಣರೆಲ್ಲ ಸೇರಿ ಅವನಲ್ಲಿರುವ ಅರಿಷಡ್ವರ್ಗಗಳನ್ನು ಕಳೆದು ಪರಿಪೂರ್ಣ ಭಕ್ತನನ್ನಾಗಿ ಮಾಡಿದ ವಿಚಾರವನ್ನು ತನ್ನದೊಂದು ವಚನ(೪೧) ದಲ್ಲಿ ವಿವರಿಸಿದರೆ,

ಪ್ರಸಾದಿ ಭೋಗಣ್ಣ.

"ಎನ್ನ ಹೃದಯ ಕಮಲವೆ ಬಸವಣ್ಣನಯ್ಯಾ
ಎನ್ನ ಕಂಠವೇ ಚೆನ್ನಬಸವಣ್ಣನಯ್ಯಾ
ಎನ್ನ ನಯನದ ದೃಕ್ಕೇ ಸಿದ್ಧರಾಮನಯ್ಯ
ಎನ್ನ ಲಲಾಟವೇ ಮಡಿವಾಳಯ್ಯನಯ್ಯಾ
ಎನ್ನ ಶಿರವೇ ಪ್ರಭುದೇವರಯ್ಯಾ – – –" (ವ–೬೦)

ಎಂದು ಈ ಐದು ಜನ ವಚನಕಾರರು ತನ್ನ ಅಂಗಾಂಗಳ ಪರಿಪೂರ್ಣತೆಗೆ ಕಾರಣವೆಂಬಂತೆ ಚಿತ್ರಿಸಿದ್ದಾನೆ. ಇದಲ್ಲದೆ ಇನ್ನು ಅನೇಕ ವಚನಕಾರರು ಬಸವಾದಿ ಶರಣರಿಂದ ತೋಂಟದ ಸಿದ್ಧಲಿಂಗನವರೆಗಿನ ವಚನಕಾರರನ್ನು ವೀರಶೈವ ತತ್ವದ ಆಚಾರ ವಿಚಾರಗಳ ಹಿನ್ನೆಲೆಯಲ್ಲಿ ಸ್ತುತಿಸಿದ್ದಾರೆ. 'ಶಿವನಿಗಿಂತ ಶಿವ ಭಕ್ತನಧಿಕ' ಎಂದು ಭಾವಿಸಿ ಭಕ್ತನ ಭಕ್ತಿಯ ಶ್ರೇಷ್ಠತೆಯನ್ನು ಎತ್ತಿ ತೋರಿಸಿ ಹೇಳುವುದು ಮತ್ತು ಅವರ ಗುಣಗಾನ ಮಾಡುವುದು ಇಲ್ಲಿಯ ವಚನಗಳ ವಸ್ತುವಾಗಿದೆ.

'ಮಿಶ್ರ ಸ್ತೋತ್ರದ ವಚನಗಳು' ಈ ಸಂಕಲನದಲ್ಲಿ ವಿಪುಲವಾದ ವಿಚಾರ ಸಂಪತ್ತಿ ಇದೆ. ವಚನಕಾರ ಮತ್ತು ವಚನಕಾರರ (ಸ್ತುತಿಸಲ್ಪಟ್ಟವರು)ಅವಿನಾಭವ ಸಂಬಂಧವನ್ನು ತಿಳಿಸುವ ಇಲ್ಲಿಯ ವಚನಗಳು ವಿವಿಧ ರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆದಿದ್ದರೂ ಅವುಗಳ ವಿಚಾರ ವಾಹಿನಿ ಒಂದೇ ಬಗೆಯದಾಗಿದೆ. ಸಂಕಲನದ ಉದ್ದಕ್ಕೂ ಹಬ್ಬಿ ಹರಡಿರುವುದು ಮಹಾಮಹಿಮರಾದ ಶರಣರ ಗುಣ ಸ್ವಭಾವದ ಸ್ತುತಿ, ಸ್ತೋತ್ರರೂಪದ ವಚನಗಳೆಂದ ಮಾತ್ರಕ್ಕೆ ಇವು ಅರ್ಥವಾಗದ ಕಗ್ಗಂಟೇನಲ್ಲ. ಸ್ತುತಿಯೆ ಪ್ರಧಾನ ವಸ್ತುವಾದುದರಿಂದ ಕಾವ್ಯಾಂಶ ಕಡಿಮೆ ಇದೆ. ಹಾಗಾಗಿ ನೀರಸ ಅನ್ನಿಸಿದರೂ ಹಿರಿಯ ಕಿರಿಯ ವಚನಕಾರರ ಮೇಲೆ ವಚನ ರಚನೆ ಮಾಡಿದ ವಚನಕಾರರು ಇಟ್ಟ ಗೌರವ, ಪ್ರೀತಿಗಳನ್ನು ಗಮನಿಸಿದಾಗ ನೀರಸ ಅನ್ನಿಸುವುದಿಲ್ಲ. ಉಪಮೆ ರೂಪಕಗಳು ಇಲ್ಲದಿದ್ದರೂ ಮನ ಮುಟ್ಟುತ್ತವೆ. ಕೆಲವು ಶಿವಶರಣರ ವಚನಗಳು ನಿರೂಪಣೆಯಲ್ಲಿ ಶಾಸ್ತ್ರದಂತೆ ಬಿಗಿಯಾಗಿಯೆ ವ್ಯಕ್ತಗೊಂಡಿವೆ. ಎಲ್ಲಾ ವಚನಕಾರರ ಭಾವಗಳು ವಚನಗಳಲ್ಲಿ ಪಡಿಮೂಡಿವೆ. ನೂರಾರು ಬಗೆಯಲ್ಲಿ ವ್ಯಕ್ತವಾಗಿವೆ. ಇಂಥ ಸಂಕಲನಗಳಿಂದ ಎಲ್ಲಾ ವಚನಕಾರರ ನಡುವೆ ಎಂತಹ ಸೌಹಾರ್ಧ ವಾತಾವರಣ ಇತ್ತು ಎಂಬುದು ತಿಳಿದು ಬರುತ್ತದೆ.

೬. ಶಿವಮಹಿಮಾ ಸ್ತೋತ್ರದ ವಚನಗಳು[೨೧]

* ವೀರ ಸಂಗಯ್ಯ

'ಶಿವಮಹಿಮಾ ಸ್ತೋತ್ರದ ವಚನ ಸಂಕಲನ'ದ ಕರ್ತೃ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ವೀರಸಂಗಯ್ಯ. ಈ ವಿಷಯ ಕೃತಿಯ ಆರಂಭದ "ಶ್ರೀವೀರಶೈವ ಷಟ್ ಸ್ಥಲಾಚಾರ ಸಾರೋದ್ಧಾರ ಸಂಪಾದನೆಯ ಸಿದ್ಧ ವೀರೇಶ್ವರ ದೇವರು ಸೇರಿಸಿದ ಅನುಕ್ರಮದಿಂದ ವೀರಸಂಗಯ್ಯನವರು ಸಂಗ್ರಹಿಸಿದ ಶಿವಮಹಿಮಾ ಸ್ತೋತ್ರದ ವಚನ" ಎಂಬ ಗದ್ಯದಿಂದ ತಿಳಿದುಬರುತ್ತದೆ.

ಸಂಪಾದನೆಯ ಸಿದ್ಧವೀರೇಶ್ವರ ದೇವರು ಸಂಗ್ರಹಿಸಿದ 'ಶಿವನ ಬಿರುದಾವಳಿ ಸ್ತೋತ್ರದ ವಚನ' ಎಂಬ ಕೃತಿಯನ್ನು ಆಧರಿಸಿ ವೀರಸಂಗಯ್ಯ ತನ್ನ 'ಶಿವ ಮಹಿಮಾ ಸ್ತೋತ್ರದ ವಚನ' ಎಂಬ ಕೃತಿಯನ್ನು ಸಂಯೋಜಿಸಿದ್ದಾನೆ. ವೀರಸಂಗಯ್ಯನ ಗುರು ಸಂಪಾದನೆಯ ಸಿದ್ಧವೀರಣ್ಣ ಈ ಕೃತಿಯನ್ನು ಸಂಕಲಿಸಲು ಮಾರ್ಗದರ್ಶನ ನೀಡಿದಂತೆ ತೋರುತ್ತದೆ. ಇವರಿಬ್ಬರ ಎರಡೂ ಕೃತಿಗಳನ್ನು ಹೋಲಿಸಿ ನೋಡಿದಾಗ ಇವುಗಳ ವಚನಗಳ ಸಂಖ್ಯೆ (೧೧೧) ಸಮಾನವಾಗಿವೆ. ೯೨ ವಚನಗಳು ಎರಡೂ ಸಂಕಲನಗಳಲ್ಲಿ ಒಂದೇ ಆಗಿವೆ. ಉಳಿದ ೧೯ ವಚನಗಳು ಭಿನ್ನವಾಗಿವೆ.[೨೨] 'ಶಿವಮಹಿಮಾ ಸ್ತೋತ್ರದ ವಚನಗಳು' ಕೃತಿಯಲ್ಲಿ ವಚನಕಾರರ ಸಂಖ್ಯೆ ೨೧ ಇದ್ದರೆ, 'ಶಿವನ ಬಿರುದಾವಳಿ ಸ್ತೋತ್ರದ ವಚನಗಳು' ಕೃತಿಯಲ್ಲಿ ೨೦ ಜನ ವಚನಕಾರರಿದ್ದಾರೆ. ಎರಡೂ ಕೃತಿಗಳ ವಿಷಯ ಒಂದೇ ಆಗಿದ್ದರೂ 'ಶಿವಮಹಿಮಾಸ್ತೋತ್ರದ ವಚನ'ದಲ್ಲಿ ವಿಷಯವನ್ನು ಸ್ಥಲಕ್ಕನುಸಾರಿಯಾಗಿ ವೀರಸಂಗಯ್ಯ ವಿಂಗಡಿಸಿದ್ದಾನೆ. ಈಸ್ಥಲ ವಿಭಜನೆ 'ಶಿವನ ಬಿರುದಾವಳಿ ಸ್ತೋತ್ರದ ವಚನ' ಕೃತಿಯಲ್ಲಿ ಕಂಡುಬರುವುದಿಲ್ಲ.

'ಶಿವಮಹಿಮಾ ಸ್ತೋತ್ರದ ವಚನ'ವು ಶಿವನ ಮಹಿಮಾತಿಶಯಗಳನ್ನು ವರ್ಣಿಸುವಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿದೆ. ಇದೊಂದು ನೂತನ ಮಿಶ್ರ ಸ್ಥಲಕಟ್ಟಿನ ಕೃತಿ. ಶಿವನ ಮಹಿಮೆಗಳನ್ನು ವರ್ಣಿಸುವ ವಿವಿಧ ವಚನಕಾರರ ವಚನಗಳನ್ನು ಆಯ್ದು ಬೇರೆ ಬೇರೆ ಸ್ಥಲಗಳ ಅಡಿಯಲ್ಲಿ ಜೋಡಿಸಲಾಗಿದೆ. ಈಕೃತಿಯಲ್ಲಿ ೨೦ ಸ್ಥಲಗಳಿವೆ. ೨೧ ಜನ ವಚನಕಾರರ ೧೧೧ ವಚನಗಳು ಈ ಸ್ಥಲಗಳಲ್ಲಿ ಹಂಚಿಕೊಂಡಿವೆ. ಕೃತಿ ತೋಂಟದ ಸಿದ್ಧ ಲಿಂಗೇಶ್ವರರ ವಚನದಿಂದ ಆರಂಭವಾಗಿ ಅವರ ವಚನದಿಂದಲೇ ಮುಕ್ತಾಯಗೊಳ್ಳುತ್ತಿರುವುದು ಒಂದು ವಿಶೇಷ. ಇದರಲ್ಲಿ ಬರುವ ಸ್ಥಲಗಳು ಮತ್ತು ಅದಕ್ಕೆ ಬಳಸಿದ ವಚನಗಳ ಸಂಖ್ಯೆಯ ವಿವರ ಈ ಕೆಳಗಿನಂತಿದೆ.

---

೨೧. ಡಾ॥ ವೀರಣ್ಣ ರಾಜೂರ (ಸಂ) 'ವಚನ ಸಂಕಲನ ಸಂಪುಟ-೭.' ಪ್ರಕಟಣೆ ಲಿಂಗಾಯಿತ ಅಧ್ಯಯನ ಸಂಸ್ಥೆ ತೋಂಟದಾರ್ಯ ಸಂಸ್ಥಾನ ಮಠ ಗದಗ.

೨೨. ವಿವರಗಳಿಗೆ ಅನುಬಂಧ ನೋಡಿರಿ.

ಸ್ಥಲಗಳು		ವಚನಗಳ ಸಂಖ್ಯೆ
೧.	ಪರವಸ್ತುಭೇದ	೫
೨.	ಪರತತ್ವ ಲಕ್ಷಣ	೭
೩.	ಶಿವಮೂರ್ತಿ ನಿರ್ಣಯ	೧೦
೪.	ಶಿವಲೀಲಾ ಜಗದ್ವೈಭವ ಅಜ್ಞಾ ಕರ್ತೃತ್ವ	೮
೫.	ಸರ್ವಾತ್ಮ ಭೋಕ್ತೃ ಪ್ರೇರಕತ್ವ ಶಿವಾಧೀನ ಪರದೈವಾಧೀನ ನಿರಶನ	೩
೬.	ಪರದೈವ ತಿರಸ್ಕಾರ ಶಿವಜಗತ್ಪ್ರಭು ಪ್ರೇರಕತ್ವ	೫
೭.	ಇತರ ದೇವತಾಧಿಕಾರ ನಿರಸನ ಶಿವಾಧಿಕಾರ ಪ್ರತಿಷ್ಟೆ	೩
೮.	ಶಿವಾಪರಾಧ ದೈವ ಶಿಕ್ಷ ಕರ್ತೃತ್ವ	೫
೯.	ಸಕಲ ದೈವತಾಬಲಾಧಿಕ ಶೌರ್ಯ ತೃಣೀಕೃತ ಶಿವಬಲಾಧಿಕ ಶೌರ್ಯ ಪ್ರತಿಜ್ಞೆ	೯
೧೦.	ಅಸಮ ಶಿವಂಗೆ ಸಮವೆಂಬ ಪರದೈವತಾ ವಿಡಂಬನ	೯
೧೧.	ಅಪ್ರತಿಮ ಶಿವಂಗೆ ಸರಿಮಿಗಿಲೆಂಬ ದೇವತಾ ತಿರಸ್ಕಾರ	೪
೧೨.	ಸಂಹಾರ ಲೀಲಾಭಾವ ಹರನಾಮ ಪ್ರತಿಷ್ಠೆ	೯
೧೩.	ಸಂಹಾರ ಲೀಲಾ ಶೃಂಗಾರ ಭಾವ	೫
೧೪.	ಸಂಹಾರ ಲೀಲಾ ನಾಟ್ಯಾಡಂಬರ	೫
೧೫.	ಸರ್ವೋತ್ಕೃಷ್ಟ ಶಿವಮಹಿಮಾತಿಶಯ ಪ್ರತಾಪ	೭
೧೬.	ಅನ್ಯದೈವ ಸೇವಾ ನಿರಸನ, ಶಿವಸೇನಾ ವಿಶೇಷ ಪ್ರತಿಷ್ಟೆ	೨
೧೭.	ಪರದೈವ ದಾತೃತ್ವಧಿಕಾರ ನಿರಸನ, ಶಿವದಾತೃತ್ವಧಿಕಾರ ಪ್ರತಿಷ್ಟೆ	೩
೧೮.	ಶಿವಭಕ್ತಿ ಸಾರೋದ್ಧಾರ	೫
೧೯.	ಶಿವಭಕ್ತಿ ವಿಶೇಷ ಯೋಜನಾ ವಿಜ್ಞಾಪನ	೪
೨೦.	ನಿಜೋಪಾವಸ್ಥೆ ಸಮರಸ ಸಂಬಂಧ	೩

ಈ ವಚನ ಸಂಕಲನದಲ್ಲಿಯ ಎಲ್ಲಾ ವಚನಗಳಲ್ಲಿ ಪರಶಿವನ ಸಗುಣ ನಿರ್ಗುಣ ನಿಲುವಿನ ನಿರೂಪಣೆ ಇದೆ. ಅವನ ಸಾಕಾರ–ನಿರಾಕಾರ ಸ್ವರೂಪಗಳ ಮಹಿಮೆಯ ಕೀರ್ತನೆ ಇದೆ. ಇಲ್ಲಿ ಭಕ್ತಿನಿಗೆ ಪರಶಿವನು ಒಲಿದ ರೀತಿ, ಪುರಾತನ ಶಿವಶರಣಂಗೆ ಆತ ಕಾಣಿಸಿಕೊಂಡ ರೂಪ ವಿಧಾನಗಳ ಅಭಿವ್ಯಕ್ತಿ ಇದೆ. ಪರಶಿವನೊಡನೆ ಸಾಮರಸ್ಯವನ್ನು ಸಾಧಿಸಿದ ಸ್ಥಿತಿಯಲ್ಲಿ ನಾನು ಇಲ್ಲ, ನೀನೂ ಇಲ್ಲ. ತಾನೇ ತಾನಾಗಿ ಆ ಪರಶಿವನ ಜ್ಯೋತಿ ಸ್ವರೂಪದ ಹೊರತು ಇನ್ನೇನು ಇಲ್ಲ ಎಂಬ ತಾದಾತ್ಮ್ಯದ ನಿಲುವು ಗೋಚರವಾಗುತ್ತದೆ. 'ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ, ವಾಙ್ಮನಕ್ಕಗೋಚರವಾಗಿ, ಇಹಪರಕ್ಕೆ ಒಬ್ಬನೇ ಕರ್ತನಾಗಿ, ಸತ್ಯಜ್ಞಾನಾನಂದ ಮಹಾಮಹಿಮ ಶಿವಂಗೆ ನಮೋ ನಮೋ ಎಂಬೆ' ಎನ್ನುವ ಮಾತು ದೇವನು ಜಗತ್ತಿನ ತುಂಬೆಲ್ಲಾ ತುಂಬಿ ಕೊಂಡಿದ್ದರೂ, ಈ ಜಗತ್ತಿನ ಗುಣಧರ್ಮಗಳನ್ನು ಆತ ತಿಲಮಾತ್ರವೂ ಧರಿಸಿರುವುದಿಲ್ಲ. ಇಹಕ್ಕೂ ಪರಕ್ಕೂ ಒಬ್ಬನೇ ಆದ ಪರಶಿವನು ಇರುವುದು ಕಂಡುಬರುತ್ತದೆ. 'ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ, ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ' ಎಂಬಂತೆ 'ಶಿವನೊಬ್ಬನೆ ಜಗವೆಲ್ಲಕ್ಕೊಡೆಯನೆಂದು' ಸಾರಿ ಹೇಳಿರಿ. 'ಶಿವನಿಲ್ಲವೆಂಬುವನ ಬಾಯ

ತ್ರಿಶೂಲದಲ್ಲಿರಿಯಬೇಕು', 'ಸ್ವರ್ಗ, ಮರ್ತ್ಯ , ಪಾತಾಳದೊಳಗೆ ಒಬ್ಬನೇ ದೇವ'ನಿದ್ದಾನೆಯೆ ಹೊರತು ಬೇರೊಬ್ಬನಿಲ್ಲವೆಂಬ ಅಚಲ ವಿಶ್ವಾಸ ಈ ಶರಣರದು.

"ಸರ್ವ ದೇವರುಗಳ ಉತ್ಪತ್ತಿ ಸ್ಥಿತಿ ಲಯಂಗಳ ಮಾಡುವ
ಕರ್ತೃ ಶಿವನೊಬ್ಬನೆ ದೇವನೆಂದು ನುಡಿದೆನು" (ವ-೩೮)
"- - - ವೇದಂಗಳು ದೈವವಲ್ಲ
ಶಾಸ್ತ್ರಂಗಳು ದೈವವಲ್ಲ, ಆಗಮಂಗಳು ದೈವವಲ್ಲ
ಪುರಾಣಂಗಳು ದೈವವಲ್ಲ, ಚಂದ್ರ ಸೂರ್ಯರು ದೈವವಲ್ಲ
ಕಪಿಲಸಿದ್ಧಮಲ್ಲಿಕಾರ್ಜುನಾ ನೀನೊಬ್ಬನೆ ದೈವ" (ವ-೩೬)
"ವಿಶ್ವಾಧಿಪತಿ ಶಿವನೊಬ್ಬನೆ ದೇವನಲ್ಲದೆ
ಉಳಿದ ದೇವರೆಲ್ಲ ದೇವರೆ" (ವ-೩೮)

ಎಂದು ಪ್ರಶ್ನಿಸುತ್ತಾ ಮುಂದಿನ ವಚನದಲ್ಲಿ ಬಸವಣ್ಣ ಪರದೈವವನ್ನು ದೂರೀಕರಿಸಿ ಪರ ಶಿವನ ಪ್ರತಿಷ್ಠೆಯನ್ನು ಎತ್ತಿ ಹಿಡಿದಿದ್ದಾನೆ.

"ಹರಿಯ ಬೇಡುವಡೆ
ಅವಗೆ ಬಲೀಂದ್ರನು ದಾನವನಿಕ್ಕಿದನು
ಬ್ರಹ್ಮನ ಬೇಡುವಡೆ, ಅವಗೆ ಶಿರವಿಲ್ಲ
ಬೌದ್ಧನ ಬೇಡುವಡೆ
ಅವಗೆ ಬುದ್ಧಿ ಸಮನಿಸದು
ಜಿನನ ಬೇಡುವಡೆ, ಅವಗೆ ಉಡಲಿಲ್ಲ
ಬೆನಕನ ಬೇಡುವಡೆ
ಅವಗೆ ಕೋಡು ಮುರಿದಿತ್ತು
ಭೈರವನ ಬೇಡುವಡೆ
ಅವರುಟ್ಟುದನಿಕ್ಕಿ ಆಡುತಿರ್ದನು
ಅಭಯಕರ ಜಗಕ್ಕೆಲ್ಲ
ಜಗದಾನಿಯ ಬೇಡುವೆನು ಕೂಡಲಸಂಗಯ್ಯನ" -(ವ-೯೮)

ಶಿವನಲ್ಲದೆ ಕೊಡುಗೈದಾನಿಗಳು ಜಗದೊಳಗಾರು ಇಲ್ಲ. ಯಾವ ದೇವನಿಂದಲು ಕೊಡಲು ಸಾಧ್ಯವಿಲ್ಲ. ಏಕೆಂದರೆ ಅವರದೇ ಆದ ಕೊರತೆಯಲ್ಲಿ ಅವರಿದ್ದಾರೆ ಎಂಬುದನ್ನು ಹೇಳುವ ಮೂಲಕ ಶಿವನ ಶ್ರೇಷ್ಠತೆಯ ಸ್ಪಷ್ಟ ಚಿತ್ರಣ ನೀಡಿದ್ದಾನೆ ಬಸವಣ್ಣ. ಇಂತಹ ಕೊಡುಗೈದಾನಿಯ ಸುಗುಣ ಸ್ವರೂಪವನ್ನು ಸ್ವತಂತ್ರ ಸಿದ್ಧಲಿಂಗೇಶನು

"ಹಣೆಗಣ್ಣು, ಕೊರಳಕಪ್ಪು, ಫಣಿಕುಂಡಲ
ದಶಭುಜ, ಉಡುಪತಿ, ಜಡೆಯ ನಡುವಿಹ ಗಂಗೆ
ಉಡಿಯ ಪುಲಿಚರ್ಮ, ತೊಡಿಗೆಯ ಕರೋಟಿಮಾಲೆ
ಪಿಡಿದ ಕಂಕಾಳ ದಂಡದಿಂ ನಮ್ಮ ಮೃಡ
ಸ್ವತಂತ್ರ ಸಿದ್ಧಲಿಂಗೇಶ್ವರನು ರಾರಾಜಿಸಿದ -" (ವ-೮೨)

ಎಂದು ಚಿತ್ರಿಸಿದ್ದಾನೆ. ಇಂತಹ ಶಿವ ಜಗತ್ತಿನಿಂದ ಹೇಗೆ ಭಿನ್ನವಾಗಿದ್ದಾನೆ. ಅವನ ಲಕ್ಷಣಗಳು

ಯಾವುವು, ಅವನ ವೈಶಿಷ್ಟ್ಯ ಎಂತಹದ್ದು, ಶಿವನ ಅಲಂಕಾರದ ಔಚಿತ್ಯ, ಶಿವನಿಂದ ಜಗತ್ತು ಯಾವ ರೀತಿ ಹುಟ್ಟಿಕೊಂಡಿತು? ಜಗತ್ತಿಗೆ ಅವನೊಬ್ಬನೆ ದೈವ. ಅವನನ್ನು ಬಿಟ್ಟು ಬೇರೆ ದೇವರುಗಳೇ ಇಲ್ಲವೇ ಇಲ್ಲ. ಅವನೇ ಶ್ರೇಷ್ಠ, ಅವನಿಂದಲೇ ಈ ಜಗತ್ತು ಬದುಕಿದೆ. ಶಿವನೆ ಎಲ್ಲದಕ್ಕೂ ಕಾರಣ. ಎಲ್ಲವು ಶಿವನಿಂದಲೆ, ಶಿವನನ್ನು ಮರೆತು ನಡೆಯುವವರನ್ನು ಕಟುವಾಗಿ ಟೀಕಿಸಲಾಗಿದೆ.

"– – – ಹರಿಯನು ಹರಂಗೆ ಸರಿಯೆಂದು ನುಡಿವುತ್ತಿಹ
ವಿಪ್ರರ ಬಾಯಲ್ಲಿ ಸುರಿಯವೆ ಬಾಲ ಹುಳಗಳು
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತ ಪ್ರಳಯ
ನಮ್ಮ ಹರಂಗೆ ಪ್ರಳಯ ಉಂಟಾದರೆ ಬಲ್ಲರೆ ನೀವು ಹೇಳಿರೆ
ನಿಮ್ಮ ವೇದದಲ್ಲಿ ಹೇಳಿಸಿರೆ
ಅರಿಯದಿರ್ದಡೆ ಸತ್ತಹಾಂಗೆ ಸುಮ್ಮನಿರಿರೆ– – –" (ವ–೫೬)

ಎಂದು ಉರಿಲಿಂಗ ಪೆದ್ದಿ ಹೇಳಿದರೆ,

"ಹರಿವಿರಿಂಚಾದಿ ದೇವತೆಗಳನ್ನು ಶಿವಂಗೆ ಸರಿಯೆಂದು ಗಳಹುವ
ನರಕಿಗಳ ಬಾಯಲ್ಲಿ ಹುಳು ಸುರಿಯದಿಹವೆ?" (ವ–೬೧)

ಎಂದು ಹಡಪದ ಅಪ್ಪಣ್ಣ ಪ್ರಶ್ನಿಸುತ್ತಾನೆ. ಹಾಗಾಗಿ ಶಿವನೆ ಎಲ್ಲಾ ದೈವಗಳಲ್ಲಿ ಬಲವಂತನಾಗಿದ್ದಾನೆ. ಸರ್ವೋತ್ತಮನಾಗಿದ್ದಾನೆ. ವಿಶ್ವಕ್ಕೆಲ್ಲ ಅವನೊಬ್ಬನೆ ದಾತಾರನಾಗಿದ್ದಾನೆ. ಶಿವಭಕ್ತಿಯೆ ಶ್ರೇಷ್ಠ, ಅವನನ್ನು ಬಿಟ್ಟು ಬೇರೆ ದೈವವನ್ನು ಆರಾಧಿಸಿದರೆ, ಶಿವನನ್ನು ನಿಂದಿಸಿದರೆ ಅಂಥವರ ಬಾಯಲ್ಲಿ ಹುಳು ಬೀಳುತ್ತವೆ. ಶಿವ ಅಂಥವರಿಗೆ ಸರಿಯಾದ ಶಿಕ್ಷೆ ನೀಡುತ್ತಾನೆ. ಹೀಗೆ ಶಿವನ ಮಹಿಮೆಯನ್ನು, ಘನತೆಯನ್ನು ಈ ವಚನಗಳು ಸಾರಿ ಹೇಳುತ್ತವೆ. ಶಿವನ ಶೃಂಗಾರ ಭಾವ, ರೌದ್ರಭಾವಗಳನ್ನು ಚಿತ್ರಿಸುವ ಈ ವಚನಗಳು ಶಿವನ ವಿವಿಧ ಲೀಲೆಗಳನ್ನು ಕಣ್ಣು ಮುಂದೆ ತಂದು ನಿಲ್ಲಿಸುತ್ತವೆ. ಅಷ್ಟೇ ಅಲ್ಲ ಅನ್ಯ ಮತದವರು ಸಹಿತ ಶಿವನ ಲೀಲೆಗೆ ಮಾರು ಹೋಗಿದ್ದಾರೆ.

" ಅಯ್ಯಾ, ವೈಷ್ಣವರಾದವರು, ತಮ್ಮ ವಿಷ್ಣುವನೆ ಬಿಟ್ಟು ಕಳೆದು
ಲಿಂಗ ಭಕ್ತರಾದರನೇಕರು,
ಅಯ್ಯಾ ಜೈನರಾದವರು
ತಮ್ಮ ಜಿನನನೆ ಬಿಟ್ಟು ಕಳೆದು ಲಿಂಗಭಕ್ತರಾದರನೇಕರು
ಅಯ್ಯಾ, ದ್ವಿಜರುಗಳಾದವರು

ತಮ್ಮ ಕರ್ಮಂಗಳೆಲ್ಲವನೆ ಬಿಟ್ಟು ಕಳೆದು ಲಿಂಗಭಕ್ತರಾದೆರನೇಕರು_ _ " (ವ–೧೦೫)

ಹೀಗೆ ಹೇಳುವುದರೊಂದಿಗೆ ಅನ್ಯ ದೈವಗಳಾದ ವಿಷ್ಣು, ಬ್ರಹ್ಮ, ಬೈರವ, ಮೈಲಾರ, ಜಿನ, ಬುದ್ಧ ಮುಂತಾದವರನ್ನು ಕಟುವಾಗಿ ಟೀಕಿಸಿ ಅವರನ್ನೆಲ್ಲ ಶಿವನ ಮುಂದೆ ಚಿಕ್ಕವರನ್ನಾಗಿ ಮಾಡಿದ್ದಾರೆ. ಅವರಿಗೆಲ್ಲ ಒಡೆಯನಾದ ಶಿವನ ಹಿರಿಮೆಯನ್ನು, ಅವನ ಶ್ರೇಷ್ಠತೆಯನ್ನು ಸಾರುತ್ತಿರುವುದರಿಂದ ಅವನನ್ನು ಪೂಜಿಸಿ ಮುಕ್ತಿಯನ್ನು ಪಡೆಯಬೇಕು ಎನ್ನುತ್ತಾರೆ ಶರಣರು. ಬಸವಾದಿ ಪ್ರಮಥರ ವಚನಗಳನ್ನು ಆಯ್ದು ವಿಷಯಕ್ಕೆ ತಕ್ಕಂತೆ ವಿಂಗಡಿಸಿ ಈ ಕೃತಿಗೆ 'ಶಿವಮಹಿಮಾ ಸ್ತೋತ್ರದ ವಚನ' ಎಂದು ಹೆಸರಿಟ್ಟಿರುವುದು ಸಮಂಜಸವಾಗಿದೆ.

೭. ಶಿವನ ಬಿರುದಾವಳಿ ಸ್ತೋತ್ರದ ವಚನಗಳು

* ಸಂ.ಸಿದ್ಧವೀರಣ್ಣೊಡೆಯರು

ಶಿವನ ಬಿರುದಾವಳಿ ಸ್ತೋತ್ರದ ವಚನ ಸಂಕಲನವನ್ನು ಸಂಪಾದನೆಯ ಸಿದ್ಧವೀರಣ್ಣೊಡೆಯರು ಸಂಕಲಿಸಿದ್ದಾರೆ. ಈ ಕೃತಿಯನ್ನು ಆಧರಿಸಿ ವೀರಸಂಗಯ್ಯ ಶಿವಮಹಿಮಾಸ್ತೋತ್ರದ ವಚನ ಕೃತಿಯನ್ನು ಸಂಕಲಿಸಿದ್ದಾನೆ. ಶಿವನ ಬಿರುದಾವಳಿ ಸ್ತೋತ್ರದ ವಚನಗಳು ಕೃತಿಯನ್ನು ಪರಿಷ್ಕರಿಸಲು ಎರಡು ಕಾಗದ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಒಂದುಕಾಗದದ ಪ್ರತಿಯನ್ನು ಪ್ರೊ॥ ಎಸ್.ಉಮಾಪತಿ ಅವರು ಒದಗಿಸಿದ್ದಾರೆ. ಈ ಕೃತಿಯ ಆದಿಯಲ್ಲಿ 'ಶಿವನ ಬಿರುದಾವಳಿ ಸ್ತೋತ್ರ ಬರುವುದಕ್ಕೆ ಶುಭಮಸ್ತು' ಎಂದಿದೆ. ಅಂತ್ಯದಲ್ಲಿ 'ಶಿವನ ಬಿರುದಾವಳಿ ಸ್ತೋತ್ರದ ವಚನಂಗಳು ಸಮಾಪ್ತ ಮಂಗಳ ಮಹಾ' ಎಂದಿದೆ.[೨೩] ಈ ಸಂಕಲನದಲ್ಲಿ ೨೦ ಜನ ವಚನಕಾರರ, ಶಿವನ ಮಹಿಮೆ, ಹಿರಿಮೆ, ಶ್ರೇಷ್ಠತೆಯನ್ನು, ಮಹತ್ವವನ್ನು ಸ್ತುತಿಸುವ ೧೧೧ ವಚನಗಳನ್ನು ಸಂಗ್ರಹಿಸಲಾಗಿದೆ. ವೀರಸಂಗಯ್ಯನ 'ಶಿವಮಹಿಮಾ ಸ್ತೋತ್ರದ ವಚನ' ಸಂಕಲನ ಕೃತಿಯಂತೆ ಇಲ್ಲಿಯ ವಚನಗಳನ್ನು ಸ್ಥಲಾನುಸಾರಿಯಾಗಿ ಜೋಡಿಸಿಲ್ಲ. ಎರಡೂ ಕೃತಿಯಲ್ಲಿ ೯೩ ವಚನಗಳು ಒಂದೇ ಆಗಿವೆ. ೧೮ ವಚನಗಳು ಭಿನ್ನವಾಗಿವೆ. ಆ ವಚನಗಳು ಸಹ ಶಿವನ ಮಹಿಮಾತಿಶಯಗಳನ್ನು ಸ್ತುತಿಸುವುದರಲ್ಲಿ ಮಗ್ನವಾಗಿವೆ.

"ಹರಿಯೆಂಬಾತ ನಿಮ್ಮಚರಣವನರಿಯ
ಬ್ರಹ್ಮನೆಂಬಾತ ನಿಮ್ಮ ಮಕುಟವನರಿಯ
ಯತಿ ವ್ರತಿ ಋಷಿಗಳೆಂಬುವರು ನಿಮ್ಮ ಬಳಗನರಿಯರು
ಸಮಸ್ತ ದೇವರ್ಕಳು ನಿಮ್ಮ ರೋಮದ ಪ್ರಮಾಣವನರಿಯರು
ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲರಿಯರು" (ವ-೧೦)

ಯಾವ ದೇವನಿಂದಲೂ ಶಿವನನ್ನು, ಶಿವನ ಮಹತ್ವವನ್ನು ಅರಿಯಲಾಗಿಲ್ಲ ಎಂಬುದು ಸಿದ್ಧರಾಮನ ಅಭಿಪ್ರಾಯ. "ಕೆಂಜೆಡೆಯ ಭಾಳನೇತ್ರಂ ರಂಜಿಪ ರವಿಕೋಟಿತೇಜದಿಂದುರವಣಿಪಂ, ಪಂಚವಕ್ತ್ರಂ, ದಶಭುಜಂ, ದಶಪಂಚನೇತ್ರಂ, ದ್ವಿಪಾದಂ, ತನುವೇಕಂ, ಶುದ್ಧಸ್ಫಟಿಕ ಪ್ರದ್ಯುಕ್ತಂ, ಪ್ರಭಾಮಯ ಮೂರ್ತಿ" ಎಂದು ತೋಂಟದ ಸಿದ್ಧರು ಶಿವನ ಸಾಕಾರ ರೂಪವನ್ನು ಚಿತ್ರಿಸಿದ್ದಾರೆ.

"ಮೃಡನನೊಂದು ದೈವಕ್ಕೆ ಪಡಿಗಟ್ಟಿ ನುಡಿವನ ಬಾಯಲ್ಲಿ
ಬಿಡದೆ ಬಿಟ್ಟುವೆನಯ್ಯಾದಾರುಗೆಜ್ಜೆಯ ಗೂಟಗಳನು
ಪೊಡವಿ ಭೂಮಂಡಲದೊಳಗೆ
ಕಲಿದೇವಂಗೆ ಹುಲುದೈವವ ಸರಿಯೆಂದು ನುಡಿವನ ಬಾಯ

ಎಡದ ಕಾಲ ಕೆರಹಿಂದ ಬಡಿಯೆಂದ ಮಡಿವಾಳ ಮಾಚಯ್ಯ" (ವ-೪೧)

ಪರಶಿವನಿಗೆ ಒಂದು ಹುಲದೈವ ಸರಿಯೆಂದು ನುಡಿಯುವವನ ಬಾಯಿಗೆ ಎಡಗಾಲಿನ ಕೆರದಿಂದ ಹೊಡೆಯಬೇಕು ಎಂದು ತೀರ ಒರಟಾಗಿ ಮಡಿವಾಳ ಮಾಚಯ್ಯ ಪ್ರತಿಕ್ರಿಯಿಸಿದ್ದಾನೆ.

---

೨೩. ಎಸ್.ಶಿವಣ್ಣ (ಸಂ) 'ವಚನ ಸಂಕಲನ-ಸಂ.೩' ಪ್ರಸ್ತಾವನೆ ಪುಟ-೯
ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಸಂಸ್ಥಾನ ಮಠ-ಗದಗ

ಸೊಡ್ಡಳ ಬಾಚರಸರು ಇದಕ್ಕಿಂತ ತುಚ್ಛವಾಗಿ ಶಿವನ ಮೇಲಿನ ಪ್ರೀತಿಯನ್ನು ಎತ್ತಿ ಹಿಡಿದಿದ್ದಾನೆ.

"ಮುರಿಸಬೇಕು ಹೊಲೆಯರ ಕೈಯಿಂದವನ ಮನೆಯ
ಕೆರೆಸಬೇಕು ಮಂಡೆಯ ಏಳು ಬಟ್ಟೆಯಾಗಿ
ಕುಳ್ಳಿರಿಸಬೇಕು ಕತ್ತೆಯ ನಡುಬೆನ್ನ ಮೇಲೆ
- - - - - - - - - - - -
ನಾಲಿಗೆಯ ಸರಸರನೆ ಸೀಳಬೇಕು
ಅನ್ಯದೈವವ ಸರಿಯೆಂಬ ಕುನ್ನಿಯ" (ವ-೪೨)

ಎಂದು ಹೇಳುತ್ತಾನೆ. ಇಲ್ಲೆಲ್ಲ ಶಿವನ ಮೇಲಿನ ಅತಿಯಾದ ಪ್ರೀತಿ, ಭಕ್ತಿಯು ಇತರೆ ದೈವಗಳನ್ನು ತಿರಸ್ಕರಿಸುವಂತೆ, ತುಚ್ಚೀಕರಿಸಿ ಮಾತಾಡುವಂತೆ ಮಾಡಿದೆ. ಜಗದಾದಿ ದೈವ ಶಿವನಿರುವಾಗ ಅನ್ಯ ದೈವಗಳ ಬಳಿ ಹೋಗುವ ಭಕ್ತರಿಗೆ 'ಚಂದನ ಗಂಧವಿದ್ದಂತೆ, ದುರ್ಗಂಧ ಮೈಯಲ್ಲಿ ಪೂಸುವರೆ?' ಎಂದು ಮಾರ್ಮಿಕವಾಗಿ ನುಡಿಯುತ್ತಾನೆ ಸೊಡ್ಡಳ ಬಾಚರಸ. "ನಾರಿಯರ ಉರದ ಗಾಳಿ ಎನ್ನ ಮುಟ್ಟದಂತೆ ಮಂತ್ರಿಸಿ ರಕ್ಷಿಸಯ್ಯ" ಎಂದು ಸಿದ್ಧರಾಮ ಬೇಡಿಕೊಂಡಿದ್ದಾನೆ. ಹೀಗೆ ಎರಡೂ ಸಂಕಲನಗಳಲ್ಲಿ ಶಿವನ ಮಹಿಮೆ, ಶ್ರೇಷ್ಠತೆಗಳನ್ನು, ಪರದೈವ ವಿಡಂಭನೆಯ ಜೊತೆ, ಶಿವನ ವೈಭವೀಕರಣ ನಡೆದಿರುವುದು ಕಂಡುಬರುತ್ತದೆ.

೮. ಷಟ್‌ಸ್ಥಲ ಸ್ತೋತ್ರದ ವಚನಗಳು

* ಎಳಮಲೆಯ ಗುರು ಶಾಂತದೇವ.

ಬಸವಾದಿಗಳ ಕಾಲದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದು ಕರ್ನಾಟಕದ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಹೊಸ ಆಂಧೋಲನವನ್ನುಂಟು ಮಾಡಿದ ವೀರಶೈವ ಧರ್ಮವು ಎಷ್ಟು ಪ್ರಾಚೀನವಾದುದು ಎಂಬುದು ಇನ್ನು ಪ್ರಶ್ನೆಯಾಗಿಯೆ ಉಳಿದಿದೆ. ಕೆಲವರು ಅದು ಅತ್ಯಂತ ಪ್ರಾಚೀನವಾದ ಮತಗಳಲ್ಲಿ ಒಂದೆಂದು ಅಭಿಪ್ರಾಯಪಡುತ್ತಾರೆ. ವೀರಶೈವ ಧರ್ಮವು ಮೈಗೂಡಿಸಿಕೊಂಡಿರುವ ತಾತ್ವಿಕ ಅಂಶಗಳು ಈಹಿಂದೆ ಪ್ರಚಲಿತವಿದ್ದ ಶೈವಮತಗಳಲ್ಲಿಯು ಕಾಣಿಸಿಕೊಂಡಿವೆ. ಹೀಗಾಗಿ ಪ್ರಾಚೀನವಾದ ಶೈವದ ಅನೇಕ ಅಂಶಗಳು ಉಪನಿಷತ್ತುಗಳಲ್ಲಿಯೂ ಇವೆ. ಆದ್ದರಿಂದ ವೀರಶೈವ ಧರ್ಮದ ಅಂಶಗಳು ಉಪನಿಷತ್ತುಗಳಲ್ಲಿವೆ ಎಂದು ಹೇಳುವುದರ ಬದಲು ವೀರಶೈವವು ಬರಮಾಡಿಕೊಂಡ ಶೈವ ಮತದ ಅನೇಕ ಅಂಶಗಳು ಉಪನಿಷತ್ತುಗಳಲ್ಲಿವೆ ಎಂಬುದೇ ಸೂಕ್ತ[೨೪]. ಹೀಗಾಗಿ ಇದರಲ್ಲಿರುವ ತಾತ್ವಿಕ ಅಂಶಗಳ ಆಧಾರದ ಮೇಲೆ ಇದು ಬಸವಾದಿ ಶರಣರಿಗಿಂತ ಹಿಂದೆ ಇದ್ದ ಪ್ರಾಚೀನವಾದ ಧರ್ಮ ಎಂದು ಗುರುತಿಸಬಹುದಷ್ಟೆ. ವೀರಶೈವ ಧರ್ಮದಲ್ಲಿ 'ಸ್ಥಲ' ಎಂಬುದು ವಿಶಿಷ್ಟವಾದ ಅರ್ಥವನ್ನುಳ್ಳ ಪಾರಿಭಾಷಿಕ ಪದ. ಷಟ್‌ಸ್ಥಲಗಳನ್ನು ಗಮನಿಸಿದಾಗ ಸ್ಥಲ ಎಂಬುದು ಸಾಧಕನು ಸಿದ್ಧಿಯನ್ನು ಪಡೆಯುವ ಮಾರ್ಗದಲ್ಲಿನ ಹಂತ ಎಂಬ ಅರ್ಥವನ್ನು ನಾವು ಕಾಣಬಹುದು. ಹರಿಹರನು ತನ್ನ ರಗಳೆಗಳಲ್ಲಿನ ಪರಿಚ್ಛೇದಗಳಿಗೂ ಸ್ಥಲವೆಂದೇ ಹೆಸರು ಕೊಟ್ಟಿದ್ದಾನೆ. ರಗಳೆಗಳ ವಸ್ತುವು ಶಿವಭಕ್ತನೊಬ್ಬನ ಸಾಧನೆಗಳನ್ನು ವರ್ಣಿಸುವುದೆ

---

೨೪. ಡಾ॥ ಪಿ.ವಿ. ನಾರಾಯಣ. ವಚನಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ. ಪುಟ ೩೬೩

ಆಗಿರುವುದರಿಂದ ಒಂದೊಂದು ವಿಭಾಗವೂ ಆ ಸಾಧಕನ ಮಾರ್ಗದ ಒಂದೊಂದು ಹಂತವೆಂದು ಭಾವಿಸಿ ಹರಿಹರ ಈ ಹೆಸರನ್ನಿತ್ತಂತೆ ಕಾಣುತ್ತದೆ. ಕೆಲವು ವೀರಶೈವ ಧರ್ಮ ಗ್ರಂಥಗಳು ಸ್ಥಲಕ್ಕೆ ವಿಶೇಷ ಅರ್ಥವನ್ನು ಆರೋಪಿಸುತ್ತವೆ. ಈ ಶಬ್ದದ ಮೊದಲಕ್ಷರವು ಸ್ಥಿತಿಯನ್ನು ಎರಡನೆಯದು ಲಯವನ್ನು ಸೂಚಿಸಿ, ಇವುಗಳಿಗೆ ಕಾರಣೀಭೂತವಾದ ಶಕ್ತಿಯನ್ನು ಈ ಎರಡು ಅಕ್ಷರಗಳು ಸೇರಿದಾಗ ಸೂಚಿಸುತ್ತವೆ ಎಂದು ವ್ಯಾಖ್ಯಾನಿಸುತ್ತವೆ[೨೫].

ಸ್ಥಾನ, ಮೆಟ್ಟಿಲು, ಜಾಗ, ಹಂತ, ಆಶ್ವಾಸ, ಭಾಗ–ಮೊದಲಾದ ಸಾಮಾನ್ಯರ್ಥಗಳಿಂದ ಕೂಡಿದ ಈ 'ಸ್ಥಲ' ಪದಕ್ಕೆ ವೀರಶೈವ ಶರಣರು ಪರಬ್ರಹ್ಮ, ಪರಶಿವ, ಶಿವ, ಶೂನ್ಯ, ಪರವಸ್ತು, ಘನ, ನಿಜ, ಲಿಂಗ, ಪರ, ಅನು–ಎಂಬ ಮುಂತಾದ ಪದಗಳನ್ನು ಪರ್ಯಾಯವಾಗಿ ಬಳಸಿದ್ದಾರೆ. ವೀರಶೈವ ಸಾಹಿತ್ಯದಲ್ಲಿ ಷಟ್ ಸ್ಥಲದ ಪರಿಕಲ್ಪನೆ ಪ್ರಾಚೀನವಾದುದು. ಆಗಮ ಪುರಾಣಗಳಲ್ಲಿ ಇದರ ಉಲ್ಲೇಖವನ್ನು ಕಾಣುತ್ತೇವೆ. ವಾತುಲ ಪರಮೇಶ್ವರ, ವೀರ, ಸೂಕ್ಷ್ಮ, ಚಂದ್ರಜ್ಞಾನಾಗಮಗಳಲ್ಲಿ ಇದರ ವಿಪುಲ ಮಾಹಿತಿ ದೊರೆಯುತ್ತದೆ.[೨೬] ಅನಂತರ ಹನ್ನೆರಡನೆ ಶತಮಾನದ ವಚನಕಾರರ ವಚನಗಳಲ್ಲೂ ಷಟ್‌ಸ್ಥಲದ ಉಲ್ಲೇಖವನ್ನು ಕಾಣುತ್ತೇವೆ. ಶರಣರು ಸ್ಥಲ ವಿಭಜನೆ ಮಾಡಿ ವಚನ ರಚಿಸಲಿಲ್ಲ. ಮುಂದೆ ವೀರಶೈವ ಧರ್ಮ ಹಾಗೂ ವಚನ ಸಾಹಿತ್ಯದ ಪುನರುತ್ಥಾನದ ಕಾಲದಲ್ಲಿ ಸಂಕಲನಕಾರರು, ಸಂಪಾದನಕಾರರು ಈ ಕೆಲಸ ಮಾಡಿದರು. ಷಟ್‌ಸ್ಥಲದ ಕಲ್ಪನೆ ಆಗಮಗಳಷ್ಟು ಪ್ರಾಚೀನವಾದರೂ ಒಂದರಿಂದ ಆರಂಭವಾಗಿ ಇನ್ನೂರ ಹದಿನಾರರವರೆಗಿನ ಸ್ಥಲಗಳ ಕಲ್ಪನೆ ವಚನಕಾರರ ತರುವಾಯದ್ದು ಎನ್ನಬಹುದು. ಸ್ಥಲಗಳ ವಿಭಜನೆಯಲ್ಲಿ ಈ ರೀತಿಯ ವೈವಿಧ್ಯತೆ ಕಂಡು ಬಂದರೂ ಅದರ ಗುರಿ ಮಾತ್ರ ಒಂದೇ ಆಗಿದೆ. ಅದು ಸಾಧಕ ಮಾನಸಿಕ ಅವಸ್ಥೆಯನ್ನು ಅವಲಂಭಿಸಿದೆ.

ಮಾನವನು ದೇವಮಾನವನಾಗುವ ತತ್ವಗಳನ್ನು ರೂಪಿಸಿ, ಅಂಗವು ಲಿಂಗದಲ್ಲಿ ಸಾಮರಸ್ಯವನ್ನು ಪಡೆಯಲು ನಡೆಸುವ ಸಾಧನೆಯಲ್ಲಿ ಶರಣರು ಆರು ಹಂತಗಳನ್ನು ಗುರುತಿಸುತ್ತಾರೆ.

ಅವುಗಳೆಂದರೆ ಭಕ್ತ ಸ್ಥಲ, ಮಾಹೇಶ್ವರ ಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ, ಮತ್ತು ಐಕ್ಯ ಸ್ಥಲ. ಜೀವವು ಗುರುಕರುಣೆಯಿಂದ ಲಿಂಗ ದೀಕ್ಷೆಯನ್ನು ಪಡೆದ ನಂತರವೇ ಸಾಧನೆಯ ಪ್ರಾರಂಭವಾಗುವುದು. ಅಂಗಗುಣಗಳನ್ನೆಲ್ಲ ಲಿಂಗ ಗುಣಗಳನ್ನಾಗಿ ಮಾರ್ಪಡಿಸಿ ದೇವೋನ್ಮಾದದ ನಿಬ್ಬೆರಗಿನಲ್ಲಿ ತಾನೇ ತಾನಗುವ ಮಾರ್ಗವೇ ಷಟ್‌ಸ್ಥಲ ಇದೇ ಲಿಂಗಾಂಗ ಸಾಮರಸ್ಯ.

ಷಟ್‌ಸ್ಥಲವು ಭಕ್ತಿಯ ಕಟ್ಟಡದ ಮೇಲೆ ನಿಂತು ಭಕ್ತಿಗಳಿಂದ ಯುಕ್ತವಾಗಿ, ಜೀವಿಯ ಸಾಧನೆಯ ಹಾದಿಯಲ್ಲಿ ಸಹಕಾರಿಯಾಗುತ್ತದೆ. ಅಂಗ–ಲಿಂಗವೆಂದು ಎರಡಾಗಿ ನಿಲ್ಲುವ 'ಸ್ಥಲ' ತತ್ವವು ಅಂಗದಿಂದ ತ್ಯಾಗಾಂಗ, ಭೋಗಾಂಗ, ಯೋಗಾಂಗವೆಂದು, ತ್ಯಾಗಾಂಗದಿಂದ ಭಕ್ತ–ಮಹೇಶ, ಭೋಗಾಂಗದಿಂದ ಪ್ರಸಾದಿ–ಪ್ರಾಣಲಿಂಗಿ, ಯೋಗಾಂಗದಿಂದ ಶರಣ–ಐಕ್ಯ ಸ್ಥಲಗಳೆಂದು ಆರು ಪ್ರಕಾರಗಳು ನಿರ್ಮಾಣಗೊಂಡವು[೨೭]. ಇವು ಅಂಗಸ್ಥಲಗಳೆನಿಸಿದವು.

---

೨೫. ಹೆಚ್ ತಿಪ್ಪೇರುದ್ರಸ್ವಾಮಿ : 'ವಚನಗಳಲ್ಲಿ ವೀರಶೈವಧರ್ಮ' :ಪುಟ–೧೩೨

೨೬. ಡಾ॥ ಎಸ್. ವಿದ್ಯಾಶಂಕರ,(ಸಂ) 'ವಚನ ಸಾಹಿತ್ಯ ದ್ವಿತೀಯ ಘಟ್ಟ,' ಪುಟ–೨೬೪

೨೭. ತ್ಯಾಗಾಂಗದಲ್ಲಿ ವಿಷಯ ಸುಖವನ್ನು ತ್ಯಾಗಮಾಡುತ್ತಾನೆ. ಭೋಗಾಂಗದಲ್ಲಿ ಲಿಂಗಭೋಗೋಪಭೋಗ ಮಾಡುತ್ತಾನೆ. ಯೋಗಾಂಗದಲ್ಲಿ ಸಾಮರಸ್ಯವನ್ನು ಪಡೆಯುತ್ತಾನೆ.

ಹೀಗೆಯೆ ಲಿಂಗದಿಂದ ಇಷ್ಟ ಲಿಂಗ, ಪ್ರಾಣ ಲಿಂಗ, ಭಾವ ಲಿಂಗವೆಂದು, ಇಷ್ಟ ಲಿಂಗದಲ್ಲಿ ಗುರುಲಿಂಗ–ಆಚಾರಲಿಂಗ, ಪ್ರಾಣ ಲಿಂಗದಲ್ಲಿ ಜಂಗಮ ಲಿಂಗ–ಶಿವಲಿಂಗ, ಭಾವ ಲಿಂಗದಲ್ಲಿ ಮಹಾಲಿಂಗ–ಪ್ರಸಾದ ಲಿಂಗವೆಂದು ಆರು ವಿಧವಾಗಿ ಗುರುತಿಸಿಕೊಂಡು ಇವು ಇಷ್ಟಲಿಂಗ ಸ್ಥಲಗಳೆನಿಸಿದವು. ಲಿಂಗಸ್ಥಲ ಶಕ್ತಿ ಪ್ರಧಾನವಾಗಿ ಪ್ರವೃತ್ತಿ ಮಾರ್ಗವನ್ನನುಸರಿಸಿದರೆ, ಅಂಗಸ್ಥಲ ಭಕ್ತಿ ಪ್ರಧಾನವೆನಿಸಿ ನಿವೃತ್ತಿ ಮಾರ್ಗವನ್ನನುಸರಿಸುತ್ತದೆ. ಪರಶಿವನ ಶಕ್ತಿಯು ಸೃಷ್ಟಿ ರಚನೆಯತ್ತ ಇಳಿದು ಬರುವುದೇ ಪ್ರವೃತ್ತಿ ಮಾರ್ಗ, ಜೀವಿಯೂ ಪರಶಿವನ ಚೈತನ್ಯದತ್ತ ಏರಿ ಹೋಗುವುದೇ ನಿವೃತ್ತಿ ಮಾರ್ಗ ಎಂದು ಶರಣರು ಷಟ್‌ಸ್ಥಲ ಪರಿಕಲ್ಪನೆಯಲ್ಲಿ ಪ್ರತಿಪಾದಿಸುತ್ತಾರೆ.

ಷಟ್‌ಸ್ಥಲಗಳಲ್ಲಿ ಒಂದೊಂದು ಸ್ಥಲವೂ ಬೇರೆ ಬೇರೆ ಅಲ್ಲ. ಒಂದರ ವಿಕಾಸವೇ ಮತ್ತೊಂದಾಗಿದೆ. ಒಂದನ್ನು ಬಿಟ್ಟು ಮತ್ತೊಂದಕ್ಕೆ ಹೋಗುವುದಲ್ಲ. ಒಂದರಲ್ಲಿ ನಿಂತೇ ಎಲ್ಲವನ್ನು ಸಾಧಿಸುವುದು. ಒಂದೊಂದು ಸ್ಥಲದ ಲಕ್ಷಣವನ್ನು ಪ್ರತ್ಯೇಕವಾಗಿ 'ವಿಶ್ವಾಸದಿಂದ ಭಕ್ತ, ನಿಷ್ಠೆಯಿಂದ ಮಾಹೇಶ್ವರ, ಸಾವಧಾನದಿಂದ ಪ್ರಸಾದಿ, ಸ್ವಾನುಭವದಿಂದ ಪ್ರಾಣಲಿಂಗಿ, ಸ್ವಾನುಭಾವದ ಅರಿವಿನಿಂದ ಶರಣ, ಆ ಅರಿವು ನಿಜದಲ್ಲಿ ಸಮರಸ ಪಡೆದ ನಿರ್ಭಾವದಿಂದ ಐಕ್ಯ' ಎಂದು ಹೇಳಲಾಗುತ್ತದೆ. ಭಕ್ತಿಯನ್ನು ಆಶ್ರಯಿಸಿ ಭಕ್ತನಿಗೆ ಸದ್ಭಕ್ತಿ, ಮಾಹೇಶ್ವರನಿಗೆ ನೈಷ್ಠಿಕ ಭಕ್ತಿ, ಪ್ರಸಾದಿಗೆ ಅವಧಾನ ಭಕ್ತಿ, ಪ್ರಾಣಲಿಂಗಿಗೆ ಅನುಭಾವ ಭಕ್ತಿ, ಶರಣನಿಗೆ ಆನಂದಭಕ್ತಿ, ಐಕ್ಯನಿಗೆ ಸಮರಸ ಭಕ್ತಿ ಅಳವಡುತ್ತದೆ. ಈ ಭಕ್ತಿ ಮಾರ್ಗದಿಂದ ಅಂಗ ಸುಲಭವಾಗಿ ಲಿಂಗದಲ್ಲಿ ಬೆರೆಯುತ್ತದೆ.

ಈ ಷಟ್‌ಸ್ಥಲಮಾರ್ಗವನ್ನು ಅನುಸರಿಸಿ ಬಸವಾದಿ ಶಿವಶರಣರು ತಮ್ಮ ಅಂಗವನ್ನು ಲಿಂಗವಾಗಿಸಿಕೊಂಡರು. ಒಬ್ಬೊಬ್ಬ ಶರಣನು ಒಂದೊಂದು ಸ್ಥಲದಲ್ಲಿ ನಿಂತು ಐಕ್ಯ ಸಿದ್ಧಿಯನ್ನು ಪಡೆದಿದ್ದಾನೆ. ಹಾಗೆ ಐಕ್ಯತ್ವ ಪಡೆದ ಶರಣರ ಮತ್ತು ಅವರ ನಿಂತ ಸ್ಥಲದ ಸ್ತುತಿ ರೂಪದ ವಚನಗಳಿಂದ ಕೂಡಿದ ಸಂಕಲನವೇ ಪ್ರಸ್ತುತ "ಷಟ್‌ಸ್ಥಲ ಸ್ತೋತ್ರದ ವಚನಗಳು".

ಈ ಕೃತಿಯನ್ನು ಸಂಕಲಿಸಿದವನು ಚೆನ್ನಂಜೇದೇವರ ಪ್ರತಿರೂಪವೇ ಆದ ಅವರ ಶಿಷ್ಯ ಎಳಮಲೆಯ ಗುರುಶಾಂತದೇವ. ಈತ ವೀರಶೈವ ತತ್ವಜ್ಞಾನವನ್ನು ಚೆನ್ನಾಗಿ ಅರಗಿಸಿಕೊಂಡ ಪ್ರತಿಭಾವಂತ. ಅಪರೂಪದ ಸಂಕಲನಕಾರನಾದ ಎಳಮಲೆಯ ಗುರುಶಾಂತದೇವ ಏಳು ಕೃತಿಗಳನ್ನು ಸಂಕಲಿಸಿದ್ದಾನೆ.[೨೮] ಪ್ರಸ್ತುತ 'ಷಟ್‌ಸ್ಥಲ ಸ್ತೋತ್ರದ ವಚನಗಳು' ಕೃತಿಯನ್ನು ಷಟ್‌ಸ್ಥಲ ಸಿದ್ಧಾಂತದ ಅಡಿಯಲ್ಲಿ ವಚನಕಾರರ ಸೂಕ್ತ ವಚನಗಳನ್ನು ಆರಿಸಿ ನಿರೂಪಿಸಿದ್ದಾನೆ. ಇದರಲ್ಲಿ ೨೩ ಜನ ವಚನಕಾರ, ವಚನಕಾರ್ತಿಯರ ೧೩೦ ವಚನಗಳು ಆರು ಸ್ಥಲಗಳಲ್ಲಿ ಸಂಗ್ರಹಗೊಂಡಿವೆ.

ಭಕ್ತ ಸ್ಥಲಕ್ಕೆ	೧೮ ವಚನಗಳು
ಮಾಹೇಶ್ವರ ಸ್ಥಲಕ್ಕೆ	೨೪ ವಚನಗಳು
ಪ್ರಸಾದಿ ಸ್ಥಲಕ್ಕೆ	೩೪ ವಚನಗಳು
ಪ್ರಾಣ ಲಿಂಗಿಸ್ಥಲಕ್ಕೆ	೨೩ ವಚನಗಳು
ಶರಣ ಸ್ಥಲಕ್ಕೆ	೨೭ ವಚನಗಳು
ಐಕ್ಯ ಸ್ಥಲಕ್ಕೆ	೦೪ ವಚನಗಳು

---

೨೮. ಡಾ॥ ವೀರಣ್ಣ ರಾಜೂರ (ಸಂ) 'ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು.' ಪ್ರಸ್ತಾವನೆ ಪುಟ–xvi

ಹೀಗೆ ಷಟ್‌ಸ್ಥಲ ವಿವೇಚನೆಗೆ ವಚನಗಳನ್ನು ಆಯ್ಕೆಮಾಡಿಕೊಂಡಿದ್ದಾನೆ.

"ಭಕ್ತಿ ಸ್ಥಲ ಬಸವಣ್ಣಂಗಾಯಿತ್ತು
ಮಾಹೇಶ್ವರ ಸ್ಥಲ ಮಡಿವಾಳಯ್ಯಂಗಾಯಿತ್ತು
ಪ್ರಸಾದಿಸ್ಥಲ ಚೆನ್ನಬಸವಣ್ಣಾಂಗಾಯಿತ್ತು
ಪ್ರಾಣಲಿಂಗಿ ಸ್ಥಲ ಸಿದ್ಧರಾಮಂಗಾಯಿತ್ತು
ಶರಣ ಸ್ಥಲ ಪ್ರಭುದೇವರಿಗಾಯಿತ್ತು
ಐಕ್ಯಸ್ಥಲ ಅಜಗಣ್ಣಂಗಾಯಿತ್ತು
ಎನಗಾವ ಸ್ಥಲವೂ ಇಲ್ಲವೆಂದು ನಾನಿರಲು
ಇಂತಿವರೆಲ್ಲರೂ ಷಟ್‌ಸ್ಥಲ ಪ್ರಸಾದವನಿತ್ತರಾಗಿ
ನಾನು ಮುಕ್ತನಾದೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ" (ವ-೧೩೦)

ಐಕ್ಯ ಸ್ಥಲದಲ್ಲಿ ಎಡೆಪಡೆದ ಸ್ವತಂತ್ರ ಸಿದ್ಧಲಿಂಗೇಶ್ವರರ ಈ ವಚನ ಯಾವ ಯಾವ ಶರಣ ಯಾವ ಯಾವ ಸ್ಥಲದಲ್ಲಿ ನಿಂತಿದ್ದಾನೆ ಎಂಬುದನ್ನು ತಿಳಿಸುತ್ತದೆ. ಈ ವಚನವೇ ಎಳಮಲೆಯ ಗುರುಶಾಂತದೇವನಿಗೆ 'ಷಟ್‌ಸ್ಥಲ ಸ್ತೋತ್ರದ ವಚನಗಳು' ಕೃತಿಯನ್ನು ಸಂಕಲಿಸಲು ಪ್ರೇರಣೆ ನೀಡಿದಂತಿದೆ. ಇದರಲ್ಲಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಸ್ಥಲಕ್ಕೆ ಕ್ರಮವಾಗಿ ಬಸವಣ್ಣ, ಮಡಿವಾಳ ಮಾಚಯ್ಯ, ಚೆನ್ನಬಸವಣ್ಣ, ಸಿದ್ಧರಾಮ, ಪ್ರಭುದೇವ ಮತ್ತು ಅಜಗಣ್ಣ ಪ್ರತಿನಿಧಿಗಳಾಗಿ ನಿಂತಿದ್ದಾರೆ. ಪ್ರತಿಯೊಂದು ಸ್ಥಲದ ಪ್ರಾರಂಭದಲ್ಲಿ ಆಯಾ ಸ್ಥಲಕ್ಕೆ ಸಂಬಂಧಿಸಿದ ಶರಣರನ್ನು ಸ್ತೋತ್ರ ಮಾಡಿದ ಒಂದೊಂದು ಸಂಸ್ಕೃತ ವೃತ್ತವನ್ನು ಜೋಡಿಸಲಾಗಿದೆ. ಈ ಪ್ರಮುಖರ ಜೊತೆಗೆ ಮತ್ತೆ ಹಲವರು ಈ ಆರು ಸ್ಥಲಗಳನ್ನು ಸಾಧಿಸಿದ್ದಾರೆ. ಅವರ ಸ್ತೋತ್ರವು ಈ ಸಂಕಲನದಲ್ಲಿ ಅವಕಾಶ ಪಡೆದಿದೆ.

ಭಕ್ತ ಸ್ಥಲ: ಆರು ಸ್ಥಲಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಈ ಸಂಕಲನದ ಮೊದಲ ಸ್ಥಲವಾದ ಭಕ್ತ ಸ್ಥಲದ ಆರಂಭದಲ್ಲಿ ಬಸವಣ್ಣನನ್ನು ಸ್ತುತಿಸಿದ ವೃತ್ತವು ಕಂಡುಬರುತ್ತದೆ.

"ಜಯತು ಬಸವರಾಜಃ ಸೌಥ್ಲ್ಯ ನೈರ್ಮಲ್ಯ ಪೂಜಃ
ಪ್ರಮಥ ಗಣ ಸಮಾಜಃ ಪ್ರೋಲ್ಲಸದ್ಭಕ್ತಿ ನೈಜಃ
ಪ್ರಹೃತ ವಿನಮದರ್ಥಿಃ ಸ್ವಾಯದಾಮ್ನಾಯ ಪೂರ್ತಿಃ
ಸ್ಥಿರದಿಗಮಿತಕೀರ್ತಿಃ ಶ್ರೀವೃಷಾಧೀಶಮೂರ್ತಿಃ"

ವೀರಶೈವ ನಿರ್ಣಯ ಪರಮಾವತಾರಿಯಾದ ಬಸವಣ್ಣ ಹಲವು ಮುಖಗಳುಳ್ಳ ವ್ಯಕ್ತಿತ್ವದ ಅಪೂರ್ವ ಮನುಷ್ಯ. ದೈವಭಕ್ತ, ಭಂಡಾರಿ, ಸಾಮಾಜಿಕ ಆಂದೋಲನಕಾರ, ಮಹಾಮಾನವತವಾದಿ, ಷಟ್‌ಸ್ಥಲಗಳನ್ನು ಭದ್ರವಾದ ನೀತಿಯ ನೆಲೆಗಟ್ಟಿನ ಮೇಲೆ ಸ್ಥಾಪಿಸಿದ ಹಿರಿಮೆಯುಳ್ಳವನು. ವ್ಯವಸ್ಥಿತ ವೈಚಾರಿಕತೆಯ ಆಧಾರದ ಮೇಲೆ ಸೃಷ್ಟಿ ತತ್ವಗಳ ಹಿನ್ನೆಲೆಯಲ್ಲಿ ಜೀವ ಜಗತ್ತಿನ ವಿಚಾರಧಾರೆಗಳನ್ನು ಸರಳವಾದ ಕನ್ನಡದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಹೇಳಿದ ಮಹತ್ವ ಪೂರ್ಣವಚನಕಾರ. ಇಂತಹ ಬಸವಣ್ಣ ಭಕ್ತ ಸ್ಥಲಕ್ಕೆ ಅಧಿಕೃತ ಪ್ರತಿನಿಧಿ.

ಈ ಸ್ಥಲದಲ್ಲಿ ಎಳಮಲೆಯ ಗುರು ಶಾಂತದೇವನು ಭಕ್ತ ಸ್ಥಲದ ಮಹತ್ವವನ್ನು ಹದಿನೆಂಟು ವಚನಗಳಲ್ಲಿ ಅರ್ಥಪೂರ್ಣವಾಗಿ ವಿವೇಚಿಸಿದ್ದಾನೆ. ಭಕ್ತಿಯೆ ಒಂದು ಮಹಾಶಕ್ತಿ, ಲಿಂಗಾಂಗ

ಸಾಮರಸ್ಯಕ್ಕೆ, ಶಿವಯೋಗ ಸಿದ್ದಿಗೆ ಭಕ್ತಿ ಮಾರ್ಗವೇ ಮಹಾಮಾರ್ಗ. ಈ ಸಾಧನದ ಮಾರ್ಗವನ್ನು ಸಮರ್ಪಕವಾಗಿ ತೋರಿಸುವುದೇ ಭಕ್ತ ಸ್ಥಲ. ಬಸವಣ್ಣನವರ ಅನುಭವ ಮಂಟಪದ ಸುಂದರ ಚಿತ್ರವನ್ನು ಅಲ್ಲಮ ಪ್ರಭುದೇವರು ಈ ವಚನದ ಮೂಲಕ ಪ್ರತಿಪಾದಿಸಿ ಭಕ್ತಸ್ಥಲದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

"ಕಲ್ಯಾಣವೆಂಬ ಪಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿದ್ದಿತ್ತಯ್ಯಾ ಶಿವನ ಪ್ರತಾಪ. ಆ ಬೆಳಗಿನೊಳಗೊಪ್ಪುತ್ತಿದ್ದರಯ್ಯಾ
ಅಸಂಖ್ಯಾತ ಭಕ್ತಗಣಂಗಳು ಶಿವಭಕ್ತನಿದ್ದ ಕ್ಷೇತ್ರವೇ
ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ? ಗುಹೇಶ್ವರ ಲಿಂಗದಲ್ಲಿ
ಎನ್ನ ಪರಮಾರಾಧ್ಯರು ಸಂಗನ ಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯ"
(ವ-೧)

ವಚನ ಸಾಹಿತ್ಯದ ಉಜ್ವಲ ನಕ್ಷತ್ರ, ಶ್ರೇಷ್ಟ ಅನುಭಾವಿ, ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನು ಏಕಕಾಲಕ್ಕೆ ಧಿಕ್ಕರಿಸಿ ನಿಂತವಳು, ಜೀವನವನ್ನು ಹೋರಾಟದಲ್ಲಿ ಕಳೆದ ಅಕ್ಕಮಹಾದೇವಿಯ ಹೃದಯದಿಂದ ಹೊರಹೊಮ್ಮಿದ ಈ ವಚನವು ಭಕ್ತಿಯ ಪ್ರತಿರೂಪವೇ ಆದ ಬಸವಣ್ಣನನ್ನು ನೆನೆಯುವ ಮೂಲಕ ಭಕ್ತ ಸ್ಥಲಕ್ಕೆ ಒಳ್ಳೆಯ ಉದಾಹರಣೆಯನ್ನು ನೀಡಿದ್ದಾಳೆ.

"ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಕಂಡೆನಾಗಿ
ಎನ್ನ ಕಂಗಳ ಪಟಲ ಹರಿಯಿತ್ತಿಂದು
ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಶ್ರೀಚರಣಕ್ಕೆರಗಿದೆನಾಗಿ
ಎನ್ನ ಹಣೆಯ ದುರ್ಲಿಖಿತ ತೊಡೆಯಿತ್ತಿಂದು
ಚೆನ್ನ ಮಲ್ಲಿಕಾರ್ಜುನಯ್ಯಾ ನಿಮ್ಮ ಶರಣ ಸಂಗನ ಬಸವಣ್ಣನ
ಶ್ರೀ ಪಾದಕ್ಕೆ ಮಿಗೆ ಮಿಗೆ ನಮೋ, ನಮೋ, ಎನುತಿರ್ದೆನಯ್ಯಾ" (ವ-೩)

ಹೀಗೆ ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು ಎತ್ತಿ ಹಿಡಿದ ಶರಣರ ವಚನಗಳ ಮೂಲಕವೇ ಪಂಚಮ ಪುರುಷಾರ್ಥವಾದ ಭಕ್ತ ಸ್ಥಲದ ಲಕ್ಷಣಗಳನ್ನು ತೋರಿಸಿದ ಜಾಣ್ಮೆ ಎಳಮಲೆಯ ಗುರುಶಾಂತದೇವರದಾಗಿದೆ.

ಮಹೇಶ್ವರ ಸ್ಥಲ: ಎರಡನೆ ಸ್ಥಲವಾದ ಮಹೇಶ್ವರ ಸ್ಥಲಕ್ಕೆ ಮಡಿವಾಳ ಮಾಚಿದೇವನನ್ನು ಅಧಿಕೃತ ಪ್ರತಿನಿಧಿಯನ್ನಾಗಿ ಎತ್ತಿಕೊಂಡು ಸ್ತೋತ್ರ ಮಾಡಿದ ಬಸವಣ್ಣನವರ ವಚನ ಬಹುಸೊಗಸಾಗಿದೆ.

"ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ
ಎನ್ನ ಮನವ ನಿರ್ಮಲವ ಮಾಡಿದಾತ ಮಡಿವಾಳ
ಎನ್ನಂತರಂಗವ ಬೆಳಗಿದಾತ ಮಡಿವಾಳ
ಎನ್ನ ಬಹಿರಂಗವ ಬೆಳಗಿದಾತ ಮಡಿವಾಳ ಕೂಡಲ ಸಂಗಮದೇವ
ಎನ್ನ ನಿಮಗೆ ಯೋಗ್ಯವ ಮಾಡಿದಾತ ಮಡಿವಾಳ" (ವ-೨೨)

ಬಸವಣ್ಣನವರು ಈ ವಚನದಲ್ಲಿ ತನ್ನ ತನು, ಮನಗಳನ್ನು ಪರಿಶುದ್ಧಗೊಳಿಸಿದಾತ ಮಡಿವಾಳ ಮಾಚಯ್ಯ, ಅಂತರಂಗ, ಬಹಿರಂಗಗಳನ್ನು ಬೆಳಗಿ ಪರಿಪೂರ್ಣ ಭಕ್ತನನ್ನಾಗಿ ಮಾಡಿದವನು ಮಡಿವಾಳ ಮಾಚಯ್ಯ. ಅವನಿಂದಾಗಿಯೇ ಭಗವಂತನನ್ನು ಅರಿಯಲು ಸಾಧ್ಯವಾಯಿತು ಎಂದು ವಿನಮ್ರನಾಗಿ ಸ್ತುತಿಸಿದ್ದಾನೆ.

ಅಂಗ ಲಿಂಗ ಸಂಗಿಯಾದವನಿಗೆ ಬಂದ ಕಷ್ಟ ನಷ್ಟಗಳ ದೂರಮಾಡಿ, ಸರ್ವಾಂಗ ಲಿಂಗ ಸಂಬಂಧವನ್ನುಂಟು ಮಾಡುವ ಮಡಿವಾಳ ಮಾಚಯ್ಯನನ್ನು ಸ್ತುತಿಸಿದ ಜ್ಞಾನ ನಿಧಿ ಚೆನ್ನಬಸವಣ್ಣನವರ ವಚನವೊಂದು ಹೀಗಿದೆ.

"ಅಂಗದ ಮೇಲಣ ಲಿಂಗವು ಹಿಂಗಿದಂತಿರಬೇಕು
ಅಂಗಕ್ಕೂ ಲಿಂಗಕ್ಕೂ ಸಂಬಂಧವೇನೋ ಮನಮುಟ್ಟದನ್ನಕ್ಕರ
ಕಾಯ ಕಾಯಕವ ಮಾಡುತ್ತಿರಲು ಮನವು ಲಿಂಗದಲ್ಲಿ ಬೆರಸಿ
ತೆರಹಿಲ್ಲದಿಪ್ಪ ಮಡಿವಾಳನ ಪರಿಯ ನೋಡಾ
ಅಂಗ ಲಿಂಗ ಸಂಗವೆಂಬ ಸಂದು ಸಂಶಯವಳಿದು ಸರ್ವಾಂಗ ಲಿಂಗ ಸಂಬಂಧಿ
ಕೂಡಲ ಚೆನ್ನಸಂಗಯ್ಯನಲ್ಲಿ ಮಡಿವಾಳ ಮಾಚಯ್ಯನು" (ವ-೩೦)

ಮಹೇಶ್ವರ ಸ್ಥಲದಲ್ಲಿ ಜೀವನು ಭಕ್ತಸ್ಥಲದ ಆಚರಣೆಗಳನ್ನು ಮತ್ತಷ್ಟು ಸೂಕ್ಷ್ಮವಾಗಿ ಆಚರಿಸಬೇಕು. ಇವುಗಳೊಂದಿಗೆ ವ್ರತನಿಯಮ ಶೀಲಗಳ ಆಚರಣೆಗಳನ್ನು ನಡೆಸಬೇಕು. ವ್ರತನೇಮ ಛಲವನ್ನು ತಿಳಿಯುವುದೇ ಮಾಹೇಶ್ವರನ ಗುಣವಾಗಿದೆ. ಇಲ್ಲಿ ನಿಷ್ಠೆ, ಏಕೋಭಾವ, ಆಚಾರ, ವಿಚಾರಗಳ ವಿಸರ್ಜನೆ, ದ್ವಿರ್ಭಾವ ಬುದ್ಧಿಯ ಲಯವಾದರೆ ಆತ ಮಾಹೇಶ್ವರ, ಗುರು ಮುಖದಲ್ಲಿ ಸರ್ವಶುದ್ಧವಾಗಿ, ಪಂಚಭೂತಗಳ ಹಂಗನ್ನು ಕಳೆದು ಕೊಂಡವ ಮಾಹೇಶ್ವರ. ಗುರುಮುಖವೆ ತನಗೆ ಸನ್ಮಾರ್ಗವೆಂದು, ಗುರು, ಲಿಂಗವನ್ನು ಪೂಜಿಸುತ್ತಾ ತನಗಂಟಿದ ಸಾಮಾಜಿಕ ಸಂಬಂಧವನ್ನು ಕಳಚಿ, ಲಿಂಗದ ನಿಷ್ಠೆಯಲ್ಲಿಯೆ ವ್ರತಾಚಾರಿಯಾಗಿರಬೇಕು. ಅಂಗನು ಅಜ್ಞಾನವನ್ನು ಸುಟ್ಟು, ಸುಜ್ಞಾನದ ಪ್ರಭೆಯ ಬೆಳಗಿನಲ್ಲಿ ಹೊಳೆಯುವ ರೀತಿಯನ್ನು ಅಲ್ಲಮ ಪ್ರಭುವಿನ ಈ ವಚನದಿಂದ ತಿಳಿಯಬಹುದಾಗಿದೆ.

"ಅಷ್ಟತನುವಿನ ಘಟ್ಟಿಯಂ ಕರಗಿಸಿ
ಕಟ್ಟುಗ್ರದ ಕಾಮ, ಕ್ರೋಧ, ಲೋಭ, ಮೋಹ
ಮದ, ಮತ್ಸರಗಳೆಂಬುವ ಸುಟ್ಟುರುಹಿ
ತನುವಿನ ಅವಲೋಹವ ಕೆಡಿಸಿ, ಮನದ ಸಂಚಲವ ನಿಲಿಸಿ
ಸಕಲ ಕರಣಂಗಳ ಅರಿವಿಂಗೆ ಆಹುತಿಯನಿಕ್ಕಿ
ಸುಜ್ಞಾನ ಪ್ರಭೆಯನುಟ್ಟು, ಸುಜ್ಞಾನ ಪ್ರಭೆಯಹೊದೆದು
ಸುಜ್ಞಾನ ಪ್ರಭೆಯ ಸುತ್ತಿ, ಸುಜ್ಞಾನ ಪ್ರಭೆಯ ಹಾಸಿ
ಮಹಾಜ್ಞಾನದಲ್ಲಿ ನಿರ್ಭಾವ ಸಂಪನ್ನನಾದ ಮಡಿವಾಳ
ಮಡಿಯ ಪ್ರಸಾದವ ನಾನು ಹೊದೆದ ಕಾರಣ, ನಿರ್ಮಲನಾದೆನು,
ನಿಜೈಕ್ಯನಾದೆನು, ನಿಶ್ಚಿಂತನಾದೆನು. ಇದು ಕಾರಣ ಗುಹೇಶ್ವರ ಲಿಂಗದಲ್ಲಿ
ತೆರಹಿಲ್ಲದಿಪ್ಪ ಮಡಿವಾಳನ ಪ್ರಸಾದದಿಂದ ನಿಮ್ಮಂಘನವನರಿದು
ಬದುಕಿದೆನು ಕಾಣಾ ಸಂಗನ ಬಸವಣ್ಣಾ" (ವ-೩೩)

ಭಕ್ತಿ ನಿಧಿ ಬಸವನನ್ನು ಕಾಣಲು ಮಡಿವಾಳ ಮಾಚಿದೇವನು ನೀಡಿದ ಅರಿವಿನ ಜ್ಞಾನದಿಂದ ಸಾಧ್ಯವಾಯಿತು ಎಂದು ಅಲ್ಲಮ ಒಂದೇ ವಚನದಲ್ಲಿ ಇಬ್ಬರನ್ನು ಸ್ತುತಿಸಿದ್ದಾನೆ.

ಪ್ರಸಾದಿಯ ಮುಖ್ಯ ಲಕ್ಷಣವೆಂದರೆ ಸರ್ವವನ್ನು ಶಿವನಿಗೆ ಸಮರ್ಪಿಸಿ ಆ ಪ್ರಸಾದವನ್ನು ಸೇವಿಸುವುದು. ಆದ್ದರಿಂದಲೆ ಪ್ರಸಾದಿಯನ್ನು ಲಿಂಗಭೋಗೋಪಭೋಗಿ ಎಂದು ಕರೆಯುತ್ತಾರೆ. ಎಳಮಲೆಯ ಗುರುಶಾಂತದೇವರ ಸೂಕ್ಷ್ಮ ಪ್ರಜ್ಞೆಗೆ ಪ್ರಸಾದಿ ಸ್ಥಲದಲ್ಲಿ ಅಳವಡಿಸಿಕೊಂಡಿರುವ ವಚನಗಳೇ ಸಾಕ್ಷಿ. ಪ್ರಸಾದಿ ಸ್ಥಲಕ್ಕೆ ಚೆನ್ನಬಸವಣ್ಣನವರೆ ಪ್ರಮಾಣಿತ ಅಧಿಕಾರಿ. ಈ ಸ್ಥಲದ ಆರಂಭದ ವೃತ್ತದಲ್ಲಿ ಆತನನ್ನೆ ಸ್ತುತಿಸಿದ್ದಾನೆ. ಚೆನ್ನಬಸವಣ್ಣನವರನ್ನು ಕುರಿತಾಗಿಯೆ ಇರುವ ಹತ್ತು ವಚನಗಳನ್ನು ಸಂಗ್ರಹಿಸಿದ್ದಾನೆ. ಆದರೆ ಈ ಸ್ಥಲದಲ್ಲಿ ಮರುಳ ಶಂಕರದೇವನಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾನೆ ಗುರುಶಾಂತದೇವ. ಅದರಿಂದಾಗಿಯೆ ಮರುಳ ಶಂಕರ ದೇವನಿಗೆ ಸಂಬಂಧಿಸಿದ ಹದಿನೆಂಟು ವಚನಗಳನ್ನು ಎತ್ತಿಕೊಂಡು ಸ್ತುತಿಸಿರುವುದು ಕಂಡುಬರುತ್ತದೆ.

ಮಡಿವಾಳ ಮಾಚಿದೇವನ ಈ ಕೆಳಗಿನ ವಚನದಲ್ಲಿ ಮಹಾಪ್ರಸಾದಿ ಚೆನ್ನ ಬಸವಣ್ಣನವರನ್ನು ವರ್ಣಿಸುವುದರೊಂದಿಗೆ ಪ್ರಸಾದಿ ಸ್ಥಲದ ಗುಣ ವೈಶಿಷ್ಟ್ಯಗಳೂ ಅಭಿವ್ಯಕ್ತಗೊಂಡಿವೆ.

"ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ,
ಜಂಗಮವೆ ಸಂಗವಾಗಿ, ಸಂಗವೆ ಸುಸಂಗವಾಗಿ,
ಪ್ರಾಣವೆ, ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ,
ಇಂತೀ ತ್ರಿವಿಧದಲ್ಲಿ ಸಂಪನ್ನನಾದ ಸಮತಾ ಪ್ರಸಾದಿ,
ಸನ್ನಹಿತ ಪ್ರಸಾದಿ, ಸಮಾಧಾನ ಪ್ರಸಾದಿ ಕಲಿದೇವಯ್ಯಾ,
ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೆ" (ವ-೫೦)
"ಆಕಾರವೆಂಬೆನೆ ನಿರಾಕಾರವಾಗಿದೆ,
ನಿರಾಕಾರವೆಂಬೆನೆ ಅತ್ತತ್ತ ತೋರುತ್ತದೆ,
ತನ್ನನಳಿದು, ನಿಜವುಳಿದ
ಮಹಾಲಿಂಗ, ತ್ರಿಪುರಾಂತಕನ ನಿಲವ ಕಂಡು ಒಳಕೊಂಡ
ಮರುಳ ಶಂಕರ ದೇವರ ಮೂರ್ತಿಯ
ನಿಮ್ಮಿಂದ ಕಂಡು ಬದುಕಿದೆನು ಕಾಣಾ ಸಂಗನ ಬಸವಣ್ಣಾ" (ವ-೬೮)

ಆಕಾರ, ನಿರಾಕಾರವಳಿದು, ನಿಜವುಳಿದ ತ್ರಿಪುರಾಂತಕನಲ್ಲಿಯೆ ಸೇರಿಕೊಂಡ ಮರುಳ ಶಂಕರ ದೇವರನ್ನು ನಿಮ್ಮಿಂದ ಕಂಡು ಬದುಕಿದೆನು ಎಂದು ಬಸವಣ್ಣನವರನ್ನು ಉದ್ದೇಶಿಸಿ ಕಿನ್ನರಿ ಬೊಮ್ಮಯ್ಯ ನುಡಿಯುತ್ತಾನೆ. ಇದೆ ಮರುಳ ಶಂಕರದೇವರನ್ನು ನಿಮ್ಮಿಂದ ಕಂಡು ಬದುಕಿದೆನು ಕಾಣಾ ಕಿನ್ನರಿ ಬೊಮ್ಮಯ್ಯ ಎಂದು ಬಸವಣ್ಣ ಸ್ತುತಿಸಿದ್ದಾನೆ. ಅನುಭಾವಿಯು, ಮಹಾಪ್ರಸಾದಿಯು, ವೀರಶೈವ ಸಿದ್ಧಾಂತವನ್ನು ಮೈಗೂಡಿಸಿಕೊಂಡಿದ್ದ ಗುರುಶಾಂತದೇವರು ಪ್ರಸಾದಿ ಸ್ಥಲಕ್ಕೆ ಮಹತ್ವ ನೀಡಿದ್ದಾರೆ ಎಂಬುದಕ್ಕೆ ಅವರು ಈ ಸ್ಥಲದಲ್ಲಿ ಆಯ್ಕೆ ಮಾಡಿಕೊಂಡಿರುವ ಅಧಿಕ (೩೪) ವಚನಗಳೇ ಸಾಕ್ಷಿ.

ಈ ಮೊದಲ ಮೂರು ಸ್ಥಲಗಳಲ್ಲಿ ಕ್ರಿಯೆ ಪ್ರಧಾನವಾಗಿತ್ತು. **ಪ್ರಾಣ ಲಿಂಗಿ ಸ್ಥಲ**ದಿಂದ ಜ್ಞಾನ ಪ್ರಧಾನವಾಗುತ್ತದೆ. ಪ್ರಾಣಲಿಂಗಿಯು ಎಲ್ಲಡೆ ಪ್ರಾಣಲಿಂಗವನ್ನೇ ಕಾಣುತ್ತಾನೆ. ಒಂದು ಬಗೆಯ ಅದ್ವೈತ ಭಾವವಿಲ್ಲಿ ಪ್ರಾರಂಭವಾಗುತ್ತದೆ ಲಿಂಗವನ್ನು ಅಂಗವು ಇದುವರೆಗೆ ಬೇರೆ ಬೇರೆ ಎಂಬಂತೆ ಕಾಣುತ್ತಿದ್ದು, ಈಗ ತಾನೇ ಲಿಂಗವು, ಲಿಂಗವೇ ತಾನು ಎಂಬ ಭಾವನೆ

ಪ್ರಾರಂಭವಾಗುತ್ತದೆ. ಅಂಗ–ಲಿಂಗದಲ್ಲಿ ಅಭೇದವನ್ನು ಕಾಣಬಲ್ಲಾತನೆ ಪ್ರಾಣಲಿಂಗಿ. ಪ್ರಾಣಲಿಂಗಿ ಸ್ಥಲಕ್ಕೈದಿದಾತನೆ ನಿಜವಾದ ಶಿವಯೋಗಿ. ಪ್ರಾಣಲಿಂಗಿ ಸ್ಥಲದ ಆರಂಭದ ಸಂಸ್ಕೃತ ವೃತ್ತದಲ್ಲಿ ಸಿದ್ಧರಾಮನನ್ನು ಅಧಿಕೃತ ವಕ್ತಾರನಂತೆ ಸ್ತುತಿಸಿದ್ದಾನೆ. ಸಿದ್ಧರಾಮನಿಗೆ ಸಂಬಂಧಪಟ್ಟ ೧೫ ವಚನಗಳು ಈ ಸ್ಥಲದಲ್ಲಿದೆ.

ಪ್ರಾಣಲಿಂಗಿಯ ಮರ್ಮವನ್ನೆ ಮೈಮನಗಳಲ್ಲಿ ತುಂಬಿಕೊಂಡ ಚಂದಯ್ಯನನ್ನು ವರ್ಣಿಸಿದ ಬಸವಣ್ಣನವರ ಈ ವಚನ ಪ್ರಾಣಲಿಂಗಿಯ ಸ್ವರೂಪವನ್ನು ವಿವರವಾಗಿ ವಿವರಿಸಿದೆ.

"ಜಂಗಮ ಸೇವೆಯೆ ಗುರು ಪೂಜೆಯೆಂದರಿದ ಚಂದಯ್ಯ
ಜಂಗಮ ಸೇವೆಯೆ ಲಿಂಗ ಪೂಜೆಯೆಂದರಿದ ಚಂದಯ್ಯ
ಜಂಗಮ ಸೇವೆಯೆ ತನ್ನಿರವೆಂದರಿದ ಚಂದಯ್ಯ
ಜಂಗಮ ಸೇವೆಯೆ ತನ್ನ ನಿಜವೆಂದರಿದ ಚಂದಯ್ಯ
ಜಂಗಮ ಸೇವೆಯೆ ಸ್ವಯಂ ಲಿಂಗವೆಂದರಿದ ಚಂದಯ್ಯ
ಜಂಗಮ ಸೇವೆಯೆ ನಿತ್ಯ ಪದವೆಂದರಿದ ಚಂದಯ್ಯ
ಇದು ಕಾರಣ ನಮ್ಮಕೂಡಲ ಸಂಗಮ ದೇವರಲ್ಲಿ
ಜಂಗಮ ಪ್ರಾಣಿಯಾದ ಚಂದಯ್ಯನ ಹಳೆ ಮಗನಾನಾಗಿ
ಆತನ ಶ್ರೀಚರಣಕ್ಕೆ ಶರಣೆಂದು ಶುದ್ಧನು

ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯ ಪ್ರಭುವೆ?" (ವ–೯೪)

ಪ್ರಾಣಲಿಂಗಿ ಸ್ಥಲಕ್ಕೆ ಪ್ರತೀಕದಂತಿರುವ ಇನ್ನೊಬ್ಬ ಅಜ್ಞಾತ ಶರಣ ತಂಗಟೂರ ಮಾರಯ್ಯನನ್ನು ಸ್ಮರಿಸಿದ ಬಸವಣ್ಣನವರ ಈ ವಚನವನ್ನು ಗುರುಶಾಂತದೇವರು ಬಳಸಿಕೊಂಡಿರುವುದು ಅವರ ಔಚಿತ್ಯ ಪ್ರಜ್ಞೆಗೆ ಸಾಕ್ಷಿ.

"ಕಾಯದ ಗಡಣ ಕೆಲಬರಿಗುಂಟು
ಜೀವದ ಗಡಣ ಕೆಲಬರಿಗುಂಟು
ಭಾವದ ಗಡಣ ಕೆಲಬರಿಗುಂಟು
ವಚನದ ಗಡಣ ಕೆಲಬರಿಗುಂಟು
ಪ್ರಾಣಲಿಂಗದ ಗಡಣ ಆರಿಗೂ ಇಲ್ಲ
ನಮ್ಮಕೂಡಲ ಸಂಗನ ಶರಣರೊಳಗೆ
ತಂಗಟೂರ ಮಾರಯ್ಯಂಗಲ್ಲದೆ ಇಲ್ಲ." (ವ–೯೭)

ಲಿಂಗದಲ್ಲಿ ಮನವಿದ್ದಿತ್ತೋ, ಮನದಲ್ಲಿ ಲಿಂಗವಿದ್ದಿತ್ತೋ ಎಂಬಂತೆ ಇದ್ದ ಸಿದ್ಧರಾಮನನ್ನು ಅಲ್ಲಮ ಪ್ರಭುದೇವ ಸ್ಮರಿಸಿದ್ದಾನೆ.

"ನಿರ್ವಿಕಲ್ಪಿತದ ಅದ್ವೈತದ ನೋಡಿರೆ,
ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೆ,
ಚಂದ್ರ ಸೂರ್ಯರು ಭೂಲೋಕದೊಳದಾರುವ ಕಾಣೆ
ಜ್ಯೋತಿಯಿಲ್ಲ ಬೆಳಗಿನ ಪ್ರಭೆಯೋ ಗೋಹೇಶ್ವರ ಲಿಂಗದಲ್ಲಿ
ಸಿದ್ಧರಾಮಯ್ಯ ದೇವರ ಮಹಾಘನವು". (ವ–೮೩)

ಶರಣ ಸ್ಥಲದಲ್ಲಿ ಜ್ಞಾನವು ಮಹತ್ಪಾತ್ರವನ್ನು ವಹಿಸುತ್ತದೆ. ಶರಣನು ಜ್ಞಾನಿ, ಅವನ ಆಚರಣೆಯ ಹಿಂದಿನ ಅಂತರಾರ್ಥವೆಲ್ಲ ಅವನಿಗೆ ತಿಳಿದಿರುತ್ತದೆ. "ಶರಣ ಸ್ಥಲ ನೋಡುವಡೆ ಬಹು ಸುಲಭ ನೋಡಯ್ಯ, ಶರಣನು ತಿಳಿದು ತಿಳಿದು ಆಚರಿಪನು. ಮರೆದು ಮರೆದು ಆಚರಿಸನು. ಜ್ಞಾನದಿಂದ ಭೇದವಲ್ಲದೆ ದೇಹದಿಂದ ಭೇದವಿಲ್ಲ ನೋಡಯ್ಯ" ಎಂಬ ಸಿದ್ಧರಾಮನ ವಚನದಂತೆ ಗುರುಶಾಂತದೇವರು ಶರಣ ಸ್ಥಲದ ನಿರೂಪಣೆಗಾಗಿ ಸಿದ್ಧರಾಮನ ಹತ್ತು ವಚನ, ಅಕ್ಕಮಹಾದೇವಿಯ ಹದಿಮೂರು ವಚನಗಳನ್ನು ಆರಿಸಿಕೊಂಡಿದ್ದಾನೆ. ಈ ಸ್ಥಲದ ಆರಂಭದ ಶ್ಲೋಕದಲ್ಲಿ ಅಲ್ಲಮ ಪ್ರಭುವನ್ನು ಸ್ತುತಿಸಿದ್ದಾನೆ.

ಅಲ್ಲಮ ಪ್ರಭು ವೀರಶೈವರಿಗೆ ಗುರು, ಬಸವಣ್ಣ ಮುಂತಾದ ಶರಣರಿಗೆ ಗುರು ಸ್ಥಾನದಲ್ಲಿದ್ದು, ನೈತಿಕ ಶಕ್ತಿಯನ್ನು ಧಾರೆಯೆರಿದಿದ್ದಾನೆ. ಈತ ಆಧ್ಯಾತ್ಮಿಕ ಅನುಭಾವಿ. ವಿರಾಗಿ, ಭಕ್ತಿ ತುಂಬಿದ ಶರಣ, ಈತನನ್ನು ಸ್ತುತಿಸುವ ಬಸವಣ್ಣನವರ ವಚನ ಶರಣ ಸ್ಥಲದಲ್ಲಿ ಎಡೆಪಡೆದಿದೆ.

"ಕಂಗಳೆ ಕರುಳಾಗಿ ಉರವಣಿಸಿ ಬಪ್ಪವನ
ಬರವ ನೋಡಾ! ಇರವ ನೋಡಾ! ಪರವ ನೋಡಾ!
ಇಹಪರ ನೋಡಾ! ಇಹಪರ ಒಂದಾದ ಘನವನೋಡಾ!
ಎಲೆ ಘನಕ್ಕೆ ಘನವ ನೋಡಾ!
ಕುರುವಿಟ್ಟ ರೂಪಿನಂತೆ ಕಂಗಳೆರಡು ಹಳಚದೆ ಭುಗಿಲನೆ
ನಡೆತಹ ಇಂತಪ್ಪ ಗುರುಪ್ರಭುವ ಕಂಡೆವ್ಯೆ ಕೂಡಲ ಸಂಗಮ ದೇವಾ" (ವ-೧೦೦)

ಅಕ್ಕಮಹಾದೇವಿ ಜಾಗತಿಕ ಮಹಾಮಹಿಳೆಯರ ಸಾಲಿನಲ್ಲಿ ಸೇರತಕ್ಕವಳು. ಭವಬಂಧನದಿಂದ ಬಿಡುಗಡೆಯಾಗಿ ತನ್ನ ವ್ಯಕ್ತಿತ್ವ, ವೈಶಿಷ್ಟ್ಯತೆಯಿಂದ ಲೋಕದ ಕಣ್ಣನ್ನೆ ಕುಕ್ಕಿದ್ದಾಳೆ. ಬೆರಗುಗೊಳಿಸಿದ್ದಾಳೆ. ಶರಣ ಸ್ಥಲಕ್ಕೆ ಅಧಿಕೃತ ಪ್ರತಿನಿಧಿಯಾಗಿ ಅಕ್ಕ ಕಂಡು ಬರುತ್ತಾಳೆ. ಶರಣ ಸ್ಥಲದ ಸಮಗ್ರ ಲಕ್ಷಣಗಳೇ ಮೂರ್ತಿವೆತ್ತಂತಿದ್ದ ಅಕ್ಕಮಹಾದೇವಿಯನ್ನು ಹೊಗಳಿದ ಬಸವಣ್ಣನವರ ಈ ವಚನ ಸಾಕು.

"ಅಜ್ಞಾನ ಹಿಂಗಿತ್ತು, ಅಹಂಕಾರವಡಗಿತ್ತು.
ಅರಿಷಡ್ವರ್ಗಂಗಳು ಹರಿ ಹಂಚಾದವು,
ಅಷ್ಟ ಮದಂಗಳು ಪಟ್ಟ ಪರಿಯಾದವು,
ದಶವಾಯುಗಳು ವಶವರ್ತಿಯಾದವು
ಇಂದ್ರಿಯಂಗಳು ಬಂಧನವಡೆದವು
ಮನೋವಿಕಾರ ನಿಂದಿತ್ತು
ಕೂಡಲ ಸಂಗಮ ದೇವಾ, ನಿಮ್ಮಲ್ಲಿ
ನಮ್ಮ ಮಹಾದೇವಿಯಕ್ಕಗಳ ನಿರ್ವಾಣದ ಸಹಜ ನಿಲವ ಕಂಡು
ನಮೋ ನಮೋ ಎನುತಿರ್ದೆನಯ್ಯಾ ಪ್ರಭುವೆ." (ವ-೧೨೧)

ಶಿವನಿಗೆ ಸಂಪೂರ್ಣವಾಗಿ ಶರಣಾಗಿ, ತನ್ನ ಅಸ್ತಿತ್ವ ಕಳೆದುಕೊಂಡು ಸತಿ-ಪತಿ ಭಾವದಲ್ಲಿ ಆರಾಧಿಸಬೇಕು. ಇಲ್ಲಿ ತನ್ನ ಪ್ರತಿಯೊಂದು ಕ್ರಿಯೆಯು ಲಿಂಗವನ್ನು ಒಲಿಸುವ ಮಾರ್ಗವಾಗಿರುತ್ತದೆ.

ಐಕ್ಯ ಸ್ಥಲದಲ್ಲಿ ಶರಣ ಸ್ಥಲದಲ್ಲಿದ್ದ ಕಿಂಚಿತ್ತು ಭೇದವೂ ಇಲ್ಲದಂತಾಗಿ ಒಂದೇ ಆಗಿರುವ ಸ್ಥಿತಿ ಇರುತ್ತದೆ. ಇದನ್ನೇ ಲಿಂಗಾಂಗ ಸಾಮರಸ್ಯವೆಂದು ವಚನಕಾರರು ಕರೆಯುತ್ತಾರೆ. ಐಕ್ಯನ

ಸ್ಥಿತಿ "ನೀರು ನೀರನು ಕೂಡಿದಂತೆ, ಕ್ಷೀರ ಕ್ಷೀರವ ಬೆರಸಿದಂತೆ" ಎಂದು ವಚನಕಾರರು ವರ್ಣಿಸಿದ್ದಾರೆ.

ಲಿಂಗದಿಂದ ಬಂದ ಅಂಗ ಷಟ್‌ಸ್ಥಲ ಸಾಧನೆಯ ಮೂಲಕ ಮತ್ತೆ ಲಿಂಗವನ್ನೇ ಸೇರುವುದು ಐಕ್ಯ. ಈ ಹಿನ್ನೆಲೆಯಲ್ಲಿ ಶರಣರು ನಡೆದು ಕೊಂಡಿದ್ದಾರೆ. ಅವರಿಗೆ ಒಂದೇ ಜನ್ಮದಲ್ಲಿ ಮುಕ್ತಿ. ಅವರಿಗೆ ಸಾವಿಲ್ಲ. ಇದೇ ಐಕ್ಯ ಸ್ಥಲದ ಗುಟ್ಟು. ಈ ತತ್ವವನ್ನು ಪ್ರತಿಪಾದಿಸುವ ಬಸವಣ್ಣನವರ ವಚನವೊಂದು ಹೀಗಿದೆ.

"ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು
ಸಾವೆಂಬುದ ಸಯವಲ್ಲ ಲಿಂಗದಲ್ಲಿ ಉದಯವಾದ ಲಿಂಗೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ
ಕೂಡಲ ಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದೊಡಲೊಳಗೆ ಬಗಿದು ಹೊಕ್ಕಡೆ ಉಪಮಿಸಬಲ್ಲವರ ಕಾಣೆ" (ವ-೧೨೯

ಎಳಮಲೆಯ ಗುರುಶಾಂತದೇವನು ಐಕ್ಯ ಸ್ಥಲದಲ್ಲಿ ಅಜಗಣ್ಣನನ್ನು ಸ್ತುತಿಸಿ ಈ ಸ್ಥಲಕ್ಕೆ ಬೇಕಾದ ನಾಲ್ಕು ವಚನಗಳನ್ನು ಸಂಗ್ರಹಿಸಿದ್ದಾನೆ. ಈತ ಸಂಕಲಿಸಿದ 'ಷಟ್‌ಸ್ಥಲ ಸ್ತೋತ್ರದ ವಚನಗಳು' ವೀರಶೈವ ಸಿದ್ಧಾಂತವನ್ನು ತಿಳಿಯಬೇಕೆಂಬ ಜಿಜ್ಞಾಸುಗಳಿಗೆ ಕೈದೀವಿಗೆಯಾಗಿದೆ. ಎಷ್ಟು ಸಾಧ್ಯವೋ ಅಷ್ಟು ಸುಲಭವಾದ, ಸರಳವಾದ ವಚನಗಳನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಈಕೃತಿಯ ಕೊನೆಯಲ್ಲಿ ಸಮಾರೋಪವಾಗಿ ಕೊಟ್ಟ ಸ್ವತಂತ್ರ ಸಿದ್ಧಲಿಂಗೇಶ್ವರರ ವಚನ ಷಟ್‌ಸ್ಥಲ ಪ್ರತಿನಿಧಿಯಾಗಿ ನಿಂತ ಶರಣರನ್ನು ಎತ್ತಿಕೊಂಡು ಸ್ತುತಿಸಿರುವುದು ಅರ್ಥಪೂರ್ಣವಾಗಿದೆ.
ಈ ಸಂಕಲನದ ಪ್ರತಿಯೊಂದು ಸ್ಥಲದಲ್ಲಿ ಸ್ತುತಿಗೊಳಗಾದ ಶರಣರ ವಿಂಗಡಣೆಯನ್ನು ಹೀಗೆ ಮಾಡಲಾಗಿದೆ ವಿವರ ಹೀಗಿದೆ.

ಭಕ್ತ ಸ್ಥಲ :

ಬಸವಣ್ಣ, ಅಕ್ಕನಾಗಮ್ಮ, ನೀಲಮ್ಮ , ಸಿರಿಯಾಳ, ಚೆಂಗಳೆ, ಸಿಂಧ ಬಲ್ಲಾಳ, ಸಂಗಯ್ಯ, ಸಂಗಮೇಶ್ವರ ಅಪ್ಪಣ್ಣ.

ಮಹೇಶ್ವರ ಸ್ಥಲ:

ಮಡಿವಾಳ ಮಾಚಯ್ಯ, ಮೋಳಿಗೆಯ ಮಾರಯ್ಯ, ಆಯ್ದಕ್ಕಿ ಮಾರಯ್ಯ, ಡೋಹರ ಕಕ್ಕಯ್ಯ, ಶಂಕರ ದಾಸಿಮಯ್ಯ, ಓಹಿಲ , ಶ್ವಪಚಯ್ಯ.

ಪ್ರಸಾದಿ ಸ್ಥಲ :

ಚೆನ್ನಬಸವಣ್ಣ, ಮಾದಾರ ಚೆನ್ನಯ್ಯ, ಕೆಂಭಾವಿ ಭೋಗಣ್ಣ, ಮರುಳ ಶಂಕರ ದೇವ.

ಪ್ರಾಣಲಿಂಗಿ ಸ್ಥಲ:

ಸಿದ್ಧರಾಮ, ನಿಜಗುಣ, ನುಲಿಯ ಚಂದಯ್ಯ, ದುಗ್ಗಳೆ, ಜೇಡರದಾಸಿಮಯ್ಯ, ತಂಗಟೂರ ಮಾರಯ್ಯ, ಕಿನ್ನರಿ ಬ್ರಹ್ಮಯ್ಯ, ಅನಿಮಿಷ.

ಶರಣ ಸ್ಥಲ : ಪ್ರಭುದೇವ, ಘಟ್ಟಿವಾಳಯ್ಯ, ನಂಬಿಯಣ್ಣ, ಅಕ್ಕಮಹಾದೇವಿ.

ಐಕ್ಯ ಸ್ಥಲ : ಅಜಗಣ್ಣ, ಸೊಡ್ಡಳ ಬಾಚರಸ, ಸ್ವತಂತ್ರ ಸಿದ್ಧಲಿಂಗೇಶ್ವರ

೯. ಲಿಂಗವಿಕಳಾವಸ್ಥೆಯ ವಚನಗಳು

* ಎಳಮಲೆಯ ಗುರುಶಾಂತದೇವ

'ಶರಣ ಸತಿ–ಲಿಂಗಪತಿ' ಎಂಬ ಭಾವ ವೀರಶೈವ ಶರಣರದು. 'ಲಿಂಗ' ವೆಂದರೆ ತತ್ವಶಾಸ್ತ್ರದ ದೃಷ್ಟಿಯಿಂದ ವಿಶ್ವಚೇತನ, ವಿಶ್ವತತ್ವದಿಂದ ಸೃಷ್ಟಿಯಾದುದು. ಅಂತೆಯೆ ವಿಶ್ವವೇ ಲಿಂಗ, ಲಿಂಗವೇ ವಿಶ್ವ. ಈ ವಿಶ್ವ ಚೇತನದ ನಿರ್ಮಿತಿಗಳಲ್ಲಿ ಮಾನವನೂ ಒಬ್ಬ. ಅಂದ ಮೇಲೆ, ಲಿಂಗವೇ ಮಾನವ. ಲಿಂಗ–ಮಾನವರಲ್ಲಿ ಭೇದವಿಲ್ಲ. ಎರಡೂ ಒಂದೆ. ಈ ಹಿನ್ನೆಲೆಯಲ್ಲಿ 'ಲಿಂಗ' ವನ್ನು 'ಪತಿ' ಎಂದು ಭಾವಿಸಿದ ಶರಣರು ತಾವು ಗಂಡಿರಲಿ, ಹೆಣ್ಣಿರಲಿ, ತಮ್ಮನ್ನು 'ಸತಿ' ಎಂದು ಪರಿಗಣಿಸಿಕೊಂಡಿದ್ದಾರೆ. ಇದೇ 'ಶರಣಸತಿ–ಲಿಂಗಪತಿ'ಭಾವ. ಈ ಭಾವವನ್ನು ಜೀವನದಲ್ಲಿ ಶರಣರು ಅಳವಡಿಸಿಕೊಂಡಿದ್ದಾರೆ. ಇದು ಲಿಂಗಾಂಗ ಸಾಮರಸ್ಯ ಮಾರ್ಗದಲ್ಲಿ ಕಂಡುಕೊಂಡ ಒಂದು ವಿಶಿಷ್ಟ ವಿಧಾನ. ಇದೊಂದು ಮಧುರ ಭಾವ. ಈ ಭಾವದಲ್ಲಿ ತಲ್ಲೀನನಾದ ಶರಣ ಅಥವಾ ಶರಣೆಯರು ಲಿಂಗದಲ್ಲಿ ಬೆರೆಯಬೇಕೆಂಬ ಉತ್ಕಟ ಅಭಿಲಾಷೆಯ ವಿರಹದಲ್ಲಿ ಬಳಲುವ ಶರಣನ ಈ ಅವಸ್ಥೆಗೆ 'ಲಿಂಗ ವಿಕಳಾವಸ್ಥೆ' ಎಂದು ಕರೆಯಲಾಗುತ್ತದೆ.

ಇಲ್ಲಿ 'ವಿಕಳ' ಎಂದರೆ ಮಾನವ ಮನದ ಉದ್ವೇಗದ ಸ್ಥಿತಿ. ಶರಣನು ತನ್ನ ಇಚ್ಛೆ, ಅಭಿಲಾಷೆ, ಆಶೆ–ಮನೀಷೆಗಳನ್ನು ಪೂರೈಸಿಕೊಳ್ಳಲು ಉದ್ವೇಗ ಭರಿತನಾಗುತ್ತಾನೆ. ಈ ಉದ್ವೇಗ ಭರಿತ ಸ್ಥಿತಿಯನ್ನು 'ವಿಕಳಾವಸ್ಥೆ' ಎಂದು ಕರೆಯಲಾಗಿದೆ.

ಈ ಅವಸ್ಥೆಯಲ್ಲಿ ಸತಿಯು ಅಗಲಿದ ತನ್ನ ಪತಿಗಾಗಿ ಹಂಬಲಿಸುವಂತೆ ಜೀವಾತ್ಮ, ಪರಮಾತ್ಮನ ಸಾನಿಧ್ಯಕ್ಕಾಗಿ ಹಂಬಲಿಸುತ್ತಾನೆ. ಅವನೊಡನೆ ಬೆರೆತು ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳಲು ತವಕಿಸುತ್ತಾನೆ. ಆ ಸಮಯದಲ್ಲಿ ಪತಿಯನ್ನು ಅಗಲಿದ ಸತಿಯಲ್ಲಿ ಉಂಟಾಗುವ ಕಳವಳ, ಕಾತರ, ಕೊರಗು, ವ್ಯಥೆ, ವಿರಹ, ವೇದನೆ, ಅವನನ್ನು ಒಲಿಸಿಕೊಳ್ಳಲು ತಾನು ಮಾಡಿಕೊಳ್ಳುವ ಶೃಂಗಾರ, ಅವನ ಬಗ್ಗೆ ತೋರುವ ಹುಸಿ ಮುನಿಸು, ಅವನೊಡನಾಡದ ಬೇಟದ ಅನುರಾಗ, ಪುಳಕ, ರೋಮಾಂಚನ, ಪರವಶತೆ, ಅವನ ಸೌಂಧರ್ಯ ವರ್ಣನೆಯಲ್ಲಿ ಕಾಣುವ ಆನಂದ ಎಲ್ಲವೂ ಶರಣಸತಿ ಭಾವದಲ್ಲಿ ಕಾಣಿಸಿಕೊಳ್ಳುತ್ತವೆ. ಇಲ್ಲೆಲ್ಲ ಕಂಡುಬರುವ ವರ್ಣನೆ, ಮಾತುಗಳು, ಮೇಲ್ನೋಟಕ್ಕೆ ಅವು ಸಂಸಾರದಲ್ಲಿ ಮುಳುಗಿದ ರಸಿಕ ದಂಪತಿಗಳ ಸರಸ ಸಲ್ಲಾಪದಂತೆ ಕಂಡು ಬರುತ್ತವೆ.

ಆದರೆ ಲೌಕಿಕದ ವಿಷಯ ವಾಸನೆಗಳಾಗಲಿ, ಇಂದ್ರಿಯ ಚಾಪಲ್ಯಗಳಾಗಲಿ ಅಲ್ಲಿ ಕಂಡುಬರುವುದಿಲ್ಲ. ಇಲ್ಲಿ ಕಂಡು ಬರುವ ಶರಣಸತಿ–ಲಿಂಗಪತಿಗಳು ನಿರ್ಭಾವದಲ್ಲಿ ಬೆರೆತು ಸಮರಸಾನಂದವನ್ನು ಅನುಭವಿಸುವ ಅಮರ ದಂಪತಿಗಳಂತೆ ಕಂಡುಬರುತ್ತಾರೆ. ಲಿಂಗ ವಿಕಳಾವಸ್ಥೆಯ ವಚನಗಳಲ್ಲಿ ದೊರೆಯುವ ಆನಂದವು ಅಲೌಕಿಕ ಆನಂದದಿಂದ ಭಿನ್ನವಾದುದು. ಇಲ್ಲಿ ರಸಾನುಭವವಾಗುವುದು ರತಿ ಭಾವದಿಂದಲ್ಲ, ಸತಿಭಾವದಿಂದ. ರತಿ ಭಾವವು ಕಾಮಮಯವಾದುದು, ಶೃಂಗಾರದಿಂದ ಬೆರೆತುದಾಗಿದೆ. ಸತಿ ಭಾವವು ಪ್ರೇಮಮಯವಾದುದು. ಸಾಮರಸ್ಯ ಪ್ರಧಾನವಾದುದು. ನಿಷ್ಕಳಂಕ ಪ್ರೇಮವೆ ಸತಿ. ಶುದ್ಧವೂ, ಶಾಂತವೂ ಆದ ಸತಿಭಾವವೇ ಭಕ್ತಿ. ಇಂತಹ ಭಕ್ತಿಯಿಂದಾಗಿಯೆ ಸತಿ–ಪತಿ ಭಾವದ ವಚನಗಳ ರಚನೆಯಾಗಿವೆ.

[illegible]

ಸತಿ–ಪತಿ ಭಾವದ ಆಚರಣೆ ಷಟ್‌ಸ್ಥಲ ಯೋಜನೆಯಲ್ಲಿ ಕಂಡು ಬರುವ ಶರಣ ಸ್ಥಲಕ್ಕೆ ಅನ್ವಯಿಸುತ್ತದೆ. ಇಲ್ಲಿಯ ಶರಣ ಆನಂದ ಭಕ್ತಿಯಲ್ಲಿ ವಿಹರಿಸುತ್ತಿರುತ್ತಾನೆ. ಎಲ್ಲೆಲ್ಲೂ ಅವನಿಗೆ ಆನಂದವೇ ಕಾಣುತ್ತದೆ. ಆತನ ನಡೆ, ನುಡಿ, ನೋಟವೆಲ್ಲ ಲಿಂಗಮಯವಾಗಿ ತೋರುತ್ತವೆ. ಸರ್ವಲಿಂಗಮಯನಾದ ಶರಣ ಚಿತ್ ಸ್ವರೂಪನೆನಿಸುತ್ತಾನೆ. ಆಗ ತನಗರಿವಿಲ್ಲದಂತೆಯೆ ಸತಿ–ಪತಿ ಭಾವ ಅವನ ಮೈಮನದಲ್ಲಿ ಮೂಡಿ ನಿಲ್ಲುತ್ತದೆ.

ಬೌದ್ಧ, ವೈಷ್ಣವ, ಇಸ್ಲಾಂ, ಕ್ರೈಸ್ತ ಧರ್ಮದ ಅನುಭಾವಿಗಳಲ್ಲಿಯು ಸತಿ–ಪತಿ ಭಾವದ ಕಲ್ಪನೆ ಇದೆ. ಆದರೆ ಈ ಧರ್ಮಗಳಲ್ಲಿ ಭಕ್ತಿ–ಜ್ಞಾನ–ಕ್ರಿಯೆಗಳ ಮೂಲಕ ಲಿಂಗವು ವಿಕಾಸ ಹೊಂದುತ್ತ ಹೋಗಿ ಕೊನೆಗೆ ಅಂಗವು ತಾನೇ ಲಿಂಗವಾಗುವ ಸಾಮರಸ್ಯ ತತ್ವವನ್ನು ಹೊಂದಿದ ಶರಣರ ರೀತಿಯಲ್ಲಿ ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಶರಣಸತಿ–ಲಿಂಗಪತಿ ಭಾವದ ಕಲ್ಪನೆ ವಿನೂತನವಾದುದು.

ಸತಿ–ಪತಿ ಭಾವವನ್ನು ಅಳವಡಿಸಿಕೊಂಡ ವಚನಗಳು ಸಾಮಾನ್ಯವಾಗಿ ಎಲ್ಲಾ ವಚನಕಾರರಲ್ಲಿಯೂ ಕಂಡುಬರುತ್ತವೆ. ಅದರಲ್ಲಿಯೂ ಅಕ್ಕಮಹಾದೇವಿ, ಉರಿಲಿಂಗದೇವ, ಗಜೇಶಮಸಣಯ್ಯ, ಘನಲಿಂಗಿದೇವ, ಸಿದ್ಧರಾಮ, ಸತ್ಯಕ್ಕ ಮೊದಲಾದವರು ಅಧಿಕ ಸಂಖ್ಯೆಯಲ್ಲಿ ರಚಿಸಿದ್ದಾರೆ.

ಎಳಮಲೆಯ ಗುರುಶಾಂತದೇವರು ಪ್ರಸ್ತುತ 'ಲಿಂಗವಿಕಳಾವಸ್ಥೆಯ ವಚನಗಳು' ಎಂಬ ಸಂಕಲನದಲ್ಲಿ ಈ ಭಾವವನ್ನು ಒಳಗೊಂಡ ೧೦ ಜನ ವಚನಕಾರರ ೧೧೦ ವಚನಗಳನ್ನು ಆಯ್ದು ಸೇರಿಸಿದ್ದಾನೆ. ಇಲ್ಲಿ ಸಂಗ್ರಹಿಸಿರುವ ವಚನಗಳು ಒಂದು ವ್ಯವಸ್ಥಿತ ಕ್ರಮದಲ್ಲಿ ಜೋಡಿಸಲ್ಪಟ್ಟಿವೆ.

* ಲಿಂಗ ಪತಿಯೊಡನೆ ಶರಣ ಸತಿಯ ವಿವಾಹ
* ಪತಿಯ ಮನೆ ಸೇರಿದ ಸತಿ, ಅವನೆ ಗತಿಯೆಂದು ನಡೆವುದು
* ಅವನ ರೂಪ, ಗುಣ, ವಿಶೇಷಗಳನ್ನು ಕೊಂಡಾಡುವುದು
* ಅವನ ಅಗಲಿಕೆಯಿಂದಾದ ವಿರಹದುರಿಯಲ್ಲಿ ಬಳಲುವುದು
* ಅವನನ್ನು ಒಲಿಸಿಕೊಂಡು ಮತ್ತೆ ಬೆರೆಯುವುದು
* ಬೆರೆತು ಸುಖಿಸುವುದು
* ಸುಖಿಸಿ ಸಮರಸೈಕ್ಯವನ್ನು ಹೊಂದುವುದು

ವಿಕಳಾವಸ್ಥೆಗೂ ಮತ್ತು ಪ್ರೇಮಿಗಳಿಗೂ ಬಿಡದ ನಂಟಿದೆ. ಪ್ರೇಮಾತಿರೇಕವೆ ವಿಕಳಾವಸ್ಥೆಯಲ್ಲಿ ಪ್ರವೇಶ ಪಡೆಯುತ್ತದೆ. ಅಂತಹ ಪ್ರೇಮವೆ ವಿಶ್ವ ಸೃಷ್ಟಿಗೆ ಮೂಲ. ವಿಶ್ವದ ಎಲ್ಲಾ ವ್ಯಾಪಾರಗಳಿಗೂ, ಆಗು ಹೋಗುಗಳಿಗೂ ಪ್ರೇಮವೇ ಆಧಾರ. ಪ್ರೇಮದ ವೈಪರಿತ್ಯವು ತ್ಯಾಗಕ್ಕೆ, ಕಾಮಕ್ಕೆ, ವಿರಹಕ್ಕೆ ಕಾರಣವಾಗುತ್ತದೆ. ಭಗವಂತನ ಮೇಲಿನ ಶರಣರ ಪ್ರೇಮ ವಿಕಳಾವಸ್ಥೆಗೆ ದಾರಿ ಮಾಡಿಕೊಟ್ಟಿದೆ. ಅಂತಹ ವಿಕಳಾವಸ್ಥೆಗೆ ತಲುಪಿದ ಶರಣರು ಆ ಭಾವವನ್ನು ವಚನಗಳ ಮೂಲಕ ಹಿಡಿದಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿ, ಗಜೇಶಮಸಣಯ್ಯ ಹಾಗೂ ಉರಿಲಿಂಗದೇವ ವಚನಗಳನ್ನು ಮಾತ್ರ ಪರಿಶೀಲಿಸಲಾಗಿದೆ.

ಅಕ್ಕಮಹಾದೇವಿ :

'ಲಿಂಗ ವಿಕಳಾವಸ್ಥೆಯ ವಚನಗಳು' ಈ ಸಂಕಲನದಲ್ಲಿ ಅಕ್ಕಮಹಾದೇವಿಯ ೨೦ ವಚನಗಳನ್ನು ಎಳಮಲೆಯ ಗುರುಶಾಂತದೇವ ಸಂಗ್ರಹಿಸಿದ್ದಾನೆ. ಅಕ್ಕಮಹಾದೇವಿ ಭಕ್ತೆ, ಶಿವಶರಣೆ, ಅನುಭಾವಿ, ಪುರುಷ ಪ್ರಧಾನ ಸಮಾಜವನ್ನು ಏಕಾಂಗಿಯಾಗಿ ಪ್ರತಿಭಟಿಸಿ ಯಶಸ್ವಿಯಾದ ಸಾಮಾನ್ಯ ಮಹಿಳೆ. ಇದಕ್ಕೆ ಕಲ್ಯಾಣದಲ್ಲಿ ಬಸವಾದಿ ಶರಣರು ನಡೆಸುತ್ತಿದ್ದ ಆಂದೋಲನವು ಅವಳ ಸ್ವತಂತ್ರ ಮನೋಧರ್ಮಕ್ಕೆ ಪೋಷಣೆಯನ್ನು ನೀಡಿದೆ.

ಅಕ್ಕಮಹಾದೇವಿ ಎಲ್ಲವನ್ನು ತೀವ್ರವಾಗಿ ಅನುಭವಿಸಿದವಳು. ಇದರ ಜೊತೆಗೆ ಅವಳಲ್ಲಿ ಅಭಿವ್ಯಕ್ತಿಯ ಸಂಯಮ ಇದೆ. ಚಿಕ್ಕ ಚಿಕ್ಕ ಸರಳ ಪದಗಳಲ್ಲಿ ತನ್ನೆಲ್ಲ ಅನುಭವಗಳನ್ನು ಹಿಡಿದಿಟ್ಟಿದ್ದಾಳೆ.

" ಅಕ್ಕ ಕೇಳಾ, ಅಕ್ಕಯ್ಯ ನಾನೊಂದು ಕನಸಕಂಡೆ
ಅಕ್ಕಿ ಅಡಕೆ ಎಲೆ ತೆಂಗಿನಕಾಯಿ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನ ಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು". (ವ-೫೪)

ಯೌವನಕ್ಕೆ ಅಡಿಯಿಡುತ್ತಿರುವ ಅಕ್ಕಮಹಾದೇವಿ ಕಂಡ ಕನಸು ಸಹಜವಾಗಿಯೆ ಮದುವೆಯ ಕನಸಾಗಿದೆ. ವಿವಾಹ ಮಂಗಳ ದ್ರವ್ಯಗಳೆಲ್ಲ ಅಲ್ಲಿವೆ.

"ನಾನು ನಿನಗೊಲಿದೆ, ನೀನು ಎನಗೊಲಿದೆ
ನೀನೆನ್ನನಗಲದಿಪ್ಪೆ, ನಾ ನಿನ್ನ ನಗಲದಿಪ್ಪೆನಯ್ಯಾ
ನಿನಗೆನಗೆ ಬೇರೊಂದು ಠಾವುಂಟೆ?"(ವ-೪)

ಚೆನ್ನ ಮಲ್ಲಿಕಾರ್ಜುನನಿಗೊಲಿದ ಅಕ್ಕ ನನಗು ನಿನಗೂ ಬೇರೆ ಬೇರೆ ಸ್ಥಳವಿಲ್ಲ. ಏಕೆಂದರೆ ನಾವಿಬ್ಬರು ಪರಸ್ಪರ ಒಲಿದು ಒಂದಾಗಿದ್ದೇವೆ. "ನೀ ನಿರಿಸಿದಂತೆ ನಾನಿರುವೆ" ಎನ್ನುತ್ತಾಳೆ. ಅವಳು ಒಲಿದ ಚೆನ್ನಮಲ್ಲಿಕಾರ್ಜುನನ್ನು ಸ್ಫುರದ್ರೂಪಿಯಾಗಿ ಕಲ್ಪಿಸಿಕೊಂಡಿದ್ದಾಳೆ. ಅಂತಹ ನಿಸ್ಸೀಮ ಚೆಲುವನ ಬಯಕೆ ಅವಳಲ್ಲಿ ಎಷ್ಟು ತೀವ್ರವಾಗಿತ್ತೆಂಬುದನ್ನು ಈ ಒಂದು ವಚನ ಸೊಗಸಾಗಿ ಚಿತ್ರಿಸುತ್ತದೆ.

"ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ
ಎಡೆಯಿಲ್ಲದ, ಕಡೆಯಿಲ್ಲದ, ತೆರಹಿಲ್ಲದ, ಕುರುಹಿಲ್ಲದ ಚೆಲುವಂಗೆ ನಾನೊಲಿದೆ.
ಎಲೆ ಅವ್ವಗಳಿರಾ, ಭವವಿಲ್ಲದ, ಭಯವಿಲ್ಲದ, ನಿರ್ಭಯ ಚೆಲುವಂಗೊಲಿದೆನಾನು
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು

ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ" (ವ-೫)

ಬಹುಶಃ ಕೌಶಿಕ ಮಹಾರಾಜನ ಕೈಹಿಡಿಯಲು ಒತ್ತಾಯ ಬಂದಾಗ ಆಡಿರಬಹುದಾದ ಈ ವಚನ ಲೋಕದ ಚೆಲುವರನ್ನು-ತಾನು ಒಲಿದ ಆ ನಿಸ್ಸೀಮ ಚೆಲುವನನ್ನು ತುಲನೆ ಮಾಡುತ್ತಾಳೆ. ತಾನು ಆಯ್ಕೆ ಮಾಡಿಕೊಂಡ ಆ ಸುಂದರ ಪುರುಷನಿಗೆ 'ಸಾವೂ ಇಲ್ಲ, ಕೇಡು ಇಲ್ಲ.' ಎಂಬ ಅವಳ ಮಾತುಗಳಲ್ಲಿ ಲೌಕಿಕದ ಬಗ್ಗೆ ಅವಳಿಗಿರುವ ತಾತ್ಸಾರ ಸ್ಪಷ್ಟವಾಗುತ್ತದೆ. ಈ 'ಲೋಕದ ಗಂಡಸರನ್ನು ಒಯ್ದು ಒಲೆಯೊಳಗೆ ಹಾಕು' ಎಂಬಲ್ಲಿ ಆ ತಿರಸ್ಕಾರ ಪೂರ್ಣವಾಗುತ್ತದೆ. ಆ ಭಾವನೆಯನ್ನು ವ್ಯಕ್ತ ಪಡಿಸಿದ ರೀತಿಯೂ ಸೊಗಸಾಗಿದೆ.

ಇನ್ನೊಂದು ವಚನದಲ್ಲಿ ತಾನೊಲಿದ ಶಿವನ ವರ್ಣನೆ ಮಾಡುತ್ತಾಳೆ. ಅವನಿಗೆ "ಹೊಳೆವ ಕೆಂಜೆಡೆಗಳುಂಟು, ಮಣಿ ಮಕುಟವುಂಟು, ಆ ಕೆಂಜೆಡೆಯ ಮೇಲೆ ಎಳೆವೆಳುದಿಂಗಳು ಉಂಟು ನಾಗಾಭರಣ, ರುಂಡ ಮಾಲೆಗಳ ಸಮೇತ ಅವನು ಕಾಣಿಸಿಕೊಂಡಿದ್ದಾನೆ. ಅಕ್ಕಮಹಾದೇವಿ ಶಿವನನ್ನು ಬಗೆ ಬಗೆಯಾಗಿ ಚಿತ್ರಿಸಿರುವ ರೀತಿಯಲ್ಲೆ ಸೊಗಸಿದೆ. ಶಿವನಿಗಾಗಿ ಅವಳು ಪರಿತಪಿಸಿದ ಅನುತಾಪವನ್ನು ಕೆಳಗಿನ ವಚನ ಹೇಳುತ್ತದೆ.

"ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಘಾಯದಲ್ಲಿ ನೊಂದೆನವ್ವಾ
ಸುಖವಿಲ್ಲದ ಧಾವತಿ ಗೊಂಡೆನವ್ವಾ
ಚೆನ್ನಮಲ್ಲಿಕಾರ್ಜುನ ದೇವಂಗೊಲಿದು ಬಾರದ
ಭವಂಗಳಲ್ಲಿ ಬಂದೆನವ್ವಾ" (ವ–೨೦)

ಬೆಂಕಿಯ ಸೋಂಕಿಲ್ಲದೆ ವಿರಹದ ಬೆಂಕಿಯಲ್ಲಿ ಬೆಂದು ಹೋಗಿದ್ದಾಳೆ. ಹೊರಗೆ ಗಾಯವಿಲ್ಲದೆ ಅಂತರಂಗದ ಹೃದಯಕ್ಕಾದ ಗಾಯದಿಂದ ನೋವನ್ನು ಅನುಭವಿಸಿದ್ದಾಳೆ. ಈ ಮಾತುಗಳು ಅವಳ ಅಂತರಂಗದ ವಿರಹದ ವೇದನೆಯನ್ನು ವ್ಯಕ್ತಪಡಿಸಿವೆ.

ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ವಿರಹದುರಿಯಲ್ಲಿ ಪರಿತಪಿಸುತ್ತಿರುವ ವಿರಹಿಣಿ. ಅವಳ ವಿರಹ ವೇದನೆಯನ್ನು ಅವಳೇ ಬಣ್ಣಿಸಲು ಸಾಧ್ಯ. ಅವನ ದಾರಿಯನ್ನು ಕಾಯುತ್ತ ಕಾಯುತ್ತ ಅವಳ ಮನೋಸ್ಥಿತಿ ಬಿಗಡಾಯಿಸಿದೆ.

" ಕಳವರಿದ ಮನವು ತಲೆಕೆಳಗಾದುದವ್ವಾ
ಸುಳಿದು ಬೀಸುವ ಗಾಳಿ ಉರಿಯಾದುದವ್ವಾ
ಬೆಳದಿಂಗಳು ಸುಂಕಿಗನಂತೆ ತೊಳಲುತ್ತಿದ್ದೆನವ್ವಾ
ತಿಳಿಹ ಬುದ್ಧಿಯ ಹೇಳಿ ಕರೆತಾರೆ–" (ವ–೩೦)

ಮೇಲಿನ ವಚನದಲ್ಲಿ ಅಗಲಿದ ಜಕ್ಕವಕ್ಕಿಯ ಉಪಮೆ, ಕೆಳಗಿನ ವಚನ ಪಟ್ಟಣದಲ್ಲಿ ಸುಂಕವನ್ನು ಕಲೆಹಾಕುವ ಸುಂಕದವನಂತೆ ಹುಡುಕುವ ಉಪಮೆಗಳು ಅವಳ ಕಾತರತೆಯನ್ನು ಬಿಂಬಿಸುತ್ತವೆ. ಅವನ ಬರುವಿಕೆ ತಡವಾದರೆ ಇವಳು ಬಳಲಿ ಬಡವಾಗುತ್ತಾಳೆ. ಅವಳಿಗೆ ತಂಗಾಳಿಯೂ ಉರಿಯಾಗುತ್ತದೆ. ಬೆಳದಿಂಗಳು ಬಿಸಿಲಾಗುತ್ತದೆ. ಇದು ವಿರಹದ ಪರಮಾವಧಿ. ಅವನಿಗಾಗಿ ಅರಿಸಿನದಲ್ಲಿ ಮಿಂದು, ಪಿತಾಂಬರವನೆ ಹುಟ್ಟು ಕಾಯುತ್ತಿದ್ದಾಳೆ. 'ನೀ ಬಂದರೆ ಪ್ರಾಣದ ಬರವು ನೋಡಾ' ಎಂದು ಹಂಬಲಿಸುತ್ತ ಅವನ ದಾರಿಯನ್ನೆ ನೋಡುತ್ತಿದ್ದಾಳೆ.

ಚೆನ್ನಮಲ್ಲಿಕಾರ್ಜುನ ಬಂದಾಗ ಅವನನ್ನು ನೋಡುತ್ತಾ, ನೋಡುತ್ತಲೆ ಕಣ್ಮುಚ್ಚುತ್ತಾಳೆ. ಅವನ ಮಾತನ್ನು ಕೇಳುತ್ತ, ಕೇಳುತ್ತಲೆ ಮೈ ಮರೆಯುತ್ತಾಳೆ. ಹಾಸಿದ ಹಾಸಿಗೆಯ ಹಂಗಿಲ್ಲದೆ ಅವನ ಕೂಡುವ ಕೂಟವನ್ನು ಮರೆತು ಪರವಶಳಾಗಿದ್ದಾಳೆ. ಅದರಲ್ಲಿಯೆ ಪರಮಾನಂದವನ್ನು ಕಾಣುತ್ತಿದ್ದಾಳೆ. ಇದರಿಂದ ಅವರಿಬ್ಬರ ದಾಂಪತ್ಯ ಬಂಧ ಎಂತಹದು ಎಂಬುದು ತಿಳಿದು ಬರುತ್ತದೆ.

ಅಕ್ಕಮಹಾದೇವಿಯು ವಚನಗಳಲ್ಲಿ ಎಲ್ಲಿಯೂ ಕ್ಲಿಷ್ಟ ಪದಗಳನ್ನು ಬಳಸಿಲ್ಲ. ಅವಳ ತೀವ್ರವಾದ ಭಾವನೆಗೆ ಬೇಕಾದ ಪದಗಳನ್ನು ಸಾಮಾನ್ಯ ಪದಗಳಲ್ಲಿಯೆ ಆಯ್ಕೆ ಮಾಡಿಕೊಂಡಿದ್ದಾಳೆ. ಆ ಮೂಲಕ ತನ್ನ ವಚನಗಳಿಗೆ ಕಾವ್ಯತ್ವವನ್ನು ತಂದು ಕೊಟ್ಟಿದ್ದಾಳೆ. ಅವಳ ವಚನಗಳು 'ವಚನ ಸಾಹಿತ್ಯದ ಮಂದಿರಕ್ಕೆ ಕಟ್ಟಿದ ಹಸಿರು ತೋರಣದಂತಿವೆ'[೨೯] ಎಂದು ಡಾ॥ಎಂ.ಚಿದಾನಂದಮೂರ್ತಿ ಹೇಳುತ್ತಾರೆ. ತೀ.ನಂ.ಶ್ರೀಕಂಠಯ್ಯನವರು ಹೇಳುವಂತೆ "ಅವಳ ವಚನಗಳು ಬಹುಭಾಗ ನಿಜವಾಗಿಯೂ ರಸಾರ್ದ್ರವಾಗಿದ್ದು, ಉಪಮಾನಗಳಿಂದ ಚಿತ್ರ ಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು. ಅವಳದು ಕವಿಯ ಹೃದಯ, ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು"[೩೦] ಎಂದಿದ್ದಾರೆ. ಈ ಮಾತು ಅವಳ ಒಟ್ಟಾರೆ ವಚನಗಳಿಗೆ ಅನ್ವಯಿಸುತ್ತದೆ. ಆದರೆ ಅವಳ ಸತಿ-ಪತಿ ಭಾವದ ವಚನಗಳನ್ನು ಅಧ್ಯಯನ ಮಾಡಿದರೆ ಅವು ಬರಿಯ ವಚನಗಳಲ್ಲ 'ದಾಂಪತ್ಯ ಗೀತೆ'ಗಳು. ಮದುವೆಯಾದ ಹರೆಯದ ಹೆಣ್ಣಿನ ಮನದಾಳದ ಮಾತೆಲ್ಲ ಇಲ್ಲಿ ವಚನಗಳಾಗಿ ಮೂಡಿ ಬಂದಿವೆ. ಸಾಂಸಾರಿಕ ಬದುಕಿನಲ್ಲಿ ಕಂಡು ಬರುವ ಶೃಂಗಾರಗಳನ್ನೆಲ್ಲ ಮುಚ್ಚು ಮರೆಯಿಲ್ಲದೆ ಮುಕ್ತವಾಗಿ ಚಿತ್ರಿಸಿದ್ದಾಳೆ.

ಗಜೇಶ ಮಸಣಯ್ಯ :

ವಚನಕಾರರಲ್ಲಿ ಬಹುಶಃ ಗಜೇಶ ಮಸಣಯ್ಯ ವಿಶೇಷವಾದ ವ್ಯಕ್ತಿತ್ವ ಉಳ್ಳವನು. ಶಿವಪೂಜೆಯಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಭಕ್ತ. ಮಧುರ ಭಾವದ ಸಾಧಕ. ಹೆಣ್ಣಿನ ಅಂತರಂಗವನ್ನು ಇವನಂತೆ ಅರ್ಥಮಾಡಿಕೊಂಡ ಮತ್ತೊಬ್ಬ ವಚನಕಾರನಿಲ್ಲ. ಸ್ವತಃ ಮಹಿಳೆಯರೆ ಈತನ ವಚನಗಳಿಂದ ಕಲಿಯ ಬೇಕಾದ ವಿಷಯಗಳು ಬಹಳ ಇದೆ. ಸತಿ-ಪತಿ ಭಾವದ ಹಿನ್ನೆಲೆಯಲ್ಲಿ ಗಜೇಶ ಮಸಣಯ್ಯ ಶರಣನಾಗಿ ಕಾಣಿಸುವುದೇ ಇಲ್ಲ. ಆತ ಭಾವನೆಯಲ್ಲಿ ಸ್ತ್ರೀಯಾಗಿ ತನ್ನನ್ನು ಸಂಪೂರ್ಣವಾಗಿ ಲಿಂಗಪತಿಗೆ ಅರ್ಪಿಸಿಕೊಂಡು ದಾಂಪತ್ಯ ಸುಖವನ್ನು, ವಿರಹವೇದನೆಯನ್ನು ಅನುಭವಿಸಿದ್ದಾನೆ. ತನಗಾದ ರೋಮಾಂಚನದ ಅನುಭವವೊಂದನ್ನು ಹೇಳಿಕೊಳ್ಳುವ ರೀತಿ ಇದು.

"ಮಾಗಿಯ ಹುಲ್ಲಿನ ಸೋಕಿನಂತೆ ತನುಪುಳಕಿತವಾದಳವ್ವೆ
ನುಡಿ ತೊದಳು, ಅವನ ಒಲವೆ ಆಧಾರವಾಗಿರ್ದಳವ್ವೆ
ಬಿಳಿಯ ತುಂಬಿ ಕುಂಕುಮದ ರಜದಲ್ಲಿ ಬಂಡುಂಡಂತೆ
ಮಹಾಲಿಂಗ ಗಜೇಶ್ವರನಲ್ಲಿ ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ" (ವ-೪೬)

ಇಬ್ಬನಿಯ ಹನಿಯನ್ನು ತಬ್ಬಿದ ಬೆಳಗಿನ ಮಾಗಿಯ ಹುಲ್ಲಿನ ಮೇಲೆ ಕಾಲಿಟ್ಟಾಗ ಇಡೀ ದೇಹ ಒಮ್ಮೆ ಚಳಿಯಿಂದ ನಡುಗುತ್ತದೆ. ಹಾಗೆಯೆ ರೋಮಾಂಚನವೂ ಆಗುತ್ತದೆ. ಅಂತಹ ಅನುಭವ ಗಜೇಶ ಮಸಣಯ್ಯ ಎಂಬ ಪ್ರೇಯಸಿಗೆ ಆಗಿದೆ. ಅವಳಿಗೆ ನಲ್ಲನ ಸಾನಿಧ್ಯದಲ್ಲಿ ಒಂದು ಬಗೆಯ ಲಜ್ಜೆ, ಭಯ, ಅವನ ಒಲವೇ ಅವಳಿಗಾಧಾರ. ತನ್ನಲ್ಲಿ ತಾನೇ ರತಿಯಾಗಿದ್ದಾಳೆ ಅವಳು.

ಪ್ರಿಯಕರ ಅಗಲಿದಾಗ ಆಗುವ ವಿರಹ ವೇದನೆಯನ್ನು ವಚನಕಾರ ಹೇಳುವ ರೀತಿ ಅಪೂರ್ವವಾಗಿದೆ.

---

೨೯. ಡಾ॥ ಎಂ.ಚಿದಾನಂದ ಮೂರ್ತಿ. 'ವಚನ ಸಾಹಿತ್ಯ.' ಪುಟ-೮೮

೩೦. ಮಹಾದೇವಿಯಕ್ಕನ ಕೆಲವು ವಚನಗಳು (ಕಾವ್ಯ ಸಮೀಕ್ಷೆ ಪುಟ-೧೦೪)

"ಋತು ಕಾಲ ತಪ್ಪಿದ ಕೋಗಿಲೆಯಂತೆ ನುಡಿಯದಂತಿರ್ದಳಲ್ಲಾ
ಪರಿಮಳ ತಪ್ಪಿದ ಭ್ರಮರನಂತೆ ಸುಳಿ ಸುಳಿಗೊಳುತಿರ್ದಳಲ್ಲಾ
ಫಲವು ತಪ್ಪಿದ ಬಂಜೆ ಬನದೊಳಗಳ ಅರಗಿಳಿಯಂತಿರ್ದಳಲ್ಲಾ
ದುರಬರದ ಜವ್ವನದಲ್ಲಿ ತೋರಣದೆಲೆಯಂತೆ--" (ವ-೨೪)

ದಿನ ದಿನ ಬಾಡಿ ಹೋಗುತ್ತಿದ್ದಾಳೆ.

"ಅಗಲಿದ ನಲ್ಲನ ಕನಸಿನಲ್ಲಪ್ಪಿ ಸುಖಿಯಾದಿರವ್ವಾ
ಕಂಡ ಕನಸು ದಿಟವಾದಡೆ ಅವನಮ್ಮ ನಲ್ಲನವ್ವಾ
ಮನಸುಳ್ಳವರು ನೀವು ಪುಣ್ಯಗೈದಿರವ್ವಾ
ಮಹಾಲಿಂಗ ಗಜೇಶ್ವರನನಗಲಿದರೆ ನಿದ್ರೆಯೆಮಗಿಲ್ಲ
ಕನಸೆಲ್ಲಿಂದ ಬಹುದವ್ವಾ" (ವ-೫೬)

ನಲ್ಲನ ವಿರಹದುರಿಯಲ್ಲಿಯೆ ಸಂಕಟ ಪಡುತ್ತಿರುವ ಈಕೆಗೆ ನಿದ್ದೆಯೆ ಇಲ್ಲ, ಪಾಪ ಕನಸು ಎಲ್ಲಿಂದ ಬರಬೇಕು? ಇಂತಹ ಕಲ್ಪನೆ ಅಪೂರ್ವವಾದುದು. ಇಂತಹ ಮಾತುಗಳು ಅವನ ವಚನಗಳಿಗೆ ಒಂದು ವಿಶಿಷ್ಟತೆಯನ್ನು ತಂದುಕೊಡುತ್ತವೆ.

"ತಮ್ಮ ತಮ್ಮ ಗಂಡರು ಚೆಲುವರೆಂದು
ಕೊಂಡಾಡುವ ಹೆಣ್ಣುಗಳು ಪುಣ್ಯ ಜೀವಿಗಳವ್ವಾ
ನಾ ನಮ್ಮ ನಲ್ಲನ ಎಂತಹನೆಂದರಿಯೆನವ್ವಾ
ಮಹಾಲಿಂಗ ಗಜೇಶ್ವರ ನಿರಿಯ ಸೆರಗ
ಹಿಡಿಯಲೊಡನೆ ನಾನೇನೆಂದರಿಯೆನವ್ವಾ" - (ವ-೧೦೬)

ಇಲ್ಲಿಯ ಸತಿಗೆ ತನ್ನ ನಲ್ಲನ ಚೆಲುವನ್ನು ವರ್ಣಿಸಲು ಸಾಧ್ಯವೇ ಇಲ್ಲ. ಎಲ್ಲರೂ ತಮ್ಮ ತಮ್ಮ ಗಂಡರು ಚೆಲುವರೆಂದು ಹೇಳಿಕೊಳ್ಳುವ ಹೆಣ್ಣುಗಳೇ ಪುಣ್ಯವಂತರು. ಆದರೆ ತನಗೆ ತನ್ನ ಗಂಡನನ್ನು ವರ್ಣಿಸಲು ಪುಣ್ಯವಿಲ್ಲ. ಏಕೆಂದರೆ ತನ್ನ ನಲ್ಲ ಬಂದು ಮುಟ್ಟಿದೊಡೆ ಎಲ್ಲವೂ ಮರೆತು ಹೋಗುತ್ತದೆ. ಇನ್ನು ಅವನ ವರ್ಣನೆ ಹೇಗೆ ಸಾಧ್ಯ? ಎಂದು ಪ್ರಶ್ನಿಸುತ್ತಾಳೆ. ಈಕೆಯ ಗಂಡ ಎಲ್ಲರಂತಲ್ಲ. ಒಂದೇ ಮಾತಲ್ಲಿ ಹೇಳುವುದಾದರೆ ಬೆಂಕಿ ಕರ್ಪೂರ ಸೇರಿದಂತೆ ನನ್ನ ಅವನ ಕೂಟ. ಇದನ್ನು ಉರಿ, ಕರ್ಪೂರ ಒಂದಾಗುವ ಉಪಮೆಯ ಮೂಲಕ ಹೇಳುತ್ತಾನೆ. (ವ-೧೦೯)

ಗಜೇಶ ಮಸಣಯ್ಯನ ವಚನಗಳ ಭಾಷೆ ಸರಳ. ಪರಿಚಿತ ಪ್ರತಿಮೆಗಳ ಬಳಕೆ, ಅತಿಯಲ್ಲದ ಶೃಂಗಾರ, ಹಿತಮಿತ ಮಾತುಗಳು, ಅರ್ಥಗರ್ಭಿತ ಭಾವ, ಪ್ರಾಮಾಣಿಕ ಸಂವೇದನೆ ಇವುಗಳಿಂದಾಗಿ ವಚನ ಸಾಹಿತ್ಯದಲ್ಲಿ ಒಂದು ನಕ್ಷತ್ರವಾಗಿ ಕಂಗೋಳಿಸುತ್ತಾನೆ. ಇವನ ವಚನಗಳು ಭಾವ-ಭಾಷೆ, ಸೌಂದರ್ಯದಲ್ಲಿ ಅಕ್ಕಮಹಾದೇವಿಯ ವಚನಗಳಿಗೆ ಸರಿ ಸಾಟಿಯಾಗಿ ನಿಂತಿವೆ. ಇವರಿಬ್ಬರು ಶರಣ ಸತಿ-ಲಿಂಗಪತಿ ಭಾವದ ಸೀಮೆಯನ್ನು ವಿಸ್ತರಿಸಿದವರು. ಕನ್ನಡ ನುಡಿಯ ಮಾಧುರ್ಯಕ್ಕೆ ಕಳಸವಿಟ್ಟವರು.

ಉರಿಲಿಂಗದೇವ:

ಉರಿಲಿಂಗದೇವ ಒಬ್ಬ ಮಠಾಧಿಪತಿಯಾಗಿದ್ದು[೩೧], ಶರಣ ಸತಿ–ಲಿಂಗಪತಿ ಭಾವದ ಸಾಧಕನಾಗಿದ್ದವನು. ಇವನ ವ್ಯಕ್ತಿತ್ವ ಮಧುರವಾದುದು. ಇವರಲ್ಲಿ ಶಿವ–ಶಾಂತಿ ಕಳೆ ಪ್ರಜ್ವಲಿಸುತ್ತದೆ. ಇವನ ವಚನಗಳಲ್ಲಿ ಸಾಧಕನ ತೀವ್ರವಾದ ಆರ್ತಭಾವ ವ್ಯಕ್ತವಾಗಿದೆ. ಅತ್ಯಂತ ಸರಳವಾದ, ಸಾಮಾನ್ಯ ಭಾಷೆಯಲ್ಲಿ ತೀವ್ರತರವಾದ ಭಾವವನ್ನು ವ್ಯಕ್ತಪಡಿಸಬಹುದು ಎಂಬುದಕ್ಕೆ ಇವನ ವಚನಗಳೇ ಸಾಕ್ಷಿ. ಭಕ್ತಿ ಶೃಂಗಾರವಾಗಿ ಪರಿವರ್ತನೆಗೊಂಡು ಅಭಿವ್ಯಕ್ತವಾಗಿರುವ ರೀತಿ ಸೊಗಸಾಗಿದೆ.

> "ನಲ್ಲನ ಕೂಡುವ ಭರದಲ್ಲಿ ಎನ್ನುವನಿದಿರುವನೇನೆಂದರಿಯೆನವ್ವಾ
> ನಲ್ಲನ ಕೂಡುವಾಗಲು ಎನ್ನುವ ನಲ್ಲನನೇನೆಂದರಿಯೆನವ್ವಾ
> ಉರಿಲಿಂಗದೇವನ ಕೂಡಿದ ಬಳಿಕ ನಾನೋ ತಾನೋ ಏನೆಂದರಿಯೆನವ್ವಾ"(ವ–೯೬)

ದೇಹ ಸಂಬಂಧಗಳ ಸಂಕೇತಗಳನ್ನೇ ಬಳಸಿರುವ ಇಂತಹ ವಚನಗಳಲ್ಲಿ ದ್ವೈತ–ಅದ್ವೈತದ ಚಿತ್ತಸ್ಥಿತಿಗಳನ್ನು ವಚನಕಾರ ಇಲ್ಲಿ ವ್ಯಕ್ತಪಡಿಸಿದ್ದಾನೆ. ಮುಗ್ಧ ಹೆಣ್ಣು ಮಗಳೊಬ್ಬಳ ಮೊದಲ ಅನುಭವವನ್ನು ಈ ವಚನದಲ್ಲಿ ಬಳಸಿಕೊಳ್ಳಲಾಗಿದೆ. ನಲ್ಲನನ್ನು ಸೇರುವ ಮೊದಲಿನ ಮತ್ತು ನಂತರ ಆದ ಅನುಭವಗಳು ಇಲ್ಲಿ ಬಳಕೆಯಾಗಿವೆ. ಉರಿಲಿಂಗದೇವ ತಾನೊಬ್ಬ ಭಕ್ತನಾಗಿ ಹೆಣ್ಣು ಮಗಳ ಜೊತೆ ಸಮೀಕರಿಸಿಕೊಂಡಿದ್ದಾನೆ.

ಭಗವಂತನಿಗೆ ಇಡಿ ವಿಶ್ವದವರೆಲ್ಲರು ಸತಿಯರಾಗಿದ್ದಾರೆ. "ಅವರವರ ಪರಿಯಲ್ಲಿ ಅವರವರ ನೆರೆವನು." ಎಂದು ಹೇಳುತ್ತಾನೆ. ಉರಿಲಿಂಗದೇವನು ತಾನು ಹೆಣ್ಣೆಂದು ಭಾವಿಸಿದ ಅನುಭವವನ್ನು ಹೇಳಿಕೊಳ್ಳುವಾಗ 'ಉರಿಲಿಂಗದೇವನಪ್ಪಿ ಸೊಪ್ಪಾದ ಹಿಪ್ಪೆ' ಎಂದು ಕರೆದುಕೊಂಡಿದ್ದಾನೆ. ಅತ್ಯಂತ ರಾಗೋದ್ರಿಕ್ತ ಭಾಷೆಯನ್ನು ಬಳಸಿರುವ ಉರಿಲಿಂಗದೇವ ಪರಮಾತ್ಮ ಮತ್ತು ತನ್ನ ನಡುವಿನ ಸಂಬಂಧಗಳಿಂದಾದ ಬಗೆ ಬಗೆಯ ಅನುಭವಗಳನ್ನು ವಚನಗಳ ಮೂಲಕ ಜೀವ ನೀಡಿ ದಾಂಪತ್ಯಗೀತವನ್ನು ಹಾಡಿದ್ದಾನೆ. ಸತಿಪತಿಯರ ನಡುವಿನ ಕಾತರ. ಶಂಕೆ, ನೋವು, ಸಂದೇಹ, ಸಂಭ್ರಮ ಆನಂದ, ವಿರಹ ಮುಂತಾದ ಸಾಧಕ ಜೀವನದ ಸ್ಥಿತಿಗಳನ್ನು ಚಿತ್ರಿಸಿದ್ದಾನೆ.

> ಇನಿಯನೆನಗೆ ನೀನು: ಇನ್ನೇನನೊಂದನರಿಯೆ,
> ನೀ ನುಡಿಸಲು ನುಡಿವೆನು, ನೀ ನಡೆಸಲು ನಡೆವೆನು
> ನೀನಲ್ಲದನ್ಯವನರಿಯೆನು ನಲ್ಲಾ ಕೇಳಾ
> ಎನಗೆ ನೀನೆ ಗತಿ: ನೀನೆ ಮತಿ
> ನಿನ್ನಾಣೆಯಯ್ಯಾ ಉರಿಲಿಂಗದೇವಾ." (ವ–೨)

ಕೈಹಿಡಿದ ಲಿಂಗಪತಿಯೆ ಸತ್ಯ ಸದಾಚಾರವುಳ್ಳ ಶರಣ ಸತಿಗೆ ಸರ್ವಸ್ವ. ಅವನೇ ಗತಿ, ಅವನೇ ಮತಿ, ಅವನೇ ಎಲ್ಲ. ಅವನು ನುಡಿಸಿದಂತೆ ನುಡಿದು, ನಡೆಸಿದಂತೆ ನಡೆಯುತ್ತೇನೆ. ನೀನಲ್ಲದೆ ಬೇರೆ ಏನೂ ನನಗೆ ಅರಿವಿಗೆ ಬಾರದು. ನೀನು 'ನಲ್ಲರಿಗೆ ನಲ್ಲ' ಎಂದು ಹೇಳುತ್ತಾನೆ. (ವ–೧೫) ಪತಿಯ ಮೇಲಿನ ಭಕ್ತಿ ಅವನ ಅಗಲಿಕೆಗೆ ಅವಕಾಶವಿಲ್ಲದಂತೆ ಅವನೇ ಎಲ್ಲಾ ಕಡೆ ಇದ್ದಾನೆ.

---

೩೧. ಡಾ. ಎಂ. ಚಿದಾನಂದ ಮೂರ್ತಿ – 'ವಚನಸಾಹಿತ್ಯ', ಪುಟ–೧೧೧

'ನಲ್ಲನೊಲ್ಲನೆಂದು ಮುನಿದು ನಾನಗಲಲು
ಅಗಲುವ ಠಾವೆಲ್ಲಾ ತಾನೆಲೆಗವ್ವಾ
ನಲ್ಲನಿಲ್ಲದೆಡೆಯಿಲ್ಲ , ಅಗಲಿಕೆಗಿಂಬಿಲ್ಲ
ಮುನಿದು ನಾನೇಗುವೆನವ್ವಾ
ಶರಣು ಗತಿವೋಗುವೆನು, ಉರಿಲಿಂಗದೇವನಾ" (ವ-೬೩)

ಹಾಗಾಗಿ'ಇವನೊಬ್ಬನೆ ಗರುವನು, ಇವನೊಬ್ಬನೆ ಚೆಲುವನು.' ಇವನು 'ಕಾಯದೊಳಗೆ ಕಾಯವಾಗಿ, ಪ್ರಾಣದೊಳಗೆ ಪ್ರಾಣವಾಗಿ, ಮನದೊಳಗೆ ಮನವಾಗಿ' ಸೇರಿ ಸತಿ-ಪತಿಯರು ಇಲ್ಲಿ ಒಂದಾಗಿದ್ದಾರೆ. ಅದ್ವೈತ ಭಾವವಿದೆ. 'ಉರಿಲಿಂಗದೇವ ಕೂಡಿದ ಬಳಿಕ ನಾನೋ, ತಾನೋ' ಏನೆಂದರಿಯಲು, ವಿವರಿಸಲು ಬಾರದಂತೆ ಅವರು ಒಂದಾಗಿದ್ದಾರೆ. ಬೆರೆತು ಸುಖಿಸುತ್ತಿದ್ದಾರೆ. ಆ ರತಿ ಸುಖವನ್ನು ಹೇಳಲು ಬಾರದು. ಅನುಭವಿಸಿಯೆ ಅರಿಯಬೇಕು ಎನ್ನುತ್ತಾನೆ.

'ನಲ್ಲನ ರೂಪೆನ್ನ ನೇತ್ರವ ತುಂಬಿತ್ತು
ನಲ್ಲನ ನುಡಿಯೆನ್ನ ಶ್ರೋತ್ರವ ತುಂಬಿತ್ತು
ನಲ್ಲನ ಸುಗಂಧವೆನ್ನ ಘ್ರಾಣವ ತುಂಬಿತ್ತು
ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು
ನಲ್ಲನ ಮೋಹವೆನ್ನ ಮನವ ತುಂಬಿತ್ತು
ನಲ್ಲನ ಪ್ರೇಮವೆನ್ನಂಗವ ತುಂಬಿತ್ತು
ನಲ್ಲನ ಆಲಿಂಗನವೆನ್ನಂತರಂಗವ ತುಂಬಿತ್ತು
ನಲ್ಲನ ಪ್ರಿಯವೆನ್ನ ಸರ್ವಾಂಗವ ತುಂಬಿತ್ತು
ಇಂತಪ್ಪ ನಲ್ಲನ ಅಂತರಂಗ ಬಹಿರಂಗದಲ್ಲಿ
ಕೂಡಿ ಸುಖಿಯಾದೆನು ಉರಿಲಿಂಗದೇವನ" (ವ-೯೭)

ಇಂತಹ ನಲ್ಲನಾದ ಉರಿಲಿಂಗ ಅಂತರಂಗ, ಬಹಿರಂಗದಲ್ಲಿ ಕೂಡಿ ಶರಣಸತಿ ಸುಖಿಸಿದ ಮಹಾಕ್ಷಣವನ್ನು ಅಭಿವ್ಯಕ್ತಿಸಿದ್ದಾನೆ. ಹೀಗೆ ತನು-ಮನ ಭಾವಗಳನ್ನು ಕಳೆದುಕೊಂಡು ಶಿವನಲ್ಲಿ ಏಕಾರ್ಥವಾಗುವ ಐಕ್ಯಸ್ಥಿತಿಯನ್ನು ಉರಿಲಿಂಗದೇವನ ವಚನಗಳಲ್ಲಿ ಕಾಣಬಹುದು. ಉರಿಲಿಂಗ (ಶಿವ) ನನ್ನು ನೋಡಿ ಮನದಲ್ಲಿ ಮೋಹ ಹುಟ್ಟಿ ಅನಂತ ಸುಖವನನು ಅನುಭವಿಸಿದ್ದಾನೆ. ಅನುಭಾವದ ಈ ಅತ್ಯಂತಿಕ ಎತ್ತರವನ್ನು ಏರಿ ಅದರಲ್ಲಿ ಸಂಪೂರ್ಣವಾಗಿ ಸಾಮರಸ್ಯವನ್ನು ಪಡೆದುಕೊಂಡಿದ್ದಾನೆ. ಇವನ ವಚನಗಳ ಭಾಷೆಯೂ ಸರಳವಾಗಿದೆ. ಸೂಕ್ತ ಉಪಮೆಗಳಿಂದ, ಪ್ರಾಸ, ಅನುಪ್ರಾಸಗಳಿಂದಾಗಿ ವಚನಗಳು ಗಮನ ಸೆಳೆಯುತ್ತವೆ. ಸತಿ-ಪತಿ ಭಾವಕ್ಕೆ ಬೇಕಾದ ಮೃದು ವರ್ಣಗಳನ್ನೆ ಉರಿಲಿಂಗದೇವ ಬಳಸಿದ್ದಾನೆ.

ಶರಣ ಸತಿ- ಲಿಂಗಪತಿ ಎಂಬುದು ವಚನಕಾರರಲ್ಲಿ ಕಂಡುಬರುವ ಒಂದು ಸಾಮಾನ್ಯೋಕ್ತಿ. ಭಕ್ತನಾದವನು ತನ್ನನ್ನು ಸತಿಯೆಂದು ಭಾವಿಸಿಕೊಂಡು ದೇವರನ್ನು ಪತಿ ಎಂದು ಕಲ್ಪಿಸಿಕೊಳ್ಳುವುದು ಅನುಸಂಧಾನದ ಒಂದು ಮಾರ್ಗ.

ಅಕ್ಕಮಹಾದೇವಿ ಸ್ವತಃ ಸ್ತ್ರೀಯಾದುದರಿಂದ ತಾನು ಭಗವಂತನ ಸತಿ ಎಂದು ಭಾವಿಸುವುದು ಅವಳಿಗೆ ಕಷ್ಟವಾಗಲಿಲ್ಲ. ಆದರೆ ಗಂಡಾಗಿ ಹುಟ್ಟಿದ ಗಜೇಶ ಮಸಣಯ್ಯ ಮತ್ತು ಉರಿಲಿಂಗದೇವರುಗಳು ಆ ಭಾವದಲ್ಲಿ ಆಕೆಯ ಎತ್ತರಕ್ಕೆ ಏರಿರುವುದು ಕೌತುಕದ ವಿಷಯ.

ಜೊತೆಗೆ ಅನೇಕ ಪುರುಷ ವಚನಕಾರರು ಸಹ ಸತಿ–ಪತಿ ಭಾವವನ್ನು ತಮ್ಮ ಮೇಲೆ ಆರೋಪಿಸಿಕೊಂಡು ವಚನಗಳನ್ನು ಬರೆದಿದ್ದಾರೆ. ಆದರೆ ಅಂತಹ ವಚನಗಳು ಅವರಲ್ಲಿ ವಿರಳವಾಗಿವೆ. ಸತಿ–ಪತಿ ಭಾವವನ್ನು ಆರೋಪಿಸಿಕೊಂಡ ಕ್ಷಣಗಳ ಅನುಭವಗಳನ್ನು ಅವು ಹೇಳುತ್ತವೆ. ಆದರೆ ಆ ಸ್ಥಿತಿಯಲ್ಲಿಯೆ ಸದಾ ಕಾಲ ಇದ್ದು, ಸತಿ–ಪತಿ ಭಾವದ ವಚನಗಳನ್ನು ಬರೆದಿರುವವರಲ್ಲಿ ಗಜೇಶ ಮಸಣಯ್ಯ ಮತ್ತು ಉರಿಲಿಂಗದೇವ ಮುಖ್ಯರಾಗುತ್ತಾರೆ.

ಎಳಮಲೆಯ ಗುರು ಶಾಂತದೇವ ತನ್ನ 'ಲಿಂಗವಿಕಳಾವಸ್ಥೆಯ ವಚನಗಳು'ಸಂಕಲನದಲ್ಲಿ ಈ ವಚನಕಾರರಲ್ಲದೆ ಬಸವಣ್ಣ, ಸಿದ್ಧರಾಮನ, ಸತ್ಯಕ್ಕ, ಚೆನ್ನಬಸವಣ್ಣ, ಅಲ್ಲಮ ಪ್ರಭು, ಅಕ್ಕನಾಗಮ್ಮ, ನಂಜುಂಡ ಶಿವ ಅಂಕಿತದ ವಚನಕಾರನ ವಚನಗಳನ್ನು ಸಂಗ್ರಹಿಸಿದ್ದಾನೆ. ಸಂಕಲನದ ಎಲ್ಲಾ ವಚನಗಳು ನಲ್ಲೆಯೊಳಗಿನ ಸತಿ–ಪತಿ ಭಾವವನ್ನು ವಿವರಿಸುತ್ತವೆ.

೧೦. ಎಲ್ಲಾ ಪುರಾತರ ಸ್ತೋತ್ರದ ವಚನಗಳು

* ಅಜ್ಞಾತ ಸಂಕಲನಕಾರ

'ಎಲ್ಲಾ ಪುರಾತರ ಸ್ತೋತ್ರದ ವಚನಗಳು' ಕೃತಿಯ ಕರ್ತೃ ಎಲ್ಲಿಯೂ ತನ್ನ ಹೆಸರನ್ನಾಗಲಿ, ವೈಯಕ್ತಿಕ ವಿಚಾರಗಳನ್ನಾಗಲಿ ಹೇಳಿಕೊಂಡಿಲ್ಲ. ಸಕಲ ಪುರಾತನರ ವಚನಗಳು ಕಟ್ಟುಗಳ ಕರ್ತೃವಿನಂತೆ ಅಜ್ಞಾತವಾಗಿಯೇ ಉಳಿದಿದ್ದಾನೆ. ಸಕಲ ಪುರಾತನರ ವಚನ ಕಟ್ಟುಗಳಲ್ಲಿ ಸೇರಿದ ಶರಣರಲ್ಲಿ ಗುರುಬಸವನ ಕಾಲ ೧೫ ನೇ ಶತಮಾನ ಎಂದು ಗುರುತಿಸಲಾಗಿದೆ. ಸಕಲ ಪುರಾತನರ ವಚನ ಕಟ್ಟುಗಳೇ ಈ ಕೃತಿಗೆ ಆಧಾರವಾಗಿರುವುದರಿಂದ ಅದರಲ್ಲಿ ಸೇರಿರುವ ಗುರು ಬಸವನ ಕಾಲವನ್ನು ಗಣನೆಗೆ ತೆಗೆದುಕೊಂಡು ಇದರ ಕಾಲ ೧೫ ನೇ ಶತಮಾನ ಇಲ್ಲವೆ ನಂತರದ ಕಾಲವಾಗಿರಬೇಕು ಎಂದು ಊಹಿಸಲು ಅವಕಾಶವಿದೆ.

'ಎಲ್ಲಾ ಪುರಾತರ ಸ್ತೋತ್ರದ ವಚನಗಳು' ಎಂಬ ಈ ಕೃತಿ ಕೇವಲ ವಚನಗಳ ಸಂಗ್ರಹ ಕೃತಿಯಾಗಿದೆ. ಸಕಲ ಪುರಾತನರ ವಚನಗಳ ಮೂರು ಕಟ್ಟುಗಳಿಂದ[೩೨] ವಚನಗಳನ್ನು ಆಯ್ದು ಕಟ್ಟಿದ ನೂತನ ಕೃತಿ ಇದು. ಇದರಲ್ಲಿ ೬೪ ಜನ[೩೩] ವಚನಕಾರರ ಒಟ್ಟು ೪೭೭ ವಚನಗಳು ಸಂಗ್ರಹವಾಗಿವೆ.

'ಎಲ್ಲಾ ಪುರಾತರ ಸ್ತೋತ್ರದ ವಚನಗಳು' ಎಂಬ ಹೆಸರನ್ನು ಗಮನಿಸಿದರೆ ಎಲ್ಲಾ ಪುರಾತರ ಶರಣರನ್ನು ಸ್ತುತಿಸಿದ ಸ್ತುತಿ ರೂಪದ ವಚನಗಳು ಸಂಗ್ರಹಗೊಂಡಿರಬಹುದು ಎಂಬ ಭಾವನೆ ಉಂಟಾಗುತ್ತದೆ. ಆದರೆ ಈ ಸಂಕಲನದಲ್ಲಿ ಅಂತಹ ಸ್ತುತಿ ರೂಪದ ಯಾವುದೇ

---

೩೨. ಅ. ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟು
ಆ. ಬಸವಣ್ಣನ ವಚನಗಳಿಂದ ಆರಂಭವಾಗುವ ಕಟ್ಟು
ಇ. ಗೊಗ್ಗವ್ವೆಯ ವಚನಗಳಿಂದ ಆರಂಭವಾಗುವ ಕಟ್ಟು

೩೩. ಅಂಬಿಗರ ಚೌಡಯ್ಯನ ವಚನಗಳಲ್ಲಿ ಒಂದು ಅಲ್ಲಮನ ವಚನ ಸೇರಿದೆ. ಮೋಳಿಗೆಯ್ಯನ ವಚನಗಳಲ್ಲಿ ಎರಡು ಮೋಳಿಗೆ ಮಹಾದೇವಿಯ ವಚನಗಳು ತಪ್ಪಾಗಿ ಸೇರಿಕೊಂಡಿವೆ. ಇವರಿಬ್ಬರ ಹೆಸರನ್ನು ವಚನಕಾರರ ಹೆಸರಿನ ಜೊತೆ ಸೇರಿದರೆ ಈ ಸಂಖ್ಯೆ ೬೬ ಕ್ಕೆ ಏರುತ್ತದೆ. ಇವರಿಬ್ಬರ೩ ವಚನಗಳನ್ನು ಕಟ್ಟಿನಿಂದ ಬೇರ್ಪಡಿಸಿದರೆ ಕೃತಿಯಲ್ಲಿನ ವಚನಗಳ ಸಂಖ್ಯೆ ೪೭೪ ಕ್ಕೆ ಇಳಿಯುತ್ತದೆ.

ವಚನಗಳು ಕಂಡುಬರುವುದಿಲ್ಲ. ಈ ಹಿಂದೆಯೆ ಸಂಗ್ರಹಗೊಂಡ ಸಕಲ ಪುರಾತನರ ವಚನಗಳ ಕಟ್ಟುಗಳಲ್ಲಿನ ಕೆಲವರ ವಚನಗಳನ್ನು ಮಾತ್ರ ಆರಿಸಿಕೊಂಡು ಅವರವರ ಹೆಸರಿನ ಕೆಳಗೆ ಜೋಡಿಸಲಾಗಿದೆ. ಹಾಗಾಗಿ ಇದು ಸ್ತುತಿ ರೂಪದ ಸಂಕಲನವಾಗದೆ, ಸಕಲ ಪುರಾತನರ ವಚನ ಕಟ್ಟುಗಳ ಸಂಗ್ರಹರೂಪವಾಗಿದೆ. ಇದು ಕೋಲಶಾಂತಯ್ಯನ ವಚನಗಳಿಂದ ಆರಂಭವಾಗಿ ಬಾಲಬೊಮ್ಮಣ್ಣಗಳ ವಚನಗಳಿಂದ ಮುಕ್ತಾಯವಾಗುತ್ತದೆ. ಸಾವಿರಾರು ವಚನಗಳಿಂದ ಸಂಗ್ರಹಗೊಂಡ ಪುರಾತನರ ವಚನಗಳ ಕಟ್ಟುಗಳನ್ನು ಓದುಗರ ಅನುಕೂಲಕ್ಕಾಗಿ ಕಿರಿದುಗೊಳಿಸುವ ಸಂಗ್ರಹಿಸುವ–ಸಾರಗೊಳಿಸುವ ಕೆಲಸ ಹಿಂದಿನಿಂದಲೂ ನಡೆದು ಬಂದಿದೆ. ಇದೇ ರೀತಿ ಶೂನ್ಯ ಸಂಪಾದನೆಗಳ ಸಂಗ್ರಹಗಳು ಬಂದಿವೆ. ಹಾಗೆಯೆ ಸಂಪಾದನಾ ಸಾರಾಮೃತ, ಸಂಪಾದನೆಯ ಸಾರಾಮೃತದ ವಚನಗಳು, ಏಕೋತ್ತರ ಶತಸ್ಥಲ ಸಾರ, ಏಕೋತ್ತರ ಶತಸ್ಥಲಸಾರಾಮೃತ ಮೊದಲಾದವುಗಳು ಸಂಗ್ರಹಿಸಿದ, ಕಿರಿದುಗೊಳಿಸಿದ ಕೃತಿಗಳಾಗಿವೆ.

ಆದರೂ ಇಲ್ಲಿ ಸಂಗ್ರಹಗೊಂಡ ವಚನಗಳನ್ನು ಗಮನಿಸಿದಾಗ ವೀರಶೈವ ಷಟ್‌ಸ್ಥಲ ತತ್ವದ, ಲಿಂಗಾಂಗ ಸಾಮರಸ್ಯ ತತ್ವದ, ಅವಕ್ಕೆ ಮೂಲವಾದ ಪರವಸ್ತುವಿನ (ಶಿವನ) ಕುರಿತ ಚಿಂತನೆ, ಚರ್ಚೆ ನಡೆದಿರುವುದು ಕಂಡುಬರುತ್ತದೆ.

“ಇಷ್ಟಲಿಂಗ ಸಂಬಂಧ ಮುಕ್ತಿಪದ
ಭಾವಲಿಂಗ ಸಂಬಂಧ ಭವಕ್ಕೆ ಬೀಜ
ಪ್ರಾಣಲಿಂಗ ಸಂಬಂಧ ಪ್ರಣವದ ಗೊತ್ತು
ಇಂತೀ ತ್ರಿವಿಧ ಭೇದವರತು ನಿಂದುದು ಐಕ್ಯಲಿಂಗ ಸಂಬಂಧ
ಐಘಟದೂರ ರಾಮೇಶ್ವರ ಲಿಂಗದಲ್ಲಿ “ (ವ–೪೪)

ಮೆರೆ ಮಿಂಡಯ್ಯನ ಈ ವಚನ ಇಷ್ಟಲಿಂಗ, ಭಾವಲಿಂಗ, ಪ್ರಾಣಲಿಂಗದ ಮೂಲಕ ಐಕ್ಯಲಿಂಗ ಸಂಬಂಧವನ್ನು ಹೇಳಿ ಷಟ್‌ಸ್ಥಲದ ಕೊನೆಯ ಸ್ಥಲದ ಮಹತ್ವವನ್ನು ಹೇಳುತ್ತದೆ.
ಬಿಬ್ಬಿ ಬಾಚಯ್ಯನು ಲಿಂಗಾಂಗ ಸಂಬಂಧ ಹೇಗಿರಬೇಕೆಂಬುದನ್ನು

“ಶಾಖೆಯ ಸುತ್ತಿದ ಲತೆಯಂತೆ
ನೆಕೆಯಲ್ಲಿದ್ದ ಶಿಶುವಿನಂತೆ
ಲೆಪ್ಪದಲ್ಲಿದ್ದ ಬಣ್ಣದಂತೆ
ಅಂಗ, ಲಿಂಗ ಸಂಬಂಧ ಹೀಗಾಗಬೇಕು
ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ “ (ವ–೩೧)

ಮರದ ಕೊಂಬೆಯನ್ನುಸುತ್ತಿದ ಬಳ್ಳಿಯಂತೆ ಅಂಗದ ಮೇಲೆ ಲಿಂಗವಿರಬೇಕು. ಅದು ಯಾವಾಗಲೂ ಅಂಗದಿಂದ ದೂರಾಗಬಾರದು ಎಂಬುದೇ ವಚನದ ಆಶಯ.
ಗುರು ಶಿಷ್ಯರ ಸಂಬಂಧವನ್ನು ಅರಿವಿನ ಮಾರಿ ತಂದೆ ವಿವರಿಸುವುದು ಹೀಗೆ.

“ಗುರುಶಿಷ್ಯನ ಇರವಿನ ಸ್ಥಲವೆಂತುಟೆಂದಡೆ
ಮಣಿದಾರವ ನುಂಗಿ ಸರವಾಗಿ ನಿಂದು ಕಾಣಿಸಿಕೊಂಡಂತಿರಬೇಕು
ರತ್ನ ಪುಂಜ ಕುಂದಣದ ಮೇಲೆ ನಿಂದು ಚಂದವ ಕಾಣಿಸಿಕೊಂಡಂತಿರಬೇಕು.

ಶಂಖದ ಮೇಲೆ ಸಂಭ್ರಮದ ಜಾತಿ ಉತ್ತರ ನಿಂದು ತೋರಿದಂತಿರಬೇಕು
ಇಂತೀ ಭೇದ
ಘಟಗುರು, ಆತ್ಮಶಿಷ್ಯನಾಗಿ ತೋರುವ ಬೆಳಗುತಾನೆ
ಸದಾಶಿವ ಮೂರ್ತಿ ಲಿಂಗವು "(ವ–೬೫)

ಈ ರೀತಿಯ ವಚನಗಳಲ್ಲದೆ ಬಹಳಷ್ಟು ಬೆಡಗಿನ ವಚನಗಳು ಇಲ್ಲಿ ಸಂಗ್ರಹಗೊಂಡಿವೆ.

ಮನು ಮುನಿ ಗುಮ್ಮಟದೇವನೆಂಬ ವಚನಕಾರನ ೧೫ ವಚನಗಳು ಇಲ್ಲಿ ಸಂಗ್ರಹಗೊಂಡಿವೆ. ಅದರಲ್ಲಿ ಆರು ವಚನಗಳು ಬೆಡಗಿನ ವಚನಗಳಾಗಿವೆ.

ಉದಾ: "ಹಾವಿನ ಹಲ್ಲಿನ ವಿಷದ ಕೊಳಪೆಯ ಮೂಲೆಯಲ್ಲಿ
ಮೂರು ಕಪ್ಪೆ ಹುಟ್ಟಿದವು
ಒಂದಕ್ಕೆ ಕಾಲಿಲ್ಲ, ಒಂದಕ್ಕೆ ಬಾಯಿಲ್ಲ, ಒಂದಕ್ಕೆ ಕಣ್ಣಿಲ್ಲ,
ಕಾಲಿಲ್ಲದ ಕಪ್ಪೆ ಮೂರು ಲೋಕವ ಸುತ್ತಿತ್ತು
ಬಾಯಿಲ್ಲದ ಕಪ್ಪೆ ಬ್ರಹ್ಮಾಂಡವ ನುಂಗಿತ್ತು
ಕಣ್ಣಿಲ್ಲದ ಕಪ್ಪೆ ಕಂಗಾಣದವರ ಕಂಡಿತ್ತು
ಈ ಖಂಡ ಮಂಡಲದ ಅಂಗವ ಬಿಡಿಸು
ಎನ್ನಗೂಡಿನ ಗುಮ್ಮಟನೊಡೆಯ ಅಗಮೇಶ್ವರ ಲಿಂಗವೆ" (ವ–೧೬೨)

ಅವಸರದ ರೇಕಣ್ಣನ ಏಳು ವಚನಗಳಲ್ಲಿ ಮೂರು ವಚನಗಳು ಬೆಡಗಿನ ವಚನಗಳಾಗಿವೆ.

ಉದಾ: "ಕಾಡೆಮ್ಮೆ ಊರ ಕೋಣನನೀದು
ಆ ಊರ ಕೋಣಂಗೆ ಮೂರು ಬಾಯಿ, ಆರು ಕಾಲು
ಕೊಂಬು ಎಂಟು ಕಿವಿ ಹದಿನಾರು
ನಾಲಗೆ ಇಪ್ಪತ್ತೈದು, ಬಾಲ ಮುವತ್ತಾರು
ನೂರರ ಬೆಂಬಳಿಯಲ್ಲಿ ನೋಡುವ ಕಣ್ಣು ಒಂದೆಯಾಯಿತ್ತು
ಆ ಒಂದು ಕಣ್ಣು ಹಿಂಗಲಾಗಿ
ಕೋಣಂಗೆ ಗ್ರಾಸವಿಲ್ಲದೆ ಅದು ಅಲ್ಲಿಯೇ ಹೊಂದಿತ್ತು
ಸದ್ಯೋಜಾತ ಲಿಂಗದಲ್ಲಿ ನಾಮ ನಷ್ಟವಾಯಿತ್ತು" (ವ–೨೧೩)

ಈ ರೀತಿಯ ವಚನಗಳಲ್ಲದೆ ಬಸವಸ್ತೋತ್ರ, ಶಿವಮಹಿಮಾ ಸ್ತೋತ್ರ, ಲಿಂಗಸ್ತೋತ್ರದ ವಚನಗಳಂತೆ ನಿಶ್ಚಿತ ವಸ್ತುವಿನ ಸ್ತುತಿ ಇಲ್ಲದಿರುವುದು ಕೃತಿಯ ಹೆಸರಿನ ಔಚಿತ್ಯವನ್ನು ಪ್ರಶ್ನಿಸುವುದಕ್ಕೆ ಎಡೆಮಾಡಿಕೊಟ್ಟಿದೆ.

ಈ ಸಂಗ್ರಹದಲ್ಲಿ ಸೇರಿದ ವಚನಕಾರರಲ್ಲಿ ೬೦ ಜನ ಪುರುಷ ವಚನಕಾರರು, ೪ ಜನ ಮಹಿಳಾ ವಚನಕಾರರು ಸೇರಿದ್ದಾರೆ ಇವರೆಲ್ಲರೂ ೧೨ ನೇ ಶತಮಾನಕ್ಕೆ ಸೇರಿದವರಾಗಿದ್ದಾರೆ[೩೪]. ಆದರೆ ಬಸವಣ್ಣ, ಅಲ್ಲಮ, ಸಿದ್ಧರಾಮ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ಪ್ರಮುಖ ವಚನಕಾರರ ವಚನಗಳು ಇಲ್ಲಿ ಸೇರದೆ ಇರುವುದು ಒಂದು ವಿಶೇಷ.

ಈ ಸಂಗ್ರಹಕ್ಕೆ ಮೂಲ ಆಕರ ಕೋಲ ಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟು, ಇಲ್ಲಿಯೂ ಅದೇ ಅನುಕ್ರಮದಲ್ಲಿ ಅಲ್ಲಿಯ ೨೭ ಜನರಲ್ಲಿ ೨೫ ಜನರ ಹೆಸರು ಮತ್ತು ವಚನಗಳನ್ನು ಜೋಡಿಸಲಾಗಿದೆ. ಉಳಿದೆರಡು ಕಟ್ಟುಗಳಿಂದ ವಚನಕಾರರು ಮತ್ತು ಅವರ

---

೩೪. ನಿವೃತ್ತಿ ಸಂಗಯ್ಯ, ವರದ ಸಂಕಣ್ಣ– ಈ ಇಬ್ಬರು ಮಾತ್ರ ೧೫ ನೇ ಶತಮಾನಕ್ಕೆ ಸೇರಿದವರೆಂದು, ಅರಿವಿನ ಮಾರಿ ತಂದೆ ೧೪ ನೇ ಶತಮಾನಕ್ಕೆ ಸೇರಿದವನೆಂದು ಹೇಳಲಾಗುತ್ತದೆ.

ವಚನಗಳನ್ನು ಆಯುವಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಕಂಡುಬರುತ್ತದೆ. ಉಳಿದೆರಡು ಕಟ್ಟುಗಳಲ್ಲಿ ಬಸವಣ್ಣನವರ ವಚನಗಳಿಂದ ಆರಂಭವಾಗುವ ಕಟ್ಟಿನಲ್ಲಿನ ವಚನಗಳಿಗೆ ಹೆಚ್ಚಿನ ಆದ್ಯತೆಯನ್ನು ಈ ಸಂಗ್ರಹಕಾರ ನೀಡಿದ್ದಾನೆ.

ಸಕಲ ಪುರಾತನರ ವಚನ ಕಟ್ಟುಗಳಿಗೆ ಈ ಸಂಕಲನ ಬದ್ಧವಾಗಿದ್ದರೂ ಸಂಗ್ರಹಕಾರನ ಕೆಲವು ತಪ್ಪುಗಳು ಎದ್ದು ಕಾಣುತ್ತವೆ.

೧. "ಕೆಲವು ವಚನಕಾರರ ಹೆಸರುಗಳು ತಪ್ಪಾಗಿ ಉಕ್ತವಾಗಿವೆ.

ಅ. ಗಾವುದಿ ಮಾಚಯ್ಯ ಎಂಬುದು ಗಾವುದಿ ಮಂಚಣ್ಣ ಎಂದಾಗಿದೆ.
ಆ. ಸತ್ತಿಗೆ ಕಾಯಕದ ಮಾರಯ್ಯ ಎಂಬುದು ಸತ್ತಿಗೆ ಕಾಯಕದ ಸಂಕಣ್ಣ ಎಂದಾಗಿದೆ.
ಇ. ಅನಾಮಿಕ ನಾಚಯ್ಯ ಎಂಬುದು ವಿಜಯ ಪುರದ ಸೋಮಯ್ಯ ಎಂದಾಗಿದೆ.
ಈ. ಜೋದರ ಮಾಯಣ್ಣ ಎಂಬುದು ಚೋರ ಮಾಯಣ ಎಂದಾಗಿದೆ.
ಉ. ನಾಚಯ್ಯ ಎಂಬುದು ಉಳಿಯುಮೇಶ್ವರ ಚಿಕ್ಕಣ್ಣ ಎಂದಾಗಿದೆ.
ಊ. ಉಳಿಯುಮೇಶ್ವರ ಚಿಕ್ಕಣ್ಣ ಎಂಬುದು ಉಳಿಯುಮೇಶ್ವರ ಶರಣರು ಎಂದಾಗಿದೆ.
ಋ. ವರದ ಸಂಕಣ್ಣ ಎಂಬುದು ವರದ ಸಂಗಣ್ಣ ಎಂದಾಗಿದೆ.

೨. ಒಬ್ಬ ವಚನಕಾರನ ಹೆಸರಿನಡಿಯಲ್ಲಿ ಅವನ ವಚನಗಳ ಜೊತೆ ಬೇರೊಬ್ಬರ ವಚನಗಳು ತಪ್ಪಾಗಿ ಸೇರಿಕೊಂಡಿವೆ.

ಅ. ಅಂಬಿಗರ ಚೌಡಯ್ಯನ ವಚನಗಳ ಜೊತೆ ಪ್ರಭುದೇವರ ಒಂದು ವಚನ ಸೇರಿಕೊಂಡಿದೆ. (ವಚನ ಸಂಖ್ಯೆ ೧೯೧)
ಆ. ಮೋಳಿಗೆ ಮಾರಯ್ಯನ ವಚನಗಳ ಜೊತೆ ಮೋಳಿಗೆ ಮಹದೇವಿಯ ಎರಡು ವಚನಗಳು ಸೇರಿಕೊಂಡಿವೆ. (ವಚನ ಸಂಖ್ಯೆ ೨೦೦ ಮತ್ತು ೨೦೧)

೩. ಕೆಲವು ಅಂಕಿತಗಳು ತಪ್ಪಾಗಿ ಬಳಕೆಯಾಗಿವೆ.

ಅ. ಗಾವುದಿ ಮಾಚಯ್ಯನ ಎಲ್ಲಾ ವಚನಗಳ ಅಂಕಿತ "ಕಲ್ಯಾಣದ ತ್ರಿಪುರಾಂತಕ ದೇವರಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ" ಎಂಬುದಕ್ಕೆ ಬದಲಾಗಿ " ಕಲ್ಯಾಣದ ತ್ರಿಪುರಾಂತಕದೇವರಲ್ಲಿ ಗಾವುದಿ ಮಂಚಣ್ಣ ಹೇಳಿದುದು ದಿಟವೆನ್ನಿರಣ್ಣಾ' ಎಂದಾಗಿದೆ.
ಆ. ಬೊಕ್ಕಸದ ಚಿಕ್ಕಣ್ಣನ 'ಬಸವಣ್ಣ ಪ್ರಿಯ ನಾಗರೇಶ್ವರ ಲಿಂಗ" ಎಂಬುದು "ಬಸವಣ್ಣ ಪ್ರಿಯ ನಗರೇಶ್ವರ ಲಿಂಗ' ಎಂದಾಗಿದೆ.
ಇ. ಅನಾಮಿಕ ನಾಚಯ್ಯನ "ಅನಾಮಿಕ ನಾಚಯ್ಯ ಪ್ರಿಯ ಚೆನ್ನರಾಮೇಶ್ವರ" ಎಂಬುದು "ನಾಗಯ್ಯ ಪ್ರಿಯ ಚೆನ್ನರಾಮ" ಎಂದಾಗಿದೆ.

೪. ಇನ್ನೂ ಕೆಲವು ಅಂಕಿತಗಳಲ್ಲಿ ವಿಶೇಷಣಗಳು ಸೇರಿ ವೈವಿಧ್ಯ ಉಂಟಾಗಿದೆ.

ಅ. ತಳವಾರ ಕಾಮದೇವ : ಕಾಮಹರ ಪ್ರಿಯ ರಾಮನಾಥ, ಕಾಮದಹನ ಪ್ರಿಯ ರಾಮನಾಥ
ಆ. ಗಾಣದ ಕಣ್ಣಪ್ಪ : ಗೊಹೇಶ್ವರನ ಶರಣ ಅಲ್ಲಮ, ಕನ್ನಯ್ಯ ಪ್ರಿಯ ಗೊಹೇಶ್ವರನ ಶರಣ ಅಲ್ಲಮ.
ಇ. ಸತ್ತಿಗೆ ಕಾಯಕದ ಮಾರಯ್ಯ: ಐಘ್ಗಂಟೇಶ್ವರ ಲಿಂಗ, ಸಂಗನ ಬಸವಣ್ಣ ಪ್ರಿಯ ಐಘ್ಗಂಟೇಶ್ವರ ಲಿಂಗ
ಈ. ಕನ್ನರ ಮಾರಿ ತಂದೆ : ಮದನಂಗದೂರ ಮಾರೇಶ್ವರಾ, ಮಾರನ ವೈರಿ ಮಾರೇಶ್ವರಾ
ಉ. ಏಕಾಂತದ ರಾಮಯ್ಯ : ಎನ್ನಯ್ಯ ಚೆನ್ನರಾಮ, ಎನ್ನಯ್ಯ ಚೆನ್ನ ರಾಮೇಶ್ವರ ಲಿಂಗ

[illegible]

ಊ. ಸುಂಕದ ಬಂಕಣ್ಣ : ಬಂಕೇಶ್ವರ ಲಿಂಗ, ಸುಂಕದೊಡೆಯ ಬಂಕೇಶ್ವರ ಲಿಂಗ, ಜಗಸುಂಕದೊಡೆಯ ಬಂಕೇಶ್ವರ ಲಿಂಗ.

ಋ. ತೆಲುಗೇಶ ಮಸಣಯ್ಯ : ತೆಲುಗೇಶ್ವರಾ, ಶಂಭುತೆಲುಗೇಶ್ವರ,

ಎ. ದಸರಯ್ಯ : ದಸರೇಶ್ವರಾ, ಚೆನ್ನದಸರೇಶ್ವರಾ"[೩೫]

ಈ ರೀತಿ ಅಂಕಿತದಲ್ಲಿಯೇ ವೈವಿಧ್ಯತೆ ತರುವ ಪ್ರಯತ್ನವನ್ನು ವಚನಕಾರರು ಮಾಡಿದ್ದಾರೆ.

ಈ ಸಂಕಲನ ವೀರಶೈವ ಲಿಂಗಾಯಿತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ಇಲ್ಲಿ ಪ್ರಕಟವಾಗಿದೆ. ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟಣಾ ಮಾಲೆಯಲ್ಲಿ ೨೭ ನೇ ಕೃತಿಯಾಗಿ ಈ ಸಂಕಲನ ಪ್ರಕಟವಾಗಿದೆ.

೧೧. ಲಿಂಗಸ್ತೋತ್ರದ ವಚನಗಳು

*ಸಂಪಾದನೆಯ ಸಿದ್ಧವೀರಣಾಚಾರ್ಯ.

ಸಂಪಾದನ ಸಮಯದ ಪರಂಪರೆಯಲ್ಲಿ ಸಂಪಾದನೆಯ ಸಿದ್ಧವೀರನಿಗೆ ವಿಶಿಷ್ಟವಾದ ಸ್ಥಾನಲಭಿಸಿದೆ. ಅತಿ ಹೆಚ್ಚು ಕೃತಿಗಳನ್ನು ಸಂಪಾದಿಸಿರುವ ಮೊದಲ ಸಂಕಲನಕಾರ ಇವನೆ ಆಗಿದ್ದಾನೆ. ಈತನ 'ಲಿಂಗಸ್ತೋತ್ರದ ವಚನಗಳು' ಸಂಕಲನದಲ್ಲಿ ೨೬ ಜನ ವಚನಕಾರರ ೧೦೮ ವಚನಗಳಿವೆ. ಶ್ರೀಗುರುವಿನ ಸ್ತುತಿಯಿಂದ ಕೃತಿ ಆರಂಭವಾಗುತ್ತದೆ. ಇಷ್ಟಲಿಂಗದ ಸ್ವರೂಪ, ಅದರ ಹಿರಿಮೆ ಗರಿಮೆಗಳ ವಿವರಣೆ ಹಾಗೂ ಲಿಂಗವು ಪ್ರಾಣದಲ್ಲಿ ಪ್ರಾಣಲಿಂಗವಾಗಿ ತೋರುವ ಕ್ರಮ, ತನು–ಪ್ರಾಣ–ಭಾವಗಳನ್ನು ಪರವಸ್ತುವಿನ ಧ್ಯಾನದಿಂದ ಪರಿವರ್ತನೆಗೊಳಿಸುವ ಪರಿ, ಈ ಸ್ತೋತ್ರ ವಚನಗಳಲ್ಲಿ ಕಂಡು ಬರುತ್ತವೆ. ಇಲ್ಲಿಯ ಒಂದೊಂದು ವಚನವು ವಚನಕಾರರ ಅನುಭವದ ಆಳವನ್ನು ಎತ್ತಿ ತೋರಿಸುತ್ತವೆ. ಇದರಲ್ಲಿ ದೇವರ ಸ್ವರೂಪ ಹಾಗೂ ಭಕ್ತ ದೇವರನ್ನು ಮೆಚ್ಚಿಸುವಂತಹ ವಚನಗಳು ಇವೆ. ಈ ಸಂಕಲನದ ಮೂಲ ಆಶಯ ಪರಶಿವನೊಡನೆ ಸಾಮರಸ್ಯ ಹೊಂದಿ, ಪರಶಿವನ ಜ್ಯೋತಿ ಸ್ವರೂಪವೇ ತಾನಾಗುವ ತತ್ವದ ನಿಲುವನ್ನು ಪ್ರತಿಪಾದಿಸುವುದಾಗಿದೆ.

ಶಿವಶರಣರು ಪರವಸ್ತುವಿನ ಸ್ವರೂಪವನ್ನು ತಮ್ಮ ಕರದ ಇಷ್ಟಲಿಂಗದಲ್ಲಿ ಕಂಡುಕೊಂಡು, ಆ ಇಷ್ಟ ಲಿಂಗವನ್ನೆ ಉತ್ಕಟ ಭಕ್ತಿ, ಭಾವದಿಂದ ಸ್ತುತಿಸಿದ್ದಾರೆ. ಪರ ವಸ್ತುವಿನ ಗುಣಗಳನ್ನು, ಮಹಿಮೆಗಳನ್ನು, ಅದರ ಸ್ವರೂಪವನ್ನು ಗುರುತಿಸಿದ್ದಾರೆ. ಪರವಸ್ತುವೆಂದರೆ ವಚನಶಾಸ್ತ್ರದಲ್ಲಿ 'ಶೂನ್ಯ' ಎಂಬ ವಿಶೇಷವಾದ ಅರ್ಥಸಂಪತ್ತನ್ನು ಒಳಗೊಂಡಿದೆ. ಶೂನ್ಯ ಎಂದರೆ ನಿರಾಕಾರ. ಅಂದರೆ ಲಿಂಗ ಪದದಿಂದ ಸಂಜ್ಞಿತವಾದ ಪರಶಿವನೆಂದು. ಆ ಪರಶಿವನು ನಿರಾಕಾರ, ಅಗಮ್ಯ, ಅಗೋಚರ ಅಭೇದ್ಯನಾದವನು. ಆದರೆ ಭಕ್ತನ ಸಾಧನೆಗಾಗಿ 'ಲಿಂಗ'ವಾಗಿ, ಕರದಲ್ಲಿ ಇಷ್ಟಲಿಂಗವಾಗಿ ಕಾಣಿಸಿಕೊಂಡಿದ್ದಾನೆ. ಈ ಲಿಂಗವು ವಿಶ್ವವನ್ನು ನಿರ್ದೇಶಿಸುವ ವಿಶ್ವದಾಕಾರದಲ್ಲಿ ಕಾಣುವುದು. ಇದು ಸಾಧಕನ ದೃಷ್ಟಿಗೆ ಸೇರಿದುದಾಗಿದೆ.

---

೩೫. ಡಾ॥ ವೀರಣ್ಣ ರಾಜೂರ (ಸಂ) 'ಎಲ್ಲಾ ಪುರಾತರ ಸ್ತೋತ್ರದ ವಚನಗಳು.' ಪ್ರಸ್ತಾವನೆ xviii.

ಲಿಂಗವನ್ನು ದಿವ್ಯ ಜ್ಞಾನಿ ಚೆನ್ನಬಸವಣ್ಣನು

ಲಿ ಕಾರವೆ ಶೂನ್ಯ, ಬಿಂದುವೆ ಲೀಲೆ, ಗ ಕಾರವೇ ಚಿತ್ತು
ಈ ತ್ರಿವಿಧದೊಳೊಗೆದ ಲಿಂಗನೆಂಬ ಸಕಿಲ
ಅದರ ಸಂಚವನಾವಾತ ಬಲ್ಲ ಆತನೆ ಲಿಂಗಸಂಗಿ
ಇದು ಕಾರಣ ಕೂಡಲ ಚೆನ್ನಸಂಗಮದೇವ
ಲಿಂಗಾನುಭಾವಿಗಳ ಶ್ರೀಚರಣಕ್ಕೆ ನಮೋ ನಮೋ ಎಂಬೆನು'

ಇಲ್ಲಿ ಲಿಂಗದ ಅರ್ಥವನ್ನು ಹೇಳುವುದರ ಜೊತೆಗೆ ಆ ಲಿಂಗ ಮತ್ತು ಚಿತ್ ಶಕ್ತಿಯ ಸಂಬಂಧವನ್ನು ಹೇಳಿದ್ದಾನೆ.

ವಿಶ್ವೋತ್ಪತ್ತಿಗೆ ಕಾರಣನಾದ, ವಿಶ್ವದಲ್ಲಿ ಅಂತರ್ಗತವಾದ ಪರಶಿವನು ಮಾನವನೊಳಗೆ ಪಿಂಡಗತನಾಗಿದ್ದಾನೆ. ಭಕ್ತನು ತನ್ನ ಸಾಧನೆಯ ಹಾದಿಯಲ್ಲಿ ಶಿವನನ್ನು ಹುಡುಕುತ್ತ ಸಾಗುತ್ತಿರುವಾಗಲೆ ಅರಿವಾಗುತ್ತದೆ. ಪರಶಿವನ ಅಸ್ತಿತ್ವ ಹೊರಗಷ್ಟೆ ಅಲ್ಲ, ತನ್ನ ಅಂಗೈಯಲ್ಲಿ, ತನ್ನಂಗದಲ್ಲಿ, ತನ್ನ ಅಂತರಂಗದಲ್ಲಿ, ಮನಸ್ಸಿನಲ್ಲಿ, ಹೃದಯದಲ್ಲಿ, ಭಾವದಲ್ಲಿಯೂ ಇದ್ದಾನೆಂದು ದೃಢ ವಿಶ್ವಾಸ ಹೊಂದುವನು. ಈ ಭಾವನೆಯನ್ನು ಅಕ್ಕಮಹಾದೇವಿಯ ವಚನದಲ್ಲಿ ಗುರುತಿಸಬಹುದು.

"ದೂರದಲ್ಲಿರ್ದನೆಂದು ಆನು ಬಾಯಾರಿ ಬಳಲುತ್ತಿರ್ದೆನಯ್ಯಾ
ಸಾರಿ ಬೆರಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ
ಎನ್ನ ಆರತವೆಲ್ಲವು ಲಿಂಗ, ನಿಮ್ಮನ್ನಟ್ಟವು ನೋಡಯ್ಯ
ಚೆನ್ನ ಮಲ್ಲಿಕಾರ್ಜುನಯ್ಯಾ
ನಿಮ್ಮನು ಕರಸ್ಥಲದಲ್ಲಿ ನೋಡಿ ಕಂಗಳೆ ಪ್ರಾಣವಾಗಿರ್ದೆನಯ್ಯಾ"

ಇದೇ ರೀತಿಯ ಭಕ್ತಿ ತುಂಬಿದ ವಚನಗಳನ್ನು ಸಂಕಲನದುದ್ದಕ್ಕೂ ಕಾಣಬಹುದು. ಪರಶಿವ ಸಗುಣ–ನಿರ್ಗುಣ, ಅವನ ಸಾಕಾರ–ನಿರಾಕಾರದ ಮಹಿಮೆಯ ಸ್ತುತಿ ಇದೆ. ಪರಮಾತ್ಮನು ಭಕ್ತನ ಒಲಿದ ರೀತಿ, ಆತ ಶಿವಶರಣರಿಗೆ ಕಾಣಿಸಿಕೊಂಡ ಬಗೆ, ಅದೇ ರೀತಿ ಏಕ ಕಾಲದಲ್ಲಿ ಹಲವು ಭಕ್ತರೊಡನೆ ಆತ ಬೆರೆತ ವಿಸ್ಮಯ, ಲೀಲೆಗಳ ಅಭಿವ್ಯಕ್ತಿಯೂ ಇಲ್ಲಿನ ವಚನಗಳಲ್ಲಿ ಚಿತ್ರಿತವಾಗಿದೆ. ಪರಮಾತ್ಮ ಮತ್ತು ಭಕ್ತರ ನಡುವಿನ ಸ್ನೇಹ ಸಲಿಗೆ, ಪ್ರೀತಿಯೇ ಭಕ್ತ ಭಗವಂತನನ್ನು ಅಣಕವಾಡುವಂತೆ ಮಾಡಿದೆ.

ಆತ್ಮೀಯತೆಯನ್ನು, ಮನದಾಳದ ಆನಂದವನ್ನು ಅವನನ್ನು ಕಂಡು ಹರ್ಷ ಚಿತ್ತರಾದುದನ್ನು, ಮೈಮರೆತು ಧ್ಯಾನಿಸಿದುದನ್ನು ಶರಣರು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ನಿರಾಕಾರ ಹಾಗೂ ನಿರ್ಗುಣನಾದ ಪರಶಿವನನ್ನು ಭಕ್ತಿಯ ಬಂಧನದಿಂದ ಬಂಧಿಸಿದ್ದಾರೆ. ಜ್ಞಾನದ ಕಣ್ಣಿಂದ ಕಂಡಿದ್ದಾರೆ. ಸಾಧನೆಯ ಕ್ರಿಯಾಭಾವದಿಂದ ಅವರೊಡನೆ ಕೂಡಿ ಕೊಂಡಿದ್ದಾರೆ. ಈ ಕ್ರಿಯೆಗಾಗಿ ವೈರಾಗ್ಯವನ್ನು ಅನುಭವಿಸಿ, ತಮ್ಮನ್ನು ತಮ್ಮೆಲ್ಲ ಸರ್ವಸ್ವವನ್ನು ಅರ್ಪಿಸಿ ತ್ಯಾಗದ ಸಂಪತ್ತಿನ ಮಹತ್ವವನ್ನು ಇಲ್ಲಿನ ವಚನಗಳಲ್ಲಿ ಕಾಣಬಹುದು.

ಭಕ್ತಿ ಮತ್ತು ತ್ಯಾಗದಿಂದ ಸರ್ವವನ್ನು ಸಮರ್ಪಿಸಿ ಪರಶಿವನನ್ನು ಒಲಿಸಿಕೊಂಡು ಸಾಮರಸ್ಯವನ್ನು ಸಾಧಿಸಿ ನಾನು ಇಲ್ಲ–ನೀನೂ ಇಲ್ಲ. ತಾನೇ ತಾನಾಗಿ, ಆ ಪರಶಿವನ ಜ್ಯೋತಿ ಸ್ವರೂಪದ ಹೊರತು ಬೇರೆನು ಇಲ್ಲ ಎನ್ನುವ ತಾದಾತ್ಮ್ಯದ ನಿಲುವಿನ ಸಮರಸಾನಂದವನ್ನು

ಕಂಡು ಕೊಂಡಿದ್ದಾನೆ. ಈ ಎಲ್ಲಾ ಬಗೆಯ ವಿಚಾರಧಾರೆಗಳನ್ನು ಲಿಂಗಸ್ತೋತ್ರದ ವಚನ ಸಂಕಲನದಲ್ಲಿ ಸಿದ್ಧವೀರಣ್ಣ ಸಂಗ್ರಹಿಸಿ ಕೊಟ್ಟಿದ್ದಾನೆ.

ಭೂಮಿಗೆ ಬೇಕಾದ ಜೀವಾಮೃತವಾದ ಬಾವಿಯ ನೀರನ್ನು ಹಗ್ಗದ ಸಹಾಯದಿಂದ ಮೇಲೆತ್ತಿ ತಂದು ಉಣಿಸುವಂತೆ, ಕರದಲ್ಲಿರುವ ಪರಶಿವನ ಕುರುಹಾಗಿರುವ ಇಷ್ಟಲಿಂಗದ ಸಹಾಯದಿಂದ ಜ್ಞಾನವು ಆತ್ಮನಲ್ಲಿ ಅಡಗುವ ಚಿತ್ರವನ್ನು ಅರಿವಿನ ಮಾರಿ ತಂದೆ ಚಿತ್ರಿಸಿರುವ ರೀತಿ ಇದು.

"ಪಾತಾಳದ ನೀರು ಹುರಿ ಸಂಚದಿಂದ ಧರೆಗೆ ತಾಹಂತೆ
ಅರಿವು ಆತ್ಮನಲ್ಲಿ ಅಡಗಿದ್ದುದ ತಂದೆಯಲ್ಲಾ,
ಕರದ ಕೈಯ ಕುರುಹಾಗಿ ಅಡಗಿದೆಯಲ್ಲಾ
ಶೃಂಗಾರದ ನಿಳಯದ ಮುಚ್ಚಳ ಕೀಲಿನಿಂದ
ಕಡೆಗಾಣಿಸಿದಂತೆ ಅಡಗಿದೆಯಲ್ಲಾ
ಕುರುಹು ಭಿನ್ನವಿಲ್ಲದೆ ಎನ್ನೊಡಗೂಡು ಸದಾಶಿವಮೂರ್ತಿ ಲಿಂಗವೆ"

ಮಾನವನಲ್ಲಿರುವ ಪಂಚೇಂದ್ರಿಯಗಳ ವಿಷಯ ವಾಸನೆಯಿಂದ ಆಧ್ಯಾತ್ಮ ಜ್ಞಾನಸಾಧನೆ ಅಸಾಧ್ಯ. ಇದಕ್ಕೆ ಪೂರಕವಾಗಿ ಮನಸ್ಸು ಸಹ ಚಂಚಲಯುಕ್ತವಾದುದು. ಇವುಗಳ ಮೇಲೆ ಹತೋಟಿ ಸಾಧಿಸಲು, ಭಕ್ತಿಯ ಭವಸನ್ನಿಧಿಯನ್ನು ತಲುಪಲು 'ಇಷ್ಟಲಿಂಗ' ವೆಂಬ ಕುರುಹಿನ ಅಗತ್ಯ ಇದೆ. ಇಷ್ಟಲಿಂಗದಿಂದ ಜ್ಞಾನ-ಶಕ್ತಿಗಳು ಒಂದಾಗುತ್ತವೆ.

ಬೆಳಗಿನ ಸ್ವರೂಪದಂತೆ ಕಾಣುವ ಆ ನಿರಾಕಾರವಾದ ಪರಶಿವನನ್ನು ಆತ್ಮ ಜ್ಯೋತಿ, ಮನೋಜ್ಯೋತಿ, ಸ್ವಯಂಜ್ಯೋತಿ, ಪರಂಜ್ಯೋತಿ ಎಂದು ಅನೇಕ ಬಗೆಯಲ್ಲಿ ಕರೆಯಲಾಗಿದೆ. ಪರವಸ್ತುವಾದ ಆತನು ಸಂಗರಹಿತನೂ, ಭವರೋಗ ರಹಿತನೂ ಆಗಿರುತ್ತಾನೆ. ಇಂತಹ ಪರವಸ್ತುವಿನ ಸಾಕಾರ ರೂಪವೆ ಇಷ್ಟಲಿಂಗ. ಇಂತಹ ಇಷ್ಟಲಿಂಗಕ್ಕೆ ಸಿದ್ಧರಾಮನು

"ವೇದ ಹದಿನಾರು ಸಾವಿರಂಗಳು ನಿನ್ನನರಲಿ ಒದರಿ ಕಾಣದೆ ಹೋದೆನು
ನಿನ್ನಾಧಿಕ್ಯವ ಬಲ್ಲವರಾರಯ್ಯಾ, ನಿನ್ನವರಲ್ಲದೆ?
ಉರುತರ ಪರಮಜ್ಞಾನಿ ಘನತರದ ಸಂಯೋಗಿ
ನಿನ್ನ ಪ್ರಮಾಣವನರಿಯಲ್ಕೆ ಆರ ವಶವು ಹೇಳಾ?
ಸೀಮೆಯ ಮೀರಿದ ಸಂಬಂಧಿ; ಲೆಕ್ಕವ ಮೀರಿದ ಅಪ್ರಮಾಣ,
ಗುರುವಿನ ಕರುಣದಿಂದ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆ "

ಪರಬ್ರಹ್ಮನಾದ ನಿನ್ನನ್ನು ಹದಿನಾರು ಸಾವಿರ ವೇದಗಳು ಹುಡುಕಿ, ಹುಡುಕಿ ಕಾಣದೆ ಹೋದವು. ನಿನ್ನಾಧಿಕ್ಯವನ್ನು ಶರಣರಲ್ಲದೆ ಬೇರೆಯವರು ಅರಿಯಲು ಸಾಧ್ಯವೆ?. ನಿನಗೆ ಸೀಮೆ ಎಂಬುದಿಲ್ಲ. ಅಳತೆಗೆ ಸಿಗದ, ಅಪ್ರಮಾಣನಾದ ನೀನು; ಗುರುವಿನ ಕರುಣೆಯಿಂದಾಗಿ ಎನ್ನ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬಂದೆಯಲ್ಲ ಎಂದು ಸಿದ್ಧರಾಮನು ಸ್ತುತಿ ಮಾಡಿದರೆ,

ಇದೇ ವಿಚಾರವನ್ನು ತುಂಬ ಸರಳವಾಗಿ ಬಸವಣ್ಣನವರು

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳ ಲೋಕದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ

ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದೆ
ಕೂಡಲ ಸಂಗಯ್ಯಾ."

ಲಿಂಗ ಅಥವಾ ಪರಬ್ರಹ್ಮದ ನಿಲುವು ಅಗಾಧವಾದದ್ದು. ಜಗದ ವಿಸ್ತಾರವನ್ನು ಮೀರಿ, ಆಕಾಶದ ವಿಸ್ತಾರವನ್ನೂ ಮೀರಿ, ಅಪ್ರತಿಮ ಅಗಮ್ಯವಾಗಿ ತನ್ನ ವಿರಾಟ್ ಸ್ವರೂಪವನ್ನು ಪ್ರಕಟಿಸಿ ಮೆರೆಯುತ್ತಿದೆ. 'ಲಿಂಗವೆಂಬುದೊಂದು ಅನಂತದ ಹೆಸರು' ಎಂದು ಪ್ರಭುದೇವರು ಒಂದು ವಚನದಲ್ಲಿ ಹೇಳಿದ್ದಾರೆ. ಇಂಥ ಚಿದ್ಘನ ಲಿಂಗವು ಚುಳುಕಾಗಿ, ಪರಬ್ರಹ್ಮದ ಕುರುಹಾಗಿ ಭಕ್ತನ ಅಂಗೈಯಲ್ಲಿ ಲಿಂಗ ರೂಪವಾಗಿ ಕಾಣಿಸಿಕೊಂಡು ಆತನ ಸರ್ವಾಂಗವನ್ನೆಲ್ಲಾ ವ್ಯಾಪಿಸಿದ್ದಾನೆ. ನಾನು-ನೀನೆಂಬ ದ್ವಂದ್ವ ಭಾವ ಮರೆಯಾಗಿ ತಾನೆ ಪರವಸ್ತು ಸ್ವರೂಪ ಎಂಬ ಅರಿವು ಮೂಡುತ್ತದೆ.

ಶರಣರು ಪರಬ್ರಹ್ಮನನ್ನು ಅಗಮ್ಯ, ಅಗೋಚರ, ನಿರ್ಗುಣ, ನಿರಾಕಾರ ಎಂದು ಕರೆಯುತ್ತಾರೆ. ಆದರೆ ಅಕ್ಕಮಹಾದೇವಿ ತನ್ನದೊಂದು ವಚನದಲ್ಲಿ ಪರಶಿವನನ್ನು ಸಗುಣಗಳ ಸಮೇತ ಅವನ ಸೌಂದರ್ಯವನ್ನು ವರ್ಣಿಸಿದ್ದಾಳೆ.

"ಹೊಳೆವ ಕೆಂಜೆಡೆಗಳ, ಮಣಿಮಕುಟ, ಒಪ್ಪುವ ಸುಲಿಪಲ್ಲ
ನಗೆ ಮೊಗದ, ಕಂಗಳ ಕಾಂತಿಯಲಿ ಈರೇಳು ಭುವನವ ಬೆಳಗುವ
ದಿವ್ಯ ಸ್ವರೂಪನ ಕಂಡೆ ನಾನು,
ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ
ಗಂಡ ಗಂಡರೆಲ್ಲ ಹೆಂಡಿರಾಗಿ ಆಳುವ ಗರುವನ ಕಂಡೆನಾನು
ಜಗದಾದಿ ಶಕ್ತಿಯೊಳು ಬೆರಸಿ ಮಾತಾಡುವ ಪರಮಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು".

ಅಕ್ಕ ಕಂಡ ಪರಶಿವನಿಗೆ ಹೊಳೆವ ಕೆಂಜೆಡೆಗಳಿವೆ. ಮಣಿ ಮಕುಟವಿದೆ. ಬೆಳ್ಳಗೆ ಮಿನುಗುವ ಹಲ್ಲಿನ ಕಾಂತಿಯ ನಗೆ ಮೊಗವಿದೆ. ಹದಿನಾಲ್ಕು ಲೋಕಗಳನ್ನು ಬೆಳಗುವಂತಹ ಕಂಗಳ ಕಾಂತಿ ಇದೆ. ಇಂತಹ ಸುಂದರ ಶಿವನನ್ನು ಕಣ್ಣು ತುಂಬಾ ತುಂಬಿಕೊಳ್ಳುತ್ತಾಳೆ. ಅವನನ್ನು ಕಂಡು ಬದುಕು ಸಾರ್ಥಕವಾಯಿತು ಎನ್ನುತ್ತಾಳೆ.

ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣಕರ್ತನಾದ, ಜಗತ್ತಿನ ಅವಿರ್ಭಾವಕ್ಕೆ ಕಾರಣನಾದ ಶಿವನು ಸಕಲ ಚೇತನಾಚೇತನ ವಸ್ತುಗಳಲ್ಲಿ ಅಡಗಿದ್ದಾನೆ. ಅವನ ಗುಣವರ್ಣನೆ ಮಾಡುತ್ತಾ ಅವನ ಚಿತ್ ಮೂರ್ತಿಯನ್ನು ಅಂತರಂಗದಲ್ಲಿ ಕಲ್ಪಿಸಿಕೊಳ್ಳುವುದೇ ಭಕ್ತನ ಪರಮ ಗುರಿಯಾಗಿದೆ.

ಅಲ್ಲಮನು ಸಹ ಆ ಪರವಸ್ತುವಿನ ವರ್ಣನೆಯನ್ನು,

"ಪಂಚ ಮಹಾಪಾತಕಂಗಳು ಹೋಹ ಠಾವ ಕಂಡೆ
ಸರ್ವ ದುಃಖಗಳು ಜೀವ ಠಾವ ಕಂಡೆ
ಕಾಲನ ಕಾಲಲೊದೆವ ಠಾವ ಕಂಡೆ
ಕಾಮನ ಕೈಯ್ಯಾ ಕೊಯ್ವ ಠಾವ ಕಂಡೆ
ಮಾಯೆಯ ಬಾಯ ಕಟ್ಟುವ ಠಾವ ಕಂಡೆ
ಗುಹೇಶ್ವರ ಲಿಂಗಯ್ಯನು
ಎನ್ನ ಕರಸ್ಥಲದಲ್ಲಿ ಕಣ್ಣು ತುಂಬಿ ಚೆನ್ನಾಗಿ ಕಂಡೆನಯ್ಯಾ"

'ಮುಕ್ತಿ' ಎಂದರೆ ಬಿಡುಗಡೆ. ಆದರೆ ಶಿವಶರಣರಲ್ಲಿ ಮುಕ್ತಿಯ ಪರಿಕಲ್ಪನೆಯೆ ಬೇರೆ. ಲಿಂಗಾಂಗ ಒಂದಾಗುವುದೇ ಮುಕ್ತಿ. ಅಂದರೆ ಲಿಂಗಾಂಗ ಸಾಮರಸ್ಯ. ಅಂತಹ ಲಿಂಗವೇ ಕರಸ್ಥಲದಲ್ಲಿರುವಾಗ ಬೇರೆ ಮುಕ್ತಿಯ ಚಿಂತನೆ ಯಾಕೆ ಎಂಬುದನ್ನು ಆದಯ್ಯ ಈ ರೀತಿ ಚಿಂತಿಸಿದ್ದಾನೆ.

"ಕಡವರವಿದ್ದು ಬಡತನವೇಕೊ?
ಮರುಜವಣಿಯಿದ್ದು ಮರಣವಾಗಲೇಕೊ?
ಅಗ್ನಿ ಸ್ತಂಭವಿದ್ದು, ತನುಹೊತ್ತಿ ಉರಿಯಲೇಕೊ?
ಅಮೃತ ಸಾಗರದಲ್ಲಿದ್ದು ಅಪ್ಯಾಯನವೇಕೊ?
ಪರಮ ಜ್ಞಾನವಿದ್ದು ಪರವಿಹದ ಪರಿಭವವೇಕೊ . . . ."

ಎಂಬ ಹೋಲಿಕೆಗಳ ಮೂಲಕ ತೋರಿಸಿಕೊಟ್ಟಿದ್ದಾನೆ.

ಓಂಕಾರ ಸ್ವರೂಪನೂ, ಸತ್–ಚಿತ್–ಆನಂದ ಸ್ವರೂಪನೂ ಆದ ಪರಶಿವನು ಭಕ್ತರ ಭಾವನೆಗಳಿಗೆ ತಕ್ಕಂತೆ ಸ್ಪಂಧಿಸುತ್ತಾನೆ. ಆತ ಅಗೋಚರನು, ವಿಶ್ವಮಯನೂ ಆಗಿದ್ದರೂ ಅರಿಯುವ ಹಂಬಲವಿರುವ ಪರಮಜ್ಞಾನಿಗೆ ಮಾತ್ರ ಅವನ ಸಾಕಾರ ರೂಪ ಅಂತರಂಗದಲ್ಲಿ ಗೋಚರವಾಗುತ್ತದೆ. ಭಕ್ತನ ಭಕ್ತಿಗೆ, ಜ್ಞಾನಕ್ಕೆ ತಕ್ಕಂತೆ ಪರಬ್ರಹ್ಮನ ಸಾಕ್ಷಾತ್ಕಾರವಾಗುತ್ತದೆ ಎಂದು ಮಾದಾರ ದೂಳಯ್ಯ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ.

"ಖಂಡಿತರಿಗೆ ಖಂಡಿತವಾಗಿ ಅಖಂಡಿತರಿಗೆ ಪರಿಪೂರ್ಣನಾಗಿ
ಕರಿ ಮುಖರದೊಳಡಗಿ ತೋರುವಂತೆ
ಚಿತ್ತ ಶುದ್ಧವುಳ್ಳವರಲ್ಲಿ ಅಜ್ಯೋತ್ತಿದಂತೆ
ಅಡಗಿದೆಯಲ್ಲಾ ಕಾಮಧೂಮ ಧೂಳೇಶ್ವರ"

ಪರಶಿವನು ಭಕ್ತಿ ಪ್ರಿಯ. ಭಕ್ತಿಯ ಪರೀಕ್ಷೆಗಾಗಿ ಆತ ಅನೇಕ ವೇಷಗಳನ್ನು ಧರಿಸಿದ್ದಾನೆ. ನಟನೆ ಮಾಡಿದ್ದಾನೆ. ಆತ ಒಬ್ಬನೆ ಆದರೂ ಮಾನವನ ಜಾಗ್ರತ್, ಸ್ವಪ್ನ, ಸುಷುಪ್ತಿಯ ಅವಸ್ಥೆಗಳಲ್ಲಿ ಅವನು ವಿಶ್ವ, ತೇಜಸ್, ಪ್ರಾಜ್ಞ ಎಂಬ ಮೂರು ಹೆಸರಿನಿಂದ ವ್ಯವಹರಿಸುತ್ತಾನೆ. ಜ್ಞಾನ ಸ್ವರೂಪನೂ, ತೇಜೋಮೂರ್ತಿಯೂ ಆದ ಪರಶಿವನು ಶರಣನ ಹೃದಯಾಳದಲ್ಲಿ ಜ್ಯೋತಿ ಸ್ವರೂಪನಾಗಿರುತ್ತಾನೆ. ಕ್ರಿಯಾತೀತನೂ, ನಾದಬಿಂದು ಕಳಾತೀತನೂ ಆದ ಆದಿಶಿವನನ್ನು ಒಲಿಸಲು ಭಕ್ತನು ತನ್ನ ಕರ್ತವ್ಯವನ್ನು ನಿರ್ವಹಿಸುತ್ತ ಪರಮಾನಂದವನ್ನು ಕಾಣುತ್ತಾನೆ. ಜಪ, ತಪ, ಪೂಜೆಗಳಿಂದ ಶಿವನು ತೃಪ್ತನಾಗಲಿ–ಆಗದೆ ಇರಲಿ, ಕೇಳಲಿ–ಕೇಳದೆ ಇರಲಿ, ಮೆಚ್ಚಲಿ–ಮೆಚ್ಚದೆ ಇರಲಿ, ಕೃಪಾದೃಷ್ಟಿ ಬೀರಲಿ–ಬೀರದೆ ಇರಲಿ ನಾನು ಮಾತ್ರ ನನ್ನ ಕರ್ತವ್ಯದಲ್ಲಿರುತ್ತೇನೆ ಎಂಬುದನ್ನು ಅಕ್ಕನ ಈ ವಚನ ಸ್ತೋತ್ರದಲ್ಲಿ ಕಂಡುಬರುತ್ತದೆ.

"ಅಯ್ಯಾ, ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು
ನಾ ನಿನ್ನ ಹಾಡಿದಲ್ಲಡೆ ಸೈರಿಸಲಾರೆನಯ್ಯಾ
ಅಯ್ಯಾ ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು
– – – – – – – – – – – – – – – – – – – –
ಚೆನ್ನಮಲ್ಲಿಕಾರ್ಜುನಯ್ಯ, ನಾ ನಿಮ್ಮ ಪೂಜಿಸಿ ಹರುಷದಲೋಲಾಡುವೆನಯ್ಯಾ".

ಅವನೊಲಿಯಲಿ, ಒಲಿಯದಿರಲಿ, ನಾನೊಲಿದಿರುವೆನಲ್ಲ. ನನಗದೆ ಸಾಕು. ಇದರಲ್ಲಿ ನಾನು ವಿಫಲಳಾದರೂ ಸಫಲಳೆ. ಒಲಿಯದೆ ಬದುಕುವುದಕ್ಕಿಂತ ಒಲಿದು ಇಲ್ಲವಾಗುವುದು ಮೇಲು.

ಒಲಿದುದಕ್ಕೆ ಮಿಲನವೇ ಫಲವೇನಲ್ಲ. ಮಿಲನ ದೊರೆಯಲಿ, ದೊರೆಯದಿರಲಿ, ಒಲಿಯುವುದನ್ನು ತೊರೆಯಲಾಗದು. ಅವನನ್ನು ಹಾಡಿ, ಒಲಿದು, ಪೂಜಿಸಿ, ಮೆಚ್ಚಿ, ಕಣ್ತುಂಬ ನೋಡಿ, ಹಿಗ್ಗಿ ಆನಂದ ಪಡೆಯುತ್ತ ರಸವಶವಾಗುವುದೇ ಭಕ್ತನ ಕರ್ತವ್ಯವೆಂಬಂತೆ ಅಕ್ಕಮಹಾದೇವಿ ಚಿತ್ರಿಸಿದ್ದಾಳೆ.

ಜೀವನ ಅಂಗಾಂಗಗಳೆಲ್ಲೆಲ್ಲಾ ಶಿವನೆ ವ್ಯಾಪಿಸಿಕೊಂಡಿದ್ದಾನೆ. ಇದಕ್ಕೆ ಉತ್ತಮ ಉದಾಹರಣೆ ಬಸವಣ್ಣನವರ ಈ ವಚನ.

" ಎನ್ನ ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ
ನಯನದಲ್ಲಿ ನಿಮ್ಮ ಮೂರುತಿ ತುಂಬಿ
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಕೂಡಲ ಸಂಗಮ ದೇವಾ
ನಿಮ್ಮ ಚರಣ ಕಮಲದೊಳಗಾನು ತುಂಬಿ"

ಬಸವಣ್ಣನ ಬಾಳೆಲ್ಲ ಶಿವಮಯವಾಗಿದೆ. ಅವನ ಮಾತಿನಲ್ಲಿ ಶಿವನ ನಾಮ, ಅವನ ಮನದಲ್ಲಿ ಶಿವನ ನೆನಪು, ಅವನ ನಯನದಲ್ಲಿ ಶಿವನ ಮೂರ್ತಿ, ಅವನ ಕಿವಿಯಲ್ಲಿ ಪರಶಿವನ ಕೀರ್ತಿ ತುಂಬಿಕೊಂಡು ಚಿದಾನಂದನನ್ನು ಪಡೆಯುತ್ತಿದ್ದಾಗಲೆ, ಶಿವನ ಪಾದಕಮಲಗಳ ಮೇಲೆ ಬಸವಣ್ಣ ತನ್ನನ್ನು ಅರ್ಪಿಸಿಕೊಂಡಿದ್ದಾನೆ. ಬಸವಣ್ಣನ ಎಲ್ಲಾ ಕರಣಗಳು ಪರಶಿವನನ್ನು ತುಂಬಿಕೊಂಡಿವೆ. ಇದು ಭಕ್ತನ ಸರ್ವಾರ್ಪಣ ಭಾವಸಿದ್ಧಿಸಿ, ಸಮಸ್ತ ವ್ಯಕ್ತಿತ್ವವೂ ಶಿವಾರ್ಪಿತವಾಗಿರುವುದನ್ನು 'ತುಂಬಿ' ಎನ್ನುವ ಪದಗಳಲ್ಲಿ ಹಿಡಿದಿಟ್ಟಿದ್ದಾನೆ. 'ತುಂಬಿ' ಎಂಬ ಪದ 'ತುಂಬುವುದು' ಅಥವಾ 'ಪರಿಪೂರ್ಣವಾಗುವುದು' ಎಂಬ ಅರ್ಥ ನೀಡಿದರೆ ಇನ್ನೊಂದರ್ಥ 'ತುಂಬಿ' ಎಂದರೆ 'ಭ್ರಮರ'ಎಂಬರ್ಥವೂ ಇದೆ. ಕಮಲದ ಪುಷ್ಪಕ್ಕೆ ಎರಗುವ ಅದರ ಮಕರಂದ ಹೀರಿ ತೃಪ್ತನಾಗುವ, ಪರಶಿವನ ಪಾದಕಮಲಗಳಲ್ಲಿ ಭೃಂಗವಾಗಿ ವಿರಮಿಸಬೇಕೆನ್ನುವ ಭಾವವನ್ನು ವ್ಯಕ್ತಪಡಿಸುತ್ತದೆ.

"ನಾನು ನಿನಗೊಲಿದೆನು, ನೀನು ಎನಗೊಲಿದೆ
ನೀನೆನ್ನನಗಲದಿಪ್ಪೆ, ನಾನಿನ್ನನಗಲದಿಪ್ಪೆ
ನಿನಗೆ ಎನಗೆ ಬೇರೆ ಠಾವುಂಟೆ?
ನೀನು ಕರುಣೆಯೆಂಬುದ ಬಲ್ಲೆನು
ನೀ ನಿರಿಸಿದ ಗತಿಯೊಳಗಿಪ್ಪವಳಾನು
ನೀ ಬಲ್ಲೆ, ಚೆನ್ನಮಲ್ಲಿಕಾರ್ಜುನ"
"ಜಲದೊಳಗೆ ಹುಟ್ಟಿದ ಬುದ್ಬುದಂಗಳು ಆಜಲದೊಳಗೆ ಅಡಗುವಂತೆ
ನಿನ್ನವರೊಳಗೆ ನೀನಿಪ್ಪ ಭೇದವ ಬಲ್ಲವರಾರಯ್ಯ?
ನಿಮ್ಮ ಶರಣರ ದೇಹಿಕ ದೇವನಾಗಿ
ಮಹಾದೇವ ನೊಡಗೊಡಿಪ್ಪ ಭೇದವ ಬಲ್ಲವರಾರಯ್ಯ?–"

ಅಕ್ಕಮಹಾದೇವಿ ಮತ್ತು ಸಿದ್ಧರಾಮನ ಈ ವಚನಗಳಲ್ಲಿ ಸತಿ–ಪತಿ ಭಾವವಿದೆ. ದೇವ–ಭಕ್ತನ ಅನ್ಯೋನ್ಯ ಸಂಬಂಧವಿದೆ. ಅಂಗ–ಲಿಂಗಗಳು ಪರಸ್ಪರ ಒಲಿದು ಒಂದಾಗಿರುವ ಭಾವವಿದೆ. ನೀನಿರಿಸಿದಂತೆ, ನೀನಾಡಿಸಿದಂತೆ ನಾನಿರುವೆ ಎಂದು ಅಕ್ಕ ಹಾಡಿದರೆ, ನಾನು ನೀನು ಬೇರೆಬೇರೆಯಲ್ಲ. ನಾನು ನಿನ್ನೊಳಗೆ , ನೀನು ನನ್ನೊಳಗೆ ಇರುವ ಭೇದವನ್ನು ಯಾರು ಬಲ್ಲರು? ಎಂದು

ಸಿದ್ಧರಾಮ ಪ್ರಶ್ನಿಸುತ್ತಾನೆ. ಭಕ್ತ- ಭಗವಂತ ಪರಸ್ಪರ ದೂರವಾಗಿರಲು ಸಾಧ್ಯವಿಲ್ಲ. ಭಕ್ತನಲ್ಲಿ ಭಗವಂತ, ಭಗವಂತನಲ್ಲಿ ಭಕ್ತನಿದ್ದಾನೆ ಅವರಿಬ್ಬರ ಭಕ್ತಿ ಮತ್ತು ಪ್ರೇಮವು ತಾದಾತ್ಮ್ಯದಿಂದ ಕೂಡಿದೆ. ಭಕ್ತನು ತನು-ಮನ ಹೃದಯಗಳಲ್ಲಿ ಭಗವಂತನನ್ನೆ, ಅವನ ನಿಲುವನ್ನೇ ತುಂಬಿಕೊಂಡು ಅವಿಕಳವಾದ ಅನುಸಂಧಾನದಿಂದ ಪರಿಶುದ್ಧ ಭೂಗೋಪಭೋಗಗಳನ್ನು ಅನುಭವಿಸುವವನು ಪರಶಿವನು. ತನ್ನಂಗವನ್ನು ತನ್ನ ಅಂತರ್ಗತವನ್ನಾಗಿ ಮಾಡಿಕೊಂಡಿರುವುದರಿಂದ ಭಕ್ತನ ಪ್ರಾಣ ಪರಮಾತ್ಮನಲ್ಲಿಯೆ ಅಡಗಿದೆ.

ಭಕ್ತನ ಪಂಚೇಂದ್ರಿಯಗಳಲ್ಲಿ ಸಾಕ್ಷಾತ್ಕಾರವಾಗಿ ಬಂದ ಪರಶಿವನ ಪಂಚಮುಖಗಳನ್ನು ಶಿವಲೆಂಕ ಮಂಚಣ್ಣ ಭಾವನಾತ್ಮಕವಾಗಿ ವರ್ಣಿಸುತ್ತಾನೆ.

"ಗಂಧವನರಿವುದಕ್ಕೆ ನಾಸಿಕವಾಗಿ ಬಂದು
ರಸವನರಿವುದಕ್ಕೆ ಜಿಹ್ವೆಯಾಗಿ ಬಂದು
ರೂಪವನರಿವುದಕ್ಕೆ ಅಕ್ಷಿಯಾಗಿ ಬಂದು
ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು
ಇಂತೀ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ
ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೆ"

ಒಬ್ಬ ಮಾನವ ಪಂಚೇಂದ್ರಿಯಗಳ ಮೂಲಕ ರುಚಿ, ವಾಸನೆ, ಸ್ಪರ್ಶ, ನೋಟ ಮತ್ತು ಶಬ್ದಗಳನ್ನು ಅರಿಯುತ್ತಾನೆ. ಇದು ಲೋಕದ ವ್ಯಾಪಾರ. ಆದರೆ ಅನುಭಾವಿಯೂ, ಭಕ್ತನೂ ಆದ ಶಿವಶರಣನು ಆಯಾ ಇಂದ್ರಿಯಗಳೆಲ್ಲೆಲ್ಲಾ, ಅವುಗಳ ಕ್ರಿಯೆಗಳೆಲ್ಲೆಲ್ಲಾ ಪರಮಾತ್ಮನ ಅಸ್ತಿತ್ವವನ್ನೇ ಕಾಣುತ್ತಾನೆ. ಆದ್ದರಿಂದ ಆಯಾ ವಿಷಯಗಳಾದ ರುಚಿ, ವಾಸನೆ, ಸ್ಪರ್ಶ, ನೋಟಗಳನ್ನು ಅನುಭವಿಸುವವನು ಅವನೆ ಹೊರತು ನಾನಲ್ಲ. ಅವನ ಮೂಲಕ ತನ್ನ ಅನುಭವಕ್ಕೆ ಬರುತ್ತವೆ ಎಂದು ಹೇಳಿದ್ದಾನೆ. ಅನುಭಾವಿಯು ಪರಶಿವನ ಕೈಯೊಳಗಿನ ಒಂದು ಸೂತ್ರದ ಗೊಂಬೆಯಂತೆ. ಆತನು ಒಪ್ಪಿಸಿದ ಕಾರ್ಯವನ್ನು ಸಮಾಪ್ತಿಗೊಳಿಸುತ್ತಾನೆ. ಹೀಗೆ ಲಿಂಗಾಂಗಗಳು ಪರಸ್ಪರ ತಮ್ಮಿಚ್ಛೆಗಳನ್ನು ಪೂರೈಸಿಕೊಳ್ಳುತ್ತವೆ.

ಶಿವ ಹಾಗೂ ಶಕ್ತಿಗಳ ಈ ಅವಿನಾಭಾವ ಸಂಬಂಧವನ್ನು ಅರಿತು ಅಳವಡಿಸಿಕೊಂಡವನೆ 'ಲಿಂಗಸಂಗಿ' ಎನಿಸಿಕೊಳ್ಳುತ್ತಾನೆ.

ಈ ಸಂಕಲನದಲ್ಲಡಗಿರುವ ೧೦೮ ವಚನಗಳು ಅನೇಕ ವಿಚಾರಗಳನ್ನು ಅನುಭಾವ ಸಂಪತ್ತನ್ನು ಹುದುಗಿಸಿಕೊಂಡಿವೆ. ಲಿಂಗಾಂಗದ ಅವಿನಾಭಾವ ಸಂಬಂಧಗಳನ್ನು ತಿಳಿಸುವ ವಚನಗಳ ಅಭಿವ್ಯಕ್ತಿ ಬೇರೆ ಬೇರೆಯೆಂದು ಕಂಡುಬಂದರೂ ಅವುಗಳ ವಿಚಾರವಾಹಿನಿ ಒಂದೇ ಆಗಿದೆ. ಪರಶಿವನ ಬ್ರಹ್ಮಾಂಡ ಸ್ವರೂಪವನ್ನು, ಅವನ ಲೀಲೆ, ಭಕ್ತ ಮತ್ತು ಭಗವಂತನ ನಡುವಿನ ಸಂಬಂಧ, ಅವನ ಮಹತ್ವಗಳನ್ನು ಸ್ತೋತ್ರ ರೂಪದಲ್ಲಿ ಶರಣರು ಸ್ತುತಿಸಿದ್ದಾರೆ. ಘನವಾದ ಮತ್ತು ಅನುಭಾವಕ್ಕೆ ಸಂಬಂಧಪಟ್ಟ ವಿಚಾರಗಳಿದ್ದರು ವಚನಗಳು ಬಹಳ ಸರಳವಾಗಿವೆ. ಕ್ಲಿಷ್ಟ ಪದಗಳಿಲ್ಲದೆ ಅರ್ಥವಾಗುವಂತಹ ಭಾಷೆಯನ್ನೇ ಬಳಸಿದ್ದಾರೆ. ಕೆಲವು ವಚನಗಳು ಸಾಹಿತ್ಯಿಕ ಅಂಶವನ್ನು ಕಡೆಗಣಿಸಿದಂತೆ ಕಂಡು ಬರುತ್ತವೆ. ಆದರೆ ಅಲ್ಲೆಲ್ಲ ಅನುಭಾವವೇ ಮುಖ್ಯವಾಗಿದೆ. ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮೊದಲಾದ ವಚನಕಾರರ ವಚನಗಳು ಉಪಮೆಗಳನ್ನು ಬಳಸಿಕೊಂಡು ಕಾವ್ಯಮಯವಾಗಿವೆ.

ಬಹಳಷ್ಟು ವಚನಗಳಲ್ಲಿ ಬಂದ ಪ್ರಾಸ, ಅನುಪ್ರಾಸಗಳು ವಚನಕ್ಕೆ ಏಕತಾನತೆಯನ್ನು ತಂದುಕೊಡುತ್ತವೆ. ಇಡಿ ವಚನದ ಪ್ರತಿ ಸಾಲಿನಲ್ಲಿ ಒಂದೊಂದೆ ಶಬ್ದ ಬದಲಾಗುವ ಮೂಲಕ ಉಳಿದೆಲ್ಲ ಶಬ್ದಗಳನ್ನು ವಚನದುದ್ದಕ್ಕೂ ಉಳಿಸಿಕೊಂಡಿರುವುದು ಕಂಡುಬರುತ್ತದೆ. ಕೆಲವು ಕಡೆ ವಚನಗಳ ನಿರೂಪಣೆ ಶಾಸ್ತ್ರದಂತೆ ಬಿಗಿಯಾಗಿಯೂ ಅಭಿವ್ಯಕ್ತಗೊಂಡಿವೆ. ಇದರಲ್ಲಿರುವ ಘಹನವಾದ ವಿಚಾರಗಳು ಮನತಟ್ಟುತ್ತವೆ. ೧೦೮ ವಚನಗಳಿಂದ ಕೂಡಿದ ಈ ಚಿಕ್ಕ ಸಂಕಲನದ ಉದ್ದಕ್ಕು ಪರಶಿವನ ಸಾಕಾರ–ನಿರಾಕಾರ, ಸಗುಣವರ್ಣನೆ, ಭಕ್ತನೊಡನೆ ಅವನಿಗಿರುವ ಸಂಬಂದ, ಲಿಂಗಾಂಗ ಸಾಮರಸ್ಯಗಳನ್ನು ಸ್ತೋತ್ರರೂಪದಲ್ಲಿ ವರ್ಣಿಸಿದ್ದಾರೆ. ಪರಶಿವನನ್ನು ಸ್ತುತಿಸಿದ ಎಲ್ಲಾ ವಚನಗಳನ್ನು ಒಂದೆಡೆ ಹಿಡಿದಿಟ್ಟಿರುವುದು ಸಂಕಲನದ ವೈಶಿಷ್ಟ್ಯ.

೧೨. "ಅನುಭಾವ ಜ್ಞಾನ ಸಾರಾಮೃತ ಸಂಪಾದನೆಯ ಸ್ತೋತ್ರ"

* ಸಂಪಾದನೆಯ ಪರ್ವತೇಶ.

ಪರ್ವತೇಶ್ವರ ಮತ್ತು ಪರ್ವತೇಂದ್ರ ಎಂಬ ಹೆಸರಿನ ಇಬ್ಬರು ವ್ಯಕ್ತಿಗಳು ತೋಂಟದ ಸಿದ್ದಲಿಂಗಯತಿಯ ಶಿಷ್ಯ ಪರಂಪರೆಯಲ್ಲಿ ಬರುತ್ತಾರೆ. ಪರ್ವತೇಂದ್ರನು ಎಳಮಲೆಯ ಗುರುಶಾಂತದೇವರ ಶಿಷ್ಯ ಮತ್ತು ವಿರಕ್ತ ತೋಂಟದಾರ್ಯನ ಗುರು. ಈತನ ವಿಚಾರವಾಗಿ ಹೆಚ್ಚಿನ ಮಾಹಿತಿ ದೊರೆಯುತ್ತಿಲ್ಲ. ಆದರೆ ಪರ್ವತೇಶ್ವರನ ಬಗ್ಗೆ ವಿವರವಾದ ಮಾಹಿತಿ ಸಿಗುತ್ತದೆ. ಈ ಪರ್ವತೇಶ್ವರನೇ ಸಂಪಾದನೆಯ ಪರ್ವತೇಶ.

ಈ ಸಂಕಲನದ ಆರಂಭದ ಗದ್ಯದಲ್ಲಿ "–ಸಂಪಾದನೆಯ ಪರ್ವತಾಹ್ವಯಾಚಾರ್ಯರು ಸಂಗ್ರಹಿಸಿದ 'ಅನುಭಾವ ಜ್ಞಾನ ಸಾರಾಮೃತ ಸಂಪಾದನೆಯ ಸ್ತೋತ್ರ' ಎಂದು ಹೇಳಿರುವುದರಿಂದ ಸಂಕಲನ ಕರ್ತೃ 'ಸಂಪಾದನೆಯ ಪರ್ವತಾಚಾರ್ಯ' ಎಂಬುದು ಸ್ಪಷ್ಟವಾಗುತ್ತದೆ.

ಸಂಪಾದನೆಯ ಪರ್ವತೇಶ್ವರ ವೀರಶೈವ ಕವಿ, ಸಂಪಾದನಕಾರ. ಈತನನ್ನು ಪರ್ವತಾಚಾರ್ಯ, ಪರ್ವತಾಹ್ವಯಾಚಾರ್ಯ, ಸಂಪಾದನೆಯ ಪರ್ವತೇಶ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈತನು ಸಂಪಾದನೆಯ ಚೆನ್ನಮಲ್ಲಿಕಾರ್ಜುನ ದೇವನ ಶಿಷ್ಯನಾಗಿದ್ದಾನೆ. ಈತ 'ಚತುರಾಚಾರ್ಯ ಪುರಾಣ'ವನ್ನು (ಚಾರಿತ್ರ) ೧೬೯೮ರಲ್ಲಿ (ಶಕ ೧೬೮೯ನೇ ಈಶ್ವರ ವರ್ಷ) ಬರೆದಂತೆ ಹೇಳಿಕೊಂಡಿದ್ದಾನೆ. ಇವಿಷ್ಟು ಮಾಹಿತಿ ಬಿಟ್ಟರೆ ಈತನ ವೈಯಕ್ತಿಕ ವಿಚಾರಗಳಾವುವು ದೊರೆಯುವುದಿಲ್ಲ. ಈತನ ಹೆಸರಿನ ಹಿಂದೆ 'ಸಂಪಾದನೆ' ಎಂಬ ವಿಶೇಷಣ ಇರುವುದರಿಂದ ಈತ ಅನೇಕ ಕೃತಿಗಳನ್ನು ಸಂಪಾದಿಸಿರುವ ಸಾಧ್ಯತೆ ಇದೆ.

'ಅನುಭವ ಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರ'ದಲ್ಲಿ ಒಟ್ಟು ೩೯ ವಚನಕಾರರ ೧೭೩ ವಚನಗಳು ಸಂಗ್ರಹಗೊಂಡಿವೆ. ಸಂಕಲನದಲ್ಲಿಯ ೫೯–೬೦ನೇ ವಚನಗಳು ಬೇರೆ ಬೇರೆಯೆಂದು ಕೃತಿಯನ್ನು ಸಂಪಾದಿಸಿದ ಶ್ರೀ ಬಿ.ಆರ್.ಹೂಗಾರ್ ಅವರು ತಿಳಿಸಿದ್ದಾರೆ. ಇವೆರಡು ವಚನಗಳು ಪ್ರತ್ಯೇಕ ಎಂದಾದರೆ ಒಟ್ಟು ವಚನಗಳ ಸಂಖ್ಯೆ ೧೭೪ ಆಗುತ್ತದೆ.

ಕನ್ನಡ ಅಧ್ಯಯನ ಪೀಠದ ಹಸ್ತ ಪ್ರತಿ ಭಂಡಾರದಲ್ಲಿ ದೊರೆತ ೧೧೫/೨ ಕ್ರಮಾಂಕದ ಏಕೈಕ ಹಸ್ತ ಪ್ರತಿಯಲ್ಲಿ ೧೯ ಮತ್ತು ೨೮ನೇಯ ಗರಿಗಳು ಕಳೆದು ಹೋಗಿರುವುದರಿಂದ ಒಟ್ಟು ೧೯ ವಚನಗಳು ದೊರೆಯುತ್ತಿಲ್ಲ. ಹಾಗಾಗಿ ಈಗ ಮುದ್ರಿತವಾಗಿರುವ ವಚನಗಳ ಸಂಖ್ಯೆ ೧೫೩

ಆಗುತ್ತದೆ. ಈ ಕೃತಿಗೆ ಸಂಬಂಧಿಸಿದ ಬೇರೆ ಬೇರೆ ಹಸ್ತ ಪ್ರತಿಗಳು ದೊರೆತಲ್ಲಿ ಸಂಕಲನವನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ.[೩೬]

ಈ ಸಂಕಲನದ ಹೆಸರೇ ಹೇಳುವಂತೆ ಶರಣರ ಅನುಭಾವದ ವಚನಗಳು ಇಲ್ಲಿ ಸಂಗ್ರಹಗೊಂಡಿವೆ. ಇಲ್ಲಿ ಯಾವುದೇ ಸ್ಥಲ ವಿಭಜನೆ ಇಲ್ಲ. ಚನ್ನಬಸವಣ್ಣನವರ ವಚನಗಳಿಂದ ಆರಂಭವಾಗಿ ಉರಿಲಿಂಗಪೆದ್ದಿಯ ವಚನದೊಂದಿಗೆ ಮುಕ್ತಾಯವಾಗುತ್ತದೆ.

ವಚನಕಾರರು ಅದ್ವಿತೀಯ ಜ್ಞಾನಿಗಳಾಗಿದ್ದಾರೆ. ಇವರ ವಚನಗಳಲ್ಲಿ ಹೃದಯದ ಮಾರ್ದವತೆ, ಆತ್ಮವಿಶ್ಲೇಷಣೆ, ಭಕ್ತಿಯ ಆರ್ತತೆ, ಅನುಭಾವದ ಆಧ್ಯಾತ್ಮಿಕ ಪ್ರಪಂಚದ ಅತ್ಯುನ್ನತ ಮೂಹೂರ್ತ ಭಾವನೆಯ ಸಮರ್ಥ ಅಭಿವ್ಯಕ್ತಿ ಇದೆ. ಇಂತಹ ವಚನಗಳನ್ನು 'ಆತ್ಮ ಸಾಹಿತ್ಯ' ವೆಂದು ಕರೆಯಬಹುದು. ಚೆನ್ನಬಸವಣ್ಣನವರು 'ದೇವಲೋಕಕ್ಕೆ ಬಟ್ಟೆ ಕಾಣಿರೊ' ಎಂದು ಹೇಳಿದ್ದಾರೆ. ಮನದ ಮೈಲಿಗೆಯನ್ನು ಕಳೆದು, ಆಧ್ಯಾತ್ಮಿಕ ಪ್ರಪಂಚದ ಅನುಭಾವ ಜ್ಞಾನವನ್ನು ಧಾರೆಯರೆಯುತ್ತವೆ. ಅನುಭಾವಗಳ ಅತ್ಯಂತ ವಿಸ್ತಾರವಾದ ವಿವೇಚನೆ ಇಲ್ಲಿ ಸಂಗ್ರಹವಾಗಿರುವ ವಚನಗಳ ಮುಖ್ಯ ಆಶಯವಾಗಿದೆ.

'ಅನುಭಾವ' ಎಂದರೆ ಸಾಮಾನ್ಯ ಅನುಭವವಲ್ಲ. ಅದು ಉಚ್ಚಮಟ್ಟದ ಅತೀಂದ್ರಿಯಾನುಭವ. ಜೀವಾತ್ಮ-ಪರಮಾತ್ಮರ ಏಕರಸತ್ವದ, ಲಿಂಗಾಂಗಗಳ ಸಮರಸತ್ವದ ಅನುಭವ. ಇದು ಅತಿ ಮಾನಸವು, ಅತ್ಯಂತ ಸೂಕ್ಷ್ಮವು ಆದ ಆತ್ಮಸರ್ವಸ್ವವನ್ನು ತುಂಬಿಕೊಳ್ಳುವಂತಹದ್ದು. ನಿರಾಲಂಭ ಆನಂದವನ್ನುಂಟು ಮಾಡುವಂತಹದು.

ಅನುಭಾವ ಸಾಧಕನ ರೋಮ ರೋಮಗಳಲ್ಲಿ ನೆಲೆಯಾಗಿ, ರಕ್ತದ ಕಣ ಕಣದಲ್ಲಿ ತುಂಬಿ ಅವನು ಜಾಗ್ರತ್, ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ ತನ್ನೊಳಗಿರುವ ತುರೀಯಾವಸ್ಥೆಯನ್ನು ಅನುಭವಿಸಲಾರಂಭಿಸುತ್ತಾನೆ. ಇದು ಸಾಮಾನ್ಯ ಬುದ್ಧಿಗೆ, ವಿಚಾರ ಶಕ್ತಿಗೆ, ತರ್ಕಕ್ಕೆ ನಿಲುಕಲಾರದು. ಲಿಂಗಾಂಗ ಸಾಮರಸ್ಯವನ್ನು ಅನುಭವಿಸುವ ಅನುಭಾವಿಗೆ ಅನುಭವವೆ ಮುಖ್ಯ ಎಂಬುದನ್ನು ಚೆನ್ನಬಸವಣ್ಣನವರು

" ಭಕ್ತಿಗೆ ಅನುಭಾವವೇ ಬೀಜ ಕಾಣಿರೋ
ಭಕ್ತಿಗೆ ಅನುಭಾವವೇ ಆಚಾರ ಕಾಣಿರೋ
ಅನುಭಾವವಿಲ್ಲದ ಭಕ್ತಿ ಎಳತಟಗೊಳಿಸಿತ್ತು
ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿರ್ದಡೆ
ಕೂಡಲ ಚೆನ್ನಸಂಗಮದೇವ ಅವರ ಅಘೋರ ನರಕದಲ್ಲಿಕ್ಕುವ" (ವ-೨೬)

"ಅನುಭಾವವೆಂಬುದು ಆತ್ಮವಿದ್ಯೆ, ಅನುಭಾವವೆಂಬುದು ತಾನಾರೆಂಬುದ ತೋರುವುದು, ಅನುಭಾವವೆಂಬುದು ನಿಜ ನಿವಾಸದಲ್ಲಿರಿಸುವುದು" (ವ-೧೨) ಇಂತಹ ಅನುಭಾವವನ್ನು ಅರಿಯದೆ ಶಾಸ್ತ್ರಗಳ ಬಲೆಯಲ್ಲಿ ಸಿಲುಕಿ ಗೋಳಾಡುವವರನ್ನು ಶರಣರು ಖಂಡಿಸಿದ್ದಾರೆ. ಅನುಭಾವವೇ ಎಲ್ಲಕ್ಕೂ ಮೂಲ.

೩೬. ಬಿ.ಆರ್.ಹೂಗಾರ, (ಸಂ) 'ಅನುಭಾವ ಜ್ಞಾನ ಸಾರಾಮೃತ ಸಂಪಾದನೆಯ ಸ್ತೋತ್ರ'. ಪ್ರಪುಟ- vii. ಪ್ರಕಟಣೆ- ವೀರಶೈವ ಅಧ್ಯನ ಸಂಸ್ಥೆ. ಶ್ರೀ.ಜ.ತೋಂ.ಸಂ.ಮಠ, ಗದಗ.

" ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವದನುವಿನಲ್ಲಿ ಗುಹೇಶ್ವರ ಲಿಂಗ ಅನುಪಮ ಸುಖಿ" (ವ-೨೦)

ಶರಣರು ವಿಷಯ ಸುಖಗಳಿಗೆ ಮಾರು ಹೋಗದೆ ಅವುಗಳು ಕ್ಷಣಿಕ ಹಾಗೂ ದುಃಖ ಮೂಲ ಮತ್ತು ಪರವಶವೆಂದರಿದು, ದೇಹ ಪ್ರಾಣ ಮನಗಳ ಚಲನವಲನ, ಚಟುವಟಿಕೆಗಳನ್ನು ವಿಷಯ ಸುಖಕ್ಕಾಗಿ ಉಪಯೋಗಿಸದೆ ಆಧ್ಯಾತ್ಮಿಕ ಪ್ರಗತಿಗಾಗಿ, ಆತ್ಮನ ಉನ್ನತಿಗಾಗಿ ಉಪಯೋಗಿಸಿದರು. ಆಧ್ಯಾತ್ಮ - ಜ್ಞಾನ ನಿತ್ಯತ್ವವೇ ಜೀವನದ ಪರಮ ಧ್ಯೇಯವೆಂಬುದನ್ನು ಮನಗಂಡ ಶರಣರು " ಜ್ಞಾನದ ಬಲದಿಂದ ಅಜ್ಞಾನ ಕೆಡುವುದು ನೋಡಯ್ಯ, ಜ್ಯೋತಿಯ ಬಲದಿಂದ ಕತ್ತಲೆ ಕೆಡುವುದು ನೋಡಾ, ಸತ್ಯದ ಬಲದಿಂದ ಅಸತ್ಯ ಕೆಡುವುದು ನೋಡಾ" (ವ-೩೪) ಎಂದು ಭಾವಿಸಿದರು.

ಸ್ವರ್ಗಾದಿಗಳಿಗಿಂತ ಆತ್ಮಾನಂದವೆ ಮುಖ್ಯ. ಅದನ್ನು ಪಡೆಯಲು ಸಮರ್ಥ ಗುರು ಬೇಕು. ಗುರುವು ತೋರಿದ ಶಿವಪಥವಿಡಿದು ಲಿಂಗಾಂಗ ಸಮರಸಾನಂದವನ್ನು ಪಡೆದರು. ಆ ಬಳಿಕ ಶರಣನು ನಿರಾಳನು, ನಿರ್ಲಿಪ್ತನೂ ಆಗುತ್ತಾನೆ.

" ತನು ನಷ್ಟ, ಮನ ನಷ್ಟ, ನೆನಹು ನಷ್ಟ
ಭಾವ ನಷ್ಟ, ಜ್ಞಾನ ನಷ್ಟ
ಇಂತೀ ಪಂಚ ನಷ್ಟದೊಳಗೆ ನೀನು ನಷ್ಟವಾದೆ
ಕಲಿದೇವರ ದೇವ ಎಂಬ ನುಡಿ ಶಬ್ದ ಬ್ರಹ್ಮವಾಗಿದ್ದಿತು" (ವ-೧೫೩)

ಗುರೂಪದೇಶ ಮತ್ತು ಸಾಧನೆಯ ಮೂಲಕ ಗಳಿಸಿಕೊಂಡ ಅನುಭಾವ ಸಂಪತ್ತು, ಸತ್ಯ ಶುದ್ಧ ಕಾಯಕದಿಂದ ಬಂದ ಅರ್ಥ ಸಂಪತ್ತು ಸಮಾಜ ಕಲ್ಯಾಣಕ್ಕಾಗಿ ದಾಸೋಹದ ಮೂಲಕ ವಿನಿಯೋಗವಾಗಬೇಕು. ಅದ್ವೈತದ ಸಾಕ್ಷಾತ್ಕಾರಕ್ಕಾಗಿ ಶಿಷ್ಯನು ಗುರು ಕರುಣಿಸಿದ ಇಷ್ಟಲಿಂಗವನ್ನು ಶರಣ ಸತಿ-ಲಿಂಗ ಪತಿ ಭಾವದಿಂದ ಪೂಜಿಸಿ, ಐಕ್ಯ ಸ್ಥಲದಲ್ಲಿ ಲಿಂಗಾಂಗ ಸಾಮರಸ್ಯದ ಆನಂದವನ್ನು ಅನುಭವಿಸುತ್ತಾನೆ. ಇಂತಹ ಅನುಭವ ಘನವಾಗಿ ಪಕ್ವಗೊಂಡು ಅಭಿವ್ಯಕ್ತವಾದುದೆ ಅನುಭಾವ. ಪ್ರಸ್ತುತ ಸಂಕಲನ ಕೃತಿಯಲ್ಲಿ ಅನುಭಾವದ ಎಲ್ಲ ಮುಖಗಳ ಪ್ರತಿಪಾದನೆಯಿಲ್ಲ. ಒಂದು ಸಾಮಾನ್ಯ ನಿರೂಪಣೆ ಮಾತ್ರ ಇದೆ.

- - -

೨. ತತ್ವ ಪ್ರಧಾನ ಸಂಕಲನಗಳು:

'ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ'- ಇದು ವೀರಶೈವದ ತತ್ವ ಸ್ವರೂಪ, ಸಾಕಾರ ರೂಪ. ಇದೊಂದು ಸುಂದರ ರೂಪಕ, ತತ್ವಕ್ಕೂ ಒಂದು ವ್ಯಕ್ತಿಯ ಸ್ವರೂಪವನ್ನು ಕೊಟ್ಟ ಹೆಗ್ಗಳಿಕೆ ವೀರಶೈವ ಶರಣರದು. ವ್ಯಕ್ತಿತ್ವ ಮಹತ್ವವನ್ನು ಕಂಡು ಕೊಂಡುದರ ಕುರುಹು ಇದು. ಅಸ್ತಿತ್ವದಲ್ಲಿರುವ ವ್ಯಕ್ತಿ ಸ್ವರೂಪಕ್ಕೆ ಅಂಗ, ಪ್ರಾಣ, ಆತ್ಮಗಳು ಬಹು ಮುಖ್ಯ. ಈ ಮೂರರಲ್ಲಿ ಯಾವುದೊಂದು ಇಲ್ಲದಿದ್ದರೂ ವ್ಯಕ್ತಿ ರೂಪ ಪರಿಪೂರ್ಣವಾಗುವುದಿಲ್ಲ. ಇವರು ಕಲ್ಪಿಸಿಕೊಂಡಿರುವ ತತ್ವ ಅಮೂರ್ತವಾದುದು. ಅದೊಂದು ಬಯಲ ಭ್ರಮೆ. ಆದರೆ ಅದನ್ನು ಉಪಾಸಿಸುವ ಭಕ್ತ ತ್ರಿಕರಣಗಳನ್ನು ಹೊತ್ತು ವ್ಯಕ್ತನಾಗಿದ್ದಾನೆ. ಇವನು ಹೊತ್ತು ತಂದ ಸ್ಥೂಲ, ಸೂಕ್ಷ್ಮ, ಕಾರಣ ತನುಗಳೂ ಸಹ ಪವಿತ್ರವಾಗಿ ಪರತತ್ವದಲ್ಲಿ ಲೀನವಾಗಬೇಕಾದರೆ ತತ್ವವೂ ಸಹ ಆ ಮೂರು ರೂಪಗಳನ್ನು ಧರಿಸಿ ಬರುತ್ತದೆ. ಭಕ್ತನ ಏಳಿಗಿಗಾಗಿ ಆ ಪರತತ್ವವು ತ್ರಿವಿಧ ಅಂಗಗಳನ್ನು ಧರಿಸಿ ಬರಬೇಕಾಯಿತು. ಹಾಗಾಗಿಯೇ ವೀರಶೈವ ತತ್ವಕ್ಕೂ ಒಂದು ವ್ಯಕ್ತರೂಪವಿದೆ. ಅದಕ್ಕೂ ಅಂಗವಿದೆ, ಪ್ರಾಣವಿದೆ, ಆತ್ಮವಿದೆ.

ಅಂಗ ಆಕಾರವಾದರೆ, ಪ್ರಾಣ-ಆತ್ಮಗಳೆರಡು ನಿರಾಕಾರ, ನಿರಾಕಾರಗಳಾದ ಪ್ರಾಣ-ಆತ್ಮಗಳ ವ್ಯಕ್ತರೂಪಕ್ಕೆ ಅಂಗವೇ ಮುಖ್ಯ. ಅಂಗವೇ ಪ್ರಾಣ-ಆತ್ಮಗಳ ಸಹಕಾರದಿಂದ ಲಿಂಗವಾಗುವುದು. ಅಂಗ-ಲಿಂಗವಾಗುವುದಕ್ಕೆ ವೀರಶೈವದ ಈ ತತ್ವಗಳು ಬಹುಮುಖ್ಯ.

ವೀರಶೈವ ಧರ್ಮದ ವಚನ ಶಾಸ್ತ್ರದಲ್ಲಿ 'ಸ್ಥಲಕಟ್ಟು' ಬಹು ಮಹತ್ವದ ವಿಷಯವಾಗಿದೆ. ಷಟ್‌ಸ್ಥಲವೇ ವಚನ ಶಾಸ್ತ್ರಕ್ಕೆ ತಳಹದಿಯಾಗಿದೆ. ವೀರಶೈವ ಶರಣರು ಲಿಂಗಾಂಗ ಸಾಮರಸ್ಯಕ್ಕೆ ಅನುಕೂಲವಾದ ಸ್ಥಲಕಟ್ಟುಗಳನ್ನು ರೂಪಿಸಿಕೊಂಡರು. 'ಸ್ಥಲ' ಎಂಬುದು ವೀರಶೈವದಲ್ಲಿ ಒಂದು ವಿಶಿಷ್ಟ ಪರಿಭಾಷೆ. ಅವರ ದೃಷ್ಟಿಯಲ್ಲಿ ಸ್ಥಲ ಎಂದರೆ 'ಲಿಂಗ' ಅಥವಾ ಲಿಂಗವನ್ನು ಕಾಣಲು ಹೋಗುವ ಸೋಪಾನವೆಂದು ಕರೆದುಕೊಂಡಿದ್ದಾರೆ.

ಪರಮಾತ್ಮನ ಅಂಶವೆನಿಸಿದ ಆತ್ಮನು ಪ್ರಕೃತಿಯಲ್ಲಿ ಸೇರಿಕೊಂಡು ಜೀವಾತ್ಮನೆನಿಸುವನು. ಸುಖ ದುಃಖಗಳನ್ನು ಅನುಭವಿಸುವುದೇ ಅವನ ಅವಸ್ಥೆ. ಇದರಿಂದ ಬಿಡುಗಡೆ ಪಡೆಯಲು ವೀರಶೈವ ದೀಕ್ಷೆ ಪಡೆದುಕೊಂಡು ಜೀವಾತ್ಮ ಶುದ್ಧಾತ್ಮನೆನಿಸಿಕೊಳ್ಳುತ್ತಾನೆ. ಈ ಶುದ್ಧಾತ್ಮನು ಲಿಂಗಾಂಗ ಸಾಮರಸ್ಯದ ಕಡೆ ಸಾಗಲು ಷಟ್‌ಸ್ಥಲಗಳ ಅವಶ್ಯಕತೆ ಇದೆ. ಇಂತಹ ಸ್ಥಲ ಪರಿಕಲ್ಪನೆ ಜಗತ್ತಿನ ಆಧ್ಯಾತ್ಮಿಕ ಪ್ರಪಂಚಕ್ಕೆ ವಚನಕಾರರು ನೀಡಿದ ವಿಶಿಷ್ಟಕೊಡುಗೆ.

ಈ ಷಟ್‌ಸ್ಥಲಗಳನ್ನು ಮುರಿದು, ಕಟ್ಟಿ, ವಿಭಜಿಸಿ ಒಂದರಿಂದ ಇನ್ನೂರ ಹದಿನಾರರವರೆಗೆ ಸ್ಥಲ ಪರಿಕಲ್ಪನೆಗಳನ್ನು ಮಾಡಿಕೊಂಡಿದ್ದಾರೆ. ಈ ಸ್ಥಲ ಕ್ರಮ ವಿಭಜನೆಯಲ್ಲಿ ಶರಣರ ದೂರ ದೃಷ್ಟಿ, ಅದ್ವೈತದ ಪೂರ್ಣ ದೃಷ್ಟಿ ಅರಳಿ ನಿಂತಿದೆ. ಸ್ಥಲಕಟ್ಟುಗಳ ಚೌಕಟ್ಟಿನಲ್ಲಿ ವೀರಶೈವ ಧರ್ಮದ ತತ್ವಗಳ ಸೂಕ್ಷ್ಮ ವಿವರಣೆ ಇದೆ. ಈ ವಿಭಜನೆಯಲ್ಲದೆ ಒಂದು ತಾತ್ವಿಕ ನೆಲೆಗಟ್ಟಿನ ಮೇಲೆ ಅಥವಾ ಒಂದು ನಿರ್ದಿಷ್ಟ ಧೋರಣೆಯ ಹಿನ್ನೆಲೆಯಲ್ಲಿ ವಚನಗಳು, ವಚನ ಸಂಕಲನಗಳು ರೂಪಿತವಾಗಿವೆ.

ವೀರಶೈವ ಧರ್ಮದಲ್ಲಿ ಅಷ್ಟಾವರಣಕ್ಕೆ ಅತಿ ಮಹತ್ವದ ಸ್ಥಾನ ನೀಡಿದ್ದಾರೆ. ಭಕ್ತನು ಸಾಧನೆಯ ಹಾದಿಯಲ್ಲಿ ಶ್ರದ್ಧೆ-ಏಕಾಗ್ರತೆಗಳನ್ನು ಸಾಧಿಸಲು ಅವಶ್ಯಕವಾದ ಎಂಟು ತತ್ವಗಳನ್ನು ಅಷ್ಟಾವರಣಗಳೆನ್ನುತ್ತಾರೆ. ಅಂದರೆ ಸಾಧಕನನ್ನು ಭೌತಿಕದಿಂದ ಪಾರು ಮಾಡುವ ಎಂಟು ಆವರಣಗಳೆಂದು ಅರ್ಥ. ಶರಣನು ಹುಟ್ಟುವಾಗ ಭವಿಯಾಗಿ ಹುಟ್ಟಿ ಅಷ್ಟಾವರಣಗಳ ಸಂಪರ್ಕ ಸಾಧನೆಯಿಂದ ಭವಿ-ಭಗವಂತನಾಗುವ ಪ್ರಕ್ರಿಯೆ ಇದು. ಇಂಥ ತಾತ್ವಿಕ ವಿಚಾರಗಳನ್ನು ಅನುಸರಿಸುವವನೇ ನಿಜವಾದ ವೀರಶೈವ. ವಚನಕಾರರೆಲ್ಲರೂ ಈ ಹಿನ್ನೆಲೆಯಲ್ಲಿಯೇ ಆಲೋಚಿಸಿದರು, ಬದುಕಿದರು, ಬರೆದರು.

ವೀರಶೈವದಲ್ಲಿ ನಂಬಿಕೆ ಇಟ್ಟು ಬಂದವರನ್ನು ಏಕಸೂತ್ರದಲ್ಲಿ ಬಂಧಿಸುವುದಕ್ಕಾಗಿ ಶರಣರು ಒಂದು ಸಾಮಾಜಿಕ ನೀತಿ ಸಂಹಿತೆಯನ್ನು, ಸಾಮಾನ್ಯರೆಲ್ಲರಿಗೂ ಅನ್ವಯಿಸುವಂತೆ ರೂಪಿಸಿದರು. ಇವು ಭಕ್ತನು ಮಹಾ ಪಾತಕಗಳಿಂದ ದೂರ ಇದ್ದು ಆಚರಿಸಬೇಕಾದ ವಿಧಿವಿಧಾನಗಳನ್ನು ಭೋಧಿಸುತ್ತವೆ. ಇವುಗಳನ್ನು ಪಂಚಾಚಾರ, ಸಪ್ತಾಚಾರವೆಂದು ಕರೆಯುತ್ತಾರೆ. ಪಂಚಾಚಾರಗಳು ಭಕ್ತನ ಬಾಹ್ಯ ವ್ಯವಹಾರಗಳಿಗೆ ಅನ್ವಯಿಸಿದರೆ, ಸಪ್ತಾಚಾರಗಳನ್ನು ಭಕ್ತನ ಆಂತರಂಗಿಕ ಶಿಸ್ತಿಗೆ ಅನ್ವಯಿಸುತ್ತವೆ. ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳ ತಾತ್ವಿಕ ಅನುಭವವು ವಚನಗಳ ಮೂಲಕ ಅಭಿವ್ಯಕ್ತವಾಗಿವೆ.

ಈ ಎಲ್ಲಾ ತಾತ್ವಿಕ ವಿಚಾರಗಳನ್ನೊಳಗೊಂಡ ವಚನಗಳನ್ನು ಬಸವಾದಿ ಶರಣರು ತಾತ್ವಿಕ ಉದ್ದೇಶದಿಂದ ಬರೆದವರಲ್ಲ. ೧೪-೧೫ನೇ ಶತಮಾನದ ೧೦೧ ವಿರಕ್ತರು ಮತ್ತು ತೋಂಟದ ಸಿದ್ದಲಿಂಗರು, ಅವರ ಶಿಷ್ಯ- ಪ್ರಶಿಷ್ಯರು, ೭೦೧ ವಿರಕ್ತರು, ವೀರಶೈವ ಧರ್ಮ ಹಾಗೂ ವಚನ ಸಾಹಿತ್ಯದ ಪುನರುತ್ಥಾನ ಕಾಲದಲ್ಲಿ ವಚನ ಸಂಗ್ರಹ, ಸಂಕಲನ, ಸಂಪಾದನ ಕಾರ್ಯದಲ್ಲಿ ತೊಡಗಿ ವಚನಗಳಲ್ಲಿ ಅಂತರ್ಗತವಾಗಿದ್ದ ವೀರಶೈವ ಧರ್ಮಕ್ಕೆ ಬೇಕಾದ ತಾತ್ವಿಕ ವಿಚಾರಗಳನ್ನು ಇಟ್ಟುಕೊಂಡು ವಚನ ಸಂಕಲನ, ಸಂಪಾದನೆ ಮಾಡಿದರು. ಅನೇಕರು ವೀರಶೈವ ಧರ್ಮದ ತಾತ್ವಿಕ ಹಿನ್ನೆಲೆಯಲ್ಲಿ ವಚನಗಳನ್ನು ರಚಿಸಿ ಜೋಡಿಸಿದರು. ತೋಂಟದ ಸಿದ್ದಲಿಂಗರು ಆ ಪ್ರಯತ್ನದಲ್ಲಿ ಮೊದಲಿಗರಾಗಿದ್ದಾರೆ. ಸಂಕಲನಕಾರರೂ ಸಹ ಸಂಪಾದನೆ ಕಾರ್ಯವನ್ನು ಒಂದು ವ್ರತವೆಂಬಂತೆ ಮಾಡಿದರು. ಈ ಪ್ರಯತ್ನದ ಫಲವೇ 'ಸಂಪಾದನ ಸಮಯ'ವು ಜನ್ಮ ತಾಳಿದೆ. 'ಸಂಪಾದನೆ' ಎಂಬ ಗುಣ ವಿಶೇಷವಿರುವ ಅನೇಕ ಮಂದಿ ಸಂಕಲನಕಾರರು ಕಂಡುಬರುತ್ತಾರೆ. ಇಲ್ಲಿ ಅವರೆಲ್ಲರ ತತ್ವಪ್ರಧಾನ ಸಂಕಲನಗಳನ್ನು ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಿಲ್ಲ. ತೋಂಟದಾರ್ಯ ಪರಂಪರೆಯ ವಚನ ಸಂಕಲನಕಾರರನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಅಂಥವರ ತಾತ್ವಿಕ ಸಂಕಲನಗಳನ್ನು ವಿಶ್ಲೇಷಿಸಲಾಗಿದೆ.

೧. ಅಷ್ಟಾವರಣ ವಚನಗಳು – ಎಳಮಲೆಯ ಗುರುಶಾಂತದೇವ
೨. ಚಿತ್ಕ್ರಿಯ ಸಂಗ್ರಹ – ಜಿಗುನಿ ಮರುಳದೇವ
೩. ಪ್ರಭುದೇವರ ಷಟ್‌ಸ್ಥಲ ಜಂಗಮ ನಿರ್ದೇಶ – ಅಜ್ಞಾತ ಸಂಕಲನಕಾರ
೪. ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ – ಸಂಪಾದನೆಯ ಬೋಳಬಸವ ಸಂಪಾದನೆಯ ವಚನಗಳು
೫. ಚಿದೈಶ್ವರ್ಯ ಚಿದಾಭರಣ – ಗುರುಸಿದ್ಧದೇವ
೬. ಜ್ಞಾನ ಷಟ್‌ಸ್ಥಲಸಾರ – ಗುರುಶಂಕರ ಸ್ವಾಮಿ
೭. ಅದ್ವೈತಾನಂದದ ವಚನಗಳು – ಅಜ್ಞಾತ ಸಂಕಲನಕಾರರ
೮. ವಿಶೇಷಾನುಭವ ಷಟ್‌ಸ್ಥಲ – ಚೆನ್ನವೀರಾಚಾರ್ಯ
೯. ಆಚರಣೆಯ ಸಂಬಂಧದ ವಚನಗಳು – ಸಂ. ಸಿದ್ಧವೀರಣ್ಣೊಡೆಯ
೧೦. ಶರಣ ಚಾರಿತ್ರದ ವಚನಗಳು – ಸಂ. ಸಣ್ಣ ಬರಹದ ಗುರುಬಸವರಾಜ ದೇವರು
೧೧. ವಿರತಾಚರಣೆಯ, ಶರಣ ಸಂಬಂಧದ ವಚನಗಳು– ಶಂಕರದೇವರು
೧೨. ಜಂಗಮ ಸ್ಥಲದ ಆಚರಣೆಯ ನಿರ್ಣಯದ ವಚನಗಳು – ಅಜ್ಞಾತ ಸಂಕಲನಕಾರ
೧೩. ಎಲ್ಲಾ ಪುರಾತರ ವಚನಗಳು – ಕುಂತೂರು ಮಹತ್ತದೇವರು
೧೪. ಶೀಲ ಸಂಪಾದನೆ – ಅಜ್ಞಾತ ವಚನ ಸಂಕಲನಕಾರ
೧೫. ಚಿದ್ಭಸ್ಮ ಮಣಿ ಮಂತ್ರ ಮಹಾತ್ಮೆಯ ಸ್ಥಲದ ವಚನಗಳು – ಜಟಾಶಂಕರ ದೇವರು
೧೬. ನಿರಸನದ ವಚನಗಳು – ಹರತಾಳ ಚೆನ್ನಂಜೇದೇವ
೧೭. ಮಿಶ್ರ ಷಟ್‌ಸ್ಥಲ ವಚನಗಳು – ಅಜ್ಞಾತ ವಚನ ಸಂಕಲನಕಾರ
೧೮. ಚೆನ್ನದಣ್ಣಾಯಕರ ವಚನ – ಚನ್ನಬಸವಣ್ಣ
೧೯. ಚೆನ್ನ ವಿರಣ್ಣೊಡೆಯರು ಸೇರಿಸಿದ ಚೆನ್ನ ಬಸವೇಶ್ವರ ದೇವರ ಮಿಶ್ರ ಷಟ್‌ಸ್ಥಲ ವಚನ – ಚೆನ್ನ ವಿರಣ್ಣೊಡೆಯ
೨೦. ಟೀಕಿನ ಏಕೋತ್ತರ ಶತಸ್ಥಲ – ಅಜ್ಞಾತ ವಚನ ಸಂಕಲನಕಾರ
೨೧. ಸಕಲ ಪುರಾತನ ವಚನ – ಅಜ್ಞಾತ ವಚನ ಸಂಕಲನಕಾರ

೧. ಅಷ್ಟಾವರಣದ ವಚನಗಳು

* ಎಳಮಲೆಯ ಗುರುಶಾಂತದೇವ

ವೀರಶೈವ ತತ್ವಗಳಲ್ಲಿ ಪ್ರಮುಖವಾದುದು ಅಷ್ಟಾವರಣ. ಶಿವ ಸ್ವರೂಪಿಯಾಗಲು ಹೊರಟ ಸಾಧಕ ಜೀವಿಯನ್ನು ಅಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳಿಂದ ರಕ್ಷಿಸಿ. ಅವನು ಪಂಚಾಚಾರಗಳನ್ನು ಪೂರೈಸಲು, ಷಟ್‌ಸ್ಥಲವನ್ನು ಸಾಧಿಸಲು ದಾರಿ ಮಾಡಿಕೊಡುತ್ತವೆ. ಅದಕ್ಕಾಗಿಯೆ ವೀರಶೈವರಿಗೆ ಅಷ್ಟಾವರಣಗಳು ಅಂಗ, ಪಂಚಾಚಾರ ಪ್ರಾಣ, ಷಟ್‌ಸ್ಥಲಗಳು ಆತ್ಮವೆಂದು ತಿಳಿಯಲಾಗಿದೆ. ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಇವು ಒಂದೇ ಶಿವತತ್ವದ ಭಿನ್ನರೂಪಗಳು ಹಾಗೂ ವೀರಶೈವ ಜೀವಾಳವಾಗಿವೆ. ಷಟ್‌ಸ್ಥಲಾಚರಣೆಯಲ್ಲಿಯೂ ಗುರು–ಲಿಂಗ–ಜಂಗಮಕ್ಕೆ ವಿಶಿಷ್ಟ ಸ್ಥಾನವಿದೆ.

ಸಚ್ಚಿದಾನಂದ ಸ್ವರೂಪವಾದ ಪರಶಿವನ ಸ್ವರೂಪವೇ ಗುರು, ಚಿದ್ರೂಪವೇ ಲಿಂಗ, ಆನಂದ ರೂಪವೇ ಜಂಗಮ. ಜಗತ್ತಿನ ಹಿತಕ್ಕಾಗಿ ಪರಶಿವನು ಕೈಗೊಂಡ ಸಾಕಾರ ರೂಪಗಳಿವು. ಈ ಮೂರರಲ್ಲಿ ಯಾವುದೂ ಹೆಚ್ಚಿಲ್ಲ. ಯಾವುದೂ ಕಡಿಮೆಯಲ್ಲ. ಸಾಧಕನಾದವನು ತನ್ನ ಜೀವನದ ಸಾಧನೆಯಲ್ಲಿ ತನು, ಮನ, ಧನಗಳನ್ನು ಅನುಕ್ರಮವಾಗಿ ಗುರು, ಲಿಂಗ, ಜಂಗಮಕ್ಕೆ ಅರ್ಪಿಸಿ ಕೃತಾರ್ಥರಾಗಬೇಕಾಗುತ್ತದೆ. ಇದನ್ನೇ ತ್ರಿವಿಧ ದಾಸೋಹ ಎಂದು ಕರೆಯುತ್ತಾರೆ. ಈ ರೀತಿಯ ತ್ರಿವಿಧ ದಾಸೋಹದಿಂದಾಗಿ ಅಣವ, ಮಾಯಾ, ಕಾರ್ಮಿಕ ಮಲಗಳಿಂದ ಮುಕ್ತನಾಗಿ ಇಚ್ಛಾ–ಕ್ರಿಯಾ–ಜ್ಞಾನ ಶಕ್ತಿಗಳನ್ನು, ಸರ್ವವ್ಯಾಪಕತ್ವ, ಸರ್ವ ಕರ್ತೃತ್ವ ಮತ್ತು ಸರ್ವಜ್ಞತೆಗಳನ್ನು ಪಡೆಯುತ್ತಾನೆ.

"ಪರಶಿವನೇ ಜೀವಾತ್ಮನಿಗೆ ಕಾಯದಲ್ಲಿ ಗುರುವಾಗಿ, ಜೀವದಲ್ಲಿ ಲಿಂಗವಾಗಿ, ಪ್ರಾಣದಲ್ಲಿ ಜಂಗಮವಾಗಿ, ಗುರುರೂಪದಿಂದ ಬೋಧೆಮಾಡಿ, ಲಿಂಗರೂಪದಿಂದ ಪೂಜೆಯನ್ನು ಕೈಕೊಂಡು ಜಂಗಮ ರೂಪಿನಿಂದ ಪಾದೋದಕ, ಪ್ರಸಾದ ಕರುಣಿಸಿ ತನ್ನ ದೇಹದ ಪ್ರಕಾಶವನ್ನೆ ಆತನ ತ್ವಕ್ಕಿನಲ್ಲಿ ಭಸ್ಮ ಸಂಬಂಧವ ಮಾಡಿ, ತನ್ನ ನೇತ್ರ ಸ್ವರೂಪವಾದ ರುದ್ರಾಕ್ಷಿಯನ್ನೆ ಆತನ ನೇತ್ರಗಳಲ್ಲಿ ಸಂಬಂಧವ ಮಾಡಿ, ತನ್ನ ನಾಮವೆಂಬ ಪಂಚಾಕ್ಷರಿಯ ಮಂತ್ರವನ್ನೆ ಆತನ ವಾಕ್ಯದಲ್ಲಿ ಸಂಬಂಧವ ಮಾಡಿ ರಕ್ಷಿಸುತ್ತಾನೆ. ಅರಿವೆ ಗುರುವಾಗಿ, ಪ್ರಾಣವೆ ಲಿಂಗವಾಗಿ, ಅನುಭವವೇ ಜಂಗಮವಾಗಿ, ಚಿತ್ ಪ್ರಕಾಶವೇ ಭಸ್ಮವಾಗಿ, ಸದ್ಗುಣಗಳೇ ರುದ್ರಾಕ್ಷಿಯಾಗಿ, ಚಿನ್ನಾದವೇ ಚಿದ್ಬಿಂದು, ಚಿತ್ಕಳೆ, ಪಾದೋದಕ ಪ್ರಸಾದಗಳಾಗಿ ಪರಿಣಮಿಸುತ್ತವೆ"[೩೬ಎ] ಎಂಬುದು ಅಷ್ಟಾವರಣ ಸಂಕಲನದ ಆಶಯವಾಗಿದೆ.

ಗುರು : ಮಾನವನು ಜನ್ಮ ಸಾರ್ಥಕ್ಯವನ್ನು ಪಡೆಯಬೇಕಾದರೆ ಗುರುವಿನ ಅನುಗ್ರಹಬೇಕು. ಮರೆವಿನ ಅಂಧಕಾರದಲ್ಲಿ ದಾರಿ ಕಾಣದೆ ಸುಮ್ಮನೆ ಅತ್ತಿತ್ತ ತಿರುಗುತ್ತಾ ಜೀವನಸಾಗಿಸುವವನಿಗೆ ಸರಿಯಾದ ಅರಿವಿನ ಬೆಳಕನ್ನು ಹಿಡಿದು ಜ್ಞಾನದ ದಾರಿಯಲ್ಲಿ ನಡೆಸುವ ಕಾಯಕವನ್ನು ಕೈಗೊಂಡವನೆ ನಿಜವಾದ ಗುರುವಾಗಬಲ್ಲನು. 'ಗುರು' ಎಂದರೆ ಆಧುನಿಕ ಪರಿಭಾಷೆಯ 'ಶಿಕ್ಷಕ'ನಲ್ಲ, ಆಚಾರ್ಯನೂ ಅಲ್ಲ. ಅವನು ಜ್ಞಾನ ಮಂದಿರದ ಗರ್ಭಗುಡಿಗೆ ತಂದು ನಿಲ್ಲಿಸಿ ಭಗವಂತನ ಸಾಕ್ಷಾತ್ಕಾರ ಮಾಡಿಸಬಲ್ಲವನಾಗಿರುತ್ತಾನೆ.

ಗುರುವಿನ ಬಗ್ಗೆ ಸಿದ್ಧಲಿಂಗ ಶಿವಯೋಗಿಗಳು
"ಸುರತರು ವೃಕ್ಷದೊಳಗಲ್ಲ, ಸುರಧೇನು ಪಶುವಿನೊಳಗಲ್ಲ,
ಪರುಷ ಪಾಷಾಣದೊಳಗಲ್ಲ, ಶಿಷ್ಯನ ಭಾವಕ್ಕೆ ಗುರು ನರನಲ್ಲ,
ಗುರುವೇ ಪರಮೇಶ್ವರನೆಂದು ಭಾವಿಸಬಲ್ಲಡೆ ಶಿಷ್ಯನೆಂಬೆನಯ್ಯಾ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ"

ಗುರುಕೃಪೆ ಪಡೆಯಬೇಕಾದ ಶಿಷ್ಯನು ಗುರುವಿನ ಸೇವೆಯನ್ನು ವಿನಯ ಪೂರ್ವಕವಾಗಿ ಕಾಯ, ವಾಚ, ಮನಸ ಮಾಡಿ ಅವನ ಅನುಗ್ರಹ ಪಡೆಯಬೇಕು."ಬಾವಿಯಲ್ಲಿ ಬೇಕಾದಷ್ಟು ನೀರು ತುಂಬಿಕೊಂಡಿರಲಿ, ಅಲ್ಲಿಗೆ ಬಿಟ್ಟ ಕೊಡವು ಭಾಗದಿದ್ದರೆ ಅದರಲ್ಲಿ ಒಂದು ಹನಿ ನೀರು

೩೬ಎ. ಡಾ॥ ವೀರಣ್ಣ ರಾಜೂರ(ಸಂ) 'ಎಳಮಲೆಯ ಗುರು ಶಾಂತದೇವರ ವಚನ ಸಂಕಲನಗಳು.' ಪ್ರಸ್ತಾವನೆ ಪುಟ.xx.

ಕೂಡಾ ಪ್ರವೇಶ ಪಡೆಯದು. ತುಂಬ ಬೇಕಾದರೆ ಭಾಗಬೇಕು. ಬೆಳೆಯಬೇಕಾದರೆ ನಮಸ್ಕರಿಸಬೇಕು. ಇಷ್ಟೆಲ್ಲವನ್ನು ನೆನಪಿನಲ್ಲಿಟ್ಟುಕೊಂಡು ವರ್ತಿಸುವ ಶಿಷ್ಯನಿಗೆ ಗುರುವಿನ ಕೃಪೆಯಾಗುವುದು ನಿಶ್ಚಿತ."[೩೭] ಗುರು ಕೃಪೆ ಪಡೆದು ಅವರು ಹೇಳಿದ ಸನ್ಮಾರ್ಗದಲ್ಲಿ ನಡೆದ ಶಿಷ್ಯ ಆದ್ಯಾತ್ಮ ಮಾರ್ಗದಲ್ಲಿ ನಡೆದು ತನ್ನ ಇಷ್ಟಾರ್ಥವನ್ನು ಸಾಧಿಸಬಲ್ಲವನಾಗುತ್ತಾನೆ.

ಭಾರತೀಯ ಪರಂಪರೆಯಲ್ಲಿ 'ನಗುರೋರಧಿಕಂ' ಅಂದರೆ ಗುರುವಿಗಿಂತ ದೊಡ್ಡವರು ಯಾರೂ ಇಲ್ಲ. ಗುರುವಿನಿಂದ ಪಡೆದ ಇಷ್ಟಲಿಂಗವನ್ನು ಸದಾ ಮೈಮೇಲೆ ಧರಿಸಿ, ಅದನ್ನು ಪೂಜಿಸುತ್ತಾ, ಸಾಧನೆಯನ್ನು ಮಾಡುತ್ತಾ, ಕ್ರಮೇಣ ಸಾಕಾರದಿಂದ ನಿರಾಕಾರದತ್ತ ಸಾಗುವುದೇ ಶಿವಯೋಗ. ನಿರಾಕಾರವಾದ ಪರ ವಸ್ತುವನ್ನು ಗುರುವು ಸಾಕಾರವಾದ ಇಷ್ಟಲಿಂಗದಲ್ಲಿ ಘನೀಕರಿಸಿ ಸಾಧಕನಿಗೆ ಕೊಡುತ್ತಾನೆ. ಸಾಧಕ ಇಷ್ಟಲಿಂಗದ ಮೂಲಕ ನಿರಾಕಾರದತ್ತ ಸಾಗುತ್ತಾನೆ. ಅಂತಿಮವಾಗಿ ಆ ನಿರಾಕಾರದಲ್ಲಿ ಒಂದಾಗುತ್ತಾನೆ. ಇಂತಹ ಗುರುವಿನ ಸೇವೆಯನ್ನು ಶಿಷ್ಯ ಮಾಡಬೇಕು. ತನ್ನ ತನುವನ್ನು ಒಪ್ಪಿಸಿ ಗುರುವನ್ನು ಸುಪ್ರೀತನನ್ನಾಗಿ ಮಾಡಬೇಕು ಎಂಬುದು ಶರಣರ ಅಭಿಪ್ರಾಯ.

ಇಂತಹ ಗುರು ವೀರಶೈವರ ಭಾವನೆಯಲ್ಲಿ ಅತ್ಯಂತ ಗೌರವಾಸ್ಪದನಾದವನು. ಗುರುವಿನ ಕರುಣೆಯ ಮೂಲಕ ತನ್ನನ್ನು ತಾನರಿದ ಶರಣಂಗೆ ಅಂಗಕ್ಕೆ ಆಚಾರವಿಲ್ಲ. ಲಿಂಗಕ್ಕೆ ಕುರುಹಿಲ್ಲದಂತಾಗುತ್ತದೆ. ಗುರುವು ಭಕ್ತನಿಗೆ ದೀಕ್ಷೆಯನ್ನಿತ್ತು ಅವನನ್ನು ಆಧ್ಯಾತ್ಮಿಕವಾಗಿ ಔನ್ನತ್ಯಕ್ಕೇರಿಸುವವನಾದ್ದರಿಂದ ಅವನಿಗೆ ಬಹು ಹಿರಿಯ ಸ್ಥಾನವಿದೆ.

"ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ನಮೋ,
ಭವಬಂಧನವ ಬಿಡಿಸಿ ಪರಮಸುಖವ ತೋರಿದಗುರುವೆ ನಮೋ,
ಭವಿಯೆಂಬುದ ತೊಡದು ಭಕ್ತೆಯೆಂದೆನಿಸಿದ ಗುರುವೆ ನಮೋ
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ
ಗುರುವೆ ನಮೋ ನಮೋ" (ವಚನ–೧೦)

ಅಕ್ಕಮಹಾದೇವಿ ಈ ವಚನದಲ್ಲಿ ಗುರುವಿನ ಮಹತ್ವವನ್ನು ಚಿತ್ರಿಸಿದ್ದಾಳೆ. ಗುರುವು ಶಿಷ್ಯನಿಗೆ ದೀಕ್ಷೆ ಕೊಡುವವರೆಗೂ ಆತ ಕೇವಲ ಭೂತಕಾಯನಾಗಿರುತ್ತಾನೆ. ಅಂಥವನನ್ನು ಲಿಂಗ ತನುವನ್ನಾಗಿ ಮಂತ್ರೋಪದೇಶದಿಂದ ಅಜ್ಞಾನವನ್ನು ನಿವಾರಿಸುವ ಗುರುವಿನಿಂದ ದೇಹ ಪವಿತ್ರವಾಗುತ್ತದೆ ಎಂಬುದು ವೀರಶೈವರ ನಂಬಿಕೆ.

ವ್ಯಕ್ತಿ ಸ್ವಂತ ಸಾಧನೆಯಿಂದ ಎಷ್ಟು ಜ್ಞಾನಾರ್ಜನೆಯನ್ನು ಮಾಡಿದರೂ, ಗುರುವಿನ ಮಾರ್ಗದರ್ಶನದಷ್ಟು ಫಲಕಾರಿಯಾಗಲಾರದು. ಸದ್ಗುರು ಪ್ರಸನ್ನನಾದರೆ ಲಿಂಗ, ಜಂಗಮ, ಪ್ರಸಾದಗಳು ದೊರೆಕೊಳ್ವವು ಎಂಬುದು ಬಸವಣ್ಣನವರ ಅಭಿಪ್ರಾಯ. ಹೀಗೆ ಗುರು ಅತ್ಯಂತ ಶ್ರೇಯಸ್ಕರವಾದ ಮಾರ್ಗದಲ್ಲಿ ಕೊಂಡೊಯ್ದು ವ್ಯಕ್ತಿಯ ಮೋಕ್ಷಸಾಧನೆಗೆ ಕಾರಣವಾಗುವುದರಿಂದ ವೀರಶೈವರಿಗೆ ಆತ ಪರಮ ಪೂಜ್ಯ.

---

೩೭. ತೋಂಟದಸಿದ್ಧಲಿಂಗ, 'ಷಟ್‌ಸ್ಥಲ ಜ್ಞಾನಸಾರಮೃತ,' ವಚನ, ೧೬೧

ಚೆನ್ನಬಸವಣ್ಣನು

"ಗುರುವೆ ಸದಾಶಿವ, ಗುರುವೆ ಮಹಾಮಹಿಮಾ
ಗುರುವೆ ಅಕಲ್ಪಿತ ನಿತ್ಯ ನಿರವಯ
ಸಾಕಾರವಿಡಿದು ಗುರು ಲಿಂಗವಾದ
ನಿರಾಕಾರವಿಡಿದು ಪ್ರಾಣಲಿಂಗವಾದ–". (ವ–೨೪)

ಎಂದು ವರ್ಣಿಸಿದ್ದಾನೆ. ಗುರುವಿನ ಬಗ್ಗೆ ವಚನಕಾರರು ಅಪಾರ ಭಕ್ತಿ, ಗೌರವ, ವಿನಯಗಳನ್ನು ಪ್ರಕಟಿಸಿದ್ದಾರೆ. ಗುರು ಶಿಷ್ಯನನ್ನು ಶಿವಾತ್ಮನನ್ನಾಗಿ ಮಾಡುತ್ತಾನೆ. ಆತನ ಆತ್ಮ, ಭೂತ, ಜೀವ, ಮನ ಹಾಗು ದ್ರವ್ಯಗಳನ್ನು ಶುದ್ಧಗೊಳಿಸುತ್ತಾನೆ. ಗುರುವು ಸಾಕ್ಷಾತ್ ಪರಶಿವನೇ ಆಗಿದ್ದಾನೆ. ಆ ಶಿವನೆ ಶ್ರೀಗುರು ರೂಪದಿಂದ ಮರ್ತ್ಯಕ್ಕೆ ಬಂದು ಮನಸ್ಥಲಕ್ಕೆ ಮಂತ್ರವಾಗಿಯೂ, ತನುಸ್ಥಲಕ್ಕೆ ಪ್ರಸಾದವಾಗಿಯೂ, ಕರಸ್ಥಲಕ್ಕೆ ಲಿಂಗವಾಗಿಯೂ, ಪ್ರಾಣಸ್ಥಲಕ್ಕೂ ಲಿಂಗವಾಗಿಯೂ ಇದ್ದಾನೆಂಬುದು ಶರಣರ ನಂಬಿಕೆ. ಇಂತಹ ಗುರುವನ್ನು ನರನೆಂದು ಕರೆಯಬಾರದು. ಕರೆದಡಾದರೆ ಹಿಂದಿನ ಭವಮಾಲೆ ಹಿಂಗದು. ಗುರುಶಬ್ದಕ್ಕೆ ದೋಷವ ಮಾಡಿದರೆ ಶ್ವಾನದ ಬಳಗದಲ್ಲಿರುತ್ತಾನೆ. ಗುರುವಿನ ಉಪದೇಶವನ್ನು ಮೀರಿದರೆ ಭವ, ಕರ್ಮ ನಾಶವಾಗುವುದಿಲ್ಲ ಎಂದು ಚೆನ್ನಬಸವಣ್ಣ ತನ್ನದೊಂದು ವಚನ[೩೮] ದಲ್ಲಿ ಹೇಳಿದ್ದಾನೆ.

ಲಿಂಗ : ಲಿಂಗವು ದೈವದ ಪ್ರತೀಕ. ಇದನ್ನು ಗುರುವು ತಾನೇ ಕಯ್ಯಾರ ಹರಸಿ, ಪೂಜಾವಿಧಾನ, ಮಂತ್ರಗಳೊಡನೆ ಪ್ರೀತಿಯಿಂದ ಕೊಟ್ಟದ್ದು. ಭಕ್ತನಿಗೂ 'ಇಷ್ಟಲಿಂಗ[೩೯]'ಕ್ಕೂ ಗಾಢವಾದ ಸಂಬಂಧವಿದೆ. ಇಷ್ಟಲಿಂಗ ಪೂಜೆಯಲ್ಲಿ ಪೂಜಾರಿಯ ಮಧ್ಯಸ್ಥಿಕೆಯಿಲ್ಲ. ಭಕ್ತನು ತನ್ನ ಆತ್ಮ ನಿವೇದನೆಗಳನ್ನು ನೇರವಾಗಿ ದೈವದಲ್ಲಿ ಹೇಳಿಕೊಳ್ಳಬಹುದು. ದೇಹದ ಮೇಲೆ ಸದಾ ಇಷ್ಟ ಲಿಂಗವು ಇರುವುದರಿಂದ ವ್ಯಕ್ತಿಗೆ ಒಂದು ಬಗೆಯ ಆತ್ಮ ವಿಶ್ವಾಸ. ತನ್ನನ್ನು ಕಾಯುವ ದೈವ ತನ್ನ ದೇಹದ ಮೇಲೆ ಇದೆ. ಅದು ಸಂಕೇತಿಸುವ ದೈವ ತನ್ನ ಒಳಗೇ ಇದೆ ಎಂಬ ನಂಬಿಕೆ ಭಕ್ತನದು.

ವೀರಶೈವ ಧರ್ಮದಲ್ಲಿ ಇಷ್ಟಲಿಂಗಕ್ಕೆ ಅತ್ಯಂತ ಮಹತ್ವ ನೀಡಲಾಗಿದ್ದು, ಮಗ್ಗೆಯ ಮಾಯಿದೇವನು ಈ ಲಿಂಗದ ಸ್ವರೂಪವನ್ನು ಈ ಚರಾ ಚರಾತ್ಮಕವಾದ ಜಗತ್ತು ಯಾವ ವಸ್ತುವಿನಲ್ಲಿ ಲೀನವಾಗುತ್ತದೆಯೊ ಮತ್ತು ಎಲ್ಲಿಂದ ಉತ್ಪತ್ತಿಯನ್ನು ಪಡೆಯುತ್ತದೆಯೊ ಆ ವಸ್ತುವೆ ಇಷ್ಟಲಿಂಗವೆಂದು ನಿರೂಪಿಸುತ್ತಾನೆ. ಲಿಂಗವು ಬ್ರಹ್ಮ ಸೂಚಕ. ಅರುವಿನ ಕುರುಹು, ಜ್ಞಾನದ ಬೆಳಕು, ಕರಸ್ಥಲದ ಬ್ರಹ್ಮವಾಗಿದೆ. ಗುರುವಿಡಿದು ಕುರುಹು, ಕುರುಹು ಹಿಡಿದು ಅರಿವು, ಅರಿವು ಹಿಡಿದು ಆಚಾರವ ಕಾಣುವುದೇ ವೀರಶೈವ ಮಾರ್ಗವಾಗಿದೆ. ಇಲ್ಲಿ ನಿರಾಕಾರವನ್ನು ಮನ್ನಿಸುವ ಅದ್ವೈತವಾಗಲಿ, ಸಾಕಾರವನ್ನು ಎತ್ತಿ ಹೇಳುವ ದ್ವೈತವಾಗಲಿ ಇರದೆ ದ್ವೈತಾ–ದ್ವೈತಾಗಳ ಸಮನ್ವಯೀಕರಣವನ್ನು ವಿರಕ್ತರ ಸಾಧನ ಕ್ರಮದಲ್ಲಿ ಕಾಣುತ್ತೇವೆ. ದೈಯಿಕ

---

೩೮. ಚೆನ್ನಬಸವಣ್ಣನವರ ವಚನ ೧೯೮.ಪುಟ ೯೨.

೩೯. ಇಷ್ಟಲಿಂಗ : 'ಇಷ್ಟಿ' ಎಂದರೆ ಪೂಜೆ. ಪೂಜೆಗೆ ಅರ್ಹವಾದ ಲಿಂಗವು ಇಷ್ಟಲಿಂಗವು. ಅದು ಮನದಿಷ್ಟವನ್ನು ನೀಡಲು, ಪಡೆಯಲು ಸಾಧನವಾಗಿದೆ. ಶಿವಶರಣರಿಗೆ ಅನಿಷ್ಟದೊಡನೆಯ ಹೋರಾಟವೇ ಇಷ್ಟಲಿಂಗದ ಪೂಜೆಯಾಗಿತ್ತು. ಅನಿಷ್ಟವಳಿದು ಇಷ್ಟವು ಉಳಿಯಬೇಕು. ಅದುವೆ ಇಷ್ಟಲಿಂಗ ಪೂಜೆಯಾಗುತ್ತದೆ. (ವಿ.ರು. ಕೊಪ್ಪಳ (ಸಂ) 'ವೀರಶೈವದರ್ಶನ' ಲೇಖನ; ಇಷ್ಟಲಿಂಗ ರಹಸ್ಯ, ಪುಟ–೫

ಪರ್ಯಾವಸಾನವಾಗುವವರೆಗು ಇಷ್ಟಲಿಂಗೋಪಾಸನೆಯನ್ನು ನಿಲ್ಲಿಸಲಾಗದು. ಶರಣರಿಗೆ ಲಿಂಗವೇ ಪ್ರಾಣ. ಪ್ರಾಣವೇ ಲಿಂಗ. ಅಷ್ಟೇ ಅಲ್ಲ ಅವರು ಸರ್ವಾಂಗ ಲಿಂಗಿಗಳೂ ಆಗಿದ್ದಾರೆ. ಹೀಗೆ ಗುರುವಿನ ಅನುಗ್ರಹದಿಂದ ದೊರೆತ ಲಿಂಗವು ಶಿಷ್ಯನ ಮಸ್ತಕದಲ್ಲಿ ಚಿತ್ಕಲೆಯೇ ಆಗಿರುತ್ತದೆ. ಅದು ಹೊರಗೆ ಇಷ್ಟಲಿಂಗವಾಗಿದ್ದರೆ, ಅಂತರಂಗದಲ್ಲಿ ಪ್ರಾಣಲಿಂಗವಾಗಿ, ಭಾವದಲ್ಲಿ ಭಾವಲಿಂಗವಾಗಿ ಶೋಭಿಸುತ್ತದೆ.

ಲಿಂಗವು ಎರಡು ಬಗೆಯಲ್ಲಿ ಪೂಜಿಸಲ್ಪಡುವುದು. ಇದು ಹಿಂದಿನಿಂದ ಬಂದ ವಾಡಿಕೆ. ಸ್ಥಾವರಲಿಂಗ, ದೇಹದ ಮೇಲೆ ಧರಿಸಿದ ಲಿಂಗ. ವೀರಶೈವ ಧರ್ಮದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಸ್ಥಾವರ ಲಿಂಗಕ್ಕೆ ಪೂಜೆಯ ನಿಷೇಧವಿದೆ. ಇಷ್ಟಲಿಂಗ ಪೂಜೆಗೆ ಅವಕಾಶವಿದೆ. ಚೆನ್ನಬಸವಣ್ಣ "ಅಂಗದ ಮೇಲೆ ಲಿಂಗವಿದ್ದರೆ, ಸ್ಥಾವರ ಲಿಂಗಕ್ಕೆ ಶರಣೆನ್ನಲಾಗದು" ಎನ್ನುತ್ತಾನೆ.[೪೦] ಬಸವಾದಿ ವಚನಕಾರರು ಸ್ಥಾವರ ಲಿಂಗ ಪೂಜೆಯನ್ನು ನಿರಾಕರಿಸಿದರೂ ಸಾಕಾರಲಿಂಗ ಪೂಜೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ನಿರಾಕಾರ ಲಿಂಗ ಕಲ್ಪನೆಯು ವೀರಶೈವದಲ್ಲಿದ್ದರೂ ಸಾಮಾನ್ಯ ಜನರಿಗಾಗಿ ಕುರುಹುದೋರಿದ ದೈವಸ್ವರೂಪವೊಂದರ ಅವಶ್ಯಕತೆಯನ್ನು ಕಂಡು ಸಾಕಾರಲಿಂಗ ಪೂಜೆಯನ್ನು ಬೋಧಿಸಿರಬೇಕು. ಸಾಕಾರ ಲಿಂಗವಾದರೂ ದೇಹದ ಮೇಲೆ ಧರಿಸಿದ ಲಿಂಗವೇ ಆಗಬೇಕೆಂಬ ಕಟ್ಟಳೆಯನ್ನು ವಿಧಿಸಿದರು.

ಶರಣರು ದೀಕ್ಷಾಕಾಲದಲ್ಲಿ ಧರಿಸಿದ ಲಿಂಗವು ಶಿವನ ಸಂಕೇತವಾಗಿರುತ್ತದೆ. ಅದನ್ನು ಆತನು ಜೀವನ ಪರ್ಯಂತ ತನ್ನ ದೇಹದ ಮೇಲೆ ಧರಿಸಿ ತನ್ನಲ್ಲಿಯೇ ಶಿವನ ಸ್ವರೂಪವನ್ನು ಕಾಣಲು ಯತ್ನಿಸಬೇಕು. ಅದನ್ನು ಯಾವಾಗಲೂ ದೇಹದಿಂದ ಬೇರ್ಪಡಿಸಬಾರದು. ದೇಹದ ಮೇಲೆ ಲಿಂಗವಿರುವವರೆಗೆ ಮಾತ್ರ ಒಬ್ಬನು ಭಕ್ತನಾಗುತ್ತಾನೆ. ದೇಹದ ಮೇಲೆ ಲಿಂಗವಿಲ್ಲದೆ ಸತ್ತರೂ ಆತನನ್ನು ಊಳಬಾರದು ಎಂಬ ನಂಬಿಕೆ ವೀರಶೈವರಲ್ಲಿದೆ.

ಶರಣರೆಲ್ಲ ಇಷ್ಟಲಿಂಗವನ್ನು ಸಾಕಾರರೂಪವಾಗಿ, ನಿರಾಕಾರ ರೂಪವಾಗಿ, ತಮ್ಮ ವಚನಗಳಲ್ಲಿ ಸ್ತುತಿಸಿದ್ದಾರೆ. ಆತ ವಿಶ್ವಮಯನಾಗಿದ್ದರು ಭಕ್ತರ ಮನದಲ್ಲಿ, ಅಂತಃಕರಣದಲ್ಲಿ ಸದಾ ವಾಸಮಾಡುತ್ತಿರುತ್ತಾನೆ. ಅದಕ್ಕೂ ಮೊದಲು ಆತ ಭಕ್ತನ ಮನಪರೀಕ್ಷೆಯ ಸಣ್ಣ ನಾಟಕವನ್ನು ಆಡುತ್ತಾನೆ. ಶಿವಪುರಾಣದಲ್ಲಿ ಬರುವ ಶಿವನ ಎಲ್ಲಾ ಮಹಿಮೆಗಳನ್ನು ಅವನ ಅವತಾರಗಳನ್ನು ಆತನು ಭಕ್ತರನ್ನು ಪರೀಕ್ಷೆ ಮಾಡಲು ಬಂದ ವೇಷದಾರಿಯನ್ನು, ವೇದಗಳು, ಶೃತಿಗಳು ಆತನನ್ನು ಸ್ತುತಿ ಮಾಡಿರುವುದನ್ನು ಇಟ್ಟುಕೊಂಡು ವಚನಕಾರರು ತಮ್ಮ ವಚನಗಳ ಮೂಲಕ ಕೊಂಡಾಡಿದ್ದಾರೆ.

ಅಂಬಿಗರ ಚೌಡಯ್ಯನು ಶಿವನನ್ನು ನಿರಾಕಾರನಾಗಿ ಗುರುತಿಸುತ್ತಲೆ ಅವನ ಹೆಸರನ್ನು ನಿರಾಕರಿಸುತ್ತಾನೆ.

"ಅಸುರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ,
ಬ್ರಹ್ಮಕಪಾಲವಿಲ್ಲ, ಭಸ್ಮ ಭೂಷಣನಲ್ಲ,
ವೃಷಭವಾಹನವಿಲ್ಲ, ಋಷಿಯ ಮಗಳೊಡನಿರ್ದಾತನಲ್ಲ,
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದೆಂದನಂಬಿಗ ಚೌಡಯ್ಯ" (ವ-೩೧)

---

೪೦. 'ಚೆನ್ನಬಸವಣ್ಣನವರ ವಚನ-೭೫೧,' ಪುಟ-೧೧೧

ಆದರೆ ಇದಕ್ಕೆ ವಿರುದ್ಧವಾಗಿ ಸಾಕಾರ ರೂಪದ, ಅವನ ಬಾಹ್ಯ ವೇಷ ಭೂಷಣಗಳನ್ನೊಳಗೊಂಡ ಶಿವನನ್ನು ಅಲ್ಲಮ ಪ್ರಭು ಚಿತ್ರಿಸಿದ್ದಾನೆ.

"ವಿಭೂತಿ ಯಾವ ಭೂಷಣದೊಳಗು?
ಪುಲಿಚರ್ಮವಾವ ವಸ್ತ್ರದೊಳಗು?
ಖಟ್ವಾಂಗ ಆವ ಆಯುಧದೊಳಗು ?
ನೀ ನಿಡುವುದಿಂತು, ನೀ ಹೊದೆವುದಿಂತುಂಟು,
ನೀ ಹಿಡಿವುದಿಂತುಂಟು, ನೀಕೊಡುವುದ ಇಂಥಪದ
ಗೊಹೇಶ್ವರಾ"(ವ-೩೬)

ಶಿವಭಕ್ತರಾದ ಬಾಣ, ಸಿರಿಯಾಳ, ದಾಸಿಮಯ್ಯ, ಬಲ್ಲಾಳ, ಮಾದಾರಚನ್ನಯ್ಯ, ಬೇಡರಕಣ್ಣಪ್ಪ, ಮುಂತಾದವರಿಗೆ ಪರಶಿವನು ಒಲಿದದ್ದು ಆತ ಕೇವಲ ಭಕ್ತಿ ಪ್ರಿಯನಾದ್ದರಿಂದ. ಅವನು ಭಕ್ತಿ ಪರೀಕ್ಷೆಗಾಗಿ ನಟನೆ ಹಲವಾರು. ಇದನ್ನು ಸತ್ಯಕ್ಕ ತನ್ನದೊಂದು ವಚನ (ವ-೩೮) ದಲ್ಲಿ ಪ್ರಶ್ನಿಸಿದ್ದಲ್ಲದೆ, ಯಾಕೆ ಹೀಗೆ ಮಾಡಿ ಶೃತಿಗಳ ಕೈಯಿಂದ ಲೇವಡಿಗೊಳಗಾಗುತ್ತಿಯಾ? ಎಂದು ಮತ್ತೊಮ್ಮೆ ಪ್ರಶ್ನಿಸುವಲ್ಲಿ ಶಿವನ ಮೇಲಿನ ಅವಳ ಗಾಢವಾದ ಭಕ್ತಿ ಗೋಚರವಾಗುತ್ತದೆ.

ಪರಶಿವನು ಅಂಗದ ಮೇಲೆ ಇಷ್ಟಲಿಂಗವಾಗಿ, ಪ್ರಾಣದಲ್ಲಿ ಪ್ರಾಣಲಿಂಗವಾಗಿ ಕಾಣಿಸಿಕೊಂಡುದನ್ನು ಚೆನ್ನಬಸವಣ್ಣ ಈ ರೀತಿ ಚಿತ್ರಿಸಿದ್ದಾನೆ.

"ಜಗಭರಿತನೆನ್ನದೇವ, ಜಗವಹೊದ್ದನೆನ್ನದೇವ,
ಭಕ್ತನ ಕರಸ್ಥಲಕ್ಕೆ ಬಂದನೆನ್ನದೇವ
ಭಕ್ತನನವಗ್ರಹಿಸಿ ಕೊಂಡನೆನ್ನದೇವ
ಇದು ಕಾರಣ ಕೂಡಲ ಚೆನ್ನಸಂಗಮದೇವರು
ಅಕ್ಷರಾಕ್ಷರವ ಮಾಡಿದ ಘನವು" (ವ-೪೦)

ದೇವನು ಜಗತ್ತೆನ್ನೆಲ್ಲ ಆವರಿಸಿದ್ದರೂ ಈ ಜಗದ ಗುಣಧರ್ಮಗಳನ್ನು ತಿಲಮಾತ್ರವು ಧರಿಸಿರುವುದಿಲ್ಲ. ತಾವರೆಯ ಎಲೆಯಂತೆ, ಕ್ಷರಾಕ್ಷರಗಳಿಗೆ ಅತೀತವಾದ, ಅಜರಾಮರವಾದ ಈತ ಭಕ್ತನ ಅಂಗೈಯಲ್ಲಿ ಲಿಂಗರೂಪವಾಗಿ ಕಾಣಿಸಿಕೊಂಡು ಆತನ ಸರ್ವಾಂಗವನ್ನೆಲ್ಲ ವ್ಯಾಪಿಸಿಕೊಂಡಿದ್ದಾನೆ.
ಇದೇ ಭಾವನೆಯನ್ನು ಅಕ್ಕಮಹಾದೇವಿ

"ಪಾತಾಳವಿತ್ತಿತ್ತ, ಪಾತಾಳಗಳತ್ತತ್ತ
ದಶದಿಕ್ಕು ಇತ್ತಿತ್ತು, ದಶಭುಜಗಳತ್ತತ್ತ
ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ
ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲಕ್ಕೆ
ಬಂದು ಚುಳುಕಾದಿರಿ ಲಿಂಗವೆ". (ವ-೫೫)

ಎಂದು ಶಿವನ ವ್ಯಾಪಕತೆಯನ್ನು ವರ್ಣಿಸುತ್ತಾಳೆ.

"ಶಿವನೆ ಜಗತ್ತಿಗೆ ಒಡೆಯ, ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣಕರ್ತ ಎಂದು ವೇದಗಳು ಸಾರುತ್ತವೆ. ಈಶ್ವರ ಸರ್ವಜಗತ್ತಿಗೆ ಪ್ರಭುವಾಗಿದ್ದಾನೆ. ಆತನೆ ಜಗತ್ತಿನ ಪ್ರೇರಕ ಶಕ್ತಿ ಎಂದು ಶೃತಿ ಹೊಗಳುತ್ತದೆ. ಹಾಗಾಗಿಯೆ ಆ ಪರಶಿವನೊಬ್ಬನೆ ದೇವ" (ವ-೪೫) ಎಂದು ಬಸವಣ್ಣ ಹೇಳಿದ್ದಾನೆ.

ಈ ಸಂಕಲನದಲ್ಲಿ ಲಿಂಗದ ಮಹತ್ವವನ್ನು ಸಾರುವ ವಚನಗಳು ವಿಪುಲವಾದ ವಿಚಾರ ಸಂಪತ್ತನ್ನು, ಅನುಭಾವ ಸಂಪತ್ತನ್ನು, ಶಿವನ ಮಹಿಮಾ ಗುಣಗಳನ್ನು, ಆತನ ಮತ್ತು ಭಕ್ತರ ನಡುವಿನ ಅವಿನಾಭಾವ ಸಂಬಂಧವನ್ನು ತಿಳಿಸುತ್ತವೆ. ಇಲ್ಲಿ ಸಂಗ್ರಹಗೊಂಡ ವಚನಗಳ ಭಾವ ಒಂದೇ ಆಗಿದ್ದರೂ ವಿವಿಧ ರೀತಿಯ ಅಭಿವ್ಯಕ್ತಿಯನ್ನು ಪಡೆದಿವೆ. ಸರಳವಾಗಿವೆ. ಶಿವನ ಮಹಿಮೆಯ ಸ್ತುತಿಯೆ ಮುಖ್ಯವಾಗುವುದರಿಂದ ಸಾಹಿತ್ಯಿಕ ಅಂಶವನ್ನು ಹುಡುಕುವುದು ಸರಿಯಲ್ಲವೆನಿಸುತ್ತದೆ.

ಜಂಗಮ :– ಶರಣರ ಪರಿಕಲ್ಪನೆಯಲ್ಲಿ 'ಜಂಗಮ' ಒಬ್ಬ ಮಾನವನಾಗಿರದೆ, ಅವನು ಲಿಂಗದ ನಡೆದಾಡುವ ರೂಪವೇ ಆಗಿದ್ದಾನೆ. ಲಿಂಗವನ್ನು ಭಕ್ತ ಎರಡು ರೂಪದಲ್ಲಿ ಆರಾಧಿಸಬಹುದು. ಒಂದು ಸದಾ ದೇಹದ ಮೇಲೆಯೇ ನೆಲೆಸಿರುವ ಇಷ್ಟಲಿಂಗದ ರೂಪದಲ್ಲಿ. ಇನ್ನೊಂದು ಮಾನವ ರೂಪದ ಜಂಗಮನಲ್ಲಿ. ಮನವನ್ನು ಕೊಟ್ಟು ಇಷ್ಟ ಲಿಂಗವನ್ನು ಸುಪ್ರೀತಗೊಳಿಸುವಂತೆ ಧನವನ್ನು ಕೊಟ್ಟು ಜಂಗಮನನ್ನು ಸುಪ್ರೀತಗೊಳಿಸಬೇಕು. ತನು, ಮನ, ಧನ ಇರುವುದೇ ಗುರು–ಲಿಂಗ– ಜಂಗಮ ಸೇವೆಗಾಗಿ ಎಂಬ ಭಾವನೆ ವೀರಶೈವರಲ್ಲಿದೆ.

ಪರಿಪೂರ್ಣ ಜ್ಞಾನವನ್ನು ಪಡೆದವನೆ ಜಂಗಮ. ಹಾಗಾಗಿ ವೀರಶೈವರಿಗೆ ಜಂಗಮನು ಅತ್ಯಂತ ಪವಿತ್ರನಾದವನು. ಚೆನ್ನಬಸವಣ್ಣ ಜಂಗಮನನ್ನು 'ಗುರುವಿನ ಗುರು ಪರಮಗುರು' ವೆಂದು ವರ್ಣಿಸುತ್ತಾನೆ. ಜಂಗಮ ಯಾವತ್ತು ದೀಕ್ಷೆಯನ್ನು ಕೊಡುವ ಕಾರ್ಯಕ್ಕೆ ಕೈಹಾಕಬಾರದು. ಆತ ಭಕ್ತರಿಂದ ದಾಸೋಹವನ್ನು ಮಾತ್ರ ಸ್ವೀಕರಿಸಬೇಕು. ಶಿಷ್ಯನೊಬ್ಬನು ಗುರುವಿನಿಂದ ದೀಕ್ಷೆ ಪಡೆದು ಜಂಗಮನಾದರೆ ಆಗ ಆತ ಗುರುವಿನ ಭಕ್ತಿ– ಗೌರವಗಳಿಗೆ ಪಾತ್ರನಾಗುತ್ತಾನೆ. ಆದರೆ ಅವರಿಬ್ಬರ ನಡುವೆ ಯಾವತ್ತೂ ಗುರು–ಶಿಷ್ಯ ಸಂಬಂಧ ಇರಬಾರದು. ಪರಸ್ಪರ ಗೌರವವಿರಬೇಕು.

ಶರಣರ ಪರಮಗೌರವಕ್ಕೆ ಪಾತ್ರರಾಗಲು ಕಾರಣ ಜಂಗಮ ಶ್ರೇಷ್ಠ ವ್ಯಕ್ತಿತ್ವ ಉಳ್ಳವನಾಗಿದ್ದಾನೆ ಎಂಬ ಭಾವನೆ. ಜಂಗಮರ ಗುರಿ ವಿಶ್ವ ಕಲ್ಯಾಣ. ಆದ್ದರಿಂದ ಅವರ ಬಗ್ಗೆ ಪೂಜ್ಯಭಾವ ಇರುವುದರ ಜೊತೆ ಅವರ ಯೋಗಕ್ಷೇಮದ ಜವಬ್ದಾರಿಯು ತಮ್ಮದೆಂದು ಭಾವಿಸಿದ್ದರು. ಜಂಗಮನು ಸರ್ವಸಂಗ ಪರಿತ್ಯಾಗಿ, ಅವನು ನಿರ್ಲೇಪಕ, ನಿರುಪಾದಿಕ, ನಿರ್ಭೇದ್ಯ, ನಿರ್ಲಂಪಟ, ನಿಷ್ಕಪಟ, ನಿರಂಜನ ಪ್ರಣವ ಸ್ವರೂಪ, ಲಿಂಗದ ಮುಖ ಜಂಗಮ, ಜಂಗಮವು ಲಿಂಗರೂಪವಾಗಿ ಪಾದಾರ್ಚನೆಯನ್ನು ಮಾಡಿಸಿಕೊಳ್ಳಬೇಕು. ಕೇವಲ ಲಿಂಗರೂಪವೆಂದು ಹೇಳಿಕೊಳ್ಳುವುದಲ್ಲ. ತನು, ಮನ, ಧನ ಆಸೆಗಳನ್ನು ಜಂಗಮ ಬಿಟ್ಟಿರಬೇಕು. ಜಂಗಮ ಪರಮಾತ್ಮ ಸ್ವರೂಪಿ.

ಗುರು–ಲಿಂಗ– ಜಂಗಮ ವೀರಶೈವರಿಗೆ ರತ್ನತ್ರಯವಿದ್ದಂತೆ, ಇವುಗಳಲ್ಲಿ ಜಂಗಮಕ್ಕೆ ಅತ್ಯಂತ ಮಹತ್ವದ ಸ್ಥಾನವನ್ನು ನೀಡುತ್ತಾರೆ. ಲಿಂಗ–ಜಂಗಮರಿಬ್ಬರು ಸಮಾನರೆಂಬ ಭಾವನೆ ವೀರಶೈವಶರಣರಲ್ಲಿದೆ. ಆದರೂ ಲಿಂಗ–ಜಂಗಮರಲ್ಲಿ ಜಂಗಮವೇ ಶ್ರೇಷ್ಠನಾಗಿದ್ದಾನೆ. ಎಷ್ಟೇ ಲಿಂಗಾರ್ಚನೆ ಮಾಡಿದರೂ ಜಂಗಮ ಸೇವೆ ಮಾಡದಿದ್ದರೆ ಅದು ವ್ಯರ್ಥವಾಗುತ್ತದೆ ಎಂದು ಶರಣರು ಭಾವಿಸಿದ್ದಾರೆ. ಜಂಗಮ ರಹಿತ ಲಿಂಗಾರ್ಚನೆಯು ವ್ಯರ್ಥ. ಇಂತಹ ಜಂಗಮ ಪೂಜೆ ಭಕ್ತನಿಗೆ ಅತ್ಯಂತ ಶ್ರೇಷ್ಠ ಕರ್ತವ್ಯ.

"ಜಂಗಮವೆ ಜಗತ್ಪಾವನ
ಆ ಜಂಗಮದ ನೆನಹೆ ಲಿಂಗವಾಯಿತ್ತು
ಅವರ ತನುವೆ ಎನ್ನ ಕಾಯವಾಯಿತ್ತು

ಅವರ ದರುಶನವೆ ಎನಗೆ ಪರುಷವಾಯಿತ್ತು
ಆ ಪರುಷವಿಡಿದು ಮನವ ಲಿಂಗದಲ್ಲಿ ಬೆರಸಿ
ಕನಸು ಕಳವಳಿಕೆ ಹೆಸರುಗೆಟ್ಟು
ಹೋದವಯ್ಯ ನಿಮ್ಮ ಜಂಗಮದಿಂದ,
ಅಪ್ಪಣ್ಣ ಪ್ರಿಯ ಚೆನ್ನ ಬಸವಣ್ಣ" (ವ–೬೯)

ಎಂದು ಜಂಗಮ ಸಹಿತ ಲಿಂಗಾರ್ಚನೆಯ ತೃಪ್ತಿಯನ್ನು ಹಡಪದ ಅಪ್ಪಣ್ಣನ ಹೆಂಡತಿ 'ಲಿಂಗಮ್ಮ' ವಿವರಿಸುತ್ತಾಳೆ.

ಇಂತಹ ಮಹಿಮಾನ್ವಿತನಾದ ಜಂಗಮದ ಪೂಜೆಯನ್ನು ಮನಮುಟ್ಟಿ ಮಾಡಬೇಕು. ಇಂತಹ ಜಂಗಮದ ಭಕ್ತನು ಅತ್ಯಂತ ವಿನೀತಭಾವದಿಂದ ನಡೆಯಬೇಕು.

"ಜಂಗಮವೆನ್ನ ಪ್ರಾಣ, ಜಂಗಮವೆನ್ನಜೀವ
ಜಂಗಮವೆನ್ನ ನಿಧಿನಿಧಾನ, ಜಂಗಮವೆನ್ನ ಪುಣ್ಯದ ಫಲ
ಜಂಗಮವೆನ್ನ ಹರುಷದ ಮೇರೆ –"(ವ–೭೦)

ಎಂದು ಅಕ್ಕಮಹಾದೇವಿ ಮನದುಂಬಿ ವರ್ಣಿಸುತ್ತಾಳೆ. ಬಸವಣ್ಣ ಜಂಗಮನನ್ನು ಕುರಿತು 'ಜಂಗಮವೆನ್ನ ಪ್ರಾಣಲಿಂಗ' (ವ–೭೩) ಎಂದು ಭಕ್ತಿ ಯಿಂದ ಹೇಳುತ್ತಾನೆ. ಜಂಗಮ ಸೇವೆಯೇ ಭಕ್ತನ ಗಳಿಕೆಯ ಸಾರ್ಥಕ್ಯವೆಂಬುದು ಶರಣರ ಭಾವನೆ. ಜಂಗಮ ತೃಪ್ತನಾದರೆ ಲಿಂಗವೇ ತೃಪ್ತನಾದಂತೆ. ಸರ್ವವನ್ನು ಜಂಗಮಕ್ಕೆ ಅರ್ಪಿಸಿ ಆನಂತರ ತಾನು ಅನುಭವಿಸಿ ತೃಪ್ತನಾಗಬೇಕು. ಜಂಗಮವು ಲಿಂಗದ ಜೀವಂತ ರೂಪ. ಲಿಂಗವು ಮಾಡಿದ ಷೋಡಶೋಪಾಚಾರಗಳನ್ನು ಅನುಭವಿಸಲಾಗದ ಕಾರಣ, ಅವನ್ನು ಅನುಭವಿಸುವ ಜಂಗಮಕ್ಕೆ ಅರ್ಪಿಸಬೇಕು ಎಂಬುದು ಶರಣರ ಅಭಿಪ್ರಾಯ.

ಪಾದೋದಕ : ಗುರುಲಿಂಗ ಜಂಗಮಗಳು ಭಕ್ತನಲ್ಲಿ ಒಳಕೊಳ್ಳುವ ರೀತಿಯನ್ನು ಅರುಹಿಕೊಡುವ ಕ್ರಿಯೆಯೆ ಪಾದೋದಕ. ಇದು ಸಂಪೂರ್ಣ ಭಾವನಾಮಯವಾದುದು. ಇಂತಹ ಪಾದೋದಕವು ಬರಿಯ ನೀರಲ್ಲ. ಅದು ಗುರು–ಲಿಂಗ–ಜಂಗಮದ ಉಪಾಸನೆಯಿಂದ ಒದಗಿದ ಪವಿತ್ರಜಲ.ಇದು ಪಾಪದ ಕೇಡು. "ಇದರ ಸೇವನೆಯಿಂದ ಸಂಚಿತ ಪ್ರಾರಬ್ಧ, ಅಗಾಮಿ ಕರ್ಮತ್ರಯನಾಶ, ಇದು ಪ್ರತ್ಯಕ್ಷ ಪರಬ್ರಹ್ಮ, ಪರಶಿವ ಚಿದ್ರೂಪ." (ವ–೯೧) ಕರುಣ ಜಲದಿಂದಾದ ಗುರುಪಾದೋದಕ, ವಿನಯ ಜಲದಿಂದಾದ ಲಿಂಗ ಪಾದೋದಕ, ಸಮತಾ ಜಲದಿಂದಾದ ಜಂಗಮ ಪಾದೋದಕವೆಂದು ಮೂರು ವಿಧಗಳುಂಟು. ಇವುಗಳಿಂದ ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳ ಶುದ್ಧಿ ಸಾಧ್ಯವಾಗುತ್ತದೆ.

ಈ ಪಾದೋದಕ ಕಲ್ಪನೆಯು ಜ್ಞಾನ–ಆನಂದಗಳ ಸಂಬಂಧವನ್ನು, ಗುರು ಶಿಷ್ಯರ ಐಕ್ಯವನ್ನು ಸೂಚಿಸುತ್ತದೆ. "ಪಾದೋದಕ ಶಬ್ದದಲ್ಲಿನ ನಾಲ್ಕು ಅಕ್ಷರಗಳು ಕ್ರಮವಾಗಿ ಪಾವನವಾದ ಜ್ಞಾನ, ದೋಷನಾಶನ, ದಯೆ ಹಾಗು ಕರ್ಮನಾಶಗಳನ್ನು ಸೂಚಿಸುತ್ತದೆ."[೪೧] ಗುರು ಪಾದೋದಕವು ಎಲ್ಲಕ್ಕೂ ಪವಿತ್ರವಾದುದು. ಗುರುಪಾದೋದಕ ಮಹಿಮೆಯನ್ನು ಪುರದ ನಾಗಣ್ಣ ಎಂಬ ವಚನಕಾರ ಹೀಗೆ ವರ್ಣಿಸಿದ್ದಾನೆ.

---

೪೧. ಡಾ॥ ಪಿ.ವಿ. ನಾರಾಯಣ. 'ವಚನಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ.' ಪುಟ–೪೨೨

[illegible]

"ಗುರುಪಾದೋದಕವು ಪರಮ ಪಾವನವೆಂದರಿದು
ಗುರು ಪಾದೋದಕವನೆ ಧರಿಸುವುದು
ಧರಿಸಿದಾತಂಗೆ ಅಷ್ಟಾಷಷ್ಟಿ ತೀರ್ಥಂಗಳು
ತನ್ನೊಳಗಡಗಿಹುದಯ್ಯ, ಅದೆಂತೆಂದಡೆ
ಅಂಗುಷ್ಟಾಗ್ರದಲ್ಲಿ ಅಷ್ಟಾ ಷಷ್ಟಿತೀರ್ಥ
ನಿತ್ಯವಸಂತಿತ್ಯೆ ಎಂದುದಾಗಿ
ಗುರುವಿನಂಗುಷ್ಟಾಗ್ರದಲ್ಲಿ ಸಕಲ ತೀರ್ಥಂಗಳಿಪ್ಪವು
ಶ್ರೀ ಗುರುವಿನ ಶ್ರೀ ಪಾದದಿಂದಾದ ಪಾದೋದಕವನೆಧರಿಸೂದು
ಇದು ಕಾರಣ, ಗುರು ಪಾದೋದಕದಿಂದವೆ
ಪರಮ ಪದವಪ್ಪುದುವೆ ಅಮರ ಗುಂಡದ ಮಲ್ಲಿಕಾರ್ಜುನ".(ವ–೭೯)

ಚೆನ್ನ ಬಸವಣ್ಣನು ಪಾದೋದಕವನ್ನು ಲಿಂಗೋದಕ, ಪಾದೋದಕ, ಪ್ರಸಾದೋದಕಗಳೆಂದು ಮೂರು ರೀತಿ ವಿವರಿಸುತ್ತಾನೆ.(ವ–೮೯) ಲಿಂಗೋದಕ ಎಂಬುದು ಶಿವಸಂಸ್ಕಾರದಿಂದಾದುದು. ಪಾದೋದಕ ಲಿಂಗಕ್ಕೆ ಮಜ್ಜನಕ್ಕೆರೆದುದು, ಪ್ರಸಾದೋದಕವೆಂಬುದು ಲಿಂಗಾವಾರೋಗಿಸಿದನಂತರದು ಎಂದು ಚೆನ್ನಬಸವಣ್ಣ ಹೇಳಿದ್ದಾನೆ. ಮುಂದುವರೆದು ಚೆನ್ನಬಸವಣ್ಣನು ಹತ್ತು ರೀತಿಯ ಪಾದೋದಕಗಳನ್ನು ಹೇಳಿದ್ದಾನೆ.

" ಪ್ರಥಮದಲ್ಲಿ ಪಾದೋದಕ, ದ್ವಿತೀಯದಲ್ಲಿ ಲಿಂಗೋದಕ
ತೃತೀಯದಲ್ಲಿ ಮಜ್ಜನೋದಕ, ಚತುರ್ಥದಲ್ಲಿ ಸ್ಪರುಶನೋದಕ,
ಪಂಚಮದಲ್ಲಿ ಅವಧಾರೋದಕ, ಷಷ್ಟಮದಲ್ಲಿ ಆಪ್ಯಾಯನೋದಕ,
ಸಪ್ತಮದಲ್ಲಿ ಹಸ್ತೋದಕ, ಅಷ್ಟಮದಲ್ಲಿ ಪರಿಣಾಮೋದಕ
ನವಮದಲ್ಲಿ ನಿರ್ನಾಮೋದಕ, ದಶಮದಲ್ಲಿ ಸತ್ಯೋದಕ
ಇಂತೀ ದಶವಿಧ ಪಾದೋದಕವ ತಿಳಿದುಕೊಳ್ಳಬಲ್ಲ
ಕೂಡಲ ಚೆನ್ನಸಂಗಾ ನಿಮ್ಮ ಶರಣ". (ವ–೯೩)

ಇದು ಪಾದೋದಕಗಳನ್ನು ಮಾಡುವ ಹತ್ತು ಬಗೆಗಳನ್ನು ತಿಳಿಸುತ್ತದೆ. ಆದಯ್ಯನೆಂಬ ವಚನಕಾರ "ಲಿಂಗೋದಕದಿಂದ ಸಂಚಿತ ಕರ್ಮ ನಾಶವಾಗುತ್ತದೆ. ಪಾದೋದಕದಿಂದ ಪ್ರಾರಬ್ಧ ಕರ್ಮನಾಶವಾಗುತ್ತದೆ. ಪ್ರಸಾದೋದಕದಿಂದ ಆಗಾಮಿ ಕರ್ಮನಾಶವಾಗುತ್ತದೆ ಎಂದು ಹೇಳಿ ಈ ಮೂರು ರೀತಿಯ ಪಾದೋದಕದಿಂದ ಬ್ರಹ್ಮ ಹತ್ಯೆ ಭ್ರೂಣಹತ್ಯೆಯ ಪಾಪ ದೋಷ ಪರಿಹಾರವಾಗುತ್ತದೆ " (ವ–೮೨) ಎಂದು ಹೇಳುತ್ತಾನೆ. ಹೀಗೆ ಪಾದೋದಕ ಕ್ರಿಯೆಗಳನ್ನು ಮನ ಪೂರ್ವಕವಾಗಿ ಮಾಡಿದರೆ ಬದುಕಿನ ಎಲ್ಲ ಪಾಪಗಳು ಕಳೆದು ಭಕ್ತನು ಮುಕ್ತಿಗೆ ಅರ್ಹನಾಗುತ್ತಾನೆ ಶರಣರು.

ಪ್ರಸಾದ : ಗುರು–ಲಿಂಗ–ಜಂಗಮರು ಆರೋಗಣೆಯ ಮಾಡಿ ಮಿಕ್ಕು ಉಳಿದ್ದೇ ಪ್ರಸಾದ. ಪ್ರಸಾದವು ಎಲ್ಲ ವೀರಶೈವರಿಗೂ ಪವಿತ್ರವಾದುದು. ಪಾದೋದಕದಂತೆ ಪ್ರಸಾದವನ್ನು ಗುರುಪ್ರಸಾದ, ಲಿಂಗಪ್ರಸಾದ, ಜಂಗಮ ಪ್ರಸಾದಗಳೆಂದು ವಿಭಾಗಿಸುತ್ತಾರೆ. "ಗುರು ಪ್ರಸಾದವು ಅಂಗವನ್ನು

ಸೋಂಕಿದರೆ ಸರ್ವಾಂಗವೆಲ್ಲ ಗುರುವಾಗುವುದು. ಲಿಂಗಪ್ರಸಾದ ಮನವನ್ನು ಸೋಂಕಿದಲ್ಲಿ ಮನ ಲಿಂಗವಾಗುವುದು. ಜಂಗಮ ಪ್ರಸಾದ ಅರಿವನ್ನು ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಾಗುವುದು. ಹಾಗಾಗಿ ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಪ್ರಸಾದವೇ ಸಚ್ಚಿದಾನಂದ, ಪ್ರಸಾದವೇ ಜ್ಞಾನಾತೀತ, ಪ್ರಸಾದವೇ ವಾಙ್ಮನಾತೀತ, ಪ್ರಸಾದವೇ ನಿತ್ಯ ಪರಿಪೂರ್ಣ." (ವ-೧೦೭) ಎಂದು ಉರಿಲಿಂಗ ಪೆದ್ದಿ ಪ್ರಸಾದದ ಮಹತ್ವವನ್ನು ಹೇಳಿದ್ದಾನೆ.

"ಶುದ್ಧ ಪ್ರಸಾದ ಗುರು ಮುಖದಿಂದ ಬಂದುದು.
ಸಿದ್ಧ ಪ್ರಸಾದ ಲಿಂಗ ಮುಖದಿಂದ ಬಂದುದು,
ಪ್ರಸಿದ್ಧ ಪ್ರಸಾದ ಜಂಗಮ ಮುಖದಿಂದ ಬಂದುದು. "(ವ-೧೦೬)

ಎಂದು ಹೇಳಿ, ಇವು ಕ್ರಮವಾಗಿ ತನು, ಮನ, ಧನಗಳನ್ನು ಶುದ್ಧಿಗೊಳಿಸುತ್ತವೆ ಎಂದು ಚೆನ್ನಬಸವಣ್ಣ ಪ್ರಸಾದದ ಮಹತ್ವವನ್ನು ಹೇಳಿದ್ದಾನೆ.

ಪಾದೋದಕದಂತೆ ಜಂಗಮಕ್ಕೆ ಅರ್ಪಿತವಾದ ಪ್ರಸಾದವನ್ನೆ ಲಿಂಗಕ್ಕೆ ಅರ್ಪಿಸಬೇಕು ಎಂಬುದು ವಚನಕಾರರ ಅಭಿಮತ.

ಘನಲಿಂಗಿದೇವನು ತನ್ನ ಇಡೀ ದೇಹವೇ ಪ್ರಸಾದಮಯವಾಗಿರುವುದನ್ನು(ವ-೧೦೯) ಚಿತ್ರಿಸಿದ್ದಾನೆ.ಇದೇ ಭಾವನೆಯನ್ನು ಅಕ್ಕಮಹಾದೇವಿಯು ವ್ಯಕ್ತಪಡಿಸಿದ್ದಾಳೆ. ಈ ರೀತಿಯ ಪ್ರಸಾದದ ಕಲ್ಪನೆ ಸಮುದಾಯ ಜೀವನವನ್ನು ವ್ಯವಸ್ಥೆಗೊಳಿಸುವಂತದಾಗಿದೆ. ಕಾಯಕದಿಂದ ಸಂಪಾದಿಸಿ ತಿನ್ನಬೇಕೆಂಬ ತತ್ವದಿಂದಾಗಿ ಭಕ್ತನು ತನ್ನ ಶ್ರಮ ಸಾರ್ಥಕವಾಗದಂತೆ ಎಚ್ಚರವಹಿಸುತ್ತಾನೆ. ಪ್ರಸಾದ ಪರಿಕಲ್ಪನೆಯಲ್ಲಿ ಶ್ರಮದ ಹಂಚಿಕೆಯ ಭಾವನೆಯು ಅಡಕವಾಗಿದೆ. ಇಲ್ಲಿ ಪ್ರಸಾದವೆಂದರೆ ಊಟ ಮಾತ್ರ ಅಲ್ಲ, ಭಕ್ತನು ಪಡೆಯುವ ಎಲ್ಲ ಇಂದ್ರಿಯಾನುಭವಗಳೂ ಪ್ರಸಾದವಾದ್ದರಿಂದ ಜೀವನವಿಡೀ ಪ್ರಸಾದ ಭೋಜನವೇ ಆಗುತ್ತದೆ ಎಂಬುದು ಶರಣರ ಅಭಿಮತವಾಗಿದೆ. ಹಾಗಾಗಿಯೆ ಪ್ರಸಾದಕ್ಕೂ ಅವರು ಮಹತ್ವದ ಸ್ಥಾನವನ್ನು ನೀಡಿದ್ದಾರೆ.

ವಿಭೂತಿ : ವಿಭೂತಿ ಧಾರಣೆಯ ವೀರಶೈವರಿಗೆ ಜನ್ಮ ಪ್ರಾರಂಭದಿಂದಲೆ ಆರಂಭವಾಗುತ್ತದೆ. ಇದು ನಂದೆ, ಭದ್ರೆ, ಸುರಭಿ, ಸುಶೀಲೆ, ಸುಮನೆಗಳೆಂಬ ಐದು ಗೋವುಗಳಿಂದ ತಯಾರಿಸಿದ್ದು, ಇದನ್ನು ಕ್ರಮವಾಗಿ ವಿಭೂತಿ, ಭಸಿತ, ಭಸ್ಮ, ಕ್ಷರೆ, ರಕ್ಷೆಯೆಂಬ ಹೆಸರುಗಳನ್ನು ಪಡೆಯುತ್ತದೆ. ಇದು ಭಕ್ತಿಯ ಬೆಳಕು. "ವಿಭೂತಿಯನ್ನು ಧರಿಸಿದರೆ ಸಕಲ ದುರಿತವ ನಿವಾರಣವ ಮಾಡಿ ಘನಸುಖವ ಕೊಡುವುದು ನೋಡಾ, ಪ್ರಣವದ ಬೆಳಗು, ಪಂಚಾಕ್ಷರಿಯ ಕಳೆ, ಪರಮನಂಗಚ್ಛವಿ, ಶ್ರೀವಿಭೂತಿ ನೋಡಾ. ಶಾಂತಿಯ ನೆಲೆವನೆ, ಸರ್ವ ರಕ್ಷೆಯ ತವರೆನಿಸಿ, ಸಮಸ್ತ ಕಾಮಿತ ಸುಖವೀವುದು ಶ್ರೀವಿಭೂತಿ ನೋಡಾ. ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷ, ಅಪಸ್ಮಾರ ಬಾಧೆಯ ಬಿಡಿಸಿ, ನಿಜ ಸುಖವನಿತ್ತು ಸಲಹೂದು ಶ್ರೀ ವಿಭೂತಿ ನೋಡಾ" (ವ-೧೨೦) ಎಂದು ಸ್ವತಂತ್ರ ಸಿದ್ಧಲಿಂಗೇಶ್ವರ ಹೇಳಿದ್ದಾನೆ. ಇದರಿಂದ ಕರ್ಮತ್ರಯ, ಮಲತ್ರಯ ನಾಶವಾಗುವುದಲ್ಲದೆ, ವಿಧಿಲಿಖಿತ ತೊಡೆದು, ಪರಮಜ್ಞಾನವನ್ನು ನೀಡಿ, ಭವಬಂಧನವನ್ನು ನಿವಾರಿಸುವುದೆಂದು ಶರಣರು ನಂಬಿದ್ದಾರೆ.

ಚೆನ್ನಬಸವಣ್ಣನು

"ಅಯ್ಯಾ ಎನಗೆ ವಿಭೂತಿಯೇ ಕುಲದೈವ,
ಅಯ್ಯಾ ಎನಗೆ ವಿಭೂತಿಯೇ ಮನೆದೈವ
ಅಯ್ಯಾ ಎನಗೆ ವಿಭೂತಿಯೇ ಸರ್ವಕಾರಣ
ಅಯ್ಯಾ ಎನಗೆ ವಿಭೂತಿಯೇ ಸರ್ವಸಿದ್ಧಿ,
ಅಯ್ಯಾ ಎನಗೆ ವಿಭೂತಿಯೇ ಸರ್ವವಸ್ಯ,
– – – – – – – – – – – – – –
ಅಯ್ಯಾ ಎನಗೆ ವಿಭೂತಿಯೇ ಸರ್ವ ಸಾಧನವಯ್ಯಾ" (ವ–೧೨೬)

ಎಂದು ವಿಭೂತಿಯ ಮಹತ್ವವನ್ನು ಸಾರುತ್ತಾನೆ. ಶಿವತತ್ವದ ಮೂಲಾಧಾರವಾದ ಜ್ಞಾನ ಶಕ್ತಿಯೇ ಚಿದ್ವಿಭೂತಿ. ಇದನ್ನು ಅಂತರಂಗದಲ್ಲಿ ಧರಿಸಬೇಕು. ಆಗ ಆ ಬೆಳಗಿನಲ್ಲಿ ಪರಮಾತ್ಮನನ್ನು ಕಾಣಲು ಸಾಧ್ಯವಾಗುತ್ತದೆ. ಈ ವಿಭೂತಿ ಕೇವಲ ಸಗಣಿಯ ಬೆರಣಿಯನ್ನು ಸುಟ್ಟ ಬೂದಿಯಲ್ಲ. ಇದು ಶಿವನ ಮೈ ಬೆಳಕಾಗಿರುವುದು. ಗೋಮಯದಿಂದ ಸಿದ್ಧವಾಗಿದ್ದ ಭಸ್ಮಕ್ಕೆ ಪಾದೋದಕವನ್ನು ಸಿಂಪಡಿಸಿ ಧರಿಸಿದರೆ ಸಕಲ ಪಾಪತಾಪಗಳು ಸುಟ್ಟು ಹೋಗುವವು ಎಂಬುದನ್ನು ವೀರಶೈವ ವಚನಕಾರರು ಬಲವಾಗಿ ನಂಬಿದ್ದಾರೆ.

ರುದ್ರಾಕ್ಷಿ : ಇದು ಪರಶಿವನ ನೇತ್ರ ಬಿಂದುವಿನಿಂದ ಉದಯವಾದುದು. ಪಂಚಮುಖನೇ ಪಂಚಮುಖ ರುದ್ರಾಕ್ಷಿ. ಇದನ್ನು ಧರಿಸಿದವನು ರುದ್ರನಾಗುತ್ತಾನೆ. ರುದ್ರಾಕ್ಷಿಯನ್ನು ಧರಿಸಿದವನು ಮರ್ತ್ಯನಾಗುವುದಿಲ್ಲ ಎಂಬ ಭಾವನೆ ವೀರಶೈವರಲ್ಲಿದೆ. ರುದ್ರಾಕ್ಷಿ ಪಾಪನಾಶಕ. ಅದು ತನುವಿಗೆ ಶುದ್ಧಿ ಸುಖಗಳನ್ನು, ಮನಕ್ಕೆ ಮಂಗಳ ಮನೋಹರತೆಯನ್ನು ನೀಡುತ್ತದೆ.

" ಶ್ರೀರುದ್ರಾಕ್ಷಿಯ ಧರಿಸಿದಾತನೆ ಲಿಂಗವೆಂಬೆ
ಶ್ರೀ ರುದ್ರಾಕ್ಷಿಯ ಧರಿಸದ ಅಧಮರನೆ ಭವಿಯೆಂಬೆ" (ವ–೧೩೬)

ಎಂದು ಹೇಳುತ್ತಾನೆ. ರುದ್ರಾಕ್ಷಿಯನ್ನು ಕೈ. ತೋಳು, ಎದೆ, ಕಂಠ, ಕಿವಿ, ಮತ್ತು ತಲೆಗಳಲ್ಲಿ ಧರಿಸಬೇಕು. ಹಾಗೆ ಧರಿಸಿದವನು ಸಾಕ್ಷಾತ್ ರುದ್ರನೇ ಆಗುತ್ತಾನೆ. "ಅದು ಸರ್ವ ಪಾವನ, ಸರ್ವಕಾರಣ, ಸರ್ವ ಸಾಧನ, ಸರ್ವಸಿದ್ಧಿ, ಸರ್ವ ಪಾಪಕ್ಷಯವಾದ ರುದ್ರಾಕ್ಷಿ ಮುಕ್ತಿ ಪಥಕ್ಕೆ ಕಾರಣವಾಗುತ್ತದೆ". (ವ–೩೮) ಎಂದು ಹೇಳಿದ ಬಸವಣ್ಣನು ಮುಂದುವರೆದು

" ಅಯ್ಯಾ ರುದ್ರಾಕ್ಷಿಯಿಂದ ಹರಿದೆನು ಭವಪಾಶಂಗಳ,
ಅಯ್ಯಾ ರುದ್ರಾಕ್ಷಿಯಿಂದ ಮುರಿದೆನು ತನುಗುಣಂಗಳ
ಅಯ್ಯಾ ರುದ್ರಾಕ್ಷಿಯಿಂದ ಒರೆಸಿದೆನು ಮಹಾಮಾಯೆಯ
ಅಯ್ಯಾ ರುದ್ರಾಕ್ಷಿಯಿಂದ ಕಳೆದನು ಪಂಚಮಹಾಪಾತಕವ"

ಎಂದು ರುದ್ರಾಕ್ಷಿ ಮಹಿಮೆಯನ್ನು ಹೇಳಿದ್ದಾನೆ. ರುದ್ರಾಕ್ಷಿಯ ಮಹತ್ವವನ್ನು ಅದನ್ನು ಎಲ್ಲೆಲ್ಲಿ ಧರಿಸಬೇಕೆಂಬುದನ್ನು ವಚನಕಾರರು ವಚನಗಳಲ್ಲಿ ಕೊಂಡಾಡಿದ್ದಾರೆ.

ಮಂತ್ರ : ಅಷ್ಟಾವರಣಗಳಲ್ಲಿ ಕೊನೆಯದಾದ ಮಂತ್ರವು ವೀರಶೈವಕ್ಕೆ ಮಾತ್ರ ವಿಶಿಷ್ಟವಾದುದಲ್ಲವಾದರು ಅದು ನಂಬಿರುವ ವೀರಶೈವನ ಜೀವನದಲ್ಲಿ , ಎಲ್ಲಾ ಧಾರ್ಮಿಕ ವಿಧಿಗಳಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಂತ್ರವೆಂಬುವ ಶಬ್ದವು 'ಮನ್'

(ಆಲೋಚಿಸು) ಮತ್ತು 'ತ್ರ' (ಕಾಪಾಡು) ಗಳು ಸೇರಿ ಆಗಿರುವುದಾಗಿದೆ. ಯಾರು ಇದನ್ನು ಪಠಿಸುತ್ತಾರೋ ಅವರನ್ನು ಇದು ಕಾಪಾಡುತ್ತದೆ ಎಂಬ ಅರ್ಥವನ್ನು ಪಡೆಯುತ್ತದೆ.

"ಓಂ ನಮಃ ಶಿವಾಯ" ಎಂಬುದೇ ಮಂತ್ರ. ಇದು ಏಳು ಕೋಟಿ ಮಂತ್ರಗಳಲ್ಲಿ ಶ್ರೇಷ್ಠವಾಗಿರುವುದು. ಈ ಮಂತ್ರ ಜಪದಿಂದ ಸಾಧಕನ ಅಭೀಷ್ಟಗಳೆಲ್ಲ ಸಿದ್ಧಿಸುವವು. ಮಾನವ ಪ್ರತಿದಿನ ಸಾವಿರಾರು ಬಾರಿ ಉಸಿರಾಡುವನು. ಅವನು ತನ್ನ ಉಸಿರಿನೊಡನೆ ಈ ಮಂತ್ರದ ಸಂಬಂಧ ಮಾಡಿದರೆ ಅವನು ಕೇವಲ ಶಿವನೇ ಆಗುವನು" ಎಂದು ಶರಣರು ನಂಬಿದ್ದಾರೆ.[೪೨]

ವೀರಶೈವರು ನಂಬಿರುವ 'ನಮಃ ಶಿವಾಯ" ಎಂಬ ಮಂತ್ರವು ಐದು ಅಕ್ಷರದಿಂದ ಕೂಡಿದೆ. ಇದು ಪ್ರಣವಾಕ್ಷರವಾದ 'ಓಂ' ಜೊತೆ ಸೇರಿ ಷಡಕ್ಷರ ಮಂತ್ರವಾಗುವುದು. ಶಿವಶರಣರು ಶಿವಲೋಕವನ್ನೆ ಸತ್ಯ ಎಂದು ನಂಬಿದಂತೆಯೆ ಶಿವ ಮಂತ್ರವೇ ನಿಜವಾದ ಮಂತ್ರವೆಂದು ನಂಬಿದ್ದಾರೆ. "ಇದನ್ನು ನಂಬಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆ. ನಂಬದಿದ್ದರೆ ಭವಬಂಧನದಲ್ಲಿಯೆ ಇರಬೇಕಾಗುತ್ತದೆ." (ವ–೧೪೯) ಉರಿಲಿಂಗ ಪೆದ್ದಿಯು "ಓಂ ನಮಃ ಶಿವಾಯವೆಂಬುದನ್ನು ವೇದಕ್ಕೆ, ಶಾಸ್ತ್ರಕ್ಕೆ , ಆಗಮಕ್ಕೆ, ಪುರಾಣಕ್ಕೆ ಹೋಲಿಸಿ ಇದರಿಂದ ಸಕಲ ಕಳೆ ದೊರೆಕೊಳ್ಳುದು (ವ–೧೫೧) ಎಂದು ಹೇಳಿದ್ದಾನೆ. ಈತ ಮುಂದುವರೆದು ಓಂ ನಮಃ ಶಿವಾಯವನ್ನು ಮಂತ್ರ, ಯಂತ್ರ, ತಂತ್ರಕ್ಕೆ ಹೋಲಿಸಿ, ಅದರಿಂದ ಸಕಲ ಸಿದ್ಧಿಯು ದೊರೆಯುವುದೆಂದು ಹೇಳಿದ್ದಾನೆ. "ನನ್ನ ಮನ ಓಂ ನಮಃ ಶಿವಾಯವನ್ನಲ್ಲದೆ ಮತ್ತೊಂದನರಿಯದಯ್ಯಾ" (ವ–೧೫೭) ಎಂದು ಬಸವಣ್ಣ ಹೇಳಿದ್ದಾನೆ. ತೋಂಟದ ಸಿದ್ಧಲಿಂಗ ಯತಿಗಳು " ಶಿವನಲ್ಲದೆ ನನಗೆ ಬೇರೆ ದೇವರಿಲ್ಲ. ಹಾಗೆ ಶಿವ ಮಂತ್ರವಲ್ಲದೆ ಬೇರೆ ಮಂತ್ರವಿಲ್ಲ." (ವ–೧೫೮) ವೆಂದಿದ್ದಾನೆ. ಈ ಮಂತ್ರವನ್ನು "ಆಚಾರ ಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ" ವೆಂದು (ವ–೧೫೩) ಪರಿಗಣಿಸಿದ್ದಾರೆ ವಚನಕಾರರು.

ಈ ಮೇಲಿನ ಎಂಟು ತತ್ವಗಳು ವೀರಶೈವವನ್ನು ರಕ್ಷಿಸುವ ಆವರಣಗಳು. ಇವು ಬಹಿರಂಗಕ್ಕೆ ಹೇಗೆ ಅನ್ವಯಿಸುತ್ತವೋ ಹಾಗೆಯೇ ಅಂತರಂಗಕ್ಕೂ ಅನ್ವಯಿಸುತ್ತವೆ. ಅಷ್ಟಾವರಣಗಳು ಅಂಗವನ್ನು ಮಾಯೆಯಿಂದ ರಕ್ಷಿಸಿ ಭಕ್ತನ ಜೀವನ ಆಧ್ಯಾತ್ಮದ ಸಾಧನೆಗೆ ಕಾರಣವಾಗುತ್ತವೆ ಎಂಬುದು ವಚನಕಾರರ ಆಶಯ. ಭಕ್ತನು ಶಿವನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ ಷಟ್ ಸ್ಥಲ ಮಾರ್ಗದಲ್ಲಿ ಸಾಗಬೇಕು. ಆತನು ಆಧ್ಯಾತ್ಮಿಕ ಸಾಧನೆ ಮಾಡಬೇಕಾದರೆ ಅಷ್ಟಾವರಣಗಳು ಮೆಟ್ಟಿಲಾಗಿ ಕಂಗೋಳಿಸುತ್ತವೆ. ಈ ಎಂಟು ಆವರಣಗಳ ಮಹತ್ವವನ್ನು ಅರಿಯಲು ಎಳಮಲೆಯ ಗುರುಶಾಂತದೇವ ಅನೇಕ ಶರಣ–ಶರಣೆಯರ ವಚನಗಳನ್ನು[೪೩] ಸಂಕಲಿಸಿಕೊಟ್ಟಿದ್ದಾನೆ. ಅಷ್ಟಾವರಣಕ್ಕೆ ಸಂಬಂಧ ಪಟ್ಟ ವಿವಿಧ ವಚನಕಾರರ ವಚನಗಳು ಒಂದೆಡೆ ಸಿಗುವುದೇ ಈ ಸಂಕಲನದ ವೈಶಿಷ್ಟ್ಯ.

---

೪೨. ಡಾ॥ ಆರ್.ಸಿ.ಹಿರೇಮಠ (ಸಂ) 'ಶಿವದೀಪ್ತಿ,' ಪುಟ–೧೬೪

೪೩. ಗುರುಮಹತ್ವದ ೩೦ ವಚನಗಳು, ಲಿಂಗ ಮಹತ್ವದ ೩೦ ವಚನಗಳು ಜಂಗಮ ಮಹತ್ವದ ೧೭ ವಚನಗಳು, ಪಾದೋದಕ ಮಹತ್ವದ ೧೮ ವಚನಗಳು, ಪ್ರಸಾದ ಮಹತ್ವದ ೨೦ ವಚನಗಳು, ವಿಭೂತಿ ಮಹತ್ವದ ೧೫ ವಚನಗಳು, ರುದ್ರಾಕ್ಷಿ ಮಹತ್ವದ ೧೫ ವಚನಗಳು, ಮಂತ್ರ ಮಹತ್ವದ ೧೫ ವಚನಗಳು ಸೇರಿವೆ.

೨. ಚಿತ್ರಿಯ ಸಂಗ್ರಹ

* ಜಿಗುನಿ ಮರುಳ ದೇವ

ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯನಾದ ಜಿಗುನಿ ಮರುಳದೇವನು ಶಿವತತ್ವವೇ ಮೂರ್ತಿವೆತ್ತಂತಹ ಮೇದಾವಿಯೂ ಶ್ರೇಷ್ಠ ಮಟ್ಟದ ಅನುಭಾವಿಯೂ ಆಗಿದ್ದಾನೆ. ಈತನು 'ಚಿತ್ರಿಯ ಸಂಗ್ರಹ' ಎಂಬ ತನ್ನ ಸಂಕಲನದಲ್ಲಿ ವೇದ, ಆಗಮ, ಪುರಾಣಗಳನ್ನು ವೀರಶೈವ ತಾತ್ವಿಕ ವಿಷಯ ಪ್ರತಿಪಾದನೆಗೆ ಹಾಗು ಗುರುತ್ವವನ್ನು ನಿರೂಪಿಸಲು ಅಲ್ಲಮ, ಬಸವ, ದಾಸಿಮಯ್ಯ, ಉರಿಲಿಂಗ ಪೆದ್ದಿ, ಸಿದ್ಧರಾಮ, ಚೆನ್ನಬಸವಣ್ಣ, ಮುಂತಾದವರ ವಚನಗಳನ್ನು ಬಳಸಿಕೊಂಡಿದ್ದಾನೆ.

ವೀರಶೈವ ಧಾರ್ಮಿಕ ವಿಚಾರಗಳನ್ನು ಪ್ರಧಾನವಾಗಿ ಚರ್ಚಿಸಿರುವ ಸಂಕಲನ ಗ್ರಂಥ ಇದು. ಬಸವಾದಿ ಶಿವಶರಣರ ವಚನಗಳಲ್ಲಿ ತಾತ್ವಿಕ ವಿಚಾರವಿರುವ ವಚನಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಪ್ರಸ್ತಾಪ ಮಾಡುತ್ತಿರುವಾಗ ನಡು ನಡುವೆ ವೇದ, ಶಿವಾಗಮ, ಪುರಾಣಗಳಿಂದ ಉದ್ಧೃತವಾದ ಸಂಸ್ಕೃತ ಶ್ಲೋಕಗಳನ್ನು ವಚನಗಳಲ್ಲಿ ಪ್ರಸ್ತಾಪವಾದ ವಿಷಯಗಳಿಗೆ ಪೂರಕವಾಗಿ ಕೊಟ್ಟಿರುತ್ತಾನೆ. ಹಾಗಾಗಿ ವಚನಗಳು ಪ್ರಮಾಣಯುಕ್ತವಾದವುಗಳು ಎಂಬುದನ್ನು ತೋರಿಸುವುದು ಈತನ ವಿಚಾರವಾಗಿರುವಂತಿದೆ. ಈ ಸಂಕಲನದಲ್ಲಿ ಹಾಗೆ ಆಯ್ಕೆ ಮಾಡಿಕೊಂಡ ಬಸವಾದಿ ಶರಣ-ಶರಣೆಯರ ೩೪ ವಚನಗಳಿವೆ. ಇವುಗಳಲ್ಲಿ ೧೪ ವಚನಗಳು ಚೆನ್ನಬಸವಣ್ಣನ ವಚನಗಳೇ ಆಗಿವೆ. ಈ ಕೃತಿಯನ್ನು ಡಾ॥ ಎಸ್. ವಿದ್ಯಾಶಂಕರ್ ಸಂಪಾದಿಸಿದ್ದಾರೆ. ಇದು ವೀರ ಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ ಇಲ್ಲಿಂದ ಪ್ರಕಟವಾಗಿದೆ.

ಚಿತ್ರಿಯ ಸಂಗ್ರಹ ಪ್ರಧಾನವಾಗಿ ಆಗಮೋಕ್ತಿಗಳ ಸಂಗ್ರಹ. ವಾತುಲ, ಉತ್ತರ ವಾತುಲ, ವಾತುಲಸಾರ, ಶಿವಾಗಮ, ಶಿವಾಗಮ ಸಾರ, ವೀರಾಗಮ, ಶಿವಲಿಂಗಾಗಮ, ಅಸಿಪಾದಾಗಮ, ಕಲಾತೀತಾಗಮ, ನಿಷ್ಕಲಾತೀತಾಗಮ, ಸಾಮವೇದ, ಅಥರ್ವಣ, ಶಿವಧರ್ಮ ಸೂತ್ರ, ಬ್ರಹ್ಮೋತ್ತರ ಸೂತ್ರ, ಯೋಗಸಾರ, ಬಾಯೆಂಗ ಸಾರ, ನಿರಾಮಯ ಸಾರ, ಚಿತ್ಪ್ರಕಾಶಸೂತ್ರ, ದೀಕ್ಷಾವಿಧಾನ, ಮುಂತಾದ ಸಂಸ್ಕೃತ ಮೂಲಗಳಿಂದ ಪ್ರಮಾಣೋಕ್ತಿಗಳನ್ನು ಆರಿಸಿಕೊಳ್ಳಲಾಗಿದೆ. ಸಂಸ್ಕೃತ ಕೃತಿಗಳ ಶ್ಲೋಕಗಳಲ್ಲಿ ವ್ಯಕ್ತಗೊಂಡಿರುವ ಅಭಿಪ್ರಾಯವನ್ನು ಸೂತ್ರರೂಪದಲ್ಲಿ ಕೊಟ್ಟು, ಸಂಸ್ಕೃತ ಮೂಲಗಳ ಜೊತೆಗೆ ತಾತ್ವಿಕ ವಿಷಯ ಪ್ರತಿಪಾದನೆಗೆ ವಚನಗಳನ್ನು ಬಳಸಿಕೊಂಡಿದ್ದಾನೆ. ಶಿವಶರಣರ ವಚನಗಳು ವೇದಾಗಮಗಳಂತೆ ವೀರಶೈವ ಧರ್ಮದ ತಾತ್ವಿಕ ವಿಚಾರಗಳನ್ನು ಹೇಳುವ ಪ್ರಮಾಣಗಳು. ವಚನಗಳಲ್ಲಿ ಧರ್ಮ ಮತ್ತು ಶಾಸ್ತ್ರೀಯ ವಿಚಾರಗಳು ಅಡಕವಾಗಿವೆ ಎಂಬುದೇ ಸಂಕಲನಕಾರನ ಅಭಿಪ್ರಾಯವಿದ್ದಂತಿದೆ.

ಈ ಸಂಕಲನ ಯಾವುದೇ ಒಂದು ನಿರ್ದಿಷ್ಟ ವಸ್ತುವಿನ ಹಿನ್ನೆಲೆಯಲ್ಲಿ ರೂಪಗೊಂಡದ್ದಲ್ಲ. ವೀರಶೈವ ಧರ್ಮದ ಎಲ್ಲಾ ತಾತ್ವಿಕ ವಿಚಾರಗಳ ವ್ಯಾಪ್ತಿ ಮತ್ತು ಅದರ ಮಹತ್ವವನ್ನು ಹೇಳುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಉದ್ಧೃತವಾಗಿರುವ ಪ್ರತಿಯೊಂದು ಸೂತ್ರಗಳ ಒಳಗೆ ಸಂಕಲನದ ವಸ್ತು ಅಡಕವಾಗಿದೆ. ಅದನ್ನು ವಿವರಿಸಲು ವೇದ, ಶಿವಾಗಮ, ಪುರಾಣಗಳ ಆಧಾರವನ್ನು

ಒದಗಿಸುತ್ತಾನೆ. ಅವುಗಳಿಗೆ ಪೂರಕವಾಗಿ ವಚನಕಾರರ ವಚನಗಳನ್ನು ಹೇಳಿ ವಚನಗಳ ಮಹತ್ವವನ್ನು ಎತ್ತಿ ತೋರಿಸುತ್ತಾನೆ.[೪೩೬]

ಹೀಗೆ ಷಟ್‌ಸ್ಥಲ ಲಿಂಗ ಸಂಪನ್ನ ಶರಣರ ಭೃತ್ಯರ ಭೃತ್ಯತದ್ ಭೃತ್ಯನಪ್ಪ ಮಹಾಪದವೇ ಉತ್ತಮವಾದುದು. ಅಷ್ಟಾವರಣಗಳ, ಪಂಚಾಚಾರಗಳ, ಷಟ್‌ಸ್ಥಲ ತತ್ವವನ್ನು ಅನುಸರಿಸಿ ಪ್ರಸಾದಿಯಾದ ಶರಣನೆ ಮಂತ್ರ ಮೂರ್ತಿವೆತ್ತ ಗುರುತತ್ವವು, ಅಂತಹ ಗುರುವಿನ ಸ್ತೋತ್ರದಿಂದ ಸಂಕಲನ ಮುಕ್ತಾಯವಾಗುತ್ತದೆ. ಸಂಕಲನದಲ್ಲಿ ಅಂತಹ ವೈಶಿಷ್ಟ್ಯ ಕಂಡುಬರುವುದಿಲ್ಲ. ಇದರಲ್ಲಿರುವ ತಾತ್ವಿಕ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಸಾಮಾನ್ಯರಿಗೆ ಕಷ್ಟವಾಗುತ್ತದೆ. ಅವರಿಗೂ ಸಂಸ್ಕೃತ ಭಾಷಾಜ್ಞಾನ, ವೇದಾಗಮ ಮುಂತಾದ ಧರ್ಮಶಾಸ್ತ್ರಗಳ ಜ್ಞಾನ ಅವಶ್ಯಕವಾಗಿರುತ್ತದೆ. ಸಂಕಲನಕಾರನ ಉದ್ದೇಶ ವೇದಾಗಮ ಮುಂತಾದ ಧರ್ಮಶಾಸ್ತ್ರಗಳಲ್ಲಿ ಅಡಕವಾಗಿರುವ ಶಿವ ಧರ್ಮ ತತ್ವವು ನಮ್ಮ ವಚನಕಾರರ ವಚನಗಳಲ್ಲೂ ಇದೆ ಎಂಬುದನ್ನು ತೋರಿಸಿಕೊಡುವುದಾಗಿದೆ. ವೇದ, ಆಗಮ, ಉಪನಿಷತ್‌ಗಳಲ್ಲಿ ವೀರಶೈವ ಧರ್ಮದ ಪ್ರಾಚೀನತೆಯನ್ನು ನೋಡಬಹುದು. ಕಾಮಿಕಾದಿ ವಾತುಲಾಂತವಾದ ೨೮ ಆಗಮಗಳಲ್ಲಿ ವೀರಶೈವ ಧರ್ಮವನ್ನು ವಿವರಿಸಲಾಗಿದೆ.

೩.ಪ್ರಭುದೇವರ ಷಟ್‌ಸ್ಥಲ ಜಂಗಮಸ್ಥಲ ನಿರ್ದೇಶ

* ಅಜ್ಞಾತ ಸಂಕಲನಕಾರ

ಒಬ್ಬನೇ ವಚನಕಾರನ ವಚನಗಳನ್ನು ಷಟ್‌ಸ್ಥಲಗಳ ಹಿನ್ನೆಲೆಯಲ್ಲಿ ಆರಿಸಿ ಸೇರಿಸಿದ ಸಂಕಲನ ಇದಾಗಿದೆ. ಈ ಕೃತಿಯನ್ನು ಸಂಕಲಿಸಿದವನ ಹೆಸರು ಎಲ್ಲಿಯೂ ಉಕ್ತವಾಗಿಲ್ಲ. ಸಂಕಲನದ ಅಂತ್ಯದಲ್ಲಿ " – – ಷಟ್‌ಸ್ಥಲ ಬ್ರಹ್ಮ ಪ್ರಭುದೇವರು ತಮ್ಮಾದಿ ಮಧ್ಯಾವಸಾನವನರಿದು ನಿರೂಪಿಸಿದ ಷಟ್‌ಸ್ಥಲ ಜಂಗಮ ಸ್ಥಲ ನಿರ್ದೇಶ ಸಂಪೂರ್ಣಂ" ಎಂಬ ಹೇಳಿಕೆಯಿಂದಾಗಿ ಇದು ಪ್ರಭುದೇವರು ತಮ್ಮದೇ ವಚನಗಳಿಂದ ಸಿದ್ಧಪಡಿಸಿದ ಕೃತಿಯೆಂಬ ಅರ್ಥಬರುತ್ತದೆ. ಆದರೆ ಇದು ಬೇರೊಬ್ಬ ಅನುಭಾವಿ ಸಂಕಲನಕಾರನಿಂದ ಸಂಯೋಜನೆಗೊಂಡಿರಬಹುದೆಂಬುದಕ್ಕೆ ಸಂಕಲನದಲ್ಲಿಯೆ ಆಧಾರಗಳು ದೊರಕುತ್ತವೆ. ಈ ಕೃತಿ ಷಟ್‌ಸ್ಥಲಗಳ ಆಧಾರದಲ್ಲಿ ರಚಿತವಾಗಿದೆ. ಪ್ರತಿಸ್ಥಲದ ಆದಿಯಲ್ಲಿ ಬರುವ "ಇಂತಪ್ಪ ಪರಮ ವಿಶ್ವಾಸದಿಂದಾಚಾರಲಿಂಗ ಸಮರಸವನೆಯ್ದಿದ ಮಹಾಜ್ಞಾನಿ ಪ್ರಭುದೇವರು 'ಪ್ರಾಣಮಾಚಾರ ಲಿಂಗಂಚ ಗುರುಲಿಂಗಂ ಭವೇತ್ಯಪಿ" ಎಂಬುದಾಗಿ, ಆಚಾರ ಲಿಂಗಕ್ಕೆ ಪ್ರಾಣಕಳೆ ಗುರುಲಿಂಗವೆಂದರಿದು, ಆ ಗುರು ಲಿಂಗದಲ್ಲಿ ನೈಷ್ಟೆವಿಡಿದಾಚರಿಸುತ್ತಿರೆ ಮುಂದೆ ಅಂಗಸ್ಥಲ ಮಾಹೇಶ್ವರ ಸ್ಥಲವಾದುದು" ಎಂಬ ಹೇಳಿಕೆಗಳಿಂದ ಹಾಗೂ ಕೃತಿಯ ಅಂತ್ಯ ಭಾಗದಲ್ಲಿ "– ಅಲ್ಲಮ ಪ್ರಭುವೆಂದು, ಆತ್ಮ ಪ್ರಭುವೆಂದು, ನಿರಾಕಾರ ಪ್ರಭುವೆಂದು ನಮ್ಮ ಪ್ರಭುದೇವರೊಬ್ಬನೆ. ಈ ಪ್ರಭುದೇವರ ಷಟ್‌ಸ್ಥಲಕ್ಕೆ ಸೇರಿಸಿದ ವಚನ ೧೮೦ ಕ್ಕಂ ಮಂಗಳ ಮಹಾ"– ಎಂಬುದಾಗಿ ದಾಖಲಿಸಿದ್ದಾನೆ.

---

೪೩೬. ಉದಾ: 'ಚಿತ್ಕ್ರಿಯ ಸಂಗ್ರಹ' ಪುಟ–೨೧೫ ಸೂತ್ರ, ಪುಟ–೨೩೭ ಸೂತ್ರ

[illegible]

[illegible]

[illegible]

ಇಲ್ಲಿಯ ಉಲ್ಲೇಖ (ನಮ್ಮ ಪ್ರಭುದೇವರೊಬ್ಬನೆ–) ದಿಂದಾಗಿ ಈ ಕೃತಿಯನ್ನು ಪ್ರಭುದೇವ ಸಂಕಲಿಸಿದ್ದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜಂಗಮ ಸ್ವರೂಪಿಯಾದ ಪ್ರಭುದೇವರು ಸಾಧಿಸಿದ ಷಟ್‌ಸ್ಥಲ ಸಿದ್ಧಿಯನ್ನು ಅವರ ವಚನಗಳ ಮೂಲಕ ಇಲ್ಲಿ ತಿಳಿಸಿರುವುದರಿಂದ ಇದಕ್ಕೆ 'ಪ್ರಭುದೇವರ ಷಟ್‌ಸ್ಥಲ ಜಂಗಮ ನಿರ್ದೇಶ' ಎಂದು ಕರೆಯಲಾಗಿದೆ. ಹಾಗಾಗಿ ಇದನ್ನು ಜೋಡಿಸಿದವನು ಪ್ರಭುದೇವನಲ್ಲ, ಬೇರೊಬ್ಬ ಅನುಭಾವಿ. ಆತನ ಕಾಲ ಮತ್ತು ಹೆಸರುಗಳು ತಿಳಿದು ಬರುವುದಿಲ್ಲ.

ಸಂಕಲನದ ಆರಂಭದ ಎರಡು ಶ್ಲೋಕಗಳಲ್ಲಿ ಶಿವನ (ಚಂದ್ರಶೇಖರ), ಗುರುಸ್ತುತಿಯನ್ನು ಬಿಟ್ಟರೆ ಇವನ ಯಾವ ಗುರು ಪರಂಪರೆಯೂ ಇಲ್ಲಿ ತಿಳಿದು ಬರುವುದಿಲ್ಲ. ಈ ಸಂಕಲನದಲ್ಲಿ ಭಕ್ತ ಸ್ಥಲದಿಂದ ಐಕ್ಯ ಸ್ಥಲದವರೆಗೆ ಆರು ಸ್ಥಲಗಳಿವೆ. ಪ್ರತಿ ಸ್ಥಲಕ್ಕೆ ೨೮ ವಚನಗಳಂತೆ ಒಟ್ಟು ೧೬೮ ವಚನಗಳಿವೆ. ಆರಂಭದ ಸ್ಥಲವಾದ ಭಕ್ತಿ ಸ್ಥಲದ ಆದಿಯ ಪೀಠಿಕಾ ರೂಪದ ಭಾಗದಲ್ಲಿ ಮೊದಲಿಗೆ ಗುರು ಮತ್ತು ಶಿವಸ್ತುತಿ ಪರವಾದ ಎರಡು ಸಂಸ್ಕೃತ ಶ್ಲೋಕಗಳಿವೆ. ನಂತರದಲ್ಲಿ ಷಟ್‌ಸ್ಥಲ ಜಂಗಮ ನಿರ್ದೇಶ ವಿಷಯವನ್ನು ಹೇಳುವ ಎರಡು ವಚನಗಳಿವೆ. ಮುಂದೆ ಜಂಗಮ ಶಬ್ದ ನಿರ್ವಚನವನ್ನು ಹೇಳುವ ನಾಲ್ಕು ಸಂಸ್ಕೃತ ಶ್ಲೋಕಗಳಿವೆ. ತರುವಾಯ ಗದ್ಯವಿದೆ.[೪೪]

ಪ್ರಭುದೇವರ ಕುಳಸ್ಥಲ, ಸ್ಥಲಕುಳದ ಲೀಲಾ ಮೂಲವನ್ನು ವಿವರಿಸುವ ಮೂರು ವಚನಗಳಿವೆ. ಆಮೇಲೆ ಭಕ್ತಸ್ಥಲ ಆರಂಭವಾಗುತ್ತದೆ. ಇದರ ಆರಂಭದಲ್ಲಿ ನಾಲ್ಕೂ ಸಂಸ್ಕೃತ ಶ್ಲೋಕಗಳಲ್ಲಿ ಆರು ಲಿಂಗಗಳ ಸ್ವರೂಪದ ವಿವರ ಬಂದಿದೆ. ಪ್ರತಿಸ್ಥಲದ ಆರಂಭ ಹಾಗೂ ಅಂತ್ಯದಲ್ಲಿ ಗದ್ಯವಿದ್ದು, ಮಧ್ಯದಲ್ಲಿ ೨೮ ವಚನಗಳಿವೆ. ಈ ಕ್ರಮ ಇಲ್ಲಿರುವ ಆರು ಸ್ಥಲಗಳಲ್ಲಿ ಅನುಸರಿಸಲಾಗಿದೆ.

ಅಂತ್ಯಸ್ಥಲವಾದ ಐಕ್ಯಸ್ಥಲದ ನಂತರ

"ಇಂತಪ್ಪ ಸಮರಸ ಸದ್ಭಾವದಿಂ ಮಹಾಲಿಂಗೈಕ್ಯನಾದ ಮಹಾಜ್ಞಾನಿ ಪ್ರಭುದೇವರು ತಾನಖಂಡ ಲಿಂಗವೆಯಾಗಿಹನಲ್ಲದೆ ಮರಳಿ ಪರಿಭವಕ್ಕೆ ಬಾರನದೆಂತೆಂದರೆ" ಎಂದು ಹೇಳಿ ನಂತರದ ಐದು ವಚನಗಳನ್ನು ಸಮಾರೋಪದ ರೀತಿಯಲ್ಲಿ ಜೋಡಿಸಲಾಗಿದೆ. ಇಲ್ಲಿ ಐಕ್ಯನ ನಂತರದ ನಿರವಯದ ಸ್ಥಿತಿಯನ್ನು ಹೇಳಲಾಗಿದೆ.

"ಅಂಬುಧಿಯೊಳಗಾದ ನದಿಗಳು ಮರಳುವವೆ?
ಉರಿಯೊಳಗಾದ ಕರ್ಪೂರ ರೂಪಿಂಗೆ ಬಪ್ಪುದೆ ?
ಮರುತನೊಳಗಾದ ಪರಿಮಳ ಲೇಪನಕ್ಕೆ ಬಹುದೆ?
ಲಿಂಗವನರಿದು ಲಿಂಗೈಕ್ಯವಾದ ಶರಣ
ಮರಳಿ ಹುಟ್ಟುವನೆ ಗೂಗೇಶ್ವರಾ."[೪೫] (ವ–೧)

ಎಂದು ಭವ ಬಂಧನದಿಂದ ಬಿಡುಗಡೆ ಹೊಂದಿ ಮುಕ್ತಿಯನ್ನು ಪಡೆದ ಮೇಲೆ ಮರಳಿ ಹುಟ್ಟಲುಸಾಧ್ಯವೇ? ಎಂಬುದನ್ನು ಮೂರು ದೃಷ್ಟಾಂತಗಳ ಮೂಲಕ ಸೊಗಸಾಗಿ ಚಿತ್ರಿಸಿದ್ದಾನೆ.

---

೪೪. ಇಂತು ಬ್ರಹ್ಮ ವಿಷ್ಣು ಇಂದ್ರಾದಿಗಳಿಂದರ್ಚಿಸಿಕೊಳಲ್ಪಟ್ಟ ಶ್ರೀಪಾದ ಪದ್ಮದ್ವಯವನುಳ್ಳ ಸಚ್ಚಿದಾನಂದ ನಿತ್ಯ ಪರಿಪೂರ್ಣ ಷಟ್‌ಸ್ಥಲ ಬ್ರಹ್ಮ ಪ್ರಭುದೇವರ ಕುಳಸ್ಥಲ, ಸ್ಥಲಕುಳದ ಲೀಲಾ ಮೂಲವೆಂತೆಂದಡೆ"

೪೫. ಗೂಗೇಶ್ವರ ಅಂಕಿತದ ವಿವರಕ್ಕೆ ನೋಡಿ ಡಾ॥ ವೀರಣ್ಣ ರಾಜೂರ (ಸಂ) 'ಪ್ರ.ಷ.ಜಂ.ನಿರ್ದೇಶ' ಪ್ರ. ಪು. x

ಕೊನೆಯಲ್ಲಿ "ಇತಿ ಶ್ರೀಮದವಾಚ್ಯಾತ್ಮಸ್ವರೂಪಖಂಡಾದ್ವಯ ಸಚ್ಚಿದಾನಂದ ನಿತ್ಯ ಪರಿಪೂರ್ಣ ನಮ್ಮ ಪರಮ ಪ್ರಭು ಗುರು ನಂಜುಂಡ ಪರಶಿವಲಿಂಗಾರ್ಪಣಮಸ್ತು ಅಲ್ಲಮ ಪ್ರಭುವೆಂದು, ಆತ್ಮ ಪ್ರಭುವೆಂದು, ನಿರಾಕಾರ ಪ್ರಭುವೆಂದು ನಮ್ಮ ಪ್ರಭುದೇವರೊಬ್ಬನೆ. ಈ ಪ್ರಭುದೇವರ ಷಟ್‌ಸ್ಥಲಕ್ಕೆ ಸೇರಿಸಿದ ವಚನ ೧೮೦ ಕ್ಕಂ ಮಂಗಳ ಮಹಾ" ಎಂದು ಸಂಕಲನ ಮುಕ್ತಾಯಗೊಳ್ಳುತ್ತದೆ.

ಇಲ್ಲಿ ಸಂಗ್ರಹವಾದ ೧೮೦ ವಚಗಳಲ್ಲಿ ೧೬೪ ವಚನಗಳು ಈಗಾಗಲೆ ಡಾ|| ಆರ್.ಸಿ. ಹಿರೇಮಠ ಮತ್ತು ಡಾ|| ಎಂ.ಎಸ್. ಸುಂಕಾಪುರ ಇವರು ಸಂಪಾದಿಸಿದ 'ಅಲ್ಲಮ ಪ್ರಭುದೇವರ ವಚನಗಳು' ಎಂಬ ಸಂಗ್ರಹದಲ್ಲಿ ಪ್ರಕಟವಾಗಿವೆ. ಉಳಿದ ೧೬ ವಚನಗಳು ಇದೆ ಮೊದಲಬಾರಿಗೆ ಈ ಕೃತಿಯಲ್ಲಿ ಪ್ರಕಟವಾಗಿವೆ.[೪೬] ಸಂಕಲನಕಾರ ಕ್ವಚಿತ್ತಾಗಿ ಒಂದು ವಚನದಲ್ಲಿ ಮಾತ್ರ ತನ್ನ ಉದ್ದೇಶಕ್ಕನುಗುಣವಾಗಿ ಬದಲಾವಣೆ ಮಾಡಿಕೊಂಡಿದ್ದಾನೆ.

ಉದಾ : ಕೃತ ಯುಗದಲ್ಲಿ ನಾನು ಭಕ್ತಿಕಾರಣ
ಸ್ಥೂಲ ಕಾಯನೆಂಬ ಜಂಗಮವಾಗಿರ್ದೆ
ತ್ರೇತಾಯುಗದಲ್ಲಿ ನಾನು ಭಕ್ತಿ ಕಾರಣ
ಶೂನ್ಯಕಾಯನೆಂಬ ಜಂಗಮವಾಗಿರ್ದೆ
ದ್ವಾಪರದಲ್ಲಿ ನಾನು ಭಕ್ತಿ ಕಾರಣ
ಅನುಮಿಷನೆಂಬ ಜಂಗಮವಾಗಿರ್ದೆ."
ಕಲಿಯುಗದಲ್ಲಿ ನಾನು ಭಕ್ತಿಕಾರಣ
ಪ್ರಭುವೆಂಬ ಜಂಗಮವಾಗಿರ್ದೆ ಕಾಣ ಗೊಗೇಶ್ವರ" (ವ-೨. ಪೀಠಿಕಾಭಾಗ)

ಈ ವಚನದ ೨,೩,೪ ನೇಸಾಲಿನಲ್ಲಿ ಬರುವ 'ಜಂಗಮವಾಗಿರ್ದೆ' ಎಂಬ ಪದ ಈಗಾಗಲೆ ಪ್ರಕಟವಾದ ಅಲ್ಲಮನ ವಚನಗಳಲ್ಲಿ 'ಗಣೇಶ್ವರನಾಗಿರ್ದೆ' ಎಂದಿದೆ. ಕೊನೆಯ ಸಾಲಿನ 'ಪ್ರಭುವೆಂಬ ಜಂಗಮನಾಗಿರ್ದೆ' ಎಂಬುದು ಮಾತ್ರ ಅಲ್ಲಮನ ಪ್ರಕಟಿತ ವಚನ ಮತ್ತು ಇಲ್ಲಿಯೂ ಸಮಾನವಾಗಿದೆ. ಅಲ್ಲಮನ ವಚನಗಳನ್ನು ಸಂಕಲಿಸಿದ ವಚನಕಾರ ತನ್ನ ಕೃತಿಗೆ 'ಪ್ರಭುದೇವರ ಷಟ್‌ಸ್ಥಲ ಜಂಗಮ ಸ್ಥಲ ನಿರ್ದೇಶ' ಎಂದು ಹೆಸರಿಟ್ಟು ಅದರಲ್ಲಿ 'ಜಂಗಮ'ನ ಷಟ್‌ಸ್ಥಲ ಸಿದ್ಧಿಯ ಮಹತ್ವವನ್ನು ಹೇಳಬೇಕಾಗಿರುವುದರಿಂದ, ಅದಕ್ಕನುಗುಣವಾಗಿ ವಚನದಲ್ಲಿನ 'ಗಣೇಶ್ವರನಾಗಿರ್ದೆ' ಎಂಬ ಪದವನ್ನು ತೆಗೆದು 'ಜಂಗಮವಾಗಿರ್ದೆ' ಎಂದು ಬದಲಿಸಿದಂತೆ ಕಂಡುಬರುತ್ತದೆ. ಷಟ್‌ಸ್ಥಲವನ್ನು ನಿರೂಪಿಸುವುದೇ ಈ ಕೃತಿಯ ಪರಮ ಹಾಗೂ ಚರಮಗುರಿ. ವೀರಶೈವಸಿದ್ಧಾಂತಗಳಲ್ಲಿ ಷಟ್‌ಸ್ಥಲಕ್ಕೆ ಶ್ರೇಷ್ಠಸ್ಥಾನ ಮೀಸಲಾಗಿದೆ. ಇದರ ಆಚರಣೆಯಿಂದ ಶರಣನು ಭವ ಬಂಧನ ಕಳಚಿ, ವ್ಯಕ್ತಿತ್ವದ ಪೂರ್ಣವಿಕಾಸವಾಗಿ ದೈವತ್ವಕ್ಕೇರುವುದು ಸ್ಥಲತತ್ವವಾಗಿದೆ. ಈ ಆರು ಹಂತಗಳನ್ನು ಮಹಾಜ್ಞಾನಿ ಪ್ರಭುದೇವನು ದಾಟಿ ಈಶ್ವರ ಸ್ವರೂಪನಾಗುತ್ತಾನೆ. ಈ ಸಾಧನೆಯ ಸಿದ್ಧಿಯನ್ನು ಪ್ರಭುದೇವರ ವಚನಗಳ ಮೂಲಕವೇ ನಿರೂಪಿಸಿರುವುದು ಕೃತಿಯ ವೈಶಿಷ್ಟ್ಯವಾಗಿದೆ.

---

೪೬. ವಚನಗಳ ಕ್ರಮಾಂಕ ೧,೫, ೬,೭, ೨೬, ೩೨, ೬೪, ೮೫, ೯೦, ೧೪೭, ೧೬೫, ೧೬೭, ೧೭೩, ೧೭೬, ೧೭೭, ೧೭೮

[illegible]

[illegible]

[illegible]

[illegible]

೫. ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು

* ಸಂಪಾದನೆಯ ಬೋಳಬಸವ

ಈ ಸಂಕಲನದಲ್ಲಿ ಶಿವಶರಣರ ವಚನಗಳನ್ನು ಸಂಗ್ರಹಿಸಲಾಗಿದೆ. ಇದನ್ನು ಸಂಗ್ರಹಿಸಿದವನು ಸಂಪಾದನೆಯ ಬೋಳಬಸವ, ಈತನು ತೋಂಟದ ಸಿದ್ಧಲಿಂಗ ಶಿಷ್ಯ ಪ್ರಶಿಷ್ಯರ ಗುಂಪಿಗೆ ಸೇರಿದ ಸಂಪಾದನೆಯ ಸಿದ್ಧವೀರಣಾರ್ಯ ಎಂಬುವನ ಶಿಷ್ಯ. ಸಂಪಾದನೆಯ ಗುರುಲಿಂಗದೇವನು ಈತನ ಶಿಷ್ಯನಾಗಿದ್ದಾನೆ. ಸಂಪಾದನೆಯ ಬೋಳ ಬಸವನು ಒಟ್ಟು ಮೂರು ಸಂಕಲನಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಎರಡು ಬಸವ ಸ್ತೋತ್ರದ ವಚನ ಸಂಕಲನಗಳಾಗಿವೆ. 'ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು'[೪೭] ಎಂಬ ಈ ಸಂಕಲನದಲ್ಲಿ ೬೧ ಜನ ಶರಣ–ಶರಣೆಯರ ೨೩೧ ವಚನಗಳಿವೆ. ವೀರಶೈವ ತತ್ವ ಸಿದ್ಧಾಂತಗಳೆಲ್ಲವನ್ನು ಬಸವಾದಿ ಶರಣ–ಶರಣೆಯರ ವಚನಗಳ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದಾನೆ. ಷಟ್‌ಸ್ಥಲ, ಗುರುಲಿಂಗ ಜಂಗಮ, ಪ್ರಸಾದ, ವಿರಕ್ತರ, ಭಕ್ತರ ನಡೆ–ನುಡಿ, ಆಚಾರ–ವಿಚಾರ, ಭಕ್ತನ ಶೀಲ–ಚಾರಿತ್ರ, ವೇದಶಾಸ್ತ್ರಗಳ ಖಂಡನೆ, ಭವಿಗಳ ಖಂಡನೆ, ಭಕ್ತರ ಗುಣಗಾನ, ಭವ ಬಂಧನಗಳ ಬಿಡುಗಡೆ, ಅರಿವಿನ ಮಹತ್ವ, ಜ್ಞಾನ–ಅಜ್ಞಾನಗಳ ವ್ಯತ್ಯಾಸ, ಶರಣರ –ಅನುಭಾವಿಗಳ ಮಾತು ಮತ್ತು ಅವರ ಒಡನಾಟದ ಮಹತ್ವ, ಪೂಜಾವಿಧಾನ ಮುಂತಾದ ವಿಚಾರಗಳು ಮೈವೆತ್ತಿರುವ ವಚನಗಳನ್ನು ಬೋಳ ಬಸವನು ಈ ವಚನ ಸಂಕಲನದಲ್ಲಿ ಸೇರಿಸಿರುತ್ತಾನೆ.

ಪರಶಿವನು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣವೆಂದು ಷಟ್‌ಸ್ಥಲ ಸಿದ್ದಾಂತವು ಹೇಳುತ್ತದೆ. ಇದು ಜೀವ ಜಗತ್ತು ಮಿತ್ಯವಾದುದೆಂದು ಹೇಳುವುದಿಲ್ಲ. ದೇಹವನ್ನು ಅಲ್ಲಗಳೆಯುವುದೂ ಇಲ್ಲ. ವೃತ್ತಿಯನ್ನು ಹೀಗಳೆಯುವುದಿಲ್ಲ. ಜಗದೆಲ್ಲ ವಸ್ತುಗಳು ಜೀವನು ಶಿವನಾಗುವುದಕ್ಕೆ ಸಾಧನಗಳೆಂದು ಈ ಸಿದ್ದಾಂತವು ಹೇಳುತ್ತದೆ. ಜೀವನಿಗೆ ದೇಹವು ದೇವಾಲಯ. ಅವನು ಸ್ವ–ಸ್ವರೂಪನಾದ ಶಿವನನ್ನು ದೇಹದಲ್ಲಿಟ್ಟು ಪೂಜಿಸುತ್ತಾನೆ. ಭವ ಬಂಧನ ವಿಮೋಚಕ ಶಕ್ತಿಯೇ ಭಕ್ತಿಯು. ಭಕ್ತಿಗೆ ವಿರಕ್ತಿ ಬೇಕು. ಅಷ್ಟಾವರಣಗಳು, ಪಂಚಾಚಾರಗಳು ಬೇಕು. ನೀತಿ–ಸದ್ಗುಣಗಳು, ಅರಿವು–ಆಚಾರಗಳೂ ಬೇಕು. ಇವೆಲ್ಲವುಗಳನ್ನು ಶರಣ ಸಾಧಿಸಿದಾಗ ಆತ ಬ್ರಹ್ಮಾನಂದವನ್ನು , ಐಕ್ಯಸ್ಥಿತಿಯನ್ನು ಪಡೆಯುತ್ತಾನೆ. ಈ ಹಿನ್ನೆಲೆಯಲ್ಲಿ ಸಂಕಲನವು ರಚನೆಗೊಂಡಿದೆ.

"ಶಿವನೆ ಶಿವಭಕ್ತನಾಗಿ ಬಂದ ಲೋಕಹಿತಾರ್ಥ
ಶಿವನೆ ಶಿವರಹಸ್ಯ ಬೋಧಿಸಲೆಂದು ಗುರುವಾಗಿ ಬಂದ
ಲಿಂಗದ ಕಳೆಯನರುಹಿದ ಲೋಕಹಿತಾರ್ಥ
ಶಿವನೆ ಚರವೇಷದಲ್ಲಿ ಬಂದು, ಅಂಗಮೊದಲು ಮನವೆ ಕಡೆಯಾದ ಪದಾರ್ಥ.
ದಾಸೋಹದಲ್ಲಿ ಸವೆಯಲೆಂದು ಬಂದ ಲೋಕಹಿತಾರ್ಥ
ಶಿವನೆ ಮಂತ್ರ ತಂತ್ರ ಯಂತ್ರೋಪಕರಣವಾಗಿ ಬಂದ ಲೋಕಹಿತಾರ್ಥ
ಇದರಂಗ ಸಂಗವ ಲಿಂಗಸಂಗಿಗಳು ಬಲ್ಲರು
ಅನಂಗ ಸಂಗಿಗಳೆತ್ತ ಬಲ್ಲರಯ್ಯಾ? – – –" (ವ–೧)

---

೪೭. ಈ ಕೃತಿಯ ಶೀರ್ಷಿಕೆಯಲ್ಲಿ 'ಸಂಪಾದನೆ' ಎಂಬ ಪದವಿದ್ದರೂ ಇದು ಸಂಭಾಷಣ ರೂಪದಲ್ಲಿಲ್ಲದ ಕಾರಣ ಸಂಕಲನವರ್ಗಕ್ಕೆ ಸೇರುತ್ತದೆ.

ಎಂಬ ಆಯ್ದಕ್ಕಿ ಮಾರಯ್ಯನವರ ಒಂದು ಅಮೂಲ್ಯ ವಚನದಿಂದ ತನ್ನ ಸಂಕಲನವನ್ನು ಆರಂಭಿಸಿದ್ದಾನೆ. ಲೋಕಹಿತಾರ್ಥಕ್ಕೆ ಶಿವನೇ ಶಿವಭಕ್ತನಾಗಿ, ಗುರುವಾಗಿ, ಲಿಂಗದ ಕಳೆಯಾಗಿ, ಜಂಗಮವಾಗಿ, ಮಂತ್ರ, ಯಂತ್ರ, ತಂತ್ರವಾಗಿ ಬರುತ್ತಾನೆ. ಇದರಂಗ ಸಂಗವನ್ನು ಲಿಂಗ ಸಂಗಿಗಳು ಮಾತ್ರ ಬಲ್ಲರು. ಅನಂಗ ಸಂಗಿಗಳೇನು ಬಲ್ಲರು ? ಎಂದು ಶಿವನ ಸರ್ವವ್ಯಾಪಕತೆಯನ್ನು, ಸರ್ವಾಂತರ್ಯಾಮಿತ್ವವನ್ನು, ಶಿವನ ಲೀಲಾ ವಿನೋಧಗಳನ್ನು ಸೂಚಿಸುವ ಈ ವಚನ ಸಂಕಲನ ಗ್ರಂಥಕ್ಕೆ ಮುನ್ನುಡಿಯನ್ನು ಬರೆದಿದೆ.

ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತನಾದವನು ಈ ಕ್ಷಣತ್ರಯಗಳನ್ನು ಬಿಟ್ಟು ಮಂಡೆ ಬೋಳಾದ ಬಳಿಕ ಮರಳಿ, ಹೊನ್ನು ಮಣ್ಣು ಹೆಣ್ಣಿಗೆ ಅಪೇಕ್ಷೆ ಪಟ್ಟರೆ ಅದು ಗುರು ಲಿಂಗ ಜಂಗಮಕ್ಕೆ ಮಾಡಿದ ದ್ರೋಹ. ಅಂತಹ ತ್ರಿವಿಧ ದ್ರೋಹಿಗಳನ್ನು ನೋಡಲಾಗದು. ವಿರಕ್ತನಾದವನು ನಿಜ ಭಕ್ತನಾಗಿರಬೇಕು. ಕೇವಲ ವಿರಕ್ತನಾದರೆ ಸಾಲದು. ಅಂತಹ ವೇಷಿಕ ವಿರಕ್ತನು ಬೇಡುವ, ಕಾಡುವ ಹೊಟ್ಟೆ ಹೊರೆಯುವ ಯಾಚಕನಾಗುತ್ತಾನೆಯೇ ಹೊರತು ಭಕ್ತನಾಗುವುದಿಲ್ಲ.

"ಚರಸ್ಥಾವರವಾದುದುಂಟೆ ?
ಮಹಾಸಮುದ್ರಕ್ಕೆ ಕೇರಿಯೇರಿಯುಂಟೆ ?
ಸುಖನ ಮೆಚ್ಚಿ ಅಖಿಳರೊಳಗಿರ್ದು ಸಕಲ ವಿರಹಿತರಾದ ಪರಿ ಇನ್ನೆಂತೋ
ಇದು ವಿಕಳರ ಮಾತು, ಮೂರಕ್ಷರಕ್ಕೆ ದೂರ –" (ವ–೭)

ವಿರಕ್ತನಾದವನು ಸರ್ವ ಸಂಗ ಪರಿತ್ಯಾಗಿಯಾಗಿರಬೇಕು. ಸುಖವ ಮೆಚ್ಚಿ ಸರ್ವರ ಸಂಗದಲ್ಲಿದ್ದರೆ ವಿರಕ್ತಿ ಎಲ್ಲಿಂದ ಬರಬೇಕು. ವಿರಕ್ತನಾದವನು ತನ್ನ ಪೂರ್ವ ಸಂಬಂಧವನ್ನು ತೊರೆಯಬೇಕು. ವಿರಕ್ತನು ಶಿವನ ವೇಷವ ಧರಿಸಿ ತಿರುಗುವ ತಿರುಗಾಟ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿಯೆ ಹೊರತು ಅದು ಪರಮೇಶ್ವರನ ಲೀಲೆಯಲ್ಲ. ಹೀಗೆ "ವೇಷವ ಧರಿಸಿದ ವೇಷವ ವೇಶಿಯ ಒಂದೆ ಎಂಬೆ. ವೇಷವ ಹೊತ್ತು ಲೋಕವ ಹಾರದಿರ್ದಡೆ ಆತನ ಈಶ್ವರನೆಂಬೆ ಕಾಣಾ". (ವ–೧೪) ವಿರಕ್ತನಾದವನು ಸದಾ ಜಂಗಮರ ಸಂಗದಲ್ಲಿರಬೇಕು.

"ಸರ್ವಾತ್ಮ ಚೈತನ್ಯನಪ್ಪ ಜಂಗಮದ ಪರಿ
–ರಾಜಯೋಗಿ, ಚರಲಿಂಗ, ನಿಶ್ಚಿಂತ,
ನಿರ್ವಾನಿ, ನಿರಂಜನ, ನಿರ್ಮಾಯ, ನಿರ್ವಸನಿ". (ವ–೧೬)

ಯಾಗಿರಬೇಕು. ಇಂತಲ್ಲದೆ ಕಾಯದಾಸೆಗೆ ಕಳವಳಿಸಿ ತ್ರಿವಿಧಕ್ಕೆ ಬದ್ಧಕರಪ್ಪರೆಲ್ಲ ಜಗತ್ಪಾವನರಲ್ಲ. ಕೇವಲ ಡಾಂಭಿಕತೆಯ ವೇಷದಲ್ಲಿ ಶಿವನಿರುವುದಿಲ್ಲ. ಮನದಾಸೆಯ ಬಿಟ್ಟು, ದೋಷವ ಕಿತ್ತು, ಮಹಾಧಾತ್ರಿಕರಾಗಿ, ನಾನೆಂಬುದ ತಾನರಿದು, ನಾನೀನೆಂಬ ಉಭಯವ ಏನೆಂದರಿಯದೆ ತಾನು ತಾನಾದ" (ವ–೨೦) ಇಂತಹ ಚಾರಿತ್ರವಂತ ವಿರಕ್ತನಲ್ಲಿ ಶಿವನಿರುತ್ತಾನೆ. ಅರಿವಿಗೆ ವೇಷವ ಹಾಕಬೇಕೆ ಹೊರತು, ಅರಿವಿನ ಅಂಗದ ಮೇಲೆ ವೇಷ ಬೇಡವೇ ಬೇಡ. ಅದರ ಅವಶ್ಯಕತೆ ಇರುವುದಿಲ್ಲ.

"ಪರಸ್ತ್ರೀಯರ ನೋಡುವ ಕಣ್ಣು ಲಿಂಗವ ನೋಡಿದಡೆ
ಅವರಿಗೆ ಲಿಂಗವಿಲ್ಲ.
ಪರಬ್ರಹ್ಮವ ನುಡಿವ ನಾಲಗೆಯಲ್ಲಿ ಸ್ತ್ರೀಯರ
ಅಧರ ಪಾನವ ಕೊಂಡಡೆ ಪ್ರಸಾದಕ್ಕೆ ದೂರ
ಘನಲಿಂಗವ ಪೂಜಿಸುವ ಕೈಯಲ್ಲಿ

ಸ್ತ್ರೀಯ ತೋಳು ಕುಚವ ಮುಟ್ಟಿದೆಡೆ
ತಾ ಮಾಡುವ ಪೂಜೆ ನಿಷ್ಫಲ
ಇದನರಿತಡೆ ವ್ರತಿ, ಅಲ್ಲದಿರ್ದಡೆ ಸುರೆಯ ಒಳಗೆ ತುಂಬಿ
ಹೊರಗೆ ಬೂದಿಯ ಪೂಜಿಸಿದಂತೆ ಆಯಿತ್ತು ಕಲಿದೇವಾ" (ವ-೭೦)

ವಿರಕ್ತನಾದವನು ಪರಸ್ತ್ರೀಯಿಂದ ದೂರವಿರಬೇಕು. ಹಾಗಿರದೆ ತಾ ಮಾಡುವ ಪೂಜೆ ವ್ಯರ್ಥ. ಇದನ್ನು ಅರಿತರೆ ವ್ರತಿಯಾಗುತ್ತಾನೆ. ಇಲ್ಲದಿದ್ದರೆ ಸುರೆಯನ್ನು ಒಳಗೆ ತುಂಬಿ ಹೊರಗೆ ಬೂದಿಯಿಂದ ತೊಳೆದು ಮಡಿ ಮಾಡಿದಂತಾಗುತ್ತದೆ ಎನ್ನುತ್ತಾನೆ ಮಡಿವಾಳ ಮಾಚಯ್ಯ. ಆದುದರಿಂದ ಈ ಪರಸ್ತ್ರೀಯ ವ್ಯಾಮೋಹದ ಹೊರೆಯ ಹರಿದಲ್ಲದೆ, ಸದಾಶಿವ ಮೂರ್ತಿಯ ಲಿಂಗವನರಿಯುವುದಕ್ಕೆ ಸಾಧ್ಯವಿಲ್ಲ (ವ-೩೬) ವೆಂಬುದು ಶರಣರ ನಂಬಿಕೆ. ವಿರಕ್ತನಾದವನು ಲಿಂಗ ಜಂಗಮ ಪ್ರಸಾದವಲ್ಲದೆ ಅನ್ಯವನ್ನು ಮುಟ್ಟಬಾರದು. ಲಿಂಗ ನಿಷ್ಠೆ ಇರಬೇಕು. ತನ್ನ ನಿಜವ ತಾನರಿಯಬೇಕು. ಅರಿವಿನಿಂದ ಜ್ಞಾನ ಸಿದ್ಧಿಸುತ್ತದೆ. ತನು, ಮನ, ಭಾವ ಕರಣಗಳನ್ನು ಬಾಹ್ಯ ವಿಷಯ ಪರಿಕರಗಳಿಂದ ತೃಪ್ತಿ ಪಡಿಸಬಹುದು. ಆದರೆ ಆತ್ಮನ ಅರಿವಿನ ತೃಪ್ತಿ ಲೌಕಿಕ ವಿಷಯಗಳಿಂದ ಸಾಧ್ಯವಾಗುವುದಿಲ್ಲ. ಅದು ಲಿಂಗಾನುಭವಗಳಿಂದ ಮಾತ್ರ ಸಾಧ್ಯ. ತನ್ನನ್ನು ತಾನು ಅರಿತಾಗ ನಿಜವಾದ ಅರಿವು ಪ್ರಾಪ್ತವಾಗುತ್ತದೆ. ಅಂತಹ ಅರಿವಿನಿಂದ ಭಕ್ತಿ-ವಿರಕ್ತಿಗಳು, ಲಿಂಗಾಂಗ ಭೇದಗಳು, ಸಾಧನೆಯ ಮಾರ್ಗಗಳು ಗೋಚರವಾಗುತ್ತವೆ.
ಇಲ್ಲದಿದ್ದರೆ

"ರಾಜನ ಭಕ್ತಿ ತಾಮಸದಿಂದ ಕೆಟ್ಟಿತ್ತು
ಪಂಡಿತನ ಭಕ್ತಿ ಯುಕ್ತಿ ಖಂಡನವಿಲ್ಲದೆ ನಿಂದಿತ್ತು
ಸುಸಂಗಿಯ ನಿರಂಗ ದುಸ್ಸಂಗದಿಂದ ಕೆಟ್ಟಿತ್ತು
ಪತಂಗನಂತಾಗದೆ ಮುನ್ನವೆ ನಿನ್ನ ನೀನರಿ
ಅರಿದಡೆ ನಿನಗಿದಿರಿಲ್ಲ ಮನ ಸಂದಿತ್ತು ಮಾರೇಶ್ವರಾ" (ವ-೧೫೪)

ಬೆಂಕಿಯ ಬೆಳಕಿನ ಆಕರ್ಷಣೆಗೆ ಸಿಕ್ಕು ನಾಶವಾದ ಪತಂಗದ ಹಾಗೆ ಲೌಕಿಕ ವಿಷಯಾಸಕ್ತಿಗಳಿಗೆ ಮರುಳಾಗಿ ನಾಶವಾಗಬೇಡ. ಆ ಮೊದಲು ನಿನ್ನನ್ನು ನೀನು ಅರಿತುಕೋ. ಆಗ ನಿಜಾನಂದ ದೊರೆಯುತ್ತದೆ ಎಂದು ಮಾರೇಶ್ವರಯ್ಯನೆಂಬ ವಚನಕಾರ ಶರಣರನ್ನು ಎಚ್ಚರಿಸಿದ್ದಾನೆ.

"ಗುರುವಿನಲ್ಲಿ ವಿಶ್ವಾಸಿಸಿ ಲಿಂಗವ ಮರೆಯಬೇಕು
ಲಿಂಗದಲ್ಲಿ ವಿಶ್ವಾಸಿಸಿ ಜಂಗಮವ ಮರೆಯಬೇಕು
ಜಂಗಮದಲ್ಲಿ ವಿಶ್ವಾಸಿಸಿ ತ್ರಿವಿಧವ ಮರೆಯಬೇಕು
ತ್ರಿವಿಧವ ಮರೆದು ಅರಿದಲ್ಲಿ ಬಿದ್ದಿತ್ತೆಂಬ ಸಂದೇಹವಿಲ್ಲದೆ ಎತ್ತಿ ಅವಧರಿಸಿಕೊಂಡು
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ
ಅರಿವಿಂಗೆ ಎಡೆದೆರಪಿಲ್ಲದೆ ನಿಂದುದು
ಅಂಗಕ್ಕೆ ಅದೆ ಪ್ರಾಯಶ್ಚಿತ್ತ ಮನಸಂದಿತ್ತು ಮಾರೇಶ್ವರಾ" (ವ-೧೩೧)

ಹೀಗೆ ಗುರುಲಿಂಗ ಜಂಗಮವು ಶರಣನಿಗೆ ಅತಿ ಮಹತ್ವವೆಂಬುದನ್ನು ಹೇಳಿದ್ದಾನೆ. ಮುಂದಿನ ವಚನದಲ್ಲಿ ಜಂಗಮದ ಮಹತ್ವವನ್ನು ಶಿವಲೆಂಕ ಮಂಚಣ್ಣ ಹೀಗೆ ಹೇಳಿದ್ದಾನೆ.

"ಜಂಗಮದ ಪಾದತೀರ್ಥವ ಲಿಂಗಕ್ಕೆ
ಮಜ್ಜನವ ಮಾಡಲಾಗಿ ಲಿಂಗ ತೀರ್ಥವಾಯಿತ್ತು
ಜಂಗಮದ ಪ್ರಸಾದವ ಲಿಂಗಕ್ಕೆರ್ಪಿಸಲಾಗಿ ಲಿಂಗ ಪ್ರಸಾದವಾಯಿತ್ತು
ಶುದ್ಧ ಗುರುವಿನಲ್ಲಿ, ಸಿದ್ಧಲಿಂಗದಲ್ಲಿ, ಪ್ರಸಿದ್ಧ ಜಂಗಮದಲಾದ
ಮತ್ತೆ ಸಿಕ್ಕಿತ್ತು ಪ್ರಸಿದ್ಧ ಸಂಖ್ಯೆಯಲ್ಲಿ
ಇದನರಿತು ಅರ್ಪಿಸಬಲ್ಲಡೆ ಆತನೆ ಪ್ರಸಾದ ಕಾಯ" (ವ-೧೨೧)

ಯಾರು ಜಂಗಮನ ಮಹತ್ವವನ್ನು , ಗುರು-ಲಿಂಗದ ನಿಷ್ಠೆಯನ್ನು ಗಳಿಸಿ ಅವುಗಳಿಗೆ ತನ್ನನ್ನು ತಾನು ಸಮರ್ಪಿಸಿಕೊಂಡರೆ ಆತ ಪ್ರಸಾದ ಕಾಯನಾಗುತ್ತಾನೆ ಎಂಬುದು ವಚನಕಾರನ ಆಶಯ.

ಶರಣಸ್ತುತಿ :

"ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಕಡೆಯಲ್ಲಿದ್ದಾಡುವ ಹದ್ದು ಬಲ್ಲುದೇ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲ್ಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ನಿಲುವ ನೀವೆ ಬಲ್ಲಿರಲ್ಲದೆ

ಈ ಕೋಣನ ಮೈ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ ? (ವ-೧೯೯)

ಎಂದು ಶರಣನ ವ್ಯಕ್ತಿತ್ವ ಹಾಗೂ ಮಹತ್ವವನ್ನು ಅಕ್ಕಮಹಾದೇವಿ ಸೊಗಸಾಗಿ ಚಿತ್ರಿಸಿದ್ದಾಳೆ. ಇಂತಹ ಶರಣರ, ಅನುಭಾವಿಗಳ ಅನುಭವದ ಮಾತುಗಳನ್ನು ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುತ್ತ, ಭವ ಬಂಧನಗಳ ಕೋಟಲೆಗಳಿಂದ ಮುಕ್ತನಾಗಬೇಕು. ಇಲ್ಲದಿದ್ದರೆ ನಿಜದನುಭವದ ನಿಜಾನಂದನವನ್ನು ಕಾಣಲಾಗುವುದಿಲ್ಲ. ಹಾಗಾಗಿ ಭವ ಬಂಧನಗಳನ್ನು ದಾಟಿ, ಅರಿವಿನ ಮೂಲಕ ಅರಿಷಡ್ವರ್ಗಗಳನ್ನು ಕಳೆದು, ನಿಜಾಚರಣೆಯ ಪೂಜಾವಿಧಾನದಿಂದ ಭಕ್ತಿಯನ್ನು ವ್ಯಕ್ತಪಡಿಸಿದರೆ ಅಂತಹ ವಿರಕ್ತ ಶರಣನು ಬ್ರಹ್ಮಾನಂದವನ್ನು ಪಡೆಯಬಲ್ಲವನಾಗುತ್ತಾನೆ. ಅದರಲ್ಲಿ ಸಂಶಯಕ್ಕಾಸ್ಪದವಿಲ್ಲ ಎಂಬುದನ್ನು

" ಪಂಜ ಹಿಡಿದವಂಗೆ ಸಂದೇಹವಲ್ಲದೆ
ಉರಿವ ಬೆಳಗಿಗೆ ಸಂದೇಹವುಂಟೆ ?
ಸಂಸಾರ ಸಂದಣಿಯಲ್ಲಿ ಅನಂಗನ ಆತುರದಲ್ಲಿ
ಹೊಂದಿ ಜೀವಂಗೆ ಲಂಡತನವಲ್ಲದೆ
ನಿಜ ಪ್ರಾಸಂಗಿಗೆ ನಿರತಿಶಯ ಲಿಂಗಾಂಗಿಗೆ, ಪರಬ್ರಹ್ಮಪರಿಣಾವಿಂಗೆ
ಜಗದ ಹರದಿಗರಲ್ಲಿ ಸಿಕ್ಕಿ ಪರಿಭ್ರಮಣಕ್ಕೊಳಗಾಹನೆ? ...." (ವ-೧೬೫)
ಎಂದು ಕನ್ನಡಿ ಕಾಯಕದ ಅಮ್ಮಿದೇವಯ್ಯ ಹೇಳುತ್ತಾನೆ.

ಈ ಎಲ್ಲಾ ತತ್ವಸಿದ್ಧಾಂತಗಳು ಷಟ್‌ಸ್ಥಲ ಬ್ರಹ್ಮಜ್ಞಾನಿಯಾಗ ಬಯಸುವ ವಿರಕ್ತನು ಹೇಗೆ ವ್ರತಾಚಾರಿಯಾಗಿ, ಶೀಲಸಂಪಾದನೆಯಾದ ಬ್ರಹ್ಮಜ್ಞಾನವನ್ನು ಪಡೆಯಲು ಅರ್ಹನಾಗಿರಬೇಕು. ಬರಿವೇಷವಿದ್ದರೆ ಸಾಲದು ಅದಕ್ಕೆ ತಕ್ಕ ಚಾರಿತ್ರವನ್ನು ಸಂಪಾದಿಸಿಕೊಂಡು ಅರಿವಿನ ವೇಷವ

ಅಂಗದಲ್ಲಿ ಧರಿಸಿ, ಜ್ಞಾನ ಜ್ಯೋತಿಯಾಗಿ, ಭಕ್ತಿ ಭಿಕ್ಷಾಂದೇಹಿಯಾಗಬೇಕು ಎಂಬ ಸಂದೇಶವನ್ನು ಈ ಕೃತಿ ಸಾರುತ್ತಿದೆ.[೪೮]

೫.ಚಿದೈಶ್ವರ್ಯ ಚಿದಾಭರಣ

* ಗುರುಸಿದ್ಧ ದೇವ

ಈ ಸಂಕಲನಕ್ಕೆ 'ನಿಜಾಚರಣೆಯ ಸಂಬಧ ವಚನಗಳು' ಅಥವ 'ಅನಾದಿ ಷಟ್ ಸ್ಥಲ ನಿರಾಭಾರಿ ವೀರಶೈವಶರಣ ನಿಜಾಚರಣೆ ಸಂಬಧ ಬೋದಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ' ಎಂಬ ಎರಡು ಹೆಸರುಗಳಿವೆ. ಪಿ.ಎಂ.ಗಿರಿರಾಜು ಅವರು ಮೇಲಿನ ಹೆಸರುಗಳಲ್ಲಿ ಹತ್ತು ಸ್ಥಲಗಳ ಅಡಿಯಲ್ಲಿ ಈ ಕೃತಿಯನ್ನು ೧೯೮೫ ರಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.[೪೯] ಇದರಲ್ಲಿ ೩೧ ಜನ ವಚನಕಾರರ ೩೮೯ ವಚನಗಳು, ೪೫ ಸ್ವರ ವಚನಗಳು, ಬಸವಾದಿ ಶರಣರು ಸ್ತುತಿಸುವ ಹತ್ತು ಭಾಮಿನಿ ಷಟ್ಪದಿಗಳು ಗುರುವನ್ನು ಪೂಜಿಸುವ ಒಂದು ಪುಷ್ಪಾಂಜಲಿ ವೃತ್ತ (ಮತ್ತೇಭ)ವಿದೆ. ಕೃತಿಗೆ ಮಂಗಳವನ್ನು ಹಾಡುವ ಒಂದು ಮಂಗಳಾರತಿ ಪದವಿದೆ. ಇವೆಲ್ಲವುಗಳ ಜೊತೆಗೆ ಕೃತಿಯೊಳಗೆ ಅಂತರ್ಗತವಾಗಿರುವ ೧೮೪ ಶ್ಲೋಕಗಳಿವೆ.

ಗುರುಸಿದ್ಧದೇವನು ತನ್ನ ವಚನಗಳ ಜೊತೆ ಇತರೆ ವಚನಕಾರರ ವಚನಗಳನ್ನು ಸೇರಿಸಿ ಬೋಧಿಸಿದ ಈ ಕೃತಿಯಲ್ಲಿ ಗುರುಲಿಂಗ, ಆಚಾರಲಿಂಗ, ಶಿವಲಿಂಗ, ಪ್ರಾಣಲಿಂಗ, ಪ್ರಸಾದಲಿಂಗ, ಮಹಾಲಿಂಗ ಮುಂತಾದ ಆರು ಲಿಂಗಸ್ಥಲಗಳಲ್ಲಿ ಷಟ್‌ಸ್ಥಲಾಚಾರಗಳನ್ನು, ಗುರು–ಲಿಂಗ–ಜಂಗಮದ ಲಕ್ಷಣವನ್ನು, ೨೧ ಬಗೆಯ ದೀಕ್ಷೆ[೫೦]ಗಳನ್ನು (ವ–೨೧೮ರಿಂದ) ಇಷ್ಟ–ಪ್ರಾಣ–ಭಾವಲಿಂಗಾಂಗ ಸಮರಸವನ್ನು, ಪಾದೋದಕ ಪ್ರಸಾದ ಮೊದಲಾದ ಅಷ್ಟಾವರಣಗಳ ಲಕ್ಷಣವನ್ನು ೨೧೬ ಲಿಂಗ ಸ್ಥಲಗಳನ್ನು ಬಹು ಗಂಭೀರವಾಗಿ ಬೋಧಿಸಿದ್ದಾನೆ. ವೀರಶೈವದಲ್ಲಿ ಕ್ರಿಯಾ–ಜ್ಞಾನ ಸಾಮರಸ್ಯಕ್ಕೆ ತುಂಬಾ ಮಹತ್ವವಿದೆ. ಶರಣನಾದವನು ಅಷ್ಟಾವರಣ–ಪಂಚಾಚಾರ–ಷಟ್‌ಸ್ಥಲಗಳ ಮೂಲಕ ಜೀವನದಲ್ಲಿ ಸ್ವೀಕರಿಸಬೇಕಾದ ಸದಾಚಾರಗಳನ್ನು ತ್ಯಜಿಸಬೇಕಾದ ದುರಾಚಾರಗಳನ್ನು ಆಚರಣೆಯ ವಚನ ಸಂಕಲನಗಳಲ್ಲಿ ಕಾಣುತ್ತೇವೆ. ಶರಣನು ಅಷ್ಟಾವರಣ–ಷಟ್‌ಸ್ಥಲ ಮಾರ್ಗಗಳಲ್ಲಿ ಸಾಗಿ ಲಿಂಗಾಂಗ ಸಮರಸಾನಂದ ಹೊಂದಬೇಕಾದುದನ್ನು ಸಂಬಂಧಾಚಾರದ ವಚನ

---

೪೮. ಎಸ್. ಉಮಾಪತಿಯವರು (ಸಂ) ಪ್ರಕಟಣೆ ವೀರಶೈವ ಅಧ್ಯಯನ ಸಂಸ್ಥೆ, ಗದಗ.

೪೯. ಇದೇ ಕೃತಿ 'ಶ್ರೀಮದ್ವೀರಶೈವ ನಿಜಾಚರಣೆ' ಎಂಬ ತಲೆ ಬರಹದಿಂದ ೧೯೩೫ರಲ್ಲಿ ಬನಹಟ್ಟಿಯ ವೀರಸಂಗಯ್ಯ ಶಿವಲಿಂಗಯ್ಯ ಹೀರೆಮಠರಿಂದ 'ಮಹಾಜ್ಞಾನಿ ಸರ್ವಸಂಗ ಪರಿತ್ಯಾಗ ಸ್ಥಲಾ'ದಿಯಾಗಿ 'ಶಿವ ಸಮಾಧಿ ಕ್ರಿಯಾ ಸ್ಥಲಾಂತ'ವಾದ ಹನ್ನೊಂದು ಸ್ಥಲಗಳಲ್ಲಿ ಪ್ರಕಟವಾಗಿದೆ. ಪಿ.ಎಂ.ಗಿರಿರಾಜು ಅವರು ಕೊನೆಯ ಸ್ಥಲವಾದ 'ಶಿವಸಮಾಧಿ ಕ್ರಿಯಾಸ್ಥಲ'ವನ್ನು 'ಉತ್ತರ ಕಾಲದಲ್ಲಿ ಗ್ರಂಥದಲ್ಲಿ ಸೇರ್ಪಡೆಯಾದ ಅನ್ಯ–ಆಗಂತುಕ ನಿಮಿತ್ತ ಇದಾಗಿದೆಯೆಂದು(ಪು–೨೧೨) ಹೇಳಿ ಈ ಸ್ಥಲವನ್ನುಳಿದು ಉಳಿದ ಹತ್ತು ಸ್ಥಲಗಳಕೃತಿಯನ್ನು ಸಂಪಾದಿಸಿದ್ದಾರೆ. ಶಿವಸಮಾಧಿ ಕ್ರಿಯಾ ಸ್ಥಲವನ್ನು ಗಮನಿಸಲು ಹಾಗೆಯೆ ಉಳಿಸಿ ಕೊಟ್ಟಿರುತ್ತಾರೆ.

೫೦. ಚೆನ್ನಬಸವ ನಿರೂಪಿಸಿದ ೨೧ ದೀಕ್ಷೆಗಳನ್ನು ಬಳಸಿಕೊಂಡಿದ್ದಾನೆ (ಪುಟ–೯೩–೧೧೦)

ಸಂಕಲನಗಳಲ್ಲಿ ಕಾಣುತ್ತೇವೆ. ಆಚರಣೆಗೆ ಸಂಬಂಧಿಸಿದ 'ಸಂಬಂಧಾಚರಣೆಯ' ಅನೇಕ ಸಂಕಲನಗಳು ಇವೆ. ಇವೆರಡೂ ಬೇರೆ ಬೇರೆಯಾಗಿಯೂ ಅಥವಾ ಒಂದೇ ಸಂಕಲನದಲ್ಲಿ ಸಂಗ್ರಹವಾಗಿ ಪ್ರಕಟವಾಗಿರುವುದನ್ನು ನೋಡುತ್ತೇವೆ. ಕೆಲವು ಸಂಕಲನಕಾರರು ಶರಣರ ಆಚರಣೆಗೆ, ಕೆಲವರು ವಿರಕ್ತರ ಆಚರಣೆಗೆ ಒತ್ತು ನೀಡಿ ಆ ಹಿನ್ನೆಲೆಯಲ್ಲಿ ವಚನಗಳನ್ನು ಸಂಗ್ರಹಿಸಿ ನಿರೂಪಿಸಿದವರೂ ಇದ್ದಾರೆ.

ಗುರುಸಿದ್ಧದೇವನೂ ಸಹಾ ಈ ಸಂಕಲನವನ್ನು 'ಶರಣನ ನಿಜಾಚರಣೆಯ ಸಂಬಂಧದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾನೆ. ಗುರುಶಾಂತ ಮಲ್ಲಸ್ವಾಮಿಗಳ ಕರುಣಾ ಕಟಾಕ್ಷದಿಂದ ಸಂಗನ ಬಸವೇಶ್ವರ ಎಂಬ ಶಿಷ್ಯನಿಗೆ ವೀರಶೈವದ ಪ್ರಮುಖ ತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಸದ್ಭಕ್ತಿ, ಭಕ್ತನ ಲಕ್ಷಣ, ಕಿಂಕರತ್ವ, ಭೃತ್ಯತ್ವ, ಅರ್ಚನ, ಅರ್ಪಣ, ದೀಕ್ಷೆ, ಪ್ರವೃತ್ತಿ, ನಿವೃತ್ತಿ, ಶಿವಯೋಗ, ಅಂಗ–ಲಿಂಗ–ಸ್ಥಲ, ಚಕ್ರ, ಪ್ರಣವ ಇತ್ಯಾದಿಗಳ ಸಂಬಂಧ, ಆಚರಣೆಯ ಸಂಬಂಧ ನಿಲುಕಡೆ ಮುಂತಾದ ವಿಷಯಗಳ ಜೊತೆ ಅನಾದಿವಿಡಿದು ಬಂದ ಗುರು–ಶಿಷ್ಯ, ಅಂಗ–ಲಿಂಗ, ಭಕ್ತ–ಜಂಗಮ, ಶರಣ ಸಂಬಂಧ, ಆಚಾರ–ವಿಚಾರ, ಸಂತ್ರಿಕ್ರಿಯಾ ಜ್ಞಾನ, ಸ್ವರೂಪ, ಶಿವಯೋಗ, ಶಿವಾನುಭವದ ವಿಚಾರಗಳನ್ನು ಸೂತ್ರೀಕರಿಸಿ, ಬಸವ, ಅಲ್ಲಮ, ಚೆನ್ನಬಸವಣ್ಣ, ಮೊದಲಾದ ಶರಣ–ಶರಣೆಯರ ವಚನಗಳನ್ನು, ಸ್ವರವಚನಗಳನ್ನು, ಸಂಸ್ಕೃತ ಶ್ಲೋಕಗಳನ್ನು, ಜೊತೆಗೆ ತನ್ನದೇ ಆದ ವಚನಗಳನ್ನು ಆಯಾ ಸ್ಥಲಗಳಿಗೆ ಅನ್ವಯಿಸಿ ಸಂಗ್ರಹಿಸಿದ್ದಾನೆ.

ಇಲ್ಲಿ ಸಂಗ್ರಹಗೊಂಡ ಎಲ್ಲಾ ವಚನಗಳ ಮೂಲ ಉದ್ದೇಶ ವೀರಶೈವ ತತ್ವನಿರೂಪಣೆಯೆ ಆಗಿದೆ. ಇವೆಲ್ಲವು ಗುರುವು ಶಿಷ್ಯನಿಗೆ ಬೋಧಿಸಿದ ರೀತಿಯಲ್ಲಿವೆ.[೫೧] ಈ ಎಲ್ಲಾ ತಾತ್ವಿಕ ವಿಚಾರಗಳನ್ನು ಗುರುವಿನ ಮುಖಾಂತರ ತಿಳಿದುಕೊಂಡು ವೀರಶೈವಾಚಾರ ಮಾರ್ಗದಲ್ಲಿ ನಡೆದು ಸದ್ಭಕ್ತನಾಗಬೇಕೆಂಬುದನ್ನು ತಿಳಿಸುತ್ತವೆ. ತಾತ್ವಿಕತೆ, ಪಾರಿಭಾಷಿಕತೆ ಈತನ ವಚನಗಳ ಮುಖ್ಯ ಲಕ್ಷಣವಾಗಿರುವುದರಿಂದ ಇಲ್ಲಿ ಕಾವ್ಯ ಗುಣವನ್ನು ಅರಸುವುದು ಸಾಧ್ಯವಿಲ್ಲ. ಗದ್ಯದಂತೆ ದೀರ್ಘವಾದ ವಿವರಣೆಯನ್ನು ವಾಚ್ಯವಾಗಿ ಅಳವಡಿಸಿಕೊಂಡಿರುವ ತಾತ್ವಿಕತೆಯೆ ಮುಖ್ಯವಾಗಿರುತ್ತದೆ.

ಮೊದಲ ಸ್ಥಲ 'ಸರ್ವಸಂಗ ಪರಿತ್ಯಾಗ ಸ್ಥಲ'ದಲ್ಲಿ ಮಹಾಚಿದಾತ್ಮನು ಅಜ್ಞಾನ ಮಾಯಾವಶಗತನಾಗಿ ಸಂಸಾರವೆಂಬ ಮಾಯೆಯ ಹಿಡಿತದಲ್ಲಿ ತೊಳಲಿ ಬಳಲಿ ಅಂತ್ಯದಲ್ಲಿ ಮಹಾಜ್ಞಾನ ತಲೆದೋರಿ, ತನ್ನನ್ನು ತಾನರಿದು, ನಿಜ ಮೋಕ್ಷಾಪೇಕ್ಷಿತನಾಗಿ ಗುರೂಪವಸ್ಥೆಯಂ ಮಾಡಿ, ಗುರುವನ್ನು ಧ್ಯಾನಿಸಿ ಸರ್ವಸಂಗ ಪರಿತ್ಯಾಗಿಯಾಗಿ ನಿಲ್ಲುವ ಕ್ರಮವನ್ನು ವಿವರಿಸುತ್ತಾನೆ.

---

೫೧. 'ಅಯ್ಯಾ ವರಕುಮಾರ ದೇಶಿಕೋತ್ತಮನೆ ಕೇಳಾ...... 'ಎಂದು ಪ್ರತಿ ಸ್ಥಲದ ಆದಿಯಲ್ಲಿ ಶಿಷ್ಯ ಸಂಗನ ಬಸವನನ್ನು ಕುರಿತು ಹೇಳುತ್ತಾನೆ. ಸ್ಥಲಾಂತ್ಯದಲ್ಲಿ "...ಘನ ಶರಣಂಗೆ ನಾನು–ನೀನು, ಗುರು–ಶಿಷ್ಯ, ಭಕ್ತ–ಜಂಗಮ, ಸತಿ–ಪತಿ, ತಂದೆ–ಮಗನೆಂಬ ಉಭಯ ಭಿನ್ನವುಂಟೇನೋ ಸಂಗನಬಸವೇಶ್ವರಾ" ಎಂದೇ ಸಂಬೋಧಿಸುತ್ತಾನೆ. ಸ್ಥಲಗಳ ನಡುವೆ ಈ ರೀತಿಯ ಸಂಬೋಧನೆಯನ್ನು ಕಾಣಬಹುದು.

"ಅಯ್ಯಾ ಎನ್ನೊಳಗೆ ನೀವು ಹುಡುಕಿದಡೆ ಎಳ್ಳನಿತು ಸುಗುಣವಿಲ್ಲವಯ್ಯ
ಎನ್ನೊಳಗೆ ನೀವು ನೋಡಿದಡೆ ಅಣುಮಾತ್ರವು ಸುಲಕ್ಷಣವಿಲ್ಲವಯ್ಯ
ಎನ್ನೊಳಗೆ ನೀವು ವಿಚಾರಿಸಿದಡೆ ಸಪ್ತಸಮುದ್ರ ಸಪ್ತದ್ವೀಪ ಅಪರಾಧವುಂಟಯ್ಯ
ತಂದೆ! ಎನ್ನ ಅಪರಾಧ ನೋಡದೆ ನಿಮ್ಮ ಕರುಣ ದೃಕ್ಕಿನಿಂದ ಸಲಹಯ್ಯ
ಪರಮಾರಾಧ್ಯ ಪರಾತ್ಪರ ಮೂರ್ತಿ ಶ್ರೀಗುರು ಲಿಂಗ ಜಂಗಮವೆ

ನೀವು ಈರೇಳು ಲೋಕಕ್ಕೆ ಅಪರಾಧಕ್ಷಮಿತರೆಂಬ ಬಿರುದುಂಟು ನೋಡಾ" (ವ-೬)

ಎಂದು ಗುರುವಿನಲ್ಲಿ ಮೊರೆ ಹೋಗಿರುವುದನ್ನು ಕಾಣುತ್ತೇವೆ.

ಎರಡನೆ ಸ್ಥಲದಲ್ಲಿ ಸದ್ಗುರು ಕೃಪೆಯಿಂದ ಸಜ್ಞಾನ ಲಭಿಸಿ, ಸರ್ವ ಸಂಗ ಪರಿತ್ಯಾಗ ಮಾಡಿದ ಅಂಗನಿಗೆ ಗುರು ಲಿಂಗ ಜಂಗಮವು ಪ್ರತ್ಯಕ್ಷವಾಗಿ ಅಂಗನ ಮಲಿನತೆಯನ್ನು ದೂರಮಾಡಿ, ವೇದ-ಮಂತ್ರ-ದೀಕ್ಷೆಯ ನೀಡಿ ತ್ರಿವಿಧ-ಷಡ್ವಿಧ ತನುವಿನಲ್ಲಿ, ತ್ರಿವಿಧ-ಷಡ್ವಿಧ ಲಿಂಗವ ಸಂಬಂಧಿಸಿ, ಭಕ್ತಿ-ಅಚಾರ-ಪಾದೋಧಕ, ಪ್ರಸಾದ, ಮಂತ್ರಗಳ ಸಂಬಂಧವ ಮಾಡಿ ಬೋಧಿಸಿ ಸದ್ಭಕ್ತಾಚಾರ ಲಿಂಗವಂತನನ್ನಾಗಿ ಮಾಡುವುದು.

'ಕಿಂಕರತ್ವದಿಂ ಸತ್ಕಾಯಕ, ಕಿಂಕರತ್ವದಿಂ ಅಷ್ಟಾವರಣ ಪ್ರತ್ಯಕ್ಷ
'ಕಿಂಕರತ್ವದಿಂ ನಡೆ-ನುಡಿ ಶುದ್ಧ" (ವ-೩೮)ವಾಗಿಸಿಕೊಂಡು

ಸರ್ವಾಚಾರ, ಸಂಯುಕ್ತವಾದ ಭಕ್ತನೆ ನಿಜಮುಕ್ತಿ ಮಂದಿರದಲ್ಲಿ ನಿಲ್ಲುವ ಕ್ರಿಯೆಯನ್ನು ಇಲ್ಲಿ ವಿವರಿಸಲಾಗಿದೆ.

ಮೂರನೇ ಸ್ಥಲದಲ್ಲಿ ಶ್ರದ್ಧೆಯಿಂದ ಗಟ್ಟಿಗೊಂಡ ಸದಭಕ್ತನಿಗೆ ನಿಷ್ಠಾಭಕ್ತಿಯಿಂದ ಗುರುಲಿಂಗ ಅರ್ಚನೆಯನ್ನು ಸದ್ಭಕ್ತಿ, ಸತ್ಕ್ರಿಯ-ಸಮ್ಯಜ್ಞಾನ-ಸದ್ಭಾವ ಸದಾಚಾರಗಳೊದಿಗೆ ಕಾಯದ, ಕರಣದ, ಮೋಹದ ಕಳವಳಗಳಿಂದ ಭವಕ್ಕೊಳಗಾಗದೆ ಪರಸ್ತ್ರೀ-ಪರಧನ-ಪದದೈವ-ಪರನಿಂದೆ-ಪರಹಿಂಸೆಗಳೆಂಬ ಪಂಚ ಪಾತಕಗಳ ಕಪಿಮುಷ್ಠಿಯಿಂದ ಬಿಡುಗಡೆ ಪಡೆದು ಸತ್ಯ ಶುದ್ಧಕಾಯಕದಿಂದ ಪಂಚೇಂದ್ರಿಯಗಳಲ್ಲಿ ನೆಲೆಸಿರುವ ಆಚಾರಾದಿ ಮಹಾಲಿಂಗಗಳಿಗೆ ನಡೆ-ನುಡಿ ಶುದ್ಧವಾಗಿ ಪದಾರ್ಥವ ಸಮರ್ಪಿಸಿ ಪ್ರಸಾದ ಕಾಯವಾಗುವ ನಿಜಾಚರಣೆ ಸಂಬಂಧದ ನಿಲುಗಡೆಯನ್ನು ಈ ಸ್ಥಲ ಬೋಧಿಸುತ್ತದೆ.

ನಾಲ್ಕನೆ ಸ್ಥಲದಲ್ಲಿ ಮಹಾಪ್ರಸಾದಿಯ ಗುಣ ತತ್ವಗಳನ್ನು ಅವನು ಆಚರಿಸಬೇಕಾದ ಆಚರಣೆಗಳನ್ನು ವಿವರಿಸುತ್ತದೆ.

ಕಾಯ ಪ್ರಸಾದವನರಿದು ಕರಣಪ್ರಸಾದವನರಿದು
ಜೀವ ಪ್ರಸಾದವನರಿದು ನಿಜಪ್ರಸಾದವನರಿದು ಕೊಳ್ಳಬಲ್ಲಡೆ

ಪ್ರಸಾದಿ" ಕಾಯಶುದ್ಧ, ಕರಣ ಶುದ್ಧ, ಜೀವ ಶುದ್ಧ, ಭಾವ ಶುದ್ಧಗಳು ಶುದ್ಧವಾದರೆ ಅಲ್ಲಿ ಕಾಯ ಶುದ್ಧ ಪ್ರಸಾದವಾಯಿತು, ಭಾವ ಪರತತ್ವ ಪ್ರಸಾದವಾಯಿತು. ಈ ಚತುರ್ವದ ಶುದ್ಧ ಮಾಡಿದಾತ ನಿಮ್ಮ ಶರಣ " (ವ-೧೨೮) ಎಂಬ ಇಲ್ಲಿನ ವಚನಕಾರರ ಮಾತುಗಳು ಈ ಸ್ಥಲದ ನಿರ್ವಚನಕ್ಕೆ ಸಾಕ್ಷಿಯಾಗಿದೆ.

ಮುಂದಿನ ಸ್ಥಲಗಳಲ್ಲಿ ಪ್ರಸಾದಿ ಶಿವಲಿಂಗಾನುಭಾವ ಸ್ಥಲದಲ್ಲಾಚರಿಸಿದ ಶಿಷ್ಯೋತ್ತಮನು ಗುರುಲಿಂಗ ಜಂಗಮರ ಪ್ರಸನ್ನ ಪ್ರಸಾದದಿಂದ ಪ್ರಾಣಲಿಂಗಿ ಚರಲಿಂಗಾನುಭಾವಿಯಾಗಿ, ಪ್ರಸಾದ ಲಿಂಗಾನು ಸಂಧಾನಿಯಾದ ಶರಣನಾಗಿ, ಶರಣ ಸತಿ–ಲಿಂಗ ಪತಿಭಾವದಿಂದ ಶಿವ ಸ್ವರೂಪನಾಗಿ ಶಿವಾಚಾರ–ಸರ್ವಚಾರ ಸಂಪತ್ತಿನಾಚರಣೆಯಿಂದ ಯುಕ್ತನಾಗಿ ಲಿಂಗವೇ ತಾನು–ತಾನೆ ಲಿಂಗವಾದ ಈ ಷಟ್‌ಸ್ಥಲ ಬ್ರಹ್ಮಿಯ ಅರಿವರ್ಗ, ಆರೂರ್ಮಿಗಳ ತೊರೆದು ಅಂಗ ಕರ್ಪೂರವಾಗಿ, ಲಿಂಗ ಶಿಖಿಯಾಗಿ, ಉರಿ–ಕರ್ಪೂರ ನ್ಯಾಯದಂತೆ ಸಮರಸವಾಗುವುದೆ ಮಹಾಲಿಂಗೈಕ್ಯತ್ವ, ಕ್ಷೀರ–ಕ್ಷೀರವ, ತೈಲ–ತೈಲವ, ಜ್ಯೋತಿ–ಜ್ಯೋತಿಯ, ಬಯಲು–ಬಯಲ ಬೆರೆಸಿದಂತೆ ಬೆರೆದು ಐಕ್ಯಸ್ಥಿತಿಗೇರಿ ಕನ್ನಡಿಯ ಪ್ರತಿಬಿಂಬದಂತೆ ಸರ್ವಸಂಗ ಪರಿತ್ಯಾಗಿ ಲಿಂಗಾಂಗ ಸಮರಸ ಭಾವದಿಂದ ನಿಲ್ಲುವ ಸ್ಥಿತಿಯೆ ಐಕ್ಯ ಸ್ಥಲ/ಮುಂದೆ ಚಿದ್ಘನವು ನಿರಾಲಂಬ ನಿಃಕಳಂಕ ಲಿಂಗಾನು ಭಾವವನ್ನು ಅನುಭವಿಸಿ ನಿರಾವಯ ಶೂನ್ಯವಾಗುವ ಹಂತಕ್ಕೇರುತ್ತಾನೆ. ಇದು ನಿಶಬ್ಧ ನಿರಾಕಾರ ಬಯಲು ಇಲ್ಲಿ ಬಸವ, ಅಲ್ಲಮ,, ಚೆನ್ನಬಸವಣ್ಣ ಮೊದಲಾದ ಪ್ರಮಥ ಗಣಂಗಳ ಪಾದೋದಕ ಪ್ರಸಾದ ರೂಪಾಗಿ ಬರುವ ಗುರುಸಿದ್ಧದೇವನು ಸಂಗನ ಬಸವೇಶ್ವರರಿಗೆ ಸರ್ವಸಂಗ ಪರಿತ್ಯಾಗ ಸ್ಥಲದಿಂದ ನಿರಾವಯ ಶೂನ್ಯಲಿಂಗಾನುಭಾವ ಸ್ಥಲದವರೆಗೆ ವಚನಾನುಭವದ ನಿಲುವನ್ನು ಪಡೆದ ರೀತಿಯನ್ನು ಬೋಧಿಸುತ್ತಾನೆ.

ಕೊನೆಯ ಸ್ಥಲ 'ನಿರಂಜನ ಜಂಗಮ ಲಿಂಗಾನುಭಾವದ ವಸ್ತು ನಿರ್ದೇಶ ಸ್ಥಲ. ಇಲ್ಲಿ ವಸ್ತು ಅಂದರೆ ಪರವಸ್ತುವಿನ ಇರುವಿಕೆಯ ಸ್ಥಿತಿಯನ್ನು–ಅಸ್ಥಿತ್ವವನು ನಿರಂಜನ–ನಿರಾಮಯ ಮೂರ್ತಿ 'ವಸ್ತು'ವಾಗಿ ನಿಲ್ಲುವ ಸ್ಥಲ ತತ್ವದ ವಿವರ ಇಲ್ಲಿದೆ ಈ ಸ್ತಲವನ್ನು ವಿವರಿಸಲು ಚೆನ್ನಬಸವಣ್ಣನ ಪದಮಂತ್ರಗೋ'ಪ್ಯ'ವನ್ನು ಉಲ್ಲೇಖಿಸಿ ಸಾಧಕನು ನಿರಂಜನ ಜಂಗಮದಲ್ಲಿ ಬಯಲಾದ ವಿವರದೊಂದಿಗೆ ಮುಗಿಯುತ್ತದೆ.

ಶಿವಸಮಾಧಿ ಕ್ರಿಯಾ ಸ್ಥಲದಲ್ಲಿ ಮರ್ತ್ಯಲೋಕದ ಮಹಾಗಣಂಗಳ ಸದ್ರೂಪ ಸಮಾಧಿ, ಸಚ್ಚಿದಾನಂದ ಸಮಾಧಿ, ನಿರ್ವಾಣ ಸಮಾಧಿ, ನಿರಾವಯ ಸಮಾಧಿ, ಶಿವ ಸಮಾಧಿ ಮುಂತಾದ ಸಮಾಧಿ ವಿವರಣೆ ನೀಡಿದ ಸಂಕಲನಕಾರನು ತನ್ನ ಗುರು ಶಿಷ್ಯ ಪರಂಪರೆಯ ಒಂದು ಪಟ್ಟಿಯನ್ನು ನೀಡುತ್ತಾನೆ. ಈ ಪರಂಪರೆಯ ನಂತರ ಶಾಂತಮಲ್ಲ ಸ್ವಾಮಿಗಳು ಈ ಸಂಕಲನಕ್ಕೆ ನಾಮ ನಿರ್ದೇಶನ ಮಾಡಿದುದನ್ನು ಸೂಚಿಸಿ ಸ್ವರೂಪಾರ್ಥ, ಸಂಬಂಧಾರ್ಥ, ನಿಶ್ಚಯಾರ್ಥಗಳಿಂದ ಸಂಗನ ಬಸವೇಶ್ವರನು ವಚನ ಶಾಸ್ತ್ರ ಈ ಗ್ರಂಥಾಭಿದಾನಕ್ಕೆ ಟಿಪ್ಪಣಿ ಮಾಡಿದ ವಿವರ ನೀಡುತ್ತಾನೆ. ಕೊನೆಯಲ್ಲಿ ಹತ್ತು ಭಾಮಿನಿ ಷಟ್ಪದಿತಲ್ಲಿ ಶರಣ ಸ್ತುತಿ ಮಾಡಿ, ಮಂಗಳಾರತಿ ಪದಹಾಡಿ ಕೃತಿಯನ್ನು ಮುಗಿಸುತ್ತಾನೆ.

ಚಿದೈಶ್ವರ್ಯ ಚಿದಾಭರಣ ಶರಣರ–ನಿರಾಭಾರಿಯ ಆಚರಣೆ ಮತ್ತು ಸಂಬಂಧಗಳನ್ನು ಕುರಿತು ವಿವರಿಸುವ ಕೃತಿಯಾಗಿದೆ. ಇದನ್ನು ಗುರುಸಿದ್ಧದೇವನು ತನ್ನ ವಚನಗಳ ಜೊತೆ,ಇತರೆ ವಚನಕಾರರ ವಚನಗಳನ್ನು ಸೇರಿಸಿ ಶಿಷ್ಯನಾದ ಸಂಗನ ಬಸವೇಶ್ವರನಿಗೆ ಬೋಧಿಸುತ್ತಾನೆ. ಇನ್ನೊಬ್ಬ ಶಿಷ್ಯ ಬಸವಲಿಂಗೇಶ್ವರನು ಆ ವಚನಗಳನ್ನೆಲ್ಲವನ್ನು ಬರೆದುಕೊಂಡು ಹೋಗಿ ಗುರುವಾದ ಶಾಂತ ಮಲ್ಲ ಸ್ವಾಮಿಗಳ ಪಾದಗಳಿಗೆ ಅರ್ಪಿಸುತ್ತಾರೆ. ಅವರು ಈ ಸಂಕಲನಕ್ಕೆ "ಅನಾದಿ ಷಟ್‌ಸ್ಥಲ ನಿರಾಭಾರಿ ವೀರಶೈವ ಶರಣನ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ" ಎಂದು ನಾಮಕರಣ ಮಾಡುತ್ತಾರೆ. ನಂತರ ಸಂಗನ ಬಸವೇಶ್ವರನು ಕೃತಿ ಹೆಸರಿನ

ಅರ್ಥ ವಿವರಣೆ ನೀಡುತ್ತಾನೆ. (ವ-೩೯೨) ಹಾಗಾಗಿ ಈ ಸಂಕಲನ ನಾಲ್ಕುಜನ ಶರಣರಿಂದ ಜನ್ಮತಾಳಿದೆ ಎನ್ನಬಹುದು.

ಈ ಸಂಕಲನದ ವಿಶೇಷವೆಂದರೆ ಯಾವ ಸಂಕಲನದಲ್ಲಿಯೂ ಕಂಡುಬರದ ಶಾಪಾಶತವಿದೆ. ೩೯೧ನೇ ವಚನದಲ್ಲಿ 'ಮಂತ್ರಶಾಸ್ತ್ರದಲ್ಲಿ ಅಸಡ್ಡೆ, ಅಲಕ್ಷ್ಯ, ಅವಿದ್ಯೆಯುಳ್ಳ ನಿಚಾಧಿಕಾರಿಗಳಿಗೆ ಮಂತ್ರ ಮರ್ಮದ ಉಪದೇಶವನ್ನು ಮಾಡಲಾಗದು' ಎಂದು 'ಬಲ್ಲತನವ ಮೆರೆಯುವ ಅಹಂಕಾರದಲ್ಲಿ ಅನರ್ಹ ಅನಾಧಿಕಾರಿಗಳಿಗೆ ಬೋಧಿ ಆಜ್ಞೆಯನ್ನು ಮಿರಿದಲ್ಲಿ ಶಾಕಿನಿ, ಢಾಕಿನಿ ಎಂಬ ಮಂತ್ರ ಶಾಪ ಉಂಟಾಗುವುದು ಎಂದಿದೆ. ಹಾಗಾಗಿ ಇದೊಂದು ವಿಶಿಷ್ಯ ಸಂಕಲನವಾಗಿದೆ.

೬.ಗುರು ಶಂಕರಸ್ವಾಮಿಗಳು ಸಂಗ್ರಹಿಸಿದ

ಜ್ಞಾನ ಷಟ್‌ಸ್ಥಲ ಸಾರ

ಈ ಸಂಕಲನದ ಗುರು ಶಂಕರ ಸ್ವಾಮಿಗಳು ಎಂಬುದು ಕೃತಿಯ ಆರಂಭಗದ್ಯ ಮತ್ತು ಪ್ರತಿಸ್ಥಲದ ಅಂತ್ಯದಲ್ಲಿರುವ ಮುಕ್ತಾಯ ವಾಕ್ಯದಿಂದ ತಿಳಿದು ಬರುತ್ತದೆ. ಆರಂಭ ಗದ್ಯದಲ್ಲಿ ಇರುವ ತಮ್ಮನ್ನು ಕುರಿತು "ಶ್ರೀ ಮನ್ಮಹಾದೇವ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅಖಂಡಾದ್ವಯ ಅನ್ವಯ ಅಪ್ರಮೇಯ ಅನುಪಮ ಅವಿರಳ ಅಪ್ರಮಾಣ ಅನಾಮಯ ಅನಿರ್ವಾಚ್ಯವಾದ ಅನಾದಿ ಪರಶಿವ ಸ್ವರೂಪರಾದ, ಅರಾಧ್ಯ ಸಂಪ್ರದಾಯಕರಾದ, ಷಡುದರ್ಶನ ಸ್ಥಾಪನಾಚಾರ್ಯರಾದ, ಷಟ್‌ಸ್ಥಲ ಜ್ಞಾನಿಗಳಾದ, ಶಿವಾಚಾರ ಚಕ್ರವರ್ತಿಗಳಾದ, ಶಿವ ಸಮಯ ಪಾಲಿಕರಾದ, ಸರ್ವಾಂಗ ಲಿಂಗಿಗಳಾದ, ಸರ್ವಾಚಾರ ಸಂಪನ್ನರಾದ, ಜಗದಾರಾಧ್ಯರಾದ, ದಿವ್ಯಾನುಭವಿಗಳಾದ, ಚಿತ್ಕೋಟಿ ಪುರಾಧೀಶ್ವರರಾದ ಸಿದ್ಧಲಿಂಗೇಶ್ವರನ ಸದ್ಭಾವ ಸರೋಜ ಸಾರಾಮೃತ ಕೃಪಾಲೋಕನದಿಂದ ಸಮುದ್ಭೂತರಾದ ಗುರುಶಂಕರ ಸ್ವಾಮಿಯವರು" ಎಂದು ಹೇಳಿಕೊಂಡಿದ್ದಾರೆ.

ಪ್ರತಿ ಸ್ಥಲದ ಅಂತ್ಯದ ಮುಕ್ತಾಯ ವಾಕ್ಯದಲ್ಲಿ "ಶ್ರೀ ಮತ್ಸಕಲ ಪುರಾತನರ ಕಾರುಣ್ಯ ಪ್ರಸಾದದಿಂದ ಪ್ರಸನ್ನರಾದ ಗುರುಶಂಕರ ಸ್ವಾಮಿಗಳು ಸಂಗ್ರಹಿಸಿದ ಜ್ಞಾನ ಷಟ್‌ಸ್ಥಲ ಸಾರಾ" ಎಂದು ಹೇಳಿಕೊಂಡಿದ್ದಾರೆ. ಇದರಿಂದ ಮೂರು ವಿಚಾರಗಳು ಸ್ಪಷ್ಟವಾಗುತ್ತವೆ.

೧. ಕೃತಿಯ ಕರ್ತೃ ಗುರುಶಂಕರ ಸ್ವಾಮಿಗಳು

೨. ಎವರು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯವರು.[೫೨]

೩. ಸಕಲ ಪುರಾತನರ ವಚನಗಳಲ್ಲಿ ಸಾರವತ್ತಾದ ವಚನಗಳನ್ನು ಆರಿಸಿ ಸಂಕಲಿಸಿದ ಕೃತಿ ಇದಾಗಿದೆ ಎಂಬುದು.

ಆದರೆ ಇದುವರೆಗೆ ತೋಂಟದ ಸಿದ್ಧಲಿಂಗರ ಯಾವೂದೇ ಗುರು-ಶಿಷ್ಯ ಪರಂಪರೆಯ ಪಟ್ಟಿಯಲ್ಲಿ ಇವರ ಹೆಸರು ಉಲ್ಲೇಖಗೊಂಡಿಲ್ಲ. ಇನ್ನು ಮುಂದೆ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿ ಇವರ ಹೆಸರನ್ನು ಸೇರಿಸಬೇಕಾಗುತ್ತದೆ. ಈ ಆಧಾರಗಳನ್ನು ಇಟ್ಟುಕೊಂಡು ಈತನ ಕಾಲವನ್ನು ತೋಂಟದಸಿದ್ಧಲಿಂಗರ ತರುವಾಯ ೧೭ನೇ ಶತಮಾನದ ಆದಿ ಎಂದು ಊಹಿಸಬಹುದು ಇಷ್ಟರ ಹೊರತು ಈತನ ಬಗ್ಗೆ ಮತ್ತಾವ ಸಂಗತಿಗಳು ದೊರೆಯುವುದಿಲ್ಲ.

---

೫೨. ಕೃತಿಯ ಆದಿಯ ಗದ್ಯದಲ್ಲಿ ಮತ್ತು ಮೊದಲಸ್ಥಲದ ಆರಂಭದ ಗುರು ಸ್ತುತಿಯಲ್ಲಿ "......ಸದ್ಗುರುವೆ ರಕ್ಷಿಸು ತೋಂಟದ ಸಿದ್ಧಲಿಂಗ ಪ್ರಭು ಚೆನ್ನಬಸ ವೇಶ್ವರಾಚಾರ್ಯನೆ" ಎಂದು ಭಕ್ತಿಯಿಂದ ಸ್ತುತಿಸಿರುವುದು.

[illegible]

ಗುರು ಶಂಕರ ಸ್ವಾಮಿಗಳು ತಾವು ಸಿದ್ಧಲಿಂಗರ ಕೃಪೆಯಿಂದ ಹುಟ್ಟಿದವರೆಂದು ಹೇಳಿಕೊಂಡಿದ್ದಾರೆ. ಆದರೆ ತಮ್ಮ ಈ ಸಂಕಲನದಲ್ಲಿ ತೋಂಟದ ಸಿದ್ಧಲಿಂಗರ ವಚನಗಳನ್ನಾಗಲಿ, ಅವರ ಶಿಷ್ಯ ಪರಂಪರೆಗೆ ಸೇರಿದ ವಚನಕಾರರ ವಚನಗಳನ್ನಾಗಲಿ ಅಳವಡಿಸಿಕೊಳ್ಳದೆ ಇರುವುದು ಆಶ್ಚರ್ಯದ ಸಂಗತಿಯಾಗಿದೆ.

ಗುರುಶಂಕರ ಸ್ವಾಮಿಗಳ ಸಕಲ ಪುರಾತನರ ವಚನಗಳನ್ನು ಆರಿಸಿ ತಾತ್ವಿಕ ಹಿನ್ನೆಲೆಯಲ್ಲಿ ಸ್ಥಲಾನುಗುಣವಾಗಿ ಸಂಯೋಜಿಸಿದ ಕೃತಿ ಇದಾಗಿದೆ. ಕೃತಿಯ ಆದಿಗದ್ಯದಲ್ಲಿ 'ಪಂಚ ವಿಂಶತಿ ಸ್ಥಲಂಗಳು' ಎಂದು ಹೇಳಿದರೂ ಇದರಲ್ಲಿ ನಲವತ್ತು ಸ್ಥಲಗಳು ಮಾತ್ರ ಇವೆ. ಕೃತಿ ಅಪೂರ್ಣವಾಗಿರುವುದರಿಂದ ಉಳಿದ ಸ್ಥಲಗಳಾವುವು ಎಂಬುದು ದೊರೆಯುವುದಿಲ್ಲ. ಇಲ್ಲಿ ಅಳವಡಿಸಿಕೊಂಡಿರುವ ಸ್ಥಲಯೋಜನೆ ನೂತನವಾಗಿದೆ ಅದು ಈ ಕೆಳಗಿನಂತಿದೆ.

೧. ಗುರು ಮಹಾತ್ಮೆಯಸ್ಥಲ
೨. ವಸ್ತುನಿರ್ದೇಶ
೩. ಪಿಂಡಸ್ಥಲ
೪. ಪಿಂಡಜ್ಞಾನ ಸ್ಥಲ
೫. ಸಂಸಾರ ಹೇಯಸ್ಥಲ
೬. ಮಾಯಾವಿಲಾಸ ವಿಡಂಬನ ಸ್ಥಲ
೭. ದೇಹ ಭಾವ ನಿರಸನ ಸ್ಥಲ
೮. ನಿದ್ರಾನಿರಸನ ಸ್ಥಲ
೯. ಇಂದ್ರಿಯ ನಿರಸನ ಸ್ಥಲ
೧೯. ಸಪ್ತವಿಧ ಸ್ಥಲ
೨೦. ಲಿಂಗ ಸ್ತುತಿ
೨೧. ಜ್ಞಾನ ಜಂಗಮ ಸ್ಥಲ
೨೨. ಗುರು ಪಾದೋದಕ ಸ್ಥಲ
೨೩. ಲಿಂಗ ಪಾದೋದಕ ಸ್ಥಲ
೨೪. ಜಂಗಮ ಪಾದೋದಕ ಸ್ಥಲ
೨೫. ಸದ್ಭಾವ ಶೇಷಸ್ಥಲ
೨೬. ಸ್ವಯಾನುಭಾವ ಸ್ಥಲ
೨೭. ವಿಭೂತಿ ಸ್ಥಲ
೨೮. ರುದಾಕ್ಷಿ ಸ್ಥಲ
೨೯. ಪಂಚಾಕ್ಷರಿ ಸ್ಥಲ

೧೦. ಮನೋ ನಿರಸನ ಸ್ಥಲ
೧೧. ಆಶಾ ನಿರಸನ ಸ್ಥಲ
೧೨. ಸಂಸಾರ ವಿಮೋಚನ
೧೩. ಸ್ವಾತ್ಮೋಪದೇಶ
೧೪. ಉಪಾವಸ್ಥೆ
೧೫.ಗುರುಕಾರುಣ್ಯ ತಾಮಸ ನಿರಸನ
೧೬. ಸದ್ಗುರು ಸ್ಥಲ
೧೭. ವಿಶ್ವಾಸ ಭಾವ
೧೮ ಲಿಂಗಧಾರಣ ಸ್ಥಲ
೩೦. ಭಕ್ತ ಸ್ಥಲ
೩೧. ಭಕ್ತಿ ಸಾರೋದ್ಧಾರ ಸ್ಥಲ
೩೨. ಮಾಹೇಶ್ವರ ಸ್ಥಲ
೩೩. ಜಂಗಮ ಸ್ಥಲ
೩೪. ಅದ್ವೈತ ನಿರಸನ
೩೫. ಪ್ರಸಾದಿ ಸ್ಥಲ
೩೬. ಪ್ರಾಣ ಲಿಂಗ ಸ್ಥಲ
೩೭. ಶರಣ ಸ್ಥಲ
೩೮. ಅವಸಾನ ಸ್ಥಲ
೩೯. ಐಕ್ಯ ಸ್ಥಲ
೪೦. ಸ್ವಲೀಲಾನಂದ ಸ್ಥಲ.

ಇಲ್ಲಿಯ ಸ್ಥಲ ಪರಿಕಲ್ಪನೆಯಲ್ಲಿ ಷಟ್‌ಸ್ಥಲಗಳಾದ ಭಕ್ತ, ಮಾಹೇಶ್ವರ ಮುಂತಾದ ಸ್ಥಲಗಳ ಪೂರ್ವದಲ್ಲಿ ಗುರುಮಾಹೇತ್ಮೆ ಸ್ಥಲ, ವಸ್ತುನಿರ್ದೇಶನ, ಪಿಂಡಸ್ಥಲ, ಪಿಂಡಜ್ಞಾನ ಸ್ಥಲ ಮುಂತಾದ ೨೯ ಸ್ಥಲಗಳನ್ನು ಹೆಸರಿಸುತ್ತಾನೆ. ಭಕ್ತ ಮಾಹೇಶ್ವರ ಸ್ಥಲಗಳಾದ ಮೇಲೆ ಜಂಗಮ ಸ್ಥಲ,ಸದ್ವೈತ ನಿರಸನ ಸ್ಥಲಗಳನ್ನು ಹೆಸರಿಸಿ ನಂತರ ಪ್ರಸಾದಿ, ಪ್ರಾಣ ಲಿಂಗ, ಶರಣ ಸ್ಥಲಗಳನ್ನು ಜೋಡಿಸುತ್ತಾನೆ. ಶರಣ ಮತ್ತು ಐಕ್ಯಸ್ಥಲದ ನಡುವೆ ಅವಸಾನ ಸ್ಥಲವೆಂಬ ಹೊಸ ಸ್ಥಲವನ್ನು ಜೋಡಿಸಿದ್ದಾನೆ. ಕೊನೆಯದಾಗಿ ಪರವಸ್ತುವು ಅಂಗ ಧರಿಸಿ ಬಂದು ತಾತ್ವಿಕಾಚರಣೆಗಳನ್ನು ಆಚರಿಸುತ್ತಾ ಕೊನೆಗೆ

ಶೂನ್ಯದಲ್ಲಿ ಶೂನ್ಯವಾಗಿ ಆನಂದವನ್ನು ಕಾಣುವ ಸ್ವಲೀಲಾನಂದ ಸ್ಥಲವನ್ನು ಜೋಡಿಸಿ ಇವುಗಳಿಗೆ ಬೇಕಾದ ವಚನಗಳನ್ನು ಆರಿಸಿ ಸಂಗ್ರಹಿಸಿ ಮೆಚ್ಚತಕ್ಕ ವಿಷಯವಾಗಿದೆ.

"೨೧ನೇ ಸ್ಥಲವಾದ 'ಜ್ಞಾನ ಜಂಗಮ ಸ್ಥಲ'ದ ಹೆಸರು ಮಾತ್ರ ಹಸ್ತ ಪ್ರತಿಯಲ್ಲಿ ದೊರಕಿದೆ. ಇದರಲ್ಲಿರುವ ವೃತ್ತ, ವಚನಗಳಿರುವ ಗರಿಗಳು ಕಳೆದು ಹೋಗಿವೆ. ೨೨ನೇ ಸ್ಥಲವಾದ 'ಗುರು ಪಾದೋದಕ ಸ್ತಲ'ದ ಹೆಸರಿರುವ ಗರಿ. ಆರಂಬದ ವೃತ್ತ, ಎಂಟು ವಚನಗಳಿದ್ದ ಗರಿ ಕಳೆದು ಹೋಗಿದೆ ಇದರಲ್ಲಿ ಒಂದು ವೃತ್ತ ಹನ್ನೊಂದು ವಚನಗಳಿದ್ದಂತೆ ಕೊನೆಯ ವಚನದ ಸಂಖ್ಯೆಯಿಂದ ತಿಳಿದುಬರುತ್ತದೆ. ಇದರಲ್ಲಿ ಮೂರು ವಚನಗಳು ದೊರೆತಿವೆ. ೨೪ನೇ ಸ್ಥಲವಾದ 'ಜಂಗಮ ಪಾದೋದಕ ಸ್ಥಲ'ದ ಐದು, ಆರು, ಏಳನೆಯ ವಚನಗಳು ಇಲ್ಲವಾಗಿವೆ. ಇದರಲ್ಲಿ ಒಂಬತ್ತು ವಚನಗಳು ಐದು ಗ್ರಂಥಗಳಿವೆ. ೩೨ನೇ ಸ್ಥಲವಾದ ಮಾಹೇಶ್ವರ ಸ್ಥಲದಲ್ಲಿ ೩೪ ವಚನಗಳಿವೆ. ಆದರೆ ೧೮-೧೯ನೇ ಸಂಖ್ಯೆಯ ವಚನಗಳಿರುವ ೪೯ನೇ ಗರಿ ಕಳೆದು ಹೋಗಿದೆ. ಇದರಲ್ಲಿರುವ ವಚನಗಳ ಸಂಖ್ಯೆ ಎಷ್ಟೆಂದು ತಿಳಿಯದು ೩೫ ಮತ್ತು ೩೬ನೇ ಸ್ಥಲಗಳಾದ 'ಪ್ರಸಾದಿ ಸ್ಥಲ', 'ಪ್ರಾಣಲಿಂಗಿಸ್ಥಲ'ಗಳ ವಚನಗಳಿರುವ ಗರಿ ಕಳೆದು ಹೋಗಿರುವುದರಿಂದ ಇವುಗಳಲ್ಲಿನ ಗ್ರಂಥ ಹಾಗೂ ವಚನಗಳ ಸಂಖ್ಯೆ ತಿಳಿಯುವುದಿಲ್ಲ. ೩೭ನೇ ಸ್ಥಲ 'ಶರಣ ಸ್ಥಲ'ದ ಆದಿ ಶ್ಲೋಕ ಸಹಿತ ೨೭ನೇ ವಚನ ಸಂಖ್ಯೆಯರೆಗಿನ ಗರಿಗಳು ಕಳೆದಿವೆ. ಈ ಸಂಕಲನದ ಕೊನೆಯ ಸ್ಥಲವಾದ ೪೦ನೇ ಸ್ಥಲ 'ಸ್ವಲೀಲಾನಂದ ಸ್ಥಲ' ದ ೧೨ರಿಂದ ಮುಂದಿನ ವಚನಗಳಿರುವ ಆರುಗರಿಗಳು ಕಳೆದಿವೆ"[೫೩] ಹಾಗಾಗಿ ಎಲ್ಲಾ ಸ್ಥಲಗಳ ವಚನ ಹಾಗೂ ವಚನಕಾರರ ಸಂಪೂರ್ಣ ಮಾಹಿತಿ ದೊರೆಯುವುದಿಲ್ಲ.

'ಜ್ಞಾನ ಷಟ್‌ಸ್ಥಲಸಾರ' ಕೃತಿಯಲ್ಲಿ ೫೮ ವಚನಕಾರರ[೫೪] ೪೦೨ ವಚನಗಳು[೫೫] ಸಂಗ್ರಹವಾಗಿವೆ. ಇದರಲ್ಲಿ ೪ ಸ್ವರ ವಚನಗಳು,[೫೬] ೨ ಯುಗಗಳು ವಿವರಿಸುವ ವಚನಗಳಾಗಿವೆ. ಸಂಗ್ರಹಗೊಂಡ ವಚನಕಾರರಲ್ಲಿ ೩೮ ಜನ ಪುರುಷರು ೧೫ ಜನ ಸ್ತ್ರೀಯರು. ೪ ಜನ ವಚನಕಾರರ ಹೆಸರು ದೊರೆತಿಲ್ಲ. ಒಬ್ಬ ವಚನಕಾರನ ಹೆಸರು ಮತ್ತು ಅಂಕಿತದೊರೆತಿಲ್ಲ. ಉಳಿದಂತೆ ೫ವಚನಗಳಿಗೆ ಅಂಕಿತವಿಲ್ಲ. ಹೀಗಾಗಿ ಸಂಕಲನ ಸಮರ್ಪಕವಾಗಿಲ್ಲ.

'ಜ್ಞಾನ ಷಟ್‌ಸ್ಥಲ ಸಾರ' ಹೆಸರೆ ಸೂಚಿಸುವಂತೆ ಇದರ ವಸ್ತು ಷಟ್‌ಸ್ಥಲ ತತ್ವ ನಿರೂಪಣೆಯಾಗಿದೆ. ಇಲ್ಲಿ ಬಳಸಿಕೊಂಡಿರುವ ತಾತ್ವಿಕ ವಿಚಾರಗಳನ್ನು ಪಾರಂಪರಿಕ ಸ್ಥಲಗಳ ಜೊತೆಗೆ ಕೆಲವು ನೂತನ ಸ್ಥಲಗಳನ್ನು ಸಂಕಲನಕಾರ ಅಳವಡಿಸಿಕೊಂಡಿದ್ದಾನೆ. ಇದರಲ್ಲಿನ ೧೩ ಸ್ಥಲಗಳು ಹೊಸದಾಗಿವೆ.[೫೭] ಉಳಿದ ಸ್ಥಲಗಳು ಬೇರೆ ಬೇರೆ ಸ್ಥಲ ಕಟ್ಟಿನ ಸಂಕಲನಗಳಲ್ಲಿ

---

೫೩. ಈ ಮಾಹಿತಿಯನ್ನು ಸಂಕಲನದ ಪ್ರಸ್ತಾವನೆಯಿಂದ ಪಡೆಯಲಾಗಿದೆ.

೫೪. ಇಲ್ಲಿ ಸಂಗ್ರಹಗೊಂಡಿರುವ ಕೆಲವು ವಚನಗಳಿಗೆ ಅಂಕಿತವಿಲ್ಲದ ವಚನಕಾರರ ನಿಖರ ಸಂಖ್ಯೆ ತಿಳಿಯುವುದಿಲ್ಲ.

೫೫. ಹಸ್ತ ಪ್ರತಿ ಮಧ್ಯದಲ್ಲಿ ಅನೇಕ ಗರಿಗಳು ಕಳೆದು ಹೋಗಿರುವುದರಿಂದ

೫೬. ೨೫,೩೭,೩೮,೩೯ನೇ ಸ್ಥಲಗಳ ಅಂತ್ಯದಲ್ಲಿ ಒಂದೊಂದು ಸ್ವರವಚನಗಳಿವೆ.

೫೭. ಅವು ೧೩,೧೯, ೨೦,೨೧,೨೨,೨೩,೨೪, ೨೫,೨೬,೩೧,೩೩,೩೪,೩೮ನೇ ಕ್ರಮಸಂಖ್ಯೆಯ ಸ್ಥಲಗಳು.

[illegible]

ಬಳಕೆಯಾದವುಗಳಿವೆ. ಸ್ಥಲಾರಂಭದಲ್ಲಿ ಸಂಸ್ಕೃತ ಶ್ಲೋಕ, ನಂತರ ವಚನಗಳನ್ನು ಜೋಡಿಸುವ ಕ್ರಮಕ್ಕೆ ಗಣಭಾಷಿತ ರತ್ನಮಾಲೆ, ಷಟ್ಪ್ರಕಾರ ಸಂಗ್ರಹ, ಶಿವಯೋಗ ಚಿಂತಾಮಣಿ ಕೃತಿಗಳು ಪ್ರೇರಣೆ ನೀಡಿವೆ.

ಕೃತಿಯ ಆರಂಭದ ಗದ್ಯದಲ್ಲಿ ಕರ್ತೃವಿನ ಹಾಗೂ ಕೃತಿಯ ಸಂಕ್ಷಿಪ್ತ ಪರಿಚಯವಿದೆ. ನಂತರ ಸ್ಥಲಗಳು ಆರಂಭವಾಗುತ್ತವೆ. ಮೊದಲ ಸ್ಥಲ 'ಗುರು ಮಾಹಾತ್ಮೆ ಸ್ಥಲ' ದ ಆರಂಭದಲ್ಲಿ ತೋಂಟದ ಸಿದ್ದಲಿಂಗ ಸ್ತುತಿಯನ್ನೊಳಗೊಂಡ ಒಂದು ಕನ್ನಡ ವೃತ್ತವಿದೆ. ನಂತರ ರೇಣುಕಾಚಾರ್ಯರ ಸ್ತುತಿಸುವ ಒಂದು ಶ್ಲೋಕವಿದೆ. ನಂತರ ಈ ಸ್ಥಲಕ್ಕೆ ಬೇಕಾದ ವಚನಗಳನ್ನು ಸಂಗ್ರಹಿಸಲಾಗಿದೆ. ಈ ಸ್ಥಲದ ಕೊನೆಯಲ್ಲಿ '... ಗುರುಶಂಕರ ಸ್ವಾಮಿಗಳು ಸಂಗ್ರಹಿಸದ ಜ್ಞಾನ ಷಟ್‌ಸ್ಥಲ ಸಾರಾಮೃತ ಪ್ರಥಮೋಪದೇಶ' ಎಂದು ಮುಗಿಯುತ್ತದೆ. ಈ ಕೃತಿಯನ್ನು' ಜ್ಞಾನ ಷಟ್‌ಸ್ಥಲ ಸಾರಾಮೃತ' ವೆಂದು ಕರೆಯುತ್ತಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಉಳಿದೆಲ್ಲಾ ಸ್ಥಲಾಂತ್ಯದಲ್ಲಿ 'ಜ್ಞಾನ ಷಟ್‌ಸ್ಥಲಸಾರ' ಎಂದೇ ಕೃತಿಯನ್ನು ಪರಿಚಯಿಸುತ್ತಾನೆ.

ಪ್ರತಿಸ್ಥಲದ ಆದಿಯಲ್ಲಿ ಆ ಸ್ಥಲಕ್ಕೆ ಸಂಬಂಧಿಸಿದ ವಿಷಯವನ್ನಿಟ್ಟುಕೊಂಡ ಶ್ಲೋಕಗಳಿವೆ. ಅವುಗಳಿಗೆ ಗ್ರಂಥ, ಸಾಕ್ಷಿ ಎಂದು ಕರೆಯುತ್ತಾನೆ. ಎಂಟನೇಯ ಸ್ಥಲವಾದ ' ನಿದ್ರಾನಿರಸನ 'ದ ಸ್ಥಲವನ್ನು ಯಾವ ಶ್ಲೋಕ, ವೃತ್ತವಿಲ್ಲದೆ ನೇರವಾಗಿ ವಚನಗಳಿಂದಲೇ ಆರಂಭಿಸುತ್ತಾನೆ. ಇದರಲ್ಲಿ ಆರು ವಚನಗಳಿವೆ. ನಾಲ್ಕು ನೇರವಾಗಿ ನಿದ್ರೆಗೆ ಸಂಬಂಧಿಸಿವೆ.

'ಮೂರು ಲೋಕದವರನೆಲ್ಲರನು ನಿದ್ರಾಂಗನೆ
ಹಿಂಡಿ, ಹೀರಿ ಹಿಪ್ಪೆಯ ಮಾಡಿ
ಪ್ರಾಣಾಕರ್ಷಣೆಯಂ ಮಾಡಿ ಕಟ್ಟಿ ಕೆಡಹಿದಳಲ್ಲಾ
ಇವಳ ಗೆಲುವ ಧೀರರನಾರು ಕಾಣೆ
ಇವಳ ಬಾಣಕ್ಕೆ ಗುರಿಯಾಗಿ
ಏಳುತ್ತಾ ಬೀಳುತ್ತಲಿದ್ದರೆಲ್ಲರು ಗುಹೇಶ್ವರ' (ವ–೩೮)

ಇನ್ನೆರಡು ವಚನ ಹುಟ್ಟು, ಸಾವು, ಜಡಬದುಕಿನ ಚಿತ್ರವನ್ನು ನೀಡುತ್ತದೆ. 'ಲಿಂಗಪಾದೋದಕ ಸ್ಥಲ'ದಲ್ಲಿ ಕೇವಲ ಆರು ಶ್ಲೋಕಗಳಿವೆ. ಯಾವುದೇ ವಚನಗಳನ್ನು ಈ ಸ್ಥಲಕ್ಕೆ ಸಂಗ್ರಹಿಸಿಲ್ಲ. ೨,೨೬,೨೭,೨೯ನೇ ಸ್ಥಲಗಳ ಅಂತ್ಯದಲ್ಲಿಯೂ ಶ್ಲೋಕಗಳಿವೆ. ಎಲ್ಲಾ ಸ್ಥಲಗಳ ಕೊನೆಯಲ್ಲಿ (ಮೊದಲ ಸ್ಥಲವನ್ನು ಹೊರತು ಪಡಿಸಿ)[೫೮] "ಶ್ರೀಮತ್ಸಕಲ..... ಜ್ಞಾನ ಷಟ್‌ಸ್ಥಲಸಾರ ದ್ವಿತೀಯೋಪದೇಶ" ಎಂದಿದೆ. ತೃತೀಯ ಸ್ಥಲವಾದರೆ ತೃತೀಯೋದೇಶ ಹೀಗೆ ಅಂಕೆಗಳನ್ನು ಮಾತ್ರ ಬದಲಿಸಿ ಎಲ್ಲಾ ಸ್ಥಲಗಳನ್ನು ಹೇಳುತ್ತಾನೆ.

ಗುರುಮಹಾತ್ಮೆ ಸ್ಥಲದ ಆರಂಭದಲ್ಲಿ ಬಸವಣ್ಣನನ್ನು ಸ್ತುತಿಸಿದ, ಸಿದ್ದರಾಮನ ವಚನದಿಂದ ಸಂಕಲನ ಆರಂಭವಾಗುತ್ತದೆ. ನಂತರ ಚನ್ನಬಸವಣ್ಣ, ಪ್ರಭುದೇವ, ಮಡಿವಾಳ ಮಾಚಿದೇವರುಗಳು ಈ ಲೋಕಕ್ಕೆ ಬಂದ ಕಾರಣ ಮತ್ತು ಅವರ ಮಹಿಮೆಗಳನ್ನು ವರ್ಣಿಸಲಾಗಿದೆ. ಮುಂದೆ

---

೫೮. ಮೊದಲ ಸ್ಥಲದಲ್ಲಿ 'ಜ್ಞಾನ ಷಟ್‌ಸ್ಥಲ ಸಾರಾಮೃತ' ಎಂದಿದೆ.

ಸ್ಥಲಕಟ್ಟಿನ ಚೌಕಟ್ಟಿನೊಳಗೆ ತತ್ವಗಳ ಸೂಕ್ಷ್ಮ ವಿವರಣೆ ನಿರೂಪಿತವಾಗಿದೆ. ಸೃಷ್ಟಿಯ ಪ್ರಥಮದ ವಸ್ತು ಅನಿರ್ವಾಚ್ಯವಾಗಿದೆ. ಅದು ಬೀಜ ವೃಕ್ಷದಂತೆ, ಅಂಡ ನವಿಲಿನಂತೆ ನಿರಾಕಾರವಾಗಿದೆ. ನಿರಾಕಾರವೇ ಮೂರ್ತಿಯಾಗಿ, ಮೂರ್ತಿಯೇ ನಿರಾಕಾರವಾಗಿ ಇವನೆಲ್ಲವನಳಿದು, ಇವನೆಲ್ಲವನೊಳಗೊಂಡು ಪರವಸ್ತು ಬಯಲಾಗಿರುತ್ತದೆ. ಆತ ಕರ್ತೃ, ಕರ್ಮನಾಗಿರುವನು. ದೇಹಿಯೂ ಆಗಿರುತ್ತಾನೆ. ಆತ ಎಲ್ಲವನ್ನೂ ತನ್ನಲ್ಲಿ ವಿಲೀನಗೊಳಿಸಿಕೊಂಡಿರುತ್ತಾನೆ. ಅಂತಹ ಪರವಸ್ತುವು ಅಂಗಧರಿಸಿ ಸಾಧನೆಯ ಹಂತಗಳನ್ನೇರಿ ಲಿಂಗವೇ ಆಗುವ ಕ್ರಿಯೆಯನ್ನು ಈ ಸಂಕಲನ ತಿಳಿಸುತ್ತದೆ.
ಪರವಸ್ತುವಾದ ಆ ಮಹಾಘನವು ತನ್ನ ಲೀಲೆಗಳಿಗೋಸ್ಕರ

‘ ಏನೂ ಏನೂ ಎನಲಿಲ್ಲದ ಮಹಾಘನವು
ತನ್ನ ಲೀಲೆಯಿಂ ತಾನೆ ಸ್ವಯಂಭು ಲಿಂಗಸ್ಥಲವಾಯಿತ್ತು
ಆ ಲಿಂಗದಿಂದಾಯಿತ್ತು ಶಿವ ಶಕ್ತ್ಯಾತ್ಮಕ
ಆ ಶಿವ ಶಕ್ತ್ಯಾತ್ಮಕದಿಂದಾಯಿತ್ತು ಆತ್ಮ
ಆತ್ಮದಿಂದಾಯಿತ್ತು ಆಕಾಶ
ಆಕಾಶದಿಂದಾಯಿತ್ತು ವಾಯು
ವಾಯುವಿನಿಂದಾಯಿತ್ತು ಅಗ್ನಿ
ಅಗ್ನಿಯಿಂದಾಯಿತ್ತು ಅಪ್ಪು
ಅಪ್ಪುವಿನಿಂದಾಯಿತ್ತು ಪೃತ್ವಿ
ಪೃತ್ವಿಯಿಂದಾಯಿತ್ತು ಸಕಲ ಜೀವ ಜಗ
ಇವೆಲ್ಲಾ ನಿಮ್ಮ ನೆನಹು ಮಾತ್ರದಿಂದಾವು ನೋಡಾ
ಸಿಮ್ಮಲಿಗೆಯ ಚನ್ನರಾಮ” (ವ–೬)

ಹೀಗೆ ಸೃಷ್ಟಿಯನ್ನು ನಿರ್ಮಿಸಿದ ಮಹಾಘನವು ಬೀಜದೊಳಗಿರುವ ವೃಕ್ಷದಂತಿರುವ ಪಿಂಡದ ಸ್ವರೂಪವನ್ನು ತಿಳಿಸಿ, ಆ ಪಿಂಡಕ್ಕೆ ಅರಿವನ್ನು ಮೂಡಿಸುವುದು. ನೆರಳಿಲಿನಂತೆ ಬಿಂಬಡದೆ ಬಂದು ಕಾಡುವ ಸಂಸಾರದ ಬಗೆಗೆ ಹೇಯ ಭಾವ ತಾಳುತ್ತದೆ.

“ ಸಂಸಾರ ಬೆಂಬಿಡದೆ ಕಾಡಿಹಿತ್ತಯ್ಯ
ಏವೆನೇವೆನಯ್ಯ?
ಅಂದಂದಿನ ದಂದುಗಕ್ಕೆ ಏವೆನೇವೆನಯ್ಯ
ಬೆಂದ ಒಡಲ ಹೊರುವುದಕ್ಕೆ
ಚನ್ನಮಲ್ಲಿಕಾರ್ಜುನಾ ಕೊಲ್ಲು, ಕಾಯಿ ನಿಮ್ಮ ಧರ್ಮ” (ವ–೨೫)

ಎಂದು ಹೇಳುತ್ತಲೆ “ ಯತಿಗಳ, ಶುಚಿಗಳ, ಶೂರರ ದೃತಿಗೆಡಿಸುವ ಹರಿಹರ ಬ್ರಹ್ಮರೆಂಬುವರ, ಕಲಿಗಳ ಛಲಿಗಳ, ಬಲುಹ ಮೆರೆವವರ ಚುನ್ನಾಡಿಸಿದ ಮಾಯೆ” (ವ–೨೭)ಯನ್ನು ವಿಡಂಭಿಸಿ, ‘ಅಮೇಧ್ಯದ ಹುತ್ತ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ, ಸುಡಲೀ ದೇಹವ, ಒಡಲುವಿಡಿದು ಕೆಡದಿರು’(ವ–೩೪) ಎಂದು ದೇಹದ ಮೇಲಿನ ಮೋಹವನ್ನು ಬಿಡುವುದು, ‘ದೇಹನ ದಾನಮಾನವಾದಿಗಳೊಳಗಾದ ಎಲ್ಲ ಜೀವರುಗಳನ್ನು ನಿದ್ರೆಯ ಬಲೆಯ ಬೀಸಿ’

(ವ–೩೯) ಕೆಡುವುವ ನಿದ್ರಾಂಗನೆಯನ್ನು ದೂರಮಾಡಿ,

ಆತ್ಮಘಾತುಕವೆನ್ನ ಬಹುದಾದ ಪಂಚೇಂದ್ರಿಯಗಳನ್ನು ನಿಗ್ರಹಿಸಿ " (ವ–೪೪), ಮನವೆಂಬ ಮರ್ಕಟನು ತನುಬಿಕಾರವೆಂಬ ಅಲ್ಲಸುಖದಾಸೆಗಾಗಿ ವೃಥಾಭ್ರಮೆಗೊಂಡು ನಾನಾ ದೆಸೆಗೆ ಲಂಘಿಸಿ, ಅಳಲಿ ಬಳಲಿಸುವ (ವ–೪೬) ಮನದ ದಾಳಿಯನ್ನು ನೀಗಿ " ಪರರಾಸೆಯೆಂಬ ಜ್ವರ ಹತ್ತಿ ನಾನು ಕಳವಳಿಸಿ ನುಡಿವೆನಯ್ಯಾ, ಹೊನ್ನು ಹೆಣ್ಣು, ಮಣ್ಣು ಬಯಸಿ ವಿಕಳಗೊಂಡಂತೆ ಪ್ರಳಾಪಿಸಿ ನುಡಿವ' (ವ–೫೦) ಆಶಾ ಪಾಶವನ್ನು ಹರಿದೊಗೆದು, ಸಂಸಾರದಿಂದ ದೂರವಿದ್ದು, ಸ್ವಾತ್ಮೋಪದೇಶದಿಂದ,

'ಇನ್ನು ಸಾವು ತಡವಿಲ್ಲ, ನರಕದೂರವಿಲ್ಲ
ದೇಹದಿಚ್ಚೆಗೆ ಹರಿದು ಕೆಮ್ಮನೆ ಕೆಡಬೇಡ
ದುರ್ವಿಷಯವ ಬಿಡು ಬೇಗ
ಗುರುಪಾದವ ನಂಬು....." (ವ–೬೨)

ಎಂದು ದೇಹದಿಚ್ಚೆ, ದುರ್ವಿಷಯವನ್ನು ಬಿಟ್ಟು ಗುರು ಕರುಣೆಗಾಗಿ ಮೊರೆಯಿಡುತ್ತದೆ. ಶಿಷ್ಯನಲ್ಲಿರುವ ತಾಮಸತನವನ್ನು ಕಳೆದು ಕರುಣಿಸಿ ದೀಕ್ಷೆ ನೀಡುತ್ತದೆ.

' ಎಲ್ಲರ ದೀಕ್ಷೆಯ ಪರಿಯಂತಲ್ಲ ಎಮ್ಮಯ್ಯನ ದೀಕ್ಷೆ
ನಡೆ ನುಡಿ ಶುದ್ಧವಾದವರಿಗಲ್ಲದೆ ಅನುಗ್ರಹಿಸ ನೋಡಾ
ಬಿಲ್ವ ಬೆಳ್ವಲಕಾಯ ಒಂದಾಗಿ ಹಿಡಿವಂತೆ
ಸಂಸಾರಕ್ಕಲ್ಲ ಪರಮಾರ್ಥಕ್ಕಲ್ಲದ ಜಡ ನರರನೊಲ್ಲ, ದೀಕ್ಷೆಯ ಕೊಡ
ಭವಭಾರಿಗಳ ಮುಖದತ್ತ ನೋಡಯ್ಯಾ ...."(ವ–೮೧)

ಎಂದು ಸದ್ಗುರುವಿನ ಮಹಿಮೆಯನ್ನು ಮನದುಂಬಿ ಹೊಗಳುತ್ತದೆ. ವಿಶ್ವಾಸ ಭಾವದಲ್ಲಿ ಗುರುವನ್ನು ಗೌರವಿಸಬೇಕು. ಉದಾಸೀನಮಾಡ ಬಾರದು. 'ಹರ ಮುನಿದಡೆ ತಿಳುಹ ಬಹುದು. ಗುರು ಮುನಿದಡೆ ಏಳೇಳು ಜನ್ಮದಲ್ಲಿಯೂ ನರಕ ತಪ್ಪದು ". (ವ–೯೦) ಗುರುಲಿಂಗ ಜಂಗಮದ ಪಾದೋದಕ ಪ್ರಸಾದವನ್ನು ಸ್ವೀಕರಿಸಿ. ಅವುಗಳ ಮಹಿಮೆಗಳನ್ನು ಸ್ತುತಿಸಿ ಗೌರವಿಸಬೇಕು.

' ಮುತ್ತು ನೀರಲ್ಲಾಯಿತು, ಆಲಿಕಲ್ಲು ನೀರಲ್ಲಾಯಿತು
ಉಪ್ಪು ನೀರಲ್ಲಾಯಿತು
ಉಪ್ಪು ಕರಗಿತ್ತು, ಆಲಿಕಲ್ಲು ಕರಗಿತ್ತು
ಮುತ್ತು ಕರಗಿತ್ತನಾರು ಕಂಡವರುಂಟೆ ?'

ಈ ಸಂಸಾರಿ ಮಾನವರು ಲಿಂಗ ಮುಟ್ಟಿ ಭವಭಾರಿಗಳಾದ ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ ಚೆನ್ನಮಲ್ಲಿಕಾರ್ಜುನಯ್ಯ " (ವ–೧೨೦) ಎಂದು ಲಿಂಗಸ್ತುತಿ ಮಾಡಿ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿಗಳ ಮಹತ್ವವನ್ನು ಕೊಂಡಾಡುತ್ತಾ ಭಕ್ತಿ ಸ್ಥಲವನ್ನು ಪ್ರವೇಶಿಸುತ್ತದೆ. ಇಲ್ಲಿಂದ ಮುಂದೆ ಷಟ್‌ಸ್ಥಲ ಪರಿಕಲ್ಪನೆಯಲ್ಲಿ ಸಾಗಿ ಆನಂದ ಭಕ್ತಿಯಿಂದ ಮುನ್ನಡೆದು ನಾನು ನೀನೆಂಬ ಭೇದ ಕಳೆದು ಷಡಿಂದ್ರಿಯಂಗಳು ತಮ್ಮಲ್ಲಿ ನೆಲೆನಿಂದ ಲಿಂಗವನ್ನು ಆರಾಧಿಸಿ ಲಿಂಗವೇ ಆಗುತ್ತದೆ. ಇಂಥ ಶಿವಾನುಭವ ಸುಖವನ್ನು

' ಉದಕದ ತಂಪ ತಾವರೆಯಲ್ಲದೆ
ಹೊರಗಣ ಕೊರಡೆತ್ತ ಬಲ್ಲುದೊ ?
ಹೂವಿನ ಪರಿಮಳವ ತುಂಬಿಯಲ್ಲದೆ

ಹೊರಗಣ ನೊಣನೆತ್ತ ಬಲ್ಲುದೊ ?
ಕ್ಷೀರದ ರುಚಿಯ ಹಂಸೆಯಲ್ಲದೆ
ಕೆಲದಲ್ಲಿದ ಬಕನೆತ್ತ ಬಲ್ಲುದೊ ?
--- ನಮ್ಮ ನಿತ್ಯ ನಿಜೈಕ್ಯರ ನಿಲುನನು
ಮಹಾನು ಭಾವಿಗಳು ಬಲ್ಲರಲ್ಲದೆ
ಜಡಜೀವಿಗಳೆನಿಸುವ ಮಾನವರೆತ್ತ ಬಲ್ಲರೊ ?' (ವ-೩೭೮)

ಎಂದು ಆ ಸುಖವನ್ನು ಅನುಭವಿಸಿದವರಿಗೆ ಗೊತ್ತೆ ಹೊರೆತು ಅದರಿಂದ ಹೊರಗಾದವನ ಅರಿವಿಗೆ ಬರುವುದೇ ಇಲ್ಲೆಂಬುದು ಕೆಲವು ಹೋರಿಕೆಗಳ ಮೂಲಕ ಹೇಳುತ್ತದೆ. ಇಂಥ ಅನುಭಾವದ ಐಕ್ಯ ಸ್ಥಲದಿಂದ ಮುಂದೆ ನಡೆದು ಅವಸಾನ ಸ್ಥಲ ಪ್ರವೇಶಿಸಿ ವ್ರತಾಚಾರ ನಿಷ್ಠೆಯಿಂದ ಸಾಮರಸ್ಯ ಸುಖದ ಶಖರಕ್ಕೇರಿ ಸ್ವಲೀಲಾಮಾದದಲ್ಲಿ ಮುಳುಗಿ ಬಯಲು ರೂಪ ತಾಳುವುದು. ಬಯಲು ನಿಲುಕಡೆಯನ್ನು ತೋರುವುದೇ ಶಿವಾನುಭಾವ. ಶಿವಾನುಭಾವ ದೊರಕದೆ ಲಿಂಗಾಂಗ ಸಾಮರಸ್ಯ ದೊರಕದು. ಹೀಗೆ ನಿರಾಕಾರವಾಗಿದ್ದ ಚೇತನ ಕ್ರಮೇಣ ಸಾಕಾರ ರೂಪತಾಳಿ ಸುಜ್ಞಾನ, ಸುವಿವೇಕ, ಸದಾಚಾರ, ಸತ್ಕ್ರಿಯೆಗಳಿಂದ ಅಜ್ಞಾನ ಅಂಧಕಾರಗಳನ್ನು ದೂರಮಾಡಿ ಷಟ್‌ಸ್ಥಲದ ತಾತ್ವಿಕ ಮಾರ್ಗಾಚರಣೆಯಲ್ಲಿ ನಡೆದು ಮತ್ತೆ ಆ ಆಕಾರವು ನಿರಾಕಾರವಾಗಿ ಮೂಲ ಸ್ವರೂಪದಲ್ಲಿ ನಿಲ್ಲುವುದೆ ಈ ಸಂಕಲನದ ಆಶಯವಾಗಿದೆ.

ಇಲ್ಲಿ ಸಂಯೋಜಿಸಿದ ವಚನಗಳ ನಿರೂಪಣೆಯಲ್ಲಿ ವ್ರತ, ಶೀಲ, ನೇಮ, ಆಚರಣೆಗಳಿಗೆ ಸಂಬಂಧಿಸಿದ ವಚನಗಳನ್ನೆ ಹೆಚ್ಚಾಗಿ ಆರಿಸಿಕೊಂಡಿದ್ದಾನೆ. ಅಂತಹ ಆಚರಣೆಗಾಗಿಯೆ ಸಂಕಲನಕಾರ ಕೆಲವು ಸ್ಥಲಗಳನ್ನು ನಿರ್ಮಿಸಿಕೊಂಡಿದ್ದಾನೆ. ಮುಕ್ತರ ರೂಪದ ವಚನಗಳಿಂದ ಸಂಸ್ಕೃತ ಉದ್ಧರಣೆಗಳಿರುವ ದೀರ್ಘ ವಚನಗಳಿಗೆ ಸಂಕಲನಕಾರ ಮನಸೋತಿದ್ದಾನೆ.

ಐಕ್ಯ ಸ್ಥಲದ ಕೊನೆಯಲ್ಲಿ ೧೮ ಯುಗಗಳ ವಿವರಣೆಯಿರುವ ' ಪ್ರಳಯ ಕಾಲದ ವಚನ (೮೮ ಸಾಲಿನಷ್ಟು ದೀರ್ಘವಿರುವ)ವನ್ನು ಸಂಗ್ರಹಿಸಿದ್ದಾನೆ. ಸ್ವಲೀಲಾನಂದ ಸ್ಥಲದ ಕೊನೆಯಲ್ಲಿ ೨೧ ಯುಗಗಳ ವರ್ಣನೆಯಿರುವ ವಚನ ಗಮನ ಸೆಳೆಯುತ್ತದೆ.

' ಇಪ್ಪತೊಂದನೆಯ ಯುಗದಲ್ಲಿ ಅಮೃತ ಮಥನ
ಮೊದಲಲ್ಲಿ ಆರು ಪುಟ್ಟಿದರೆಂದಡೆ ಶೂನ್ಯ ಪುಟ್ಟಿದ
ಆತನು ಗುರು ಪ್ರಕಾಶನೆಂಬ ಪ್ರಭು
ಆತನು ಪ್ರಾಣ ಲಿಂಗವು ಸ್ವಯಂ ಜ್ಯೋತಿಲಿಂಗವು'

ಎಂದು ಇಪ್ಪತ್ತೊಂದನೆಯ ಯುಗದಿಂದ ಆರಂಭಮಾಡಿ, ಪ್ರತಿಯೊಂದು ಯುಗಕ್ಕೂ ಒಬ್ಬೊಬ್ಬ ಗಣೇಶ್ವರನ ಹೆಸರು, ಆತನ ಗುರುವಿನ ಹೆಸರು, ಆತ ಜನ್ಮತಾಳಿದ ಊರಿನ ಹೆಸರು ಹೇಳುತ್ತಾ ಬರುತ್ತಾನೆ ವಚನಕಾರ, ಕೊನೆಗೆ

'ಒಂದನೆ ಯುಗದಲ್ಲಿ ಬಸವನೆಂಬ ಗಣೇಶ್ವರ ಪುಟ್ಟಿದ
ಆತನ ಗುರು ಸಂಗಮನಾಥನೆಂಬ ಪ್ರಭು,
ಆತನ ಪ್ರಾಣಲಿಂಗ ಕೂಡಲಸಂಗಮನಾಥ ಲಿಂಗವು
ಕೂಡಲಸಂಗದೇವಯ್ಯ ಅಂದು ಕಲ್ಯಾಣವಾಯಿತ್ತು'

ಎಂದು ಕೃತಿ ಅಪೂರ್ಣ ಮುಕ್ತಾಯವನ್ನು ಕಂಡಿದೆ. ಆಚರಣೆಯ ಹಿನ್ನೆಲೆಯಲ್ಲಿ ಷಟ್‌ಸ್ಥಲ ತತ್ವಜ್ಞಾನದ ಸಾರವನ್ನು ಸಮರ್ಪಕವಾಗಿ ಸಂಗ್ರಹಿಸಿರುವುದರಿಂದ ಈ ಕೃತಿಗೆ 'ಜ್ಞಾನ ಷಟ್‌ಸ್ಥಲಸಾರ' ಎಂಬ ಹೆಸರು ಉಪಯುಕ್ತವಾಗಿದೆ.

೭. ಅದ್ವೈತಾನಂದದ ವಚನಗಳು [೫೯]

ಇದೊಂದು ಅಜ್ಞಾತ ಸಂಕಲಕಾರನ ವಚನ ಸಂಕಲನ, ತೋಟದ ಸಿದ್ಧಲಿಂಗ ಯತಿಗಳ ಶಿಷ್ಯ ಪರಂಪರೆಗೆ ಸೇರಿದ ಸ್ವತಂತ್ರ ಸಿದ್ದಲಿಂಗೇಶ್ವರರ ವಚನಗಳು ಇದರಲ್ಲಿ ಸಂಗ್ರಹಿಸಿರುವುದರಿಂದ ಈತನ ಕಾಲವನ್ನು ೧೬ ನೇ ಶತಮಾನದ ಉತ್ತರಾರ್ಧವೆಂದು ನಿರ್ಧರಿಸಬಹುದು. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ ಪ್ರಭು, ಘಟ್ಟಿವಾಳಯ್ಯ, ಬಾಲಸಂಗಯ್ಯ, ಮಾದಾರ ಧೂಳಯ್ಯ, ತೊಂಟದ ಸಿದ್ಧಲಿಂಗ ಮುಂತಾದ ೫೫ ಜನ ವಚನಕಾರರ ೭೪೦ ವಚನಗಳು ಸಂಗ್ರಹವಾಗಿದ್ದು, ಅವುಗಳನ್ನು ವ್ಯವಸ್ಥಿತವಾಗಿ ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಕೆಲವೊಂದು ವಚನಗಳು ಎರಡು ಕಡೆಗಳಲ್ಲಿ ಸಮಾವೇಶಗೊಂಡಿರುವುದು ಕಂಡು ಬರುತ್ತದೆ.[೬೦]

ವಚನ ಸಂಕಲನಗಳು ತಾತ್ವಿಕ ದೃಷ್ಟಿ ಕೋನದ ಆಧಾರದಿಂದ ರೂಪಿತವಾಗಿರುತ್ತವೆ. ಅವುಗಳಲ್ಲಿ ಸ್ಥಲ ಕಟ್ಟುಗಳಿಗೆ ಪ್ರಮುಖ ಸ್ಥಾನವಿದೆ. ಕೆಲವು ಸಂಕಲನಕಾರರು ಷಟ್‌ಸ್ಥಲ ತತ್ವವನ್ನೇ ತಳಹದಿಯಾಗಿಟ್ಟುಕೊಂಡು ಮತ್ತೆ ಆಂತರಿಕ ಸ್ಥಲ ಸಂಯೋಜನೆ ಮಾಡಿರುವುದನ್ನು ಈಗಾಗಲೆ ಗುರುತಿಸಿದ್ದೇವೆ. ಪ್ರಸ್ತುತ 'ಅದ್ವೈತಾನಂದದ ವಚನಗಳು' ಎಂಬ ಈ ಸಂಕಲನ ಕೂಡಾ ತನ್ನದೇ ಆದ ಸ್ಥಲ ಕಟ್ಟುಗಳಿಗೆ ಬದ್ಧವಾಗಿದೆ. ಈ ಕೃತಿಯಲ್ಲಿ ಒಟ್ಟು ೧೭ ಸ್ಥಲಗಳಿದ್ದರೂ ಷಟ್‌ಸ್ಥಲಗಳಿಗೆ ಸಂಕಲನಕಾರ ಪ್ರಾಧಾನ್ಯ ನೀಡಿದ್ದಾನೆ. ಭಕ್ತ ಸ್ಥಲದ ಪೂರ್ವದಲ್ಲಿ ವಿದ್ಯಾವಾದ ನಿರಸನ ಸ್ಥಲ, ಕರ್ಮಯೋಗ ನಿರಸನ ಸ್ಥಲ, ಕೈಲಾಸ ಬ್ರಾಂತಿ ನಿರಸನ ಸ್ಥಲ, ಬಂಧ ಮೋಕ್ಷ ನಿರಸನ ಸ್ಥಲ, ತಾಮಸ ನಿರಸನ ಸ್ಥಲ, ಭಿನ್ನ ಪೂಜಾ ನಿರಸನ ಸ್ಥಲ, ಇಷ್ಟಲಿಂಗ ಬ್ರಾಂತಿ ನಿರಸನ ಸ್ಥಲ. ಇಷ್ಟಲಿಂಗ ವಿಯೋಗ ನಿರಸನ ಸ್ಥಲ, ಭಿನ್ನ ಜ್ಞಾನ ನಿರಸನ ಸ್ಥಲ ಎಂದು ಒಂಬತ್ತು ಸ್ಥಲಗಳನ್ನು ನಿರ್ಮಿಸಿದ್ದಾನೆ, ಇಲ್ಲಿ ಸಂಗ್ರಹಿತವಾಗಿರುವ ಬೇರೆ ಬೇರೆ ವಚನಕಾರರ ವಚನಗಳನ್ನು ಗಮನಿಸಿದರೆ, ಅವು ಒಂದು ಬಗೆಯ ನಿರಸನದ ಅರ್ಥವನ್ನು ನೀಡುವುದರಿಂದ ಈ ಕೃತಿಯನ್ನು

---

೫೯. ಪ್ರಕಟಣೆ : ವೀರಶೈವ ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನ ಮಠ, ಗದಗ,

೬೦. ಆತ್ಮನ ನಿಜವನರಿದು – (ನಿರಸನ ಸ್ಥಲ – *೧೮೧, ಶರಣ ಸ್ಥಲ–೪೦೨). ಎನ್ನ ಆಯುತ (ಐಕ್ಯ ಸ್ಥಲ–೬೦೮, ಐಕ್ಯಸ್ಥಲ –೬೪೯). ಏನೆಂದೂ ಎನಲಿಲ್ಲ, (ಐಕ್ಯಸ್ಥಲ –೬೫೫, ನಿರವಯ ಸ್ಥಲ– ೭೨೦),ಳಗಿಪ್ಪಾತನ – (ಮಾಹೇಶ್ವರ ಸ್ಥಲ–೩೧೦, ಐಕ್ಯಸ್ಥಲ–೬೬೧), ತೆರಹಿಲ್ಲದ ಘನವ – (ಶರಣಸ್ಥಲ –೪೬೨, ಐಕ್ಯ ಸ್ಥಲ –೫೮೬), ನಿತ್ಯ ನಿರಂಜನ ತತ್ವವು– (ನಿರಸನ ಸ್ಥಲ–೧೩೬– ನಿರಸನ, ಸ್ಥಲ–೧೯೦), ಬಯಕೆ ಯೆಂಬುದು – (ಶರಣ ಸ್ತಲ–೪೫೬, ಐಕ್ಯಸ್ಥಲ–೬೩೬), ಮಠವೇಕೊ–(ನಿರಸನ ಸ್ಥಲ–೧೮೩, ಶರಣ ಸ್ಥಲ–೪೦೪), ಮನವುಂಟಿ ಮರುಳೆ – (ನಿರಸನ ಸ್ಥಲ –೨೪೧, ಶರಣ ಸ್ಥಲ–೪೬೧), ಲೋಕವಿರಹಿತ ಶರಣ–(ನಿರಸನ ಸ್ಥಲ–೨೪೭, ಶರಣ ಸ್ಥಲ–೪೪೩), ಶರಣ ನಿದ್ರೈಗೈದಡೆ – (ನಿರಸನ ಸ್ಥಲ–೧೮೨, ಶರಣ ಸ್ಥಲ ೪೦೩), ಸತ್ಯವೆನ್ನದೆ – (ನಿರವಯ ಸ್ಥಲ –೭೦೮, ನಿರವಯ ಸ್ಥಲ ೭೩೮).

*. ನಿರಸನ ಸ್ಥಲ :– ಭಕ್ತ ಸ್ಥಲದ ಪೂರ್ವದಲ್ಲಿ ನಿರಸನಕ್ಕೆ ಸಂಬಂಧ ಪಟ್ಟ ೯ ಭಿನ್ನ ಭಿನ್ನ ನಿರಸನ ಸ್ಥಲಗಳನ್ನು ಹೇಳಿದ್ದಾನೆ, ಈ ಕೃತಿಯ ಸಂಪಾದನೆ ಕಾರರಾದ ಬಿ.ಆರ್. ಹಿರೇಮಠ ಅವರು ಅವೆಲ್ಲವುಗಳನ್ನು ಸೇರಿಸಿ 'ನಿರಸನ ಸ್ಥಲ' ಎಂಬ ಶೀರ್ಷಿಕೆ ನೀಡಿರುತ್ತಾರೆ.)

ಸಂಪಾದಿಸಿದ ಬಿ.ಆರ್. ಹಿರೇಮಠ ಅವರು ಅವೆಲ್ಲವುಗಳನ್ನು ಸೇರಿಸಿ 'ನಿರಸನ ಸ್ಥಲ' ಎಂದು ಸಾಮೂಹಿಕ ಶೀರ್ಷಿಕೆ ನೀಡಿರುತ್ತಾರೆ.

ನಿರಸನ ಸ್ಥಲಗಳ ಸಂಖ್ಯೆ ಬೇರೆ ಬೇರೆ ಸಂಕಲಗಳಲ್ಲಿ ಹೆಚ್ಚು ಕಡಿಮೆ ಕಂಡು ಬರುತ್ತವೆಯಾದರೂ ಈ ಸಂಕಲನದಲ್ಲಿ ಶರಣ ಸ್ಥಲ ಮತ್ತು ಐಕ್ಯ ಸ್ಥಲಗಳ ಮಧ್ಯ ಬರುವ 'ಸ್ವಯಾನು ಸಿದ್ಧಸ್ಥಲ' ಮಾತ್ರ ಇತರ ಯಾವ ವಚನ ಸಂಕಲನಗಳಲ್ಲಿಯೂ ಕಂಡು ಬರುವುದಿಲ್ಲ, ಐಕ್ಯ ಸ್ಥಲದ ನಂತರ ಬೇರೆ ಬೇರೆ ಸ್ಥಲಗಳು ಇತರೆ ಸಂಕಲನಗಳಲ್ಲಿ ಕಂಡು ಬರುತ್ತಿರುವಂತೆ ಇಲ್ಲಿ 'ನಿರವಯ ಸ್ಥಲ'ವನ್ನು ಕಲ್ಪಿಸಲಾಗಿದೆ. ಹೀಗಾಗಿ ಏಕರೂಪದ ನಿರಸನ ಸ್ಥಲವನ್ನೊಳಗೊಂಡ ಒಟ್ಟು ಒಂಬತ್ತು ಸ್ಥಲಗಳಿವೆ, ಅದ್ವೈತಾನಂದದ ವಚನಗಳು ಎಂಬ ಈ ಕೃತಿ ಸ್ಥಲ ಸಯೋಜನೆಯ ದೃಷ್ಟಿಯಿಂದ ಹೊಸತನವನ್ನು ಒಳಗೊಂಡಿದೆ.

ಪಿಂಡ ಸ್ಥಲ, ಪಿಂಡಜ್ಞಾನ ಸ್ಥಲಗಳನ್ನೊಳಗೊಂಡ ಭಕ್ತ ಮಹೇಶ, ಪ್ರಸಾದಿ ಮುಂತಾದ ಸ್ಥಲಗಳಲ್ಲಿ ದೊರೆಯಬಹುದಾದ ವಚನಗಳು ಇಲ್ಲಿ ದೊರೆಯುತ್ತವೆ. 'ಅದ್ವೈತ'ದ ನಿಲುವು ಶರಣ ಇಲ್ಲವೆ ಐಕ್ಯ ಸ್ಥಲಗಳಿಗೆ ಸೀಮಿತವಾದುದಲ್ಲ, ಅದು ಇತರ ಸ್ಥಲಗಳಲ್ಲಿಯೂ ತನ್ನದೇ ಆದ ರೀತಿಯಲ್ಲಿ ಪ್ರಕಟವಾಗುತ್ತದೆ. ಸ್ಥಲಗಳನ್ನು ಎಷ್ಟೇ ವಿಭಾಗ ಮಾಡಿದರೂ ಅವುಗಳ ಒಳಗೆ ಸಾಧಕನ ಸಾಧನೆಯ ದಟ್ಟವಾದ, ಖಚಿತವಾದ ಅನುಭವಗಳಿರುವುದು ಕಂಡು ಬರುತ್ತದೆ.

'ಅದ್ವೈತಾನಂದ'ವೆಂದರೆ ಲಿಂಗಾಂಗ ಸಾಮರಸ್ಯವೆಂದೇ ಅರ್ಥ. ಆತ್ಮ ಬೇರೆಯಲ್ಲ, ಪರಮಾತ್ಮ ಬೇರೆಯಲ್ಲ, ಅವೆರಡು ಏಕೀ ಭವಿಸಿದ ಸ್ಥಿತಿ. ಈ ಲಿಂಗಾಂಗದ ಅದ್ವೈತದಿಂದ ಉಂಟಾಗುವ ಆನಂದ ಪ್ರತಿಪಾದನೆಯೆ ಈ ಸಂಕಲನದ ಗುರಿ. ಹೆಸರು ಬೇರೆಯಾದರೂ ವೀರಶೈವ ಷಟ್‌ಸ್ಥಲ ಸಿದ್ಧಾಂತದ 'ಲಿಂಗಾಂಗ ಸಾಮರಸ್ಯ' ತತ್ವ ಪ್ರತಿಪಾದನೆಯನ್ನೇ ಈ ಸಂಕಲನ ಪ್ರತಿಪಾದಿಸುತ್ತದೆ. ಈ ಸಾಮರಸ್ಯದಲ್ಲಿ ಲೌಕಿಕಕ್ಕೆ ಮೀರಿದ, ಮಾತು-ಮನಗಳ ಅಸ್ತಿತ್ವಕ್ಕೆ ಮೀರಿದ ವಿಶೇಷಾನುಭವ ಹೊಂದಿದೆ. ಅದು ಮೂಕರು ಕಂಡ ಕನಸಿನಂತೆ ಅವರ್ಣನೀಯವಾದುದು. ಇಂತಹ ಅನನ್ಯ ಅನುಭವನಿಷ್ಠವಾಗಿರುವ ಹಲವಾರು ಸಂಗತಿಗಳನ್ನು ಗಮನಿಸುತ್ತ ಪರಿಶೀಲಿಸುತ್ತ, ಪರಾಮಾರ್ಶಿಸುತ್ತಲೆ ಸಾಧನೆಯ ಹಾದಿಯಲ್ಲಿ ವಚನಕಾರರು ದಾಟಿರುವುದನ್ನು ಪ್ರಸ್ತುತ ಸಂಕಲನಕಾರ ಗುರುತಿಸಿ ವಿವಿಧ ಸ್ಥಲಗಳ ಅಡಿಯಲ್ಲಿ ಅವರ ವಚನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

'ವಿದ್ಯಾವಾದ ನಿರಸನ ಸ್ಥಲ'ದ ವಚನಗಳು ಅಮೂರ್ತವಾದ ಪರತತ್ವವನ್ನು ದೃಷ್ಟಾಂತಗಳ ಮೂಲಕ ಮೂರ್ತಿಕರಿಸಿ ಪರಿಚಯಿಸುತ್ತವೆ.

" ಸಮುದ್ರದೊಳಗೆ ನೊರೆ ತೆರೆಗಳು ನೆಗಳ್ದವೆಂದಡೆ
ತಾ ಸಮುದ್ರದಿಂದನ್ಯವಪ್ಪವೆ ?
ನಿರ್ವಿಕಾರ ನಿತ್ಯ ನಿರಂಜನ ನಿರ್ಗುಣ ಪರಿಪೂರ್ಣ
ನಿರ್ವಿಕಲ್ಪ ಪರಬ್ರಹ್ಮ ಶಿವನಿಂದ
ಜಗತ್ತುದಯಿಸಿತ್ತೆಂದಡೆ ಶಿವನಿಂದನ್ಯವೆನಬಹುದೆ ?
ಇಂತಪ್ಪ ಅರಿವು ನೀವು ಕೊಟ್ಟ
ಸಮ್ಯ ಜ್ಞಾನಕ್ಕರಿದಪ್ಪುದಯ್ಯಾ ಗುಹೇಶ್ವರಾ "(ವ-೩೦)

ಸಮುದ್ರದೊಳಗೆ ಉತ್ಪತ್ತಿಯಾದ ನೊರೆ ತೆರೆಗಳು ಸಮುದ್ರದಿಂದ ಭಿನ್ನವಾಗಿರಲು ಸಾಧ್ಯವಿಲ್ಲವೆಂಬಂತೆ ಶಿವನಿಂದ ಜಗತ್ತು ಉದಯಿಸಿದರೂ ಅದು ಶಿವನಿಂದ ಬೇರೆಯಲ್ಲ ಎಂಬ ಅದ್ವೈತ ತತ್ವವನ್ನು ಈ ವಚನ ಪ್ರತಿನಿಧಿಸುತ್ತದೆ.

ಕರ್ಮಯೋಗ ನಿರಸನ ಸ್ಥಲದಲ್ಲಿ

" ತಪವೆಂಬುದು ಬಂಧನ, ನೇಮವೆಂಬುದು ತಗಹು.
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣ ಸೂತಕ
ಇಂತಿ ಚತುರ್ವಿದದೊಳಗಲ್ಲ, ಗುಹೇಶ್ವರಾ ನಿಮ್ಮ ಶರಣರು.
ಅಗ್ರ ಗಣ್ಯರು " (ವ-೫೨೦.

ಯೋಗ, ತಪ, ನೇಮ, ಶೀಲ, ಹಠಯೋಗ ಮುಂತಾದವುಗಳನ್ನು ಅಲ್ಲಗಳೆಯುವ, ವಿಚಾರಗಳು ನಿರಸನ ಸ್ಥಲದಲ್ಲಿಯೆ ದೊರೆಯುತ್ತವೆ.

" ಪರುಷಕ್ಕೆ ಬೆಲೆಯಿಲ್ಲ, ಪ್ರಾಣಕ್ಕೆ ನಿರ್ಮಾಲ್ಯವಿಲ್ಲ.
ರುಚಿಗೆ ಎಂಜಲಿಲ್ಲ, ಸುಖಕ್ಕೆ ಆರೋಚಕವಿಲ್ಲ.
ಗುಹೇಶ್ವರಾ, ನಿಮ್ಮ ಶರಣರಿಗೆ ಭವವಿಲ್ಲ, ಬಂಧನವಿಲ್ಲ " (ವ-೯೦)

ಶರಣನು ಯಾವುದೇ ಭವ -ಬಂಧನವಿಲ್ಲದೆ ಅಂಗ ಲಿಂಗವಾಗಿರುವ ಕ್ರಿಯೆಯನ್ನು ವಚನಕಾರ ತಿಳಿಸುತ್ತಾನೆ.

ಹೀಗೆ ಒಂಬತ್ತು ಬಗೆಯ ನಿರಸನಗಳನ್ನು ಅರ್ಥವತ್ತಾಗಿ ಚಿತ್ರಿಸುವ, ಅದ್ವೈತದ ಕಡೆಗೆ ಕರೆದೊಯ್ಯುವ ವಚನಗಳು ತುಂಬಾ ಮನೋಜ್ಞವಾಗಿವೆ, ಇವಲ್ಲದೆ ಷಟ್‌ಸ್ಥಲಗಳಲಾದ ಭಕ್ತ, ಮಹೇಶ ಆದಿಯಾದ ಐಕ್ಯ ಸ್ಥಲದವರೆಗೆ ಆಯ್ಕೆ ಮಾಡಿಕೊಂಡ ವಚನಗಳಿಲ್ಲಿಯೂ ಸಂಯೋಜನೆಯ ದೃಷ್ಟಿಯಿಂದ ವಿಶೇಷತೆ ಇದ್ದರೂ ಅವೆಲ್ಲವು ಷಟ್‌ಸ್ಥಲ ತತ್ವದ ಆಧಾರದ ಮೇಲೆಯೆ ಅವು ಹೊಂದಿಕೆಯಾಗಿವೆ. ವಚನಗಳಿಗೆ ಶಾಸ್ತ್ರೀಯ ಹಾಗೂ ಅನುಭಾವದ ಮಹತ್ವ ವಿರುವುದರ ಜೊತೆಗೆ ಸ್ಥಲಕಟ್ಟಿನ ಸೂಕ್ಷ್ಮ ಸಂವೇಧನಾ ಶೀಲತೆಯಿಂದ ಧ್ವನಿ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಅಂಥ ಸಂದರ್ಭದಲ್ಲಿ ವಚನದ ಅರ್ಥವಂತಿಕೆಯನ್ನು ಅಂದರೊಂದಿಗೆ ಸ್ಥಲ ನಿರ್ದೇಶನವನ್ನು ಸೀಮಿತಗೊಳಿಸುವುದು ಕಷ್ಟಕರವಾಗಿರುತ್ತದೆ. ಉದಾಹರಣೆಗೆ ಚೆನ್ನಬಸವಣ್ಣನವರ ಈ ವಚನವನ್ನು ಗಮನಿಸಬಹುದು.

" ಆತ್ಮನ ನಿಜವನರಿದು, ಪರಮಾತ್ಮಲಿಂಗ ತಾನೆಂದರಿದ
ಶರಣರಿಗೆ ಎಂತಿದ್ದಂತೆ ಪೂಜೆ ನೋಡಾ
ಆ ಶರಣ ಭೋಗಿಸಿತ್ತೆಲ್ಲವು ಲಿಂಗಾರ್ಪಿತ
ಆ ಶರಣ ರುಚಿಸಿತ್ತೆಲ್ಲವು ಪ್ರಸಾದ
ಆ ಶರಣನರಿದುದೆಲ್ಲವು ಪರಬ್ರಹ್ಮ
ಆ ಶರಣ ನುಡಿದುದೆಲ್ಲವು ಪರತತ್ವ.
ಆ ಶರಣ ತಾನೇ ಕೂಡಲ ಚೆನ್ನ ಸಂಗಯ್ಯನು" (ವ-೪೦೨)

ನಿರಸನ ಸ್ಥಲದ 'ಭಿನ್ನ ಪೂಜಾ ನಿರಸನ ಸ್ಥಲ' (ವ-೧೮೧) ದಲ್ಲಿ ಎಡೆಪಡೆದುಕೊಂಡ ಈ ವಚನವನ್ನು ಸಂಕಲನಕಾರ 'ಶರಣ ಸ್ಥಲ' ದಲ್ಲಿಯೂ ಸೇರಿಸಿದ್ದಾನೆ. ಶರಣ ತಾನೆ ಕೂಡಲ ಚೆನ್ನ ಸಂಗಯ್ಯನಾದ ಕಾರಣ ಆತ್ಮ ಪರಮಾತ್ಮರ ಅವಿನಾಭಾವ ಸಿದ್ಧಿಯಲ್ಲಿ ತನ್ಮಯಗೊಂಡವನಾಗಿರುತ್ತಾನೆ. ಸಂಕಲನಕಾರ ಅಂಗ ಲಿಂಗ ಸಾಮರಸ್ಯ ಸಂಯೋಜನೆಗೆ ಬಾಧಕವಾಗದಂತೆ ಶರಣ ಸ್ಥಲದಲ್ಲಿ ಸಮಾವೇಶಗೊಳಿಸಿಯೂ, ' ಭಿನ್ನ ಪೂಜಾ ನಿರಸನ' ಸ್ಥಲದಲ್ಲಿಯೂ ಅಳವಡಿಸಿರುವುದು ಸೂಕ್ತವಾಗಿಯೇ ತೋರುತ್ತದೆ. ಈ ಬಗೆಯ ಇನ್ನು ಕೆಲವು ವಚನಗಳು ಎರಡೆರಡು ಸ್ಥಲ (ಕಡೆ)ಗಳಲ್ಲಿ ಅವಕಾಶ ಪಡೆದಿದೆ.

ತಾನೆ ಅವನು, ಅವನೇ ತಾನು ಎನ್ನುವ ಸರ್ವಾರ್ಪಣ ಭಾವ ಸಾಮರಸ್ಯವನ್ನು ಹೇಳುವ, ಶರಣ ಸ್ಥಲ ಮತ್ತು ಐಕ್ಯಸ್ತಲದ ಮಧ್ಯದಲ್ಲಿರುವ 'ಸ್ವಯಾನು ಸಿದ್ಧಸ್ಥಲ'ದಲ್ಲಿ ಸೇರಿರುವ ಈ ವಚನ,

" ತಾನೆ ಇಷ್ಟಲಿಂಗ, ತಾನೆ ಪ್ರಾಣಲಿಂಗ
ತಾನೆ ಭಾವಲಿಂಗ ನೋಡಾ
ತಾನೆ ಆಚಾರಲಿಂಗ, ತಾನೆ ಗುರುಲಿಂಗ
ತಾನೆ ಶಿವಲಿಂಗ ನೋಡಾ
ತಾನೆ ಜಂಗಮಲಿಂಗ, ತಾನೆ ಪ್ರಸಾದಲಿಂಗ
ತಾನೆ ಮಹಾಲಿಂಗ ನೋಡಾ
ತನ್ನಿಂದಧಿಕವಪ್ಪ ಲಿಂಗವಿಲ್ಲವಾಗಿ.
ತಾನೆ ಸ್ವಯ ಲಿಂಗಿ ನೋಡಾ ಅಪ್ರಮಾಣ ಕೂಡಲ ಸಂಗಮ ದೇವಾ".
(ವ-೪೮೨)

ಈ ವಚನ ಭಕ್ತ ಸ್ಥಲವನ್ನು ಸೂಚಿಸುತ್ತಿದ್ದರೂ, ಶಿವ ಜೀವರ ಅದ್ವೈತ ಭಾವವನ್ನು ವ್ಯಕ್ತಪಡಿಸುತ್ತದೆ. ಸ್ವಯಾನುಸಿದ್ಧ ಸ್ಥಲದಲ್ಲಿಯ ವಚನಗಳೆಲ್ಲ ಬಾಲಸಂಗಯ್ಯನ ವಚನಗಳಾಗಿರುವುದೊಂದು ವಿಶೇಷ– 'ತಾನೇ ಭಕ್ತ, ತಾನೇ ಮಹೇಶ್ವರ', ' ತಾನೆ ಗುರುತತ್ವ, ತಾನೆ ಪರತತ್ವ', 'ಸ್ವರ್ಗ ಲೋಕ, ಮರ್ತ್ಯ ಲೋಕ ತಾನಿದ್ದಲ್ಲಿ'

ಎಂಬ ವಿಚಾರಗಳಿದ್ದು ಎಲ್ಲಾ ವಚನಗಳ ಇಂಗಿತ ಮಾತ್ರ ಒಂದೆ ಆಗಿದೆ, 'ಸ್ವಯಾನು ಸಿದ್ಧಸ್ಥಲ' ಎಂಬ ಹೆಸರು ನೂರೊಂದು ಸ್ಥಲಗಳೆಲ್ಲಿಯೂ ನಮಗೆ ದೊರೆಯದು, 'ಮಹಾಲಿಂಗ ಸ್ಥಲ' ದಲ್ಲಿ 'ಸ್ವಯ ಪರವರಿಯದ ಸ್ಥಲ'ವೊಂದಿದೆ, ಇದು 'ಸ್ವಯಾನು ಸಿದ್ದ ಸ್ಥಲ' ಕ್ಕೆ ಸಂವಾದಿಯಾಗಬಹುದೆನಿಸುತ್ತದೆ, ಹಾಗಿದ್ದರೂ ಸ್ಥಲ ಕಟ್ಟುಗಳಲ್ಲಿ ಈ ಹೆಸರು ನಮ್ಮ ಜಿಜ್ಞಾಸೆಯ ವಿಷಯವಾಗಿ ಬಿಡುತ್ತದೆ,"[೬೧] ಎಂದು ಗುರುಲಿಂಗ ಕಾಪಾಸೆ ಅವರು ಅಭಿಪ್ರಾಯ ಪಡುತ್ತಾರೆ.

---

೬೧. ಡಾ॥ ಆರ್.ಸಿ.ಹಿರೇಮಠ (ಸಂ) 'ಶಿವದೀಪ್ತಿ', ಪುಟ–೪೩೫.

ಕೆಲವು ಸಂಕಲನಗಳಲ್ಲಿ ಐಕ್ಯ ಸ್ಥಲದ ನಂತರದ ಸ್ಥಿತಿಯನ್ನು ಸೂಚಿಸುವುದಕ್ಕಾಗಿ ವಿಶೇಷ ಸ್ಥಲಗಳನ್ನು ನಿರ್ಮಿಸಿಕೊಂಡು ಶರಣನು ಸಚ್ಚಿದಾನಂದ ಪೂರ್ಣನಾಗಿರುವುದನ್ನು, ಸ್ವಲೀಲಾಭಾವವುಳ್ಳ ಮಹಾಮಹಿಮನಾಗಿ ನಿರಾಲಂಭ ಸ್ಥಿತಿಯನ್ನು ಹೊಂದುವುದನ್ನು ಕಲ್ಪಿಸಿಕೊಂಡು ಅದಕ್ಕೆ ಬೇಕಾದ ವಚನಗಳನ್ನು ಆರಿಸಿ ಸಂಗ್ರಹಿಸಿದ್ದಾರೆ. ಅದ್ವೈತಾನಂದದ ವಚನಗಳ ಸಂಕಲನದ ಕೊನೆಯಲ್ಲಿಯೂ 'ನಿರವಯ ಸ್ಥಲ' ಎಂಬ ಸ್ಥಲವನ್ನು ಸಂಕಲನಕಾರ ಸೃಜಿಸಿಕೊಂಡಿದ್ದಾನೆ. ಇದಕ್ಕೆ ಬೇಕಾದ ೩೭ ವಚನಗಳನ್ನು ಜೋಡಿಸಿದ್ದಾನೆ.

" ತನುವಿನಲ್ಲಿ ಹೊರೆಯಿಲ್ಲ, ಮನದಲ್ಲಿ ವ್ಯಾಕುಳವಿಲ್ಲ
ಭಾವದಲ್ಲಿ ಬಯಕೆಯಿಲ್ಲ, ಅರಿವಿನಲ್ಲಿ ವಿಚಾರವಿಲ್ಲ.
ನಿಜದಲ್ಲಿ ಅವಧಾನವಿಲ್ಲ, ನಿರ್ಲೇಪ ಸಂಗದಲ್ಲಿ ಬಿಚ್ಚಿ ಬೇರಾಗಲಿಲ್ಲ,
ಕಲಿದೇವರ ದೇವಾ " – (ವ–೭೨೫)

'ನಿರವಯ ಸ್ಥಲ' ದಲ್ಲಿ ಸೇರ್ಪಡೆಯಾಗಿರುವ ಮಡಿವಾಳ ಮಾಚಿದೇವನ ಈ ವಚನ 'ಐಕ್ಯ ಸ್ಥಲ'ದ ಭಾವವನ್ನು ಸೂಚಿಸುತ್ತದೆ. ಹಾಗೆ ನೋಡಿದರೆ ಇಲ್ಲಿಯ ವಚನಗಳೆಲ್ಲ ಐಕ್ಯ ಸ್ಥಲದ ವಚನಗಳಾಗಿಯೆ ಕಾಣುತ್ತವೆ. ಸಂಕಲನಕಾರ ಐಕ್ಯ ಸ್ಥಲವನ್ನೇ ಇನ್ನೊಂದು ವಿಭಾಗವಾಗಿ ವಿಂಗಡಿಸಿ' ನಿರವಯ ಸ್ಥಲ' ವೆಂದು ಸೂಚಿಸಿದಂತೆ ಕಾಣುತ್ತದೆ. ಈ ಸಂಕಲನದಲ್ಲಿ ಅಲ್ಲಮ ಪ್ರಭುದೇವ, ಚೆನ್ನಬಸವಣ್ಣ, ತೋಂಟದ ಸಿದ್ಧಲಿಂಗಯತಿ ಇವರ ವಚನಗಳನ್ನು ಅತಿ ಹೆಚ್ಚಾಗಿ ಬಳಸಿಕೊಂಡಿದ್ದಾನೆ, ಇವರೆಲ್ಲ ಷಟ್‌ಸ್ಥಲ ಸಾಧನೆಯಲ್ಲಿ ಉನ್ನತ ಮಟ್ಟಕ್ಕೆ ಏರಿದವರಾಗಿದ್ದಾರೆ, ಹಾಗಾಗಿ ಅವರ ಅನುಭವಗಳಿಂದ ಮೂಡಿಬಂದ ವಚನಗಳನ್ನು ಇಲ್ಲಿ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ ಎಂದು ಭಾವಿಸಬಹುದು. ಉಳಿದಂತೆ ಎಲ್ಲರ ವಚನಗಳನ್ನು ಅಧ್ಯಯನ ಮಾಡಿ ಆಯಾ ಸ್ಥಲಕ್ಕನುಗುಣವಾಗಿ ಅವರ ವಚನಗಳನ್ನು ಆಯ್ಕೆ ಮಾಡಿಕೊಂಡು ಅದ್ವೈತಾನುಭವದ ಪರಿಕಲ್ಪನೆಯನ್ನು ಚಿತ್ರಿಸುವಲ್ಲಿ ಸಂಕಲನಕಾರನ ಪ್ರಯತ್ನ ಶ್ಲಾಘನೀಯವಾದುದು. ಈ ಸಂಕಲನ ಅನುಭವ ಸಾಹಿತ್ಯಕ್ಕೆ ಒಂದು ಮಹತ್ವದ ಕೊಡುಗೆಯಾಗಿದೆ.

೮. ವಿಶೇಷಾನುಭವ ಷಟ್‌ಸ್ಥಲ

* ಚೆನ್ನವೀರಾಚಾರ್ಯ

ಷಟ್‌ಸ್ಥಲವು ಜೀವ ಜಗತ್ತು, ಈಶ್ವರ ಇವುಗಳ ಪರಸ್ಪರ ಸಂಬಂಧವನ್ನು ವಿವರಿಸುವ ನಿಶ್ಚಿತ ತತ್ವಗಳನ್ನೊಳಗೊಂಡ ಸಿದ್ಧಾಂತ, ಷಟ್‌ಸ್ಥಲದಲ್ಲಿ ಶಿವಯೋಗವೇ ಸಾಧನ. ಶಿವಾನುಭವವೇ ಸಿದ್ಧಿ. ಇಷ್ಟ, ಪ್ರಾಣ, ಭಾವ ಲಿಂಗಗಳ ಆರಾಧನೆಯಿಂದ ಅಂಗಲಿಂಗವೆಂಬ ದ್ವೈತಭಾವ ಅರಿವಿನಲ್ಲಿ ಕರಗುತ್ತಾ, ಪೂಜ್ಯ ಪೂಜಕ ಭಾವ ಮಾಯವಾಗಿ ಲಿಂಗ ಭಾವ ಬಲಿಯುತ್ತದೆ. ಅಂಗದಲ್ಲಿರುವ ಭಕ್ತಿಯು ಲಿಂಗದ ಶಕ್ತಿಯಾಗುತ್ತದೆ. ಕ್ರಿಯೆ ಅಂಗನ ಶಕ್ತಿಯಾದರೆ, ಜ್ಞಾನ ಲಿಂಗದ ಶಕ್ತಿಯಾಗುತ್ತದೆ. ಇಂಥ ಲಿಂಗ – ಅಂಗಗಳ ಸಾಮರಸ್ಯವೆ ಕ್ರಿಯಾ ಜ್ಞಾನ ಸಾಮರಸ್ಯ. ಈ ಸಾಮರಸ್ಯ ಭಾವವೇ ಶಿವಾನುಭವ ವಿಶೇಷಾನುಭಾವ. ಇಂತಹ ವಿಶೇಷಾನುಭಾವದಲ್ಲಿ ಶರಣನು ಶೂನ್ಯ ತತ್ವವನ್ನು ಪಡೆದುಕೊಂಡಿರುತ್ತಾನೆ. ಆಗಿಲ್ಲದ, ಹೋಗಿಲ್ಲದ, ಮೇಗಿಲ್ಲದ, ಕೆಳಗಿಲ್ಲದ, ನಿತ್ಯ ನಿರಾಳಾ ನಿಶ್ಚಿತ ನಿರವಯ ವಸ್ತುವಾಗುತ್ತಾನೆ. ಇದೇ ವಿಶೇಷಾನುಭವ ಷಟ್‌ಸ್ಥಲ.

ಸಾಧಕನ ಸಾಧನೆ ಮುಂದುವರೆದಂತೆಲ್ಲ ಅವನ ಸ್ಥಿತಿಯಲ್ಲಿ ಅನೇಕ ವ್ಯತ್ಯಾಸಗಳು ಕಂಡು ಬರುತ್ತವೆ. ಈ ವ್ಯತ್ಯಾಸದ ಹಂತಗಳನ್ನು ಅನುಸರಿಸಿ ಅಲ್ಲಿಯೂ ಮತ್ತೆ ಸ್ಥಲ ವಿಭಜನ ಮಾಡಿ ಬೇರೆ ಬೇರೆ ಹೆಸರುಗಳಿಂದ ಕರೆದರೂ ಅದರ ಮೂಲ ಧ್ಯೇಯದಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ, ಷಟ್‌ಸ್ಥಲ ಪರಿಕಲ್ಪನೆಯಲ್ಲಿ ಎಷ್ಟೇ ವಿಭಜನೆ ಮಾಡಿದರೂ ಅದರ ಗುರಿ ಮಾತ್ರ ಒಂದೇ ಆಗಿರುತ್ತದೆ. ಇಂತಹ ಶಿವಾನುಭಾವಿಯ ಅನುಭವ ವಿಶೇಷಗಳನ್ನು ಈ ಸಂಕಲನ ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಿಸುತ್ತದೆ.

ಈ ಸಂಕಲನವನ್ನು ಚೆನ್ನವೀರಾಚಾರ್ಯನು ಶಿವಲಿಂಗ ದೇವರಿಗೆ ಹೇಳಿದಂತೆ ಕೃತಿಯ ಅಂತ್ಯದ ಗದ್ಯದಿಂದ ತಿಳಿದು ಬರುತ್ತದೆ.[೬೨] ಆದರೆ ಇವರಿಬ್ಬರ ಬಗೆಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ಚನ್ನವೀರಾಚಾರ್ಯನು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವನೆಂಬುದು ಮಾತ್ರ ಈ ಗ್ರಂಥದ ಆರಂಭದ ಗದ್ಯದಿಂದ ತಿಳಿದು ಬರುತ್ತದೆ.

"ವೇದಾದಿ ಸಕಲ ವಿದ್ಯಾಕಲಾ ಪ್ರವೀಣರುಂ, ವೀರಶಿವಾಗಮ ಕೋವಿದರುಂ , ಸರ್ವಾಚಾರ ಪ್ರತಿಪಾದಕರುಮಪ್ಪ ತೋಂಟದ ಸಿದ್ದಲಿಂಗೇಶ್ವರ ದೇವರು ಮುಖ್ಯವಾದ ಮಹಾನುಭವದ ಬೋಧಾಮೃತ ಸಂತುಷ್ಟ ಕರಣ ನಿರ್ಮುಕ್ತ ವಿಷಯ ವಿರಕ್ತನೂ, ವೀರ ಮಾಹೇಶ್ವರಾಚಾರ ಸಂಪನ್ನನೂ" ಆಗಿದ್ದನೆಂದು, ಭಕ್ತರುಗಳು ಕೇಳಿಕೊಳ್ಳಲು ಶಿವಲಿಂಗೈಕ್ಯ ನಿರ್ಣಯವಾದ ವಿಶೇಷಾನುಭವ ಷಟ್‌ಸ್ಥಲವನ್ನು ರಚಿಸಿದನೆಂದು ಕಂಡು ಬರುತ್ತದೆ.

"ಸ್ಥಲ ವಿಭಜನೆಯಲ್ಲಿ ಈ ಗ್ರಂಥ 'ಲಿಂಗಲೀಲಾ ವಿಲಾಸ ಚಾರಿತ್ರ್ಯ'ಕ್ಕೆ ಸಮ ಸಮವಾಗಿರುವುದರಿಂದಲೂ[೬೩] ಟೀಕು ಬರೆಯುವಲ್ಲಿಯೂ ಅದೇ ಮಾರ್ಗದಲ್ಲಿ ನಡೆದಿರುವುದರಿಂದಲೂ ಇವೆರಡು ಗ್ರಂಥಗಳನ್ನು ಒಂದೇ ನಿಟ್ಟಿನಲ್ಲಿ ಸೇರಿಸಬೇಕಾಗುತ್ತದೆ".[೬೪] ಎಂದು ಡಾ॥ ಆರ್.ಸಿ. ಹಿರೇಮಠರು ಅಭಿಪ್ರಾಯ ಪಡುತ್ತಾರೆ.

ಈ ಸಂಕಲನಕ್ಕಾಗಿ ಬಸವಾದಿ ಶರಣರ ೬೪೨ ವಚನಗಳನ್ನು ಆಯ್ದುಕೊಂಡು ಬಹು ಸೂಕ್ಷ್ಮವಾಗಿ ಸ್ಥಲ ವಿಭಜನೆ ಮಾಡಿ ಜೋಡಿಸಿರುವ ಕ್ರಮ ವೈಶಿಷ್ಟಪೂರ್ಣವಾಗಿದೆ, 'ವಿಶೇಷಾನುಭವ ಷಟ್‌ಸ್ಥಲ' ದಲ್ಲಿಯ ಸ್ಥಲ ಸಂಯೋಜನೆ ಇಂತಿದೆ.

---

೬೨. "ವೀರಮಾಹೇಶ್ವರಾಚಾರ ಸಂಪನ್ನನಪ್ಪ ಚನ್ನವೀರಾಚಾರ್ಯನು ಶಿವಲಿಂಗದೇವರಿಗೆ ಬೋಧಿಸಿದ ವಿಶೇಷಾನುಭವ ಷಟ್‌ಸ್ಥಲ ಸಂಪೂರ್ಣ ಮಂಗಳ ಮಹಾ ___ "

೬೩. ಲಿಂಗಲೀಲಾ ವಿಲಾಸಕಾರನು ಭಕ್ತ, ಮಹೇಶ ಮುಂತಾದ ಆರು ಸ್ಥಲಗಳನ್ನು ಹಾಗೆ ಉಳಿಸಿಕೊಂಡು ಭಕ್ತಸ್ಥಲಕ್ಕಿಂತ ಪೂರ್ವದಲ್ಲಿ ನಿಷ್ಕಲಲಿಂಗ ಸ್ಥಲ, ಮಹಾಲಿಂಗಸ್ಥಲ, ಲಿಂಗಮೂರ್ತಿ ಸ್ಥಲ, ಅಂಗಸ್ಥಲ, ಸಂಸಾರ ಬಂಧ ಸ್ಥಲ, ಪಿಂಡ ಸ್ಥಲ, ಪಿಂಡ ಜ್ಞಾನ ಸ್ಥಲ, ಸಂಸಾರಹೇಯ ಸ್ಥಲ, ಗುರುಕರುಣ ಸ್ಥಲಗಳೆಂದು ಒಂಬತ್ತು ಸ್ಥಲಗಳನ್ನು ಗುರುತಿಸಿದ್ದಾನೆ. ಕೊನೆಯಲ್ಲಿ ಐಕ್ಯ ಸ್ಥಲದ ನಂತರದ ಸ್ಥಿತಿಯನ್ನು 'ಸ್ವಲೀಲಾನಂದ ಭಕ್ತಿ ಸ್ಥಲ'ವೆಂಬ ಸ್ಥಲವನ್ನು ಮಾಡಿದ್ದಾನೆ,

೬೪. ಡಾ॥ ಆರ್.ಸಿ. ಹಿರೇಮಠ (ಸಂ) 'ವಿಶೇಷಾನುಭವ ಷಟ್‌ಸ್ಥಲ', ಪ್ರ. ಪುಟ-೩೦)

೧. ವಸ್ತು ನಿರ್ದೇಶನ ಸ್ಥಲ.
೨. ವಿಶ್ವವಿಲಾಸ ಸ್ಥಲ.
೩. ಪಿಂಡ ಸ್ಥಲ
೪. ಪಿಂಡ ಜ್ಞಾನ ಸ್ಥಲ
೫. ಮಾಯ ವಿಲಾಸ ವಿಡಂಬನ ಸ್ಥಲ
೬. ಸಂಸಾರ ಹೇಯ ಸ್ಥಲ.
೭. ಗುರುಕರುಣ ಸ್ಥಲ
೮. ಲಿಂಗಧಾರಣ ಸ್ಥಲ
೯. ಅಷ್ಟಾವರಣ ಪ್ರದೀಪಿಕಾ ಸ್ಥಲ
೧೦. ಭಕ್ತ ಜ್ಞಾನಿ.
೧೧. ಮಹೇಶ್ವರ ಸ್ಥಲ.
೧೨. ಪ್ರಸಾದಿ ಸ್ಥಲ
೧೩. ಪ್ರಾಣಲಿಂಗಿಸ್ಥಲ
೧೪. ಶರಣ ಸ್ಥಲ
೧೫. ಐಕ್ಯ ಸ್ಥಲ.
೧೬. ಶೂನ್ಯ ಸ್ಥಲ

ಇಲ್ಲಿಯ ಭಕ್ತ, ಮಹೇಶ ಮುಂತಾದ ಷಟ್‌ಸ್ಥಲಗಳಲ್ಲಿ ಮತ್ತೆ ಉಪವಿಭಜನೆಗಳು ಕಂಡು ಬರುತ್ತದೆ. ಉದಾ :- ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗ, ಭಕ್ತನ ಶರಣ, ಭಕ್ತನೈಕ್ಯ, ಭಕ್ತನ ಸಹಜ ನಿಜ ಸಂಬಂಧ ಎಂದು ೭೯ ವಚನಗಳಷ್ಟು ವಿಸ್ತಾರದಲ್ಲಿ ಭಕ್ತ ಸ್ಥಲವನ್ನು ವಿವರಿಸದ್ದಾನೆ. ಈ ರೀತಿ ಪ್ರತಿಯೊಂದು ಸ್ಥಲಕ್ಕೂ ಷಟ್‌ಸ್ಥಲಾಂತರ್ಗತ ಉಪವಿಭಜನೆ ಮಾಡಿ ಸ್ಥಲದ ಮಹತ್ವವನ್ನು ತೋರಿಸಿದ್ದಾನೆ. ಕೊನೆಯ ಸ್ಥಲವಾದ 'ಐಕ್ಯಸ್ಥಲ'ದ ನಂತರ ಮಹಾಮಹಿಮನು ನಿರಾಲಂಬ ಸ್ಥಿತಿಯನ್ನು ತಲುಪಿದ ಬಗೆಯನ್ನು 'ಶೂನ್ಯ ಸ್ಥಲ' ವೆಂಬ ಹೊಸ ಸ್ಥಲ ಪರಿಕಲ್ಪನೆಯ ಸಂಯೋಜನೆ ಮಾಡಿ ಅದಕ್ಕಾಗಿ ವಿವಿಧ ವಚನಕಾರರ ೨೯ ವಚನಗಳನ್ನು ಜೋಡಿಸಿರುವುದು ಈ ಸಂಕಲನದ ವಿಶೇಷವಾಗಿದೆ.

ಷಟ್‌ಸ್ಥಲ ಸಿದ್ಧಾಂತವು ಜೀವ ಜಗತ್ತು –ಈಶ್ವರರ ಪರಸ್ಪರ ಸಂಬಂಧವನ್ನು ತನ್ನದೇ ಆದ ಸ್ವತಂತ್ರ ವಿಚಾರಧಾರೆಯಲ್ಲಿ ನಿರೂಪಿಸುತ್ತದೆ. ಅದಕ್ಕಾಗಿ ಮರದ ನಾಗಣ್ಣ, ಭಂಡಾರಿ ಶಾಂತಯ್ಯ, ಮೋಳಿಗೆ ಮಾರಯ್ಯ, ಚನ್ನ ಬಸವಣ್ಣ, ಅಲ್ಲಮ ಪ್ರಭು, ಸಿದ್ಧರಾಮ ಮುಂತಾದ ೪೪ ಶಿವಶರಣರ ವಚನಗಳನ್ನು ಬಳಸಿಕೊಳ್ಳಲಾಗಿದ್ದು, ಅವನ್ನು ಸ್ಥಲ ಕಟ್ಟಿಗೆ ಅನುಸಾರವಾಗಿ ಜೋಡಿಸಲಾಗಿದೆ. ಸಂಕಲನದ ಪೀಠಿಕಾ ಭಾಗದ ಅಂತ್ಯದಲ್ಲಿ ಷಟ್‌ಸ್ಥಲ ಜ್ಞಾನಿಗಳೂ, ಸರ್ವಾಚಾರ ಸಂಪನ್ನರೂ ಲೀಲಾ ಕಾರಣ ಮೂರ್ತಿಗಳೂ ಆದ ಆದ್ಯರನ್ನು ಬಸವಣ್ಣ, ಮಾಚಿ ತಂದೆ, ಬಿಬ್ಬಿಬಾಚಯ್ಯ, ಅನಿಮಿಷದೇವ, ಅಲ್ಲಮ ಪ್ರಭುದೇವ, ಅಜಗಣ್ಣಗಳ ಷಟ್‌ಸ್ಥಲದ ಇರವನ್ನು, ಚೆನ್ನ ಬಸವಣ್ಣನ ಸರ್ವಾಚಾರ ಸಿದ್ಧಿಯನ್ನು ಸ್ತುತಿಸಿ ಮುಂದೆ ಸ್ಥಲ ಪರಿಕ್ರಮವನ್ನು ನಿರ್ಧರಿಸಲಾಗಿದೆ.

೧. ವಸ್ತು ನಿರ್ದೇಶನ ಸ್ಥಲ

ಪರ–ಅಪರ, ಆದಿ–ಅನಾದಿ, ಶಿವ–ಸದಾಶಿವ ಏನೆಂಬುದು ತಾನಿಲ್ಲದಂದು, ಬ್ರಹ್ಮ, ವಿಷ್ಣು, ರುದ್ರರು, ಈರೇಳು ಭವನ, ಸಪ್ತ ಸಾಗರ, ಮೂವತ್ತ ಮೂರು ಕೋಟಿ ದೇವತೆಗಳು ಉದಯವಾಗದಂದು ಕಾವ್ಯ ಕಲ್ಪಿತಂಗಳಿಲ್ಲದೆ ಪರಮಾನಂದ ಪರಿಣಾಮದಲ್ಲಿ ಪರ ವಸ್ತುವು ತನ್ನ ಆದಿ ಅಂತ್ಯವನ್ನು ತಾನೇ ಅರಿಯುತ್ತ ಅನಂತ ಕಾಲ ಸ್ವಯಂಭುವಾಗಿದ್ದನು. ದಿವ್ಯ ನಿರಾಲಂಬ ಸ್ಥಾನದಲ್ಲಿ ನಿತ್ಯ ನಿರಂಜನವಾಗಿ ಮಹಾ ಶೂನ್ಯಕಾರವನ್ನು ತಾಳಿ ನಿಷ್ಕಲವೆನಿಸಿ, ನಿಜಲೀಲೆಯಿಂದ ಸಕಲ, ನಿಷ್ಕಲ ಸ್ವರೂಪದಿಂದ ಸಹಜ ಸ್ವಭಾವವನ್ನು ನಟಿಸುತ್ತಿರುವುದನ್ನು, 'ವಸ್ತು ನಿರ್ದೇಶನ ಸ್ಥಲ' ಎಂದು ಕರೆಯಲಾಗಿದೆ.

ಆ ಮಹಾಘನ ಲಿಂಗವು ಚಿದಾಕಾಶಮಯವಾಗಿರುವುದನ್ನು ಸಿದ್ಧರಾಮನ ವಚನ ಮಾರ್ಮಿಕವಾಗಿ ಚಿತ್ರಿಸುತ್ತದೆ.

" ಬೀಜ ವೃಕ್ಷದಂತೆ ನೀನಿಪ್ಪೆಯಯ್ಯಾ
ನಿರಾಕಾರವೇ ಮೂರ್ತಿಯಾಗಿ ಮೂರ್ತಿಯೆ ನಿರಾಕಾರವಾಗಿ.
ಇಂತಿವೆಲ್ಲವನತಿಗಳೆದು ಬಯಲುಗನಾಗಿಪ್ಪೆಯಯ್ಯಾ ನೀನು" (ವಸ್ತು ನಿರ್ದೇಶನ ಸ್ಥಲ ವ–೨೧)

ಬೀಜ ವೃಕ್ಷದ ನ್ಯಾಯದಂತೆ ಸಕಲ ನಿಷ್ಕಲಮಯವಾಗಿ ಮತ್ತವನೊಳಕೊಂಡು ಮೀರಿ ತೋರುವ ಮಹಾ ಘನ ಲಿಂಗದ ಚಿದಾಕಾಶದ ಹಿರಿಮೆಯನ್ನು ಈ ವಚನದಲ್ಲಿ ಹಿಡಿದಿಟ್ಟಿದ್ದಾನೆ.

೨. ವಿಶ್ವ ವಿಲಾಸ ಸ್ಥಲ

ಮಹಾ ಘನ ವಸ್ತುವು ತನ್ನ ಲೀಲಾ ಶಕ್ತಿಯಿಂದ, ಪಂಚ ಭೂತಗಳಿಂದ ಕೂಡಿದ ಜಗತ್ತನ್ನು ನಿರ್ಮಿಸಿ ನಿರ್ಲಿಪ್ತವಾಗಿದ್ದು, ಲೀಲೆಗೈಯುವ ರೀತಿ, ಸಚರಾಚರ ರಚನೆಗೆ ಪ್ರೇರಕವಾಗಿ ನಿಂತುದನ್ನು 'ವಿಶ್ವ ವಿಲಾಸ ಸ್ಥಲ' ವು ವಿವರಿಸುತ್ತದೆ, ಶಿವನು ಉಮಾಪತಿಯಾಗಿ ಸಕಲ ಜಗವ ನಿರ್ಮಿಸಿ ತನ್ನ ಆಜ್ಞಾವಶದಿಂದ ನಡೆಸುತ್ತಿದ್ದಾನೆ.

" ಶಿವನಿಂದಲುದಯಿಸಿತ್ತು ವಿಶ್ವ
ವಿಶ್ವದಿಂದಲುದಯಿಸಿತ್ತು ಸಂಸಾರ.
ಸಂಸಾರದಿಂದಲುದಯಿಸಿತ್ತು ಜ್ಞಾನ.
ಅಜ್ಞಾನದಿಂದಲುದಯಿಸಿತ್ತು ಮರವೆ.
ಮರವೆಯಿಂದಲುದಯಿಸಿತ್ತು ಆಸೆ.
ಆಸೆಯಿಂದಲುದಯಿಸಿತ್ತು ರೋಷ
ರೋಷದಿಂದಲುದಯಿಸಿತ್ತು ದುಃಖ
ದುಃಖದಿಂದ ಮೂರು ಲೋಕವೆಲ್ಲವು ಮೂರ್ಛೆಯಾಗಿ.
ಭವ ಬಂಧನಕ್ಕೊಳಗಾದರು " (ವಿಶ್ವ ವಿಲಾಸ ಸ್ಥಲ, ವ–೭)

ಶಿವನಾಜ್ಞೆಯಿಂದ ಉದಯವಾದ ಸಮಸ್ತ ದೇಹಿಗಳೆಲ್ಲರೂ ಲೋಕದ ಲೌಕಿಕ ಬದುಕಿಗೆ ಅಂಟಿಕೊಂಡು ಅಜ್ಞಾನದಿಂದ ಆಸೆ, ರೋಷ, ಕ್ಲೇಶಗಳಿಂದ ಧಾವತಿಗೊಂಡು ಲಿಂಗದ ನಿಜವನರಿಯದ ಕಾರಣ ಭವದ ದುಃಖದೊಳಗೆ ಮುಳುಗಿರುತ್ತಾರೆ. ಶಿವನ ಕೃಪಾವ ಲೋಕನದಿಂದಾಗಿ ಸಂಸ್ಕಾರಗೊಂಡ ಪಿಂಡ ಪ್ರಾಪ್ತವಾಗುತ್ತದೆ.

೩. ಪಿಂಡ ಸ್ಥಲ

'ಪಿಂಡಸ್ಥಲವೆ' ಷಟ್‌ಸ್ಥಲದ ಬುನಾದಿಯಾಗಿದೆ. ಷಟ್‌ಸ್ಥಲಾತ್ಮಕವಾದ ನೂರೊಂದು ನೆಲೆಯ ಪ್ರಥಮ ಸ್ಥಲವೇ ಪಿಂಡಸ್ಥಲ. ಇದು ಶರಣರ ಬದುಕಿಗೆ ಬೀಜ ರೂಪವಾದುದು. 'ಪಿಂಡ' ಎಂದರೆ ದೇಹ, ಕಾಯ ಅಥವಾ ಭ್ರೂಣ ಎಂದೇ ಅರ್ಥ. ಪಿಂಡ ಪರಿ ಪೂರ್ಣಗೊಂಡು ದೇಹವಾಗುವ ಮುಂಚಿನ ರೂಪವೇ ಪಿಂಡವೆನಿಸಿದೆ. ಶಿವನಾಜ್ಞೆಯಿಂದ ಜನ್ಮಾಂತರಕ್ಕೆ ಬಂದ ಆತ್ಮನಿಗೆ ಆಯಾಯಾ ಜನ್ಮದಲ್ಲಿ ಮಾಡಿದ ಪುಣ್ಯ ಕಾರ್ಯಗಳಿಂದ ಶುದ್ಧಾಂತಕರಣವುಳ್ಳ ಶರೀರ ದೊರೆತು ಅದರಲ್ಲಿ ಶಿವತತ್ವವು ಅಂತರ್ಗತವಾಗಿರುತ್ತದೆ. ಆದರೆ ಅದಕ್ಕೆ ಗೋಚರವಾಗದೆ ಇರುವ ಹಂತಕ್ಕೆ, ಸ್ಥಿತಿಗೆ ಪಿಂಡಸ್ಥಲವೆಂದು ಕರೆಯುತ್ತಾರೆ. ಹೀಗೆ ಪಿಂಡವಾಗಿರುವ ಜೀವನು ಸರ್ವರಿಗಿಂತಲೂ ಶ್ರೇಷ್ಠನೆನಿಸಿಕೊಳ್ಳುತ್ತಾನೆ.

ಕೆಲವೊಮ್ಮೆ ಶಿವನೆ ಶರಣನ ಅಂಗವಾಗಿ ಷಟ್‌ಸ್ಥಲ ಮಾರ್ಗದಲ್ಲಿ ಆಸಕ್ತಿ ಹುಟ್ಟಿ, ಬಹು ಜನ್ಮಗಳನ್ನು ದಾಟಿ, ಪಿಂಡ ರೂಪವಾಗಿ ಬೆಳೆದು ಸಾಧನೆಯ ಶಿಖರದಲ್ಲಿ ಬೆಳೆದು ಪುನಃ ಶಿವನೇ ಆಗುವನು. ಬಸವಣ್ಣನು ಪಿಂಡವೆಂದರೆ ದೇಹೋತ್ಪತ್ತಿ ಎಂದೇ ಕರೆದಿದ್ದಾನೆ.

"ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ,
ಭಾವದ ಮರೆಯ ಬ್ರಹ್ಮವಾಗಿಪ್ಪ.
ಚನ್ನ ಮಲ್ಲಿಕಾರ್ಜುನನ ನಿಲವನರಿಯಬಾರದು". (ಪಿಂಡ ಸ್ಥಲ ವ-೩).

ಪರಮಾತ್ಮನ ಚೈತನ್ಯವು ಕಾಣದಂತೆ ಅಡಗಿರುವುದನ್ನು ತಿಳಿಸಿದ್ದಾಳೆ ಅಕ್ಕಮಹಾದೇವಿ. ಪರಮಾತ್ಮನು ಎಲ್ಲಾ ಚರಾಚರ ವಸ್ತುವಿನಲ್ಲಿ ಅಡಗಿದ್ದರೂ ಅದನ್ನು ಅನುಭಾವ ಸುಖಿ ಮಾತ್ರ ತಿಳಿಯಬಲ್ಲ. ಉಳಿದವರಿಗೆ ಅವನು ಅಗೋಚರವಾಗಿದ್ದಾನೆ. ಇಂಥ ವಚನಗಳನ್ನು ಆಯ್ದು ಪಿಂಡಸ್ಥಲದ ವಚನಗಳೆಂದು ವಚನ ಸಂಕಲನಕಾರ ಸಂಪಾದಿಸಿದ್ದಾನೆ.

೪. ಪಿಂಡಜ್ಞಾನ ಸ್ಥಲ

ಪಿಂಡ ಸ್ಥಲದಂತೆ ಪಿಂಡಜ್ಞಾನ ಸ್ಥಲ ಕೂಡ ಅರ್ಥ ಪೂರ್ಣವಾಗಿದೆ. ಪಿಂಡಕ್ಕೆ ಜ್ಞಾನೋದಯವಾದರೆ ಮುಂದಿನ ಜೀವನದಲ್ಲಿ ಅಜ್ಞಾನ ಆವರಿಸದು. ದುಃಖ ದುಮ್ಮಾನಗಳನ್ನು ಎದುರಿಸುವ ಶಕ್ತಿ ಸಾಮರ್ಥ್ಯಗಳು ಸಹಜವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆತ್ಮನು ತನ್ನ ಶಿವತತ್ವದ ಆದಿ ಮಧ್ಯ ಅವಸಾನವನ್ನು ತಿಳಿದು ನಿಶ್ಚಿಯಿಸುತ್ತಿದ್ದುದನ್ನು 'ಪಿಂಡಜ್ಞಾನ ಸ್ಥಲ'

ಎಂದು ಕರೆಯಲಾಗಿದೆ. 'ನೇತ್ರದ ಬಾಗಿಲ ತೆರೆದು ನೋಡುತಿರ್ಪೆ ಕಂಡಯ್ಯ, ನಿನ್ನ ಇರವು ವಿಪರೀತ ಭಾವವೆಂಬೆ' ಎಂಬ ಸಿದ್ಧರಾಮನ ವಚನದಲ್ಲಿ ಪಿಂಡಜ್ಞಾನಿಯ ಸ್ಪಷ್ಟತೆ ಇದೆ. ಭವ ಬಂಧನಗಳನ್ನು ನೀಗಿಕೊಳ್ಳಲು ಜಂಗಮಾನುಗ್ರಹ ಮತ್ತು ಶರಣರು ಆಚರಿಸುವ ಆಚರಣೆಗಳು ಮಾರ್ಗದರ್ಶನ ಮಾಡುತ್ತವೆ. ಅಂಗನು ಲಿಂಗನನ್ನು ಅರಿಯಬೇಕಾದರೆ ಶರಣರ ಸಂಗ, ಸತ್ಸಂಗ ಮೂಲವಾಗುತ್ತದೆ. ಇಂಥ ಬದುಕನ್ನು ರೂಪಿಸಿಕೊಳ್ಳಲು ಪಿಂಡ ಸ್ಥಲ ಹಾಗೂ ಪಿಂಡ ಜ್ಞಾನ ಸ್ಥಲದಲ್ಲಿ ಸಾಧ್ಯ ಎಂದು ಹೇಳಬಹುದು.

ಪಿಂಡಜ್ಞಾನಿ ಹುಟ್ಟುವಾಗಲೆ ಲಿಂಗ ಸಂಸ್ಕಾರ ಹೊಂದಿ, ಲಿಂಗಾಂಗ ಸಂಬಂಧವುಳ್ಳವನಾಗಿ ಜನಿಸುವುದರಿಂದ ಆತ ಭವಿಯಾಗುವುದಿಲ್ಲ ಎಂಬ ಭಾವನೆ ವೀರಶೈವರಲ್ಲಿದೆ. ಇಂತಹ ಹಂತವನ್ನೆ ಪಿಂಡಜ್ಞಾನಿ ಸ್ಥಲ ಎಂದು ಕರೆದಿದ್ದಾರೆ.
ಪಿಂಡಜ್ಞಾನ ಸ್ಥಲವನ್ನು ನಿರ್ದೇಶಿಸುವ ಮೋಳಿಗೆ ಮಾರಯ್ಯನ ಈ ವಚನ

" ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ
ಮೃತ್ತಿಕೆಯ ಸಾರದಲ್ಲಿ ಹೊಮ್ಮಿದ ಹೊಂಗಳ ಪರಿಯಂತೆ
ಕಾಯದಲ್ಲಿ ಬೆಳಗಿ ತೋರುವ ಮಹದರಿವಿನ ಕೊನೆಯಲ್ಲಿ
ಪ್ರಜ್ವಲಿತ ಪ್ರಭಾಕರ ನೀನೆ, ನಿಷ್ಕಳಂಕ ಮಲ್ಲಿಕಾರ್ಜುನ". (ಪಿಂ.ಜ್ಞಾನ ಸ್ಥಲ ವ-೫).

ಶುಕ್ತಿ ಕಂಡದಲ್ಲಿ ಬೆಳೆದ ಮುತ್ತು ಆ ಶುಕ್ತಿಯಾಗದೆ ಮುತ್ತು ಎನಿಸಿಕೊಳ್ಳುವಂತೆ, ಮಣ್ಣಿನ ಸಾರದಿಂದಾದ ಚಿನ್ನವು ಪುನಃ ಮಣ್ಣಿನಲ್ಲಿ ಬೆರೆಯದೆ ಅಪರಂಜಿ ಚಿನ್ನ ಎನಿಸುವಂತೆ, ಪಿಂಡದಲ್ಲಿ ಪ್ರಕಾಶಮಾನವಾಗಿ ತೋರುವ ಮಹಾಜ್ಞಾನ ನಿತ್ಯಾನಿತ್ಯ ವಿವೇಕ ರೂಪವಾಗಿದ್ದಾಗ ಮಹಾಘನ ವಸ್ತುವು ಚಿತ್ಪ್ರಕಾಶಮಯವಾಗಿ ಪಿಂಡವು ತನ್ಮಯವಾಗಿರುತ್ತದೆ.

೫. ಮಾಯ ವಿಲಾಸ ವಿಡಂಬನ ಸ್ಥಲ

ಪಿಂಡ ಜ್ಞಾನಿಯಾದ ಆತ್ಮನು ತನ್ನ ವಿವೇಕ ದೃಷ್ಟಿಯನ್ನು ಮುಂದಿಟ್ಟುಕೊಂಡು ಕಾಣುವ ಅನಿತ್ಯವಾದ ಮಾಯಾಮಹದಾದಿ ಪ್ರಪಂಚವು ತನಗೆ ಅನ್ಯವಾಗಿರಲು ಅದನ್ನು ನಿರಾಕರಿಸುವುದೇ ಮಾಯಾವಿಲಾಸ ವಿಡಂಬನ ಸ್ಥಲವೆನಿಸುವುದು. ಕಾಯಕ್ಕೆ ನೆಳಲಾಗಿ, ಪ್ರಾಣಕ್ಕೆ ಮನವಾಗಿ, ಮನಕ್ಕೆ ನೆನಹಾಗಿ, ನೆನಹಿಗೆ ಅರಿವಾಗಿ, ಜಗದ ಜೀವಿಗಳಿಗೂ ಹರಿ ಬ್ರಹ್ಮಾದಿಗಳಿಗೂ ಸತ್ವಗೆಡಿಸಿ ಕಾಡುವ ಮಾಯೆಯನ್ನು ಶಿವಜ್ಞಾನಿಯು ಮಾತ್ರ ತ್ಯಜಿಸಲು ಹವಣಿಸುತ್ತಾನೆ.

" ಮಯಾ ವಿಲಾಸ ವಿಧಿ ಯತಿಗಳ ವ್ರತಿಗಳ ಸುರರ ಅಸುರರ ಧೃತಿಗೆಡಿಸಿತ್ತು,
ಹರಿ ಬ್ರಹ್ಮರೆಂಬ ವರಕಲಿಗಳ ಚಲಿಗಳ ಬಲುಹ ಮೆರೆವವರ
ಸಲೆ ಚುನ್ನವಾಡಿತ್ತು, ಅಳಿಸಿತ್ತು, ನಗಿಸಿತ್ತೆಲ್ಲರನು.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಹೋ ! ಹೋ ! ಮಯಾ ಮರ್ಕಟ ವಿಧಿಯೆ". (ಮಾಯಾವಿಲಾಸ ವಿಡಂಬನ ಸ್ಥಲ-ವ-೩)

ಈ ಮಾಯೆಯೆಂಬ ಮರ್ಕಟ ವಿಧಿಯು ದೇವ, ದಾನವ, ಯತಿ, ವ್ರತಿ, ಯೋಗಿ, ವೀರ, ಧೀರ, ಮುಂತಾದವರನ್ನು ಅಧೀರರನ್ನಾಗಿಸಿ, ಭಂಗಪಡಿಸಿ, ದುಃಖಿಗೊಳಿಸಿ, ನಗಿಸಿ ಕಾಡುವ ಪರಿಯನ್ನು ಚಂದಿಮರಸ ಎಂಬ ವಚನಕಾರನು ಸೊಗಸಾಗಿ ಚಿತ್ರಿಸಿದ್ದಾನೆ, ಇಂತಹ ಮಾಯೆಯನ್ನು ಗೆದ್ದು ಸಾಗುವ ಪರಿಯನ್ನು ಮಾಯಾ ವಿಲಾಸ ವಿಡಂಬನ ಸ್ಥಲದಲ್ಲಿ ವಿವರಿಸಲಾಗಿದೆ.

೬. ಸಂಸಾರ ಹೇಯ ಸ್ಥಲ

ಪಿಂಡ ಜ್ಞಾನಿಯಾದ ಜೀವನು ಮಾಯೆಯ ಮಾಯ ವಿಲಾಸವನ್ನು ಮೀರಿದರೂ ಜ್ಞಾನ ಕಲಾತ್ಮನು ಎಚ್ಚರದ ಸ್ಥಿತಿಯಲ್ಲಿರುತ್ತಾನೆ. ಅಜ್ಞಾನದಿಂದ ಅಹಂ, ಮಮತೆ, ಮನದ ಚಂಚಲತೆ, ಇಂದ್ರಿಯೋದ್ರೇಕ, ತನು ಮೋಹ, ಅತಿಕಾಂಕ್ಷೆ, ತ್ರಿವಿಧ ಮಲಗಳು, ರಾಗ ದ್ವೇಷಗಳು, ಸಕಲ ದುಃಖಗಳಿಂದ ಕೂಡಿದ ಪ್ರಾಪಂಚಿಕ ಸಂಸಾರ ಹುಟ್ಟುವುದೆಂದು ಅರಿತುಕೊಂಡು ಇವೆಲ್ಲವನ್ನು ತಿರಸ್ಕರಿಸುತ್ತಾನೆ. ಈ ತಿರಸ್ಕಾರ ಮಾಡುವ ಹಂತವನ್ನೇ 'ಸಂಸಾರ ಹೇಯ ಸ್ಥಲ' ಎಂದು ಕರೆಯುತ್ತಾರೆ.

"ಹೊತ್ತಿಂಗೊಂದು ಪರಿಯಹ ಮನವಕಂಡು
ದಿನಕ್ಕೊಂದು ಪರಿಯಹ ತನುವ ಕಂಡು
ಅಂದಂದಿಂಗೆ ಭಯ ದೋರುತ್ತಿದೆ.
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು.
ಅಂದಂದಿಂಗೆ ಭಯವಾಗುತ್ತಿದೆ.
ಈ ಮನ ನಿಮ್ಮ ನೆನೆಯಲೀಯದು.
ಮನ ಹಗೆಯಾದುದಯ್ಯಾ, ಸದ್ಗುರು ಪುರದ ಮಲ್ಲಯ್ಯ". (ಸಂಸಾರಹೇಯ ಸ್ಥಲ ವ-೪).

ಜೀವನೋದಯದಲ್ಲಿ ತನುವು ಕ್ಷಣ ಕ್ಷಣಕ್ಕು ಬದಲಾಗುವ ಪರಿಯನ್ನು 'ಮನವು ಕ್ಷಣ ಹೊತ್ತಿಗೆ ಇಡಿ ಬ್ರಹ್ಮಾಂಡವನ್ನೇ ಸುತ್ತಿ ಸುಳಿದು ಹಲವನ್ನು ಹಂಬಲಿಸಿ, ಶಿವಚಿಂತನೆಯನ್ನು ಮರೆಸಿ ವೈರಿಯಾಗಿ ಜೀವಾತ್ಮನನ್ನು ಕಾಡುವ ರೀತಿಯನ್ನು ವಚನದಲ್ಲಿ ಚಿತ್ರಿಸಲಾಗಿದೆ. ಈ ಸ್ಥಲಕ್ಕೆ ವಿವಿಧ ವಚನಕಾರರ ೨೨ ವಚನಗಳನ್ನು ಬಳಸಿಕೊಂಡಿದ್ದಾನೆ.

೭. ಗುರು ಕರುಣ ಸ್ಥಲ

ಜೀವಾತ್ಮನು ಪರಮಾತ್ಮನ ಅಂಶೀ ಭೂತವಾಗಿ ಜನಿಸಿದ್ದರೂ ಶಿವನ ಶಕ್ತಿ ಸಂಕೋಚದಿಂದ ಮತ್ತು ಮಲತ್ರಯಗಳ ಆವರಣದಿಂದಾಗಿ ಬದ್ಧನಾಗುತ್ತಾನೆ. ಅಜ್ಞಾನಿಯಾಗುತ್ತಾನೆ, ದುಃಖಿಯಾಗುತ್ತಾನೆ. ತಾಪತ್ರಯಗಳಿಂದ ಬಳಲುತ್ತಾನೆ. ಇವಲ್ಲದೆ ಕಾಮಾದಿ ಅರಿಷಡ್ವರ್ಗಗಳು, ಪ್ರಾಣ ಧರ್ಮಗಳೆನಿಸಿದ ಹಸಿವು-ಬಾಯಾರಿಕೆಗಳು, ಮನೋಧರ್ಮಗಳಾದ ಶೋಕ-ಮೋಹಗಳು ಹೀಗೆ ಹತ್ತು ಹಲವಾರು ಸಮಸ್ಯೆಗಳಿಂದ ಪರಾಗಿ, ಜೀವನ ಸಾಫಲ್ಯತೆಗೆ ವೈಶಾಲ್ಯತೆಗೆ, ಅದರ ವಿಕಾಸತೆಗೆ ಗುರುವಿನ ಕರುಣೆ ಬೇಕಾಗುತ್ತದೆ. ಆಗ ಶಿವನೆ ಗುರು ಸ್ವರೂಪನಾಗಿ ಬಂದು ಉಪದೇಶ ಮಾಡುತ್ತಾನೆ. ದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಈ ಘಟ್ಟವನ್ನು 'ಗುರು ಕರುಣ ಸ್ಥಲ' ವೆಂದು ಕರೆಯಲಾಗಿದೆ.

ಜೀವಾತ್ಮನು ಸಂಸಾರ ಬಂಧನದಿಂದ ಬಿಡುಗಡೆ ಹೊಂದಲು ಶಿವ ಕಾರುಣ್ಯವನ್ನು ಬಯಸುತ್ತಿದ್ದಾನೆ.

" ಎನ್ನ ಬಾರದ ಭವಂಗಳಲ್ಲಿ ಬರಿಸಿದೆ ?
ಏಕೆನ್ನ ಘೋರ ಸಂಸಾರದಲ್ಲಿರಿಸಿದೆ ?
ಏಕೆನಗೆ ಕರುಣಿಸಲೊಲ್ಲದೆ ಕಾಡಿಹಿರಿ !
ಆನು ಮಾಡಿದ ತಪ್ಪೇನು !
ಅದೇಕೆ ಹೇಳಾ ಎನ್ನ ಗುರುವೆ ?
ಸಾಕಲಾದುದೆಂದಕ್ಕೊತ್ತಿ ನುಡಿದಡೆ
ಏಕೆ ನಾ ನಿಮ್ಮ ಬಿಡುವೆ ಶಂಭುಜಕ್ಕೇಶ್ವರಾ". (ಗುರು ಕರುಣ ಸ್ಥಲ ವ-೧೫)

ನಿಮ್ಮ ಅನುಗ್ರಹ ಸಿಗುವವರೆಗೂ ನಿಮ್ಮ ಪಾದವ ಬಿಡೆನೆಂದು ಅರುಹುವ ಪರಿ ಸೋಗಸಾಗಿದೆ. ಕಾಡಿ ಬೇಡಿಯಾದರೂ ಗುರುವಿನ ಕರುಣೆಗೆ ಪಾತ್ರರಾಗಿ ಮೋಕ್ಷದ ಕಡೆ ಸಾಗುವ ಜೀವನ ಕಾತರತೆ ಇಲ್ಲಿ ಕಂಡು ಬರುತ್ತದೆ.

೮. ಲಿಂಗಧಾರಣ ಸ್ಥಲ

ಶ್ರೀ ಗುರುವು ಶಿಷ್ಯನಿಗೆ ಉಪದೇಶ ಮಾಡಿ ಶಿಷ್ಯನ ಭೌತಿಕ ಶರೀರವನ್ನು ಮಂತ್ರ ಶರೀರವನ್ನಾಗಿ ಮಾಡಿ ಅವನಂಗವ ಲಿಂಗ ಸ್ವಾಯತ ಮಾಡುವ ಕ್ರಮವೆ ಲಿಂಗಧಾರಣ ಸ್ಥಲವೆನಿಸಿದೆ, ಗುರುವು ಭಕ್ತನಿಗೆ ಉಪದೇಶ ಮಾಡುವಲ್ಲಿ ಅವನ ಬಾಹ್ಯ ಆಚರಣೆಗೋಸ್ಕರ ಕರುಣಿಸಿದ ಚಿಹ್ನವು ಇದಾಗಿದೆ. ಅದರ ಮೂಲಕ ಭಕ್ತನು ತನ್ನ ತನು ಮನ ಭಾವಗಳಲ್ಲಿ ಪರ ವಸ್ತುವಿನ ಕಳೆಯನ್ನು ಪ್ರಕಟ ಮಾಡಿಕೊಳ್ಳುತ್ತಾನೆ. ಸರ್ವಾಂಗವನ್ನು ಲಿಂಗಮಯವಾಗಿಸಿ ಕೊಳ್ಳುತ್ತಾನೆ. ಹೀಗೆ ದೀಕ್ಷಾ ಕಾಲದಲ್ಲಿ ಧರಿಸಿದ ಲಿಂಗವು ಶಿವನ ಸಂಕೇತ. ಅದನ್ನವನು ಜೀವನ ಪರ್ಯಂತ ತನ್ನ ದೇಹದ ಮೇಲೆ ಧರಿಸಿ ತನ್ನಲ್ಲಿಯೆ ಶಿವ ಸ್ವರೂಪವನ್ನು ಕಾಣಬೇಕು,

"ಮಂಗಳವೆ ಮಜ್ಜನವೆನಗೆ, ವಿಭೂತಿಯೆ ಒಳಗುಂದದ ಅರಿಸಿನವೆನಗೆ
ದಿಗಂಬರವೆ ದಿವ್ಯಾಂಬರವೆನಗೆ, ಶಿವಭಕ್ತರ ಪಾದರೇಣುವೆ ಅನುಲೇಪನವೆನಗೆ
ರುದ್ರಾಕ್ಷಿಯೆ ಮೈದೊಡಿಗೆ ಎನಗೆ.
ಶರಣರ ಪಾದವೆ ಶಿರದಲ್ಲಿ ತೊಂಡಿಲ ಬಾಸಿಗವೆನಗೆ
ಚೆನ್ನ ಮಲ್ಲಿಕಾರ್ಜುನನೆ ಗಂಡ ಆನುಮದುವಳಿಗೆ--". (ಲಿಂಗಧಾರಣ ಸ್ಥಲ. ವ-೨)

ಮದುಮಗಳಾದ ಶರಣೆಯು ಅನ್ಯ ಶೃಂಗಾರ ಸಾಧನಗಳನ್ನು ತಿರಸ್ಕರಿಸಿ, ಭಕ್ತಿಯ ವೇಷವನ್ನು ಅಲಂಕರಿಸಿ ಲಿಂಗಕ್ಕನುಭಾವದಿಂದ ಇರುವವಳಾಗಿ ಅಕ್ಕ ಕಂಡುಬರುತ್ತಾಳೆ.

೯. ಅಷ್ಟಾವರಣ ಪ್ರದೀಪಿಕಾ ಸ್ಥಲ

ಗುರುವು ಶಿಷ್ಯನ ಅಂತರಂಗದ ಮೇಲೆ, ಲಿಂಗಧಾರಣ ಮಾಡಿದ ಮೇಲೆ ಸರ್ವಾಂಗವೆಲ್ಲವು ಲಿಂಗಮಯವೆಂದರಿತು ಶಿವ ಭಕ್ತನು ಲಿಂಗ ಸ್ವರೂಪವಾದ ಅಷ್ಟಾವರಣಗಳನ್ನು ಆಚರಿಸಿ, ಷಟ್‌ಸ್ಥಲದ ಮೆಟ್ಟಿಲುಗಳನ್ನು ಏರುತ್ತಾ ಹೋಗಿ ಐಕ್ಯನಾಗುವ ಪರಿಯನ್ನು ಕಾಣುತ್ತಾನೆ. ಲಿಂಗದ ನಿಷ್ಠೆಯಿಂದ ಭವದ ಧುರಿತಗಳನ್ನು ನಿವಾರಿಸಿಕೊಳ್ಳಲು ಸಮರ್ಥನಾಗುತ್ತಾನೆ.

"ಭಸಿತ ರುದ್ರಾಕ್ಷಿಯ ಎಸೆವ ಪಂಚಾಕ್ಷರಿಯ
ಅಸಮ ಶ್ರೀಗುರು ಲಿಂಗ ಜಂಗಮದ ನಿಜವ
ಅತಿಶಯದ ಪಾದೋದಕ ಪ್ರಸಾದವನರುಹಿ.
ಸಲಹಿದಾತನು ಗುರುವು ಕಪಿಲ ಸಿದ್ಧ ಮಲ್ಲಿಕಾರ್ಜುನ". (ಅಷ್ಟಾವರಣ ಪ್ರದೀಪಿಕಾ ಸ್ಥಲ, ವ-೧)

ಪೂಜಾ ರಚನೆ, ಮಂತ್ರ, ವಿಭೂತಿ, ಧೂಪದೀಪಾ, ರತಿ, ಧ್ಯಾನ, ಸ್ತೋತ್ರ ಕ್ರಿಯೆಗಳ ಮೂಲಕ ಅಷ್ಟ ತನುಗುಣದ ಪೂರ್ವಾಶ್ರಯಗಳನ್ನು ಕಳೆಯುತ್ತಾನೆ. ಇನ್ನು ಜೀವನು ಸಾಧಕನಾಗಿ ಷಟ್‌ಸ್ಥಲ ಸಾಧನೆಗೆ ಅಧಿಕಾರಿಯಾಗುತ್ತಾನೆ. ಮುಂದೆ ಭಕ್ತ, ಮಹೇಶ ಮುಂತಾದ ಷಟ್‌ಸ್ಥಲಗಳಿಗೆ ಬೇಕಾದ ವಚನಗಳನ್ನು ಬಸವಾದಿ ಶರಣರ ವಚನಗಳಿಂದ ಆರಿಸಿಕೊಂಡು ಸಂಕಲನಕಾರ ಜೋಡಿಸಿದ್ದಾನೆ.

ಶೂನ್ಯ ಸ್ಥಲ, ಐಕ್ಯ ಸ್ಥಲದ ಆ ನಂತರ ಶಿವಶರಣನು ಸ್ವಲೀಲಾ ಭಾವವುಳ್ಳ ಮಹಾಮಹಿಮನಾಗಿ ನಿರಾಲಂಬ ಸ್ಥಿತಿಯ ಹೊಂದಿದರೆ ಅದು ಶೂನ್ಯ ಸ್ಥಲ. ಈ ಸ್ಥಲದ ಅನುಭಾವವುಳ್ಳ ದಿವ್ಯ ಜ್ಞಾನಿಗೆ

" ನಿಜವನರಿದವರಿಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.
ನಿತ್ಯವೂ ಇಲ್ಲ, ಅನಿತ್ಯವೂ ಇಲ್ಲ, ಅದು ತಾಮುನ್ನವೆ ಇಲ್ಲ.
ಬಚ್ಚ ಬರಿಯ ನಿರಾಳ ತಾನೆ.
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನೀವು ಬಯಲು" (ಶೂನ್ಯ ಸ್ಥಲ, ವ-೩)

ಜೀವನು ಇಲ್ಲಿ ಸಚ್ಚಿದಾನಂದ ಪರಿಪೂರ್ಣನಾಗಿ ರಾರಾಜಿಸುತ್ತಾನೆ. ಇದೇ ವಿಶೇಷಾನುಭವ. ಇಂಥ ಅನುಭಾವದ ಮೇರು ಶಿಖರವನ್ನು ಮುಟ್ಟಿ ಶೂನ್ಯ ಸ್ಥಲ ಸಂಪಾದಕನೆನಿಸಿದ ಅಲ್ಲಮ ಪ್ರಭು ದೇವನಿದ್ದಾನೆ.

ಚೆನ್ನವೀರಾಚಾರ್ಯನ 'ವಿಶೇಷಾನುಭವ ಷಟ್‌ಸ್ಥಲ' ವು ಲಿಂಗಾಂಗ ಸಾಮರಸ್ಯದ ವಿವರಣೆಗಾಗಿಯೆ ರಚನೆಯಾದಂತಿದೆ. ಇಲ್ಲಿಯ ಸ್ಥಲ ವಿವೇಚನೆ ಅರ್ಥ ಪೂರ್ಣವಾಗಿದೆ. ಜೀವನು ಲಿಂಗದಿಂದ ಜನಿಸಿ ಕೊನೆಗೆ ಲಿಂಗವೇ ಆಗುವ ಪರಿವರ್ತನ ಕ್ರಮವನ್ನು ಶರಣರ ವಚನಗಳ ಮೂಲಕವೇ ವಿವರಿಸಲಾಗಿದೆ. ಲಿಂಗಾಂಗ ಸಾಮರಸ್ಯದ ಅರಿವನ್ನು ಗುರು ಶಿಷ್ಯರ ನೆಲೆಯಲ್ಲಿಯೆ ಕೊಡಲಾಗಿದೆ. ಚನ್ನವೀರಾಚಾರ್ಯನು ಶಿಷ್ಯ ಶಿವಲಿಂಗದೇವನಿಗೆ ಈ ಕೃತಿಯನ್ನು ಬೋಧಿಸಿದಂತೆ ರಚಿಸಿದ್ದಾನೆ.

ಈ ಸಂಕಲನದ ವಿಶೇಷವೆಂದರೆ ಉಲ್ಲೇಖಿತ ಶರಣರ ವಚನಗಳಿಗೆ ಸಂಕಲನಕಾರ ಸರಳವಾದ ಟೀಕೆಯನ್ನು ಬರೆದಿರುವುದು.[೬೫] ಕೆಲವು ವಚನಗಳಿಗೆ ಸಂಕ್ಷಿಪ್ತವಾದ ಒಟ್ಟಾರೆ ಅರ್ಥವನ್ನು ನೀಡಿದ್ದಾನೆ. ಮತ್ತೆ ಕೆಲವು ವಚನಗಳಿಗೆ ವಚನ ಭಾಗಗಳನ್ನು ಉಲ್ಲೇಖಿಸುತ್ತ ವಿವರಣೆಯನ್ನು

---

೬೫. ಈಗ ತಿಳಿದ ಮಟ್ಟಿಗೆ ವಚನಗಳಿಗೆ ಮೊಟ್ಟ ಮೊದಲು ಟೀಕೆಯನ್ನು ಬರೆದವರು ಮಹಾಲಿಂಗದೇವ ಮತ್ತು ಕಲ್ಲು ಮಠದ ಪ್ರಭುಧೇವ

ನೀಡಿರುವುದು ಗಮನಾರ್ಹವಾಗಿದೆ. ಟೀಕು ಬರೆಯುವಾಗ ಅನಾವಶ್ಯಕವಾಗಿ ಅರ್ಥವನ್ನು ಲಂಬಿಸದೆ, ವಿಷಯದ ಗಾಂಭೀರ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಬಹಳ ಸರಳವಾಗಿ ನಿರೂಪಿಸುವ ಅಪೂರ್ವ ಸಂಯಮವನ್ನು ಪ್ರಕಟಪಡಿಸಿದ್ದಾನೆ.

ಉದಾ :- "ಕಾಯವೆನ್ನ ಕಲ್ಪಿತವೆನ್ನ, ಅರಿವೆನ್ನ, ಮರೆವೆನ್ನ
ಮಾಯಿಕ ನಿರ್ಮಾಯಿಕವೆನ್ನ, ದೇವರೆನ್ನ, ಭಕ್ತರೆನ್ನ, ಬಯಲೆನ್ನ.
ಮುಂದೆ ಊಯಿಸುವುದಕ್ಕೆ ಒಡಲಿಲಿಲ್ಲವಾಗಿ
ನಿಂದ ನಿಲುವು ತಾನೆ ನಿರಾಳ
ಚಿಕ್ಕಯ್ಯ ಪ್ರಿಯ ಸಿದ್ದಲಿಂಗಾ
ಮುಂದೆ ಒಂದೂ ಇಲ್ಲ, ನಿಲ್ಲು ಮಾಣು". (ಪುಟ –೪೧೭, ವ–೨೭).

"ಪ್ರವೃತ್ತಿ ನಿವೃತ್ತಿ ತತ್ವ ಭೇದಂಗಳ ಪ್ರತಿಪಾದಿಸದೆ ಮಹಾಜ್ಞಾನಾ ರೂಢನಾದ ಪರಮ ಲಿಂಗೈಕ್ಯನೆ ನಿರಾಳ ನಿಜ ಪದಸ್ಥನೆಂಬುದೀ ವಚನದ ತಾತ್ಪರ್ಯ". ಎಂದು ಬರೆಯುತ್ತಾನೆ. ಲಿಂಗಧಾರಣ ಸ್ಥಲದಲ್ಲಿ ಎಡೆ ಪಡೆದ ಚನ್ನಬಸವಣ್ಣನ ವಚನ (ವ–೯) ಮೂರು ಪುಟದಷ್ಟು ವಿಸ್ತಾರ ಹೊಂದಿದೆ. ಇದಕ್ಕೆ ಎರಡು ಸಾಲಿನ ತಾತ್ಪರ್ಯವನ್ನು ಹೇಳಿ ಬಿಡುತ್ತಾನೆ.

ಚೆನ್ನ ಬಸವಣ್ಣನ ಇನ್ನೊಂದು ವಚನ ಸರಳವಾಗಿ ವ್ಯಾಖ್ಯಾನ ರೂಪವಾಗಿದೆ ಎಂದು ಅದಕ್ಕೆ ಟೀಕೆಯನ್ನು ಬರೆಯಲಿಲ್ಲ ಎಂದು ಹೇಳುತ್ತಾನೆ. ಇದಕ್ಕೆ ವಿರುದ್ಧವಾಗಿ ಐಕ್ಯಸ್ಥಲದಲ್ಲಿ ಸೇರ್ಪಡೆಯಾದ ಮೋಳಿಗೆ ಮಾರಯ್ಯನ ಬೆಡಗಿನ ವಚನಕ್ಕೆ (ವ–೪೬) ಸುಮಾರು ಎರಡು ಪುಟಗಳಷ್ಟು ವಿವರಣೆಯನ್ನು ಕೊಡುತ್ತಾನೆ. ಈ ಎಲ್ಲಾ ವಿಚಾರಗಳಿಂದಾಗಿಯೆ ಇದೊಂದು ಅಪರೂಪದ ಸಂಕಲನವಾಗಿದೆ.

೯.ಆಚರಣೆಯ ಸಂಬಂಧದ ವಚನಗಳು

* ಸಂಪಾದನೆಯ ಸಿದ್ದ ವೀರಣ್ಣೊಡೆಯ

ವೀರಶೈವ ಧರ್ಮದ ತಾತ್ವಿಕ ತಳಹದಿಯ ಮೇಲೆ ಶರಣರು ಬದುಕಿನಲ್ಲಿ ಅನುಸರಿಬೇಕಾದ ಆಚರಣೆಗಳನ್ನು ಲಿಂಗಾಂಗ ಸಂಬಂಧಗಳನ್ನು ಕುರಿತು ವಿವರಿಸುವುದು ಈ ಸಂಕಲನದ ಆಶಯವಾಗಿದೆ. ಈ ಸಂಕಲನಲದಲ್ಲಿ 'ಆಚರಣೆಯ ಹಾಗೂ ಸಂಬಂಧದ ವಚನಗಳು' ಎಂಬ ಎರಡು ವಚನ ಸಂಕಲನಗಳಿವೆ, ಆಚರಣೆಯ ೨೧೦ ವಚನಗಳು, ಸಂಬಂಧದ ೬೫ ವಚನಗಳು ಒಟ್ಟು ಸೇರಿ ೨೭೫ ವಚನಗಳ ಸಂಕಲನವಿದು. ಶರಣರಿಗೆ ಧಾರ್ಮಿಕ ವಿಧಿ, ನಿಷೇಧಗಳ ಬೋಧೆಗಾಗಿ ಸೈದ್ಧಾಂತಿಕ ವಿಧಾನದಲ್ಲಿ, ತತ್ವಾಧಾರಿತ ನೆಲೆಗಟ್ಟಿನ ಮೇಲೆ ಜೇಡರ ದಾಸಿಮಯ್ಯನಿಂದ ಮೊದಲುಗೊಂಡು ಸ್ವತಂತ್ರ ಸಿದ್ಧಲಿಂಗ ದೇವರವರೆಗೆ ಒಟ್ಟು ೬೧ ವಚನಕಾರರ ವಚನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಆಚರಣೆಯ ವಚನಗಳು

ವೀರಶೈವಾಚಾರ ಕ್ರಿಯೆಯ ವಿಧಿನಿಷೇದಗಳು, ಶರಣರು ಅನುಸರಿಸಬೇಕಾದ ಆಚರಣೆಯ ರೀತಿ–ನೀತಿಗಳ ವಿವರಗಳು ಇಲ್ಲಿಯ ವಚನಗಳಲ್ಲಿ ಸಂಗ್ರಹಿತವಾಗಿವೆ. ಶರಣರು ವ್ಯಕ್ತಿಯ ಪರಿಶುದ್ಧತೆಗೆ ಬಹಳ ಪ್ರಾಮುಖ್ಯತೆ ನೀಡುತ್ತಾರೆ. ಅಂತರಂಗ, ಬಹಿರಂಗ ಶುದ್ಧಿ, ಸ್ವವಿಮರ್ಶೆ ಮತ್ತು ಪ್ರಾಮಾಣೀಕತೆಗಳ ಕುರಿತು ಚಿಂತಿಸಿದ್ದಾರೆ. ಭಕ್ತಿ – ವಿರಕ್ತಿಗೆ ಮನಸ್ಸು ಮತ್ತು ಕ್ರಿಯೆಗಳ ಶುದ್ಧತೆ ಅಗತ್ಯ ಎಂದು ಭಾವಿಸುತ್ತಾರೆ. ಈ ಹಿನ್ನೆಲೆಯಲ್ಲಿಯೆ ಇಲ್ಲಿನ ವಚನಗಳು ಕಾಣಿಸಿಕೊಂಡಿವೆ.

ತನ್ನ ತಾನರಿತವನಿಗೆ ದೊರೆಯುವ ಫಲ ಮುಕ್ತಿ. ಹೀಗೆ ನಿತ್ಯ ಮುಕ್ತನಾದವನು ಸ್ತುತಿ ನಿಂದೆಗಳಿಗೆ ದೂರವಿರಬೇಕು. ದೊರೆತ ತೃಪ್ತಿಯಲ್ಲಿಯೆ ದುಃಖವನ್ನು ದೂರಮಾಡಿ, ಅಂತರಂಗದ ಅರಿವನ್ನು ಪಡೆದು, ಬಾಹ್ಯವನ್ನು ಮರೆತವನಿಗೆ ಸದಾನಂದ ಸುಖದೊರೆಯುವುದೆಂದು ಶರಣರು ಹೇಳುತ್ತಾರೆ. ಈ ಸ್ಥಿತಿಗಾಗಿ ಸರ್ವವನ್ನು ತ್ಯಾಗ ಮಾಡಬೇಕು.

ಷಟ್‌ಸ್ಥಲ ಸಿದ್ಧಾಂತದ ಮುಖ್ಯ ಗುರಿ ಕ್ರಿಯಾ ಜ್ಞಾನಗಳ ಸಾಮರಸ್ಯ ಸಿದ್ಧಿ. ಆದುದರಿಂದ ತತ್ವದ ಅನುಸಂಧಾನದಲ್ಲಿ ಆಚರಣೆಗೆ ತುಂಬ ಮಹತ್ವವಿದೆ. ಇಂತಹ ಆಚರಣೆಗೆ ಶರಣರಲ್ಲಿ ಮಹತ್ವವಿದೆ.

> " ಆಚಾರವೆಂಬುದು ಆಗೋಚರ ನೋಡಯ್ಯಾ ಮಾಡಿದಲ್ಲದೆ ಇಲ್ಲಿ
> ಒಡಲುವಿಡಿದಾಡಿದಡೆ ಹಿಡಿಯಲಿಲ್ಲಯ್ಯ.
> ಇನಿಸುವನು ಅಲ್ಲವೆಂದು ಕಳೆದಪ್ಪ ಕೂಡಲ ಚನ್ನಸಂಗನ
> ಶರಣ ಬಸವಣ್ಣನೇ ಬಲ್ಲ ನೋಡಯ್ಯ ಪ್ರಭುವೆ".

ಇಲ್ಲಿ ಆಚಾರದ ಅರ್ಥವನ್ನು ಬಹಳ ಎತ್ತರಕ್ಕೆ ಒಯ್ದಿದ್ದಾರೆ. 'ಆಚಾರವೆಂಬ ಆಗೋಚರ' ಎಂಬ ಮಾತಿನಲ್ಲಿ ಅನುಭಾವದ ಪರಾಕಾಷ್ಠೆ ಇದೆ. ಪರಮೋತ್ಕೃಷ್ಟ ಸ್ಥಿತಿಯವರೆಗೂ ಆಚಾರದ ಅರ್ಥ ವ್ಯಾಪ್ತಿ ಚಾಚಿಕೊಂಡಿದೆ.

ಕ್ರಿಯಾ ಜ್ಞಾನಗಳು ಸಾಮರಸ್ಯ ಹೊಂದಬೇಕಾದರೆ ಷಟ್‌ಸ್ಥಲಾಚರಣೆ ಬೇಕು. ಆಚಾರವನ್ನು ಇಂದ್ರಿಯಗಳಿಂದ ಗ್ರಹಿಸಲು ಶರಣನಿಗೆ ಆಚಾರವೆ ಉಸಿರಾಗಿರಬೇಕು. ಅಂಗಕ್ರಿಯೆ, ಲಿಂಗ ಕ್ರಿಯೆಗಳೆರಡು ಆಚಾರ ಬದ್ಧವಾಗಿಯೆ ಇರಬೇಕು. ಆಗ ಅರಿವಿನಲ್ಲಿ ಜ್ಞಾನೋದಯವಾಗಿ ಆತ್ಮ ಸಾಕ್ಷಾತ್ಕಾರವಾಗುತ್ತದೆ.

ಶರಣನಲ್ಲಿ ಉತ್ತಮ ವಿಚಾರಗಳಿದ್ದರೆ ಉತ್ತಮ ಆಚಾರಗಳಿರುತ್ತವೆ. ನಿಯಮ ಬದ್ಧ ಕ್ರಿಯಾ ಚಾರಕ್ಕೆ ಮುಖ್ಯ ಸದಾಚಾರ ಶರಣನ ಬಾಳಿನ ಮುಖ್ಯ ಗುರಿ. ಅಂತಹ ಸದಾ ಚಾರಗಳೆಂದರೆ ಅಹಿಂಸೆ, ಸಕಲ ಜೀವಾತ್ಮರ ಬಗ್ಗೆ ಕರುಣೆ, ಹೆಣ್ಣು ಹೊನ್ನು ಮಣ್ಣುಗಳ ಮಮಕಾರ ಮುಕ್ತತೆ, ಸ್ವಾರ್ಥರಹಿತ ಜೀವನ, ಕಪಟ, ಮೋಸ, ವಂಚನೆಗಳಿಗೆ ಹೊರತಾಗಿ ಸನ್ಮಾರ್ಗದಲ್ಲಿ ನಡೆಯುವುದು ಮತ್ತು ಜನ್ಮ ಪಾಪನಾಶಗಳಾದ ಗುರು ಲಿಂಗ ಜಂಗಮ ಪೂಜೆಗಳೆಲ್ಲವು ಇಷ್ಟಲಿಂಗ ಪೂಜೆಯಲ್ಲಿಯೆ ಅಂತರ್ಭಾವಗೊಳ್ಳುತ್ತವೆಂದು ಅರಿದು ಅದರಂತೆ ಆಚರಿಸುವುದೇ ಸದಾಚಾರ. ಗುರು ಲಿಂಗ ಜಂಗಮನಲ್ಲಿ ಶ್ರದ್ಧೆ, ಭಕ್ತಿಯನ್ನಿಡಬೇಕು. ಲಿಂಗರೂಪಿಯಾದ ಜಂಗಮ ಬಂದರೆ ಸರ್ವಸ್ವವನ್ನು ಅರ್ಪಣೆ ಮಾಡಿಕೊಂಡಾಗ ಮರ್ತ್ಯವೇ ಮಹಾದೇವನ ಮಹಾಮನೆಗೆ ಸಮನಾಗುತ್ತದೆ.

ಸತ್ಯ ಶುದ್ಧ ಆಚರಣೆಯ ತತ್ವಗಳ ಜೊತೆ ಸದ್ಭಕ್ತಿಯಿರಬೇಕು. ಸಪ್ತಾಚಾರಗಳಾದ ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಚಾರ, ಸದಾಚಾರಗಳು ಭಕ್ತನ ಅಂತರಂಗದಲ್ಲಿ ನೆಲೆಗೊಳ್ಳಬೇಕು. ನಡೆ ನುಡಿಗಳಲ್ಲಿ ಸಮನ್ವಯವಿರಬೇಕು.

> "ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದು ಕೊಂಡು ಹಾವನಾಡಿಸುವಂತೆ
> ಆವ ಮಾತನಾಡಿದಡು ತನ್ನ ಕಾಯ್ದು ಆಡಬೇಕು, ಅದೆಂಡೆಂದಡೆ
> ತನ್ನ ವಚನವೆ ತನಗೆ ಹಗೆಯಹುದಾಗಿ ಅನ್ಯರಿಂದ ಬಂದಿತ್ತೆನಬೇಡ
> ಅಳಿವುದು ಉಳಿವುದು ತನ್ನ ವಚನದಲ್ಲಿಯೇ ಆದೆ ನಿಜಗುರು ಸ್ವತಂತ್ರ
> ಸಿದ್ಧಲಿಂಗೇಶ್ವರ. ಹಗೆಯು ಕೆಳೆಯು ತನ್ನ ವಚನವೇ ಬೇರಲ್ಲ".

ಈ ವಚನದಲ್ಲಿ ಶರಣನಿಗಿರಬೇಕಾದ ಮಾತಿನ ಮಹತ್ವವನ್ನು ಹೇಳುತ್ತಾನೆ. ಶರಣನಾದವನು ಸತ್ಯವನ್ನೆ ನುಡಿಯಬೇಕು. ನುಡಿದಂತೆ ನಡೆಯಬೇಕು. ಇದು ಸದ್ಭಕ್ತಿಗೆ ಮೂಲ. ಅಂಥವನಲ್ಲಿ ಭಕ್ತಿ ಜಾಗ್ರತವಾಗಿರುತ್ತದೆ. ಅಂತರಂಗ ಮತ್ತು ಬಹಿರಂಗದ ಮಾತುಗಳಲ್ಲಿ ಸಮರಸವಿರಬೇಕು. ಇಲ್ಲದಿದ್ದರೆ ಆಚರಣೆ, ಆಚರಣೆಯಾಗಿರುವುದಿಲ್ಲ, ಅದೊಂದು ವ್ಯರ್ಥ ಕಸರತ್ತಾಗುತ್ತದೆ. ಭಕ್ತನ ನಡೆಲಿಂಗ, ಭಕ್ತನ ನುಡಿಲಿಂಗ ಆಗಬೇಕು. ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವೇ ಘಟ ಸರ್ಪವಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಭಕ್ತನ ಸಾಧನೆಯ ಹಾದಿಯಲ್ಲಿ ಅನೇಕ ಎಡರು ತೊಡರುಗಳು ಬರುತ್ತವೆ. ಹಿಡಿದ ನಿಷ್ಠೆಯನ್ನು ಬದಲಿಸದೆ, ಸತ್ಯ, ಶುದ್ಧ, ಪ್ರಮಾಣಿಕನಾಗಿ ಮತ್ತು ನಿರ್ಲಿಪ್ತನಾಗಿರಬೇಕು ಎಂಬುದನ್ನು ಶಿವಲಿಂಗ ಮಂಚಣ್ಣ

> "ವಾಸದ ದೀಪಕ್ಕೆ ವಾಯು ವಿರೋಧವಲ್ಲದೆ
> ಮಹಾ ಹೇತುವಿನ ವಹ್ನಿಗೆ ಅದು ಪ್ರೀತಿಯ ಸಂಗ
> ನೀತಿಯನ್ನು ನಡೆವವನ ಭಕ್ತಿ ಕುಲ ಅಜಾತಂಗೆ ಸಂಗ ಮಿಕ್ಕಾದ ದೂಷಣ
> ಆತ ಸರೆಯ ಮರ್ತ್ಯರ ವಿರೋಧ
> ಇಂತೀ ದ್ವಯ ಭೇದದಲ್ಲಿ ಅದುನಿಂದ ಪರಿಣಾಮಿಗೆ ಸ್ತುತಿನಿಂದೆಯೆಂಬುದಿಲ್ಲ "

ಅರಿವು ಆಚಾರಗಳನ್ನು ಅಳವಡಿಸಿಕೊಂಡ ಅನುಭಾವಿ ಶರಣನು ಸದಾ ಲಿಂಗ ಭೋಗೋಪ ಭೋಗಿಯಾಗಿರುತ್ತಾನೆ. ಮುತ್ತು ನೀರೊಳಗೆ ಹುಟ್ಟಿದರೂ ಪುನಃ ನೀರಾಗದೆ. ಉಳಿದಂತೆ, ಸಾಧಕ ಸಂಸಾರದ ಭವಬಂಧನದೊಳಗಿದ್ದು ಅದರಲ್ಲಿ ತಲ್ಲೀನನಾಗದೆ, ಅದರ ಸ್ವಯಂ ಪ್ರಕಾಶದ ಬೆಳಗಿನಲ್ಲಿ ಬೆಳೆದು ಸಾಧನೆಯ ಗುರಿಯನ್ನು ತಲುಪಬೇಕು ಎಂಬುದು ವಚನಕಾರರ ಅಭಿಪ್ರಾಯ. ಇಲ್ಲಿ ಸಂಗ್ರಹವಾದ ಆಚರಣೆಯ ವಚನಗಳು ಈ ಹಿನ್ನೆಲೆಯಲ್ಲಿಯೇ ಇವೆ. ಸಾಧಕನು ಆಚರಣೆಯ ಕ್ರಿಯೆಯಲ್ಲಿ ನಿರತನಾಗಿ ಸಾಧನೆಯ ಮೆಟ್ಟಿಲನ್ನು ಏರುತ್ತಾಹೋಗಿ ಐಕ್ಯ ಸ್ಥಿತಿಗೆ ತಲುಪುವ ದಿವ್ಯ ಜ್ಯೋತಿಗಳಾಗಿ ಕಾಣುತ್ತವೆ.

ಆಚರಣೆಯ ಸಂಬಂಧದ ವಚನಗಳು

ಈ ಸಂಕಲನದ ಎರಡನೆ ಭಾಗವೆ 'ಸಂಬಂಧದ ವಚನಗಳು' ಎಂಬ ಕಿರು ಸಂಕಲನ. ವೀರಶೈವ ಧಾರ್ಮಿಕ ತತ್ವದ ಜ್ಞಾನ ಅಜ್ಞಾನಗಳ ಸುಳುಹು–ಹೊಳಹುಗಳು ಈ ಸಂಬಂಧದ ವಚನಗಳಲ್ಲಿ ಕಾಣಿಸಿಕೊಂಡಿವೆ. ಷಟ್‌ಸ್ಥಲ ಸಂಬಂಧ, ಲಿಂಗ ಪ್ರಾಣಾರ್ಪಣೆ, ಲಿಂಗ ಜ್ಞಾನ

[illegible]

ಸಂಬಂಧ, ಪಿಂಡ ಸ್ಥಲ, ಕ್ರಿಯಾಜ್ಞಾನ ಸಂಬಂಧ ಮುಂತಾದ ವಿಚಾರಗಳ ಬಗೆಗೆ ವಿವರಣಾತ್ಮಕ ವಚನಗಳ ಸಂಗ್ರಹವೇ ಈ ಸಂಕಲನ.

ಶರಣ ಸಾಧಕ ಸಿದ್ಧಿಯ ಶಿಖರದಲ್ಲಿ ನಿಂತು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ ಭಕ್ತಿಗಳನ್ನು ದಾಟಿ ಸದಾನಂದ ಮಗ್ನನಾಗಿರುತ್ತಾನೆ.

" ಲಿಂಗವೆ ಪತಿಯಾಗಿ ಅನ್ಯವನರಿಯದೆ
ಪಂಚೇಂದ್ರಿಯ ವಿರಹಿತನಾಗಿ, ತೆರಹಿಲ್ಲದ ಅರುಹು
ತಾನಾಗಿ ನೆರೆ ಅರುಹಿನೊಳು ನಿಬ್ಬೆರಗಾಗಿ
ಹೃದಯ ಕಮಲ ಮಧ್ಯದಲ್ಲಿ ಪರಮೇಶ್ವರನೊಳಗಣ
ಪರ ಸ್ನೇಹವರಸಿ ಅಗಲದಿಪ್ಪುದ ಶರಣ ಸ್ಥಲ"

ಎಂಬ ಹೇಳಿಕೆ ಶರಣರದು. ಆತನ ಭಾವ ನಿರ್ಭಾವವಾಗಿ ಸಾಮರಸ್ಯದಲ್ಲಿ ನಿಂತು ನಿಜ ಶಾಂತಿಯಾಗಿ ಪರಿಣಮಿಸುತ್ತದೆ. ಶರಣ ಐಕ್ಯ ಸ್ಥಿತಿಯಲ್ಲಿದ್ದರೂ ಲೌಕಿಕ ಸಂಪರ್ಕವನ್ನು ಕಡಿದುಕೊಳ್ಳದೆ ಶರಣ ಸತಿ–ಲಿಂಗಪತಿ ಎಂಬ ಅನೋನ್ಯ ಸಂಬಂಧ ಇಲ್ಲಿ ಕಂಡು ಬರುವುದು ವಿಶೇಷ. ಅಂಗಲಿಂಗ ಸಂಬಂಧವನ್ನು ಷಟ್‌ಸ್ಥಲ ಸಮ್ಮತವಾಗಿ ನಿರೂಪಿಸುತ್ತವೆ. ಇದು ಅಲೌಕಿಕ ಪತಿಯೊಂದಿಗಿನ ನಿಬ್ಬೆರಗಿನ ಆನಂದವಿದು. ಇಂಥ ಆನಂದದಲ್ಲಿ ತೇಲಾಡುವ ಶರಣನ ನಡೆನುಡಿಯಲ್ಲವು ಪೂಜೆ ಮಂತ್ರಗಳಾಗಿವೆ. ಅವನ ಕಾಯವೇ ಕೈಲಾಸವಾಗಿ ಪರಣಮಿಸುತ್ತದೆ. ಅಂಗವೇ ಲಿಂಗ, ಲಿಂಗವೇ ಅಂಗವೆಂಬ ಸಾಮರಸ್ಯ ಸಂಬಂಧ ಕಂಡು ಬರುತ್ತದೆ. ಹೀಗೆ ಸಾಧನೆ ಮಾಡಿದವರೆಲ್ಲರೂ ಉನ್ನತ ನಿಲುವಿಗೇರಬಲ್ಲರು. ಸಾಧಕ –ಸಾಧನೆ ಸಂಬಂಧಗಳ ವಿಚಾರವನ್ನು ಸಾರುವ ವಚನಗಳ ಸಂಕಲನ ಆಚರಣೆಯ ಸಂಬಂಧದ ವಚನಗಳು. ಇಂತಹ ಕೃತಿಯನ್ನು ತಾತ್ವಿಕ ತಳ ಹದಿಯ ಮೇಲೆ ರೂಪಿಸಿದ ಕೀರ್ತಿ ಸಂಪಾದನೆಯ ಸಿದ್ಧವೀರಣ್ಣೊಡೆಯರಿಗೆ ಸಲ್ಲುತ್ತದೆ.

೧೦. ಸಂಪಾದನೆಯ ಸಣ್ಣ ಬರಹದ ಗುರು ಬಸವರಾಜ ದೇವರು ಸೇರಿಸಿದ ಶರಣ ಚಾರಿತ್ರದ ವಚನಗಳು.

ಈ ಸಂಕಲನದ ಹೆಸರೇ ಹೇಳುವಂತೆ ಇದನ್ನು ಸಂಪಾದಿಸಿದವನು ಸಂಪಾದನೆಯ ಸಣ್ಣ ಬರಹದ ಗುರು ಬಸವರಾಜ ದೇವರು ಎಂಬುದು ತಿಳಿದುಬರುತ್ತದೆ. ಕೃತಿಯ ಆದಿ ಅಂತ್ಯದಲ್ಲಿ ಈತನ ಕಾಲ ದೇಶ ಹಾಗೂ ಇತರ ಯಾವುದೇ ವಿಷಯಗಳು ತಿಳಿದು ಬರುವುದಿಲ್ಲ. ಈತ 'ಲಿಂಗಸಾವಧಾನದ ವಚನಗಳು' ಎಂದು ಹೆಸರಿನ ಕೃತಿಯನ್ನು ಬರೆದಿರುವಂತೆ ಕಂಡುಬರುತ್ತದೆ.

'ಶರಣ ಚಾರಿತ್ರದ ವಚನಗಳು' ಸಂಕಲನದಲ್ಲಿ ಶರಣನಲ್ಲಿರಬೇಕಾದ ಗುಣ ವಿಶೇಷಗಳು ಮತ್ತು ಅವನ ವ್ಯಕ್ತಿತ್ವ ಗುರುತಿಸುವಂತಹ ಕೆಲಸ ನಡೆದಿದೆ. ಇದೇ ರೀತಿಯ ಪ್ರಯತ್ನ ಲಿಂಗಲೀಲಾ ವಿಲಾಸ ಚಾರಿತ್ರ ಚೆನ್ನವೀರಾಚಾರ್ಯನ ವಿಶೇಷಾನುಭವ ಷಟ್‌ಸ್ಥಲ, ಪ್ರಸಾದಿ ಸ್ಥಲದ ವಚನಗಳು ಮುಂತಾದ ಕೃತಿಗಳಲ್ಲಿ ವೀರಶೈವ ತತ್ವದೊಡನೆ ಶರಣರ ವ್ಯಕ್ತಿತ್ವವನ್ನು, ಅವರು ಸಾಗಬೇಕಾದ ಮಾರ್ಗಗಳನ್ನು, ಸಾಧಿಸಬೇಕಾದ ಸಾಧನೆಗಳನ್ನು ವಿವಿಧ ಮಗ್ಗುಲುಗಳಿಂದ ನೋಡಲಾಗಿದೆ. ಅದೇ ರೀತಿಯ ಪ್ರಯತ್ನವನ್ನು ಈ ಕೃತಿಯ ಸಂಕಲನಕಾರ ಇಲ್ಲಿ ಶರಣರ ವಚನಗಳ ಮೂಲಕ ಪ್ರಯತ್ನಿಸಿ ಸಫಲನಾಗಿದ್ದಾನೆ.

[illegible]

[illegible]

[illegible]

[illegible]

" ಹೆಣ್ಣ ನಂಬಿ ತನುಮನ ಧನವನಿತ್ತೆಯಲ್ಲಾ ಎಲೆ ಮನವೇ?
ಇದ್ದುದನೆಲ್ಲವ ಕೊಂಡು ಬತ್ತಲೆ ಮಾಡಿ ತಲೆಯ ಬೋಳಿಸಿ
ಕೈಯಲ್ಲಿ ಹಂಚಕೊಟ್ಟು ಮತ್ತೊಬ್ಬಗಾಸೆ ಮಾಡುತ್ತಿದ್ದಾಳೆ ಕಂಡಾ
– – – – – – – – – – – – – – –
ಹೆಣ್ಣಿನ ಪಾಟಿಯ ತೊರದು ಕುಡು ಭಕ್ತಂಗನೆಗೆ
ತನುಮನ ಮುಕ್ತ್ಯಂಗನೆಗೆ ನಿನಗೊಲಿವಳು – ॥ ವ–೭೧೩

ಹೆಣ್ಣೆಂಬ ಮಾಯೆಯ ಬೆನ್ನತ್ತಿ ಸರ್ವಸ್ವವನ್ನು ಕಳೆದುಕೊಂಡರೂ ಬುದ್ಧಿ ಬರಲಿಲ್ಲ ಎಲೆ ಮನವೆ, ನಿನ್ನ ತನು ಮನಗಳನ್ನು ಭಕ್ತಿ ಎಂಬ ಅಂಗನೆಗೆ ಅರ್ಪಿಸಿಕೊಂಡು ವಿರಕ್ತನಾಗು. ಹೆಣ್ಣೆಂಬ ಮಾಯೆಯನ್ನು ಜಾಡಿಸಿ ಒದಿ. ಜಡತ್ವವನ್ನು ಬಿಡು. ಆಗ ಲಿಂಗನೇ ನೀನಾಗುವೆ ಎಂದು ಶರಣ ನಡೆನುಡಿಗಳನ್ನು ಹೇಳಿದ್ದಾನೆ ಅಲ್ಲಮ ಪ್ರಭು. ಹೆಣ್ಣು, ಹೊನ್ನು, ಮಣ್ಣು ಎಂಬ ಮಾಯೆಯಿಂದ ಹೊರಬರಬೇಕು ಎಂಬುದನ್ನು

"ಮಣ್ಣು ದೇಹ, ಹೊನ್ನು ಪ್ರಪಂಚ
ಹೆಣ್ಣು ಸಕಲ ಪ್ರಪಂಚು
ಈ ಮೂರರೊಳಗೊಂದ ಬಿಟ್ಟೊಂದ ಹಿಡಿದಿಹೆನೆಂದಡೆ
ಅರಿವು ಹಿಂಗಲಿಲ್ಲ.
ನಿಃಕಳಂಕ ಮಲ್ಲಿಕಾರ್ಜುನಾ" (ವ–೩೧)

"ಹೊನ್ನು ಪ್ರಾಣನಾಯಕ
ಹೆಣ್ಣು ಜೀವ ರತ್ನ
ಮಣ್ಣು ಮೈಸಿರಿಯ ಕೇಡು
ಈ ಮೂರು
ಮಹಾಲಿಂಗ ಚೆನ್ನರಾಮಯ್ಯಂಗೆ
ಸಲ್ಲಿಲಿತವಲ್ಲ" (ವ–೨೭)

ಎಂದು ಈ ವಚನಗಳ ಮೂಲಕ ಚಿತ್ರಿಸಿದ್ದಾರೆ. ಶರಣನಾದವನು ಅಂತರಂಗ – ಬಹಿರಂಗ ಶುಚಿರ್ಭೂತನಾಗಿರಬೇಕು. ಷಟ್‌ಸ್ಥಲ ಮುಂತಾದ ತತ್ವಮಾರ್ಗದಲ್ಲಿ ನಡೆಯಬೇಕು. ಉನ್ನತ ವ್ಯಕ್ತಿತ್ವ ಪಡೆದು ಸಮರಸಾನಂದವನ್ನು ಪಡೆಯಬೇಕು. ಎಂಬಂತಹ ಶರಣನ ಚಾರಿತ್ರ್ಯಕ್ಕೆ ಸಂಬಂಧಿಸಿದ ಅಂಶಗಳನ್ನು ನಿರೂಪಿಸಲಾಗಿದೆ. 'ಶರಣ ಚಾರಿತ್ರದ ವಚನಗಳು' ಈ ಸಂಕಲನವನ್ನು ಸಂಕಲನಕಾರ ಐದು ಭಾಗ ಮಾಡಿದ್ದಾನೆ. ಆ ಭಾಗಗಳಿಗೆ ಸಂಪಾದನೆ ೧.೨.೩.೪.೫ ಎಂದು ಹೆಸರಿಟ್ಟಿದ್ದಾನೆ.

ಪ್ರತಿಯೊಂದು ಸಂಪಾದನೆಯಲ್ಲಿ ನಿರ್ಧಿಷ್ಟ ವಿಷಯಗಳನ್ನು.[೬೬] ಇಟ್ಟುಕೊಂಡು ಆಯಾಯ ವಿಷಯಗಳಿಗನುಗುಣವಾಗಿ ವಚನಗಳನ್ನು ಸಂಪಾದಿಸಿಕೊಟ್ಟಿರುತ್ತಾನೆ. ಒಂದನೆಯ ಸಂಪಾದನೆಯ ಭಾಗದಲ್ಲಿ ಹನ್ನೊಂದು ವಿಷಯಗಳಿವೆ.[೬೭] ಇದಕ್ಕಾಗಿ ೬೯ ವಚನಗಳನ್ನು ಸಂಗ್ರಹಿಸಿದ್ದಾನೆ.

---

೬೬ & ೬೭. ಒಂದನೆಯ ಸಂಪಾದನೆಯ ಅಂತ್ಯದಲ್ಲಿ 'ಇಲ್ಲಿಗೆ ಗುರುಸ್ತೋತ್ರ, ಶಿವವೇಷನಿರ್ಣಯ, ದೇಹಾದಿ ಅನಿತ್ಯಭೋಗ, ಮನೇಂದ್ರಿಯವರ್ಗ, ಸರ್ವ ದೋಷವರ್ತನ, ನಿರ್ವಚನ, ದುರ್ದರ್ಶನ ನಿರಶನ, ಆಶಾವಿಡಂಬನ, ಪರಾಧೀನ ನಿರಶನ, ಶಿವಾಧೀನ ನಿಶ್ಚಯ, ಕರ್ಮಗತಿ ತಿರಸ್ಕಾರ ಸಮೋಪ್ತಂ" ಎಂದಿದೆ.

ಶಿವವೇಷ ನಿರ್ಣಯವನ್ನು ವಿವರಿಸುವ ವಚನ
"ಕಾಯ ಬ್ರಹ್ಮಚಾರಿಯಾದಡೇನಯ್ಯ, ಆಸೆ ಬ್ರಹ್ಮಚಾರಿಯಾಗದನ್ನಕ್ಕರ ?
ಶಬ್ದ ಮೌನಿಯಾದಡೇನಯ್ಯ, ನೆನಹು ಮೌನಿಯಾಗದನ್ನಕ್ಕರ ?
ತಲೆ ಬೋಳಾದರೇನಯ್ಯ, ಮನ ಬೋಳಾಗದನ್ನಕ್ಕರ ?
ಇದು ಕಾರಣ
ಕೂಡಲ ಚೆನ್ನಸಂಗಯ್ಯ
ನಿಮ್ಮ ಶರಣ ಸ್ಥಲವಾರಿಗೂ ಅಳವಡದು "(ವ-೨೩)

ಶಿವಭಕ್ತನ ನಿಜವಾದ ವೇಷಯಾವುದು ? ಬಹಿರಂಗ ವೇಷವಲ್ಲ, ಅಂತರಂಗದಲ್ಲೂ ವಿರಕ್ತನಾಗಿದ್ದರೆ ಮಾತ್ರ ಆತ ನಿಜವಾದ ಶರಣನಾಗುತ್ತಾನೆ ಎಂಬುದನ್ನು ವಿವರಿಸಲಾಗಿದೆ. ಪ್ರತಿ ಸಂಪಾದನೆಯಲ್ಲಿ ಬಳಸಲಾಗಿರುವ ಭಾಗಗಳಿಗೆ ಯಾವುದೇ ಶೀರ್ಷಿಕೆ ನೀಡಿಲ್ಲ, ವಿಭಾಗ ಮುಗಿಯುತ್ತಲೆ ಆ ವಚನದ ಕೊನೆಗೆ * ಈ ರೀತಿಯ ಚಿಹ್ನೆಯಿಂದ ಗುರುತಿಸಲಾಗಿದೆ.

ಎರಡನೇ ಸಂಪಾದನೆಯಲ್ಲಿ 'ಗುರುಲಿಂಗ ಜಂಗಮ, ಪಾದೋದಕ, ಪ್ರಸಾದ, ಭಕ್ತ, ವಿರಕ್ತ ಸಂಪಾದನೆ, ಪಂಚವಿಧ ಶೈವ ಕ್ರಮ, ಗುರುದೀಕ್ಷೆ ನಿರ್ವಾಹ, ಲಿಂಗ ಸವಧಾನ, ಲಿಂಗೈಕ್ಯ ಭೇದ, ಸಮಾದಿ ನಿರ್ವಯಲ, ಸರ್ವಾರ್ಪಣ, ಅನ್ಯನಿಮಿತ್ಯ ವಿಘ್ನಾದಿ ನಿರಸನ "

ಮೂರನೇ ಸಂಪಾಧನೆಯಲ್ಲಿ "ಇಲ್ಲಿಗೆ-ಪಾರ, ಜಾತ್ಯಾದಿ ಸಮಯ ವಿಚಾರ, ಲೋಕ ಲೌಕಿಕ ಪೂರ್ವಾಶ್ರಯ ಸಕಲಭೋಗ ನಿರಸನ, ವಾಗ್‌ಬ್ರಹ್ಮವಾದ, ಕರಣ ಮಂತ್ರ, ದುಸ್ಸಂಗ ವಿರಹಿತ, ಸುಸಂಗಾವಧಾನ, ಬೋಧ್ಯಾ ಬೋಧಕ ಸಂಪಾದನೆ, ಸ್ವಯಜ್ಞಾನ ಸಂಬಂಧ, ವಿರಕ್ತಾನು ಭಾವ ಸಮರಸ, ಭಕ್ತಿ ಸಂಬಂಧ, ಸರ್ವೋಪಾದಿ ಉಪಾದಿ ಗಮನ ನಿರಸನ ಸಮಾಪ್ತಂ"

ನಾಲ್ಕನೇ ಸಂಪಾದನೆಯಲ್ಲಿ, "ಇಲ್ಲಿಗೆ ಸುಜ್ಞಾನ ಶೀಲ ವ್ರತಾದಿನೇಮಾಚಾರಾದಿಭಾವ, ಕೊಡುವ ಕೊಂಬ ಭೇದ ಭಾವ, ಸದ್ಭಾವ, ನಿಸ್ಸಂದೇಹ ಪ್ರಸಾದ ಪರಿಪೂರ್ಣತ್ವ, ನಿದ್ರಾವ್ಯಸನ, ನಿರಸನ, ಶಿವಧ್ಯಾನ ಲಕ್ಷಣ, ಅನ್ಯವಾಕ್ಯವಿಡಂಬನ, ಖಂಡಿತ ಪೂಜಾತಿ - - ಸ್ವಯ ಪೂಜಾ ವಿಚಾರ, ಸುಗುಣ ದುರ್ಗುಣ ಸಂಪಾದನ ನಿರಸನ, ಸಮತಾಭಾವ, ತಥ್ಯ ಮಿಥ್ಯ ನಿರ್ಲೇಪ, ನಿರಾಪರಾಧನಿಂದೆ ನಿರ್ವಚನ, ಸರ್ವಾಚಾರ ಸಂಪದ, ಛಲಗ್ರಾಹಕತ್ವ, ಗುರುವಾಕ್ಯ ಪ್ರಸಿದ್ಧ ವಿರಕ್ತ ಚಾರಿತ್ರ, ಸರ್ವ ಸಮತಾಭಾವ ಸಮಾಪ್ತಂ"

ಐದನೆ ಸಂಪಾದನೆಯಲ್ಲಿ "ಭಕ್ತನ, ಸಾರಾಯ, ಗುರು ಕರುಣ, ಲಿಂಗಧಾರಣ, ಅಷ್ಟಾವರಣ, ಅಭಿನ್ನಮಂತ್ರಲಿಂಗ, ಸರ್ವಾಂಗಲಿಂಗ, ಇಷ್ಟಲಿಂಗ ಪೂಜೆ, ಭಾವಲಿಂಗ ಪೂಜೆ, ಮಹಾಲಿಂಗ ಪೂಜೆ, ಕಾಯಕಾರಣ, ಭಾವಪರಿಪೂರ್ಣಾರ್ಪಣ, ಉಂಡುಳೆ - ವ ಪರಿಪೂರ್ಣಾರ್ಪಣ, ಜೀವ ಪರಮ ಆತ್ಮತ್ರಯ, ಸರ್ವತತ್ವ ಸರ್ವಗುಣ ಸಮರಸೈಕ್ಯ ಭಾವ ಸಂಬಂಧ ಸಂಪೂರ್ಣಂ".

ಹೀಗೆ ಐದು ಸಂಪಾದನೆಯಲ್ಲಿ ೬೯ ವಿಭಾಗಗಳನ್ನು ಮಾಡಿ ಅವುಗಳಿಗೆ ಬೇಕಾದ ವಚನಗಳನ್ನು ಜೋಡಿಸಲಾಗಿದೆ.

ಈ ಸಂಕಲನದಲ್ಲಿ ಸೇರ್ಪಡೆಗೊಂಡ ಹಲವಾರು ವಚನಗಳು ನೂತನ ವಚನಗಳಾಗಿವೆ. ಇವು ಶರಣರ ಚರಿತ್ರೆಯನ್ನು ರೂಪಿಸಲು ಸಹಾಯಕವಾಗಿವೆ.

ಉದಾ : ಅಕ್ಕಮಹಾದೇವಿಯ ಈ ವಚನ ನೋಡಬಹುದು.

“ ಮೂರು ತಪ್ಪುಗಳ ಹೊರಿಸಿ ಬಂದವಳಿಗೆ
ಇನ್ನಾರ ಕೊಂಡು ಕೆಲಸವೇತಕ್ಕೆ ?
ಹೋಗದಿಹೆನೆ, ಹೋಗಿಹೆನೆ ಜ್ಞಾನಕ್ಕೆ ಹಾಗಿ
ಅರೆಗೋಣ ಕೊಯಿದವನಂತೆ ಇನ್ನೇವೆ
ಈ ಗುಣವ ಬಿಡಿಸಾ ಎನ್ನ ದೇವ
ಚನ್ನಮಲ್ಲಿಕಾರ್ಜುನಾ “ (ವ–೨೩೩)

ಈ ವಚನ ಅಕ್ಕಮಹಾದೇವಿಯ ಜೀವನ ಚರಿತ್ರೆಯ ಮೇಲೆ ಗಾಢವಾದ ಬೆಳಕನ್ನು ಚೆಲ್ಲತ್ತದೆ. ಆಕೆ ಮೂರು ಕರಾರುಗಳು ಮುರಿದು ಬೀಳುತ್ತಲೇ ಕೌಶಿಕನನ್ನು ತೊರೆದು ಹೋದಳು ಎಂಬುದು ಈ ವಚನದಿಂದ ಸ್ಪಷ್ಟವಾಗುತ್ತದೆ.

ಇದು ೨೭೯ ವಚನಗಳಿಂದಾದ ಸಂಕಲನ, ಇವುಗಳಲ್ಲಿ ೧೭೦ ಹೊಸ ವಚನಗಳು ಈವರೆಗೆ ಎಲ್ಲಿಯೂ ಪ್ರಕಟವಾಗಿಲ್ಲ. ಹಲವಾರು ಹೊಸ ಅಂಕಿತಗಳು ಈ ಕೃತಿಯ ಮೂಲಕ ಬೆಳಕು ಕಾಣುತ್ತಿವೆ.[೬೮]

ಈ ವಚನಗಳು ಬಹಳಷ್ಟು ಹೊಸ ವಿಚಾರಗಳನ್ನು ಮೈಗೂಡಿಸಿಕೊಂಡಿವೆ.

ಉದಾ : ಸನ್ಯಾಸ ನಿರಸನದ ಕುರಿತು ಆನಂದ ಸಿದ್ಧೇಶ್ವರ ಅಂಕಿತದ ವಚನಕಾರನ ವಚನ

“ ಕಂಗಳ ಸುಖ ಕರ್ಮವೆಂಬುದನರಿಯರು
ಕಿವಿಯ ಸುಖ ಕೇಡೆಂಬುದನರಿಯರು
ನಾಸಿಕದ ಸುಖ ನಷ್ಟವೆಂಬುದನರಿಯರು
ಬಾಯ ಸುಖ ಭ್ರಮೆಯೆಂಬುದನರಿಯರು
ಕಚ್ಚೆಯ ಸುಖ ಹುಚ್ಚೆಂಬುದನರಿಯರು
ಇಂತಪ್ಪ ವಿಷಯಾಬ್ಧಿಯೊಳಗೆ ಮುಳುಗಿದವರುಗಳ
ಎನ್ನತ್ತ ತೋರದಿರು ಆನಂದ ಸಿದ್ಧೇಶ್ವರ “(ವ–೪೨)

ಈ ವಚನ ಶರಣನ ಸನ್ಯಾಸ ಜೀವನ ಹೇಗಿರಬೇಕೆಂಬುದನ್ನು ಸರಳ ಸುಂದರವಾಗಿ ವಿವರಿಸುತ್ತದೆ. ಈ ಸಂಕಲನದಲ್ಲಿಯ ಬಹುತೇಕ ಎಲ್ಲಾ ವಚನಗಳು ಸಹ ಬಹಳ ಸರಳವಾಗಿವೆ. ಶರಣನ ಚಾರಿತ್ರ ಹೇಗಿರಬೇಕೆಂಬುದನ್ನು ವಿವೇಚಿಸುತ್ತ, ಇಡೀ ಸಂಕಲನ ಷಟ್‌ಸ್ಥಲ ಪರಿಕಲ್ಪನೆಯನ್ನು ಒಳಗೊಂಡಿದೆ.

---

೬೮. ಬಿ.ವಿ. ಶಿರೂರ (ಸಂ) ‘ಶರಣ ಚಾರಿತ್ರದ ವಚನಗಳು’, ಪ್ರ.ಪುಟ – ೮

೧೧. ಶಂಕರ ದೇವರು ಸೇರಿಸಿದ
ವಿರತಾಚರಣೆಯ, ಶರಣ ಸಂಬಂಧದ ವಚನಗಳು

ಈ ಗ್ರಂಥದಲ್ಲಿ ಕೆಲವೊಂದು ತಾತ್ವಿಕ ನೆಲೆಗಟ್ಟುಗಳ ಮೇಲೆ ಧಾರ್ಮಿಕ ವಿಧಿ, ನಿಷೇದ ತತ್ವಗಳ ಬೋಧನೆಗಾಗಿ ಬಸವಾದಿ ಶರಣರ ವಚನಗಳು ಸಂಕಲಿತವಾಗಿವೆ. ಕ್ರಿಯೆಯ ವಿಧಿ ನಿಷೇಧಗಳು ಆಚರಣೆಯ ವಚನಗಳಲ್ಲೂ, ಜ್ಞಾನದ ಸುಳುಹು – ಹೊಳಹುಗಳು ಸಂಬಂಧದ ವಚನಗಳಲ್ಲೂ ಹೃದಯಂಗಮವಾಗಿ ಬೋಧಿತವಾಗಿವೆ. ಗ್ರಂಥಾರಂಭದಲ್ಲಿ ದೊರೆಯುವ ಕಂದ ಪದ್ಯದಲ್ಲಿ ವಿರತಾಚರಣೆಯ ಕ್ರಿಯೆಯಿಂದ ತ್ರಿವಿಧ ಮಲ ನಿವೃತ್ತಿಯೂ, ಶರಣ ಸಂಬಂಧದ ಜ್ಞಾನದಿಂದ ನಿಷ್ಕಲ ಶಿವತತ್ವ ಜ್ಞಾನಾಸಕ್ತಿ ಪೂರ್ವಕ ಅವಿರಳ ಲಿಂಗೈಕ್ಯವೂ ಉಂಟಾಗುವುದೆಂದು ಹೇಳಲಾಗಿದೆ. ಇಡೀ ಸಂಕಲನದಲ್ಲಿ ಅಡಕವಾದ ಎಲ್ಲಾ ವಿಷಯಗಳನ್ನು ಸಂಗ್ರಹ ರೂಪದಲ್ಲಿ ಈ ಕಂದ ಪದ್ಯ ತಿಳಿಸುತ್ತದೆ.

ಶಂಕರ ದೇವರು ಸೇರಿಸಿದ 'ವಿರತಾಚರಣೆಯ, ಶರಣ ಸಂಬಂಧದ ವಚನಗಳು' ಎಂಬ ಈ ಸಂಕಲನದ ಹೆಸರೇ ಹೇಳುವಂತೆ ಈ ಕೃತಿಯ ಕರ್ತೃ ಶಂಕರದೇವನೇ ಆಗಿದ್ದಾನೆ. ಈ ಕೃತಿ ಎರಡು ಭಾಗವನ್ನು ಹೊಂದಿದೆ. ಒಂದು ವಿರತಾಚರಣೆಯ ವಚನಗಳು, ಎರಡು ಶರಣ ಸಂಬಂಧದ ವಚನಗಳು.

ವಿರತಾಚರಣೆಯ ವಚನಗಳು

ಇದರಲ್ಲಿ ಶರಣನಾದವನು ಬದುಕಿನಲ್ಲಿ ದೂರಗೊಳಿಸಬೇಕಾದ ದುರಾಚಾರಗಳನ್ನು, ಸ್ವೀಕರಿಸಬೇಕಾದ ಸದಾಚಾರಗಳನ್ನು ವಿವರಿಸುತ್ತದೆ. ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕಾದರೆ ಶರಣನು ಮನದ ಮಲಿನತೆಯನ್ನು ಕಳೆದುಕೊಳ್ಳಬೇಕು. ಸಾಕಾರ ನಿರಾಕಾರ ಸಂಕೇತವಾದ ಲಿಂಗವು ಶಿವನ ಮೂರ್ತ ಸ್ವರೂಪವನ್ನು ಸೂಚಿಸುತ್ತದೆ. ಲಿಂಗವು ಪ್ರಕೃತಿಯೂ ಅಲ್ಲ, ಪ್ರತೀತವೂ ಅಲ್ಲ. ಆದರೆ ಪರಮಾತ್ಮನಾದ ಶಿವನನ್ನೇ ಸಾಕ್ಷಾತ್ತಾಗಿ ಸೂಚಿಸುವ ಒಂದು ಸಂಕೇತ. ಅಂತಹ ಲಿಂಗವನ್ನು ಭಯ, ಭಕ್ತಿ, ವಿನಯ, ಸದ್ಭಾವನೆಗಳಿಂದ ಅಂಗದ ಮೇಲೆ ಧರಿಸಿ ಆಚರಣೆಯ ಕ್ರಿಯೆಯಲ್ಲಿ ತೊಡಗಬೇಕು. ಶರಣನು ಭಕ್ತ ಮುಂತಾದ ಸ್ಥಲಗಳ ಮೂಲಕ ನಡೆದು ಐಕ್ಯ ಸ್ಥಿತಿಯನ್ನು ಪಡೆಯುತ್ತಾನೆ. ಹೀಗೆ ಅಂಗನು ಆಚರಣೆಯ (ಸಾಧನೆ) ಮೂಲಕ ಕ್ರಮವಾಗಿ ಐಕ್ಯ ಸ್ಥಿತಿಯನ್ನು ಪಡೆದು ಲಿಂಗವಾಗುವುದನ್ನು 'ವಿರತಾಚರಣೆಯ ವಚನಗಳು' ಎಂಬಲ್ಲಿ ವಿವರಿಸಲಾಗಿದೆ.

ವಿರತಾಚರಣೆಯಲ್ಲಿ ಸೇರಿಸಿದ ವಚನಗಳು ಅಂಗಸ್ಥಲಕ್ಕೆ ಸಂಬಂಧಪಟ್ಟವುಗಳಾಗಿವೆ. ಲಿಂಗ ಧರಿಸಿ ಲಿಂಗವೇ ಆಗುವ ತತ್ವವೇ ಆಚರಣೆ. ಈ ತತ್ವಗಳನ್ನು ಪ್ರತಿಪಾದಿಸುವ ವಚನಗಳೇ ಆಚರಣೆಯ ವಚನಗಳು. ಆಚರಣೆಗೆ ಸಂಬಂಧಿಸಿದ ೩೧ ಸ್ಥಲಗಳನ್ನು ವಿವರಿಸಲು ೩೪ ಜನ ವಚನಕಾರರ ೧೭೫ ವಚನಗಳನ್ನು ಬಳಸಿಕೊಳ್ಳಲಾಗಿದೆ.

---

೬೯. ಪಿ.ಎಂ.ಗಿರಿರಾಜು (ಸಂ) 'ಶಂಕರದೇವರು ಸೇರಿಸಿದ ವಿರತಾಚರಣೆಯ ಶರಣ ಸಂಬಂಧದ ವಚನಗಳು', ಮುನ್ನುಡಿ ಪುಟ – ೮

ಗ್ರಂಥಾರಂಭದಲ್ಲಿ ಒಂದು ಕಂದ ಪದ್ಯವಿದೆ. ನಂತರ ಗುರುವಿನ ಸ್ತೋತ್ರದಿಂದ ಕೃತಿ ಆರಂಭವಾಗುತ್ತದೆ. ತ್ರಿವಿಧಾಂಗ ಲಿಂಗ ಸಂಬಂಧ ಸ್ಥಲದಲ್ಲಿ ಮುಕ್ತಾಯವಾಗುತ್ತದೆ. ಬಸವ, ಅಲ್ಲಮ, ಚನ್ನಬಸವಣ್ಣ, ಆನಂದಸಿದ್ದದೇವ, ಮೋಳಿಗೆಮಾರಯ್ಯ, ಉರಿಲಿಂಗದೇವ ಮುಂತಾದ ವಚನಕಾರರ ವಚನಗಳನ್ನು ಬಳಸಿಕೊಳ್ಳಲಾಗಿದೆ.

ಇಲ್ಲಿಯ ಪ್ರತಿಯೊಂದು ಸ್ಥಲಗಳನ್ನು ವಿಶ್ಲೇಷಿಸುವ ಗೊಡವೆಗೆ ಹೋಗದೆ 'ಜಡಲಾಂಛನ ನಿರಸನ ಸ್ಥಲ'ದ ಒಂದು ವಚನವನ್ನು ಇಲ್ಲಿ ಉದಾಹರಿಸಲಾಗಿದೆ.

"ಅದ್ವೈತವ ಹೇಳುವ ಹಿರಿಯರೆಲ್ಲರು ದ್ವೈತಕ್ಕೆ ಒಳಗಾದರು.
ನಿಸ್ಸಂಸಾರವ ಹೇಳುವ ಹಿರಿಯರೆಲ್ಲರು ಸಂಸಾರವ ಚಪ್ಪರಿದು ಕೆಟ್ಟರು
ಭಕ್ತರಿಗೆ ನಿತ್ಯವಲ್ಲವೆಂದು ಹೇಳಿ
ತಾ ನಿತ್ಯ ಅನಿತ್ಯವ ಹಿಡಿದು ಪಾಶಕ್ಕೆ ಸಿಕ್ಕಿ ಪಾಷಂಡಿಯಾಗಿ ಸತ್ತುದನರಿಯದೆ
ನಾವು ಮುಕ್ತರಾದವೆಂಬ ಭಷ್ಟರ ನೋಡಾ
ನಿಃಕಳಂಕ ಮಲ್ಲಿಕಾರ್ಜುನ " (ವ-೨೨)

ಈ ವಚನಕ್ಕೆ ವಿವರಣೆಯ ಅಗತ್ಯವಿಲ್ಲ. ಅದು ಹೇಳಬೇಕಾದುದನ್ನೆಲ್ಲ ಸರಳವಾಗಿ ಹೇಳಿದೆ. ಭಕ್ತರ ನಡೆ ನುಡಿ ಯಾವತ್ತೂ ಒಂದಾಗಿರಬೇಕು. ಭಕ್ತ ಯಾವತ್ತೂ ಶುದ್ಧಾತ್ಮನಾಗಿಯೇ ಇರಬೇಕು. ಇಲ್ಲದಿದ್ದರೆ ಅವರಿಗೆ ಮುಕ್ತಿಯ ದಾರಿ ಮುಚ್ಚುವುದು ಜಗದಲ್ಲಿ ನಡೆ ನುಡಿ ಭಿನ್ನವಾದ ಭ್ರಷ್ಟರೇ ತುಂಬಿಕೊಂಡಿದ್ದಾರೆ ಎಂಬ ವಿಷಾದವಿದೆ ವಚನದಲ್ಲಿ.

ಶರಣ ಸಂಬಂಧದ ವಚನಗಳು

ಶರಣ ಸಂಬಂಧದ ವಚನಗಳು ಲಿಂಗಸ್ಥಲಕ್ಕೆ ಸಂಬಂಧ ಪಟ್ಟವುಗಳಾಗಿವೆ. ಇಲ್ಲಿ ಅಂಗ ಲಿಂಗ ಸಂಬಂಧವನ್ನು ಷಟ್‌ಸ್ಥಲ ಸಮ್ಮತವಾಗಿ ನಿರೂಪಿಸುತ್ತವೆ. ಅಂಗವು ಲಿಂಗವಾದಾಗ ಅವನನ್ನು ಶರಣನೆಂದು ಕರೆಯುತ್ತಾರೆ. ಈ ಕೃತಿಯು ಶರಣನಾದವನು ಸಂಬಂಧ ಪಡೆಯಬೇಕಾದ ಷಟ್‌ಸ್ಥಲ, ಅಷ್ಟಾವರಣಗಳನ್ನು ನಿರೂಪಿಸಿ, ಲಿಂಗಾಂಗ ಸಾಮರಸ್ಯದ ಕಡೆಗೆ ಶರಣನನ್ನು ಕೊಂಡೊಯ್ಯುತ್ತವೆ.

ಶರಣನು ಈ ಸಾಧನೆಯಲ್ಲಿದ್ದಾಗ ಹೆಣ್ಣು, ಹೊನ್ನು, ಮಣ್ಣು ಎನ್ನದೆಂದು ಹೋರಾಡಿ ಬದುಕನ್ನು ನಷ್ಟ ಮಾಡಿಕೊಳ್ಳದೆ, ಸರ್ವಕ್ಕೂ ಕರ್ತೃ ಶಿವನೆಂದರಿಯಬೇಕು. ಸರ್ವ ಸಂಪತ್ತಿಗೂ ಆತನೇ ಒಡೆಯನೆಂದು ಭಾವಿಸಬೇಕು. ಶರಣನ ಬದುಕಿನ ನಿಜ ತತ್ವಗಳನ್ನು ಅರಿವುದೇ ಇಲ್ಲಿಯ ಸ್ಥಲಗಳ ಮತ್ತು ವಚನಗಳ ಮೂಲ ಉದ್ದೇಶ. ಈ ಸ್ಥಲಗಳ ಆರಂಭದಲ್ಲಿ ಅಜ್ಞಾನ ನಾಶಕ್ಕೆ ಒಂದೇ ಸಮನೆ ಪರಿತಪಿಸಿ ದೇವರ ಅನುಗ್ರಹಕ್ಕೆ ಹಾತೊರೆಯುವ ಹಂಬಲ ಕಂಡುಬರುತ್ತದೆ. ಇಲ್ಲೆಲ್ಲ ಗುರುಕಾರುಣ್ಯ, ಶಿವಕಾರುಣ್ಯ ಕಂಡುಬರುತ್ತದೆ.

ಪರಶಿವನೇ ಗುರುವಾಗಿ ಬಂದು ಶರಣನ ಅಂಗದ ಮೇಲೆ ಇಷ್ಟಲಿಂಗ, ಆತ್ಮಕ್ಕೆ ಪ್ರಾಣಲಿಂಗ, ಭಾವಕ್ಕೆ ಭಾವಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಮಂತ್ರೋಪದೇಶಮಾಡಿ ಪ್ರಸಾದಕಾಯನನ್ನಾಗಿಸುತ್ತಾನೆ. ಸುಜ್ಞಾನ, ಸದಾಚಾರ, ಸಚ್ಚಾರಿತ್ರ, ಸತ್‌ಶೀಲ, ಸುನೀತಿಯ ನಡೆ ನುಡಿಗಳನ್ನು ಬೋಧಿಸಿ, ಗುರುಲಿಂಗ ಜಂಗಮರಲ್ಲಿ, ಭಕ್ತ – ಶರಣರಲ್ಲಿ ನಿಷ್ಠೆ ಬೆಳೆಯುವಂತೆ ಮಾಡುತ್ತಾನೆ. ಅದರಲ್ಲಿ ನಡೆದ ಶರಣನು ಸಾಧಕನ ಸ್ಥಿತಿಯಿಂದ ಮೇಲೇರುತ್ತಾ ಲೋಕದ ತಾಪತ್ರಯ, ಅರಿಷಡ್ವರ್ಗ, ದ್ವೈತ-ಅದ್ವೈತ

ಭಾವ, ಅಹಂಭಾವಗಳನ್ನು ನೀಗಿಕೊಂಡು, ಕ್ರಿಯಾ ಜ್ಞಾನ ಸಮರಸಗೊಂಡು ದೇಹ ನಿರ್ದೇಹವಾಗಿ ಲಿಂಗಾಂಗ ಸಾಮರಸ್ಯ ಪಡೆದು ವಿಶ್ವಕುಟುಂಬಿಯಾಗುತ್ತಾನೆ.

ತ್ರಿವಿಧ ಲಿಂಗಾಂಗ ಸಂಬಂಧ ಸ್ಥಲಕ್ಕೆ ಉದಾರಣೆ

"ಅಂಗ ಲಿಂಗವ ವೇಧಿಸಿ ಅಂಗ ಲಿಂಗದೊಳಗಾಯಿತ್ತು
ಮನ ಲಿಂಗವ ವೇಧಿಸಿ ಮನ ಲಿಂಗದೊಳಗಾಯಿತ್ತು
ಭಾವ ಲಿಂಗವ ವೇಧಿಸಿ ಭಾವ ಲಿಂಗದೊಳಗಾಯಿತ್ತು.
ಚನ್ನಮಲ್ಲಿಕಾರ್ಜುನ ನಿಮ್ಮ ಒಲುಮೆಯ ಸಂಗದೊಳಗಿರ್ದು
ಸ್ವಯಂ ಲಿಂಗವಾಯಿತ್ತು "(ಪುಟ – ೪೩, ವ – ೮)

ಹೀಗೆ ಶರಣನಾದವನು ಗುರುಲಿಂಗ, ಜಂಗಮಗಳ ಬೆಳಗಿನಲ್ಲಿ ಸಾಗಿ ಅಜ್ಞಾನದ ಕತ್ತಲೆ ಕಳೆದು ಅಂಗ ಲಿಂಗವಾಗಿ, ಲಿಂಗವೇ ಅಂಗವಾಗಿ ದ್ವೈತಾದ್ವೈತ, ತನು, ಮನ, ನೆನಪು, ಭಾವ, ಜ್ಞಾನಗಳು, ಭ್ರಾಂತಿ ಸೂತಕಗಳ ಕಳೆದುಕೊಂಡು ನಿರ್ದೇಹನಾಗಿ ನಿಜವನರಿಯುತ್ತಾನೆ. ಶಿವನ ಕರಸೋಂಕಿನಿಂದ ತನು ಬಯಲಾಗಿ, ಎಲ್ಲವನ್ನು ಅವನಿಗೊಪ್ಪಿಸಿದ್ದರಿಂದ ಪಂಚೇಂದ್ರಿಯಗಳು ಬಯಲಾಗಿ, ಅಂತರಂಗದಲ್ಲಿ ಜ್ಞಾನ ಜ್ಯೋತಿ ಬೆಳಗಿದ ಕಾರಣ ಒಳಗು ಬಯಲಾಗಿ, ಸಂಸಾರ ಸಂಗವನ್ನು ಮೀರಿದ್ದರಿಂದ ಹೊರಗೂ ಬಯಲಾಗಿ ನಿರಾಲಂಬ ಸ್ಥಿತಿಯನ್ನು ಪಡೆಯುತ್ತಾನೆ.

' ಅಪ್ಪುವನಪ್ಪಿದ ವಾರಿ ಕಲ್ಲಿನಂತೆ
ವಾಯುವನಪ್ಪಿದ ಪರಿಮಳದಂತೆ
ಅನಲವನಪ್ಪಿದ ಕರ್ಪೂರದಂತೆ
ಲಿಂಗವನಪ್ಪಿದ ಶರಣನ ದೇಹಿ ಎನಬಹುದೆ ? ಬಾರದಯ್ಯ" (ಪುಟ–೬೦,ವ–೧೧೦)

ಸ್ವಲೀಲಾನಂದ ಪಡೆದ ಶರಣನು ಶೂನ್ಯಲಿಂಗ ಸಂಬಂಧವನ್ನು ಪಡೆದು ಬಯಲಾಗುತ್ತಾನೆ. (ಪು–೬೧, ವ–೧೧೮೧) ಅಂಗನಾದ ಶರಣನು ಲಿಂಗಾಂಗ ಸೃಷ್ಟಿ ನಿಜೈಕ್ಯಸ್ಥಲ ಸ್ಥಿತಿಯನ್ನು ಪಡೆಯಲು ಶ್ರದ್ಧೆ, ನಿಷ್ಠೆ, ಭಕ್ತಿ, ಚಿತ್ತ, ಶುದ್ಧಿ ಏಕಾಗ್ರತೆ ಅವಶ್ಯ. ಅನುಷ್ಠಾನಕ್ಕೆ ತರಲು ಅನುಭಾವ ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಅಷ್ಟಾವರಣವೇ ಅಂಗವೆಂದೂ ಪಂಚಾಚಾರಗಳೇ ಪ್ರಾಣವೆಂದೂ, ಷಟ್‌ಸ್ಥಲಗಳೇ ಆತ್ಮವೆಂದು ನಿರೂಪಿಸಿ ಆಚರಿಸುವ ವಚನಗಳೇ ಶರಣ ಸಂಬಂಧದ ವಚನಗಳು.

ಇಲ್ಲಿ ಸಂಗ್ರಹಿಸಿದ ೧೨೬ ವಚನಗಳನ್ನು ೨೪ ಸ್ಥಲಗಳಲ್ಲಿ [೨೦] ವಿಂಗಡಿಸಲಾಗಿದೆ. ಶರಣ ಸಂಬಂಧದ ವಚನಗಳು ಈ ಭಾಗದಲ್ಲಿ ಎಡೆ ಪಡೆದ ಚನ್ನಬಸವಣ್ಣನ ವಚನಗಳಲ್ಲಿ ಕ್ರಮ ಸಂಖ್ಯೆ ೭೦ ಮತ್ತು ೮೯ ನೆಯ ವಚನಗಳು ಒಂದೇ ಆಗಿವೆ. ಹಾಗಾಗಿ ಈ ಸಂಕಲನ ೩೦೦ ವಚನಗಳ ಒಂದು ಕಟ್ಟಾಗಿದೆ. ಈ ಸಂಕಲನವನ್ನು ಸಂಕಲಿಸಿದ ಶಂಕರದೇವರ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಆದರೆ ವಿರತಾಚರಣೆಯ ವಚನಗಳು ಭಾಗದ ವಚನಗಳಲ್ಲಿ ೯೨,

---

೭೦. ಪಿ.ಎಂ. ಗಿರಿರಾಜು (ಸಂ) 'ಶಂಕರದೇವರು ಸೇರಿಸಿದ ವಿರತಾಚರಣೆಯ ಸಂಬಂಧದ ವಚನಗಳು', ಮುನ್ನುಡಿ ಪುಟ – ೯

೯೩ ನೇ ವಚನಗಳು ತೋಂಟದ ಸಿದ್ಧಲಿಂಗರ ವಚನಗಳಾಗಿವೆ. ಹಾಗಾಗಿ ಶಂಕರದೇವ ತೋಂಟದ ಸಿದ್ಧಲಿಂಗರ ಕಾಲದ ನಂತರದವನು ಎಂದು ಭಾವಿಸಬಹುದು. ಇವನ ಮೇಲೆ ಸರ್ವಪುರಾತನರ ವಚನಗಳು, ಗಣಭಾಷಿತರತ್ನ ಮಾಲೆ, ಲಿಂಗಲೀಲಾವಿಲಾಸ ಚಾರಿತ್ರ, ಕೃತಿಗಳು ಪ್ರಭಾವ ಬೀರಿವೆ.

ಕೃತಿಯ ಸ್ಥಲ ವಿಭಜನೆ ವಸ್ತು ಆಯ್ಕೆ ಮಾಡಿಕೊಂಡಿರುವ ವಚನಗಳ ಬಿಗಿ, ಅಚ್ಚುಕಟ್ಟು, ಮನೋಧರ್ಮಗಳನ್ನು ನೋಡಿದರೆ ಶಂಕರದೇವನು ಪರಮ ಸಲ್ಲಕ್ಷಣ ಭರಿತನಾದ ಸರ್ವ ಸಂಗ ಪರಿತ್ಯಾಗಿಗಳಾದ ವೀರವಿರಕ್ತನಾಗಿದ್ದ ಎಂದು ಊಹಿಸಬಹುದು. ಇಡಿ ಸಂಕಲನ ಒಟ್ಟು ೫೫ ಸ್ಥಲ, ೩೦೧ ವಚನಗಳ ವಿಸ್ತೃತ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಷಟ್‌ಸ್ಥಲ ಪೂರ್ವ, ಷಟ್‌ಸ್ಥಲ ಮತ್ತು ಷಟ್‌ಸ್ಥಲೋತ್ತರಗಳನ್ನು ಇಟ್ಟುಕೊಂಡು ಅವುಗಳನ್ನು ಒಡೆದು ಒಡೆದು ೫೫ ಸ್ಥಲಗಳನ್ನು ನಿರ್ಮಿಸಿ ಅವುಗಳಿಗೆ ಬೇಕಾದ ವಚನಗಳನ್ನು ಆರಿಸಿ ಸಂಗ್ರಹಿಸಿದ ವೈವಿಧ್ಯಮಯವಾದ ಈ ಸ್ಥಲ ಪರಿಕಲ್ಪನೆ ಹೊಸದೆನಿಸುತ್ತದೆ.

೧೨. ಜಂಗಮ ಸ್ಥಲದ ಆಚರಣೆಯ ನಿರ್ಣಯದ ವಚನಗಳು

*ಅಜ್ಞಾತ ಸಂಕಲನಕಾರ

ಈ ಸಂಕಲನ ಜಂಗಮರು ಆಚರಿಸಬೇಕಾದ ಆಚರಣೆಗಳನ್ನು ವಿವರಿಸುತ್ತದೆ. ಸಂಪಾದನೆಯ ಬೋಳಬಸವನ 'ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಶರಣರ ಚಾರಿತ್ರದ ವಚನಗಳು'. ಸಣ್ಣ ಬರಹದ ಗುರು ಬಸವರಾಜರು ಸೇರಿಸಿದ 'ಶರಣ ಚಾರಿತ್ರದ ವಚನಗಳು', ಶಂಕರದೇವರು ಸೇರಿಸಿದ 'ವಿರತಾಚರಣೆಯ ಶರಣ ಸಂಬಂಧದ ವಚನಗಳು', ಸಂಪಾದನೆಯ ಸಿದ್ಧವೀರಣ್ಣೊಡೆಯರ 'ಆಚರಣೆಯ ಸಂಬಂಧದ ವಚನಗಳು', ಎಂಬ ಸಂಕಲಗಳು ಒಂದೇ ರೀತಿಯ ವಸ್ತುವನ್ನು ಒಳಗೊಂಡಿವೆ. ಶರಣರ ಅಥವಾ ವಿರಕ್ತರ ಚಾರಿತ್ರ, ಅವರು ಆಚರಿಸಬೇಕಾದ ಆಚರಣೆ, ತಲುಪಬೇಕಾದ ಗುರಿಗಳನ್ನು ಕೇಂದ್ರೀಕರಿಸಿಕೊಂಡು ರಚನೆಯಾಗಿವೆ. ಅಂತಹದೆ ವಸ್ತುವನ್ನೊಳಗೊಂಡ ಮತ್ತೊಂದು ಸಂಕಲನ 'ಜಂಗಮ ಸ್ಥಲದ ಆಚರಣೆಯ ನಿರ್ಣಯದ ವಚನಗಳು', ಸಂಕಲನದ ಹೆಸರೇ ಹೇಳುವಂತೆ ಇದು ಜಂಗಮ, ಜಂಗಮತ್ವಗಳ ಲಕ್ಷಣ, ಅವರ ಆಚರಣೆ ಹಾಗೂ ಜಂಗಮ ಮಹತ್ವಗಳನ್ನು ವಿವರಿಸುತ್ತದೆ.

ಜಂಗಮದ ಲಕ್ಷಣವೆಂದರೆ ಕಾಯದ ಮಾಯೆ, ಮನ ಮಲೀನ, ಜಗದ ಜಂಜಡ, ಜೀವನ ಮೋಹ ಮುಂತಾದವುಗಳನ್ನು ಅಲ್ಲಗಳೆದು, ಜಗದ ಹುಟ್ಟು ಸಾವುಗಳಿಗೆ ಮೂಲವಾಗಿರುವ, ಜೀವಕ್ಕೂ ಜೀವವಾಗಿರುವ ಪರಾತ್ಪರ ಪರಮನೇ ತಾನೆಂದು ಅರಿವು ಮೂಡಿದಾಗ ಅದುವೇ ಜಂಗಮದ ನಿಲುವು. ಆತ ಜಂಗಮನಾಗಿ ಜಗದ್ಭರಿತನಾಗುತ್ತಾನೆ. ಆತನಿಗೆ ಬಾಹ್ಯ ಪ್ರಪಂಚದ ಸೋಂಕು ಸನಿಹ ಬರುವುದಿಲ್ಲ, ಜನನ, ಮರಣ, ಸುಖ, ದುಃಖಗಳಿಗೆ ಹೊರತಾಗಿರುತ್ತಾನೆ.

ಜಕಾರಂ ಜನನಂ ನಾಸ್ತಿ, ಗಕಾರಂ ಗಮನ ವರ್ಜಿತಂ
ಮಕಾರಂ ಮರಣಂ ನಾಸ್ತಿ, ಏತದ್ಭವೇ ಜಂಗಮಂ

ಜಂಗಮಕ್ಕೆ ಅಖಂಡ, ಪರಿಪೂರ್ಣ ನಿಜಾಚರಣೆ ಮೈಗೂಡಿರಬೇಕು. ಅಖಂಡ ವೈರಾಗ್ಯ ಮೈವೆತ್ತಿರಬೇಕು. ದೇವ ಜೀವನ ಏಕತ್ವವರಿದು ಬಂಗಾರದಲ್ಲಿ ಬಣ್ಣವಿದ್ದಂತೆ, ಹೂವಿನಲ್ಲಿ ಪರಿಮಳವಿದ್ದಂತೆ, ಕರ್ಪೂರವುಂಡ ಅನಲನಂತೆ ಒಂದಾಗಿ ಭಿನ್ನ ಭೇದವನ್ನು ಮರೆತು, ಕಾಲ, ಕರ್ಮಪಾಶ ಪರಿಹರಿಸಿಕೊಂಡು ಲೋಕಪಾವನ ವಿನೋದಕ್ಕೆ ಸಂಚರಿಸುವುದು. ಅಲ್ಲಿ ತಾನೇ ತಾನಾಗಿರುವ ಸ್ಥಿತಿ ಇರುತ್ತದೆ.

ಜಂಗಮ ಗುರು ಲಿಂಗಕ್ಕಿಂತ ಶ್ರೇಷ್ಠನಾದವನು. ಜಂಗಮನ ನಿಂದೆ ಕೂಡದು. ಜಂಗಮನ ಚರಣ ತೀರ್ಥ ಲಿಂಗಕ್ಕೆ ಎರೆಯಬಹುದು. ಆದರೆ ಲಿಂಗ ತೀರ್ಥವನ್ನು ಜಂಗಮನಿಗೆ ಕೊಡುವ ಹಾಗಿಲ್ಲ. ಲಿಂಗಕ್ಕಿಂತ ಜಂಗಮ ಅಧಿಕನಾದವನು. ಇಂಥ ಜಂಗಮತ್ವದ ಚಾರಿತ್ರವನ್ನು ಬಸವಾದಿ ಶರಣರ ವಚನಗಳಲ್ಲಿ ಗುರುತಿಸಿ ಸಂಕಲನ ಕಾರ ಇಲ್ಲಿ ಸಂಗ್ರಹಿಸಿದ್ದಾನೆ.

ಸಂಕಲನಕಾರನ ಬಗ್ಗೆ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ, ಆತ ಅಜ್ಞಾತನಾಗಿಯೇ ಉಳಿದಿದ್ದಾನೆ. ಇದು ೩೪ ವಚನಗಳಿರುವ ಒಂದು ಚಿಕ್ಕ ಸಂಕಲನ ತೋಂಟದ ಸಿದ್ಧಲಿಂಗಯತಿಗಳ ವಚನಗಳು ಇಲ್ಲಿ ಸೇರಿರುವುದರಿಂದ ಈ ಸಂಕಲನ ಕೃತಿ ೧೬ ನೇ ಶತಮಾನದ ನಂತರದ್ದು ಎಂದು ನಿರ್ಧರಿಸಬಹುದಾಗಿದೆ.

ಕೃತಿಯ ಮೊದಲ ಮೂರು ವಚನಗಳಲ್ಲಿ ಮಹಾಂತನಾದ ಪರಶಿವನ ಮಹಿಮೆ, ಶಕ್ತಿಯನ್ನು ಹೇಳಿ, ಅವನನ್ನು ಅರಿಯಲು ಸಾಮಾನ್ಯರಿಂದ ಸಾಧ್ಯವಿಲ್ಲವೆನ್ನುವ ವಿಷಯ ಪ್ರಸ್ತಾಪವಾಗಿದೆ. ಅವನನ್ನು ಅರಿಯಬೇಕಾದರೆ ವೀರಶೈವಾಚಾರಗಳಲ್ಲಿ, ಭಕ್ತಿ, ಜ್ಞಾನ, ವೈರಾಗ್ಯದ ಆಚಾರದನುಭವಗಳನ್ನು, ಷಟ್‌ಸ್ಥಲ ಮಹತ್ವವನ್ನು ತಿಳಿಯಬೇಕು. ಅವುಗಳ ಮಹತ್ವ ತಿಳಿಯದ ವೇಷಧಾರಿ ಜಂಗಮರ, ವಿರಕ್ತರ, ಮಂದಮತಿಗಳ ಅಜ್ಞಾನಿಗಳ ಮುಖವನ್ನು ನೋಡಬಾರದು ಎನ್ನುತ್ತಾರೆ ವಚನಕಾರರು.

"ಕತ್ತೆಗೇಕಯ್ಯಾ ಕಡಿವಾಣ, ತೊತ್ತಿಂಗೆ ತೋಳಬಂದಿಯೇತಕಯ್ಯ ?
ಶ್ವಾನಗೇಕೆ ಆನೆಯ ಚೋಹ, ಹಂದಿಗೇಕೆ ಚಂದ್ರಾಯುಧವಯ್ಯಾ ?
ಶಿವನಿಷ್ಠೆಯಿಲ್ಲದವರಿಗೆ ವಿಭೂತಿ ರುದ್ರಾಕ್ಷಿ ಗುರುಲಿಂಗ ಜಂಗಮ ಪಾದೋದಕ ಪ್ರಸಾದ
ಶಿವಮಂತ್ರ ಶಿವಲಿಂಗವೆಂಬ ಶಿವಾಚಾರವೇತಕಯ್ಯಾ ?
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ ?" (ವ-೩೦)

ಒಂದೇ ಮೂರ್ತಿ ಮೂರು ಭಾಗ ಎಂಬಂತೆ ಗುರು ಲಿಂಗ ಜಂಗಮರಿದ್ದಾರೆ.[೭೧] ಅವರನ್ನು ಅರಿಯದೆ, ನಾನೇ ದೇವರೆಂದು ವೇಷಧರಿಸಿ ಬೀಗುತ್ತ ಮನೆ ಮನೆಗೆ ಹೋಗಿ ಕಾಡಿ ಬೇಡಿ ಪಡೆದು ಹೊಟ್ಟೆ ಹೊರೆವ ಇವರು ದಾನ ನೀಡಿದರೆ ಒಳ್ಳೆಯದೆಂದು, ಕೊಡದಿದ್ದರೆ ಪಾಪಿ, ಚಾಂಡಾಲ, ಅನಾಚಾರಿ ಎಂದು ದೂಷಿಸಿ ಒಳ ಹೊರಗೆಂದು ಬೊಗಳುವ ಇವರು ಗುರು ಲಿಂಗ ಜಂಗಮಗಳಿಗೆ ತನು ಮನ ಧನ ಸವೆಸದೆ ತಾವೇ ಪರಶಿವನ ಅವತಾರವೆಂದು ನುಡಿಯುತ್ತಾರೆ. ಶಿವನ ಅವತಾರವೇ ಆಗಿದ್ದರೆ ಮೂರು ಲೋಕದ ಕರ್ತನಂತೆ ಶಾಂತನಾಗಿರಬೇಕಿತ್ತು. ಪೃಥ್ವಿಯಂತೆ ಸರ್ವಜೀವಿಗಳ ಬಾರವ ತಾಳಿರಬೇಕಿತ್ತು. ಆದರೆ ಇವರು ಹಾಗಿಲ್ಲ.

---

೭೧. ಜನ್ಮ ಪಾಪ ನಾಶಕಗಳಾದ, ಇಂತಹ ಗುರು ಲಿಂಗ ಜಂಗಮ ಪೂಜೆಗಳೆಲ್ಲವೂ ಇಷ್ಟಲಿಂಗ ಪೂಜೆಯಲ್ಲಿಯೇ ಅಂತರ್ಭಾವಗೊಳ್ಳುತ್ತವೆಂದು ಅರಿದು ಅದರಂತೆ ಆಚರಿಸಬೇಕು.

"ಹಡಕ ಕಚ್ಚಿದ ಶ್ವಾನ ಒಡೆಯನ ಕುರುಹು ಬಲ್ಲುದೆ।
ಹೆಣ್ಣು ಹೊನ್ನು ಮಣ್ಣು ಕಚ್ಚಿದ ಮನುಜರು ನಿಮ್ಮನೆತ್ತ ಬಲ್ಲರಯ್ಯ
ನಿಮ್ಮನರಿಯದ ಮನುಜರು ನಾಯಕುನ್ನಿಗಿಂದಲು ಕರಕಷ್ಟ ನೋಡಾ
ನಿತ್ಯವ ಹಿಡಿಯದೆ ಅನಿತ್ಯವ ಹಿಡಿದು
ವ್ಯರ್ಥಕೆ ಸತ್ತವರ ನೋಡಿ ಹೇಸಿದೆನು ಕಾಣಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ " (ವ–೨೯)

ಇಂತಹ ಆಚಾರವಿಲ್ಲದ ಕೃತಕ ಜಂಗಮರಿಂದ ಪಾದೋದಕ ಪ್ರಸಾದವನ್ನು ಸ್ವೀಕರಿಸಬಾರದು.

"ಆಚಾರವಿಲ್ಲದ ಜಂಗಮದಲ್ಲಿ ಪಾದೋದಕ ಪ್ರಸಾದವ ಕೊಳಲಾಗದು ಆಚಾರವಿಲ್ಲದ
ಜಂಗಮವ ದೇವರೆಂದು ಭಾವಿಸಲಾಗದು ––" (ವ–೮)

"ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ ದೀಕ್ಷೆ ಉಪದೇಶಕೊಳ್ಳಲಾಗದು
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು.
ಕ್ರಿಯಾಚಾರವಿಲ್ಲದ ಭೂತ ಪ್ರಾಣಿಗಳಲ್ಲಿ ಜಂಗಮವೆಂದು
ಪಾದೋದಕ ಪ್ರಸಾದವ ಕೊಳಲಾಗದು
ಇಂತಪ್ಪ ಆಚಾರವಿಲ್ಲದ ಅನಾಚಾರವ ಬಳಸುವ ದುರಾಚಾರಿಗಳಲ್ಲಿ
ಉಪದೇಶ ಪಡೆದು, ಪಾದೋದಕ ಪ್ರಸಾದ ಕೊಂಡವಂಗೆ – –" (ವ–೧೪)

ಅಘೋರ ನರಕ ಪ್ರಾಪ್ತಿಯಾಗುತ್ತದೆ. ಹೀಗೆ ಅನೇಕ ವಚನಗಳು ವೇಷಧಾರಿ ಜಂಗಮರ ಕುರಿತಾಗಿಯೇ ಇವೆ. ಜಂಗಮರ ಆಚಾರ–ವಿಚಾರ, ಅನಾಚಾರಗಳ ಬಗ್ಗೆ ತಿಳಿಸುವಂತಹ ವಚನಗಳನ್ನೆ ಆರಿಸಿ ಸೇರಿಸಿದ ಸಂಕಲನ ಇದಾಗಿದೆ.

೧೩. ಕುಂತೂರ ಮಹತ್ತ ದೇವರು ಸೇರಿಸಿದ ಎಲ್ಲಾ ಪುರಾತರ ವಚನಗಳು

'ಕುಂತೂರು ಮಹತ್ತದೇವರು ಸೇರಿಸಿದ ಎಲ್ಲಾ ಪುರಾತರ ವಚನಗಳು' ಎಂಬ ಹೆಸರಿನಲ್ಲಿ ಆರಂಭಗೊಂಡ ಈ ವಚನ ಸಂಕಲನ 'ಆಚರಣೆಯ ವಚನಗಳು ಸಮಾಪ್ತಂ' ಎಂದು ಮುಕ್ತಾಯಗೊಂಡಿದೆ. ೪೪ ಜನ ವಚನಕಾರರ ೧೪೮ ವಚನಗಳನ್ನು ಇಲ್ಲಿ ಸಂಕಲಿಸಲಾಗಿದೆ. ಬಸವಣ್ಣನವರನ್ನು ಹೊರತುಪಡಿಸಿ, ಬೇಡರ ದಾಸಿಮಯ್ಯ ನಿಂದ ತೋಂಟದ ಸಿದ್ಧಲಿಂಗರ ವರೆಗಿನ ವಚನಕಾರರ ವಚನಗಳು ಇಲ್ಲಿ ಸೇರಿವೆ. ಒಬ್ಬೊಬ್ಬ ವಚನಕಾರನ ವಚನಗಳನ್ನು ಒಂದೆಡೆ ನೀಡಿದ್ದಾನೆ. ಇತರೆ ಸಂಕಲನಗಳಂತೆ ವಸ್ತುವಿಗನುಗುಣವಾಗಿ ವಚನಗಳನ್ನು ಆಯ್ಕೆ ಮಾಡಿಕೊಂಡು ಮಿಶ್ರಣ ಮಾಡಿಲ್ಲ, ಇಡೀ ಸಂಕಲನದಲ್ಲಿ ವಿರಕ್ತನ ಬದುಕು, ವಿರಕ್ತನ ನಡೆ, ನುಡಿ, ಆಚಾರ – ವಿಚಾರ, ಭಕ್ತಿ, ಶೀಲ ಚಾರಿತ್ರ್ಯಗಳನ್ನು ಕುರಿತು ಇಲ್ಲಿಯ ವಚನಗಳು ವಿವೇಚಿಸುತ್ತವೆ. ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಗುಣದಲ್ಲಿ ಅಮೂಲ್ಯ ವಚನಗಳೆನಿಸಿವೆ.

ಪೀಠಿಕೆಯಂತೆ ಕೃತಿಯ ಆರಂಭದಲ್ಲಿ ನಾಲ್ಕು ಶ್ಲೋಕಗಳಿವೆ. ಇವುಗಳಲ್ಲಿ ವಿರಕ್ತನ ಚಾರಿತ್ರ್ಯವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.

ಶ್ಲೋಕ : ೧ "ವಿಕಾರಂ ವಿಷಯ ದೂರಂ, ರ ಕಾರಂ ರಾಗವರ್ಜಿತಂ
ತಕಾರಂ ತ್ರಿಗುಣ ನಾಸ್ತಿ, ವಿರಕ್ತಸ್ಯಮಿಹೋಚ್ಯತೇ"

ಶ್ಲೋಕ : ೪ " ಸರ್ವಸಂಗ ಪರಿತ್ಯಾಗಿ, ಲಿಂಗ ಸಂಗ ನಿರಂತರಂ.
ಭಿಕ್ಷಾಹಾರ ಸಂಚಿತ್ತಂಚ ಕ್ರಿಯಾಬೋಳು ಸುಲಕ್ಷಣಂ"

ವಿರಕ್ತನಾದವನು ಕಾಮಾದಿ ವಿಷಯುಗಳಿಂದ ದೂರವಿರಬೇಕು. ರಾಗ ದ್ವೇಷಗಳಿಂದ ಮುಕ್ತನಾಗಿರಬೇಕು. ಮೂರು ಗುಣಗಳನ್ನು ಕಳೆದುಕೊಂಡಿರಬೇಕು. ಸದ್ ವಿವೇಕಯುಕ್ತನೂ, ಸಂಸಾರ ಬಂಧನದಿಂದ ಬಿಡುಗಡೆ ಪಡೆದವನೂ ಅರಿವಿನ ಜ್ಞಾನವನ್ನು ಪಡೆದವನೂ ಆಗಿರಬೇಕು. ಅವನು ಸರ್ವ ಸಂಗ ಪರಿತ್ಯಾಗಿಯೂ, ಲಿಂಗನ ಸಂಗದಲ್ಲಿ ನಿರತನಾಗಿಯೂ, ಭಿಕ್ಷಾಂದೇಹಿಯಾಗಿ ಆಹಾರ ಸಂಗ್ರಹಿಸಿಯೂ ಆಚಾರಗಳ ಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡವನೇ ನಿಜವಾದ ವಿರಕ್ತ ನೆನೆಸಿಕೊಳ್ಳುತ್ತಾನೆ.

ಷಟ್‌ಸ್ಥಲ ಬ್ರಹ್ಮಜ್ಞಾನಿಯಾಗ ಬಯಸುವ ವಿರಕ್ತನು ನುಡಿದಂತೆ ನಡೆದು, ನಡೆದಂತೆ ನುಡಿದು, ವೇಷಾಡಂಬರವಿಲ್ಲದೆ ಶೀಲ ಸಂಪಾದನೆಯನ್ನು ಗಳಿಸಿ, ಲಿಂಗಾಂಗ ಸಾಮರಸ್ಯವನ್ನು ಪಡೆಯಲು ಅರ್ಹತೆಯುಳ್ಳವನಾಗಿರಬೇಕು. ಎಂಬುದನ್ನು ಪ್ರತಿಪಾದಿಸುವುದೇ ಈ ಸಂಕಲನದ ಕೇಂದ್ರ ಗುರಿ.

"ಮಂಡೆ ಬೋಳಾಗಿ ಮೈ ಬತ್ತಲೆಯಾಗಿಪ್ಪರ ಕಂಡಡೆ
ನಿರ್ವಾಣಿಗಳೆಂಬೆನೆ ? ಎಂಬೆನಯ್ಯ,
ಅಖಂಡಿತವಾಗಿ ಮನ ಬೋಳಾಗಿ ಭಾವ ಬತ್ತಲೆಯಾಗಿರಬಲ್ಲರೆ
ಅದು ನಿರ್ವಾಣವೆಂಬೆ – – " (ವ–೧೬)
" ಕತ್ತೆ ಬತ್ತಲೆಯಿರ್ದರೇನು ನೆಟ್ಟನೆ ನಿರ್ವಾಣಿಯೆ ? "(ವ–೫೧)

'ಕಾಯ ಬತ್ತಲೆ ಇದ್ದರೇನು ? ಮಾಯವಳಿಯದನ್ನಕ್ಕರ
ಮಂಡೆ ಬೋಳಾದರೇನು ? ಸಂಸಾರ ವಿಷಯವ ಛೇದಿಸದನ್ನಕ್ಕರ
ಇದೇತರ ನಿರ್ವಾಣ, ಸುಡು, ನಿರಾಲಂಬಿಗಳಾದ ನಿಜಶರಣರು ಮೆಚ್ಚರು" "(ವ–೧೯)

" ಕಟ್ಟಿದ್ದ ಲಿಂಗವ ಕೈಯಲ್ಲಿ ಹಿಡಿದಿದ್ದರೆ ವಿರಕ್ತನೆ ? (ವ–೧೧೮)

ವಿರಕ್ತನು ಬರಿ ವೇಷ ಧರಿಸಿದರೆ ಸಾಲದು, ವೇಷಕ್ಕೆ ತಕ್ಕ ಚಾರಿತ್ರವನ್ನು ಸಂಪಾದಿಸಿಕೊಂಡು, ಭಕ್ತಿಯಿಂದ ಭಿಕ್ಷಾಂದೇಹಿಯಾಗಿ ಪರಮಾನಂದವನ್ನು ಕಾಣಬೇಕು. ಬರಿಯ ತೋರಿಕೆಯ ವೇಷ ಭೂಷಣಗಳಿಂದ ಸಾಧ್ಯವಿಲ್ಲವೆಂಬುದೆ ಶರಣರ ಆಶಯ. ಅಂಥವನ್ನು ಖಂಡಿಸುತ್ತಾರೆ. ಸರಿಯಾದ ಮಾರ್ಗವನ್ನು ತೋರಿಸುತ್ತಾರೆ.

ಹೆಣ್ಣನ್ನು ಹೆಣ್ಣೆಂದು, ಹೊನ್ನನ್ನು ಹೊನ್ನೆಂದು, ಮಣ್ಣನ್ನು ಮಣ್ಣೆಂದು ಅರಿತರೆ ಆತ ಬ್ರಹ್ಮಚಾರಿಯಾಗಲು ಸಾಧ್ಯವಿಲ್ಲ. ಹೆಣ್ಣು, ಹೊನ್ನು, ಮಣ್ಣು ಈ ಮೂರನ್ನು ಬಿಟ್ಟು ನಿರಾಬಾರಿ ಜಂಗಮವಾಗಿ ಜ್ಞಾನದಲ್ಲಿ ಸುಳಿಯಬಲ್ಲಡೆ ಭವನಾಸ್ತಿಯಪ್ಪುದು (ವ–೧೨೯) ಎಂದು ಹೇಳುತ್ತಾರೆ. ಶರಣನು ಹೆಣ್ಣು, ಹೊನ್ನು, ಮಣ್ಣುಗಳ ಮೋಹವನ್ನು ಬಿಟ್ಟು ತನು, ಮನ, ಭಾವಗಳ ಶುದ್ಧಿಯಿಂದ ಸರ್ವವಿಕಾರಗಳೆಂಬ ಪರ್ವತಗಳನ್ನು ಮುರಿದು, ನಿರ್ವಿಕಾರಿಯಾಗಿ ಅರಿಷಡ್ವರ್ಗಗಳನ್ನು ಗೆದ್ದಂತಹ ನಿಶ್ಚಲ ವಿರಕ್ತನೆ ವಿರಕ್ತನು. ಅಂತಹ ನಿರ್ಮಲಾತ್ಮನಾದ ವಿರಕ್ತನಿಗೆ ಗೌರವವಿದೆ. ಸಮಾಜದ

ಗೌರವವನ್ನು ಉಳಿಸಿಕೊಂಡು ತಾನಾಡುವ ಮಾತಿನಲ್ಲಿ ಎಚ್ಚರಿಕೆ ಇರಬೇಕು. ನಡೆನುಡಿಗಳಲ್ಲಿ ಸಮನ್ವಯವಿರಬೇಕು. ಇಲ್ಲದಿದ್ದರೆ

"ಶ್ವಾನಂಗೆ ಪೃಷ್ಠದಲ್ಲಿ ಬಾಲ ಉಪಾಧಿಕಂಗೆ ಬಾಯಲ್ಲಿ ಬಾಲ ನೋಡಾ
ಮಮಕಾರವೆಂಬ ನಾಯೆದ್ದು ಮರುಗಲು
ನಾಲಗೆಯೆಂಬ ಬಾಲ ಬಡಿದಾಡುತ್ತಿದೆ ನೋಡಾ
ಒಡಲು ಪಾಧಿಕೆಗೆ ಉಪಚಾರವ ನುಡಿವ ವಿರಕ್ತನ ನಾಲಿಗೆ
ನಾಯ ಬಾಲಕಿಂದ ಕರಕಷ್ಟ ನೋಡಾ –" (ವ–೨೦)

"ಬ್ರಹ್ಮದ ಮಾತನಾಡಿ, ಕನ್ನೆಯರ ಕಾಲದೆಸೆಯಲಿ ಕುಳಿತಡೆ
ಪರಬೊಮ್ಮದ ಮಾತು ಅಲ್ಲಿಯೆ ನಂದಿತ್ತು" (ವ–೩೬)

"ಹೊನ್ನು ಹೆಣ್ಣು ಮಣ್ಣು ಹೊರಗಾಗಿ ಇರಿ ಎಂದು ಪರರಿಗೆ ಹೇಳಿ
ಗನ್ನದಿಂದ ತಾವುಗಳಿಸಿಕೊಳ್ಳುತ್ತಿಪ್ಪುದು ಅನ್ಯಾಯವಲ್ಲವೇ ?
ಇಂತಹ ಅಣ್ಣಗಳಿಗೇಕೆ ಗುರುಸ್ಥಲ "(ವ–೭೦)

ನಡೆ ಶುದ್ಧ, ನುಡಿ ಶುದ್ಧ ಇಲ್ಲದ ಇವರೆಲ್ಲ ಭಕ್ತ – ವಿರಕ್ತರಾಗಲು ಸಾಧ್ಯವಿಲ್ಲ. ಇಂಥವರಿಗೆ ಲಿಂಗಾಂಗ ಸಾಮರಸ್ಯ ಒಲಿಯುವುದಿಲ್ಲ. ಕೇವಲ ಬದುಕಿಗಾಗಿ ವೇಷ ಧರಿಸಿ ಬದುಕುವ ಕಪಟ ಗುರು–ವಿರಕ್ತರನ್ನು ವಚನಕಾರರು ಟೀಕಿಸಿದ್ದಾರೆ. ಭಕ್ತ ಹಾಗೂ ವಿರಕ್ತರು ಹೇಗಿರಬೇಕೆಂದರೆ

"ಅಪ್ಪು ಚಿಪ್ಪಿನಲ್ಲಿ ನಿಂದು ಅಪ್ಪುವ ಬೆರೆಸಿದಂತೆ
ಮೃತ್ತಿಕೆ ತೇಜದಲ್ಲಿ ಬೆಂದು ಪೃಥ್ವಿಯ ಬೆರೆಸದಂತೆ
ಹಾಂಗಿರಬೇಕು ಭಕ್ತ–ವಿರಕ್ತರ ಭೇದ "(ವ–೭೩)

ವಿರಕ್ತನು ಶೀಲವನ್ನು ಉಳಿಸಿಕೊಂಡು ಆಚರಿಸುವ ಷಟ್‌ಸ್ಥಲಾಚರಣೆಗಳಿಂದ ಆತ್ಮನ ತನು ಕರುಣಾದಿಗಳ ದುಷ್ಟ ಸಂಸ್ಕಾರವು ದೂರವಾಗುತ್ತದೆ. ಅದರಲ್ಲಿ ಸತ್ಕ್ರಿಯ ಸುಜ್ಞಾನಗಳ ಸಂಸ್ಕಾರ ಉಂಟಾಗುವುದು. ಆಗ ಆತ್ಮನಲ್ಲಿ ಲಿಂಗ ಕಳೆ ಪ್ರಕಾಶಮಾನವಾಗಿ ಬೆಳಗುತ್ತದೆ. ಈ ಸ್ಥಿತಿಯನ್ನು ಸರ್ವಾಂಗ ಲಿಂಗಸ್ಥಿತಿ ಎಂದು ಕರೆಯಲಾಗಿದೆ. ಅರಿಷಡ್ವರ್ಗಾದಿ ಮಮಕಾರಗಳನ್ನು ತೊರೆಯಲು, ತನು, ಮನ, ಭಾವ, ಶುದ್ಧಿಯನ್ನು ಹೊಂದಲು ಬೇಕಾದ ಆಚರಣೆಯ ವಚನಗಳನ್ನು ಕುಂತೂರ ಮಹತ್ತ ದೇವರು ಇಲ್ಲಿ ಸೇರಿಸಿದ್ದಾರೆ.

ಸಂಕಲನದ ಆರಂಭದಲ್ಲಿ 'ಕುಂತೂರು ಮಹತ್ತ ದೇವರು ಸೇರಿಸಿದ ಎಲ್ಲಾ ಪುರಾತರ ವಚನ' ಎಂದು, ಕೃತಿಯ ಅಂತ್ಯದಲ್ಲಿ 'ಆಚರಣೆಯ ವಚನಗಳು' ಸಮಾಪ್ತಂ ಎಂದು ಹೇಳುತ್ತಾನೆ. ಕೃತಿಯ ಆರಂಭಕ್ಕು ಮತ್ತು ಅಂತ್ಯಕ್ಕು ಪರಸ್ಪರ ವೈರುಧ್ಯ ಕಂಡು ಬರುತ್ತದೆ. ಇಲ್ಲಿ ಸೇರಿಸಿರುವ ವಚನಗಳೆಲ್ಲ ಪುರಾತರ ವಚನಗಳೇ ಆಗಿವೆ. ಆದರೆ ಅವು ಆಚರಣೆಗೆ ಸಂಬಂಧ ಪಟ್ಟವುಗಳಾದ್ದರಿಂದ 'ಆಚರಣೆಯ ವಚನಗಳು ಸಮಾಪ್ತಂ' ಎಂದಿದ್ದಾನೆ. ಕೃತಿಯ ಶೀರ್ಷಿಕೆಯಲ್ಲಿರುವ ಇವನ ಹೆಸರೊಂದನ್ನು ಬಿಟ್ಟರೆ ಈತನ ಬಗ್ಗೆ ಯಾವುದೇ ವಿಚಾರಗಳು ದೊರೆಯುವುದಿಲ್ಲ. ಇವನ ಈ ಸಂಕಲನದಲ್ಲಿ ತೋಂಟದ ಸಿದ್ದಲಿಂಗರ ವಚನಗಳು ಸೇರ್ಪಡೆಯಾಗಿರುವುದರಿಂದ ಅವರ ಕಾಲದ ನಂತರದವನೆಂದು ಹೇಳಬಹುದಾಗಿದೆ.

೧೪. ಶೀಲ ಸಂಪಾದನೆ

*** ಅಜ್ಞಾತ ವಚನ ಸಂಕಲನಕಾರ**

ಭಾರತೀಯ ಸಂಸ್ಕೃತಿಯಲ್ಲಿ ಶೀಲವು ಒಂದು ಪ್ರಮುಖ ಜೀವನ ಮೌಲ್ಯ. ಶೀಲ ಎಂಬ ಸಂಪತ್ತು ಇದ್ದಲ್ಲಿ ಪ್ರೀತಿ, ವಿಶ್ವಾಸ, ನ್ಯಾಯ, ನೀತಿ, ಸತ್ಯ, ಧರ್ಮಗಳು ತಾವಾಗಿಯೆ ನೆಲೆಸಿರುತ್ತವೆ. ವ್ಯಕ್ತಿಯ ವಿಕಾಸ, ಸಾಮಾಜದ ಸ್ವಾಸ್ಥ್ಯ ಹಾಗೂ ನಾಡಿನ ನೆಮ್ಮದಿಗೆ 'ಶೀಲವೇ' ಕಾರಣ ಅದಕ್ಕಾಗಿ ಮೊದಲಿನಿಂದಲೂ ಆಧ್ಯಾತ್ಮವಾದಿಗಳೂ, ಅನುಭಾವಿಗಳೂ ಇದಕ್ಕೆ ಬಹಳ ಮಹತ್ವದ ಮನ್ನಣೆಯನ್ನು ನೀಡುತ್ತಾ ಬಂದಿರುತ್ತಾರೆ.

ಬಸವಾದಿ ಶರಣರು ಸುಂದರವಾದ ಆದರ್ಶ ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಇಂತಹ ಶೀಲಗಳನ್ನು ವಚನಗಳಲ್ಲಿ ಸೆರೆ ಹಿಡಿದಿದ್ದಾರೆ.

ಸುಜ್ಞಾನದಿಂದ ಆಚರಿಸುವ ಆಚರಣೆಗಳೆಲ್ಲ ಶೀಲಗಳೇ ಎಂಬ ಭಾವನೆ ಅವರಲ್ಲಿ ಮನೆ ಮಾಡಿತ್ತು.

"ಸತ್ಯದಲ್ಲಿ ನಡೆವುದು ಶೀಲ
ಸತ್ಯದಲ್ಲಿ ನುಡಿವುದು ಶೀಲ
ಸತ್ಯ ಸದಾಚಾರದಲ್ಲಿ ವರ್ತಿಸಿ
ನಿತ್ಯವನರಿವುದೇ ಶೀಲ ಕಾಣಿಭೋ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ"[೨೨].
"ಪರಧನ ಪರಸತಿಗಳುಪದಿಪ್ಪುದೇಶೀಲ
ಗುರುನಿಂದೆ, ಶಿವನಿಂದೆ ಕೇಳದಿಪ್ಪುದೇ ಶೀಲ:[೨೩].

ಎಂದು ಉಚ್ಚರಿಸಿದರು. ಅರಿಷಡ್ವರ್ಗಗಳನ್ನು ಮತ್ತು ಆಮಿಷಗಳನ್ನು ಗೆಲ್ಲುವುದೇ ಶೀಲ. ಅದೇ ನಿಯಮ. ಇವು ಮಾನವನನ್ನು ಭವಿತನಕ್ಕೆಳಸುತ್ತವೆ. ಇಂತಹ ಆಚರಣೆಗಳನ್ನು ಬೋಧಿಸುವ ಕೃತಿಯೇ ಶೀಲ ಸಂಪಾದನೆ. ಇದೊಂದು ವಿವಿಧ ಶರಣರ ವಚನಗಳಿಂದಾದ ನೂತನ ಮಿಶ್ರಸ್ಥಲಕಟ್ಟಿನ ಕೃತಿ. ಇದರಲ್ಲಿ ೫೧ ಜನ ವಚನಕಾರರ ೪೪೩ ವಚನಗಳು ಒಟ್ಟು ೪೦ ಸ್ಥಲಗಳಲ್ಲಿ ಸಂಗ್ರಹಗೊಂಡಿವೆ. ಇದರಲ್ಲಿ ೧೫ ಪ್ರಮುಖ ಸ್ಥಲಗಳಿವೆ.

೧. ಬಸವೇಶ್ವರನ ಸ್ತುತಿ
೨. ಗುರುಮಹಾತ್ಮೆಯ ಸ್ಥಲ
೩. ಏಕ ಗುರೂಪದೇಶ ಪ್ರತಿಷ್ಠಾ ಸ್ಥಲ.
೪. ದಾಸೋಹ ಪ್ರತಿಷ್ಠಾ ಸ್ಥಲ.
೫. ಕರ್ಮಯೋಗ ನಿರಸನ ಸ್ಥಲ
೬. ಪಂಚಾಚಾರ ಪ್ರತಿಷ್ಠಾ ಸ್ಥಲ.
೭. ಭವಿಶೈವ ದೈವ ನಿರಸನ ಸ್ಥಲ
೮. ಶಿವಪೂಜಾ ಕ್ರಮಸ್ಥಲ
೯. ಶೈವ ಜಡಕರ್ಮ ನಿರಸನ ಸ್ಥಲ
೧೦. ಪಂಚಮಹಾಪಾತಕ ನಿರಸನ ಸ್ಥಲ
೧೧. ಸದಾಚಾರ ಪ್ರತಿಷ್ಠಿತ ಸ್ಥಲ
೧೨. ದೇಹ ಮೋಹ ನಿರಸನ
೧೩. ಮಾಯವಿಲಾಸ ವಿಧಿ ಸ್ಥಲ
೧೪. ಶಿವ ಕಾರುಣ್ಯಾಹ್ವಾನ ಸ್ಥಲ
೧೫. ಎಲ್ಲಾ ಪುರಾತೆಯರ ವಚನ.

ಉಳಿದವುಗಳು ಇವುಗಳ ಉಪಸ್ಥಲಗಳು.[೨೪]

---

೨೨. ತೋಂಟದ ಸಿದ್ಧಲಿಂಗೇಶ್ವರ " ಷಟ್‌ಸ್ಥಲ ಜ್ಞಾನ ಸರಾಮೃತ, ವಚನ–೩೦೮
೨೩. ಡಾ॥ ಆರ್.ಸಿ. ಹಿರೇಮಠ,(ಸಂ) ಚನ್ನ ಬಸವಣ್ಣನವರ ವಚನಗಳು– ವಚನ–೫೭
೨೪. ಡಾ॥ವೀರಣ್ಣರಾಜೂರ (ಸಂ) 'ಶೀಲ ಸಂಪಾದನೆ', ಪರಿವಿಡಿ ನೋಡಿ. ಪ್ರ : ವೀ.ಅ.ಸಂ.ತೋ.ಸಂ.ಮ.ಗದಗ

ಈ ಕೃತಿಯನ್ನು ಸಂಕಲಿಸಿದವರು ಯಾರು ಎಂಬುದು ಎಲ್ಲಿಯೂ ತಿಳಿದು ಬರುವುದಿಲ್ಲ. ಸಂಕಲನದಲ್ಲಿ ತೋಂಟದ ಸಿದ್ಧಲಿಂಗರ ವಚನಗಳು ಸಂಗ್ರಹಗೊಂಡಿರುವುದರಿಂದ ಸಂಕಲನಕಾರ ತೋಂಟದ ಸಿದ್ಧಲಿಂಗ ಶಿಷ್ಯ ಪರಂಪರೆಗೆ ಸೇರಿದ ೧೭ ನೇ ಶತಮಾನದವನಿರಬೇಕು ಎಂದು ಭಾವಿಸಬಹುದು.

ಶರಣರು ಆಚರಿಸಿದ ಇತರರಿಗೆ ಆಚರಿಸಲು ವಚನಗಳ ಮೂಲಕ ತಿಳಿಸಿದ ಶೀಲ, ವ್ರತ, ನೇಮಗಳ ವಿವರಣೆಯೇ ಈ ಕೃತಿಯ ವಸ್ತು. ಸಂಕಲನ ಬಸವಣ್ಣನವರ ವ್ಯಕ್ತಿ ವಿಶಿಷ್ಟತೆಗಳನ್ನು ಸ್ತುತಿಸುವ ಸ್ತುತಿ ರೂಪದ ವಚನಗಳಿಂದ ಆರಂಭವಾಗುತ್ತದೆ. ಬಸವಣ್ಣ ಶೀಲ ಸಂಪನ್ನ, ವ್ರತ, ನೇಮ, ಆಚಾರ, ವಿಚಾರಗಳಿಗೆ ಗುರುಸ್ವರೂಪದವನು. ಅವನು ನಡೆನುಡಿಯಲ್ಲಿ ಸಾಮರಸ್ಯವಿರುವ ಭಕ್ತ, ಸತ್ಯಶುದ್ಧ, ಕಾಯಕ ಪ್ರೇಮಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಹಿರಿಯ ಗುಣ ಅವನಲ್ಲಿರುವುದರಿಂದ ಅವನನ್ನು ಶರಣರೆಲ್ಲರೂ ಒಂದು ಆದರ್ಶವೆಂದು, ಶೀಲಗಳಿಗೆ ಒಡೆಯನೆಂದು ಭಾವಿಸಿದ್ದಾರೆ ಹಾಗಾಗಿ ಅವನ ಸ್ತುತಿಯ ಮೂಲಕ ಕೃತಿಯನ್ನು ಆರಂಭಿಸಿರುವುದು. ಉಚಿತವೆನಿಸಿದೆ.

ವೀರಶೈವ ನಿರ್ಣಯದ ಪರಮಾವತಾರಿಯಾದ ಬಸವಣ್ಣನ ಸ್ತುತಿಗೆ ಮೊದಲ ಸ್ಥಲ ಮಿಸಲಾಗಿದೆ. ಬಸವಸ್ತೋತ್ರದ ಸಂಕಲನಗಳಲ್ಲಿರುವ ಬಹಳಷ್ಟು ವಚನಗಳೂ ಇಲ್ಲಿಯೂ ಎಡೆ ಪಡೆದಿವೆ. ಬಸವಣ್ಣನ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದ ೨೧ ವಚನಗಳನ್ನು ಸಂಕಲನಕಾರ ಇಲ್ಲಿ ಸಂಗ್ರಹಿಸಿದ್ದಾನೆ. ಈ ಸ್ಥಲದ ಕೊನೆಯಲ್ಲಿ

"ಭಕ್ತಿ ಸಾಮ್ರಾಜ್ಯದ ಕರ್ತೃ ಭಕ್ತೋದ್ಧಾರ
ಸತ್ಯ ಶ್ರೀ ವೀರ ಮಾಹೇಶ್ವರ ಶರಣಾರ್ಥಿ
ನಿತ್ಯ ಬಸವಲಿಂಗ ಗುರುವೇ ಕೃಪೆಯಾಗು" ಎಂದು ಮುಕ್ತಾಯವಾಗುತ್ತದೆ.

ಶೀಲಕ್ಕೆ ಒಡೆಯನಾದ ಗುರುವಿನ ಮಾರ್ಗದರ್ಶನದಿಂದ ಶೀಲ ಸಂಪಾದನೆ ಸಾಧ್ಯ. ಅದಕ್ಕಾಗಿ ಎರಡನೇ ಸ್ಥಲದಲ್ಲಿ ಗುರುವಿನ ಮಹಾತ್ಮೆಯನ್ನು ವರ್ಣಿಸಿ ಶೀಲ ಸಂಪಾದನ ಮಾರ್ಗವನ್ನು ತೋರಿಸಬೇಕೆಂದು ಭಕ್ತಿಯಿಂದ ಬೇಡಿಕೊಳ್ಳಲಾಗಿದೆ. ಪರಂಜ್ಯೋತಿ ಸ್ವರೂಪನಾದ ಸದ್ಗುರುವನ್ನು ಸೋಂಕಿದ ಸದ್ಭಕ್ತನ ಸರ್ವಾಂಗವೂ ಲಿಂಗವಾಗುವುದು. ಅಂಗ ಲಿಂಗವಾಗುವ ದಾರಿಯನ್ನು ತೋರುವ ಶ್ರೀ ಗುರುವನ್ನು ಸ್ತುತಿಸುವುದು. ಅವನಾಜ್ಞೆಯಂತೆ ನಡೆಯುವುದೇ ಶೀಲವೆಂದು ಶರಣರ ಕಲ್ಪನೆ.

ಲಿಂಗಾಂಗ ಸಾಮರಸ್ಯ ರಹಸ್ಯ ಮಾರ್ಗವನ್ನು ತೋರಿಸುವ ಆ ಗುರು ಒಬ್ಬನೆ. ಹಲವರಿಲ್ಲ. ಅದಕ್ಕಾಗಿ ಒಬ್ಬನೇ ಗುರುವನ್ನು ನಂಬಿ ಅವನಿಂದ ದೀಕ್ಷೆ, ಉಪದೇಶಗಳನ್ನು ಪಡೆದುಕೊಳ್ಳಬೇಕು. ಲಿಂಗ ಹೇಗೆ ಒಂದೆಯೋ ಹಾಗೆ ಗುರುವೂ ಒಬ್ಬನೇ. ಅಂಥ ಗುರುವಿನ ಉಪದೇಶ ಪಡೆದು ಆಹ್ವಾನ, ವಿಸರ್ಜನ, ದುರ್ಭಾವ, ದುರ್ಬುದ್ಧಿ ಲಯವಾಗಿ, ಪಂಚಭೂತಗಳ ಹಂಗಡಗಿಸಿ ಲಿಂಗ ಪೂಜೆಯಲ್ಲಿ ಅಂಗ ಗುಣ ಅಳಿದ ಶಿಷ್ಯ ನಿತ್ಯ ಮುಕ್ತನಾಗುತ್ತಾನೆ.

"ಗುರು ಕಾರುಣ್ಯವೇ ಶಿವಾಚಾರ, ಗುರುಕಾರುಣ್ಯವೇ ಸದಾಚಾರ
ಗುರುಕಾರುಣ್ಯದಿಂದ ಪ್ರಸಾದ ರುಚಿ
ಮುಂದೆ ಗುರು ಹಿಂದೆ ಲಿಂಗ ಕೂಡಲ ಸಂಗಯ್ಯ"– (ವಚನ.೨೯)

ಎಂದು ಗುರುವಿನ ಮಹಿಮೆಯ ಜೊತೆ, ಏಕಗುರೂಪದೇಶದ ಮಹತ್ವವನ್ನು ೭೯ ವಚನಗಳಲ್ಲಿ ಸಂಗ್ರಹಕಾರ ಹೇಳಿದ್ದಾನೆ.

'ದಾಸೋಹ' ಶರಣ ಸಿದ್ಧಾಂತದ ಮಹತ್ವದ ಪರಿಕಲ್ಪನೆ. ವೀರಶೈವದಲ್ಲಿ ಪಂಚಾಚಾರ, ಅಷ್ಟಾವರಣ, ಷಟ್‌ಸ್ಥಲ ಇವುಗಳ ತತ್ವವನ್ನು ತಿಳಿದು ಆಚರಿಸಿ ಪಡೆಯುವ ಫಲವೇ ಪ್ರಸಾದವೆಂಬ ಭಾವನೆ ಶರಣರಲ್ಲಿ ಬಲವಾಗಿ ಬೇರೂರಿದೆ. ಗುರುವಿನ ಉಪದೇಶ ಪಡೆದ ಭಕ್ತ, ತನು ,ಮನ, ಧನ, ವಂಚನೆಯಿಲ್ಲದೆ ಗುರುಲಿಂಗ ಜಂಗಮ ದಾಸೋಹ ಮಾಡುವುದು ಮತ್ತೊಂದು ಶೀಲ. ಮಾಡುವ ದಾಸೋಹ ಸತ್ಯ ಶುದ್ಧ ಕಾಯಕದಿಂದ ಬಂದುದಾಗಿರಬೇಕು. ಅದು ಸತ್ಪಾತ್ರಕ್ಕೆ ಸಲ್ಲಬೇಕು. ಡಾಂಭಿಕ ದಾಸೋಹ ಅಪಾತ್ರದಾನ ಸರಿಯಲ್ಲ. 'ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು' 'ಮಾಡಿದೆನೆಂಬುದು ಮನದಲ್ಲಿ ಸುಳಿದರೆ, ಏಡಿಸಿ ಕಾಡಿತ್ತು ಶಿವನ ಡಂಗುರ' ಹಾಗಾಗಿ ಶುದ್ಧ ಮನಸ್ಸಿನಿಂದ ದಾಸೋಹ ಮಾಡಿದರೆ ಶಿವ ಸ್ವರೂಪಿ ತಾನಾಗುತ್ತಾನೆ. ಆದ್ದರಿಂದಲೆ ಶರಣರು 'ದಾಸೋಹ'ವನ್ನು ಶೀಲವೆಂದೇ ಭಾವಿಸಿದ್ದಾರೆ. ಇಂತಹ ಶೀಲ ತತ್ವವನ್ನು ೨೭ ವಚನಗಳ ಮೂಲಕ ನಾಲ್ಕನೇ ಸ್ಥಲದಲ್ಲಿ ಸಂಗ್ರಹಿಸಿ ಹೇಳಿದ್ದಾನೆ.

ಐದನೇ ಸ್ಥಲವೇ 'ಕರ್ಮಯೋಗ ನಿರಸನ ಸ್ಥಲ'. ಕರ್ಮಿಗಳ ಅಷ್ಟಾಂಗ ಯೋಗಕ್ಕಿಂತ ಗುರು ಕಾರುಣ್ಯದಿಂದ ಬಂದ ಕರಸ್ಥಲದ ಇಷ್ಟಲಿಂಗದಲ್ಲಿ ದೃಷ್ಟಿನಟ್ಟು, ಮನಮುಟ್ಟಿ, ಭಾವ ಬಲಿದು, ಲಿಂಗಮನೋವೈದ್ಯರಾಗಿ ತಿಳಿದು ನಿರ್ಧರಿಸಿ ಮಾಡುವ ಓಂಕಾರ ಸ್ವರೂಪವಾದ ಲಿಂಗಾಂಗಯೋಗ ಸರ್ವಶ್ರೇಷ್ಠವಾದುದು. ಕ್ರೂರ ಕರ್ಮಾಚರಣೆಗಳನ್ನು ಕಳೆದು ಸದಾಚಾರಗಳ ಮೂಲಕ ಲಿಂಗಾಂಗ ಸಾಮರಸ್ಯವನ್ನು ಪಡೆಯುವುದೇ ಶಿವಯೋಗ ಸಾಧನೆ. ಅದೇ ಸದ್ಭಕ್ತನ ಸತ್ ಶೀಲ.

ಹೀಗೆ ಯಾವ ಯಾವ ಶೀಲಗಳನ್ನು, ಸದಾಚಾರಗಳನ್ನು ಅಳವಡಿಸಿಕೊಂಡರೆ ಶಿವಕಾರುಣ್ಯ, ಲಿಂಗಾಂಗ ಸಾಮರಸ್ಯ ಸಾಧ್ಯ ಎಂಬುದನ್ನು ೧೪ ಮುಖ್ಯ ಸ್ಥಲ, ೨೫ ಉಪಸ್ಥಲಗಳ ಅಡಿಯಲ್ಲಿ ವಿವಿಧ ಶರಣರ ವಚನಗಳ ಮೂಲಕ ಸಂಗ್ರಹಿಸಿದ್ದಾನೆ. ಕೊನೆಯ ಸ್ಥಲದಲ್ಲಿ ಸಂಕಲನಕಾರ ಭಿನ್ನವಾಗಿ ಆಲೋಚಿಸಿ ಮೇಲೆ ಹೇಳಿದ ಶೀಲ, ವ್ರತ, ನೇಮಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು, ಆ ಶೀಲ ವ್ರತಗಳಂತೆ ನಡೆಯದವರನ್ನು ಕಟುವಾಗಿ ಟೀಕಿಸಿ ಶೀಲ ಸಂಪನ್ನರಾದ ೧೩ ಜನ ಶರಣೆಯರ[೭೫] ಶೀಲ ಆಚರಣೆಗೆ ಸಂಬಂಧಿಸಿದಂತಹ ३೦ ವಚನಗಳನ್ನು ಇಲ್ಲಿ ಸಂಗ್ರಹಿಸಿಕೊಟ್ಟಿರುತ್ತಾನೆ.

" ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದಂದು ಕಾಯಕವಲ್ಲ
ಆಶೆಯೆಂಬುದು ಭವದ ಬೀಜ
ಉರಿಲಿಂಗ ಪೆದ್ದಿಗಳರನಲ್ಲಿ ಕಾಣವ್ವ" (ವಚನ-೪೨೦)

ಇದು ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವನ ವಚನ. ಮುಂದಿನ ವಚನದಲ್ಲಿ ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿ ವ್ರತ ಹೀನರ ಅಂದರೆ ಶೀಲವಿಲ್ಲದವರ ಜೊತೆ ಸೇರಬಾರದೆಂಬುದನ್ನು ಹೇಳಿದ್ದಾಳೆ.

---

೭೫. ಡಾ॥ ವೀರಣ್ಣರಾಜೂರ (ಸಂ) 'ಶೀಲ ಸಂಪಾದನೆ', ಪು – ೧೨೭

" ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನರ ಬೆರೆಯಲಾಗದು
ಬೆರೆದರೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರ" (ವಚನ–೪೩೦)

ಈ ಎಲ್ಲಾ ಶರಣೆಯರ ವಚನಗಳು ಹಿಂದೆ ಹೇಳಿದ ಎಲ್ಲಾ ಸ್ಥಲಗಳ ವಿಷಯಗಳಿಗೆ ಉಪಸಂಹಾರದಂತಿವೆ.

ಒಟ್ಟಿನಲ್ಲಿ ಗುರುಕಾರುಣ್ಯದಿಂದ ಏಕಲಿಂಗ ನಿಷ್ಠಪರನಾಗಿ, ಜಂಗಮ ದಾಸೋಹ ಮಾಡಿ, ಕರ್ಮಯೋಗವ ಕಳೆದು, ಶಿವಯೋಗ ಮಾರ್ಗ ಹಿಡಿದು, ಪಂಚಾಚಾರಗಳನ್ನು ಅಳವಡಿಸಿಕೊಂಡು, ಭವಿಶೈವ ದೈವ ಭಜನೆಯ ಬಿಟ್ಟು, ಪಂಚ ಮಹಾಪಾತಕಗಳ ದೂಡಿ, ಸದಾಚಾರದಲ್ಲಿ ನಿಂದು, ದೇಹಮನ ಇಂದ್ರಿಯ ಸಂಸಾರ ನಿರಸನ ಮಾಡಿ, ಮಾಯೆಯನ್ನು ಮೀರಿ, ಶಿವಕಾರುಣ್ಯವನ್ನು ಪಡೆಯುವ ಶರಣನ ಸುಜ್ಞಾನದ ನಡೆಯೇ ನಿಜವಾದ ಶೀಲ. ಈ ಶೀಲವನ್ನು ಸಂಪಾದಿಸುವವನೆ ಶಿವನಾಗುತ್ತಾನೆ. ಹೀಗೆ ಜೀವ ಮತ್ತು ಶಿವರ (ಅಂಗ–ಲಿಂಗ) ಸಾಮರಸ್ಯ ರಹಸ್ಯವನ್ನು ಸರಳ ಸುಂದರವಾಗಿ ಬೋಧಿಸುವ ಗುರಿಯನ್ನು ಇಟ್ಟುಕೊಂಡು ರಚಿತವಾದ ಕೃತಿಯೇ ಈ ಶೀಲ ಸಂಪಾದನೆ.

ಶೀಲದ ಪ್ರತಿಪಾದನೆಗಾಗಿ ಸಂಕಲನಕಾರ ಆರಿಸಿಕೊಂಡ ವಚನಕಾರರ ವಚನಗಳೂ ಕೂಡಾ ಅರ್ಥಪೂರ್ಣವಾಗಿವೆ. ಬಹಳಷ್ಟು ವಚನಗಳು ದೀರ್ಘವಾಗಿವೆ. ಶರಣರು ಸಾರಿದ ಶೀಲಗಳನ್ನು ಕೃತಿ ತರ್ಕಬದ್ಧವಾಗಿ ವಿವೇಚಿಸುತ್ತದೆ. ಷಟ್ ಸ್ಥಲ ಜ್ಞಾನಿ ಚೆನ್ನ ಬಸವಣ್ಣನವರ ೯೭ ವಚನಗಳು, ಬಸವಣ್ಣನವರ ೭೮ ವಚನಗಳು, ಮಡಿವಾಳ ಮಾಚಿದೇವನ ೪೮ ವಚನಗಳು, ತೋಂಟದ ಸಿದ್ಧಲಿಂಗರ ೩೪ ವಚನಗಳು, ಅಲ್ಲಮನ ೨೮ ವಚನಗಳು ಹಾಗೂ ಉರಿಲಿಂಗ ಪೆದ್ದಿ ಮುಂತಾದ ವಚನಕಾರರ ವಚನಗಳು ಶೀಲ ಸಂಪಾದನೆ ಕೃತಿಯಲ್ಲಿ ಸಂಗ್ರಹವಾಗಿವೆ. ಕೊನೆಯ ೪೯, ೫೦, ೫೧ನೇ ಸಂಖ್ಯೆಗಳಲ್ಲಿರುವ ವಚನಗಳ ಅಂಕಿತ ಮಾತ್ರ ದೊರೆಯುತ್ತದೆ. ವಚನಕಾರರ ಹೆಸರುಗಳು ತಿಳಿಯದಾಗಿದೆ[೭೬].

ಮಿಶ್ರಸ್ಥಲ ಕಟ್ಟು ಕೃತಿಗಳ ಗುಂಪಿಗೆ ಸೇರಿದ ಶೀಲ ಸಂಪಾದನೆಯು ಈ ಹಿಂದೆ ಬಂದ ಸ್ಥಲಕಟ್ಟಿನ ಕೃತಿಗಳ ಸ್ಥಲಗಳಿಗಿಂತ ಭಿನ್ನವಾಗಿ ತನ್ನ ಆಶಯಕ್ಕೆ ತಕ್ಕಂತೆ ನೂತನ ಸ್ಥಲಗಳನ್ನು ಹೊಂದಿ ವಿಶೇಷತೆಯನ್ನು ಮೆರೆದಿದೆ. ಇದರ ಸಂಕಲನಕಾರ ಗುಬ್ಬಿ ಮಲ್ಲಣ್ಣನ 'ಗಣಭಾಷಿತರತ್ನಮಾಲೆ' ಯ ಸ್ಥಲ ವಿಭಜನ ಕ್ರಮಕ್ಕೆ ಋಣಿಯಾಗಿರುವುದು ಕಂಡುಬರುತ್ತದೆ. ಗುಬ್ಬಿಮಲ್ಲಣ್ಣನು ವೇದ ಪುರಾಣ ಆಗಮಗಳ ಶ್ಲೋಕ ಸಹಿತ ಅವುಗಳ ಅರ್ಥ ಭಾವನೆಗಳನ್ನು ಹೊಂದಿದ ಕೆಲವು ವಚನಗಳನ್ನಾಯ್ದು ಒಂದೊಂದು ಸ್ಥಲದಡಿಯಲ್ಲಿ ಜೋಡಿಸುತ್ತಾನೆ. ಈ ಕೃತಿಯ ಸಂಕಲನಕಾರನು ಅವನಿಗಿಂತ ಅಧಿಕ ಸಂಖ್ಯೆಯ ವಚನಗಳನ್ನಾಯ್ದು ಜೋಡಿಸುವ ಕಾರ್ಯ ಮಾಡಿದ್ದಾನೆ.

---

೭೬. ಡಾ॥. ವೀರಣ್ಣರಾಜೂರ (ಸಂ) 'ಶೀಲ ಸಂಪಾದನೆ'–ಪುಟ–೧೪೭

ಅದಲ್ಲದೆ ಇಲ್ಲಿಯ ಕೆಲವು ಸ್ಥಲಗಳು ಅದ್ವೈತಾನಂದದ ವಚನಗಳು, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾ ಭರಣ, ಏಕೋತ್ತರ ಷಟ್‌ಸ್ಥಲ, ಲಿಂಗ ಚಿದಾಮೃತ ಬೋಧೆ ಸಂಬಂಧದ ವಚನಗಳು ಮೊದಲಾದ ಕೃತಿಗಳಲ್ಲಿಯೂ ಕಂಡು ಬರುತ್ತವೆ. ಹೀಗಿದ್ದೂ ಶೀಲ ಸಂಪಾದನೆ ಒಂದು ಸ್ವತಂತ್ರ ಸ್ಥಲಕಟ್ಟಿನ ಕೃತಿಯಾಗಿದೆ. ಸ್ಥಲನಾಮಗಳನ್ನು ಬೇರೆ ಬೇರೆಯಿಂದ ಸ್ವೀಕರಿಸಿದರೂ ಜೋಡಿಸಿದ ರೀತಿ ವಿನೂತನವಾಗಿದೆ. ಆರಂಭದ ಬಸವೇಶ್ವರನ ಸ್ತುತಿ ಮತ್ತು ಅಂತ್ಯದಲ್ಲಿ ಎಲ್ಲಾ ಶರಣೆಯರ ವಚನ ವಿಭಾಗಗಳು ಶೀಲದ ಚೌಕಟ್ಟುಗಳಂತಿದ್ದರೆ, ಮಧ್ಯದ ಸ್ಥಲಗಳೆಲ್ಲ ಅದರ ಹೃದಯದಂತಿವೆ.[೭೭]

ಶೀಲ ಸಂಪಾದನೆಯು ಇತರ ಮಿಶ್ರಸ್ಥಲ ಕೃತಿಗಳಂತೆ ಲಿಂಗಾಂಗ ಸಾಮರಸ್ಯ ತತ್ವವನ್ನು ಬೋಧಿಸುತ್ತದೆ. ಸತ್ ಶೀಲವೇ ಲಿಂಗಾಂಗ ಸಾಮರಸ್ಯ ಪಡೆಯುವ ಮೆಟ್ಟಿಲಾಗಿದೆ. ಷಟ್‌ಸ್ಥಲ ತತ್ವವು ಇಲ್ಲಿ ಜೀವನಾಡಿಯಾಗಿ ಮಿಡಿದಿದೆ. ಷಟ್ ಸ್ಥಲ ಮಾರ್ಗದ ಭಕ್ತ ಸ್ಥಲದಲ್ಲಿ ಆರಂಭವಾಗುವ ಶೀಲ, ವ್ರತಾಚಾರ ನಿಷ್ಠೆಗಳು ಮುಂದಿನ ಸ್ಥಲಗಳಲ್ಲಿ ದೃಢವಾಗುತ್ತಾ ಬಂದು ಐಕ್ಯಸ್ಥಲದಲ್ಲಿ ಪರ್ಯವಸಾನವಾಗುತ್ತವೆ. ಈ ಹಿನ್ನೆಲೆಯಲ್ಲಿ ಶರಣರು ಬದುಕಿನಲ್ಲಿ ಗಳಿಸಬೇಕಾದ ಶೀಲಗಳನ್ನು ಸಮಗ್ರವಾಗಿ ವಿವರಿಸುವ ಕೃತಿಯೇ ಶೀಲ ಸಂಪಾದನೆ. ಲಿಂಗಾಂಗ ಸಾಮರಸ್ಯ ತತ್ವವನ್ನು ವಿವರಿಸುವ ಕೃತಿಗಳಲ್ಲಿ ಶೀಲ ಸಂಪಾದನೆಗೆ ಒಂದು ವಿಶಿಷ್ಟ ಸ್ಥಾನವಿದೆ.

೧೫.'ಚಿದ್ಭಸ್ಮ ಮಣಿ ಮಂತ್ರ ಮಹಾತ್ಮೆಯ ಸ್ಥಲದ ವಚನಗಳು'

*ಜಟಾ ಶಂಕರ ದೇವರು.

ಇದೊಂದು ಚಿಕ್ಕ ಸಂಕಲನ ಇದರಲ್ಲಿ ವೀರಶೈವಾಚರಣೆಗಳಿಗೆ ಸಂಬಂಧಿಸಿದ ವಚನಗಳನ್ನು ಸಂಗ್ರಹಿಸಿದ್ದಾನೆ. ಈ ಸಂಕಲನದ ಅಂತ್ಯ ಗದ್ಯದಲ್ಲಿ " ಇಂತು ಪ್ರಥಮದಲ್ಲಿ ವಿಭೂತಿಯ ಸ್ಥಲಕ್ಕೆ ೫ ವಚನ, ರುದ್ರಾಕ್ಷಿ ಸ್ಥಲಕ್ಕೆ ೪ ವಚನ, ಪಂಚಾಕ್ಷರಿಯ ಸ್ಥಲಕ್ಕೆ ೩೫ ವಚನ. ಇಂತು ತ್ರಿವಿಧಿ ಸ್ಥಲಕ್ಕೆ ಸೇರಿದ ವಚನ ನಾಲ್ವತ್ತ ನಾಲ್ಕಕ್ಕಂ" ಎಂದು ಹೇಳಿದ್ದಾನೆ. ಆದರೆ ಕೃತಿಯ ಮಧ್ಯದಲ್ಲಿ ಎಲ್ಲಿಯೂ ಸ್ಥಲ ನಿರ್ದೇಶನವಿರುವುದಿಲ್ಲ. ಇದರಲ್ಲಿ ತೋಂಟದ ಸಿದ್ಧಲಿಂಗರ ವಚನಗಳು ಸೇರ್ಪಡೆಯಾಗಿರುವುದರಿಂದ ಈ ಕೃತಿ ೧೬ನೇ ಶತಮಾನದ ನಂತರದ ಕಾಲದ್ದೆಂದು ಹೇಳಬಹುದು. ಬಸವಣ್ಣನಿಂದ ತೋಂಟದ ಸಿದ್ಧಲಿಂಗೇಶ್ವರನವರೆಗಿನ ೧೧ ಜನ ವಚನಕಾರರ ೪೪ ವಚನಗಳು ಇಲ್ಲಿ ಸಂಗ್ರಹವಾಗಿವೆ.

ವಚನಗಳು ಅಷ್ಟಾವರಣಗಳಲ್ಲಿ ಪ್ರಮುಖವೆನಿಸಿದ ವಿಭೂತಿ, ರುದ್ರಾಕ್ಷಿ, ಮಂತ್ರಗಳ ಮಹತ್ವವನ್ನು ವಿವರಿಸುತ್ತವೆ. ವೀರಶೈವ ಧರ್ಮದಲ್ಲಿ ಅಂಗನು ಲಿಂಗರೂಪನಾಗಬೇಕಾದರೆ ಸಾಧನೆಗಳು ಅವಶ್ಯ. ಬುದ್ಧನೂ ಸಹ ನಿರ್ವಾಣಕ್ಕಾಗಿ ಅಷ್ಟಾಂಗ ಮಾರ್ಗಗಳನ್ನು ಉಪದೇಶಿಸಿದ್ದಾನೆ. ಅದರಂತೆ ವೀರಶೈವರೂ ಕೂಡಾ ಅಷ್ಟಾವರಣಗಳ ಶ್ರೇಷ್ಠತೆಯನ್ನು ವಿವರಿಸಿದ್ದಾರೆ.

---

೭೭. ಡಾ॥. ವೀರಣ್ಣ ರಾಜೂರ .(ಸಂ) 'ಶೀಲ ಸಂಪಾದನೆ' ಪ್ರಸ್ತಾವನೆ ಪುಟ- XXX,

ಸಾಧಕ ಈ ಎಂಟನ್ನು ಒಂದರ ನಂತರ ಒಂದನ್ನು ಸಾಧಿಸುವುದಲ್ಲ. ಒಟ್ಟಿಗೆ ಎಂಟರ ಸಮ್ಮಿಳನದಲ್ಲಿಯೇ ಶಿವನನ್ನು, ಶಿವನ ಕರುಣೆಯನ್ನು ಪಡೆಯಬಹುದು. ಸಾಧಕನಿಗೆ ಇವು ರಕ್ಷಾ ಕವಚವಿದ್ದಂತೆ. ಇವುಗಳಲ್ಲಿ ಜಟಾಶಂಕರ ದೇವನು ವಿಭೂತಿ, ರುದ್ರಾಕ್ಷಿ, ಮಂತ್ರಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವುಗಳ ಮಹತ್ವವನ್ನು ಸಾರುವ ವಚನಗಳನ್ನು ಸಂಗ್ರಹಿಸಿ ಈ ಸಂಕಲನದಲ್ಲಿ ಜೋಡಿಸಿದ್ದಾನೆ.

ವಿಭೂತಿ : ಶ್ರೀಗುರು ಲಿಂಗ, ಜಂಗಮದ ನಂತರ ಇದು ನಾಲ್ಕನೆಯದಾಗಿ ಅಷ್ಟಾವರಣದಲ್ಲಿ ಗುರುತಿಸಲಾಗಿದೆ. ಇದು ಲಿಂಗಕ್ಕೂ, ಗುರುವಿಗೂ, ಜಂಗಮಕ್ಕೂ ಬೇಕಾಗಿದೆ. ವೀರಶೈವ ಧರ್ಮದಲ್ಲಿ ವಿಭೂತಿಗೆ ಮಹತ್ವದ ಮನ್ನಣೆಯಿದೆ. ಇದು ಐಶ್ವರ್ಯ ಪ್ರದಾಯನಿ, ಪಾಪನಾಶಕ, ಉಪದ್ರವನಾಶಕ, ಪುಣ್ಯಫಲ ಶುಭ ಪ್ರದಾಯಕ, ಮೋಕ್ಷದಾಯಿನಿಯೂ ಹೌದು "– ಅಯ್ಯ ಎನಗೆ ವಿಭೂತಿಯೆ ಸರ್ವ ಸಾಧನವಯ್ಯ (ವಚನ–೫) ಎಂದು ಅಕ್ಕಮಹಾದೇವಿ ಬಣ್ಣಿಸಿದ್ದಾಳೆ.

ರುದ್ರಾಕ್ಷಿ : ವೀರಶೈವನು ಲಿಂಗಧಾರಿಯಾಗಿ ಭಸ್ಮವ ಧರಿಸಿದಂತೆ ಸದಾ ತನ್ನ ಮೈ ಮೇಲೆ ರುದ್ರಾಕ್ಷಿಗಳನ್ನು ಹೊಂದಿರಬೇಕು. ಇವು ರುದ್ರನ ನೇತ್ರ ಜನ್ಯಗಳಾದ್ದರಿಂದ ಇವುಗಳಿಗೆ ರುದ್ರಾಕ್ಷಿ ಎಂದು ಕರೆಯುತ್ತಾರೆ. ರುದ್ರಾಕ್ಷಿ ಅಂಗ ಶೋಭೆಗಲ್ಲ, ಲಿಂಗಶೋಭೆಗಾಗಿ, ರುದ್ರಾಕ್ಷಿ ಪರಮ ಪಾವನ. ಧರಿಸಿದವನನ್ನು ಪುನೀತರನ್ನಾಗಿ ಮಾಡುತ್ತದೆ.

"ತತ್ವ ಚಿಂತಾಮಣಿಗಳೆಂಬ ರುದ್ರಾಕ್ಷಿಗಳ ಭಕ್ತಿದಾರದಲ್ಲಿ ಸರಗೊಳಿಸಿ, ಯುಕ್ತಿ ವಿಧಾನ ವಿಡಿದು ಧರಿಸಿ, ಸದ್ಯೋನ್ಮುಕ್ತನಾದೆನಯ್ಯಾ ______"(ವ–೬) ಎಂದು ತೋಂಟದ ಸಿದ್ಧಲಿಂಗನು ರುದ್ರಾಕ್ಷಿಗಳನ್ನು ತತ್ವ ಚಿಂತಾಮಣಿಗಳೆಂದು ಬಣ್ಣಿಸಿದ್ದಾನೆ.

ಮಂತ್ರ : – ವೀರಶೈವರಲ್ಲಿ ' ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರವು ಪರಮವಾಗಿದೆ. ಸಾಧಕನು ಶಿಷ್ಯನಾಗಿ ಸದ್ಗುರುಗಳಿಗೆ ಶರಣಾಗಿ ಮಂತ್ರೋಪದೇಶ ಪಡೆದುಕೊಳ್ಳಬೇಕು. ಪಂಚಾಕ್ಷರಿಯಿಂದ ಪಂಚಭೂತಗಳು ಜನಿಸಿವೆ(ವ–೨೯) ಎಂದು ಹೇಳುತ್ತಾರೆ. ಅಂಗನು ಲಿಂಗರೂಪನಾಗಲು, ಪಂಚಾಕ್ಷರಿ ಮಂತ್ರಬೇಕು.ಈ ಪಂಚಾಕ್ಷರಿ ಮಂತ್ರವೇ ಓಂಕಾರ ಜೊತೆಗೂಡಿ ಷಡಕ್ಷರ ಮಂತ್ರವೆನಿಸಿದೆ. "□ ಪಂಚಮಹಾಪಾತಕ ವಂಜುವುದು ಶಿವ ಮಂತ್ರಕ್ಕಯ್ಯ ಇದು ಕಾರಣ ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂಬ ಶಿವ ಮಂತ್ರಕ್ಕೆ ದುರಿತ ಬಿಟ್ಟೋಡುವುದಯ್ಯ □ "(ವಚನ–೧೮) ಎಂಬುದಾಗಿ ಮಂತ್ರ ಮಹಾಶಕ್ತಿಯನ್ನು ವಚನಗಳಲ್ಲಿ ಕೊಂಡಾಡಿದ್ದಾನೆ.

೧೬.ನಿರಸನದ ವಚನಗಳು

* ಹರತಾಳ ಚೆನ್ನಂಜೇದೇವ.

ಸಂಪಾದನೆಯ ಚೆನ್ನಂಜೇದೇವನಿಗೆ ಹರತಾಳ ಚೆನ್ನಂಜೇದೇವ, ಮೂಗೂರು ಚೆನ್ನಂಜೇದೇವ ಎಂಬ ಹೆಸರುಗಳು ಇವೆ. ಹಸ್ತ ಪ್ರತಿಗಳಲ್ಲಿ ಈತನನ್ನು " ಷಟ್ ಸ್ಥಲ ಚಕ್ರವರ್ತಿ ಹರತಾಳ ಚೆನ್ನಂಜೇದೇವರು" ಎಂದು ಕರೆದಿದ್ದಾರೆ. ಇದು ಇವನು ಸಾಧಿಸಿದ ಷಟ್ ಸ್ಥಲ ಸಿದ್ಧಿಯ ದ್ಯೋತಕವಾಗಿದೆ. 'ನಿರಸನದ ವಚನಗಳು' ಇವನು ಸೇರಿಸಿದ 'ಆಚರಣೆಯ ವಚನಗಳು' ಕೃತಿಯ ಕೊನೆಯ ಪಾದವಾಗಿದೆ.

ಮಧ್ಯದಲ್ಲಿರುವ ಸ್ಥಲ ಶೀರ್ಷಿಕೆಗಳನ್ನು ಕೈ ಬಿಟ್ಟು ಹಸ್ತ ಪ್ರತಿಯಲ್ಲಿ ಇದನ್ನು ಸ್ವತಂತ್ರ ಕೃತಿಯೆಂಬಂತೆ ಸಂಯೋಜಿಸಲಾಗಿದೆ. ಈ ಆಶಯವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ 'ನಿರಸನದ ವಚನಗಳು' ಎಂಬ ಈ ಕೃತಿಯನ್ನು ಸ್ವತಂತ್ರ ಕೃತಿಯೆಂದು ಪರಿಗಣಿಸಲಾಗಿದೆ[೭೮].

ಈ ಸಂಕಲನದಲ್ಲಿ ಬಸವಣ್ಣನಿಂದ ತೋಂಟದ ಸಿದ್ಧಲಿಂಗರ ವರೆಗಿನ ಹತ್ತು ಜನ ವಚನಕಾರರ ೨೮ ವಚನಗಳು ಸಂಗ್ರಹವಾಗಿವೆ. ಈ ಕೃತಿಯ ಆರಂಭದಲ್ಲಿ 'ನಿರಸನ ವಚನ'ವೆಂದೂ ಅಂತ್ಯದಲ್ಲಿ 'ಆಚರಣೆಯ ವಚನ ಮಂಗಳ ಮಹಾಶ್ರೀ' ಎಂದು ಕರೆದಿದ್ದಾನೆ.

ಭಕ್ತ ಹಾಗೂ ಪರಮ ವಿರಕ್ತರು ಆಚರಿಸಬೇಕಾದ ಸತ್‌ಕ್ರಿಯೆ, ಸದಾಚಾರ, ಸುಜ್ಞಾನಗಳು, ಬದುಕಿನಲ್ಲಿ ದೂರಗೊಳಿಸಬೇಕಾದ ದುರಾಚಾರಗಳನ್ನು ವಿವರಿಸುತ್ತದೆ. ಆತ್ಮ (ಲಿಂಗ) ಮೂಲತ: ಶುದ್ಧವಾದುದು. ಆದರೆ ಅದು (ಲಿಂಗ-ಆತ್ಮ) ಮಲಿನಗೊಂಡಾಗ ಅಂಗವಾಗುತ್ತದೆ. ಅಂಗವು ಈ ಮಲಿನವನ್ನು ಕಳೆದುಕೊಂಡು ಲಿಂಗವಾಗಬೇಕಾದರೆ ವ್ಯಕ್ತಿತ್ವದ ಉದಾತ್ತೀಕರಣದ ಸಾಧನೆಯ ಕ್ರಿಯೆಯಲ್ಲಿ ತೊಡಗಬೇಕು ಷಟ್ ಸ್ಥಲಾಚಾರಣೆಯಲ್ಲಿ ನಡೆದು ಐಕ್ಯ ಸ್ಥಿತಿಯನ್ನು ಗಳಿಸಿಕೊಳ್ಳಬೇಕು. ಹೀಗೆ ಅಂಗವು ಆಚರಣೆಯ ಮೂಲಕ ವಿವಿಧ ಹಂತಗಳನ್ನು ದಾಟಿ ಐಕ್ಯ ಸ್ಥಿತಿಯನ್ನು ಪಡೆದು ಅಂಗವು ಲಿಂಗವಾಗುವ ಪ್ರಕ್ರಿಯೆಯನ್ನು ಈ ಸಂಕಲನ ನಿರೂಪಿಸುತ್ತದೆ.

ಭಕ್ತನು ಭವ ಬಂಧನಗಳ ಸಂಕೋಲೆಗಳನ್ನು, ವಿಷಯಾದಿಗಳ ಮೇಲಿನ ಮೋಹವನ್ನು ಕಡಿದುಕೊಳ್ಳಬೇಕು ಅರಿವಿನಲ್ಲಿ ಅನುರಾಗ ಬೆರೆಸಿ, ಇಷ್ಟಲಿಂಗಾರ್ಚನೆಯಲ್ಲಿ ತೊಡಗಿದಾಗ ತನು, ಮನದ ಸೂತಕಗಳೆಲ್ಲ ನಷ್ಟವಾಗುತ್ತವೆ. ಆಗ ಅಂಗ ಗುಣಗಳೆಲ್ಲ ಲಿಂಗ ಗುಣಗಳಾಗಿ ಪರಿವರ್ತನೆ ಹೊಂದುತ್ತವೆ. ಆಗ ನಿರ್ಲಿಪ್ತತೆ ಮನದಲ್ಲಿ ಮೂಡುತ್ತದೆ. ಲೋಕದ ದೃಷ್ಟಿಯಲ್ಲಿ ಆತ ಭಿನ್ನವಾಗಿ ಕಾಣಿಸಿಕೊಳ್ಳುತ್ತಾನೆ. ಏಕೆಂದರೆ ಆತ ಅಜ್ಞಾನದಿಂದ ಅಹಂಮಮತೆ, ಮನದ ಚಂಚಲ, ಇಂದ್ರಿಯೋದ್ರೇಕ, ದೇಹಮೋಹ, ಅತಿಕಾಂಕ್ಷೆ, ತ್ರಿವಿಧ ಮಲಗಳು, ರಾಗದ್ವೇಷಗಳಿಂದ ಕೂಡಿದ ಮಾಯೆಯನ್ನು ತಿರಸ್ಕರಿಸುತ್ತಾನೆ. ಪರಿಶುದ್ಧಾತ್ಮನಾಗಿ ಕಾಣಿಸಿಕೊಳ್ಳುತ್ತಾನೆ.

> " ಸರ್ವ ಸಂಗ ಪರಿತ್ಯಾಗ ಮಾಡಿದ ಶಿವಶರಣನ
> ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ
> ಊರೊಳಗಿರ್ದಡೆ ಉಪಾಧಿಕನೆಂಬರು
> ಅಡವಿಯೊಳಗಿರ್ದಡೆ ಮೃಗನೆಂಬರು
> ಹೊನ್ನ ಬಿಟ್ಟಡೆ ದರಿದ್ರ ನೆಂಬರು
> ಹೆಣ್ಣಬಿಟ್ಟಡೆ ನಪುಂಸಕನೆಂಬರು
> ಮಣ್ಣ ಬಿಟ್ಟಡೆ ಪೂರ್ವ ಕರ್ಮಿಯೆಂಬರು
> ಮಾತನಾಡದಿರ್ದಡೆ ಮೂಗನೆಂಬರು
> ಮಾತನಾಡಿದಡೆ ಜ್ಞಾನಿಗೇಕಯ್ಯ ಮಾತೆಂಬರು
> ನಿಜವನಾಡಿದೆಡೆ ನಿಷ್ಟುರಿಯೆಂಬೆರು
> ಸಮತೆಯನಾಡಿದಡೆ ಅಂಜುವನೆಂಬರು
> ಇದು ಕಾರಣ ಕೂಡಲ ಚೆನ್ನ ಸಂಗಯ್ಯಾ
> ನಿಮ್ಮ ಶರಣ ಲೋಕದಿಚ್ಛೆಯ ನುಡಿಯ
> ಲೋಕದಿಚ್ಛೆಯ ನಡೆಯ" (ವಚನ-೨೦)

---

೭೮ ಡಾ॥. ಬಿ. ಆರ್. ಹಿರೇಮಠ (ಸಂ) ವಚನ ಸಂಕಲನ, ಸಂಪುಟ-೧

ಭಕ್ತರಲ್ಲದ ಲೌಕಿಕ ಜನರ ಮಧ್ಯೆ ಶರಣನ ಪಾಡನ್ನು ಚೆನ್ನ ಬಸವಣ್ಣ ಇಲ್ಲಿ ಚಿತ್ರಿಸಿದ್ದಾನೆ. ಲೋಕ ಏನೆ ಅಂದರೂ ಶರಣ ತನ್ನ ಪಾಡಿಗೆ ತಾನಿದ್ದು ಇಷ್ಟಲಿಂಗಾರ್ಚನೆಯಲ್ಲಿ ತೊಡುಗುವ ಕ್ರಿಯೆಯನ್ನು ತಿಳಿಸುತ್ತಾನೆ. ಭಕ್ತನು ಶಿವದೀಕ್ಷೆಯನ್ನು ಪಡೆದು ಪರಿಶುದ್ಧನಾಗುತ್ತಾನೆ. ಅವನು ಲೌಕಿಕ ಬದುಕಿನ ವಿಷಯಾಸಕ್ತಿಗಳನ್ನು ನಿರಸನ ಮಾಡಿ ಮನದಲ್ಲಿ ಯಾವಾಗಲೂ ಶಿವನಿಷ್ಠೆಯನ್ನು ಧರಿಸಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳಲ್ಲಿ ತೊಡಗಿ ಲಿಂಗಾಭಿಮುಖವಾಗಿ ನಡೆಯುತ್ತಾನೆ. ದ್ವೈತ ಭಾವವಳಿದು ಅದ್ವೈತ ಭಾವ, ನೆಲೆಗೊಂಡು ಲಿಂಗಾಂಗ ಸಾಮರಸ್ಯ ಪಡೆಯುತ್ತಾನೆ. ಕೃತಿ 'ನಿರಸನ ವಚನಗಳು' ಎಂದಿದ್ದರೂ ಕೃತಿಯಲ್ಲಿ ಆಚರಣೆಯ ಮಹತ್ವವನ್ನು ಎತ್ತಿ ಹೇಳಿದ್ದಾನೆ.

೧೭. 'ಮಿಶ್ರ ಷಟ್‌ಸ್ಥಲದ ವಚನ'

* ಅಜ್ಞಾತ ಸಂಕಲನಕಾರ.

ಷಟ್‌ಸ್ಥಲ ವೀರಶೈವ ದರ್ಶನದ ವೈಶಿಷ್ಟ್ಯ ಪೂರ್ಣ ಮಾರ್ಗ. ಮಾನಸಿಕವಾಗಿ ಅನುಸಂಧಾನಗೈವ ದಿವ್ಯ ಪಥ. ಜಗತ್ತು ಈಶ್ವರರ ಪರಸ್ಪರ ಸಂಬಂಧದ ತಾತ್ವಿಕ ಸಿದ್ಧಾಂತ ಹಾಗೂ ಭಕ್ತಿ, ಜ್ಞಾನ, ಕ್ರಿಯೆ ಇವು ಆಧ್ಯಾತ್ಮಿಕ ವಿಕಾಸಕ್ಕೆ ಕಾರಣವಾಗುತ್ತವೆ. ಷಟ್‌ಸ್ಥಲದ ಕ್ರಮಬದ್ಧ ವಿಕಾಸವನ್ನು ಬಸವಣ್ಣನು ಹೇಳಿದರೆ, ಆವ ಸ್ಥಲದಲ್ಲಿ ನಿಂತು ಅನುಸಂಧಾನಗೈಯುತ್ತಿದ್ದರೂ, ಆ ಸ್ಥಲಕ್ಕೆ ತಕ್ಕಂತೆ ಷಡ್ವಿದ ಲಿಂಗವ ಬೆರೆಸುವ ಷಟ್‌ಸ್ಥಲವುಂಟೆಂದು ಚನ್ನ ಬಸವಣ್ಣ ನಿರೂಪಿಸುತ್ತಾನೆ. ಅಂದರೆ ೩೬ ಸ್ಥಲಗಳ ಸೂಚನೆಯನ್ನು ನೀಡುತ್ತಾನೆ. ಅಲ್ಲದೆ ೬, ೧೮, ೩೬, ೧೦೧, ೨೧೬ ಸ್ಥಲ ಭೇದಗಳು ವೀರಶೈವರಲ್ಲಿವೆ. ಪ್ರಸ್ತುತ ಸಂಕಲನ ೩೬ ಸ್ಥಲಗಳ ಮಿಶ್ರ ಸ್ಥಿತಿಯದಾಗಿದೆ.

ಮಿಶ್ರ 'ಷಟ್‌ಸ್ಥಲಕೋವೆ' ಈ ಸಂಕಲನದ ಪೂರ್ವ ಪೀಠಿಕೆಯಾಗಿದೆ. ಇದರಲ್ಲಿ ನಮಃ ಶಿವಾಯ ಎಂಬ ವೀರಶೈವ ಮಂತ್ರದ ಪ್ರತಿಯೊಂದು ಬೀಜಾಕ್ಷರಕ್ಕೆ ಒಂದೊಂದು ವಚನದಂತೆ ಆರು ವಚನ ಮತ್ತು ಕೊನೆಯಲ್ಲಿ ಉಪಸಂಹಾರದಂತೆ ಒಂದು ವಚನವಿದೆ. ನಂತರದಲ್ಲಿ ಮಿಶ್ರ ಷಟ್‌ಸ್ಥಲದ ವಚನವಿದೆ.

"ಪೃಥ್ವಿಯೇ ಭಕ್ತಸ್ಥಲ, ಮುಖನಾಸಿಕ, ಆದರೆ ಆಚಾರಲಿಂಗ
ಅಪ್ಪು ಮಹೇಶ್ವರಸ್ಥಲ, ಮುಖ ಜಿಹ್ವೆ, ಆದರೆ ಗುರುಲಿಂಗ
ತೇಜ ಪ್ರಸಾದಿ ಸ್ಥಲ, ಮುಖನಯನ, ಆದರೆ ಶಿವಲಿಂಗ
ವಾಯು ಪ್ರಾಣಲಿಂಗಿಸ್ಥಲ, ಮುಖ ಸ್ಪರುಶನ. ಆದರೆ ಜಂಗಮಲಿಂಗ
ಆಕಾಶ ಶರಣಸ್ಥಲ, ಮುಖ ಶ್ರೋತ್ರ , ಆದರೆ ಪ್ರಸಾದಲಿಂಗ
ಅತೀತ ಐಕ್ಯಸ್ಥಲ, ಮುಖ ತೃಪ್ತಿ, ಆದರೆ ಮಹಾಲಿಂಗ (ವಚನ–೨)

ಹೀಗೆ ಷಟ್‌ಸ್ಥಲ ಉತ್ಪತ್ತಿಯನ್ನು ಹೇಳಿ ಮಹಾಲಿಂಗವೆಂಬುದು ಅಭೇದ್ಯ ಸ್ವರೂಪ, ಅತರ್ಕ್ಯ ಸ್ವರೂಪ, ಅದ್ವೈತ ಸ್ವರೂಪ, ನಿರಾಮಯ ನಿರಂಜನ ಪ್ರಪಂಚ. ಅದಕ್ಕೆ ವಿಶ್ವವೇ ಮುಖ, ವಿಶ್ವವೇ ಕಣ್ಣು, ವಿಶ್ವವೇ ಬಾಹುಗಳು, ಇಂತಹ ಮಹಾಲಿಂಗದಿಂದ ಪ್ರಸಾದಲಿಂಗದ ಉತ್ಪತ್ತಿ, ಪ್ರಸಾದ ಲಿಂಗಾಂಗದಿಂದ ಜಂಗಮ ಲಿಂಗ, ಜಂಗಮ ಲಿಂಗದಿಂದ ಶಿವಲಿಂಗ, ಶಿವಲಿಂಗದಿಂದ ಗುರುಲಿಂಗ, ಗುರುಲಿಂಗದಿಂದ ಆಚಾರಲಿಂಗ, ಆಚಾರಲಿಂಗದಿಂದ ಮತ್ತೆ ಷಟ್ ಸ್ಥಲಗಳ ಉತ್ಪತ್ತಿಯಾಗುತ್ತದೆ. ಎಂದು ತಿಳಿಸುತ್ತಾನೆ.

ಮುಂದೆ ೧೮ ಲಿಂಗಸ್ಥಲ, ೧೮ ಅಂಗಸ್ಥಲಗಳ ಪರಿಚಯವಿದೆ

ಲಿಂಗಸ್ಥಲ –೧೮

೧) ಆಚಾರಲಿಂಗ

೨) ಗುರುಲಿಂಗ

೩) ಶಿವಲಿಂಗ

೪) ಜಂಗಮ ಲಿಂಗ

೫) ಪ್ರಸಾದ ಲಿಂಗ

೬) ಮಹಾಲಿಂಗ

ಈ ಆರು ಲಿಂಗ ಸ್ಥಲಗಳು ಮತ್ತೆ ಮೂರು ಮೂರು ಸ್ಥಲಗಳನ್ನು ಒಳಗೊಂಡಿವೆ.

೧. ಆಚಾರಲಿಂಗ	: ಸದಾಚಾರ, ನಿಹಿತಾಚಾರ, ಗಣಾಚಾರ
೨. ಗುರುಲಿಂಗ	: ದೀಕ್ಷೆ, ಶಿಕ್ಷೆ, ಸ್ವಾನುಭವ
೩. ಶಿವಲಿಂಗ	: ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ
೪. ಜಂಗಮ ಲಿಂಗ	: ಸ್ವಯ, ಚರ, ಪರ
೫. ಪ್ರಸಾದಲಿಂಗ	: ಶುದ್ಧ, ಸಿದ್ಧ, ಪ್ರಸಿದ್ಧ
೬. ಮಹಾಲಿಂಗ	: ಪಿಂಡಜ, ಅಡಂಜ, ಬಿಂದ್ವಾಕಾಶ.

ಅಂಗಸ್ಥಲ –೧೮

೧. ಭಕ್ತ,

೨. ಮಾಹೇಶ್ವರ

೩. ಪ್ರಸಾದಿ

೪. ಪ್ರಾಣಲಿಂಗಿ

೫. ಶರಣ

೬. ಐಕ್ಯ

ಈ ಆರು ಅಂಗ ಸ್ಥಲಗಳು ಮತ್ತೆ ಮೂರು ಮೂರು ಸ್ಥಲಗಳನ್ನೊಳಗೊಂಡಿವೆ.

೧. ಭಕ್ತಸ್ಥಲ	: ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ
೨. ಮಾಹೇಶ್ವರಸ್ಥಲ	: ಇಹಲೋಕವೀರ, ಪರಮಲೋಕವೀರ, ಲಿಂಗವೀರ
೩. ಪ್ರಸಾದಿಸ್ಥಲ	: ಪದಾರ್ಥ ಪ್ರಸಾದಿ, ಅವಧಾನ ಪ್ರಸಾದಿ, ಸಮತಾಪ್ರಸಾದಿ
೪. ಪ್ರಾಣಲಿಂಗಿಸ್ಥಲ	: ಆಚಾರ ಪ್ರಾಣಿ, ಲಿಂಗಪ್ರಾಣಿ, ಜಂಗಮ ಪ್ರಾಣಿ.
೫. ಶರಣ ಸ್ಥಲ	: ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿಲಿಂಗಾರ್ಚಕ
೬. ಐಕ್ಯಸ್ಥಲ	: ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ.

ಷಟ್‌ಸ್ಥಲವು ಆಚರಣೆಯ ಅವಧಾನದಿಂದ ಹಾಗೂ ಅದರ ಅನುಭಾವದಿಂದ ಲಿಂಗಸ್ಥಲಗಳು ತ್ರಿವಿಧಗೊಂಡು ಹದಿನೆಂಟಾದರೆ, ಅಂಗಸ್ಥಲಗಳು ತ್ರಿವಿಧಗೊಂಡು ಹದಿನೆಂಟಾಗುವ ಪರಿದಿಯನ್ನು ವಿವರಿಸಿದ್ದಾನೆ. ಈ ಉಭಯ ಸ್ಥಲಗಳು ಸೇರಿ ೩೬ ಸ್ಥಲಗಳಾಗಿವೆ. ಇವೇ ಸರ್ವಾಚಾರ ಸಂಪತ್ತು ಎಂದು ಚೆನ್ನ ಬಸವಣ್ಣ ಸ್ಪಷ್ಟಪಡಿಸಿದ್ದಾನೆ.

ಮುಂದುವರೆದು ೧೮ ಲಿಂಗ, ಅಂಗ ಸ್ಥಲಗಳು ೩೬ ಲಿಂಗ, ಅಂಗ ಸ್ಥಲಗಳಾಗುವುದನ್ನು ಪ್ರಸ್ಥಾಪಿಸುತ್ತಾನೆ.

ಲಿಂಗಸ್ಥಲ –೩೬

೧. ಆಚಾರಲಿಂಗ : ಆಚಾರದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮ ಲಿಂಗ, ಪ್ರಸಾದ ಲಿಂಗ, ಮಹಾಲಿಂಗ.

೨. ಗುರುಲಿಂಗ : ಗುರುಲಿಂಗದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗ.

೩. ಶಿವಲಿಂಗ : ಶಿವಲಿಂಗದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

೪. ಜಂಗಮಲಿಂಗ: ಜಂಗಮದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

೫. ಪ್ರಸಾದಲಿಂಗ :ಪ್ರಸಾದಲಿಂಗಣದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

೬. ಮಹಾಲಿಂಗ : ಮಹಾಲಿಂಗದೊಳಗಣ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

ಅಂಗಸ್ಥಲ–೩೬

ಲಿಂಗಸ್ಥಲದಲ್ಲಿ ವಿವರಿಸಿದಂತೆ ಅಂಗಸ್ಥಲದಲ್ಲಿಯೂ ೩೬ ಸ್ಥಲಗಳಿವೆ. ಈ ಸ್ಥಲಗಳಲ್ಲಿ ಉಂಟಾಗುವ ಅನುಭವಗಳು ಭಕ್ತನ ಅಂಗದಲ್ಲಿ ತೋರುತ್ತವೆ. ಅದ್ದರಿಂದ ಅದರ ಪರಿಣಾಮಗಳೂ ಕೂಡಾ ಅಂಗನಲ್ಲಿ ೩೬ ಬಗೆಯದಾಗಿರುತ್ತವೆ. ಅಂಗಸ್ಥಲದಲ್ಲಿ ೩೬ ಲಿಂಗ ಸಂಬಂಧವ ಮಾಡಿಕೊಳ್ಳಬೇಕು ಈ ಸಂಬಂಧವು ಭಕ್ತಿಯ ಮೂಲಕ ಸಿದ್ಧಿಸುತ್ತವೆ.

೧. ಭಕ್ತಸ್ಥಲ : ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗ, ಇವು ಅನುಕ್ರಮವಾಗಿ ಲಿಂಗಸ್ಥಲಗಳೇ ಆಗಿವೆ. 'ಶ್ರದ್ಧಾ ಭಕ್ತಿ ಸಂಬಂಧ ಪಡುತ್ತದೆ.

೨. ಮಾಹೇಶ್ವರ ಸ್ಥಲ: ಆಚಾರ ನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ ಚರನಿಷ್ಠೆ, ಪ್ರಸಾದನಿಷ್ಠೆ, ಮಹನ್ನಿಷ್ಠೆ ಇವುಗಳಿಗೆ ನಿಷ್ಠಾಭಕ್ತಿಯು ಸಂಬಂಧ ಪಡುತ್ತದೆ.

೩. ಪ್ರಸಾಧಿ ಸ್ಥಲ : ಆಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಚರವಧಾನಿ, ಪ್ರಸಾದಾವಧಾನಿ, ಮಹದಾವಧಾನಿ, 'ಅನುಭಾವಭಕ್ತಿ' ಇದರ ವೈಶಿಷ್ಟ್ಯ.

೪. ಪ್ರಾಣಲಿಂಗಿಸ್ಥಲ: ಸಾಧ್ಯ, ವೇದ್ಯ, ಭೇದ್ಯ, ಯೋಗ್ಯ, ಸನ್ನಿಹಿತ ಮಹಾನುಭಾವಿ, ಇದರ ಮುಖ್ಯ ಲಕ್ಷಣ' ಅನುಭಾವಭಕ್ತಿ'

೫. ಶರಣ ಸ್ಥಲ : ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ. ಮನೋಮಗ್ನತೆ, ಘನಸಾಮರಸ್ಯ, ಇದು ಶರಣನಲ್ಲಿ ಲಿಂಗವಿಕಾಸತೆಯನ್ನುಂಟುಮಾಡುತ್ತದೆ.

೬. ಐಕ್ಯಸ್ಥಲ : ಆಚಾರ ತೃಪ್ತಿ, ಗೌರವತೃಪ್ತಿ, ಲಿಂಗತೃಪ್ತಿ, ಚರತೃಪ್ತಿ, ಪ್ರಸಾದತೃಪ್ತಿ, ನಿರ್ಭಾವತೃಪ್ತಿ. ತೃಪ್ತಿ ಎಂದರೆ ಆಯಾಸ್ಥಲಗಳಲ್ಲಿ ಉಂಟಾದ ಅನುಭಾವಗಳು.

ಲಿಂಗಸ್ಥಲ ೩೬, ಅಂಗಸ್ಥಲ ೩೬ ಸೇರಿ ೭೨ ಸ್ಥಲಗಳಾಗುತ್ತವೆ ಎಂದು ಷಟ್‌ಸ್ಥಲದ ನಿರ್ಣಯವನ್ನು ಚನ್ನಬಸವಣ್ಣ ತಿಳಿಸಿದ್ದಾನೆ.(ವಚನ–೪) ಈ ರೀತಿಯ ಸ್ಥಲ ವಿಂಗಡಣೆಯ ಕೃತಿಗಳಿಗೂ 'ಮಿಶ್ರಷಟ್ ಸ್ಥಲ'ವೆಂದು ಕರೆಯುತ್ತಾರೆ.

ಪ್ರಸ್ತುತ ಸಂಕಲನ ಕೃತಿಯೂ 'ಮಿಶ್ರ ಷಟ್‌ಸ್ಥಲ'ಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ೧೮ ಸಾಕಾರ ಸ್ಥಲವಾದರೆ ೧೮ ನಿರಾಕಾರ ಸ್ಥಲಗಳಿವೆ.

"ಸಾಕಾರ ಹದಿನೆಂಟು ಕುಳುವ ಅಂಗದಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಾಹೇಶ್ವರ, ಅಲ್ಲಲ್ಲಿಗೆ ಪ್ರಸಾದಿಯಾಗಿಪ್ಪ
ಆ ಸಾಕಾರವನೇನೆಂದು ಉಪಮಿಸುವೆನಯ್ಯಾ
ನಿರಾಕಾರ ಹದಿನೆಂಟು ಕುಳವ ಆತ್ಮದಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿರ್ಪ
ಆ ನಿರಾಕಾರವನೇನೆಂದು ಉಪಮಿಸುವೆನಯ್ಯಾ
ಈ ಉಭಯ ಕುಳ ಒಂದಾಗಿ ನಿಂದ ನಿಜಘನದಲ್ಲಿ ಕುಳವಡಗಿತ್ತು
ಕೂಡಲ ಚೆನ್ನಸಂಗಯ್ಯನೆಂಬುದು ಸಂದಿಲ್ಲದೆ ನಿಂದಿತ್ತು" (ವಚನ೧೧)(೧೪೧೨)

ಭಕ್ತ, ಮಾಹೇಶ್ವರ, ಪ್ರಸಾದಿ ಈ ಮೂರು ಸ್ಥಲಗಳು ಸಾಕಾರವಾಗಿ ವ್ಯಕ್ತವಾಗಿ ತಿಳುವಳಿಕೆಗೆ ಯೋಗ್ಯವೆನಿಸುತ್ತವೆ. ಬಾಹ್ಯ ಆಚರಣೆಗೆ ಅನುಗುಣವಾಗಿವೆ. ಅದಕ್ಕಾಗಿ ಇವುಗಳಿಗೆ ಸಾಕಾರ ಸ್ಥಲವೆಂದು ಪ್ರತಿಪಾದಿಸಿದ್ದಾರೆ. ಪ್ರಾಣಲಿಂಗಿ, ಶರಣ, ಐಕ್ಯ ಈ ಮೂರು ಸ್ಥಲಗಳಲ್ಲಿ ಆಂತರಿಕವಾದ ಆಚರಣೆಯಿರುತ್ತದೆ. ಅದಕ್ಕಾಗಿ ಇವು ನಿರಾಕಾರ ಷಟಸ್ಥಲಳೆಂದಿದ್ದಾರೆ. ಈ ನಿರಾಕಾರ ಷಟ್‌ಸ್ಥಲಾಚರಣೆಗೆ ಸಾಕಾರ ಷಟ್‌ಸ್ಥಲಗಳು ಪೂರಕವಾಗಿವೆ. ಪ್ರತಿಯೊಂದು ಸ್ಥಲವು ಆರಾಗುತ್ತವೆ.

೧. ಭಕ್ತಸ್ಥಲದಲ್ಲಿ : ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ.

೨. ಮಹೇಶ್ವರ ಸ್ಥಲದಲ್ಲಿ : ಮಹೇಶನ ಮಹೇಶ, ಮಹೇಶನ ಭಕ್ತ, ಮಹೇಶನ ಪ್ರಸಾದಿ, ಮಹೇಶನ ಪ್ರಾಣಲಿಂಗಿ, ಮಹೇಶನ ಶರಣ, ಮಹೇಶನ ಐಕ್ಯ.

೩. ಪ್ರಸಾದಿ ಸ್ಥಲದಲ್ಲಿ: ಪ್ರಸಾದಿಯ ಪ್ರಸಾದಿ, ಪ್ರಸಾದಿಯ ಭಕ್ತ, ಪ್ರಸಾದಿಯ ಮಹೇಶ, ಪ್ರಸಾದಿಯ ಪ್ರಾಣಲಿಂಗಿ, ಪ್ರಸಾದಿಯ ಶರಣ, ಪ್ರಸಾದಿಯ ಐಕ್ಯ.

೪. ಪ್ರಾಣಲಿಂಗಿ ಸ್ಥಲದಲ್ಲಿ : ಪ್ರಾಣಲಿಂಗಿಯ ಪ್ರಾಣಲಿಂಗಿ, ಪ್ರಾಣಲಿಂಗಿಯ ಭಕ್ತ, ಪ್ರಾಣಲಿಂಗಿಯ ಮಹೇಶ, ಪ್ರಾಣಲಿಂಗಿಯ ಪ್ರಸಾದ, ಪ್ರಾಣಲಿಂಗಿಯ ಶರಣ, ಪ್ರಾಣಲಿಂಗಿಯ ಐಕ್ಯ.

೫. ಶರಣ ಸ್ಥಲದಲ್ಲಿ : ಶರಣನ ಶರಣ, ಶರಣನ ಭಕ್ತ, ಶರಣನ ಮಹೇಶ, ಶರಣನ ಪ್ರಸಾದಿ, ಶರಣನ ಪ್ರಾಣಲಿಂಗಿ, ಶರಣನ ಐಕ್ಯ.

೬. ಐಕ್ಯಸ್ಥಲದಲ್ಲಿ :ಐಕ್ಯನ ಐಕ್ಯ, ಐಕ್ಯನ ಭಕ್ತ, ಐಕ್ಯನ ಮಹೇಶ, ಐಕ್ಯನ ಪ್ರಸಾದಿ, ಐಕ್ಯನ ಪ್ರಾಣಲಿಂಗಿ, ಐಕ್ಯನ ಶರಣ.

ಹೀಗೆ ಒಟ್ಟು ಮುವತ್ತಾರು ಸ್ಥಲಗಳಾಗುತ್ತವೆ. ಇದೇ ಕ್ರಮವನ್ನು ಮುಂದುವರೆಸಿ ಮೇಲಿನ ಮುವತ್ತಾರು ಸ್ಥಲಗಳಲ್ಲಿ ಮತ್ತೆ ಒಂದೊಂದರಲ್ಲಿ ಆರಾರು ಭಾಗಗಳನ್ನು ಮಾಡುವ ವಿಧಾನವು ಇದೆ. ಇದು ಬೆಳೆಯುತ್ತಾ ೨೧೬ ಸ್ಥಲಗಳವರೆಗೆ ಬೆಳೆಯುತ್ತದೆ.

ಮೇಲಿನ ವಚನಕ್ಕೆ ಬರೆದ ವಿವರಣೆಯೆಂಬಂತೆ ಸಾಕಾರ ೧೮ ಸ್ಥಲಕ್ಕೆ ೧೮ವಚನ ನಿರಾಕಾರ ೧೮ ಸ್ಥಲಕ್ಕೆ ೧೮ ವಚನಗಳನ್ನು ಚೆನ್ನ ಬಸವಣ್ಣನವರ ವಚನಗಳಿಂದ ಆಯ್ದು ಸಂಯೋಜಿಸಿದ್ದಾನೆ.

೩೬ ಸ್ಥಲದ ಸಂಕಲನಕ್ಕೆ ಪೀಠಿಕೆಯೆಂಬಂತೆ ಗುರು ಕರುಣ ಸ್ಥಲವನ್ನು, 'ಗುರು ಕರುಣ ಸ್ಥಲ'ಕ್ಕೆ ಪೂರ್ವ ಪೀಠಿಕೆ ಎಂಬಂತೆ 'ಮಿಶ್ರ ಷಟ್‌ಸ್ಥಲಕೋವೆ'[೭೯] ಎಂಬ ವಿವರವನ್ನು ೧೧ ವಚನಗಳಲ್ಲಿ ನೀಡಿದ್ದಾನೆ. ಇಲ್ಲಿಯ ಪೀಠಿಕೆ ಗಾತ್ರದಲ್ಲಿ ಚಿಕ್ಕದಾದರೂ ಸಿದ್ಧಾಂತದ ದೃಷ್ಟಿಯಿಂದ ಮಹತ್ವ ಪೂರ್ಣವಾದುದಾಗಿದೆ.

ಚೆನ್ನ ಬಸವಣ್ಣನವರ ವಚನಗಳನ್ನು ೧. ಭಕ್ತ, ಮಹೇಶ, ಪ್ರಸಾದಿ -- ೨. ಭಕ್ತನ ಭಕ್ತ, ಭಕ್ತನ ಮಹೇಶ -- ೩. ಭಕ್ತನ ಆಚಾರ ಲಿಂಗ, ಭಕ್ತನ ಗುರುಲಿಂಗ -- ಈ ರೀತಿಯ ಸ್ಥಲ ವಿಭಜನೆಯನ್ನು ಪೀಠಿಕಾರೂಪದಲ್ಲಿ ಪ್ರಸ್ಥಾಪಿಸಿ ನಂತರ ಭಕ್ತನ ಭಕ್ತ, ಭಕ್ತನ ಮಹೇಶ -- ಮುಂತಾದ ೩೬ ಸ್ಥಲಗಳಿಗೆ ವಚನಗಳನ್ನು ಆರಿಸಿ ಜೋಡಿಸಿ ಸಂಕಲನ ಮಾಡಿರುವುದು ಕಂಡು ಬರುತ್ತದೆ.

ಇವುಗಳಿಗೆ ಚೆನ್ನಬಸವಣ್ಣನವರ ೪೭ ವಚನಗಳನ್ನು ಆರಿಸಿಕೊಂಡು ಈ ಕೃತಿಯನ್ನು ಸಂಕಲಿಸಲಾಗಿದೆ. ಆದರೆ ಸಂಕಲನಕಾರನ ಹೆಸರು ಎಲ್ಲಿಯೂ ಉಕ್ತವಾಗಿಲ್ಲ. ಕೃತಿಯ ಪೂರ್ವ ಪೀಠಿಕೆ ಮತ್ತು ಸ್ಥಲ ವಿಭಜನೆಯನ್ನು ಪರಿಗಣಿಸಿದರೆ ಇದು ೧೬ನೇ ಶತಮಾನದ ನಂತರದ ಸಂಕಲನವೆಂದು ಊಹಿಸಬಹುದು.

೧೮. ಚೆನ್ನದಣ್ಣಾಯಕರ ವಚನ :

* ಅಜ್ಞಾತ ಸಂಕಲನಕಾರ

ಷಟ್‌ಸ್ಥಲಗಳ ಹಿನ್ನಲೆಯಲ್ಲಿ ರಚನೆಗೊಂಡಿರುವ ಚೆನ್ನ ಬಸವಣ್ಣನವರ ವಚನಗಳ ಸಂಕಲನವಿದು. ಇದು ಡಾ॥. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿ, ತೋಂಟದಾರ್ಯ ಸಂಸ್ಥಾನ ಮಠ ಗದಗ ಇವರು ಪ್ರಕಟಿಸಿರುವ 'ವಚನ ಸಂಕಲನ ಸಂಪುಟ-೭' ರಲ್ಲಿ ಪ್ರಕಟವಾಗಿದೆ. ಇದರಲ್ಲಿ ೧೭೯ ವಚನಗಳು ಸಂಗ್ರಹವಾಗಿವೆ. ಭಕ್ತ ಸ್ಥಲದಲ್ಲಿ ೪೧ ಮಾಹೇಶ್ವರ ಸ್ಥಲದಲ್ಲಿ ೩೫ ಪ್ರಸಾದಿ ಸ್ಥಲದಲ್ಲಿ ೭೯, ಪ್ರಾಣಲಿಂಗಿ ಸ್ಥಲದಲ್ಲಿ ೧೦ ಶರಣ ಸ್ಥಲದಲ್ಲಿ ೧೩, ಐಕ್ಯಸ್ಥಲದಲ್ಲಿ ೦೧ ವಚನಗಳು ಇವೆ. ಉಳಿದಂತೆ ಕೃತಿ ಅಪೂರ್ಣವಾಗಿದೆ. ಹಾಗೂ ಹಸ್ತಪ್ರತಿ ತುಂಬಾ ಜೀರ್ಣವಾಗಿದೆ. ಗರಿಗಳು ಮುರಿದು ಹೋಗಿ, ಹುಳತಿಂದು ತುಂಬ ದುಸ್ಥಿತಿಯಲ್ಲಿರುವುದರಿಂದ ವಚನಗಳು ದೊಡ್ಡ ಪ್ರಮಾಣದಲ್ಲಿ ಸಿಗಲಿಲ್ಲ. ದೊರೆತಿರುವ ವಚನದ ಮೊದಲ ಸಾಲನ್ನೋ ಅಥವಾ ಯಾವುದಾದರೂ ಒಂದು ಸಾಲನ್ನು ತೆಗೆದುಕೊಂಡು ಹೀಗಾಗಲೇ ಪ್ರಕಟವಾಗಿರುವ ಚೆನ್ನ ಬಸವಣ್ಣನವರ ವಚನಗಳಿಂದ ಖಿಲವಾಗಿರುವ ವಚನವನ್ನು ಪರಿಷ್ಕರಿಸಿ ಪ್ರಕಟಿಸಕಲಾಗಿದೆ.ಎಂದು ಸಂಪಾದಕರು ಪ್ರಸ್ಥಾವನೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

---

೭೯. 'ಕೋವೆ' ಎಂಬ ಶಬ್ದ ಕೋ ಪವಣಿಸು ಎಂಬ ಮೂಲದಿಂದ ನಿಷ್ಪತ್ತಿಯಾಗಿದೆ. 'ಕೋವೆ' ಎಂದರೆ ಪವಣಿಸಿದುದು ಅಂದರೆ ಮಾಲೆ ಎಂದರ್ಥ ಷಟ್ ಸ್ಥಲ ವಿಚಾರವನ್ನು ವಚನಗಳ ಮೂಲಕ ವಿವರವಾಗಿ ಮಾಲೆಯಂತೆ ಕ್ರಮಗೊಳಿಸಿದ ಕಾರಣ ಈ ಹೆಸರನ್ನು ಸಂಕಲನಕಾರ ಬಳಸಿದ್ದಾನೆ. ಡಾ॥. ಎಂ.ಎಂ. ಕಲಬುರ್ಗಿ, 'ವಚನ ಸಂಕಲನ ಸಂಪುಟ-೪' ಪ್ರಸ್ತಾವನೆ ಪುಟ- vii

***ಈ ಸಂಕಲನ ಚೆನ್ನಬಸವಣ್ಣನವರು ಸಂಕಲಿಸಿದ ವಚನ ಸಂಕಲನವಾಗಿಲ್ಲ. ಏಕೆಂದರೆ ಚೆನ್ನಬಸವಣ್ಣನವರ ಇತರೆ ಸಂಕಲನದ ವಚನಗಳು ಇಲ್ಲೂ ಸಿಗುತ್ತವೆ. ಆದ್ದರಿಂದ ಬೇರೊಬ್ಬ ಅಜ್ಞಾತ ಸಂಕಲನಕಾರ ಸಂಕಲಿಸಿದ ಸಂಕಲನವಾಗಿದೆ.

ಈ ಸಂಕಲನದ ವೈಶಿಷ್ಟ್ಯವೆಂದರೆ ಚೆನ್ನಬಸವಣ್ಣನವರ ೨೧ ಹೊಸ ವಚನಗಳು[೮೦] ದೊರೆತಿರುವುದು.

ಉದಾ : ಕರ್ಮಿಗೆ ಹಾವಾಗಿ ತೋರುವ
ಕರ್ಮಿಗೆ ಹಲ್ಲಿಯಾಗಿ ತೋರುವ
ಕರ್ಮಿಗೆ ಮೀನಾಗಿ ತೋರುವ
ಕೂಡಲ ಚೆನ್ನ ಸಂಗನ ಶರಣಂಗೆ ಲಿಂಗ ಜಂಗಮವಾಗಿ
ತೋರುವನಯ್ಯಾ ಬಸವಣ್ಣನು" (ವ–೭)

ಚೆನ್ನಬಸವಣ್ಣನು ಬಸವಣ್ಣನನ್ನು ಗುರುತಿಸಿದ ಬಗೆ ಇದು.

ಈಗಾಗಲೆ ಚೆನ್ನ ಬಸವಣ್ಣನವರ ೪ ವಚನ ಸಂಕಲನಗಳು ಪ್ರಕಟವಾಗಿವೆ. ಈ ನಾಲ್ಕು ಸಂಕಲನಗಳನ್ನು ಗದುಗಿನ ತೋಂಟದಾರ್ಯ ಸಂಸ್ಥಾನ ಮಠದವರು ಪ್ರಕಟಿಸಿದ್ದಾರೆ. ಈಗ ಈ ಮೂಲಕ ಅಪೂರ್ಣವಾಗಿರುವ ಸಂಕಲನ ಪ್ರಕಟವಾಗಿದೆ.

೧೯. ಚೆನ್ನವೀರಣ್ಣೊಡೆಯರು ಸೇರಿಸಿದ ಚೆನ್ನಬಸವೇಶ್ವರ ದೇವರ ಮಿಶ್ರಷಟ್‌ಸ್ಥಲ ವಚನ

ಈ ಸಂಕಲನವನ್ನು ಚೆನ್ನವೀರಣ್ಣೊಡೆಯರು ಸಂಕಲಿಸಿದ್ದಾರೆ. ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನ ಮಠ ಗದಗ ಇವರು ಪ್ರಕಟಿಸಿರುವ 'ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾ ಸಂಪುಟದ' ಮೊದಲ ಕೃತಿಯಾಗಿರುವ 'ಚೆನ್ನಬಸವರಾಜ ದೇವರ ಷಟ್‌ಸ್ಥಲ ವಚನ'ದ ಸಂಗ್ರಹ ರೂಪವಾಗಿದೆ.[೮೧]

ಕರ್ನಾಟಕ ಕವಿ ಚರಿತ್ರೆಯ ದ್ವಿತೀಯ ಸಂಪುಟ (೧೯೭೩)ದ ೩೮೫ ನೇ ಪುಟದಲ್ಲಿ ಚೆನ್ನವೀರಣ್ಣೊಡೆಯರು 'ಮಿಶ್ರಷಟ್‌ಸ್ಥಲದ ವಚನ' ಹೆಸರಿನ ಕೃತಿಯಲ್ಲಿ ಚೆನ್ನಬಸವಣ್ಣನವರ ೨೫೦ ವಚನಗಳನ್ನು ಸಂಕಲಿಸಿದ್ದಾರೆ ಎಂದು ಹೇಳಲಾಗಿದೆ. ಆದರೆ ಈ ಕೃತಿ ಇದುವರೆಗೂ ದೊರೆತಿರಲಿಲ್ಲ. ಈ ಕೃತಿ ಮೈಸೂರು ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆಯ ಸರಸ್ವತಿ ಭಂಡಾರದಲ್ಲಿ ಲಭ್ಯವಾಗಿದೆ. ಇದು ತುಂಬಾ ಶುದ್ಧವೂ, ಪೂರ್ಣವೂ ಆಗಿದೆ ಎಂದು ಸಂಪಾದಕರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇದರಲ್ಲಿ ೨೪೯ ವಚನಗಳಿವೆ. ಇದು ತೋಂಟದಾರ್ಯ ಸಂಸ್ಥಾನ ಮಠ ಗದಗ ಇವರು ಪ್ರಕಟಿಸಿರುವ 'ವಚನ ಸಂಕಲನ ಸಂಪುಟ–೬'ರಲ್ಲಿ ಪ್ರಕಟವಾಗಿದೆ. ಇದನ್ನು ಜಿ.ಎ. ಶಿವಲಿಂಗಯ್ಯ ನವರು ಸಂಪಾದಿಸಿದ್ದಾರೆ.

---

೮೦. ವಚನ ಕ್ರಮಸಂಖ್ಯೆ ೪೭, ೪೮, ೭೦, ೭೫, ೮೩, ೮೭, ೯೦, ೯೧, ೯೯, ೧೦೬, ೧೦೮, ೧೧೨, ೧೧೩, ೧೧೪, ೧೧೫, ೧೧೬, ೧೧೯, ೧೬೩, ೧೬೫, ೧೭೨.

೮೧. ಡಾ॥ ಎಂ.ಎಂ.ಕಲಬುರ್ಗಿ, ಜಿ.ಎ.ಶಿವಲಿಂಗಯ್ಯ, (ಸಂ) 'ವಚನ ಸಂಕಲನ ಸಂಪುಟ – ೬'. ಪ್ರಸ್ತಾವನೆ ಪುಟ – VII.

ಇದು ಪಿಂಡಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರ ಹೇಯ ಸ್ಥಲ, ಗುರುಕರುಣ ಸ್ಥಲಗಳ ಬಳಿಕ ಭಕ್ತ ಸ್ಥಲದಲ್ಲಿ ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ ಹೀಗೆ ಪ್ರತಿಯೊಂದು ಸ್ಥಲದಲ್ಲಿ ಆರು, ಆರು ಸ್ಥಲಗಳಂತೆ ೩೬ ಸ್ಥಲಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಹಾಗಾಗಿ ಇದನ್ನು 'ಮಿಶ್ರ ಷಟ್‌ಸ್ಥಲ' ಎಂದು ಕರೆಯಲಾಗಿದೆ. ಪಿಂಡವು ಗುರು ಕರುಣೆಯ ಮೂಲಕ ಭಕ್ತನಾಗಿ ಸಾಧನೆ ಹಾದಿಯಲ್ಲಿ ಸಾಗಿ ಅಂಗನು ಲಿಂಗದಲ್ಲಿ ಲಿಂಗವಾಗುವ ಪ್ರಕ್ರಿಯೆಯನ್ನು ಇಲ್ಲೂ ಹೇಳಲಾಗಿದೆ. ಈ ಕೃತಿಯ ಪ್ರಕಟಣೆಯ ಮೂಲಕ ಚೆನ್ನಬಸವಣ್ಣ ನವರು ಷಟ್‌ಸ್ಥಲ ವಚನ ಸಂಕಲನಗಳು ಪ್ರಕಟವಾದಂತಾಗಿದೆ.

೨೦. ಟೀಕಿನ ಏಕೋತ್ತರ ಶತ ಸ್ಥಲ "[೮೨]

*. ಅಜ್ಞಾತ ಸಂಕಲನಕಾರ

ಲಿಂಗಾಂಗ ಸಾಮರಸ್ಯದ ಚೌಕಟ್ಟನ್ನೆ ಮೂಲವಾಗಿಸಿಕೊಂಡ ಅನೇಕ ಅವಾಂತರ ಸ್ಥಲಗಳನ್ನು ಸೃಷ್ಟಿಸಿಕೊಳ್ಳುತ್ತ ೮,೧೬,೩೬,೧೦೧,೨೧೬, ಸ್ಥಲಗಳನ್ನೊಳಗೊಂಡ ಅನೇಕ ಸ್ಥಲಕಟ್ಟು ಸಾಹಿತ್ಯ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಈ ರೀತಿಯ ಸ್ಥಲಕಟ್ಟು ಸಾಹಿತ್ಯದಲ್ಲಿ ೧೦೧ ಸ್ಥಲ ಕಟ್ಟುಗಳನ್ನು 'ಏಕೋತ್ತರ ಶತ ಸ್ಥಲ' ಅಥವಾ 'ನೂರೊಂದು ಸ್ಥಲ' ಎಂಬ ಹೆಸರಿನಿಂದ ಕರೆಯುತ್ತಾರೆ, ಈ ನೂರೊಂದು ಸ್ಥಲಗಳು ಅಂಗ, ಲಿಂಗಸ್ಥಲಗಳ ಒಳಭಾಗಗಳಿಂದ ರಚಿತವಾಗಿ ಅಂಗ ಸ್ಥಲ ೪೪, ಲಿಂಗ ಸ್ಥಲ ೫೭ ಎಂದು ವಿಭಜಿಸಿಕೊಂಡು ಏಕೋತ್ತರ ಶತ ಸ್ಥಲಗಳಿಗೆ ಅರ್ಥ ವಿವರಣೆಯನ್ನು ನೀಡಿರುವ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಬಹಳ ಇವೆ.

'ಏಕೋತ್ತರ ಶತಸ್ಥಲ'ದ ಹಿನ್ನಲೆಯಲ್ಲಿ ವಿವಿಧ ವಚನಕಾರರ ವಚನಗಳನ್ನು ಸಂಕಲಿಸಿದ ಸಂಕಲನಕಾರರು ಒಂದೆಡೆಯಾದರೆ, 'ಏಕೋತ್ತರ ಶತಸ್ಥಲ' ಗಳನ್ನು ಇಟ್ಟುಕೊಂಡೆ ಸ್ವತಂತ್ರ ವಚನ ರಚಿಸಿದ ವಚನಕಾರರು ಇದ್ದಾರೆ. ಈ ಸೃಷ್ಟಿ ಅನುಸೃಷ್ಟಿ ಕಾರ್ಯಗಳ ಜೊತೆಯಲ್ಲಿಯೆ ಏಕೋತ್ತರ ಶತಸ್ಥಲ ಕೃತಿಗಳಿಗೆ ಟೀಕೆ, ವ್ಯಾಖ್ಯಾನವನ್ನು ಬರೆದವರಿದ್ದಾರೆ, ಮತ್ತೆ ಕೆಲವರು ಏಕೋತ್ತರ ಶತಸ್ಥಲಗಳ ಹಿನ್ನಲೆಯಲ್ಲಿ ವಚನಗಳನ್ನು ಸಂಗ್ರಹಿಸುತ್ತ, ಅವುಗಳಿಗೆ ಟೀಕೆಯನ್ನು ಬರೆದಿದ್ದಾರೆ, ಅಂಥವರಲ್ಲಿ ಪ್ರಸ್ತುತ ಕೃತಿ 'ಟೀಕಿನ ಏಕೋತ್ತರ ಶತಸ್ಥಲ'ವನ್ನು ಸಂಗ್ರಹಿಸಿದ ಸಂಗ್ರಹಕಾರನೂ ಒಬ್ಬ. ಈತನ ವೈಯಕ್ತಿಕ ವಿಚಾರಗಳಾವುವು ದೊರೆಯುವುದಿಲ್ಲ.

ಶೂನ್ಯ ಸಂಪಾದನೆ ಕೃತಿಗಳಿಗೆ ಸಂಗ್ರಹ ಕೃತಿಗಳಿಗೆ 'ಏಕೋತ್ತರ ಶತಸ್ಥಲ' ಕೃತಿಗಳಿಗೂ ಸಂಗ್ರಹ ಕೃತಿಗಳು ಹುಟ್ಟಿಕೊಂಡಿವೆ, ಮಹಾಲಿಂಗ ದೇವನ' ಏಕೋತ್ತರ ಶತಸ್ಥಲ'ವನ್ನು ಧರಿಸಿ ರಚಿತವಾದ ಕೃತಿಯೆ ಪ್ರಸ್ತುತ ಟೀಕಿನ ಏಕೋತ್ತರ ಶತ ಸ್ಥಲ', ಈ ಕೃತಿ ಮಹಾ ಲಿಂಗದೇವನ 'ಏಕೋತ್ತರ ಶತಸ್ಥಲ' 'ನೂರೊಂದು ಸ್ಥಲನಾಮ'ಗಳೂ ಸೂತ್ರ, ಗದ್ಯವನ್ನು ಸ್ವೀಕರಿಸಲ್ಪಟ್ಟಿದೆ, ಸ್ಥಲಕ್ಕೆ ಒಂದೊಂದರಂತೆ ಅಲ್ಲಿಂದ ಒಂದೊಂದು ವಚನವನ್ನು ಮಾತ್ರ ಆರಿಸಿಕೊಂಡಿದ್ದಾನೆ. ಕೆಲವು ವಚನಗಳು ಏಕೋತ್ತರ ಶತಸ್ಥಲದಲ್ಲಿ ಇರಲಾರದ ವಚನಗಳನ್ನು ಅನ್ಯ ಮೂಲಗಳಿಂದ

---

೮೨. ಬಿ.ಆರ್. ಹಿರೇಮಠ (ಸಂ) ಟೀಕಿನ ಏಕೋತ್ತರ ಶತಸ್ಥಲ, ವಚನಸಂಕಲನ ಸಂಪುಟ-೪. ವೀ.ಅ.ಸಂಸ್ಥೆ ತೋಟದಾರ್ಯ ಸಂಸ್ಥಾನ ಮಠ, ಗದಗ.

ಪಡೆದು ಹೊಸದಾಗಿ ಜೋಡಿಸಿದ್ದಾನೆ. ಇಲ್ಲಿಯ ಪ್ರತಿಯೊಂದು ವಚನಕ್ಕೂ ವ್ಯಾಖ್ಯಾನವಿದ್ದು, ಇವುಗಳನ್ನು ಹೆಚ್ಚಾಗಿ ಪ್ರಭುದೇವರ 'ಲಿಂಗಲೀಲಾವಿಲಾಸಚಾರಿತ್ರೆ' ಹಾಗೂ ಮಹಾಲಿಂಗ ದೇವನ 'ಪ್ರಭುದೇವರ ಟೀಕಿನ ವಚನ'ಗಳಿಂದ ಆಯ್ದು ಕೊಳ್ಳಲಾಗಿದೆ, ಇನ್ನೂ ಕೆಲವು ವಚನಗಳಿಗೆ ನೀಡಿದ ವ್ಯಾಖ್ಯಾನಗಳನ್ನು ಪ್ರಸ್ತುತ ಕೃತಿಯ ಸಂಗ್ರಹಕಾರನೇ ರಚಿಸಿರಬೇಕು.

ಒಟ್ಟಿನಲ್ಲಿ ಇಂಥ ವಚನ ಸಂಗ್ರಹ ಕೃತಿಗಳು ವ್ಯಾಖ್ಯಾನಗಳಿಂದ ಕೂಡಿರುವುದು ಇವುಗಳ ವೈಶಿಷ್ಟ್ಯವನ್ನು ಹೆಚ್ಚಿಸಿವೆ.

ಈ ಕೃತಿಯಲ್ಲಿ ೧೨ ಪರಿಚ್ಛೇದಗಳಿವೆ, ಆರು ಅಂಗ ಸ್ಥಲಗಳಿಂದ ೪೪ ಸ್ಥಲಗಳು, ಆರು ಲಿಂಗ ಸ್ಥಲಗಳಿಂದ ೫೭ ಸ್ಥಲಗಳು. ಒಟ್ಟು ಸೇರಿ ೧೦೧ ಸ್ಥಲಗಳಿವೆ, ಅಂಗ ಸ್ಥಲದಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬುದರ ವಿವರಣೆಯಿದೆ, ಲಿಂಗ ಸ್ಥಲದಲ್ಲಿ ಆಚರಣೆಗಳಿಂದ ಅಂಗನ ಮೇಲಾಗುವ ಪರಿಣಾಮಗಳಾವುವು ಎಂಬುದನ್ನು ಉದ್ದೇಶವಾಗಿಟ್ಟುಕೊಂಡು ಮಾಡಿದ ವಿವರಣೆಗಳಿವೆ.

ಅಂಗಸ್ಥಲ			ಲಿಂಗಸ್ಥಲ		
ಭಕ್ತ	–	೧೫	ಆಚಾರಲಿಂಗ	–	೦೯
ಮಹೇಶ	–	೦೯	ಗುರುಲಿಂಗ	–	೦೯
ಪ್ರಸಾದಿ	–	೦೭	ಶಿವಲಿಂಗ	–	೦೯
ಪ್ರಾಣಲಿಂಗ	–	೦೫	ಜಂಗಮಲಿಂಗ	–	೦೯
ಶರಣ	–	೦೪	ಪ್ರಸಾದಿಲಿಂಗ	–	೧೨
ಐಕ್ಯ	–	೦೪	ಮಹಾಲಿಂಗ	–	೦೯
ಒಟ್ಟು	–	೪೪ ಸ್ಥಲ +	೫೭ ಸ್ಥಲ =೧೦೧ ಸ್ಥಲ		

ಈ ಕೃತಿ ಪಿಂಡಾದಿ, ಜ್ಞಾನ ಶೂನ್ಯಂತವಾದ ೧೦೧ ಸ್ಥಲಗಳ ಅಡಿಯಲ್ಲಿ ಸ್ಥಲ, ಸ್ಥಲ ಸೂತ್ರ, ಸ್ಥಲ ವಚನ, ವಚನ ಟೀಕೆಯನ್ನು ಒಳಗೊಂಡಿದೆ.

೨೧. ಸಕಲ ಪುರಾತನ ವಚನ [೮೩]

* ಅಜ್ಞಾತ ಸಂಕಲನಕಾರ

ವೀರಶೈವ ಸಾಹಿತ್ಯ ಮತ್ತು ಧರ್ಮ ರಕ್ಷಣೆಯಲ್ಲಿ ೧೫–೧೬ ನೇ ಶತಮಾನ ಮಹತ್ವ ಪೂರ್ಣ ಕಾಲವಾಗಿದೆ. ಈ ಕಾಲದಲ್ಲಿ ವಚನ ರಚನೆ, ಸಂಗ್ರಹ, ಸಂಕಲನ, ಸಂಪಾದನ ಕೃತಿಗಳು ಬಂದಿರುವ ಬಗ್ಗೆ ಹಿಂದೆಯೆ ಚರ್ಚಿಸಲಾಗಿದೆ, ಪ್ರಸ್ತುತ, 'ಸಕಲ ಪುರಾತನ ವಚನ' ಕೃತಿಯು ವಚನ ಸಂರಕ್ಷಣ ಕಾರ್ಯದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ, ಇದೊಂದು ಅಜ್ಞಾತ

---

೮೩. ಎಸ್.ಶಿವಣ್ಣ (ಸಂ) 'ಸಕಲ ಪುರಾತರ ವಚನ', 'ವಚನ ಸಂಕಲನ ಸಂಪುಟ–೪' ಪ್ರಕಟಣೆ ಶ್ರೀಜ.ತೋಂ.ಸಂ.ಮಠ.ಗದಗ.

ವಚನ ಸಂಕಲನಕಾರನ ಕೃತಿಯಾಗಿದೆ, ಇದರಲ್ಲಿ ಜೇಡರ ದಾಸಿಮಯ್ಯನಿಂದ ತೋಂಟದ ಸಿದ್ಧಲಿಂಗರವರೆಗೆ ಒಟ್ಟು ೨೯ ಜನ ಶರಣ, ಶರಣೆಯರ ೧೫೯ ವಚನಗಳು ಹಾಗೂ ಒಂದು ಸ್ವರ ವಚನವಿದೆ, ಇಲ್ಲಿ ಮೂರು ಜನ ವಚನಕಾರ್ತಿಯರ ವಚನಗಳನ್ನು ಬಿಟ್ಟರೆ ಉಳಿದುವೆಲ್ಲ ಪುರಷ ವಚನಕಾರರ ವಚನಗಳಾಗಿವೆ.

ಇಲ್ಲಿ ಸಂಗ್ರಹಿಸಿದ ವಚನಗಳಿಗೆ ಯಾವುದೇ ವಿಷಯದ ಬದ್ಧತೆಯಿಲ್ಲ. ಇಲ್ಲಿ ಶರಣಸತಿ ಲಿಂಗಪತಿ ಭಾವದ ವಚನಗಳು, ಬಸವ, ಶಿವ ಮಹಿಮಾ ಸ್ತೋತ್ರದ ವಚನಗಳು, ಆಚರಣೆಯ ವಚನಗಳು, ಅಷ್ಟಾವರಣ ವಚನಗಳು, ಷಟ್‌ಸ್ಥಲ, ಮಿಶ್ರ ಷಟ್‌ಸ್ಥಲ, ೧೮ ಅಂಗ ಸ್ಥಲ, ೧೮ ಲಿಂಗ ಸ್ಥಲಗಳನ್ನು ಗುರುತಿಸುವ ವಚನಗಳು, ಸಂಸಾರ ನಿರಸನ ವಚನಗಳು, ಕೆಲವು ಬೆಡಗಿನ ವಚನಗಳು ಈ ಸಂಕಲನದಲ್ಲಿವೆ.

ವಚನ ೧೩ ರಿಂದ ೨೬ ಎ ವರೆಗಿನ ವಚನ ಹಾಗೂ ಸ್ವರ ವಚನವನ್ನು ಮಹಾಲಿಂಗ ದೇವನ, 'ಏಕೋತ್ತರ ಶತಸ್ಥಲ'ದಿಂದ ಉದ್ಧರಿಸಲಾಗಿದೆ. ೩೧ ನೇ ವಚನದಿಂದ ೩೮ ನೇ ವಚನದವರೆಗೆ ಮಿಶ್ರ ಷಟ್ ಸ್ಥಲದ ವಿವರಣೆಯಿದೆ. ೧೦೭ ನೇ ವಚನದಲ್ಲಿ ಅಷ್ಟಾಂಗ ಯೋಗಗಳ ವಿವರವಿರುವ ತೋಂಟದ ಸಿದ್ಧಲಿಂಗರ ವಚನವಿದೆ. ೧೦೭ಎ ನಲ್ಲಿ 'ಪ್ರಾಣಲಿಂಗಿಯ ಭಕ್ತ' ಎಂಬ ಶೀರ್ಷಿಕೆಯೊಂದಿಗೆ ತೋಂಟದ ಸಿ ಸಿದ್ಧಲಿಂಗರ ಐದು ವಚನಗಳಿವೆ. ೧೧೨ನೇ ವಚನದ ಶೀರ್ಷಿಕೆ 'ಪ್ರಾಣಲಿಂಗಿಯ ಮಾಹೇಶ್ವರ' ಎಂದಿದೆ. ಅಲ್ಲಿಂದ ಸಂಕಲನದ ಕೊನೆಯವರೆಗೂ ಮತ್ತಾವ ಶೀರ್ಷಿಕೆಗಳೂ ಇರುವುದಿಲ್ಲ. ಉಳಿದಂತೆ ಮೇಲೆ ತಿಳಿಸಿದ ಎಲ್ಲಾ ವಿಷಗಳಿಗೆ ಸಂಬಂಧಿಸಿದಂತೆ ವಚನಗಳನ್ನು ಸಂಗ್ರಹಿಸಲಾಗಿದೆ. ಕೃತಿಯ ಆದಿ-ಅಂತ್ಯದಲ್ಲಿ ಯಾವುದೇ ವಿವರವಿಲ್ಲದೆ, ವಚನಗಳಿಂದ ಆರಂಭವಾಗಿ ವಚನಗಳಿಂದಲೇ ಮುಕ್ತಾಯವಾಗುತ್ತದೆ. ಸಾಹಿತ್ಯಾಂಶದಿಂದ ಕೂಡಿದ, ಅರ್ಥ ಗರ್ಭಿತವಾದ ಕೆಲವು ವಚನಗಳಿವೆ.[೮೪] ತೋಂಟದ ಸಿದ್ಧಲಿಂಗರ ಅತಿ ಹೆಚ್ಚು (೬೩) ವಚನಗಳನ್ನು ಸಂಕಲನದಲ್ಲಿ ಸಂಗ್ರಹಿಸಿದ್ದಾನೆ. ತೋಂಟದ ಸಿದ್ಧಲಿಂಗರ ವಚನಗಳು ಇರುವುದರಿಂದ ಸಂಕಲನಕಾರ ಇವರ ಪರಂಪರೆಗೆ ಸೇರಿದವನಾಗಿದ್ದಾನೆ ಎಂದೂ ಊಹಿಸಬಹುದಾಗಿದೆ.

---

೮೪. ಉದಾ : ೧೩, ೪೭, ೬೩, ೧೧೧, ೧೧೨, ೧೧೩, ೧೧೪,ಮ ೧೧೮, ೧೨೫, ೧೫೩, ೧೫೪ ಕ್ರಮ ಸಂಖ್ಯೆಯ ವಚನಗಳನ್ನು ನೋಡಬಹುದು.

ಅಧ್ಯಾಯ –೭

ವಚನ ಸಂಕಲನ ಸಾಹಿತ್ಯದ ವೈಶಿಷ್ಟ್ಯಗಳು

ಅಧ್ಯಾಯ : ೭

ವಚನ ಸಂಕಲನ ಸಾಹಿತ್ಯದ ವೈಶಿಷ್ಟ್ಯಗಳು :

ವಚನಯುಗ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತು ಹಲವು ದೃಷ್ಟಿಗಳಿಂದ ವೈಶಿಷ್ಟ್ಯ ಪೂರ್ಣವಾದುದು. ಭಾವ, ಭಾಷೆ, ವಸ್ತು ಹಾಗೂ ಶೈಲಿಗಳ ದೃಷ್ಟಿಯಿಂದಲೂ ಹೊಸತನದ ಕಾಲವದು. ಶರಣರ ಸಾಮಾಜಿಕ ಸುಧಾರಣೆ, ಧರ್ಮ ಜಾಗೃತಿಗಳ ಚಳುವಳಿಯ ಅಂಗವಾಗಿ ಅವರು ನುಡಿದ ನುಡಿಗಳೇ ವಚನಗಳಾಗಿವೆ. ವಚನಗಳು ಸಾಹಿತ್ಯ ಸೃಷ್ಟಿಗೆಂದು ರಚಿತವಾದವುಗಳಲ್ಲ. ಸಾಹಿತ್ಯ ನಿರ್ಮಾಣ ಶರಣರ ಉದ್ದೇಶವು ಆಗಿರಲಿಲ್ಲ. ತಮ್ಮ ಬದುಕಿನ ಸಾಧನೆಯ ಹಾದಿಯಲ್ಲಿ ಕಂಡುಕೊಂಡ ಆಂತರಿಕ ಅನುಭವಗಳನ್ನು, ಸಾಮಾಜಿಕ, ಧಾರ್ಮಿಕ ಪರಿಸರದಲ್ಲಿನ ಅಸಮಾನತೆಯನ್ನು ತೊಡೆದು ಹಾಕಲು ಚಿಂತಿಸಿದಾಗ ಅಂತರಾಳದಿಂದ ಮೂಡಿದ ಭಾವನೆಗಳನ್ನು ಅಭಿವ್ಯಕ್ತಿಸಿ, ಅದರ ಮೂಲಕ ಜನರನ್ನು ಜಾಗ್ರತಗೊಳಿಸುವುದು ಅವರ ಆಶಯವಾಗಿತ್ತು. ಆ ಹಿನ್ನಲೆಯಲ್ಲಿ ವೀರಶೈವ ಧರ್ಮಕ್ಕೊಂದು ವ್ಯವಸ್ಥಿತ ಚೌಕಟ್ಟನ್ನು ನಿರ್ಮಿಸಿ ಶಿವಕೇಂದ್ರಿತ ಲಿಂಗಧಾರಣೆಯ ಅಡಿಯಲ್ಲಿ ಅದನ್ನು ಪ್ರತಿಪಾದಿಸುವುದೂ ಆಗಿತ್ತು. ಈ ಹಿನ್ನೆಲೆಯಲ್ಲಿ ಮನದಾಳದಿಂದ ಮೂಡಿಬಂದ ಮಾತುಗಳನ್ನೆ ವಚನಗಳೆಂದು ಕರೆಯಲಾಗಿದೆ.

ಕಲ್ಯಾಣ ಕ್ರಾಂತಿಯಿಂದಾಗಿ ವೀರಶೈವಧರ್ಮ, ವಚನ ಸಾಹಿತ್ಯ ಹಾಗು ಶರಣರು ಚದುರಿಹೋದರು. ೧೩–೧೪ ನೇ ಶತಮಾನಗಳ ಕಾಲದಲ್ಲಿ ವೀರಶೈವ ಧರ್ಮ ಮತ್ತು ಶರಣರು ಅಜ್ಞಾತವಾಸವನ್ನು ಅನುಭವಿಸಿದರು. ಅಪಾರವಾಗಿ ನಿರ್ಮಾಣವಾಗಿದ್ದ ವಚನ ರಾಶಿಯೂ ದಿಕ್ಕಾಪಾಲಾಯಿತು. ಕೆಲವಷ್ಟು ನಾಶವೂ ಆಯಿತು. ೧೪, ೧೫, ೧೬ ನೇ ಶತಮಾನದ ಹೊತ್ತಿಗೆ ಪುರಾಣ ಕಾವ್ಯ ಕೃತಿಗಳ ರಚನೆಯ ಜೊತೆಯಲ್ಲಿ ಮರೆಯಾಗಿದ್ದ ವಚನ ಸಾಹಿತ್ಯದ ರಚನೆ, ಸಂಗ್ರಹ, ಸಂಕಲನ, ಸಂಪಾದನೆಗಳು ಬೆಳಕು ಕಂಡವು. ಈ ಮೂಲಕ ವೀರಶೈವ ಶರಣರು ತಮ್ಮ ಧರ್ಮವನ್ನು ಉಳಿಸುವ ಮತ್ತು ಪ್ರಚಾರಗೊಳಿಸುವತ್ತ ಹೆಚ್ಚಿನ ಗಮನ ಹರಿಸಿದರು.ಅದಕ್ಕೆ ಪ್ರಮಾಣವಾಗಿ ವಚನ ಸಾಹಿತ್ಯವನ್ನು ಬಳಸಿಕೊಂಡರು. ಹಾಗಾಗಿ ವಚನ ಸಾಹಿತ್ಯದ ಪುನರ್ಜನ್ಮವಾಯಿತು. ವೈಷ್ಣವ ಧರ್ಮದ ಪ್ರಾಬಲ್ಯ ಮುರಿಯಲು, ವೀರಶೈವ ಧರ್ಮವನ್ನು ಎತ್ತಿ ಹಿಡಿದರು. ಅದಕ್ಕೂ ವಚನಗಳನ್ನೇ ಮಾದರಿಯನ್ನಾಗಿ ಬಳಸಿದರು. ವೀರಶೈವ ಧರ್ಮದ ಸಿದ್ಧಾಂತಗಳನ್ನು, ತಾತ್ವಿಕ ಚಿಂತನೆಗಳನ್ನು ವಚನಗಳಲ್ಲಿಯೇ ಕಂಡುಕೊಂಡದ್ದು ವಿಶೇಷ.

ವೀರಶೈವ ಧರ್ಮವನ್ನು ಸಮರ್ಥಿಸುವ ವಚನ ಸಂಯೋಜನೆಗೆ ಎಲ್ಲಿಲ್ಲದ ಮಹತ್ವ ಬಂದಿತು. ನೂರೊಂದು ವಿರಕ್ತರು, ತೋಂಟದ ಸಿದ್ಧಲಿಂಗ ಶಿವಯೋಗಿಗಳ ನೇತೃತ್ವದ ೭೦೧ ವಿರಕ್ತರು ಸಮರೋಪಾದಿಯಲ್ಲಿ ಈ ಕಾರ್ಯವನ್ನು ಕೈಗೊಂಡರು. ಇವರೆಲ್ಲರ ಪ್ರಯತ್ನದಿಂದಾಗಿ ಅಳಿವಿನ ಹೊಸ್ತಿಲಲ್ಲಿದ್ದ ವಚನ ಸಾಹಿತ್ಯ ವೀರಶೈವ ಮಹಾಮನೆಯೊಳಗೆ ಕಾಲಿರಿಸಿತು. ಸಂಕಲನಕಾರರು, ದಾರ್ಶನಿಕರು, ಘನಪಂಡಿತರು, ಶ್ರೇಷ್ಠ ಅನುಭಾವಿಗಳೂ ಆಗಿದ್ದಾರೆ. ಇವರು ಕೈಗೊಂಡ ವಚನ ಸಂಯೋಜನಾ ಕಾರ್ಯ ಯಾಂತ್ರಿಕವಾದುದಲ್ಲ. ಹನ್ನೆರಡನೆಯ ಶತಮಾನದ ವಚನಕಾರರದು ಸೃಷ್ಟಿಕಾರ್ಯ. ಇವರದು ಸಂಘಟನಾ ಕಾರ್ಯ. ಇವರು ಅಪಾರವಾದ ವಚನ ಸಾಗರದೊಳಗೆ ಇಳಿದು ವಿಷಯಾನುಗುಣವಾಗಿ ಹೆಕ್ಕಿ ತೆಗೆದು, ಓರೆ ಕೋರೆಗಳನ್ನು ಸರಿಪಡಿಸಿ,

ಒಪ್ಪ ಓರಣವಾಗಿ ಅಣಿಗೊಳಿಸಿ, ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆದಿರುವುದು ಅವರ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. ಇದು ವೀರಶೈವ ಸಿದ್ಧಾಂತಗಳಲ್ಲಿನ ಪರಿಣತಿಯನ್ನು ಎತ್ತಿ ತೋರಿಸಲಾಗಿದೆ.

ವಚನಗಳು ಬಿಡಿ ರೂಪದ ಮುಕ್ತಕ ಸಾಹಿತ್ಯ. ಇದನ್ನು ಆ ನಂತರದ ಶರಣರು ಸಂಗ್ರಹ (ಸಕಲ ಪುರಾತನರ ವಚನ ಕಟ್ಟು), ಸಂಕಲನ (ಸ್ತೋತ್ರ ಪ್ರಧಾನ, ತತ್ವ ಪ್ರಧಾನ), ಸಂಪಾದನೆ (ಶೂನ್ಯ ಸಂಪಾದನೆ ಇತ್ಯಾದಿ)ಗಳ ರೂಪದಲ್ಲಿ ಸಂಯೋಜಿಸಿದರು. ವಚನ ರಾಶಿಯೊಳಗೆ ಒಂದಾಗಿದ್ದ ವಚನಗಳನ್ನು ನಿರ್ದಿಷ್ಟ ವಸ್ತುವಿನ ವ್ಯಾಪ್ತಿಯೊಳಗೆ ತಂದರು. ಅವುಗಳಿಗೆಲ್ಲ ಒಂದೊಂದು ಶೀರ್ಷಿಕೆ ನೀಡಿದರು. ಬಸವಣ್ಣನನ್ನು ಹನ್ನೆರಡನೆಯ ಶತಮಾನದಿಂದ ಇಂದಿನವರೆಗೂ ಒಂದು ಆದರ್ಶವೆಂದೇ ಭಾವಿಸಿ ಅವನಿಗೆ ವಚನಗಳ ಮೂಲಕವೇ ನುಡಿ ನಮನ ಸಲ್ಲಿಸಿದ್ದಾರೆ. ಸ್ತುತಿಸಿದ್ದಾರೆ. ಹಾಡಿ ಹೊಗಳಿದ್ದಾರೆ, ಗೌರವಿಸಿದ್ದಾರೆ. ಹೀಗೆ ಬಸವಣ್ಣನವರ ಬಗ್ಗೆ ಬರೆದ ಸ್ತುತಿ ರೂಪದ ವಚನಗಳನ್ನೇ ಆಯ್ದು ಸಂಕಲನ ಮಾಡಿಕೊಟ್ಟಿರುವುದು ಸಂಕಲನಕಾರರ ಔಚಿತ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಬಸವಣ್ಣನವರ ವಿಶಿಷ್ಟ ವ್ಯಕ್ತಿತ್ವ ನಮಗೆ ಒಂದು ಕಡೆಯೇ ಸಿಗುವುದರಿಂದ ಬಸವಣ್ಣನನ್ನು ಇನ್ನೂ ಹೆಚ್ಚಾಗಿ ಅರ್ಥೈಸಲು, ಗೌರವಿಸಲು ಅವಕಾಶ ಮಾಡಿಕೊಟ್ಟಿವೆ ವಚನ ಸಂಕಲನಗಳು. ಅದೇ ರೀತಿ ಚೆನ್ನಬಸವಣ್ಣನನ್ನು, ಅಲ್ಲಮ ಪ್ರಭುದೇವರನ್ನು ಸ್ತುತಿಸಿದ, ಶರಣರನ್ನು, ಶಿವಮಹಿಮೆಯನ್ನು, ಷಟ್‌ಸ್ಥಲಗಳನ್ನು, ಅನುಭಾವಗಳನ್ನು ಸ್ತುತಿಸಿದ ವಚನ ಸಂಕಲನಗಳು ದೊರೆಯುತ್ತವೆ. ವೀರಶೈವಾಚರಣೆಗೆ ಸಂಬಂಧಿಸಿದ, ಅಷ್ಟಾವರಣಕ್ಕೆ ಸಂಬಂಧಿಸಿದ, ಷಟ್‌ಸ್ಥಲ, ಮಿಶ್ರ ಷಟ್‌ಸ್ಥಲ, ಏಕೋತ್ತರ ಶತಸ್ಥಲಗಳಿಗೆ ಸಂಬಂಧಿಸಿದ ವಚನ ಸಂಕಲನಗಳು ಬೇರೆ ಬೇರೆಯಾಗಿಯೇ ದೊರೆಯುವುದರಿಂದ ವೀರಶೈವ ಧರ್ಮದ ತಾತ್ವಿಕ ವಿಚಾರಗಳು, ಬಿಡಿ ಬಿಡಿಯಾಗಿ ಮತ್ತು ಸಮಗ್ರವಾಗಿ ದೊರಕುವಂತಾದುದು ಈ ಕಾಲದ ವೈಶಿಷ್ಟ್ಯವಾಗಿದೆ.

ಸಂಕಲನಕಾರರು ಭಿನ್ನವಾದ ಸ್ಥಲ ಪರಿಕಲ್ಪನೆಯ ಅಡಿಯಲ್ಲಿ ವಚನಗಳನ್ನು ಸಂಕಲಿಸಿದರು. ಸಂಕಲನಕಾರರ ಸ್ಥಲಾನುಗತ ಜೋಡಣೆಯು ಲಿಂಗಾಂಗ ಸಾಮರಸ್ಯದ ವಿವರಣೆಗಾಗಿಯೇ ಸೃಷ್ಟಿಯಾಗಿದೆ. ಇಲ್ಲಿನ ಸ್ಥಲ ವಿಭಜನೆಗಳು ಅರ್ಥಪೂರ್ಣವಾಗಿವೆ. ಲಿಂಗದಿಂದ ಜನಿಸಿ, ಲಿಂಗವೇ ಆಗುವ ಪರಿವರ್ತನ ಕ್ರಮವನ್ನು ಶರಣರ ವಚನಗಳ ಮೂಲಕವೇ ಪರಿಚಯ ಮಾಡಿಕೊಟ್ಟಿರುತ್ತಾರೆ.

ಶೈವ ಧರ್ಮದ ಪರಿಪಕ್ವ ಫಲವಾದ ವೀರಶೈವವು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಾಚರಣೆಯ ವಿಚಾರಣೆಗಳನ್ನು ಪ್ರತಿಪಾದಿಸುತ್ತದೆ. ಈ ಎಲ್ಲಾ ಆಚರಣೆಗಳು ಭಕ್ತಿಯ ಸೋಪಾನದ ಮೇಲೆಯೇ ನಿಂತಿವೆ. ಲಿಂಗಾಂಗ ಸಾಮರಸ್ಯಕ್ಕೆ ಸ್ಥಲಚೌಕಟ್ಟುಗಳನ್ನೇ ಮೂಲವಾಗಿಸಿಕೊಂಡ ಅನೇಕ ಅವಾಂತರ ಸ್ಥಲ ವಿಭಜನೆ ವಿಶಿಷ್ಟವಾದುದು. ೬, ೧೮, ೩೬, ೧೦೧, ೨೧೬ ಸ್ಥಲಗಳನ್ನೊಳಗೊಂಡ ಅನೇಕ ಸ್ಥಲಕಟ್ಟು ಸಾಹಿತ್ಯ ಬೆಳೆದು ಬಂದಿದೆ. ಹೊಸ ಹೊಸ ಸ್ಥಲಗಳನ್ನು, ಉಪಸ್ಥಲಗಳನ್ನು ಕಲ್ಪಿಸಿ, ಅವುಗಳಿಗೆ ಬೇಕಾದ ಸಾರವತ್ತಾದ ವಚನಗಳನ್ನು ಆಯ್ದು ಸಂಕಲಿಸಿರುವುದು ಸಂಕಲನಕಾರರ ವಿದ್ವತ್ತನ್ನು ತೋರಿಸುತ್ತದೆ.

ಮಿಶ್ರ ಷಟ್‌ಸ್ಥಲ ಮತ್ತು ಏಕೋತ್ತರ ಶತಸ್ಥಲ ಸಂಕಲನಗಳು ಮತ್ತು ರಚನೆಗಳು ವಿವಿಧತೆಗೆ ಸಾಕ್ಷಿಯಾಗಿವೆ. ಈ ಸ್ಥಲಕಟ್ಟು ಸಾಹಿತ್ಯವು ಕನ್ನಡ ಸಾಹಿತ್ಯದ ನವೀನ ಸೃಷ್ಟಿ. ಇದೊಂದು ದರ್ಶನ ಸಾಹಿತ್ಯ.

ಸ್ಥಲಕಟ್ಟುಗಳಿಗೆ ಅನುಗುಣವಾಗಿ ವಚನ ಸಂಕಲನ ಹಾಗೂ ಅವುಗಳಿಗೆ ಬರೆದ ಟೀಕೆ– ಟಿಪ್ಪಣಿಗಳು ಕನ್ನಡ ಸಾಹಿತ್ಯದ ಅದರಲ್ಲೂ ವೀರಶೈವ ಸಾಹಿತ್ಯಕ್ಕೆ ಈ ಕಾಲವು ಕೊಟ್ಟ ಮಹತ್ವಪೂರ್ಣ ಕೊಡುಗೆ. ಜೊತೆಗೆ ಸೃಜನ ಶೀಲ ವಚನಗಳನ್ನೂ ವಿಮರ್ಶೆಗೊಳಪಡಿಸಿ, ಟೀಕೆ ಟಿಪ್ಪಣಿ, ವ್ಯಾಖ್ಯಾನ, ವಿವರಣೆಗಳನ್ನು ಸಂಕಲನಗಳು ತಮ್ಮ ಮಿತಿಯಲ್ಲಿಯೇ ಕೊಟ್ಟವು. ಸಂಕಲನಕಾರರ ವಚನಗಳಲ್ಲಿ ಅಂತರ್ಗತವಾಗಿರುವ ತಾತ್ವಿಕ ವಿಚಾರಗಳನ್ನು ತಮ್ಮ ವೈಯಕ್ತಿಕ ಅನುಭವದ ನಿಜದಲ್ಲಿ ಕಂಡು, ಆದರ್ಶವನ್ನು ತುಂಬಿ ಎಲ್ಲರ ಬುದ್ಧಿಭಾವಕ್ಕೆ ತಟ್ಟುವಂತೆ ವ್ಯಕ್ತಪಡಿಸಿರುವುದು. ಸಂಕಲನ ಸಾಹಿತ್ಯದ ವೈಶಿಷ್ಟ್ಯ.

ಬಸವಣ್ಣ, ಅಲ್ಲಮ ಪ್ರಭು, ಚೆನ್ನಬಸವಣ್ಣ ಮೊದಲಾದ ಪ್ರಸಿದ್ಧರ ವಚನಗಳನ್ನು ವೀರಶೈವಧರ್ಮದ ತತ್ವ, ಸಿದ್ಧಾಂತ ಮತ್ತು ಷಟ್‌ಸ್ಥಲಗಳ ನೆಲೆಯಲ್ಲಿ ವರ್ಗೀರಿಸಿರುವುದು ತಿಳಿದಿರುವ ವಿಷಯ. ಆದರೆ ಪ್ರಸಿದ್ಧರಲ್ಲದ, ಕಂಡೂ ಕೇಳರಿಯದ ನೂರಾರು ಶರಣರು ಬರೆದ ವಚನಗಳನ್ನು ಹೊಸ ಪರಿಭಾಷೆ, ಹೊಸ ಶೀರ್ಷಿಕೆಗಳೊಂದಿಗೆ ವರ್ಗೀಕರಿಸಿರುವುದು, ಅವರ ವಚನಗಳಲ್ಲಿಯೂ ವೀರಶೈವ ಧರ್ಮ ತಾತ್ವಿಕ ವಿಚಾರಗಳಿರುವುದನ್ನು ಕಂಡುಕೊಂಡಿರುವುದು ಕುತೂಹಲದ ವಿಚಾರ. ಹೊಸ ಹೊಸ ವಚನಕಾರರನ್ನು, ಇದುವರೆಗೂ ಪ್ರಕಟವಾಗಿರುವ ಹೊಸ ವಚನಗಳನ್ನು ಸಂಶೋಧಿಸಿ ಸಂಕಲನಗಳಲ್ಲಿ ಅಳವಡಿಸಿರುವುದು ಸಂಕಲನಗಳ ವಿಶೇಷತೆ ಎನಿಸಿದೆ. ಸಂಕಲನಗಳಲ್ಲಿ ಎಡೆ ಪಡೆದ ಕೆಲವು ವಚನಗಳಿಗೆ ವಚನಾಂಕಿತಗಳಿವೆ. ಆದರೆ ಅವುಗಳನ್ನು ರಚಿಸಿದ ವಚನಕಾರರ ಹೆಸರುಗಳು ಲಭ್ಯವಾಗಿಲ್ಲ. ಇಂತಹ ನೂತನ ವಚನಗಳ ಕುರಿತು ಅಧ್ಯಯನ ನಡೆಯಬೇಕಿದೆ.

ಸಂಕಲನ ಸಾಹಿತ್ಯದಲ್ಲಿ ಸೇರುವೆಯಾದ ವಚನಗಳಲ್ಲಿ ಸಾಮಾಜಿಕ ಕಳಕಳಿಯ ವಚನಗಳಿಗೆ ಸ್ಥಾನ ದೊರೆಕಿಲ್ಲ. ಇಲ್ಲಿನ ವಚನಗಳೆಲ್ಲ ತಾತ್ವಿಕ, ಆಚಾರ, ಅಷ್ಟಾವರಣ, ಸ್ತುತಿರೂಪದ ಹಿನ್ನಲೆಯವೇ ಆಗಿವೆ. ಅವು ನೀತಿ ಬೋಧೆಯ ನಿರೂಪಣೆಯನ್ನು ಹೊಂದಿವೆ. ಮಠಾಧಿಪತಿಗಳ ನೇತೃತ್ವದಲ್ಲಿ ನಡೆದ ಸಂಯೋಜನ ಕ್ರಿಯೆ ಧರ್ಮಕ್ಕೆ ಸಂಬಂಧ ಪಟ್ಟದ್ದೇ ಆಗಿದೆ. ಈ ಕಾಲದಲ್ಲಿ ವಚನಗಳನ್ನು ರಚಿಸಿದವರೂ ಕೂಡಾ ಧರ್ಮ ಮತ್ತು ತಾತ್ವಿಕ ಚೌಕಟ್ಟಿನೊಳಗೆ ರಚಿಸಿದರು. ಅದರಿಂದ ಹೊರಬರಲು ಯಾರಿಂದಲೂ ಸಾಧ್ಯವಾಗಲಿಲ್ಲ. ಈ ಎಲ್ಲಾ ಸಂಕಲನಕಾರರ ಮತ್ತು ವಚನಕಾರರ ಮೇಲೆ ಬಸವಾದಿ ಶರಣರ ಪ್ರಭಾವ ದಟ್ಟವಾಗಿದೆ. ಆದರೂ ಇವರು ಸಮಕಾಲೀನ ಸಾಮಾಜಿಕ ಅಂಶಗಳ ಕಡೆ ಅಷ್ಟಾಗಿ ಗಮನಹರಿಸದಿರುವುದೇ ಆಶ್ಚರ್ಯ.

ಈ ಕಾಲದ ಶರಣೆಯರು ವಚನ ರಚನೆಯಲ್ಲಾಗಲಿ, ವಚನ ಸಂಯೋಜನ ಕಾರ್ಯದಲ್ಲಾಗಲಿ ತಮ್ಮನ್ನು ತೊಡಗಿಸಿಕೊಂಡದ್ದು ಕಂಡುಬರುವುದಿಲ್ಲ. ಬಸವಾದಿ ಶರಣರ ಕಾಲದ ಸ್ತ್ರೀ ಪರವಾದ ಕಾಳಜಿ ಇಲ್ಲಿ ಕಾಣೆಯಾಯಿತು. ಮನುಸ್ಮೃತಿಯ ಮುಂದುವರಿದ ಭಾಗದಂತೆ ಕಂಡು ಬರುವ ಈ ಕಾಲದ ವೀರಶೈವ ಧರ್ಮದಲ್ಲಿ ಸ್ತ್ರೀ ಬಸವ ಪೂರ್ವಯುಗಕ್ಕೆ ಮರಳಿದಳು. ಈ ಬಗೆಯ ಮಹತ್ಕಾರ್ಯವನ್ನು ಕೈಗೊಳ್ಳುವುದಕ್ಕೆ ವೀರಶೈವ ಗುರು– ಶಿಷ್ಯರಿಗೆ ಆಂತರಿಕ ಹಾಗು ಬಾಹ್ಯ ಪ್ರೇರಣೆಗಳಿದ್ದವು. ಅಂದರೆ ೧೫ನೇ ಶತಮಾನದ ಮಧ್ಯೆ ಮತ್ತು ಉತ್ತರ ಭಾಗದಲ್ಲಿ ನಡೆದ ವೈಧಿಕ ವಾಙ್ಮಯ ಸಂಬಂಧಿಯಾದ ಚಟುವಟಿಕೆಗಳಿಂದ ವೀರಶೈವ ವಿದ್ವಾಂಸರು ಉತ್ತೇಜಿತರಾದರು. ಈ ಹಿನ್ನೆಲೆಯಲ್ಲಿಯೇ ವಚನ ಸಂರಕ್ಷಣ, ಸಂಕಲನ, ಸಂಪಾದನ ಕಾರ್ಯಗಳನ್ನು ಕೈಗೆತ್ತಿಕೊಂಡರು. ಆದರೂ ವಿಷಯಾಧಾರಿತ ವಚನ ಸಂಕಲನಗಳು ದೊರೆತಿರುವುದು ಗಮನಿಸತಕ್ಕ ವಿಷಯವಾಗಿದೆ.

ಅಧ್ಯಾಯ –೮

ಸಮಾರೋಪ

ಅಧ್ಯಾಯ – ೮

ಸಮಾರೋಪ

ಸಾಮಾಜಿಕ ಪ್ರತಿಭಟನೆ, ಕೆಳ ವರ್ಗದವರಿಗಾಗಿ ಮಿಡಿತ, ವ್ಯವಸ್ಥೆಯ ಬಗೆಗಿನ ಪ್ರತಿರೋಧಗಳಿಗೆ ೧೨ ನೇ ಶತಮಾನದ ವಚನಕಾರರು ತಮ್ಮನ್ನು ತೆರೆದುಕೊಂಡಂತೆ ೧೫-೧೬ ನೇ ಶತಮಾನದ ವಚನಕಾರರು, ಸಂಕಲನಕಾರರು ತೆರೆದುಕೊಳ್ಳಲಿಲ್ಲ. ವಚನಕಾರರ ವೈಚಾರಿಕ ಪ್ರಖರತೆ ತಣ್ಣಗಾಗಿ ಅದೊಂದು ಸಾಂಪ್ರದಾಯಿಕ ಮತ ಪ್ರಸಾರದಿಂದಾಗಿ ನಿರ್ಜೀವ ಸಮಾಜದ ಉದಯಕ್ಕೆ ಕಾರಣವಾಯಿತು. ವೀರಶೈವ ಧರ್ಮದ ಬಗೆಗಿದ್ದ ನಂಬಿಕೆ, ಕ್ರಮೇಣ ಅನುಯಾಯಿಗಳ ನಿಷ್ಠೆ, ತ್ಯಾಗದಿಂದ, ಮಿತಿಯಿಲ್ಲದ ಪ್ರಯತ್ನಗಳಿಂದಾಗಿ ನಾಡಿನಲ್ಲಿ ಮತ್ತೆ ತಲೆಯೆತ್ತಿ ನಿಲ್ಲುವಂತಾಯಿತು. ತಾವು ನಂಬಿದ್ದ ಧರ್ಮವನ್ನು ಪ್ರಚಾರ ಮಾಡುವುದರ ಮೂಲಕ ಒಂದು ಹೊಸ ರೀತಿಯ ಧರ್ಮ ಪ್ರಧಾನ ಸಮಾಜವನ್ನು ಸ್ಥಾಪನೆ ಮಾಡುವುದು ಅವರ ಮುಖ್ಯೋದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯ ಸೃಷ್ಟಿ, ವಚನ ಸಂಯೋಜನೆ ಅನಿವಾರ್ಯವಾಯಿತು.

ದ್ವಿತೀಯ ಅಲ್ಲಮನೆಂದೇ ಗುರುತಿಸಿಕೊಂಡ ತೋಂಟದ ಸಿದ್ಧಲಿಂಗರು ಅದ್ವಿತೀಯ ನಾಯಕರಾಗಿ ಅಲ್ಲಮಪ್ರಭು ಸಂಪ್ರದಾಯವನ್ನು ಮತ್ತೆ ಆರಂಭಿಸಿದರು. ಶರಣರ ಆತ್ಮವಾಗಿದ್ದ ಅನುಭವ ಸಾಹಿತ್ಯವನ್ನು, ಬಸವಾದಿ ಶರಣರು ರೂಪಿಸಿದ ಷಟ್‌ಸ್ಥಲ ತತ್ವ ಸಿದ್ಧಾಂತಗಳನ್ನು ಸುವ್ಯವಸ್ಥೆಗೊಳಿಸಿ, ವ್ಯಾಪಕವಾಗಿ ಪ್ರಸಾರ ಮಾಡಿ, ೧೨ ನೇಯ ಶತಮಾನದ ಅನುಭವ ಮಂಟಪ ಸಂಸ್ಕೃತಿಯನ್ನು ಮತ್ತೆ ಹುಟ್ಟುಹಾಕಿ ಪ್ರಚಾರಗೊಳಿಸಿದ ಕೀರ್ತಿ ಸಿದ್ಧಲಿಂಗರಿಗೆ ಸಲ್ಲುತ್ತದೆ. ಇವರು ತಮ್ಮ ೭೦೧ ಜನ ಶಿಷ್ಯ, ಪ್ರಶಿಷ್ಯ ಸಮುದಾಯದೊಂದಿಗೆ ನಾಡಿನಾದ್ಯಂತ ಸಂಚರಿಸಿ ವೀರಶೈವ ಧರ್ಮದ ಜಾಗೃತಿ, ಸಾಹಿತ್ಯ ಮತ್ತು ಸಂಸ್ಕೃತಿಗಳ ಮರು ನಿರ್ಮಾಣಕ್ಕೆ ದುಡಿದಿರುವುದು ಕಂಡುಬರುತ್ತದೆ. ಹಾಗಾಗಿಯೇ ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಇವರಿಗೆ ಮಹತ್ವದ ಸ್ಥಾನವಿದೆ. ನಾಡಿನಾದ್ಯಂತ ಅಲ್ಲಮಪ್ರಭು ಪೀಠ ಪರಂಪರೆಗಳ ನಿರ್ಮಾಣದ ಜೊತೆಗೆ ಅಪೂರ್ವವಾದ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕಿದರು. ಇವರೆಲ್ಲ ಸೃಜನ ಸಾಹಿತ್ಯಕ್ಕಿಂತ ಸಂಯೋಜನ ಸಾಹಿತ್ಯಕ್ಕೆ ಹೆಚ್ಚಿನ ಗಮನಹರಿಸಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಒಬ್ಬ ವ್ಯಕ್ತಿ ಇಷ್ಟು ದೊಡ್ಡ ಶಿಷ್ಯ ಸಮುದಾಯವನ್ನು ಕಟ್ಟಿ ಅಪಾರವಾದ ಸಾಹಿತ್ಯ ಕೃತಿಗಳ ನಿರ್ಮಾಣಕ್ಕೆ ಮೂಲ ಪ್ರೇರಕನಾಗಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅಪೂರ್ವವಾದುದು.

ತೋಂಟದ ಸಿದ್ಧಲಿಂಗರ ಶಿಷ್ಯ ಪ್ರಶಿಷ್ಯ ಪರಂಪರೆ ಬಹಳ ದೊಡ್ಡದು. ಇವರ ಶಿಷ್ಯ ಪರಂಪರೆ ಅನೇಕ ಕವಲೊಡೆದು ಯಾವುದು ಮೂಲ, ಯಾವುದು ಶಾಖೆ, ಎಂಬ ಸಂದೇಹ ಮೂಡುತ್ತದೆ. ಶಿಷ್ಯ ಪರಂಪರೆಯ ಎಲ್ಲಾ ಮೂಲಗಳನ್ನು ಸಂಗ್ರಹಿಸಿ ಸಿದ್ಧಲಿಂಗರ ಶಿಷ್ಯ ಪರಂಪರೆಯ ಮೂಲವನ್ನು ಹುಡುಕುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ವಿರಕ್ತರು, ಗುರುಗಳು, ಶಿಷ್ಯ ಪ್ರಶಿಷ್ಯರು, ನಾಡಿನ ಧರ್ಮ ನಿಷ್ಠ ಶರಣರು ಚಳುವಳಿಯ ರೂಪದಲ್ಲಿ ಕಾರ್ಯಕೈಗೊಂಡಿದ್ದರಿಂದ ಅಪಾರ ಪ್ರಮಾಣದ ವಚನ ಸಂಗ್ರಹ, ಸಂಕಲನ, ಸಂಪಾದನ ಹಾಗೂ ಇತರೆ ವೀರಶೈವ ಸಾಹಿತ್ಯ ಕೃತಿಗಳು ಉಳಿದುಕೊಂಡು ಬಂದಿದೆ. ಆದರೆ ಬಸವಾದಿ

ಶರಣರ ಸಮಾಜಮುಖಿ ಸಾಹಿತ್ಯ ಚಳುವಳಿಗೂ ಇವರ ಧಾರ್ಮಿಕ ಚಿಂತನೆಯ ಚಳುವಳಿಗೂ ಬಹಳ ವ್ಯತ್ಯಾಸವಿರುವುದು ತಿಳಿದುಬರುತ್ತದೆ. ಇವರು ವೀರಶೈವ ಧರ್ಮಮುಖಿ ಚಿಂತನೆಗೆ, ತಾತ್ವಿಕ ನಿಲುವುಗಳಿಗೆ, ಭಕ್ತಿ, ಪೂಜೆ, ಆಚಾರ, ಆಚರಣೆ, ಗುರುಲಿಂಗ ಜಂಗಮ ಮಠ ಪರಂಪರೆಗಳಿಗೆ ಒತ್ತು ನೀಡಿದರು. ಈ ಹಿನ್ನಲೆಯಲ್ಲಿಯೇ ಅನೇಕ ಜನ ವಚನಕಾರರು ವಚನ ರಚಿಸಿದರು. ಬಸವಾದಿ ಶರಣರ ನಂತರ ಸುಮಾರು ೩೦೦ ವರ್ಷಗಳ ಮೇಲೆ ಮತ್ತು ವಚನ ರಚನೆ ಮಾಡಿದವರಲ್ಲಿ ತೋಂಟದ ಸಿದ್ಧಲಿಂಗರೇ ಮೊದಲಿಗರು. ಅವರ ಶಿಷ್ಯರು, ಪ್ರಶಿಷ್ಯರು, ವಚನ ರಚನ ಕಾರ್ಯದಲ್ಲಿ ತೊಡಗಿದ್ದು ಕಂಡುಬರುತ್ತದೆ. ವಚನ ಸಂಯೋಜನಕಾರರು ಬಸವಾದಿ ಶರಣರ ವಚನಗಳನ್ನು ವಿಷಯಾಧಾರಿತವಾಗಿ ಸಂಗ್ರಹಿಸಿದರು. ಈ ಕಾಲದ ಸೃಜನಶೀಲ ವಚನ ಮತ್ತು ವಚನ ಸಂಯೋಜನೆಗಳನ್ನು ಶುದ್ಧ ಸಾಹಿತ್ಯವಾಗಿ ಗುರುತಿಸಲು ಕಷ್ಟವಾಗುವಂತಹ ಪರಿಸರ ಈ ಕಾಲದಲ್ಲಿತ್ತು. ಅದರ ಪ್ರಭಾವವು ಸಂಯೋಜನ ಸಾಹಿತ್ಯದ ಮೇಲಾಗಿದೆ.

ವಚನ ಸಂಯೋಜನೆಯಲ್ಲಿ ಸ್ತುತಿ ಪ್ರಧಾನ, ತತ್ವ ಪ್ರಧಾನ ವಚನಗಳನ್ನು, ಸ್ವರ ವಚನಗಳನ್ನು ಹಾಗೂ ಇತರೆ ರೂಪದ ವಚನಗಳನ್ನು ಸಂಕಲಿಸಿದರು. ಜೊತೆಗೆ ಏಕೋತ್ತರ ಶತಸ್ಥಲ, ಮಿಶ್ರ ಷಟ್‌ಸ್ಥಲಗಳ ಜೊತೆ ಟೀಕೆ–ವ್ಯಾಖ್ಯಾನಗಳನ್ನು ಬರೆಯುವ ಕಾರ್ಯವೂ ನಡೆದಿದೆ. ಮತ್ತೆ ಕೆಲವರು ಷಟ್ಪದಿ, ಸಾಂಗತ್ಯ ಮುಂತಾದ ಛಂದೋರೂಪಗಳಲ್ಲಿ ಕಾವ್ಯ ಕೃತಿಗಳನ್ನು, ಪುರಾಣ ಕಾವ್ಯಗಳನ್ನು ರಚಿಸಿರುವುದು ಕಂಡುಬರುತ್ತದೆ. ಇದಲ್ಲದೆ ಬೆಡಗಿನ ವಚನ ಸಾಹಿತ್ಯ, ಸಕಿಲ ಸಾಹಿತ್ಯ, ಮಂತ್ರಗೋಪ್ಯ ಸಾಹಿತ್ಯ, ದಂಡಕ ಸಾಹಿತ್ಯ, ಕಾಲಜ್ಞಾನ ಸಾಹಿತ್ಯ, ತಾರಾವಳಿ ಸಾಹಿತ್ಯ, ತ್ರಿಪದಿ, ಶತಕ ಸಾಹಿತ್ಯ ಮುಂತಾದ ಕೃತಿಗಳಲ್ಲದೆ, ವಚನ ಕೃತಿಗಳಿಗೆ, ಸಂಸ್ಕೃತ ಕೃತಿಗಳಿಗೆ ಬರೆದ ಟೀಕಾ ಸಾಹಿತ್ಯ ಕೃತಿಗಳು ಬೆಳಕು ಕಂಡಿವೆ. ತೋಂಟದ ಸಿದ್ಧಲಿಂಗ ಪರಂಪರೆಯವರಲ್ಲದೆ ಇತರೆ ಶರಣರು ಈ ರೀತಿಯ ಕೆಲಸಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.

ವಚನ ಸಾಹಿತ್ಯ ಒಂದು ಅಕ್ಷಯ ನಿಧಿಯಿದ್ದಂತೆ. ಹುಡುಕುತ್ತಾ ಹೋದಂತೆ ಹೊಸ ವಚನಕಾರರು, ಹೊಸ ಹೊಸ ವಚನಗಳು ಇನ್ನೂ ದೊರೆಯುತ್ತಲೇ ಇವೆ. ಹಾಗಾಗಿ ವಚನ ಸಂಕಲನ, ಸಂಗ್ರಹ ಕಾರ್ಯಕ್ಕೆ ಇನ್ನೂ ತೆರೆಬಿದ್ದಿಲ್ಲ. ಈಗಾಗಲೇ ಬೆಳಕು ಕಂಡ ತೋಂಟದಾರ್ಯ ಪರಂಪರೆಯ ವಚನ ಸಂಕಲನಗಳನ್ನು ತತ್ವ ಪ್ರಧಾನ, ಸ್ತುತಿ ಪ್ರಧಾನ ಸಂಕಲನಗಳೆಂದು ವಿಭಾಗ ಮಾಡಿಕೊಂಡಿರುತ್ತೇನೆ. ಸ್ತುತಿ ಪ್ರಧಾನ ಸಂಕಲನಗಳಲ್ಲಿ ಬಸವ, ಅಲ್ಲಮ, ಚೆನ್ನಬಸವಣ್ಣನವರನ್ನು ಸ್ತುತಿ ಮಾಡಿದ ಸಂಕಲನಗಳು ದೊರೆತಿವೆ. ಹಾಗೆಯೇ ಶಿವನನ್ನು, ಶರಣರನ್ನು, ಷಟ್‌ಸ್ಥಲಗಳನ್ನು ಸ್ತುತಿ ಮಾಡಿದ ಸಂಕಲನಗಳು ದೊರೆತಿವೆ. ತತ್ವ ಪ್ರಧಾನ ಸಂಕಲನಗಳಲ್ಲಿ ಷಟ್‌ಸ್ಥಲ, ಮಿಶ್ರ ಷಟ್‌ಸ್ಥಲ, ಏಕೋತ್ತರ ಶತಸ್ಥಲ, ಆಚರಣೆ, ಅಷ್ಟಾವರಣ ಮುಂತಾದವುಗಳಿಗೆ ಸಂಬಂಧಿಸಿದ ಸಂಕಲನಗಳೂ ದೊರೆತಿವೆ. ಈ ಎಲ್ಲಾ ಸಂಕಲನಗಳನ್ನು ತನ್ನ ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಷಟ್‌ಸ್ಥಲ ವಿಭಾಗ ಕ್ರಮದಲ್ಲಿ ೩೬ ಸ್ಥಲಗಳಿಗೆ ನಿಶ್ಚಿತ ವ್ಯಾಖ್ಯೆಗಳು ದೊರೆತಿಲ್ಲ ಎಂದು ಡಾ॥ ಫ.ಗು.ಹಳಕಟ್ಟಿಯವರು ಹೇಳುತ್ತಾರೆ. ಆದರೆ ಇರುವ ಸ್ಥಲಗಳನ್ನು ಅನುಸರಿಸಿಯೇ ಬಹಳಷ್ಟು ಜನ ವಚನಕಾರರು ತಮ್ಮ ವಚನಗಳನ್ನು, ಸಂಕಲನಗಳನ್ನು ರಚಿಸಿದ್ದಾರೆ. ಆದರೆ ಈ ಸ್ಥಲಗಳಲ್ಲಿ ನಿರೂಪಿಸಲ್ಪಟ್ಟಿರುವ ವಚನಗಳು ಸ್ಪಷ್ಟವಾಗಿ ಆಯಾ ಸ್ಥಲಗಳಿಗೆ ಸಂಬಂಧಪಟ್ಟವುಗಳಾಗಿರುವುದಿಲ್ಲ. ಏಕೆಂದರೆ ಒಂದು ಸ್ಥಲದಲ್ಲಿ ಹೇಳಿದ ವಚನಗಳ ಭಾವವು ಬೇರೊಂದು ಸ್ಥಲದಲ್ಲಿ ತೋರುತ್ತವೆ. ಸಂಕಲನಕಾರರು ಅದೇ ವಚನವನ್ನು ಬೇರೆ ಬೇರೆ ಸ್ಥಲಗಳಲ್ಲಿ ಸೇರಿಸಿರುವುದೂ ಕಂಡುಬರುತ್ತದೆ.

ಅನೇಕ ವಚನಗಳು ಹೀಗೆ ಬೇರೆ ಬೇರೆ ಸ್ಥಲಗಳಲ್ಲಿ ಪುನರಾವರ್ತನೆಯಾಗಿ ಜೋಡಿಸಲ್ಪಟ್ಟಿವೆ. ಹಾಗಾಗಿ ೩೬ ಸ್ಥಲಗಳ ಭಾವವನ್ನು ಸ್ಪಷ್ಟವಾಗಿ ವಿಂಗಡಿಸುವುದು ಕಠಿಣವೆನಿಸುತ್ತದೆ. ಆದರೂ ೩೬ ಸ್ಥಲಗಳ ಸಂಕಲನಗಳು ರಚಿತವಾಗಿವೆ. ಇದೇ ರೀತಿ ಏಕೋತ್ತರ ಶತಸ್ಥಲ ಸಂಕಲನಗಳಲ್ಲಿ ವಚನಗಳು ಪುನರಾವರ್ತನೆಯಾಗಿ ಭಾವಗಳು ಬದಲಾಗುತ್ತವೆ.

ಸ್ಥಲಗಳಿಗೆ ನಿರ್ದಿಷ್ಟ ವ್ಯಾಖ್ಯೆಯ ಅವಶ್ಯಕತೆ ಇದೆ. ಆ ಹಿನ್ನೆಲೆಯಲ್ಲಿ ವಚನಗಳನ್ನು ಸಂಗ್ರಹಿಸಿ ಸೇರುವೆಗೊಳಿಸಬೇಕಾಗಿದೆ. ಬಸವಣ್ಣನು ಷಟ್‌ಸ್ಥಲ ಕ್ರಮ ವಿಕಾಸವನ್ನು ಹೇಳಿದರೆ, ಚೆನ್ನಬಸವಣ್ಣನು ಮಿಶ್ರ ಷಟ್‌ಸ್ಥಲ ಕ್ರಮವನ್ನು ಪರಿಚಯಿಸಿದ್ದಾರೆ. ಈ ಎರಡೂ ಕ್ರಮಗಳನ್ನು ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಶರಣನಾದವನು ಸಜ್ಜನರ ಸಹವಾಸದಲ್ಲಿ ಆತ್ಮ ಚಿಂತನ, ಸದಾಚಾರ, ಸದ್ಭಕ್ತಿಗಳಿಂದ ಸಾಂಸಾರಿಕ ದುಃಖ ದುಮ್ಮಾನಗಳನ್ನು ದೂರೀಕರಿಸಿಕೊಳ್ಳಲು ಸಾಧ್ಯ. ಆನಂದದ ಅನ್ವೇಷಣೆಯಿಂದ, ಸದ್ಗುರುವಿನ ಕರುಣೆಯನ್ನು ಪಡೆದು, ವೀರಶೈವ ಸಿದ್ಧಾಂತವನ್ನು ಅರಿತರೆ ಶರಣ ಮಾರ್ಗದಲ್ಲಿ ಲಿಂಗಾಂಗ ಸಾಮರಸ್ಯಗಳಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿಯೇ ಷಟ್‌ಸ್ಥಲ ತತ್ವಗಳನ್ನು ಇಲ್ಲಿಯ ಸಂಕಲನಗಳಲ್ಲಿ ಅನುಸರಿಸಿರುವುದನ್ನು ಕಾಣುತ್ತೇವೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ಶರಣನ ಧಾರ್ಮಿಕ ಬದುಕನ್ನು ತಿಳಿಗೊಳಿಸಿ, ತತ್ವ ಸಿದ್ಧಾಂತಗಳ ಮೂಲಕ ಅಂಗವೇ ಲಿಂಗವಾಗುವ ಪರಿಯನ್ನು ಇಲ್ಲಿಯ ಸಂಕಲನಗಳು ಪರಿಚಯಿಸುತ್ತವೆ.

ಸಂಕಲನಕಾರರ ಈ ಎಲ್ಲಾ ಪ್ರಯತ್ನಗಳು ಶುಷ್ಕ ಪ್ರಯತ್ನಗಳೆಂದು ಭಾವಿಸುವ ಅಗತ್ಯವಿಲ್ಲ. ಸಮನ್ವಯ, ಸಮಾನತೆ ಹಾಗೂ ಸಮರಸ ಸೂತ್ರಗಳ ಅಡಿಯಲ್ಲಿ ಬದುಕಿನ ಎಲ್ಲಾ ದ್ವಂದ್ವಗಳಿಗೂ ಪರಿಹಾರ ನೀಡಿದ ಶರಣರ ಆಂತರ್ಯವನ್ನು ಇವರು ಅರ್ಥ ಮಾಡಿಕೊಂಡಿದ್ದಾರೆ. ಈ ಕಾಲಕ್ಕೆ ವಚನಗಳಲ್ಲಿನ ಲೋಕಾನುಭವದ ಆಕರ್ಷಣೆಯಿಂದಾಗಿ ಅವುಗಳಿಗೆ ಒದಗಬಹುದಾಗಿದ್ದ ಲೌಕಿಕ ಮಿತಿಯ ಅಪಾಯವನ್ನು ತಪ್ಪಿಸಿ ಅವುಗಳಲ್ಲಿನ ಆಧ್ಯಾತ್ಮಿಕ ಸಂಪತನ್ನು ಅವಿಷ್ಕರಿಸಿ ಏಕಕಾಲಕ್ಕೆ ವಚನ ಹಾಗೂ ವೀರಶೈವ ಧರ್ಮಗಳೆರೆಡನ್ನು ಉಳಿಸುವ, ಇವುಗಳ ಗಾಂಭೀರ್ಯವನ್ನು ಹೆಚ್ಚಿಸಿದ ಮತ್ತು ಇವುಗಳ ಒಟ್ಟು ದೋರಣೆಯ ವ್ಯಾಪಕತೆಯನ್ನು ಅನುಭಾವಕ್ಕೆ ತಂದುಕೊಟ್ಟ ಶ್ರೇಯಸ್ಸು ಸಂಕಲನಕಾರರದ್ದಾಗಿದೆ. ಇವೆಲ್ಲವುಗಳನ್ನು ಈ ಪ್ರಬಂಧದಲ್ಲಿ ಕೂಲಂಕುಷವಾಗಿ ವಿಶ್ಲೇಷಣೆ ಮಾಡಲಾಗಿದೆ.

೧೨ ನೇ ಶತಮಾನದ ವಚನಕಾರರ ಲೌಕಿಕಾನುಭವಗಳನ್ನು ನಗಣ್ಯವಾಗಿ ಕಂಡು ಅವರ ಅಲೌಕಿಕ ಬದುಕು ಮತ್ತು ಚಿಂತನೆಗಳ ನೆಲೆಯಲ್ಲಿ ಅವರ ಉಜ್ವಲ ವ್ಯಕ್ತಿತ್ವವನ್ನು, ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಅನಾವರಣಗೊಳಿಸಿಕೊಡುವ ಆಶಯವು ಸಂಕಲನಕಾರರಲ್ಲಿ ಅಡಗಿದೆ. ಅದರೊಂದಿಗೆ ಆನುಷಂಗಿಕವಾಗಿ ಪ್ರಕಟಗೊಳ್ಳುವ ಸಂಕಲನಕಾರರ ಸಂಯೋಜಕ ಶಕ್ತಿ, ಶಾಸ್ತ್ರೀಯ ಪ್ರಜ್ಞೆ, ತತ್ವಜ್ಞಾನದ ಬಗೆಗಿನ ಖಚಿತ ಅರಿವು, ವಚನಗಳ ಆಯ್ಕೆ ಮತ್ತು ವರ್ಗೀಕರಣದಲ್ಲಿಯ ಔಚ್ಚಿತ್ಯ ಪ್ರಜ್ಞೆ ಇವೇ ಮೊದಲಾದ ವೈಶಿಷ್ಟ್ಯಗಳನ್ನು ಈ ಸಂಕಲನ ಸಾಹಿತ್ಯದಲ್ಲಿ ಗುರುತಿಸಲಾಗಿದೆ.

೧೬ ನೇಯ ಶತಮಾನದ ವಿಶಿಷ್ಟ ಸಾಹಿತ್ಯ ಪ್ರಕಾರವಾದ ಸಂಕಲನ ಸಾಹಿತ್ಯದ ವಿವರವಾದ ಅಧ್ಯಯನ ಇದುವರೆಗೂ ನಡೆದಿರಲಿಲ್ಲ. ವಚನ ಸಾಹಿತ್ಯದ ಅಧ್ಯಯನವೆಂದರೆ ಬಸವಾದಿ ಶರಣರು ರಚಿಸಿದ ವಚನಗಳ ಅಧ್ಯಯನ ಎನ್ನುವಂತಾಗಿತ್ತು. ವಚನ ಸಾಹಿತ್ಯದ ಓದಿಗೆ ಹೊಸ ದಿಕ್ಕನ್ನು

ತೋರಿಸಿದ್ದು ವಚನ ಸಂಕಲನಗಳು. ಈ ಕಾಲ ಘಟ್ಟದಲ್ಲಿ ನೂರಾರು ರೀತಿಯ ವಚನ ಸಂಕಲನಗಳು ರಚನೆಯಾಗಿವೆ. ಅವುಗಳಲ್ಲಿ ಕೆಲವೊಂದು ಪ್ರಕಟವಾಗಿವೆ. ಹಲವಾರು ಸಂಕಲನಗಳು ಇನ್ನು ಹಸ್ತ ಪ್ರತಿಯಲ್ಲಿ ಉಳಿದಿವೆ. ಪ್ರಕಟವಾದ ವಚನ ಸಂಕಲನಗಳಲ್ಲಿ ನಾನು ತೋಂಟದಾರ್ಯ ಪರಂಪರೆಗೆ ಸೇರಿದ ಸಂಕಲನಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಈ ಪರಂಪರೆಯವರಲ್ಲದ ಅನೇಕ ಸಂಕಲನಕಾರರು ಸಂಗ್ರಹಿಸಿದ ವಚನಗಳನ್ನು ನಾನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವುದಿಲ್ಲ. ಅವುಗಳ ಅಧ್ಯಯನದ ಜೊತೆ ತೌಲನಿಕ ಅಧ್ಯಯನಕ್ಕೆ ಅವಕಾಶವಿದೆ. ಇದೇ ಸಂದರ್ಭದಲ್ಲಿ ಸಂಗ್ರಹ, ಸಂಪಾದನ ಕೃತಿಗಳು ಹಾಗೂ ಇತರೆ ಕೃತಿಗಳು ರಚನೆಯಾಗಿವೆ. ಅವುಗಳ ಅಧ್ಯಯನವು ಪ್ರತ್ಯೇಕವಾಗಿ ಆಗಬೇಕಾಗಿದೆ.

ವಚನ ಸಂಕಲನಗಳ ಜೊತೆಯಲ್ಲಿ ಅನೇಕ ವಚನಕಾರರು ವಚನ ರಚನೆ ಮಾಡಿದ್ದಾರೆ. ಅಂತಹ ಅಪರೂಪದ ವಚನ ಸಾಹಿತ್ಯವನ್ನು ವಿವಿಧ ದೃಷ್ಠಿ ಕೋನಗಳಿಂದ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ನಾನು ಈ ಪ್ರಬಂಧದಲ್ಲಿ ಸೃಜನಶೀಲ ವಚನಕಾರರನ್ನು (ತೋಂಟದಾರ್ಯ ಪರಂಪರೆಯ) ಮತ್ತು ಅವರ ವಚನಗಳನ್ನು ಪ್ರಾಸಂಗಿಕವಾಗಿ ಪರಿಚಯಮಾಡಿರುತ್ತೇನೆ. ಆದರೆ ಅವುಗಳ ಆಳವಾದ ಅಧ್ಯಯನ ನಡೆಯಬೇಕಿದೆ. ಜೊತೆಗೆ ಸ್ವರ ವಚನ, ಬೆಡಗಿನ ವಚನ, ಕಾಲಜ್ಞಾನದ ವಚನ, ತಾರಾವಳಿ ಸಾಹಿತ್ಯ, ದಂಡಕ ಸಾಹಿತ್ಯ ಮುಂತಾದವುಗಳ ಅಧ್ಯಯನವು ಆಗಬೇಕಿದೆ. ಸಂಕಲನಕಾರರ ಮತ್ತು ವಚನಕಾರರ ಕಾರ್ಯಕ್ಷೇತ್ರಗಳಲ್ಲಿ ಸಂಚರಿಸಿ ಇನ್ನೂ ಹೆಚ್ಚಿನ ಮಾಹಿತಿ ಪಡೆಯಬಹುದು. ಇವರ ಹೆಸರಿನಲ್ಲಿರುವ ಸ್ಮಾರಕ, ಹಸ್ತಪ್ರತಿ ಶೋಧ – ಸಂರಕ್ಷಣೆಯ ಕೆಲಸವನ್ನು ಕೈಗೊಳ್ಳಬೇಕಾಗಿದೆ.

ವಚನ ಸಾಹಿತ್ಯಾಸಕ್ತ, ಸಂಶೋಧಕರಿಗೆ ಅಪಾರವಾದ, ವೈವಿಧ್ಯಮಯವಾದ ವಚನ ರಾಶಿ ಕಾದು ಕುಳಿತಿದೆ. ವಿಶ್ವ ವಿದ್ಯಾಲಯಗಳು, ಸಂಶೋಧನ ಕೇಂದ್ರಗಳು, ಸಂಶೋಧಕರು ಈ ಕಡೆ ಗಮನಹರಿಸಿದರೆ ಕನ್ನಡ ಸಾಹಿತ್ಯಕ್ಕೆ ಮತ್ತು ಸಂಶೋಧನ ಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆ ಸಲ್ಲಿಸಿದಂತಾಗುತ್ತದೆ.

ಬಸವಾದಿ ಶರಣರ ವಚನಗಳ ಜೊತೆ ೧೫ ರಿಂದ ೧೭ ನೇ ಶತಮಾನದವರೆಗಿನ ವಚನಕಾರರ ವಚನಗಳನ್ನು ಮತ್ತೊಮ್ಮೆ ನಿರ್ದಿಷ್ಟ ವಿಷಯಗಳ ಹಿನ್ನೆಲೆಯಲ್ಲಿ, ಹೊಸ ಶೀರ್ಷಿಕೆಗಳ ಅಡಿಯಲ್ಲಿ ಸಂಗ್ರಹಿಸಿ ಅಧ್ಯಯನ ಮಾಡಬೇಕಾದ ಕೆಲಸ ಬಹಳ ಇದೆ. ಇವೆಲ್ಲವೂ ನನ್ನ ಮಿತಿಗೆ ಒಳಪಡದೆ ಇರುವುದರಿಂದ ತೋಂಟದಾರ್ಯ ಪರಂಪರೆಯ ವಚನ ಸಂಕಲನ ಸಾಹಿತ್ಯವನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಸಂಕಲನ ಸಾಹಿತ್ಯದ ಹಿನ್ನೆಲೆ, ಸಂಕಲನಕಾರರನ್ನು, ಸಂಕಲನಗಳನ್ನು, ಸಂಕಲನಗಳ ವಸ್ತು ವೈವಿಧ್ಯತೆಯನ್ನು, ಅವುಗಳ ವೈಶಿಷ್ಟ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಧ್ಯಯನ ಮಾಡಿ ಈ ಪ್ರಬಂಧವನ್ನು ಸಿದ್ಧಪಡಿಸಿರುತ್ತೇನೆ.

ಅನುಬಂಧ

ಗ್ರಂಥಋಣ

ಅನುಬಂಧ

ಗ್ರಂಥಋಣ

ಭಾಗ – ೧

ತೋಂಟದಾರ್ಯ ಪರಂಪರೆಯ ವಚನ ಸಂಕಲನಗಳು :

೧	ಅದ್ವೈತಾನಂದದ ವಚನಗಳು	:	ಸಂ. ಡಾ॥ ಬಿ.ಆರ್.ಹಿರೇಮಠ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೩
೨	ಅನುಭಾವ ಜ್ಞಾನ ಸಾರಾಮೃತ ಸಂಪಾದನೆಯ ಸ್ತೋತ್ರ	:	ಸಂ. ಬಿ.ಆರ್.ಹೂಗಾರ್ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೯
೩	ಎಲ್ಲಾ ಪುರಾತರ ಸ್ತೋತ್ರದ ವಚನಗಳು	:	ಸಂ. ಡಾ॥ ವೀರಣ್ಣ ರಾಜೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೮
೪	ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು	:	ಸಂ. ಡಾ॥ ವೀರಣ್ಣ ರಾಜೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೩
೫	ಚೆನ್ನಬಸವೇಶ್ವರ ಸ್ತೋತ್ರದ ವಚನಗಳು	:	ಸಂ. ಜಿ.ಎ.ಶಿವಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ.
೬	ಚಿದೈಶ್ವರ್ಯ ಚಿದಾಭರಣ (ಗುರುಸಿದ್ಧದೇವ ಸೇರಿಸಿದ್ದು)	:	ಸಂ. ಪಿ.ಎಂ.ಗಿರಿರಾಜು, ಶರಣ ಸಂತಾನ ಗ್ರಂಥಮಾಲೆ, ಮೈಸೂರು – ೧೯೮೫
೭	ಜ್ಞಾನ ಷಟ್‌ಸ್ಥಲ ಸಾರ (ಗುರುಶಂಕರಸ್ವಾಮಿಗಳು ಸಂಗ್ರಹಿಸಿದ್ದು)	:	ಸಂ. ಡಾ॥ ವೀರಣ್ಣ ರಾಜೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೯೨
೮	ಜಿಗುನಿ ಮರುಳದೇವರ ಕೃತಿಗಳು	:	ಸಂ. ಡಾ॥ ಎಸ್.ವಿದ್ಯಾಶಂಕರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೩

೯ ಬಸವ ಸ್ತೋತ್ರದ ವಚನಗಳು (ಸಂ. ಚನ್ನಂಜೇದೇವ, ಬೋಳಬಸವ) : ಸಂ. ಡಾ॥ ಎಂ.ಎಂ.ಕಲಬುರ್ಗಿ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ – ೧೯೭೬

೧೦ ಲಿಂಗ ಸ್ತೋತ್ರದ ವಚನ : ಸಂ. ಶ್ರೀ ವೀರಭದ್ರಪ್ಪ, ಕೊಪ್ಪಳ.

೧೧ ವಚನ ಸಂಕಲನ ಸಂಪುಟ – ೧ : ಸಂ. ಡಾ॥ ಬಿ.ಆರ್.ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೧೯೯೦

೧೨ ವಚನ ಸಂಕಲನ ಸಂಪುಟ – ೨ : ಸಂ. ಪ್ರೊ ಜಿ.ಎ. ಶಿವಲಿಂಗಯ್ಯ,
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೧೯೯೦

೧೩ ವಚನ ಸಂಕಲನ ಸಂಪುಟ – ೩ : ಸಂ. ಎಸ್.ಶಿವಣ್ಣ,
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೧೯೯೧

೧೪ ವಚನ ಸಂಕಲನ ಸಂಪುಟ – ೪ : ಸಂ. ಡಾ॥ ಎಂ.ಎಂ.ಕಲಬುರ್ಗಿ,
ಡಾ॥ ಬಿ.ಆರ್.ಹಿರೇಮಠ,
ಎಸ್.ಶಿವಣ್ಣ,
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೧೯೯೨

೧೫ ವಚನ ಸಂಕಲನ ಸಂಪುಟ – ೫ : ಸಂ. ವೈ.ಸಿ.ಭಾನುಮತಿ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೧೯೯೨

೧೬ ವಚನ ಸಂಕಲನ ಸಂಪುಟ – ೬ : ಸಂ. ಡಾ॥ ಎಂ.ಎಂ.ಕಲಬುರ್ಗಿ
ಪ್ರೊ.ಜಿ.ಎ.ಶಿವಲಿಂಗಯ್ಯ,
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೨೦೦೨

೧೭ ವಚನ ಸಂಕಲನ ಸಂಪುಟ – ೭ : ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ.
ಗದಗ – ೨೦೦೯

೧೮ ವಿರತಾಚರಣೆಯ ಶರಣ ಸಂಬಂಧದ ವಚನಗಳು (ಶಂಕರದೇವರು ಸೇರಿಸಿದ್ದು) : ಸಂ. ಪಿ.ಎಂ.ಗಿರಿರಾಜು, ಶರಣ ಸಂತಾನ ಗ್ರಂಥಮಾಲೆ – ೨ ಮೈಸೂರು – ೧೯೭೯

೧೯ ವಿಶೇಷಾನುಭವ ಷಟ್‌ಸ್ಥಲ : ಸಂ. ಡಾ॥ ಆರ್.ಸಿ.ಹಿರೇಮಠ, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೦

೨೦ ಶರಣ ಚಾರಿತ್ರದ ವಚನಗಳು ಸಂ. ಸಣ್ಣ ಬರಹದ ಗುರು ಬಸವರಾಜ ದೇವರು ಸೇರಿಸಿದ್ದು : ಸಂ. ಡಾ॥ ಬಿ.ವಿ.ಶಿರೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೪

೨೧ ಶೀಲ ಸಂಪಾದನೆ : ಸಂ. ಡಾ॥ ವೀರಣ್ಣ ರಾಜೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೪

೨೨ ಷಟ್‌ಸ್ಥಲ ಜಂಗಮ ಸ್ಥಲ ನಿರ್ದೇಶ (ಪ್ರಭುದೇವರು) : ಸಂ. ಡಾ॥ ವೀರಣ್ಣ ರಾಜೂರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೪

೨೩ ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು (ಸಂ. ಬೋಳಬಸವ): : ಸಂ. ಪ್ರೊ ಎಸ್.ಉಮಾಪತಿ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೪

ಭಾಗ – ೨
ಇತರೆ ಆಕರ ಗ್ರಂಥಗಳು :

೧ ಅಲ್ಲಮನ ವಚನ ಚಂದ್ರಿಕೆ : ಸಂ. ಎಲ್.ಬಸವರಾಜು ಲೋಹಿಯ ಪ್ರಕಾಶನ ಬಳ್ಳಾರಿ –೧೯೮೬

೨ ಅಷ್ಟಾವರಣ : ಶಿವಕುಮಾರಸ್ವಾಮಿ, ಚಿದಂಬರಾಶ್ರಮ, ಶ್ರೀ ಸಿದ್ಧರೂಢ ಮಠ, ಬೀದರ್ – ೧೯೮೧

೩ ಅಷ್ಟಾವರಣ ವಿವೇಕ : ವೈ.ನಾಗೇಶ ಶಾಸ್ತ್ರಿ, ಅಖಿಲ ಭಾರತ ಶಿವಾನುಭವ ಸಂಸ್ಥೆ, ಧಾರವಾಡ.

೪	ಅಷ್ಟಾವರಣ	:		ಡಾ॥ ಮಲ್ಲಿಕಾರ್ಜುನ.ಎಸ್.ಲಠ್ಠೆ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು
೫	ಕನ್ನಡ ಸಾಹಿತ್ಯ ಸಮೀಕ್ಷೆ	:		ಡಾ॥ ಜಿ.ಎಸ್.ಶಿವರುದ್ರಪ್ಪ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೯
೬	ಕಲ್ಯಾಣದ ಹಾದಿ ತೋಂಟದ ಸಿದ್ಧಲಿಂಗ ಶ್ರೀಗಳ ಅಭಿನಂದನಾ ಗ್ರಂಥ	:	ಸಂ.	ಡಾ॥ ಸಿದ್ಧಲಿಂಗ ಪಟ್ಟಣ ಶೆಟ್ಟಿ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೯೯
೭	ಕರ್ನಾಟಕ ಕವಿ ಚರಿತೆ	:		ಆರ್.ನರಸಿಂಹಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೫
೮	ಕೈವಲ್ಯ ಸಾಹಿತ್ಯ	:		ಡಾ॥ ಹೆಚ್.ತಿಪ್ಪೇರುದ್ರಸ್ವಾಮಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ,ಮೈಸೂರು–೨೦೦೩
೯	ಗೌರವ ಪ್ರೊ ಎಸ್.ಎಸ್.ಭೂಸನೂರ ಮಠ, ಅಭಿನಂದನ ಗ್ರಂಥ	:	ಸಂ.	ಡಾ॥ ಬಿ.ವಿ.ಶಿರೂರ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ.ಸಂ.ಮಠ. ಗದಗ – ೧೯೮೬
೧೦	ಚೆನ್ನಬಸವಣ್ಣ	:		ಪ್ರೊ ವೀರೇಂದ್ರ ಸಿಂಪಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು – ೨೦೦೭
೧೧	ಚೆನ್ನಬಸವಣ್ಣನವರು	:	ಸಂ.	ಶ್ರೀಮತಿ ಜಗದಂಭ ಮಲ್ಲೇದೇವರು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ ಮೈಸೂರು – ೧೯೯೧
೧೨	ಜ್ಞಾನದ ಬಲದಿಂದ	:		ಡಾ॥ ವೀರಣ್ಣ ರಾಜೂರ ಮಂಗಳ ಪ್ರಕಾಶನ, ಧಾರವಾಡ
೧೩	ತೋಂಟದಾರ್ಯ ವಚನ : ವ್ಯಾಖ್ಯೆ	:	ಸಂ.	ಡಾ॥ ಸಾ.ಶಿ. ಮರುಳಯ್ಯ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ ಸೇವಾ ಸಂಘ ಎಡೆಯೂರು–೧೯೯೦

೧೪ ಜೀವನ ಸಿದ್ಧಾಂತ ಮೀರಿದ ಕ್ರಿಯಾ ಸ್ಥಲ ಸಮೀಕ್ಷೆ. : ಡಾ॥ ವಿ.ಎಸ್.ಕಂಬಿ
ಶ್ರೀ ಜ.ಚ.ನಿ. ಅಧ್ಯಯನ ಪೀಠ ಸಂಶೋಧನ ಸಂಸ್ಥೆ.
ಬೆಂಗಳೂರು–೧೯೮೮

೧೫ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ, ೧, ೨, ೩, ೪, ೫, ೬ ಸಂಪುಟಗಳು : ಪ್ರಕಾಶನ ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ,
ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರ,
ಎಡೆಯೂರು.

೧೬ ತೋಂಟದ ಸಿದ್ಧಲಿಂಗೇಶ್ವರ : ಡಾ॥ ಸಿ. ನಾಗಭೂಷಣ,
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ
ಗುಲ್ಬರ್ಗ– ೨೦೦೬

೧೭ ದಾಸ ಸಾಹಿತ್ಯ ದರ್ಶನ : ಸಂ. ಎಚ್ಚೆಸ್ಕೆ
ಮಂಗಳ ಭಾರತಿ ಪ್ರಕಾಶನ
ಮೈಸೂರು–೧೯೮೪

೧೮ ಬಸವಣ್ಣನವರು : ಡಾ॥ ಎಂ. ಚಿದಾನಂದ ಮೂರ್ತಿ'
ಸಪ್ನ ಬುಕ್ ಹೌಸ್,
ಬೆಂಗಳೂರು–೨೦೦೩

೧೯ ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ : ಡಾ॥ ಸಿ.ವಿ.ಪ್ರಭುಸ್ವಾಮಿ ಮಠ.
ಅಕ್ಷರ ಪ್ರಕಾಶನ
ಹೆಗ್ಗೋಡು (ಸಾಗರ)–೧೯೯೬

೨೦ ಬಸವೋತ್ತರ ಯುಗದ ವಚನ ಕಾರರು: ಡಾ॥ ವೀರಣ್ಣ ರಾಜೂರ
ಶ್ರೀ ಚನ್ನಬಸವೇಶ್ವರ ಸಂಸ್ಥಾನ
ಹಿರೇಮಠ ಹಾರಕೂಡ,
ಬೀದರ್ –೨೦೦೧

೨೧ ಬಸವೋತ್ತರ ಯುಗದ ವಚನ ಸಾಹಿತ್ಯ ಒಂದು ಅಧ್ಯಯನ : ಡಾ॥ ವಿ.ಎಸ್. ಕಟಗಿಹಳ್ಳಿ ಮಠ.
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು–೨೦೦೮

೨೨ ಬಸವೋತ್ತರ ಯುಗದ ವಚನ ಸಾಹಿತ್ಯ : ಸಂ. ಡಾ॥ ಗುರುಪಾದ ಮರಿಗುದ್ದಿ
ಶ್ರೀ ನಿಜಲಿಂಗೇಶ್ವರ ಗ್ರಂಥ ಮಾಲೆ.
ನಿಡಸೋಸಿ–೧೯೮೩

೨೩ ಮಹಾದೇವನ ಮಹಾಲಿಂಗೇಂದ್ರ ವಿಜಯ : ಸಂ. ಡಾ॥ ಎಲ್.ಬಸವರಾಜು,
ಶ್ರೀ ಬೃಹನ್ಮಠ ಸಂಸ್ಥಾನ ಚಿತ್ರದುರ್ಗ
೧೯೭೨

೨೪ ಮಾರ್ಗ-೧ : ಡಾ॥ ಎಂ.ಎಂ. ಕಲಬುರ್ಗಿ
ಕರ್ನಾಟಕ ಬುಕ್ ಎಜೆನ್ಸಿ
ಗಾಂಧಿ ನಗರ ಬೆಂಗಳೂರು.
- ೧೯೯೫

೨೫ ಮಾರ್ಗ-೪ : ಡಾ॥ ಎಂ.ಎಂ. ಕಲಬುರ್ಗಿ
ಸಪ್ನ ಬುಕ್ ಹೌಸ್,
ಬೆಂಗಳೂರು-೨೦೦೪

೨೬ ವಚನ ಶಾಸ್ತ್ರ ಭಾಗ ೧ ಮತ್ತು ೨ : ಸಂ. ಫ.ಗು.ಹಳಕಟ್ಟಿ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ. ಗದಗ

೨೭ ವಚನ ಸಾಹಿತ್ಯ : ಡಾ॥ ಎಂ.ಚಿದಾನಂದ ಮೂರ್ತಿ
ಪ್ರಸರಾಂಗ. ಬೆಂ.ವಿ.ವಿ.
ಬೆಂಗಳೂರು -೨೦೦೦

೨೪ ವಚನ ಸಾಹಿತ್ಯ ದ್ವಿತೀಯ ಘಟ್ಟ : ಸಂ. ಡಾ॥ ಎಸ್.ವಿದ್ಯಾಶಂಕರ್
ಸರ್ಪ ಭೂಷಣ ಶಿವಯೋಗಿಶ್ವರ
ಮಠ ಬೆಂಗಳೂರು -೧೯೯೯

೨೯ ವಚನ ಸಂಶೋಧನ : ಡಾ॥ ವೀರಣ್ಣ ರಾಜೂರ
ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು-೨೦೦೪

೩೦ ವಚನ ಶೋಧ-೨ : ಡಾ॥ ಎಂ. ಚಿದಾನಂದ ಮೂರ್ತಿ
ಪ್ರಿಯದರ್ಶಿನಿ ಪ್ರಕಾಶನ
ಬೆಂಗಳೂರು-೧೯೯೮

೩೧ ವಚನ ಸಾಹಿತ್ಯ ಒಂದು ಸಂಸ್ಕೃತಿಕ ಅಧ್ಯಯನ : ಡಾ॥ ಪಿ.ವಿ.ನಾರಾಯಣ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜ.ತೋಂ.ಸಂ.ಮಠ. ಗದಗ-
೧೯೮೩

೩೨ ವಚನ ಅಧ್ಯಯನ : ಡಾ॥ ವೀರಣ್ಣ ರಾಜೂರ
ಶ್ರೀ ಜಗದ್ಗುರು ಅನ್ನದಾನೀಶ್ವರ
ಸಂಸ್ಥಾನ ಮಠ ಮುಂಡರಗಿ-
೧೯೯೪

೩೩ ವಚನಾಮೃತಾ ಸಾರ : ಸಂ. ಡಾ॥ ಕಾಶಿ ಪುಟ್ಟಸೋಮರಾಧ್ಯ
ಡಾ॥ ವೀರಣ್ಣ ರಾಜೂರ
ಮಂಗಳನ ಪ್ರಕಾಶನ ಕಲ್ಯಾಣ
ನಗರ, ಧಾರವಾಡ

೩೪	ವೀರಶೈವ ಸಾಹಿತ್ಯ	:	ಡಾ॥ ಎಸ್.ಎಂ. ಹಿರೇಮಠ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ. ಹಾರಕೂಡ, ಬೀದರ್ ಜಿಲ್ಲೆ,
೩೫	ವೀರಶೈವ ಸಾಹಿತ್ಯ	:	ಡಾ॥ ಶಿವಮೂರ್ತಿ ಶಾಸ್ತ್ರಿ. ಶರಣ ಸಾಹಿತ್ಯ ಪ್ರಕಾಶನ ಬೆಂಗಳೂರು–೧೯೮೪
೩೬	ವೀರಶೈವ ಸಾಹಿತ್ಯ ಸಮೀಕ್ಷೆ	:	ಸಂ. ಸದಾನಂದ ಕನವಳ್ಳಿ ಚನ್ನಪ್ಪ ಕೆರಿಮನಿ ಮಹಾಕವಿ ಪಂಪಾ ಪ್ರಕಾಶನ ಲಕ್ಷ್ಮೇಶ್ವರ–೧೯೭೬
೩೭	ವೀರಶೈವ ದರ್ಶನ	:	ಸಂ. ವೀ.ರು.ಕೊಪ್ಪಳ, ನವ ಕಲ್ಯಾಣ ಮಠ ಧಾರವಾಡ
೩೮	ವೀರಶೈವ ಸಂಶೋಧನೆ	:	ಡಾ॥ ಎಸ್.ವಿ. ಅಯ್ಯನಗೌಡ ಶ್ರೀ ಜಗದ್ಗುರು ಧರ್ಮ ಪ್ರಚಾರಕ ಮಂಡಳಿ ಮೂರು ಸಾವಿರ ಮಠ ಹುಬ್ಬಳ್ಳಿ–೧೯೯೨
೩೯	ವೀರಶೈವ ದರ್ಶನ	:	ವಿದ್ವಾನ್ ಜಿ.ವಿ. ಶಿವಸ್ವಾಮಿ ಶಿವ ಪ್ರಕಾಶನ. ವಿಜಯನಗರ ಬೆಂಗಳೂರು –೧೯೯೪.
೪೦	ವೀರಶೈವ ತತ್ವತ್ರಯ	:	ಡಾ॥ ಶ್ರೀ ಜ.ಚ.ನಿ ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜ.ತೋಂ.ಸಂ.ಮಠ ಗದಗ –೧೯೮೦
೪೧	ವೀರಶೈವ ಆಕರಗಳು	:	ಸಂ. ಡಾ॥ ಸಂಗಮೇಶ ಸವದತ್ತಿ ಮಠ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ.ಶ್ರೀ ಜ.ರಂ.ವೀ.ಮ.ಸಂ.ಮಠ ಬಾಳೆ ಹೊನ್ನೂರು –೨೦೦೯
೪೨	ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು : ಒಂದು ತೌಲನಿಕ ಅಧ್ಯಯನ	:	ಹಿರೇಮಲ್ಲೂರು ಈಶ್ವರನ್ ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು–೧೯೯೭
೪೩	ಶರಣ ಚರಿತಾಮೃತಾ	:	ಸಿದ್ಧಯ್ಯ ಪುರಾಣಿಕೆ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು–೧೯೯೨

೪೪ ಶರಣರ ತಾತ್ವಿಕ ಚಿಂತನೆಗಳು : ಮಣ್ಣೂರು ಗುರಪ್ಪ
ಶ್ರೀ ಬಸವೇಶ್ವರ. ಕ.ವಿ.ವಿ.
ಧಾರವಾಡ –೨೦೦೭

೪೫ ಶರಣರ ಸಾಹಿತ್ಯ ತತ್ವ ವಿವೇಚನೆ : ಪ್ರೊ॥ ಬಿ.ವಿರೂಪಾಕ್ಷಪ್ಪ
ಬಸವ ಸಮಿತಿ,
ಬಸವ ಭವನ, ಬೆಂಗಳೂರು
–೧೯೯೩

೪೬ ಶರಣರು ಕಂಡ ಬಸವಣ್ಣ : ಸಂ. ಹೆಚ್.ಡಿ.ಚಂದನ ಗೌಡರು,
ಸಿ.ವಿ.ಜಿ.ಪಬ್ಲಿಕೇಷನ್
ಬೆಂಗಳೂರು –೨೦೦೧

೪೭ ಶಿವಾನುಭವ ಶಬ್ದಕೋಷ : ಸಂ. ಡಾ॥ ಫ.ಗು.ಹಳಕಟ್ಟಿ
ಶ್ರೀ ಬಸವೇಶ್ವರ ಪೀಠ.
ಕ.ವಿ.ವಿ ಧಾರವಾಡ –೨೦೦೩

೪೮ ಶಿವದೀಪ್ತಿ : ಸಂ. ಡಾ॥ ಆರ್.ಸಿ. ಹಿರೇಮಠ
ರುದ್ರಾಕ್ಷಿ ಮಠ, ನಾಗನೂರು,
ಬೆಳಗಾವಿ

೪೯ ಶಿವಯೋಗ ಪ್ರದೀಪಿಕೆ
ಚನ್ನವೀರಚಾರ್ಯ (ಸಂ) : ಸಂ. ಡಾ॥ ವೀರಣ್ಣ ರಾಜೂರ.
ಪ್ರಸರಾಂಗ,
ಕ.ವಿ.ವಿ ಧಾರಾವಾಡ–೧೯೮೧

೫೦ ಶಿವ ಶರಣ ಕಥಾರತ್ನ ಕೋಶ : ತ.ಸು.ಶಾಮರಾಯ
ತಳುಕಿನ ವೆಂಕಣ್ಣಯ್ಯ ಸ್ಮಾರಕ
ಗ್ರಂಥಮಾಲೆ, ಮೈಸೂರು–೧೯೬೬

೫೧ ಶೂನ್ಯ ಸಂಪಾದನೆ : ಸಂ. ಗಿರಡ್ಡಿ ಗೋವಿಂದರಾಜು
ಅಖಿಲ ಭಾರತ ಶರಣ ಸಾಹಿತ್ಯ
ಪರಿಷತ್ತು. ಮೈಸೂರು–೨೦೦೪

೫೨ ಷಟ್‌ಸ್ಥಲ ಶಿವಾಯಣ : ಸಂ. ಡಾ॥ ಎಂ.ಎಂ. ಕಲಬುರ್ಗಿ
ಡಾ॥ ಸಿ.ಪಿ.ಕೃಷ್ಣಕುಮಾರ್
ವೀರಶೈವ ಅಧ್ಯಯನ ಸಂಸ್ಥೆ.
ಗದಗ

೫೩ ಷಟ್‌ಸ್ಥಲ ಜ್ಞಾನ ಸರಾಮೃತ
(ಸಟೀಕು)ಎರಡು ಭಾಗಗಳು : ಸಂ. ಡಾ॥ ವೀರಣ್ಣ ರಾಜೂರ
ಕರ್ನಾಟಕ ಸರ್ಕಾರ,
ಧಾರ್ಮಿಕ ದತ್ತಿ ಇಲಾಖೆ
ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರ,
ಎಡೆಯೂರು

೫೪ ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು ಮಹಾಸ್ವಾಮಿಗಳವರು. : ಸಂ. ಶ್ರೀ ಅನ್ನದಾನೀಶ್ವರ
ಜಗದ್ಗುರು ಅನ್ನದಾನೀಶ್ವರ
ಸಂಸ್ಥಾನ ಮಠ ಮುಂಡರಗಿ-
೧೯೯೧

೫೫ ಷಟ್‌ಸ್ಥಲ ಒಂದು ಅಧ್ಯಯನ : ಸಂ. ಶ್ರೀ ಅನ್ನದಾನೀಶ್ವರ
ಮಹಾಸ್ವಾಮಿಗಳವರು.
ಜಗದ್ಗುರು ಅನ್ನದಾನೀಶ್ವರ
ಸಂಸ್ಥಾನ ಮಠ, ಮುಂಡರಗಿ
ಕ.ವಿ.ವಿ.ಧಾರವಾಡ-೨೦೦೩

೫೬ ಷಟ್‌ಸ್ಥಲ ಪ್ರಭೆ : ಡಾ॥ ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಸಂಸ್ಥೆ
ಕ.ವಿ.ವಿ.ಧಾರವಾಡ-೧೯೬೬

೫೭ ಷಟ್‌ಸ್ಥಲ ಜ್ಞಾನ ಸಾರಾಮೃತ ತೋಂಟದ ಸಿದ್ಧಲಿಂಗ ವಿರಚಿತ : ಸಂ. ಡಾ॥ ಆರ್.ಸಿ. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಗದಗ -೧೯೯೯

೫೮ ಸ್ವರ ವಚನಗಳು : ಡಾ॥ ವೀರಣ್ಣ ರಾಜೂರ.
ಕ.ವಿ.ವಿ ಧಾರವಾಡ -೧೯೯೯

೫೯ ಸಂಕೀರ್ಣ ವಚನ ಸಂಪುಟ ೫ : ಸಂ. ವೀರಣ್ಣ ರಾಜೂರ.
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು-೨೦೦೧

೬೦ ಸಂಕೀರ್ಣ ವಚನ ಸಂಪುಟ ೬ : ಸಂ. ಎಸ್.ಶಿವಣ್ಣ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

೬೧ ಸಂಕೀರ್ಣ ವಚನ ಸಂಪುಟ ೯ (ಬಸವೋತ್ತರ ಯುಗ) : ಸಂ ಡಾ॥ ವೀರಣ್ಣ ರಾಜೂರ.
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು ೧೯೯೩.

೬೨ ಸಂಪಾದನ ಸಮಯ : ಪ್ರೊ॥ ವಿಜಯಶ್ರೀ ಎಂ. ಹಿರೇಮಠ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ವಿರಕ್ತ ಮಠ ದೇಶನೂರು

೬೩ ಸಿದ್ಧಾಂತ ಶಿಖಾಮಣಿ : ಶ್ರೀ ಸಿದ್ಧೇಶ್ವರ ಸ್ವಾಮಿಗಳು
ಶಿವರಾತ್ರೀಶ್ವರ ಗ್ರಂಥಮಾಲೆ,
ಮೈಸೂರು -೧೯೯೯

೬೪. ಸಿದ್ಧಗಂಗಾ ಶ್ರೀ : ಸಂ. ಚನ್ನಪ್ಪ ಎರೆಸೀಮೆ
ಟಿ.ಆರ್. ಮಹಾದೇವಯ್ಯ
ತುಮಕೂರು

೬೫ ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು : ಡಾ॥ ಹೆಚ್.ಪಿ. ಮಲ್ಲೇದೇವರು.
ಕ.ವಿ.ವಿ ಧಾರಾವಾಡ –೧೯೭೫

೬೬ ಸಂಶೋಧನ ದೀಪ್ತಿ : ಡಾ॥ ಎಸ್.ವಿ.ಅಯ್ಯನಗೌಡ
ಶ್ರೀ ಜ.ಧರ್ಮ ಪ್ರಚಾರಕ ಮಂಡಳ
ಮೂರು ಸಾವಿರ ಮಠ ಹುಬ್ಬಳ್ಳಿ –
೧೯೯೨